# ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

ಮುಕ್ತಗಂಗೋತ್ರಿ, ಮೈಸೂರು ೫೭೦ ೦೦೬

ಪ್ರಥಮ ಎಂ.ಎ

ಸಮೂಹ ಸಂವಹನ ಮತ್ತು ಪತ್ರಿಕೋದ್ಯಮ

ಸ್ವಯಂ ಬೋಧನಾ ಸಾಮಗ್ರಿ




ಕೋರ್ಸ್ III : ಸಂವಹನ: ಸಿದ್ಧಾಂತ ಹಾಗು ಸಂಶೋಧನೆ

## Open - Distance Education: A Flexible Mode of Learning

Programmes offered by KSOU in the distance education and Online mode are custom-designed by a team of experts and specialists drawn from repuled Universities, industry and in-house faculty. The curriculum is sanctioned by experts and is adapted after an academic audit. The inbuilt flexibility enables to bring in changes quickly thus ensuring the system to be more dynamic and updated at all times.

Along with the students coming from formal stream who have passed the qualifying examinations, learners with no formal education who intend to pursue higher education are also encouraged to seek admissions at Undergraduate level. The programme delivery is essentially through multimedia package comprising printed self instructional material, personal contact programme, radio counseling and online support. KSOU offers a wide range of disciplines to choose from PG programmes and a varied combination of optional subjects to select from UG programmes. Students are allowed to pursue their studies in other universities and institutions, subject to certain regulations.

## KSOU Objectives

- To provide access and equity through open - flexible learning, which is relevant to learners, at their doorsteps.
- To create individualized virtual learning spaces to the needs of the new age learners and to enable universal knowledge resource sharing through innovative pedagogy.
- Better quality assurance and excellence through institutional collaboration and accessibility.
- To ensure institutional determination towards emancipatory learning.
- To create environment and knowledge media of first choice for learners and professionals worldwide.
- To keep pace with the new age requirement and encourage proactive convergence of media and technology for teaching and learning.
- To innovate, explore and practice new avenues in knowledge management and sharing for positive social intervention.
- To ensure sustained efforts to interpret and operationalise learner's needs to develop new skills through collaborative learning.

## Student Support Services of KSOU

For the benefit of over 60,000 students who enroll to various academic programmes every year, the University has established 21 regional centers and180 study centers across the state. These study centers act as extension centers of the University and provide a platform for the learners to interact with the counselors and experts. They provide academic counseling and liaison in the matters related to academics, examination and administration. Regional centers oversee the functioning of the study centers and act as a link between the university headquarter and the study centers.

Counseling and personal contact programme are an integral part of teaching and learning process. Counseling at KSOU is distinctly different from the conventional classroom teaching and is much an interactive session. These session are conducted at the convenience of the students. In certain specialised subjects, experts from the profession are invited for interaction. Gyanvani, the dedicated FM radio channel airs educational programmes on various subjects regularly to augment information needs. Radio counseling provide an opportunity for the students to interact live with the experts.

## ಪಠ್ಯಕ್ರಮ ವಿನ್ಯಾಸ ಮತ್ತು ಸಂಪಾದಕ ಮಂಡಳಿ

**ಪ್ರೊ. ಎಂ.ಜಿ. ಕೃಷ್ಣನ್** — ಅಧ್ಯಕ್ಷರು
ಮಾನ್ಯ ಕುಲಪತಿಗಳು, ಕರಾಮುವಿ, ಮೈಸೂರು

**ಪ್ರೊ. ಎಸ್. ಎನ್. ವಿಕ್ರಂರಾಜ್ ಅರಸ್** — ಸಮಾವೇಶಕರು
ಡೀನ್ (ಶೈಕ್ಷಣಿಕ), ಕರಾಮುವಿ, ಮೈಸೂರು

**ಪ್ರೊ. ಜೆ.ವಿ. ವಿಳಾ ನಿಲಂ** — ವಿಷಯ ಪರಿಣಿತರು
ವಿಶ್ರಾಂತ ಕುಲಪತಿಗಳು, ಕೇರಳ ವಿಶ್ವವಿದ್ಯಾನಿಲಯ, ತಿರುವನಂತಪುರಂ, ಕೇರಳ

**ಪ್ರೊ. ಕೆ. ವಿ. ನಾಗರಾಜ್** — ವಿಷಯ ಪರಿಣಿತರು
ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು,
ಸಂವಹನ ಮತ್ತು ಪತ್ರಿಕೋದ್ಯಮ ವಿಭಾಗ,
ಅಸ್ಸಾಂ ಕೇಂದ್ರಿಯ ವಿಶ್ವವಿದ್ಯಾನಿಲಯ, ಸಿಲ್‌ಚಾರ್, ಅಸ್ಸಾಂ.

**ಡಾ. ತೇಜಸ್ವಿ ನವಿಲೂರ್** — ವಿಷಯ ಸಂಯೋಜಕರು ಮತ್ತು ಸಂಪಾದಕರು
ಮುಖ್ಯಸ್ಥರು,
ಸಮೂಹ ಸಂವಹನ ಮತ್ತು ಪತ್ರಿಕೋದ್ಯಮ ಅಧ್ಯಯನ ಮತ್ತು
ಸಂಶೋಧನಾ ವಿಭಾಗ, ಕರಾಮುವಿ, ಮೈಸೂರು.

| ಬರಹಗಾರರು | ಘಟಕಗಳು |
|---|---|
| ಬ್ಲಾಕ್ 1 ಡಾ. ತೇಜಸ್ವಿ ನವಿಲೂರ್ ಮತ್ತು ಬಿ.ವಿ. ಸತ್ಯೇಂದ್ರ ರಾವ್ | 1,2,3,4 ಮತ್ತು 5 |
| ಬ್ಲಾಕ್ 2 ಡಾ. ತೇಜಸ್ವಿ ನವಿಲೂರ್ | 1,2,3,4 ಮತ್ತು 5 |
| ಬ್ಲಾಕ್ 3 ಡಾ. ತೇಜಸ್ವಿ ನವಿಲೂರ್ | 1,2,3,4 ಮತ್ತು 5 |
| ಬ್ಲಾಕ್ 4 ಡಾ. ತೇಜಸ್ವಿ ನವಿಲೂರ್ | 1,2,3,4 ಮತ್ತು 5 |

## ಪ್ರಕಾಶಕರು

**ಪ್ರೊ. ಪಿ. ಎಸ್. ನಾಯಕ್**
ಕುಲಸಚಿವರು, ಕರಾಮುವಿ, ಮೈಸೂರು 570 006.

ಎಲ್ಲಾ ಹಕ್ಕುಗಳನ್ನು ಕಾಯ್ದಿರಿಸಿದೆ. ಈ ಸ್ವಯಂ ಬೋಧನಾ ಸಾಮಗ್ರಿಯ ಯಾವುದೇ ಭಾಗವನ್ನು ಯಾವುದೇ ರೀತಿಯಲ್ಲಿ ವಿಶ್ವವಿದ್ಯಾನಿಲಯದ ಲಿಖಿತ ಅನುಮತಿ ಇಲ್ಲದೆ ಪುನರ್ ಮುದ್ರಿಸುವುದನ್ನು ಹಾಗು ವಿತರಿಸುವುದನ್ನು ಪ್ರತಿಬಂಧಿಸಿದೆ.

**ಹೆಚ್ಚಿನ ವಿವರಗಳಿಗೆ ಸಂಪರ್ಕಿಸಿ: ಡೀನ್ (ಶೈಕ್ಷಣಿಕ), ಮುಕ್ತಗಂಗೋತ್ರಿ, ಮೈಸೂರು 570006.**

ಮುಖಪುಟ ಪರಿಕಲ್ಪನೆ ಹಾಗು ವಿನ್ಯಾಸ: ಡಾ. ತೇಜಸ್ವಿ ನವಿಲೂರ್.

ಸಮೂಹ ಸಂವಹನ ಮತ್ತು ಪತ್ರಿಕೋದ್ಯಮ ಅಧ್ಯಯನ
ಹಾಗು ಸಂಶೋಧನಾ ವಿಭಾಗ
ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ
ಮುಕ್ತಗಂಗೋತ್ರಿ, ಮೈಸೂರು 570006.

ಎಂಎ – ಎಂಸಿಜೆ
ಮೊದಲ ವರ್ಷ
ಪತ್ರಿಕೆ 3

## ಕೋರ್ಸ್ 3: ಸಂವಹನ : ಸಿದ್ಧಾಂತ ಹಾಗು ಸಂಶೋಧನೆ

### ಬ್ಲಾಕ್ 1 ಸಂವಹನದ ಸ್ವರೂಪ, ಪ್ರಕ್ರಿಯೆ ಹಾಗೂ ಕಾರ್ಯಚಟುವಟಿಕೆಗಳು

ಘಟಕ 1. ಸಂವಹನದ ಸ್ವರೂಪ, ಪ್ರಕ್ರಿಯೆ ಹಾಗು ಕಾರ್ಯಚಟುವಟಿಕೆಗಳು 01
2. ಸಂವಹನದ ವಿವಿಧ ಹಂತಗಳು 13
3. ಸಂವಹನದ ವಿವಿಧ ಮಾದರಿಗಳು 25
4. ಸಂಸ್ಕೃತಿ ಮತ್ತು ಸಂವಹನ 41
5. ಸರ್ಕಾರ, ಸಮಾಜ ಮತ್ತು ಸಂವಹನ 53

### ಬ್ಲಾಕ್ 2 ಸಂವಹನ ಸಿದ್ಧಾಂತಗಳು

ಘಟಕ 1. ಸಂವಹನದ ಸಿದ್ಧಾಂತಗಳ ಸ್ವರೂಪ ಮತ್ತು ಬೆಳವಣಿಗೆ 60
2. ಸಂವಹನ: ನಿಯಂತ್ರಣ ಹಾಗು ಜವಾಬ್ದಾರಿಗಳು 72
3. ಕಲಿಕೆಯ ಸಿದ್ಧಾಂತಗಳು 86
4. ಸಂವಹನದಲ್ಲಿರುವ ಅರಿವಿನ ಸಿದ್ಧಾಂತಗಳು 98
5. ಮಧ್ಯಮ ಕ್ರಮಾಂಕದ ಸಿದ್ಧಾಂತಗಳು 106

### ಬ್ಲಾಕ್ 3 ಸಂವಹನ ಸಂಶೋಧನೆ

ಘಟಕ 1. ಸಂವಹನ ಸಂಶೋಧನೆ: ಸ್ವರೂಪ ಮತ್ತು ಮಹತ್ವ 122
2. ಸಂವಹನ ಸಂಶೋಧನೆಯ ವಿಧಾನಗಳು 135
3. ದತ್ತಾಂಶ ವಿಶ್ಲೇಷಣೆಯ ಕಾರ್ಯವಿಧಾನಗಳು 156
4. ಶ್ರೋತೃಗಣ ಸಂಶೋಧನೆ 179
5. ಸಂಶೋಧನಾ ವರದಿಗಳ ಬರವಣಿಗೆ 192

### ಬ್ಲಾಕ್ 4 ಮಾಧ್ಯಮದ ಮುಂದಿರುವ ಸವಾಲುಗಳು

ಘಟಕ 1. ಮಾಧ್ಯಮ ಮತ್ತು ಮಹಿಳೆ 208
2. ಮಾಧ್ಯಮ ಮತ್ತು ಮಕ್ಕಳು 224
3. ಮಾಧ್ಯಮ ಮತ್ತು ಹಿಂಸಾಚಾರ 234
4. ಮಾಧ್ಯಮ ಮತ್ತು ಜಾಗತೀಕರಣ 243
5. ಸಾರ್ವಜನಿಕ ಸೇವೆಯಲ್ಲಿ ಮಾಧ್ಯಮಗಳ ಪಾತ್ರ 255

# ಪರಿಚಯ

ಪ್ರಿಯ ವಿದ್ಯಾರ್ಥಿ,

ಸಮೂಹ ಸಂವಹನ ಮತ್ತು ಪತ್ರಿಕೋದ್ಯಮ ವೃತ್ತಿ ಕ್ಷೇತ್ರಕ್ಕೆ ನಿಮಗೆ ಸ್ವಾಗತ. ಸಮಾಜ ವಿಜ್ಞಾನಗಳಲ್ಲಿ ಪತ್ರಿಕೋದ್ಯಮ ವಿಷಯವು ವೃತ್ತಿಪರವಾಗಿದ್ದು, ಈ ವಿಷಯದಲ್ಲಿ ಪದವಿ ಪಡೆದ ಅನೇಕ ಆಸಕ್ತರಿಗೆ ಉದ್ಯೋಗಾವಕಾಶಗಳನ್ನು ಕಲ್ಪಿಸುತ್ತಿದೆ. ಮಾಹಿತಿ ಯುಗದಲ್ಲಿ ತೆರೆದುಕೊಳ್ಳುತ್ತಿರುವ ಅವಕಾಶಗಳ ಪೈಕಿ ಬಹುತೇಕ ಅವಕಾಶಗಳು ನಿರ್ದಿಷ್ಟ ವೃತ್ತಿಕುಶಲತೆಯನ್ನು ಬಯಸುತ್ತವೆ. ಈ ನಿಟ್ಟಿನಲ್ಲಿ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಪತ್ರಿಕೋದ್ಯಮ ದೂರಶಿಕ್ಷಣ ಕ್ರಮಗಳು ಆಸಕ್ತರ ಬಳಿಗೆ ವಿಷಯ ಸಂಪನ್ಮೂಲಗಳನ್ನು ಒದಗಿಸುತ್ತಾ ಕೌಶಲ್ಯಪೂರ್ಣ ವಿದ್ಯಾರ್ಜನೆಗೆ ಪ್ರೋತ್ಸಾಹಿಸುತ್ತಿವೆ. ಪ್ರಸ್ತುತ ವೃತ್ತಿಅವಶ್ಯಕತೆಗೆ ಅನುಗುಣವಾಗಿ ಈ ಸ್ವಯಂ ಕಲಿಕಾ ಸಾಮಗ್ರಿಯನ್ನು ರೂಪಿಸಲಾಗಿದೆ.

**ಕೋರ್ಸ್ 3: ಸಂವಹನ: ಸಿದ್ಧಾಂತ ಹಾಗು ಸಂಶೋಧನೆ**

ಸಂವಹನದ ಪ್ರಕ್ರಿಯೆ, ಹಂತ ಮತ್ತು ವಿಧಾನಗಳನ್ನು ತೀಕ್ಷ್ಣವಾಗಿ ಗಮನಿಸಿ ಸಂವಹನದ ಸಿದ್ಧಾಂತಗಳನ್ನು ರಚಿಸಲಾಗಿದೆ. ಸಂಶೋಧನೆಯು ಸಂವಹನದಿಂದ ಸಕಾರಾತ್ಮಕ ಪರಿಣಾಮಗಳನ್ನು ಹೊಂದಲು ಅವಶ್ಯಕ. ಸಂವಹನ ಸಮಾಜದ ಮೇಲೆ, ಸಂಸ್ಕೃತಿಯ ಮೇಲೆ ತನ್ನದೆ ಆದ ಪ್ರಭಾವ ಬೀರುತ್ತದೆ. ಹಾಗಾಗಿ, ಸಂವಹನದ ಮೂಲತತ್ವಗಳನ್ನು ಗ್ರಹಿಸಲು ಸಂವಹನದ ಅಂಶಗಳು, ಹಂತಗಳು, ಸಿದ್ಧಾಂತಗಳು ಹಾಗೂ ಮಾದರಿಗಳ ವಿವರಣೆಯನ್ನು ಅರ್ಥ ಮಾಡಿಕೊಳ್ಳುವುದು ಅತ್ಯಗತ್ಯ.

ಸಂವಹನದ ಸಿದ್ಧಾಂತಗಳು ವಿವಿಧ ಸಾಂಸ್ಕೃತಿಕ ಪರಂಪರೆಗಳಿರುವ ಸಮಾಜದ ಸಂವಹನ ವಿಧಾನವನ್ನು ಮತ್ತು ತಂತ್ರಗಾರಿಕೆಯನ್ನುತಿಳಿಸುತ್ತದೆ. ಮಾಧ್ಯಮ ಸಂವಹನ ಸಿದ್ಧಾಂತಗಳು ಸಮಾಜದಲ್ಲಿನ ಆಡಳಿತ ವ್ಯವಸ್ಥೆ, ಮಾಧ್ಯಮ ಸ್ವಾತಂತ್ರ್ಯ ಹಾಗು ಕಾರ್ಯ ನಿರ್ವಹಣೆಯ ಸ್ಥಿತಿಗತಿಗಳನ್ನು ಒಳಗೊಂಡಿದೆ. ದೇಶದ ಅಭಿವೃದ್ಧಿಯಲ್ಲಿ ಸಂವಹನದ ಪಾತ್ರ ಮತ್ತು ಜವಾಬ್ದಾರಿಗಳನ್ನು ಸಂವಹನ ಸಿದ್ಧಾಂತಗಳು ಸೂಚಿಸುವಲ್ಲಿ ಪರಿಣಾಮಕಾರಿ.

ಮಾಧ್ಯಮ ಸಂವಹನದಲ್ಲಿ ಸಂಶೋಧನೆ ಪ್ರಮುಖವಾದದು. ಅಲ್ಲದೆ, ಸಂಶೋಧನೆಯು ಓದುಗರ, ಕೇಳುಗರ ಮತ್ತು ನೋಡುಗರ ಅವಶ್ಯಕತೆ, ಅಗತ್ಯ ಹಾಗು ಆಸಕ್ತಿಗಳನ್ನು ತಿಳಿಯಲು ಸಹಕಾರಿಯಾಗಿದೆ. ಮಾಧ್ಯಮಗಳಲ್ಲಿ ಪ್ರಸಾರವಾದ, ಪ್ರಕಟಣೆಯಾದ ವಿಷಯವು ಸಮಾಜದ ಮೇಲೆ ಯಾವ ರೀತಿಯ ಪರಿಣಾಮ ಬೀರುತ್ತವೆ ಎಂಬುದನ್ನು ಕಂಡುಕೊಳ್ಳುವುದಲ್ಲದೇ, ನಿರ್ದಿಷ್ಟ ಕಾರ್ಯಕ್ರಮ / ಮಾಹಿತಿ ಮತ್ತಿತರ ಮಾರ್ಪಾಡಿಗೆ ಸಂಶೋಧನೆ ಸಹಕಾರಿ. ಸಂಶೋಧನೆಯಲ್ಲಿ ಹಲವಾರು ವಿಧಗಳು, ಹಂತಗಳು ಮತ್ತು ರೀತಿಗಳಿವೆ. ಅವು ಸಂಶೋಧನಾ ವಿಷಯ ಮತ್ತು ಉದ್ದೇಶಗಳ ಮೇಲೆ ಅವಲಂಬಿತವಾಗಿರುತ್ತವೆ.

ಅಲ್ಲದೆ, ಯಾವುದೇ ಸಮಾಜವು ಅಸಮಾನತೆಯಿಂದ ಹೊರತಲ್ಲ ಹಾಗೂ ಸಮಸ್ಯೆಗಳಿಂದ ಹೊರತಲ್ಲ. ಸಾಮಾಜಿಕ ಸಮಸ್ಯೆಗಳನ್ನು ಹೋಗಲಾಡಿಸಿ ಸುಸ್ಥಿರ ಸಮಾಜ ನಿರ್ಮಾಣದಲ್ಲಿ ಮಾಧ್ಯಮದ ಪಾತ್ರ ಮಹತ್ವವಾದದ್ದು. ಹಾಗೆಯೇ, ಮಹಿಳೆಯರು, ಮಕ್ಕಳು, ಯುವಕರು ಹಾಗು ದುರ್ಬಲ ವರ್ಗದ ಅಭಿವೃದ್ಧಿ ಹಾಗೂ ದೇಶಾಭಿವೃದ್ಧಿ ಮಾಧ್ಯಮಗಳ ಮುಂದಿರುವ ಸವಾಲುಗಳಾಗಿವೆ.

ಸಂವಹನ ಸಿದ್ಧಾಂತ ಹಾಗು ಸಂಶೋಧನೆಗೆ ಸಂಬಂಧಪಟ್ಟ ಈ ಕೋರ್ಸ್‌ನಲ್ಲಿ ಈ ಎಲ್ಲ ವಿಚಾರಗಳ ಬಗ್ಗೆ ಅರಿಯುವಿರಿ.

ಶುಭ ಹಾರೈಕೆಗಳೊಂದಿಗೆ,

**ಮುಖ್ಯಸ್ಥರು**

ಸಮೂಹ ಸಂವಹನ ಮತ್ತು ಪತ್ರಿಕೋದ್ಯಮ
ಅಧ್ಯಯನ ಮತ್ತು ಸಂಶೋಧನಾ ವಿಭಾಗ,
ಕರಾಮುವಿ, ಮೈಸೂರು.

# ಘಟಕ 1 ಸಂವಹನದ ಸ್ವರೂಪ, ಪ್ರಕ್ರಿಯೆ ಹಾಗೂ ಕಾರ್ಯಚಟುವಟಿಕೆಗಳು

ರಚನೆ

1.0 ಉದ್ದೇಶಗಳು

1.1 ಪ್ರಸ್ತಾವನೆ

1.2 ಸಂವಹನದ ಗುಣಲಕ್ಷಣಗಳು

1.3 ಸಂವಹನ ಅರ್ಥ ಮತ್ತು ಅರ್ಥವಿವರಣೆ

1.4 ಸಂವಹನ: ಪ್ರಕ್ರಿಯೆ ಮತ್ತು ಮೂಲಧಾತುಗಳು

1.5 ಸಂವಹನದ ಕರ್ತವ್ಯಗಳು / ಕಾರ್ಯಗಳು

1.6 ಸಾರಾಂಶ

1.7 ನಿಮ್ಮ ಪ್ರಗತಿ ಪರಿಶೀಲನೆ

1.8 ಹೆಚ್ಚಿನ ಓದಿಗಾಗಿ

## 1.0 ಉದ್ದೇಶಗಳು

'ಸಂವಹನ' ಈ ವಿಷಯದ ಬಗ್ಗೆ ನಾವು ಆಗಾಗ ಕೇಳುತ್ತಲೇ ಇರುತ್ತೇವೆ. ಕೇಳುವುದಕ್ಕೆ ಬಹಳ ಸರಳವೆನ್ನಿಸಿದರೂ, ಸಂವಹನದ ಮೂಲ ತತ್ವಗಳು ಸಾಕಷ್ಟು ಸಂಕೀರ್ಣವಾದಂತಹವು. ಸಂವಹನ ಪ್ರಕ್ರಿಯೆಯನ್ನು ಅರ್ಥಮಾಡಿಕೊಳ್ಳಲು ಈ ಕೆಳಕಂಡ ವಿಷಯಗಳನ್ನು ನಿರೂಪಿಸುವಂತೆ ಘಟಕವನ್ನು ವಿನ್ಯಾಸಗೊಳಿಸಲಾಗಿದೆ. ಈ ಘಟಕದಲ್ಲಿ:

* ಸಂವಹನದ ಅರ್ಥ ನಿರೂಪಣೆ;
* ' ಸಂವಹನ ಪ್ರಕ್ರಿಯೆಯ ವಿವರಣೆ;
* ಸಂವಹನದ ಮೂಲ ತತ್ವಗಳನ್ನು ವಿವರಿಸುವುದು, ಮತ್ತು
* ಸಂವಹನದ ಕಾರ್ಯಗಳನ್ನು ನಮೂದಿಸುವುದು ಸಾಧ್ಯವಾಗುತ್ತದೆ.

## 1.1 ಪ್ರಸ್ತಾವನೆ

ಸರಳವಾಗಿ ಹೇಳುವುದಾದರೆ 'ಮಾಹಿತಿ'ಯನ್ನು ವಿನಿಮಯ ಮಾಡಿಕೊಳ್ಳುವ ಪ್ರಕ್ರಿಯೆಯೇ ಸಂವಹನ. ಅದು ವರ್ತನೆಯ ಹೂಡಿಕೆಯನ್ನೂ ಹೊಂದಿರುತ್ತದೆ. ಸಂವಹನವಿಲ್ಲದೆ ನಮ್ಮ ಜೀವನ ಸಾಗಿಸುವುದು ಅಸಾಧ್ಯ. ಆದ್ದರಿಂದ ಸಂಹವನದ ಮಹತ್ವ, ಅರ್ಥನಿರೂಪಣೆ ಮತ್ತು ಉದ್ದೇಶಗಳ ಬಗ್ಗೆ ತಿಳಿಯುವುದು ಬಹಳ ಮುಖ್ಯ. ನಾವು ಬದುಕುತ್ತಿರುವ ಸನ್ನಿವೇಶವನ್ನು ವಿವರಿಸುವಲ್ಲಿಯೂ ಸಂವಹನದ ಪ್ರಕ್ರಿಯೆ ಅಗತ್ಯ.

## 1.2 ಸಂವಹನದ ಗುಣಲಕ್ಷಣಗಳು

ಇಂದು, ಜಗತ್ತು ಸಂವಹನ ಯುಗದ ಮೂಲಕ ಹಾದು ಹೋಗುತ್ತಿದೆ. ಮುಂಜಾನೆ ಎದ್ದೊಡನೆಯೇ ನಾವು ಯಾರೊಂದಿಗಾದರೂ ಮಾತನಾಡುತ್ತೇವೆ ಅಥವಾ ನಾವು ಮಾಡಬೇಕಾದ ಹಲವಾರು ಕಾರ್ಯಗಳ ಬಗ್ಗೆ ಚಿಂತಿಸುತ್ತೇವೆ, ಒಂದು ವೃತ್ತ ಪತ್ರಿಕೆಯನ್ನು ಓದುತ್ತೇವೆ, ಸುದ್ದಿಯ ಪ್ರಸಾರವನ್ನು ವೀಕ್ಷಿಸುತ್ತೇವೆ. ಸಂಗೀತವನ್ನು ಆಲಿಸುತ್ತೇವೆ, ಮಾರುಕಟ್ಟೆಗೆ ಹೋಗುತ್ತೇವೆ, ಪ್ರಯಾಣ ಮಾಡುತ್ತೇವೆ, ಸ್ನೇಹಿತರನ್ನು ಭೇಟಿ ಮಾಡುತ್ತೇವೆ, ವಾಹನ ಚಾಲನೆ ಮಾಡುತ್ತೇವೆ ಅಥವಾ ಪರಿಚಯಸ್ಥರು ಕಂಡರೆ ಕೈ ಬೀಸುತ್ತೇವೆ.

ಇಂತಹ ನೂರಾರು ಚಟುವಟಿಕೆಗಳು ಸಂವಹನ ಪ್ರಕ್ರಿಯೆಯನ್ನು ಹೊಂದಿವೆ. ಸಂವಹನದ ಈ ಪ್ರತಿಯೊಂದು ಸಂದರ್ಭದಲ್ಲಿಯೂ, ಹೇಗೆ ವರ್ತಿಸಬೇಕು ಅಥವಾ ಪ್ರತಿಕ್ರಿಯೆ ನೀಡಬೇಕು ಎನ್ನುವಲ್ಲಿ, ಪ್ರತಿಯೊಬ್ಬರೂ ನಮ್ಮದೇ ಆದ ವಿಧಾನದ ಆಯ್ಕೆಯನ್ನು ಸಹ ಹೊಂದಿರುತ್ತೇವೆ. ಯಾವುದೇ ಸಂದರ್ಭದಲ್ಲಿ ಯಾವ ಕಾರಣಕ್ಕಾಗಿ ಈ ರೀತಿಯಾಗಿ ಸಂವಹನ ನಡೆಸುತ್ತಿದ್ದೇವೆ ಎಂಬುದರ ಬಗ್ಗೆ ನಾವು ಪ್ರಜ್ಞಾತ್ಮಕವಾಗಿ ಯೋಚಿಸದಿದ್ದರೂ, ನಮ್ಮ ಸಂವಹನದ ಆಯ್ಕೆಯು ಅನಿರ್ದಿಷ್ಟವಾಗಿ ಅಡ್ಡಾದಿಡ್ಡಿಯಾಗೇನೂ ಇರುವುದಿಲ್ಲ. ಅತಿ ಹೆಚ್ಚಿನ ಸಂದರ್ಭಗಳಲ್ಲಿ ಪ್ರತಿಯೊಂದು ಸಂವಹನ ಕ್ರಿಯೆಯೂ ಒಂದು ನಿರ್ದಿಷ್ಟ ಉದ್ದೇಶವನ್ನು ಹೊಂದಿರುತ್ತದೆ.

## 1.3 ಸಂವಹನ: ಅರ್ಥ ಮತ್ತು ಅರ್ಥವಿವರಣೆ

ಸಂವಹನ (ಕಮ್ಯುನಿಕೇಷನ್) ಪದವನ್ನು 'ಹಂಚಿಕೊ' ಎಂಬ ಅರ್ಥವುಳ್ಳ ಲ್ಯಾಟಿನ್‌ನ 'ಕಮ್ಯುನಿಕೇರ್' ಎಂಬ ಪದದಿಂದಲೂ ಮತ್ತು 'ಸಾಮಾನ್ಯ' ಎಂಬ ಅರ್ಥ ಬರುವ ಫ್ರೆಂಚ್ ಪದ 'ಕಮ್ಯುನಿಸ್'ನಿಂದಲೂ ಪದರಚನೆ ಮಾಡಲಾಗಿದೆ. ಒಬ್ಬ ವ್ಯಕ್ತಿಯಿಂದ ಮತ್ತೊಬ್ಬ ವ್ಯಕ್ತಿಗೆ ಮಾಹಿತಿಯು ಸಾಗಿದಾಗ 'ಸಂವಹನ'ವಾಗುತ್ತದೆ. ವ್ಯಕ್ತಿಗಳ ನಡುವೆ ಅರ್ಥಗಳನ್ನು ಪ್ರಸರಣ ಮಾಡುವ ಕ್ರಿಯೆ ಇದು. ಸಂಕ್ಷಿಪ್ತ ಆಕ್ಸ್‌ಫರ್ಡ್ ಅರ್ಥಕೋಶವು Communicate ಪದಕ್ಕೆ ತಿಳಿಸು, ರವಾನಿಸು ಅಥವಾ ಹಂಚಿಕೊ ಎಂಬ ಅರ್ಥಗಳನ್ನು ಕೊಟ್ಟಿದೆ.

ಆದರೆ, ಸಂವಹನ ತಜ್ಞರು ಯಾವ ಒಂದೇ ಅರ್ಥ ವಿವರಣೆಯನ್ನು ಸಂಪೂರ್ಣವಾಗಿದೆ, ಸರ್ವಸಮರ್ಪಕವಾಗಿದೆ ಎಂದು ಒಪ್ಪುವುದಿಲ್ಲ. ಸಮಾಜಶಾಸ್ತ್ರಜ್ಞರು, ಮನಃಶಾಸ್ತ್ರಜ್ಞರು, ಮಾನವಶಾಸ್ತ್ರಜ್ಞರು, ಭಾಷಾ ತಜ್ಞರು ಮತ್ತು ವಾಕ್ ಸಂವಹನ ತಜ್ಞರು 'ಸಂವಹನ'ಕ್ಕೆ ತಮ್ಮದೇ ಆದ ಅರ್ಥವಿವರಣೆಗಳನ್ನು ನೀಡಿದ್ದಾರೆ.

ಡೆನಿಸ್ ಮ್ಯಾಕ್‌ಕ್ವೈಲ್ ಅವರು 'ಒಬ್ಬ ವ್ಯಕ್ತಿಯಿಂದ ಮತ್ತೊಬ್ಬ ವ್ಯಕ್ತಿಗೆ ಅರ್ಥಪೂರ್ಣವಾದ ಸಂದೇಶಗಳನ್ನು ರವಾನಿಸುವುದನ್ನು 'ಸಂವಹನ' ಎಂದು ವ್ಯಾಖ್ಯಾನಿಸಿದ್ದಾರೆ.

'ವ್ಯಕ್ತಿಗಳ ನಡುವೆ ಅರ್ಥವನ್ನು ರವಾನೆ ಮಾಡುವ ಪ್ರಕ್ರಿಯೆ' ಎಂದು ಚಾರ್ಲ್ಸ್ ಆರ್.ರೈಟ್ 'ಸಂವಹನ'ವನ್ನು ವಿವರಿಸಿದ್ದಾರೆ.


'ಯಾರು, ಯಾರಿಗೆ, ಯಾವ ವಾಹಿನಿಯ ಮೂಲಕ, ಎಷ್ಟು ಪ್ರಭಾವಶಾಲಿಯಾಗಿ ಹೇಳುತ್ತಿದ್ದಾರೆ ಎಂಬುದರ ವಿವೇಚನೆಯೇ ಸಂವಹನ' ಎಂದು ಹೇಳುತ್ತಾರೆ ಹೆರಾಲ್ಡ್ ಡಿ. ಲಾಸ್‌ವೆಲ್.

'ಸಂದೇಶಗಳ ಮೂಲಕ ನಡೆಯುವ ಸಾಮಾಜಿಕ ಪ್ರಕ್ರಿಯೆ' ಎಂದು ಸಂವಹನವನ್ನು ಗರ್ಬ್ನರ್ ಅರ್ಥೈಸುತ್ತಾರೆ. ಸಂವಹನವು ಒಂದು ಮಾನವ ವರ್ತನೆ ಹಾಗು ವ್ಯಕ್ತಿ, ಸಮಷ್ಟಿಗಳ ಅವಿಭಾಜ್ಯ ಅಂಗ ಎಂದೂ ವಿಶಾಲಾರ್ಥದಲ್ಲಿ ಹೇಳಬಹುದು. ಮಾಹಿತಿಯನ್ನು ರವಾನೆ ಮಾಡುವ ಮತ್ತು ವ್ಯಕ್ತಿ ವರ್ತನೆಯ ಹೂಡಿಕೆಗಳನ್ನು ಹೊಂದಿರುವ ಪ್ರಕ್ರಿಯೆ ಎಂದೂ ಸಂವಹನವನ್ನು ಗುರುತಿಸಬಹುದು. ಅದು ವಿದ್ಯುಕ್ತವಾದ ಸಾಂಪ್ರದಾಯಿಕ ರೀತಿಯದ್ದಾಗಿರಬಹುದು, ಅಥವಾ ಅನಿರ್ಬಂಧಿತವಾಗಿರಬಹುದು. ಅದು ಬಹಳ ಸರಳವಾಗಿರಬಹುದು ಅಥವಾ ಜಟಿಲವಾಗಿರಬಹುದು. ರವಾನಿಸಬೇಕಾದ ಸಂದೇಶ, ಸಂವಾಹಕ-ಸಂವಹಿತರ ನಡುವಿನ ಸಂಬಂಧದ ಮೇಲೆ ಸಂವಹನ ಅವಲಂಬಿಸಿದೆ. ಮಾಹಿತಿಯ ವರ್ಗಾವಣೆ ಮತ್ತು ಸಂವಾಹಕ -ಸಂವಹಿತರ ನಡುವಿನ ತಿಳುವಳಿಕೆಯನ್ನೂ ಒಳಗೊಂಡಿರುತ್ತದೆ.

## 1.4 ಸಂವಹನ : ಪ್ರಕ್ರಿಯೆ ಮತ್ತು ಮೂಲಧಾತುಗಳು

ನಿಮಗೆ ಇಷ್ಟವಾದವರನ್ನು ನೆನೆಸಿಕೊಂಡಾಗ ಅಥವಾ ಉಪನ್ಯಾಸ, ಭಾಷಣವನ್ನು ಕೇಳಿದಾಗ ಅಥವಾ ಒಂದು ಪುಸ್ತಕವನ್ನು ಓದಿದಾಗ, ಚಲನಚಿತ್ರವನ್ನು ನೋಡುವಾಗ ನೀವು ಸಂವಹನದ ಪ್ರಕ್ರಿಯೆಯಲ್ಲಿ ಭಾಗಿಯಾಗುತ್ತೀರಿ. ಕಲ್ಪನೆಗಳನ್ನು ರವಾನಿಸುವ ಅಥವಾ ಅರ್ಥಗಳನ್ನು ವರ್ಗಾವಣೆ ಮಾಡುವ ಪ್ರಕ್ರಿಯೆಯೇ ಸಂವಹನ. ಕಾಲದೊಂದಿಗೆ ಎಡೆಬಿಡದೆ ಬದಲಾಗುತ್ತಿರುವ ಅಥವಾ ನಿರಂತರವಾದ ಬದಲಾವಣೆಯ ಕ್ರಿಯೆ ಇದು ಎಂದೂ ಇದನ್ನು ವಿವರಿಸಲಾಗುತ್ತದೆ. ಬೇರೆ ಎಲ್ಲಾ ಪ್ರಕ್ರಿಯೆಗಳಂತೆ ಸಂವಹನವೂ ಚಲನಾತ್ಮಕವಾದುದು ಮತ್ತು ಸದಾ ಪರಿವರ್ತನಾಶೀಲವಾದುದು. ತಂತ್ರಜ್ಞಾನ ಕ್ಷೇತ್ರದ ಬದಲಾವಣೆಗಳು ಸಂವಹನದ ವೇಗವರ್ಧನೆ ಮಾಡಿವೆ. ಸಂದೇಶಗಳ ವ್ಯಾಪ್ತಿ ಮತ್ತು ಗಾತ್ರವೂ ಹೆಚ್ಚುವಂತೆ ಮಾಡಿದೆ.

ಸಂವಹನ ಆಗುವುದು ಹೇಗೆ? ಸಂವಹನದ ಯಾವುದೇ ಒಂದು ಸಂದರ್ಭದಲ್ಲಿ ಯಾರೋ ಒಬ್ಬರು ಮತ್ತೊಬ್ಬರಿಗೆ ಏನಾದರೊಂದು ಸಂದೇಶವನ್ನು ಕಳುಹಿಸುತ್ತಾರೆ. ಆಧುನಿಕ ಸಂವಹನ ಪ್ರಕ್ರಿಯೆಯಲ್ಲಿ ಇದಕ್ಕಿಂತ ಹೆಚ್ಚಿನ ಮೂಲಧಾತುಗಳನ್ನು ಗುರುತಿಸಲಾಗುತ್ತದೆ. ಈ ಪ್ರಸಕ್ತ ಸಂವಹನದ ಸಂದರ್ಭದಲ್ಲಿ, ಏನೋ ವಿಷಯ (ಸಂಗತಿ, ಸುದ್ದಿ, ಸಂದೇಶ)ವನ್ನು ಒಂದು ವಾಹಕ (ಮಾಧ್ಯಮ, ಚಾನೆಲ್)ದ ಮೂಲಕ ಯಾರೋ ಒಬ್ಬರು (ಪ್ರೇಷಕ) ಮತ್ತೊಬ್ಬ (ಸಂದೇಶ ಪಡೆವ ಗ್ರಾಹಕ)ರಿಗೆ ಕಳುಹಿಸಿ, ಸಂವಹನದ ಯಾವುದೇ ಹಂತದಲ್ಲಿ ಸಂದೇಶವನ್ನು ವಿರೂಪಗೊಳಿಸುವ ಕರ್ಕಶತೆಗಳ ನಡುವೆ, ಅದಕ್ಕೆ ಯಾವುದೋ ಒಂದು ಪ್ರತಿಕ್ರಿಯೆಯನ್ನು ಪಡೆಯುತ್ತಾನೆ. ಈ ಎಲ್ಲ ಮೂಲಧಾತುಗಳ ಬಗ್ಗೆ ಮುಂದೆ ಚರ್ಚಿಸೋಣ.




ಸಂವಹನದ ಪ್ರಕ್ರಿಯೆ

## 1.4.1 ಪ್ರೇಷಕ (ಸಂವಾಹಕ)

ಸಂದೇಶವನ್ನು ಯಾರು ಸೃಜಿಸುತ್ತಾರೋ ಅವನನ್ನು ಸಂವಾಹಕ (Communicator) ಎಂದು ಕರೆಯಲಾಗುತ್ತದೆ. ಸಂವಹನದ ಕಾರ್ಯವನ್ನು ಆರಂಭಿಸುವ ಮತ್ತು ಅದಕ್ಕೆ ಮಾರ್ಗದರ್ಶನ ನೀಡುವ ಕಾರ್ಯಕರ್ತ ಈತನೇ. ಭಾವನೆಗಳನ್ನು ವರ್ಗಾಯಿಸುವ ಜವಾಬ್ದಾರಿ ಸಂವಾಹಕನ ಮೇಲೆ ಇರುತ್ತದೆ. ಕೆಲವೊಂದು ವಿಶ್ಲೇಷಕರು ಸಂವಾಹಕನನ್ನು ಸಂಕೇತಕಾರ (Coder) ಎಂದೂ ಕರೆಯುವುದುಂಟು. ಏಕೆಂದರೆ, ಸಂವಾಹಕನು ವಿವಿಧ ಮೂಲಗಳಿಂದ ಮಾಹಿತಿಗಳನ್ನು ಕಲೆಹಾಕಿ ಅಥವಾ ಕಲ್ಪನೆಗಳನ್ನೂ ಪಡೆದುಕೊಂಡು, ಅವುಗಳನ್ನು ಒಂದು ಸಂದೇಶದ (Message) ರೂಪದಲ್ಲಿ ವರ್ಗಾಯಿಸುತ್ತಾನೆ. ಸಂವಾಹಕನು ಸಂಗ್ರಹವಾದ ಮಾಹಿತಿಯನ್ನು ಸಂಕೇತ ರೂಪಕ್ಕೆ ತರುತ್ತಾನೆ. ಶ್ರೋತೃ ಅಥವಾ ವೀಕ್ಷಕರಿಗೆ ಹೊಂದುವಂತೆ ಸಂದೇಶಗಳನ್ನು ಸೂಕ್ತವಾಗಿ ಬದಲಾಯಿಸುತ್ತಾನೆ. ಈ ಪ್ರಕ್ರಿಯೆಯನ್ನು 'ಸಾಂಕೇತಿಕೀಕರಣ' (Coding) ಎಂದು ಕರೆಯಲಾಗುತ್ತಿದೆ. ಸಂವಹನಕ್ಕೆ ನಿರ್ದಿಷ್ಟ ಉದ್ದೇಶವಿರುತ್ತದೆ. ಸಂವಹನದ ಇಡೀ ಪ್ರಕ್ರಿಯೆಯನ್ನು ಹೆಚ್ಚು ಪ್ರಭಾವಶಾಲಿಯಾಗಿರುವಂತೆ ಮಾಡಲು ಸಂವಾಹಕನಿಗೆ ಉತ್ತಮವಾದ ಸಂವಹನ ಪರಿಣತಿ ಹಾಗೂ ಶ್ರೋತೃಗಳ / ವೀಕ್ಷಕರ ನಾಡಿಮಿಡಿತವನ್ನು ತಿಳಿಯುವ ಜಾಣ್ಮೆ ಇರಬೇಕು. ಸಂವಹಿಸುವ, ತಿಳಿಸುವ, ಒಪ್ಪಿಸುವ ಅಥವಾ ಇನ್ನು ಯಾವುದೇ ರೀತಿಯಲ್ಲಿ ಸಂವಹಿತನ ಮೇಲೆ ಪ್ರಭಾವ ಬೀರುವ ಉದ್ದೇಶ ಸಂವಹನದ ಮೂಲಕ್ಕೆ ಇರುತ್ತದೆ. ಸಂಕೇತಗಳನ್ನು ರೂಪಿಸುವಾಗ ಸಂವಾಹಕನೂ ಮಾಹಿತಿಯನ್ನು ಹೊಂದಿರಬೇಕು. ತನ್ನ ಯೋಚನಾಸರಣಿಯನ್ನು ವ್ಯವಸ್ಥಿತವಾಗಿ ಇಟ್ಟುಕೊಂಡು, ಅದನ್ನು ಸಂವಹನ ಸಂದರ್ಭ, ಸನ್ನಿವೇಶಕ್ಕೆ ತಕ್ಕಂತೆ ಒದಗಿಸುವ ಸಾಮರ್ಥ್ಯ ಹೊಂದಿರಬೇಕು.

## 1.4.2 ಸಂದೇಶ

ಸಂವಹನದ ಅವಶ್ಯಕತೆಯು ನಿರ್ಧಾರವಾದ ಮೇಲೆ, ಸಂದೇಶವನ್ನು ರೂಪಿಸಬೇಕಾಗುತ್ತದೆ. ನಮ್ಮ ಸಂವೇದನೆಗಳನ್ನು ಮತ್ತು ಭಾವನೆಗಳನ್ನು ವರ್ಗಾಯಿಸಲು ನಾವು ಬರಹರೂಪದಲ್ಲಿ, ಶಾಬ್ದಿಕ ರೂಪದಲ್ಲಿ ಇರದ ಕೆಲವೊಂದು ಚಿಹ್ನೆಗಳನ್ನೂ, ಸಂಕೇತಗಳನ್ನೂ ಬಳಸುತ್ತೇವೆ. ಎಲ್ಲಾ ಸಂದೇಶಗಳಲ್ಲಿಯೂ ಒಂದು ಆಲೋಚನೆಯ ಪ್ರಕ್ರಿಯೆ, ಕಲ್ಪನೆ ಅಥವಾ ಉದ್ದೇಶ ಅಡಗಿರುತ್ತದೆ. ಮಾಹಿತಿಯನ್ನು ನಿಜವಾಗಿ ಸೃಜಿಸುವ ಅಥವಾ ವಿನ್ಯಾಸಗೊಳಿಸುವ ಹಂತ ಮುಂದಿನದ್ದು. ನಾವು ಯಾವುದೇ ಒಂದು ವಿಷಯವನ್ನು ಗುರುತಿಸಿಕೊಂಡು ಆ ಬಗ್ಗೆ ಸುಲಭವಾಗಿ ಮಾತನಾಡುತ್ತೇವೆ. ನೀವು ಇತ್ತೀಚೆಗೆ ನೋಡಿದ ಒಂದು ಚಿತ್ರಕಲೆಯನ್ನು ಕುರಿತು ಯಾರಾದರೂ ನಿಮ್ಮನ್ನು ಪ್ರಶ್ನಿಸಿದರೆ ಹೇಗೆ ಎನ್ನುವುದಕ್ಕೆ ಉತ್ತರವಾಗಿ ಇಂದ್ರಿಯಗ್ರಹಿಕೆಗಳು ಆ ವಿವರಗಳನ್ನು ಮೂಡಿಸಬಹುದು.

ವೃತ್ತಪತ್ರಿಕೆಗಳು, ರೇಡಿಯೋ, ಟೆಲಿವಿಷನ್‌ಗಳ ಮೂಲಕ ಪ್ರಸಾರ ಮಾಡಬೇಕಾದ ಸಂದೇಶಗಳಿಗೆ ಹೆಚ್ಚು ವ್ಯವಸ್ಥಿತವಾಗಿ ಯೋಜನೆ ಮಾಡಬೇಕಾಗುತ್ತದೆ. ಅವುಗಳನ್ನು ಸರಿಯಾದ ರೀತಿಯಲ್ಲಿ ಅಚ್ಚುಕಟ್ಟಾಗಿ ಹೊಂದಿಸಬೇಕಾಗುತ್ತದೆ. ಒಂದು ಸಂದೇಶವನ್ನು ವಿನ್ಯಾಸಗೊಳಿಸಿದ ಮೇಲೆ ಅದನ್ನು ಸಾಂಕೇತಿಕೀಕರಣಗೊಳಿಸಬೇಕಾಗುತ್ತದೆ. ಈ ಸಂಕೇತಗಳು ಸಂದೇಶಗಳನ್ನು ಹೊತ್ತೊಯ್ಯುವ ವಾಹಕಗಳಾಗಿ ಚಿಹ್ನೆಗಳು, ವಿದ್ಯುನ್ಮಾನ ಸಂಕೇತಗಳು, ಶಬ್ದ, ತರಂಗಗಳು ಮತ್ತು ಕಿರಣದಂಡ ಇವೆಲ್ಲವುಗಳೆಲ್ಲದರ ರೂಪದಲ್ಲಿ ಇರಬಹುದು. ಚಿಹ್ನೆಯ ರೂಪದ ಸಂಜ್ಞೆಗಳು ಸಾಮಾನ್ಯವಾಗಿ ಕೈಬರಹದ್ದಾಗಿರುತ್ತವೆ. ಗಣಕಯಂತ್ರಗಳು, ದೂರವಾಣಿ ಮತ್ತು ರೇಡಿಯೋಗಳು ವಿದ್ಯುನ್ಮಾನ ತರಂಗಗಳ ಮೇಲೆ ಅವಲಂಬಿತವಾಗಿರುತ್ತವೆ. ಟೆಲಿವಿಷನ್ ಮತ್ತು ಚಲನಚಿತ್ರಗಳು ಬೆಳಕಿನ ತರಂಗ ರೂಪದ ಸಂಜ್ಞೆಗಳಿಗೆ ಉತ್ತಮ ಉದಾಹರಣೆಗಳು. ಆಕರ/ಮೂಲ ಅಥವಾ ಸಂವಾಹಕ ಮೊದಲು ಸಂದೇಶವನ್ನು ಸಂಕೇತರೂಪಕ್ಕೆ ತರಬೇಕು. ಅಂದರೆ ಸಂವಹಿತನು (Reciever) ಮಾಹಿತಿಯ ಸಂಕೇತವನ್ನು ಒಡೆದು (Decode) ಅರ್ಥಮಾಡಿಕೊಳ್ಳಬೇಕಾಗುತ್ತದೆ.

## 1.4.3 ಮಾಧ್ಯಮ

ಬರಹ, ಮೌಖಿಕ, ಶಾಬ್ದಿಕವಲ್ಲದ ಅಥವಾ ವಿದ್ಯುನ್ಮಾನ ರೀತಿಗಳ ಮೂಲಕವಾಗಿ ಸಂವಹಿತನಿಗೆ ಮಾಧ್ಯಮ (ಅಥವಾ ಚಾನೆಲ್) ಸಂದೇಶಗಳನ್ನು ವರ್ಗಾವಣೆ ಅಥವಾ ಪ್ರಸರಣ ಮಾಡುತ್ತದೆ. ಸಂವಾಹಕನು ಸಂದೇಶಗಳನ್ನು ವಿನ್ಯಾಸಗೊಳಿಸಿದ ಮೇಲೆ, ಉದ್ದೇಶಿತ, ಶ್ರೋತೃ ಮತ್ತು ವೀಕ್ಷಕ ವೃಂದಕ್ಕೆ ತಲುಪುವಂತೆ ಸಂದೇಶಗಳನ್ನು ರವಾನಿಸುವ ಪ್ರಯತ್ನ ಮಾಡುತ್ತಾನೆ. ನೀವು ಪತ್ರ ಬರೆದರೆ, ನಿಮ್ಮ ಸಂದೇಶ ಹೇಗೆ ರವಾನಿಸಲ್ಪಡುತ್ತದೆ? ಅಂಚೆಯ ಮೂಲಕ, ಫ್ಯಾಕ್ಸ್‌ನ ಮೂಲಕ ಅಥವಾ ಅಂತರ್ಜಾಲದ ಇ-ಮೇಲ್ ಮೂಲಕ ಅದನ್ನು ನೀವು ಕಳುಹಿಸುತ್ತೀರಿ. ಇವುಗಳೆಲ್ಲವೂ ಸಂಪರ್ಕದ ಬೇರೆ ಬೇರೆ ಮಾಧ್ಯಮಗಳೇ. ವೃತ್ತಪತ್ರಿಕೆ ಮಾಹಿತಿಯನ್ನು ಹೊತ್ತು ತರುವ ಒಂದು ಮಾಧ್ಯಮ. ರೇಡಿಯೋ, ಟೆಲಿವಿಷನ್ ಮತ್ತು ಅಂತರ್ಜಾಲ ಮುಂತಾದ ಉಳಿದ ಇತರ ಮಾಧ್ಯಮಗಳ ಮೂಲಕವೂ ಸಂದೇಶಗಳು ರವಾನೆಯಾಗುತ್ತವೆ. ಸಂವಾಹಕ ಮತ್ತು ಸಂವಹಿತರ ನಡುವೆ ಮಾಹಿತಿ ಸಂಚರಿಸುವ ಸಾಧನ ಇದು.

ಸಂವಾಹಕ ಮತ್ತು ಸಂವಹಿತರ ನಡುವೆ ಸಂದೇಶಗಳ ಹರಿಯಲು ಸಹಾಯ ಮಾಡುವ ಪರಿಣಾಮಕಾರಿ ಕೊಂಡಿಗಳೇ ಸಂಪರ್ಕ ಸಾಧನಗಳು. ಸಂವಹನ ಪ್ರಸರಣವನ್ನು ಹೆಚ್ಚು ಪ್ರಭಾವಶಾಲಿಯಾಗಿಸಲು ಮತ್ತು ಪರಿಣಾಮಕಾರಿಯಾಗಿರುವಂತೆ ಮಾಡಲು ಸೂಕ್ತವಾದ ಸಂವಹನ ಮಾಧ್ಯಮಗಳ ಬಳಕೆ ಮಾಡಿಕೊಳ್ಳಬೇಕು.

## 1.4.4 ಗ್ರಾಹಕ / ಸಂಕೇತಗಳನ್ನು ಒಡೆಯುವವ / ಸಂವಹಿತ

ಸಂವಾಹಕನಿಂದ ಸಂದೇಶಗಳನ್ನು ಪಡೆಯುವ ವ್ಯಕ್ತಿಯೇ ಗ್ರಾಹಕ (Reciever) ಅಥವಾ ಸಂಕೇತಗಳನ್ನು ಒಡೆಯುವವ (Decoder). ವ್ಯಕ್ತಿ ಸಂದೇಶಗಳನ್ನು ಪಡೆದುಕೊಂಡು, ಅರ್ಥೈಸಿಕೊಂಡು, ನಂತರದಲ್ಲಿ ಅದಕ್ಕೆ ಪ್ರತಿಕ್ರಿಯಿಸುತ್ತಾನೆ. ಪ್ರತಿಕ್ರಿಯಿಸುವ ಕಾಲಕ್ಕೆ ಈ ಗ್ರಾಹಕನೇ ಪ್ರೇಕ್ಷಕನಾಗುತ್ತಾನೆ ಮತ್ತು ಹೀಗೆಯೇ ಸಂವಹನದ ಪ್ರಕ್ರಿಯೆ ಮುಂದುವರೆಯುತ್ತದೆ. ಸಂವಹಿತರು ಬೇರೆ ಬೇರೆ ರೀತಿಯ ಹಿನ್ನೆಲೆಗಳನ್ನು ಹೊಂದಿರುವ ವಿವಿಧ ಗಾತ್ರದ ಗುಂಪು, ಪಂಗಡಗಳಿಗೆ ಸೇರಿರುತ್ತಾರೆ ಎಂಬುದಂತೂ ಸ್ಪಷ್ಟ. ಹೀಗಾಗಿ, ಸಂವಾಹಕನ ಸಂದೇಶಕ್ಕೆ ಸ್ವಂತವಾಗಿ ಬೇರೆ ರೀತಿಯಲ್ಲಿ ಆಲೋಚನೆ ಮಾಡಬಲ್ಲ ಪ್ರತಿಯೊಬ್ಬರೂ ಅವರವರ ಗ್ರಹಿಕೆಯನ್ನು ಆಧರಿಸಿ, ಬೇರೆ ಬೇರೆ ರೀತಿಯ ಹಿನ್ನೆಲೆಗಳನ್ನು ಹೊಂದಿರುವ ವಿವಿಧ ಗಾತ್ರದ ಗುಂಪು, ಪಂಗಡಗಳಿಗೆ ಸೇರಿರುತ್ತಾರೆ ಎಂಬುದಂತೂ ಸ್ಪಷ್ಟ. ಹೀಗಾಗಿ, ಸ್ವಂತವಾಗಿ ಬೇರೆ ರೀತಿಯಲ್ಲಿ ಆಲೋಚನೆ ಮಾಡಬಲ್ಲ ಪ್ರತಿಯೊಬ್ಬರೂ ಅವರವರ ಗ್ರಹಿಕೆಯನ್ನು ಆಧರಿಸಿ, ಸಂವಾಹಕನ ಸಂದೇಶಕ್ಕೆ ಬೇರೆ ಬೇರೆ ರೀತಿಯಾಗಿ ಪ್ರತಿಸ್ಪಂದಿಸುತ್ತಾರೆ. ವೈಯಕ್ತಿಕ ಅನುಭವಗಳ, ಅಭಿಮುಖತೆಯ ವ್ಯತ್ಯಾಸಗಳ ಕಾರಣದಿಂದ ಅವರವರ ಗ್ರಹಿಕೆಯನ್ನು ಆಧರಿಸಿ ಪ್ರತಿಕ್ರಿಯೆ ನೀಡುತ್ತಾರೆ. ಬೇರೆ ರೀತಿಯಲ್ಲಿ ಹೇಳುವುದಾದರೆ, ಸಂಕೇತಗಳನ್ನು ಒಡೆಯುವ ಗ್ರಾಹಕ, ಸಂದೇಶವನ್ನು ಅರ್ಥೈಸುತ್ತಾನೆ ಮತ್ತು ಅದಕ್ಕೆ ಪ್ರತಿಕ್ರಿಯಿಸುತ್ತಾನೆ. ಈ ಪ್ರಕ್ರಿಯೆಯನ್ನು ಸಂಕೇತಗಳನ್ನು ಒಡೆಯುವಿಕೆ (Decoding) ಎಂದು ಕರೆಯಲಾಗುತ್ತದೆ.

## 1.4.5 ಪ್ರತಿಕ್ರಿಯೆ

ಸಂವಾಹಕನ ಸಂದೇಶಕ್ಕೆ ಸಂವಹಿತನ ಪ್ರತಿವರ್ತನೆಯೇ ಪ್ರತಿಕ್ರಿಯೆ. ಈ ಪ್ರತಿಕ್ರಿಯೆಯು ಶಾಬ್ದಿಕ ರೂಪದಲ್ಲಿರಬಹುದು, ಸನ್ನೆ ಅಥವಾ ಭಾವ ಚೇರ್ಯೆಯ ರೂಪದಲ್ಲಿರಬಹುದು. ಸಂದೇಶವನ್ನು ಪಡೆಯಲಾಗಿದೆ ಎಂಬುದರ ಗುರುತು ಈ ಪ್ರತಿಕ್ರಿಯೆ. ಉದಾಹರಣೆಗೆ, ಒಬ್ಬನು ತನ್ನ ಮಿತ್ರನಿಗೆ ಸಂದೇಶವನ್ನು ಕಳುಹಿಸುತ್ತಾನೆ ಎಂದಿಟ್ಟುಕೊಳ್ಳೋಣ. ಕಳುಹಿಸಿದ ನಂತರ ಮಿತ್ರನಿಂದ ಯಾವುದಾದರೂ ರೀತಿಯ ಪ್ರತಿಕ್ರಿಯೆಯನ್ನು ಆತ ನಿರೀಕ್ಷಿಸುತ್ತಾನೆ. ತಾನು ಕಳುಹಿಸಿದ ಆ ಸಂದೇಶ ತಲುಪಿದೆಯೇ? ಅದು ಅರ್ಥವಾಯಿತೇ? ಸಂದೇಶವನ್ನು ಕಳುಹಿಸಿದ ಮೇಲೆ ಇಂತಹ ಹಲವಾರು ಪ್ರಶ್ನೆಗಳು ಏಳಬಹುದು. ಆದ್ದರಿಂದ ಪ್ರತಿಕ್ರಿಯೆ ಇಲ್ಲದಿದ್ದರೆ ಸಂವಹನದ ಪ್ರಕ್ರಿಯೆಯು ಅಪೂರ್ಣವೆಂದೇ ಆಗುತ್ತದೆ. ಪ್ರತಿಕ್ರಿಯೆಯು ನೇರವಾಗಿ ಇರಬಹುದು ಅಥವಾ ಪರೋಕ್ಷವಾಗಿ ಇರಬಹುದು. ನೇರವಾದ ಪ್ರತಿಕ್ರಿಯೆಯು ಮೌಖಿಕ ಅಥವಾ ಬರಹರೂಪದ ಪದಗಳನ್ನು ಒಳಗೊಂಡಿರಬಹುದು. ಸಂಜ್ಞೆಗಳನ್ನೋ ಅಥವಾ ದೈಹಿಕ ಅಂಗಚಲನೆಗಳನ್ನೋ ಒಳಗೊಂಡಿರಬಹುದು. ಸಂದೇಶ ಪಡೆದ ನಂತರದ ಸಂವಹಿತನ ಕ್ರಿಯೆಗಳನ್ನು ಅವಲೋಕಿಸಿದರೆ ಪರೋಕ್ಷ ಪ್ರತಿಕ್ರಿಯೆಯ ಅನುಭವವಾಗುತ್ತದೆ. ಬಹಳಷ್ಟು ಸಂದರ್ಭಗಳಲ್ಲಿ, ಸಂವಹಿತನು ಸಂವಾಹಕನಿಗೆ ಪ್ರತಿಕ್ರಿಯೆ ನೀಡುವುದರ ಫಲಿತಾಂಶವೇ ಯಶಸ್ವಿ ಸಂವಹನ. ಆದರೆ ಕೆಲವೊಂದು ಸಂದರ್ಭಗಳಲ್ಲಿ, ಪ್ರತಿಕ್ರಿಯೆ ಸಂವಾಹಕನಿಗೇ ತಿರುಗಿ ಬರುವ ಅವಶ್ಯಕತೆಯಿರುವುದಿಲ್ಲ, ಸಂದೇಶ ನಿರ್ದೇಶಿತ ಕ್ರಿಯೆಗೆ ಅನುವು ಮಾಡಿದಾಗಲೂ ಸಂವಹನ ಪರಿಪೂರ್ಣ ಎನಿಸುತ್ತದೆ.

## 1.4.6 ಕರ್ಕಶತೆ

ಸಂವಹನದ ಪ್ರಕ್ರಿಯೆಗೆ ಪ್ರತಿರೋಧ ಒಡ್ಡುವಂತಹ ಯಾವುದೇ ತೊಂದರೆ, ಗೊಂದಲ ಅಥವಾ ಕ್ಷೋಭೆಯನ್ನು ಕರ್ಕಶತೆ (Noise) ಎಂದು ಗುರುತಿಸಲಾಗುತ್ತದೆ. ಕರ್ಕಶತೆಗಳಲ್ಲಿ ಎರಡು ವಿಧ. ಒಂದು ಮಾಧ್ಯಮ ಅಥವಾ ಭೌತಿಕ ಕರ್ಕಶತೆ, ಮತ್ತೊಂದು ಶಬ್ದಾರ್ಥ ಕರ್ಕಶತೆ. ಎರಡೂ ಸಂದರ್ಭಗಳಲ್ಲಿ ಫಲಿತಾಂಶ ಒಂದೇ. ಅದೇನೆಂದರೆ, ಸಂವಹನದ ಪ್ರಕ್ರಿಯೆಯಲ್ಲಿ ಅರ್ಥ ನಷ್ಟವಾಗುವುದು.

ಕರ್ಕಶತೆ ಎಂದರೆ, ಸಂದೇಶವು ರವಾನೆಯಾಗುವ ಸಂದರ್ಭದಲ್ಲಿ ಉಂಟಾಗುವ ಭೌತಿಕ ಗೊಂದಲ. ಉದಾಹರಣೆಗೆ, ರಾತ್ರಿಯಲ್ಲಿ ನೀವು ಪುಸ್ತಕವನ್ನು ಓದುತ್ತಿರುವಾಗ ಮಿಣುಗು ಮಿಣುಗೆನ್ನುವ ದೀಪದಿಂದ ನಿಮ್ಮ ಓದಿಗೆ ಅಡ್ಡಿ ಉಂಟಾಗಬಹುದು. ಸ್ನೇಹಿತರೊಂದಿಗೆ ಮಾತನಾಡುವಾಗ ಹೊರಗಿನಿಂದ ಯಾರೋ ನಿಮ್ಮನ್ನು ಕರೆದರೆ ನಿಮ್ಮ ಸಂಭಾಷಣೆಗೆ ಉಂಟಾಗುವ ತೊಂದರೆ, ಇತ್ಯಾದಿಗಳು. ವೃತ್ತಪತ್ರಿಕೆಗಳಲ್ಲಿನ ಮುದ್ರಣದೋಷಗಳು, ನೀವು ಟಿವಿ ವೀಕ್ಷಿಸುವಾಗ ವಿದ್ಯುತ್ ಕೈ ಕೊಡುವುದು, ಪರದೆಯ ಮೇಲೆ ಸ್ಫುಟವಾಗಿಲ್ಲದ ಚಿತ್ರಗಳು ಮೂಡಿಬರುವುದು, ಟೆಲಿವಿಷನ್ ಕಾರ್ಯಕ್ರಮ ವೀಕ್ಷಿಸುತ್ತಿರುವಾಗ ಮನೆಯ ಹಜಾರದಲ್ಲಿ ಮಕ್ಕಳು ಗಲಾಟೆ ಮಾಡುವುದು ಇತ್ಯಾದಿಗಳು, ಮಾಧ್ಯಮದಲ್ಲಿಯೇ ಆಗುವ (ಚಾನೆಲ್) ಕರ್ಕಶತೆಗಳಿಗೆ ಉದಾಹರಣೆಗಳು.

ಶಬ್ದಾರ್ಥಗಳಿಗೆ ಸಂಬಂಧಿತವಾದ ಕರ್ಕಶತೆಗಳು ಸಂವಹನದ ಪ್ರಕ್ರಿಯೆಯಲ್ಲಿಯೇ ಉಂಟಾಗುವ ದೋಷಗಳು. ಇದು ಸಂವಾಹಕ ಅಥವಾ ಸಂವಹಿತನ ಮಟ್ಟದಲ್ಲಿ ಆಗಬಹುದು. ಶಬ್ದಾರ್ಥ ಕರ್ಕಶತೆಗಳಿಗೆ ಕಾರಣೀಭೂತವಾದ ಹಲವಾರು ಅಂಶಗಳಿವೆ. ಅವುಗಳಲ್ಲಿ ಕೆಲವೊಂದನ್ನು ಈ ಕೆಳಗೆ ಕೊಡಲಾಗಿದೆ.

ಅ. ಸಂವಹಿತರಿಗೆ ಇರುವ ಬೇರೆಯೇ ರೀತಿಯ ನಿರೀಕ್ಷೆಗಳು

ಆ. ಸಂವಾಹಕ ಹಾಗೂ ಸಂವಹಿತರ ದೃಷ್ಟಿಗಳಲ್ಲಿ ಸಾಮರಸ್ಯವಿಲ್ಲದಿರುವುದು

ಇ. ಭಾಷೆಯ ತೊಡಕುಗಳು

ಈ. ಸಾಂಸ್ಕೃತಿಕ ಹಿನ್ನೆಲೆಯಲ್ಲಿ ಇರುವ ವ್ಯತ್ಯಾಸಗಳು

ಉ. ಮಾನೋವೃತ್ತಿಯಲ್ಲಿನ ಭೇದಗಳು

ಮಾಧ್ಯಮ ಕರ್ಕಶತೆ ಮತ್ತು ಶಬ್ದಾರ್ಥ ಕರ್ಕಶತೆಗಳೆರಡನ್ನೂ ತೊಡೆದು ಹಾಕಲು ಸಾಧ್ಯವಾಗುವಂತಹ ಸಂವಹನ ಪ್ರಕ್ರಿಯೆಯನ್ನು ಹೆಚ್ಚು ಪರಿಣಾಮಕಾರಿಯಾಗಿ, ಅರ್ಥಪೂರ್ಣವಾಗಿ ಮಾಡಲು, ಸಂವಾಹಕನು ಕರ್ಕಶತೆಯು ಉಂಟಾಗುವ ರೀತಿಯ ಸೂಕ್ಷ್ಮಗಳನ್ನು ತಿಳಿಯುವ ಪ್ರಯತ್ನ ಮಾಡಿಕೊಂಡು, ಅವುಗಳನ್ನು ದೂರಪಡುವ ಪ್ರಯತ್ನ ಮಾಡಬೇಕು.

## 1.5 ಸಂವಹನ ಕರ್ತವ್ಯಗಳು ಮತ್ತು ಕಾರ್ಯಗಳು

ಉದ್ದೇಶವಿಲ್ಲದೆ ಯಾವುದೇ ಸಂವಹನವೂ ಆಗುವುದಿಲ್ಲ. ನಿಮ್ಮ ಮನೆಯ ಸುತ್ತಲೂ ಒಮ್ಮೆ ನೋಡಿ. ಟೆಲಿವಿಷನ್, ಪತ್ರಿಕೆಗಳು, ಪುಸ್ತಕಗಳು, ನಿಯತಕಾಲಿಕಗಳು, ಗೋಡೆಗೆ ತೂಗುಹಾಕಿರುವ ಗಡಿಯಾರ, ಗಣಕಯಂತ್ರ, ದೂರವಾಣಿ, ಸಿ.ಡಿ. ಪ್ಲೇಯರ್, ಈ ಕೆಲವು ನಮ್ಮ ಸುತ್ತಲೇ ಇರುವ ಸಂಪರ್ಕ ಸಾಧನಗಳು. ಪ್ರತಿಯೊಂದೂ ನಿಮ್ಮ ಭಾವನೆಗಳ ಮೇಲೆ, ಮನೋವೃತ್ತಿಗಳ ಮೇಲೆ, ವರ್ತನೆಯ ಮೇಲೆ ಮತ್ತು ಅರಿವಿನ ಮೇಲೆ ಪ್ರಭಾವ ಬೀರುತ್ತದೆ.

ಇದು ಮಾಹಿತಿಯ ಯುಗ. ನಿಮ್ಮ ದೈನಂದಿನ ಜೀವನವು ಹಲವಾರು ಸಂಪರ್ಕ ಸಾಧನಗಳ ಮೇಲೆ ಅವಲಂಬಿತವಾಗಿದೆ ಎನ್ನುವುದು ಅಚ್ಚರಿಯ ವಿಷಯವೇನೂ ಅಲ್ಲ. ಮನೆ ಹಾಲಿನವರು ಕರೆಗಂಟೆಯನ್ನೊತ್ತಿ ನಿಮ್ಮನ್ನು ಎಬ್ಬಿಸುತ್ತಾನೆ. ಬೆಳಗಿನಲ್ಲೇ ಪತ್ರಿಕೆಗಳು ನಿಮಗೆ ಮಾಹಿತಿ ನೀಡುತ್ತವೆ, ಟೆಲಿವಿಷನ್ ಮನರಂಜನೆ ನೀಡುತ್ತದೆ. ರೇಡಿಯೋದ ಹವಾಮಾನ ಮುನ್ಸೂಚನೆ ನಿಮಗೆ ಎಚ್ಚರಿಕೆ ನೀಡುತ್ತದೆ. ಗಡಿಯಾರವು ಕೆಲಸದ ಸಮಯವನ್ನು ಕೂಗಿ ಹೇಳುತ್ತದೆ. ನೀವು ಹೊರ ನಡೆದರೆ, ರಸ್ತೆಬದಿಯ ಸೂಚನಾಫಲಕಗಳು ನಿಮಗೆ ದಿಕ್ಕು ತೋರಿಸುತ್ತವೆ.

ದಿನಸಿ ಅಂಗಡಿಗಳು ಮತ್ತು ಅತಿಥಿಗೃಹಗಳು ತಮ್ಮಲ್ಲಿರುವ ಉತ್ಪನ್ನಗಳ ಹಾಗೂ ತಾವು ಒದಗಿಸುವ ಸೇವೆಗಳ ವಿವರಗಳನ್ನು ಪ್ರದರ್ಶಿಸುತ್ತವೆ. ಶಾಲೆಯ ತರಗತಿಗಳಲ್ಲಿ ಅಧ್ಯಾಪಕರು ಕಪ್ಪು ಹಲಗೆಗಳನ್ನೂ, ದೃಕ್‌ಶ್ರವಣ ಸಹಾಯಕಗಳನ್ನೂ ಮೌಖಿಕ ನಿರೂಪಣೆಗಳೊಂದಿಗೆ ಬಳಸುತ್ತಾರೆ. ಗ್ರಂಥಾಲಯಗಳು ಜ್ಞಾನಾರ್ಜನೆಗೆ ಸಹಾಯ ಮಾಡುತ್ತವೆ. ಟಪಾಲು ಪೆಟ್ಟಿಗೆಗಳು ವ್ಯಕ್ತಿಯ ಮತ್ತು ಕಛೇರಿಯ ಪತ್ರಗಳನ್ನು ಹೊಂದಿರುತ್ತವೆ. ಈ ರೀತಿಯಾಗಿ, ನಮ್ಮ ದೈನಂದಿನ ಜೀವನವು ಹಲವಾರು ಸಂವಹನ ಕಾರ್ಯಗಳ ಮೇಲೆ ಅವಲಂಬಿತವಾಗಿದೆ. ಬಹುತೇಕ ಸಂವಹನೆಗಳ ಉದ್ದೇಶವೆಂದರೆ ಮಾಹಿತಿ ನೀಡುವುದು, ಅರ್ಥೈಸುವುದು, ಶಿಕ್ಷಣ ನೀಡುವುದು, ಮನವೊಲಿಕೆ ಮತ್ತು ಮನರಂಜನೆ.

## 1.5.1 ಮಾಹಿತಿ

ಮಾಹಿತಿ ನೀಡುವುದು ಎಂದರೆ, ಏನು ಸಂಭವಿಸುತ್ತದೆಯೋ ಅದನ್ನು ಜನತೆಗೆ ತಿಳಿಸುವುದು. ಹಲವಾರು ಸಂದೇಶಗಳ ಉದ್ದೇಶ ಮಾಹಿತಿಯ ಪ್ರಸರಣ. ಕುತೂಹಲ ಹುಟ್ಟಿಸುವ ಅಥವಾ ಪ್ರಮುಖ ಸಂಗತಿಗಳನ್ನು ಅವು ಬೇರೆಯವರಿಗೆ ತಿಳಿಸುತ್ತವೆ.  ಉದಾಹರಣೆಗೆ- ರಾಜಕೀಯ, ವಿಜ್ಞಾನ, ಕ್ರೀಡೆಗಳು, ಸಂಸ್ಕೃತಿ, ಹವಾಮಾನ ಮತ್ತು ಇತರ ಹಲವಾರು ವಿಷಯಗಳ ಬಗ್ಗೆ ವೃತ್ತಪತ್ರಿಕೆಗಳು ವಾರ್ತೆಗಳನ್ನು ಹೊತ್ತು ತರುತ್ತವೆ. ಒಂದು ಹೊಸ ಉತ್ಪನ್ನವನ್ನು ಕೊಂಡುಕೊಂಡಾಗ, ಅದರ ಹೊರಕವಚದ ಮೇಲೆ ಮತ್ತು ಅದರಲ್ಲಿನ ಕಿರುಹೊತ್ತಿಗೆಯಲ್ಲಿ ನಾವು ಸಂಬಂಧಿಸಿದ ಸೂಚನೆಗಳನ್ನು ಕಾಣುತ್ತೇವೆ.

ಈ ಸಂದರ್ಭಗಳಲ್ಲಿ ಮಾಧ್ಯಮಗಳು ಸಂವಹನದ ಮತ್ತು ಮಾಹಿತಿಯ ಸಾಧನಗಳಾಗಿ ಕೆಲಸ ಮಾಡುತ್ತವೆ. ನಿಮ್ಮ ದೈನಂದಿನ ಕೆಲಸವನ್ನು ಯೋಜಿಸಿಕೊಳ್ಳಲು ಮತ್ತು ಸೂಕ್ತವಾದ ನಿರ್ಣಯಗಳನ್ನು ತೆಗೆದುಕೊಳ್ಳಲೂ ಈ ಮಾಹಿತಿಯು ನಿಮಗೆ ಸಹಾಯ ಮಾಡುತ್ತದೆ.  ಮಾಹಿತಿಯನ್ನು ಪಡೆಯುವುದಕ್ಕೆ ನಿಮಗೆ ಸಂತೋಷವಾಗುತ್ತದೆ, ಅಲ್ಲವೇ?. ಇದು ಸಂವಹನದ ಮೂಲಕಾರ್ಯ.

## 1.5.2 ಅರ್ಥೈಸುವಿಕೆ

ಒಂದೇ ವಿಷಯ ಅಥವಾ ಸಂಗತಿಯನ್ನು ಜನರು ಬೇರೆ ಬೇರೆ ರೀತಿಯಲ್ಲಿ ವಿವರಿಸುತ್ತಾರೆ ಎಂಬುದಕ್ಕೆ ನಾವು ಹಲವು ಉದಾಹರಣೆಗಳನ್ನು ಕಾಣಬಹುದಾಗಿದೆ. ವಿವಿಧ ಪತ್ರಿಕೆಗಳು ಅಥವಾ ನಿಯತಕಾಲಿಕೆಗಳು ಅಥವಾ ಟೆಲಿವಿಷನ್ ವಾಹಿನಿಗಳು ಒಂದೇ ವಿಷಯವನ್ನು ಕುರಿತು ಬೇರೆ ಬೇರೆ ಪಾಠಾಂತರಗಳನ್ನು ನೀಡುವುದೂ ಆಗುತ್ತದೆ. ಆದರೆ ಹೀಗಾಗಲು ಕಾರಣವೇನು? ಇದಕ್ಕಿರುವ ಪ್ರಮುಖ ಕಾರಣವೆಂದರೆ ಮಾನವರು ಮತ್ತು ಮಾಧ್ಯಮಗಳು, ಸಾರ್ವಜನಿಕ ಹಿತಾಸಕ್ತಿಯ ಬೆಳಕಿನಲ್ಲಿ ಬೇರೆ ಬೇರೆ ಅಂಶಗಳನ್ನು ಸೂಚಿಸುವ ಪ್ರಯತ್ನ ನಡೆಸುತ್ತಾರೆ. ಬೇರೆ ಬೇರೆ ರೀತಿಯ ಗ್ರಹಿಕೆಗಳನ್ನು ಹೊಂದಿರುವಾಗ ನಾವು ನಮ್ಮದೇ ದೃಷ್ಟಿಕೋನದಿಂದ ವಿಷಯವನ್ನು ವಿವರಿಸುವ ಪ್ರಯತ್ನ ಮಾಡುತ್ತೇವೆ. ಇದನ್ನೇ 'ಅರ್ಥೈಸುವಿಕೆ' ಎನ್ನುವುದು.

ಸಂವಹನದ ಈ ಅರ್ಥೈಸುವಿಕೆಯ ಕಾರ್ಯವೇ ಯಾವುದೇ ಸಮಸ್ಯೆಯ ಮೂಲಗಳನ್ನು ತಿಳಿಯುವಲ್ಲಿ ನಮಗೆ ಸಹಾಯ ಮಾಡುವುದು ಅಥವಾ ಆ ವಿಷಯದ ಹಲವು ಆಯಾಮಗಳನ್ನು ನಮಗೆ ನೀಡುವುದು, ಪರಿಣಾಮಗಳನ್ನು ಚರ್ಚೆ ಮಾಡುವುದು.  ವಿಷಯವನ್ನು ಸರಿಯಾಗಿ ತಿಳಿದುಕೊಳ್ಳಲೂ ಮತ್ತು ಸೂಕ್ತವಾದ ನಿರ್ಣಯವನ್ನು ತೆಗೆದುಕೊಳ್ಳಲೂ ಈ ಸಂಪೂರ್ಣ ಕಾರ್ಯಾಚರಣೆಯೇ ನಮಗೆ ನೆರವು ನೀಡುವುದು. ಈ ಅರ್ಥೈಸುವಿಕೆಯು ಯಾವಾಗಲೂ ಸುಲಭವಲ್ಲ, ಅದು ಪ್ರಜ್ಞಾತ್ಮಕವಾಗಿ ಆಗುವುದೂ ವಿರಳವೇ.  ನೀವು, ಏನನ್ನು ನೋಡುತ್ತೀರೋ, ಕೇಳುತ್ತೀರೋ, ಓದುತ್ತೀರೋ ಅದು ಸಾಮಾನ್ಯವಾಗಿ ನೀವು ಪರಿಕಲ್ಪನೆ ಮಾಡಿಕೊಂಡದ್ದನ್ನೇ ತೋರ್ಪಡಿಸುತ್ತದೆ.

ಇದೂ ಸಹ ಬರುವುದು ನಿಮ್ಮ ವೈಯಕ್ತಿಕ ಅನುಭವಗಳು, ಉದ್ದೇಶ, ಅವಶ್ಯಕತೆಗಳು ಮತ್ತು ಆಸಕ್ತಿಗಳಿಂದ. ಈ ಅಂಶಗಳನ್ನು ಬೇರೆ ಬೇರೆ ಸಂದರ್ಭಗಳ ಬೆಳಕಿನಲ್ಲಿ ಅರ್ಥೈಸುವುದರಲ್ಲಿ ಆಗುವ ವ್ಯತ್ಯಾಸವೇ, ವ್ಯಕ್ತಿ-ವ್ಯಕ್ತಿಗಳ ನಡುವೆ ಪರಸ್ಪರ ನಡೆಯುವ ಸಂವಹನ ಅತಿಹೆಚ್ಚಿನ ತೊಡಕುಗಳಿಗೆ ಕಾರಣ. ಉದಾಹರಣೆಗೆ, ಗ್ರಾಮೀಣ ಪ್ರದೇಶವೊಂದರ ವ್ಯಕ್ತಿಯು ಹೊರಗಿನ ಪ್ರಪಂಚಕ್ಕೆ ಪ್ರತಿಕ್ರಿಯಿಸುವುದಕ್ಕಿಂತ ತೀರಾ ಭಿನ್ನವಾಗಿ ದೊಡ್ಡ ಪಟ್ಟಣದ ಮಧ್ಯೆ ಬೆಳೆದ ವ್ಯಕ್ತಿ ಪ್ರತಿಕ್ರಿಯಿಸುತ್ತಾನೆ. ಹಾಗಾಗಿ, ಯಾವುದೇ ಸಂದೇಶವೊಂದನ್ನು ರೂಪಿಸುವಾಗ ಸಂವಹಿತನ ಅರ್ಥೈಸುವಿಕೆಯ ಸಾಮರ್ಥ್ಯವನ್ನು ಗಮನದಲ್ಲಿಟ್ಟುಕೊಳ್ಳಬೇಕಾಗುತ್ತದೆ.

## 1.5.3 ಶಿಕ್ಷಣ

ಜನತೆಗೆ ಶಿಕ್ಷಣ ನೀಡಲು ಸಂವಹನ ಮಾಧ್ಯಮಗಳನ್ನು ಬಳಸಲಾಗುತ್ತದೆ. ವೃತ್ತಪತ್ರಿಕೆ ನಿಯತಕಾಲಿಕ, ಟೆಲಿವಿಷನ್ ಸಾಕ್ಷ್ಯಚಿತ್ರಗಳು ಮತ್ತು ಉತ್ತಮ ಅಧ್ಯಾಪಕ-ಇವರೆಲ್ಲರೂ ವಿವಿಧ ವಿಷಯಗಳ ಬಗ್ಗೆ ನಮಗೆ ಶಿಕ್ಷಣ ನೀಡುತ್ತಾರೆ. ನಾವು ಗಮನವನ್ನು ಕೇಂದ್ರೀಕರಿಸಬೇಕಾದ ಹಲವಾರು ಸಮಕಾಲೀನ ಸಂಗತಿಗಳನ್ನು ಕುರಿತು ಸಂಪರ್ಕ ಮಾಧ್ಯಮಗಳು ನಿರಂತರವಾಗಿ ನಮಗೆ ಶಿಕ್ಷಣ ನೀಡುತ್ತವೆ. ಸಾಮಾಜಿಕ-ಸಾಂಸ್ಕೃತಿಕ ಮತ್ತು ನೈತಿಕ ಪ್ರಭಾವಗಳು ಒಬ್ಬರ ವ್ಯಕ್ತಿತ್ವವನ್ನು ಪ್ರತಿಫಲಿಸುವುದು ಸಂವಹನದ ಶೈಕ್ಷಣಿಕ ಕಾರ್ಯದ ಫಲಿತಾಂಶವೇ. ತಂದೆ ತಾಯಿಗಳು, ಹಿರಿಯರು, ಗುರುಗಳು, ಪುಸ್ತಕಗಳು, ಸಮೂಹ ಮಾಧ್ಯಮ ಸಾಧನಗಳು ಮತ್ತಿತರ ಸಂವಹನದ ವಿವಿಧ ಅಂಶಗಳಿಂದ, ಬಾಲಾವಸ್ಥೆಯಿಂದ ವಯಸ್ಕರಾಗುವವರೆಗೂ ವ್ಯಕ್ತಿತ್ವವು ಪರಿಷ್ಕರಿಸಲ್ಪಡುತ್ತಲೇ ಇರುತ್ತದೆ. ಹೊಸ ರೀತಿಯ ವಿಷಯ ಸಮರ್ಪಣೆಗಳು ಹೆಚ್ಚು ಗುಣಮಟ್ಟದ, ಹೆಚ್ಚು ಮೌಲ್ಯಾಧಾರಿತ ಜ್ಞಾನವನ್ನು ನೀಡುವಲ್ಲಿ ಸಮರ್ಪಕವಾಗಿ ಸಂವಹನ ಮಾಧ್ಯಮಗಳನ್ನು ಬಳಸಿಕೊಳ್ಳುತ್ತವೆ.

## 1.5.4 ಮನವೊಲಿಕೆ

ಸಂವಹನದ ಮನವೊಲಿಕೆಯ ಕಾರ್ಯವು ಯಾವುದೇ ಸಮಾಜದಲ್ಲಿಯೂ ಬಹಳ ಪ್ರಮುಖವಾದುದು. ಸಾರ್ವಜನಿಕ ಅಭಿಪ್ರಾಯದ ಮೇಲೆ ಪ್ರಭಾವ ಬೀರಲು ಇದನ್ನು ಬಳಸಲಾಗುತ್ತದೆ. ತಮ್ಮ ಉತ್ಪನ್ನಗಳನ್ನು ಕೊಳ್ಳುವಂತೆ ಮನವೊಲಿಸುವ ಪ್ರಯತ್ನವನ್ನು ಹಲವಾರು ಜಾಹೀರಾತುಗಳು ಮಾಡುತ್ತವೆ. ಬಹಳಷ್ಟು ಸಂದರ್ಭಗಳಲ್ಲಿ ಸಂಪರ್ಕದ ಈ ಪ್ರೇರಕ ಪ್ರಭಾವಗಳನ್ನು ಆಧರಿಸಿಯೇ ಜನ ನಿರ್ಧಾರಗಳನ್ನು ತೆಗೆದುಕೊಳ್ಳುತ್ತಾರೆ. ವರ್ತನೆಯಲ್ಲಿ ಬದಲಾವಣೆ ತರಲು ಬೇರೆ ರೀತಿಯ ಕ್ರಮಗಳನ್ನು ಬಳಸಲಾಗುತ್ತದೆ. ಒಬ್ಬ ಮನುಷ್ಯನಿಗೆ ವಿಷಯಗಳನ್ನು ಮನದಟ್ಟು ಮಾಡಿಕೊಡಲು ಮತ್ತು ಅವನ ಅವಳ ಮನೋವೃತ್ತಿಗಳನ್ನು, ನಂಬುಗೆಗಳನ್ನು, ಮನೋಭಾವಗಳನ್ನು, ವರ್ತನೆಗಳನ್ನು, ಜೀವನ ಶೈಲಿಗಳನ್ನು, ಮಾರ್ಗೋಪಾಯಗಳನ್ನು ಬದಲಾಯಿಸಲು ಮಾಹಿತಿಯ ಬಳಕೆ ಮಾಡುವುದಕ್ಕೆ 'ಮನವೊಲಿಕೆ' ಎಂದು ಕರೆಯಲಾಗುತ್ತದೆ.

ಸಮಾಜದಲ್ಲಿ ನಡೆಯುವ ಘಟನೆಗಳಲ್ಲಿ ಭಾಗಿಯಾಗುವುದಕ್ಕೆ ಮತ್ತು ಪ್ರತಿಕ್ರಿಯೆ ನೀಡುವುದಕ್ಕೆ ಮನವೊಲಿಕೆ ಕಾರ್ಯ ಸಹಾಯ ಮಾಡುತ್ತದೆ. ಉದಾಹರಣೆಗೆ, ಬಹಳ ಹಿಂದೆ, ಕೇವಲ ಮೂರು ಮಕ್ಕಳಿಗೆ ಕುಟುಂಬವನ್ನು ಮಿತಿಗೊಳಿಸುವಂತೆ ಸರ್ಕಾರವು ಸಣ್ಣಕುಟುಂಬದ ಮಾದರಿಯನ್ನು ಸೂಚಿಸಿತ್ತು. ನಂತರದಲ್ಲಿ ಎರಡು ಮಕ್ಕಳಿಗೂ ಮತ್ತು ಈಗ ಒಂದೇ ಮಗುವಿಗೂ ಅದನ್ನು ಮಿತಗೊಳಿಸಿದೆ. ನಿಮ್ಮ ಬಾಲ್ಯಾವಸ್ಥೆಯು ನಿಮ್ಮ ಕುಟುಂಬದ ಮನೆಯಲ್ಲಿರುವ ಹಿರಿಯರಿಂದ, ಶಾಲೆಯ ಅಧ್ಯಾಪಕರಿಂದ ಮತ್ತು ಸಮಾಜದಲ್ಲಿ ಸುತ್ತಲೂ ಇರುವ ಜನಗಳಿಂದ ಪ್ರಭಾವಿತವಾಗಿರುತ್ತದೆ. ಸಾಮಾನ್ಯವಾಗಿ ತಂದೆತಾಯಿಗಳು, ಶಿಕ್ಷಕರು, ಧಾರ್ಮಿಕ ನಾಯಕರು, ರಾಜಕಾರಣಿಗಳು, ಆಡಳಿತಗಾರರು, ಮಾರಾಟಗಾರರು ಬೇರೆಯವರ ನಡವಳಿಕೆ ಮತ್ತು ನಂಬುಗೆಗಳ ಮೇಲೆ ಬಹಳಷ್ಟು ಪ್ರಭಾವ ಬೀರುತ್ತಾರೆ. ಇದಕ್ಕೇ ಅವರ ಕೆಲಸ ಮೀಸಲು. ಇದೇ ಮನವೊಲಿಕೆ.

## 1.5.5 ಮನರಂಜನೆ

ರಾತ್ರಿಯ ಊಟಕ್ಕೆ ಮುಂಚೆ ಪತ್ರಿಕೆಯನ್ನು ಓದುತ್ತಾ ವಿರಮಿಸಲು ಬಯಸುವ ಯಾರಾದರೂ ನಿಮಗೆ ಪರಿಚಯವಿರಬಹುದು. ಸಂಗೀತವನ್ನು ಕೇಳುತ್ತಾ ವಿಶ್ರಾಂತಿಯನ್ನು ಪಡೆಯುವುದು ನಿಮಗೆ ಇಷ್ಟವಿರಬಹುದು. ಮನರಂಜನೆ ಎಂದರೆ, ಆನಂದ ಅಥವಾ ಮೋಜುಗಾರಿಕೆಯನ್ನೇ ಪ್ರಾಥಮಿಕ ಉದ್ದೇಶವಾಗುಳ್ಳ ಸಂವಹನ ಕ್ರಿಯೆಗಳು. ಒರಿಯ ಮಾಹಿತಿ ಅಥವಾ ಕೇವಲ ತಥ್ಯಾಂಶಗಳು ಬಹಳ ತೂಕದ್ದೆನಿಸಬಹುದು, ನೀರಸವೆನಿಸಬಹುದು, ಬೇಸರಿಕೆಯನ್ನು ಉಂಟು ಮಾಡಬಹುದು. ಉದಾಹರಣೆಗೆ, ಪರಿಸರ ಮಾಲಿನ್ಯ ಕುರಿತಾದ ಒಂದು ಘಂಟೆಯ ಕಾರ್ಯಕ್ರಮವನ್ನು ನೋಡಲು ನೀವು ಬಯಸುತ್ತೀರೋ ಅಥವಾ ಒಂದು ಧಾರಾವಾಹಿಯನ್ನೋ? ಕೇವಲ ಅಂಕಿ ಅಂಶಗಳನ್ನೇ ತುಂಬಿಕೊಂಡಿರುವ ಮಾಹಿತಿಗೆ ದೀರ್ಘಕಾಲ ನಮ್ಮನ್ನು ನಾವು ಒಡ್ಡಿಕೊಳ್ಳುವುದು ಬಹಳ ಕಷ್ಟ. ವ್ಯಕ್ತಿಯೊಬ್ಬನ ಏಕಾಗ್ರತೆ ಹೆಚ್ಚೆಂದರೆ ೨೦ ನಿಮಿಷಗಳವರೆಗೆ ಮಾತ್ರ. ಅದಕ್ಕಿಂತ ಹೆಚ್ಚಿಗೆ ಒಂದೆಡೆ ಗಮನ ಕೇಂದ್ರೀಕರಿಸುವುದು ತ್ರಾಸದಾಯಕ. ಮನಸ್ಸು ವಿಭಿನ್ನತೆ ಬಯಸುವುದರಿಂದ ವಿಷಯ ಎಷ್ಟೇ ಮಹತ್ವದ್ದಾದರೂ ವ್ಯಕ್ತಿ ವಿಚಲಿತಗೊಳ್ಳುವುದು ಸಹಜ. ಆದ್ದರಿಂದಲೇ, ಉದ್ದೇಶಪೂರ್ವಕಾಗಿ ಮಾಧ್ಯಮಗಳು ನಮಗೆ ಮನರಂಜನೆ ಒದಗಿಸುತ್ತವೆ. ನಿಮ್ಮ ಸ್ನೇಹಿತನ ಕಡೆಯಿಂದ ಬಂದ ಒಂದು ನಗೆ ಚಟಾಕಿ, ರಾಜಕೀಯ ಮುತ್ಸದ್ದಿಯೊಬ್ಬರ ಅಣಕುಚಿತ್ರ, ವಿನಾಯಕನ ಕುರಿತಾದ ವ್ಯಂಗ್ಯಚಿತ್ರ, ಟೆಲಿವಿಷನ್‌ನ ಧಾರವಾಹಿಗಳು, ರೇಡಿಯೋ ಮತ್ತು ಸಿನಿಮಾಗಳಲ್ಲಿನ ಸಂಗೀತ - ಇವುಗಳೆಲ್ಲವೂ ಸಂವಹನದ ಮನರಂಜನಾ ಅಂಗಗಳಿಗೆ ಉದಾಹರಣೆಗಳು. ಮನರಂಜನೆಯ ಬಹುದೊಡ್ಡ ಅಂಶವೆಂದರೆ ಮಾನಸಿಕ ವಿಶ್ರಾಂತಿಯನ್ನು ನೀಡುವುದು. ಶ್ರೋತೃಗಳಿಗೂ ಮತ್ತು ವೀಕ್ಷಕರಿಗೂ ಆರೋಗ್ಯಯುತವಾದ ಮನರಂಜನೆಯ ಅವಶ್ಯಕತೆ ಇದೆ.

## 1.6 ಸಾರಾಂಶ

ಸಂವಹನವು ಮಾನವ ಜೀವಿಗಳ ಸಾರ್ವತ್ರಿಕ ಅವಶ್ಯಕತೆ. ಆಧುನಿಕ ಸಮಾಜವು ಸಂಪರ್ಕ ವ್ಯವಸ್ಥೆಗಳ ಮೇಲೆ ಬಹಳ ಅವಲಂಬಿತವಾಗಿದೆ. ನಮ್ಮ ವೈಯಕ್ತಿಕ ಜೀವನದಲ್ಲಿಯೂ, ಕಛೇರಿಯಲ್ಲೂ ಮತ್ತು ಆಟವಾಡುವಾಗಲೂ ನಾವು ಇವುಗಳನ್ನು ಬಳಸುತ್ತೇವೆ. ಇದೇ ಕಾರಣದಿಂದಲೇ ಈ ಕಾಲವನ್ನು 'ಮಾಹಿತಿಯುಗ' ಎಂದೂ ಕರೆಯಲಾಗುತ್ತದೆ. ನಮ್ಮ ಇಂದ್ರಿಯಗಳನ್ನು ಬಳಸಿಕೊಂಡು ಮಾಹಿತಿಯ ವಿನಿಮಯ ಮಾಡಿಕೊಳ್ಳುವ ಪ್ರಕ್ರಿಯೆ-ಸಂವಹನ, ಎಂಬುದನ್ನು ನೀವು ಈಗಾಗಲೇ ಈ ಘಟಕದಲ್ಲಿ ತಿಳಿದಿರಿ. ಒಂದು ಮೂಲದಿಂದ ನಿರ್ದಿಷ್ಟ ಸ್ಥಾನಕ್ಕೆ, ಸಂಕೇತ, ಸಂಜ್ಞೆಗಳ ಮೂಲಕ ಮಾಹಿತಿಯನ್ನು ಕಳುಹಿಸಲಾಗುತ್ತದೆ. ವಿನ್ಯಾಸಗೊಳಿಸುವುದು, ಸಾಂಕೇತಿಕೀಕರಣ, ಪ್ರಸರಣ, ಗ್ರಹಣ ಮತ್ತು ಸಂಗ್ರಹಣಾ ವ್ಯವಸ್ಥೆಗಳು ಮಾಹಿತಿಯನ್ನು ರವಾನೆ ಮಾಡಲು ಅವಶ್ಯವಾಗಿರಬೇಕು. ಪ್ರತಿಕ್ರಿಯೆ ಅವಶ್ಯಕವೇ. ಕರ್ಕಶತೆಗಳೂ ಇರುವುದರಿಂದ, ಸಂದೇಶಗಳು ವಿರೂಪಗೊಳ್ಳಬಹುದು. ಸಂವಹನೆಯ ಕಾರ್ಯಗಳು ಹಲವಾರು ಆದರೆ, ಮುಖ್ಯವಾದ ಮೂಲ ಕಾರ್ಯಗಳೆಂದರೆ; ಮಾಹಿತಿ, ಅರ್ಥೈಸುವಿಕೆ, ಶಿಕ್ಷಣ ಮನವೊಲಿಕೆ ಮತ್ತು ಮನರಂಜನೆ.

**ಚಟುವಟಿಕೆ :**

1. ಈ ಕೆಳಗೆ ಕೊಟ್ಟಿರುವ ಸಂದರ್ಭಗಳಲ್ಲಿ, ಸಂವಹನ ಪ್ರಕ್ರಿಯೆಯ ಐದು ಮೂಲಧಾತುಗಳನ್ನು ಗುರುತಿಸಿ.

   i. ಟೆಲಿವಿಷನ್ ಕಾರ್ಯಕ್ರಮವನ್ನು ವೀಕ್ಷಿಸುವಾಗ.

   ii. ನಿಮ್ಮ ಮಿತ್ರನೊಂದಿಗೆ ವಿಷಯವೊಂದನ್ನು ಚರ್ಚೆ ಮಾಡುವಾಗ.

2. ನಿಮ್ಮ ಆಯ್ಕೆಯ ಯಾವುದಾದರೂ ಒಂದು ವೃತ್ತಪತ್ರಿಕೆಯನ್ನು ತೆಗೆದುಕೊಳ್ಳಿ. ಸಂವಹನದ ಐದು ಕಾರ್ಯಗಳನ್ನು ಗುರುತಿಸುವಂತಹ ಐದು ವಿಷಯಗಳನ್ನು ಗುರುತಿಸಿ. ಪ್ರತಿಯೊಂದು ವಿಚಾರವೂ ಒಂದೊಂದು ಕಾರ್ಯವನ್ನು ಪ್ರತಿನಿಧಿಸುವಂತಿರಬೇಕು.

## 1.7 ನಿಮ್ಮ ಪ್ರಗತಿ ಪರಿಶೀಲನೆ

**ಸೂಚನೆ: ನಿಮ್ಮ ಉತ್ತರವನ್ನು ಈ ಘಟಕದಲ್ಲಿ ನೀಡಲಾಗಿರುವ ವಿವರಗಳೊಂದಿಗೆ ಹೋಲಿಸಿ.**

1. ಸಂವಹನ ಎಂದರೇನು? ಉದಾಹರಣೆಗಳೊಂದಿಗೆ ವಿವರಿಸಿ.
2. ಸಂವಹನದ ಗುಣಲಕ್ಷಣಗಳು ಮತ್ತು ಮೂಲಧಾತುಗಳ ಬಗ್ಗೆ ಚರ್ಚಿಸಿ.
3. ಸಂವಹನದ ಪ್ರತಿಯೊಂದು ಕಾರ್ಯದ ಬಗ್ಗೆಯೂ ಐದಾರು ವಾಕ್ಯಗಳಲ್ಲಿ ಬರೆಯಿರಿ.

    ಅ. ಮಾಹಿತಿ

    ಆ. ಅರ್ಥೈಸುವಿಕೆ

    ಇ. ಶಿಕ್ಷಣ

    ಈ. ಮನವೊಲಿಕೆ

    ಉ. ಮನರಂಜನೆ

4. ಶಬ್ದಾರ್ಥ ಕರ್ಕಶತೆಯನ್ನು ವಿವರಿಸಿ. ಒಂದು ಉದಾಹರಣೆ ಕೊಡಿ.

## 1.8 ಹೆಚ್ಚಿನ ಓದಿಗಾಗಿ


1. Dennis Mc Quail, Mass Communication Theory : An Introduction, Sage Publications - London, 1986.
2. John Bittner, Mass Communication: An Introduction, Prentice Hall - London, 1980.
3. John Fiske, Introduction to Communication Studies, Methuen - London, 1982.
4. Melvin Defleur, Theories of Mass Communication, New York, 1990.


**ಬರಹ: ತೇಜಸ್ವಿ ನವಿಲೂರ್ ಮತ್ತು ಬಿ. ವಿ. ಸತ್ಯೇಂದ್ರರಾವ್**

## ಟಿಪ್ಪಣಿ

# ಘಟಕ 2 ಸಂವಹನದ ವಿವಿಧ ಹಂತಗಳು

ರಚನೆ


2.0 ಉದ್ದೇಶಗಳು

2.1 ಪ್ರಸ್ತಾವನೆ

2.2. ಸಂವಹನದ ವಿವಿಧ ಹಂತಗಳು

2.2.1 ವ್ಯಕ್ತಿಯ ಅಂತರ್ಯದ ಸಂವಹನ

2.2.2 ವ್ಯಕ್ತಿ-ವ್ಯಕ್ತಿಗಳ ನಡುವಿನ ಸಂಹವನ

2.2.3 ಸಮುದಾಯ (ಗುಂಪು) ಸಂವಹನ

2.2.4 ಸಂಸ್ಥಾ ಸಂವಹನ

2.2.5 ಸಮೂಹ ಸಂವಹನ

2.3 ಶಾಬ್ದಿಕ ಮತ್ತು ಶಾಬ್ದಿಕವಲ್ಲದ ಸಂವಹನ

2.4 ಸಂವಹನದ ಇತರ ನಮೂನೆಗಳು

2.4.1 ಔಪಚಾರಿಕ ವಿಧ್ಯುಕ್ತ ಸಂವಹನ

2.4.2 ಅನೌಪಚಾರಿಕ ಸಂಹವನ

2.4.3 ಲಂಬರೀತಿಯ ಸಂವಹನ

2.5 ಸಾರಾಂಶ

2.6 ನಿಮ್ಮ ಪ್ರಗತಿ ಪರಿಶೀಲನೆ

2.7 ಹೆಚ್ಚಿನ ಓದಿಗಾಗಿ

## 2.0 ಉದ್ದೇಶಗಳು

ಸಂವಹನದ ಪ್ರಾಮುಖ್ಯತೆ, ಗುಣಲಕ್ಷಣಗಳು ಮತ್ತು ಮೂಲಧಾತುಗಳ ಬಗ್ಗೆ ಮೊದಲನೆಯ ಘಟಕದಲ್ಲಿ ಅಧ್ಯಯನ ಮಾಡಿದ್ದೀರಿ. ನಮ್ಮ ದೈನಂದಿನ ಜೀವನದಲ್ಲಿನ ಸಂವಹನದ ಹಂತಗಳ ಬಗ್ಗೆ ನಿಮಗೆ ಪರಿಚಯ ಮಾಡಿಸುವಂತೆ ಈ ಘಟಕವನ್ನು ವಿನ್ಯಾಸಗೊಳಿಸಲಾಗಿದೆ. ಇದನ್ನು ಓದಿದ ನಂತರ ನೀವು:

* ಸಂವಹನದ ವಿವಿಧ ಹಂತಗಳ ಬಗ್ಗೆ ತಿಳಿಯುತ್ತೀರಿ;
* ವಿವಿಧ ಸಮೂಹ ಮಾಧ್ಯಮಗಳು ಮತ್ತು ಅವುಗಳ ಪ್ರಾಮುಖ್ಯತೆಯನ್ನು ಅರಿಯುತ್ತೀರಿ;
* ಒಂದು ಸಂಸ್ಥೆಯಲ್ಲಿ ಇರಬಹುದಾದ ಸಂವಹನದ ವಿವಿಧ ರೀತಿಗಳನ್ನು ಕಂಡುಕೊಳ್ಳಲಿದ್ದೀರಿ, ಮತ್ತು
* ಶಾಬ್ದಿಕವಲ್ಲದ ರೀತಿಯ ಸಂವಹನದ ಪ್ರಾಮುಖ್ಯತೆ, ಅನ್ವಯಿಕೆ ಮತ್ತು ಕಾರ್ಯಗಳನ್ನು ತಿಳಿಯಲಿದ್ದೀರಿ.

## 2.1 ಪ್ರಸ್ತಾವನೆ

ಸಂವಹನವು ಯಾವಾಗಲು ಉದ್ದೇಶಪೂರಿತವಾದ ಒಂದು ನಿರ್ದಿಷ್ಟ ಚಟುವಟಿಕೆ. ಜೀವನದಲ್ಲಿ ಏನನ್ನಾದರೂ ಸಾಧಿಸಲು ಜನರು ಸಂವಹನದ ಕಾರ್ಯದಲ್ಲಿ ತೊಡಗುತ್ತಾರೆ. ನಿಜವೆಂದರೆ, ಮಾನವ ವರ್ತನೆಗಳೆಲ್ಲವನ್ನೂ ಸಂವಹನ ನಿಯಂತ್ರಿಸುತ್ತದೆ ಮತ್ತು ರೂಪಿಸುತ್ತದೆ. ಆದ್ದರಿಂದ ಮಾನವ ಸಂವಹನದ ಪರಿಕಲ್ಪನೆಯನ್ನು ಸ್ಪಷ್ಟವಾಗಿ ಅರ್ಥಮಾಡಿಕೊಳ್ಳುವುದು ಬಹಳ ಮುಖ್ಯ. ಸಂವಹನ ಎಂದರೇನು? ನಮಗೆ ಅದು ಏಕೆ ಮುಖ್ಯ? ನಾವು ತೊಡಗಿಕೊಂಡಿರುವ ಸಂವಹನದ ವಿವಿಧ ಹಂತಗಳು ಯಾವುವು? ಸಂಸ್ಥೆಯೊಂದರಲ್ಲಿ ಸಂವಹನವು ಹೇಗೆ ನಡೆಯುತ್ತದೆ. ಈ ಪ್ರಶ್ನೆಗಳಿಗೆ ಇಲ್ಲಿ ಉತ್ತರಿಸಲಾಗಿದೆ. ಎಲ್ಲಾ ಸಂವಹನವನ್ನೂ ವ್ಯಕ್ತಿಗಳ ನಡುವಣ (Interpersonal) ಹಾಗೂ ಸಮೂಹ ಮಾಧ್ಯಮ ಎಂಬ ಎರಡು ವಿಭಾಗಗಳಾಗಿ ವಿಂಗಡಿಸಬಹುದು. ವ್ಯಕ್ತಿಗಳ ಮೇಲೆ ಸಂವಹನ ಪ್ರಭಾವವನ್ನು ವಿಶ್ಲೇಷಿಸಲು ಇದು ಸಹಾಯ ಮಾಡುತ್ತದೆ.

## 2.2 ಸಂವಹನದ ಹಂತಗಳು

### 2.2.1 ವ್ಯಕ್ತಿಯ ಆಂತರ್ಯದ ಸಂವಹನ (Intra-personal communication)

ವ್ಯಕ್ತಿಯ ಹಂತದಲ್ಲಿ ನಡೆಯುವ ಆಲೋಚನೆಯ ಪ್ರಕ್ರಿಯೆ ಇದು. ಈ ಪ್ರಕ್ರಿಯೆಯು ವ್ಯಕ್ತಿಯ ಮನಸ್ಸಿನೊಳಗೇ ನಡೆಯುತ್ತದೆಯೆ ಹೊರತು ಇಬ್ಬರು ಭಿನ್ನ ವ್ಯಕ್ತಿಗಳ ನಡುವೆ ಅಲ್ಲ. ನಮ್ಮ ಇಂದ್ರಿಯಗಳ ಮೂಲಕವೋ ಇಲ್ಲವೇ ಆಲೋಚನೆಗಳಿಂದಲೋ ನಾವು ಪ್ರಚೋದನೆಗಳನ್ನು ಪಡೆಯುತ್ತೇವೆ ಮತ್ತು ಈ ಸಂಕೇತಗಳು, ಜೀವ-ವಿದ್ಯುತ್ ಮಿಡಿತಗಳ ರೂಪದಲ್ಲಿ ನರಮಂಡಲದ ಮೂಲಕ ಮಿದುಳಿಗೆ ಕಳುಹಿಸಲ್ಪಡುತ್ತವೆ. ನಾವು ಮೌಲ್ಯಮಾಪನ ಮಾಡುವಾಗ, ಹಗಲುಗನಸು ಕಟ್ಟುವಾಗ, ವಿಶ್ಲೇಷಣೆ ಮಾಡುವಾಗ, ಸ್ವಗತವಾಗಿ ಮಾತನಾಡಿಕೊಳ್ಳುವಾಗ ನಾವು ಒಟ್ಟಿಗೇ ಸಂದೇಶಗಳ ಸಂವಾಹಕರೂ, ಸಂವಹಿತರೂ ಆಗುತ್ತೇವೆ. ಉದಾಹರಣೆಗೆ, ಪುಸ್ತಕವನ್ನು ಓದುವುದು, ಒಬ್ಬಂಟಿಯಾಗಿ ಯೋಚಿಸುವುದು, ಒಂಟಿಯಾಗಿ ಚಲನಚಿತ್ರವನ್ನು ನೋಡುವುದು ಅಥವಾ ಕನಸು ಕಾಣುವುದು ಇವೆಲ್ಲವೂ ವ್ಯಕ್ತಿಯ ಆಂತರ್ಯದ ಸಂವಹನ ರೂಪಗಳು.

## 2.2.1 ವ್ಯಕ್ತಿ - ವ್ಯಕ್ತಿಗಳ ನಡುವಿನ ಸಂವಹನ (Interpersonal communication)

ಈ ವಿವಿಧ ಸಂವಹನ ನಡೆಯುವುದು ಇಬ್ಬರು ವ್ಯಕ್ತಿಗಳ ನಡುವೆ. ಪರಸ್ಪರವಾಗಿ ಒಬ್ಬ ವ್ಯಕ್ತಿಯ ಮತ್ತೊಬ್ಬ ವ್ಯಕ್ತಿಯ ಜ್ಞಾನೇಂದ್ರಿಯಗಳನ್ನು (ದೃಷ್ಟಿ, ಶಬ್ದ, ಸ್ಪರ್ಶ, ಗಂಧ ಮತ್ತು ರುಚಿ) ಉದ್ದೇಶಿಸಿ ಸಂದೇಶವನ್ನು ಕಳುಹಿಸಿದಾಗ ಈ ರೀತಿಯ ಸಂವಹನ ನಡೆಯುತ್ತದೆ. ನೀವು ಮುಗುಳುನಗೆ ಚೆಲ್ಲಿದಾಗ ಅದು ನಿಮ್ಮ ಸ್ನೇಹಪರತೆಯ ಇಚ್ಛೆಯನ್ನು ವ್ಯಕ್ತಪಡಿಸುತ್ತದೆ. ನಾವು 'ನಮಸ್ಕಾರ' ಎಂದು ಹೇಳುವ ದನಿಯೇ ಸಿಡುಕತನದಿಂದ ಹಿಡಿದು ಬೆಚ್ಚಗಿನ ಸಂತೋಷದವರೆಗಿನ ಮನೋಭಾವಗಳೆಲ್ಲವನ್ನೂ ತಿಳಿಸಿಬಿಡುತ್ತದೆ.

ಇಂತಹ ಸಂದರ್ಭದಲ್ಲಿ ಪ್ರತ್ಯುತ್ತರ ಅಥವಾ ಪ್ರತಿಕ್ರಿಯೆಯು ನಿಮಗೆ ತಕ್ಷಣದಲ್ಲಿಯೇ ಸಿಕ್ಕಿ ಬಿಡುವುದರಿಂದ ಇದು ಒಂದು ಪರಿಣಾಮಕಾರಿಯಾದ ಸಂವಹನ. ವ್ಯಕ್ತಿಯಿಂದ ವ್ಯಕ್ತಿಗೆ ನಡೆಯುವ ಸಂವಹನದಲ್ಲಿ ಸಂದೇಶವು ಐದು ಭಿನ್ನವಾದ ರೀತಿಗಳಲ್ಲಿ ರವಾನಿಸಲ್ಪಡುತ್ತದೆ.

1. **ಭಾವಾಭಿನಯ :** ಮುಗುಳ್ನಗೆ, ಕೈಬೀಸುವುದು, ತಲೆ ಆಡಿಸುವುದೇ ಮುಂತಾದ ಹಲವಾರು ರೀತಿಯ ದೈಹಿಕ ಚಲನೆಗಳ ಮೂಲಕ ಮತ್ತು ಮುಖಚರ್ಯೆಗಳಿಂದ.

2. **ಚಿತ್ತ ಸ್ಪರ್ಶ:** ಪ್ರೀತಿ, ದ್ವೇಷ ಮತ್ತು ರಕ್ಷಣೆ ಮುಂತಾದ ವಿವಿಧ ರೀತಿಗಳಿಂದ ಸಂವಾಹಕನು ಮತ್ತೊಬ್ಬ ವ್ಯಕ್ತಿಗೆ ತಿಳಿಸಬಹುದು.

3. **ಮಾತುಗಾರಿಕೆ:** ಧ್ವನಿಯನ್ನು ಮಾಧ್ಯಮವಾಗಿ ಬಳಸಿಕೊಂಡು, ಮಾತನಾಡುವ ಭಾಷೆಯ ಮುಖಾಂತರ ಸಂದೇಶ ಕಳುಹಿಸಬಹುದು.

4. **ಬರವಣಿಗೆ ಪದಗಳು,** ಸಂಖ್ಯೆಗಳು ಅಥವಾ ಇತರ ಅರ್ಥಪೂರ್ಣವಾದ ರೀತಿಗಳಿಂದ ನೀವು ನಿಮ್ಮ ಸಂದೇಶ ಅಥವಾ ಆಲೋಚನೆಗಳನ್ನು ರವಾನಿಸಬಹುದು.

5. **ಚಿತ್ರ ಬರಹ:** ಗೆರೆಗಳನ್ನು, ನಮೂನೆಗಳನ್ನು, ಆಕಾರಗಳನ್ನು ಬಳಸಿಕೊಂಡು ಸಂವಾಹಕನು ಸಂವಹಿತನಿಗೆ ಪರಿಚಿತವಾದ ಚಿಹ್ನೆಗಳು ಸಂದೇಶವನ್ನು ಚಿತ್ರಗಳ ಮೂಲಕ ರಚಿಸುತ್ತಾನೆ.

## 2.2.3 ಸಮುದಾಯ ಅಥವಾ ಗುಂಪು ಸಂವಹನ (Group communication)

ಹೊಸ ಯೋಚನೆಗಳನ್ನೂ, ಆಲೋಚನೆಗಳನ್ನೂ, ಮಾಹಿತಿಗಳನ್ನೂ ಮತ್ತು ಆಸಕ್ತಿಗಳನ್ನು ವಿನಿಮಯ ಮಾಡಿಕೊಳ್ಳಲು ಸಮುದಾಯ ಸಂವಹನದಲ್ಲಿ ಇಬ್ಬರಿಗಿಂತ ಹೆಚ್ಚು ವ್ಯಕ್ತಿಗಳು ಭಾಗವಹಿಸಿರುತ್ತಾರೆ. ಕುಟುಂಬ, ಶಾಲೆಗಳು, ಕಾರ್ಯಸಂಸ್ಥೆಗಳು ಮತ್ತು ಸಮುದಾಯದ ಕಾರ್ಯಗಳಲ್ಲಿ ಸಣ್ಣ ಗುಂಪುಗಳು ಕಂಡುಬರುತ್ತವೆ. ಜನರು ಒಟ್ಟಾಗಿ ಕೂಡುವುದಕ್ಕೆ, ಚರ್ಚೆ ಮಾಡುವುದಕ್ಕೆ ಮತ್ತು ಸಾಮಾನ್ಯ ಆಸಕ್ತಿಯ ವಿಷಯಗಳ ಬಗ್ಗೆ ಅಭಿಪ್ರಾಯ ವಿನಿಮಯ ಮಾಡಿಕೊಳ್ಳಲು ಗುಂಪುಗಳು ಅವಕಾಶವನ್ನು ನೀಡುತ್ತವೆ. ಗುಂಪು ದೊಡ್ಡದಿದ್ದರೆ, ವೈಯಕ್ತಿಕ ಹಾಗೂ ನೇರವಾದ ವಿನಿಮಯವು ಕಡಿಮೆಯಾಗುತ್ತದೆ. ಪ್ರತಿಕ್ರಿಯೆ -ಇಲ್ಲಿ ಪ್ರಮುಖವಾದ ಪದ. ಗುಂಪಿನ ಸಂವಹನದಲ್ಲಿ ಪ್ರತಿಕ್ರಿಯೆಯನ್ನು ಮಾಪನ ಮಾಡುವುದೂ ಮತ್ತು ಅದಕ್ಕೆ ಪ್ರತಿಸ್ಪಂದಿಸುವುದೂ ಕಷ್ಟ. ಅರ್ಥಗಳು ಸ್ಪಷ್ಟವಾಗಲೂ ಮತ್ತು ಪ್ರತಿಕ್ರಿಯೆಗಳ ಮೌಲ್ಯವನ್ನು ಅಂದಾಜು ಮಾಡಲೂ ಸಮಯಬೇಕು. ಮುಖಾಮುಖಿಯ ಸಂವಹನವು ಮನವೊಲಿಕೆಗೆ ಹೆಚ್ಚು ಒತ್ತು ನೀಡುವಂತಹುದು ಮತ್ತು ಬಹಳ ಪ್ರಭಾವಶಾಲಿ.

ಸಮುದಾಯ ಸಂವಹನದಲ್ಲಿ, ಅದರಲ್ಲೂ ವಿಶೇಷವಾಗಿ ಗುಂಪು ದೊಡ್ಡದಿದ್ದರೆ, ವಂಚನೆ ಮತ್ತು ಮೋಸಗಾರಿಕೆಗಳನ್ನು ತಕ್ಷಣವೇ ಕಂಡುಹಿಡಿಯುವುದು ಕಷ್ಟ. ನಟನೆಯು ಸಮುದಾಯ ಸಂವಹನದೊಂದಿಗೆ ಸಂಯೋಜಿತವಾಗಿರುವುದು ಆಶ್ಚರ್ಯವೇನಲ್ಲ. ಗುಂಪು ಗಾತ್ರದಲ್ಲಿ ದೊಡ್ಡದಾದರೆ, ಸಂವಹನವು ಏಕವ್ಯಕ್ತಿ ಭಾಷಣಕ್ಕೆ ಹತ್ತಿರವಾಗುತ್ತದೆ. ಸಹಭಾಗಿತ್ವ ಸಂವಹನ ಕಷ್ಟವಾಗುತ್ತದೆ. ಸಂವಹನವು ನೇರವಾಗಿ ಮುಟ್ಟುವ ಮತ್ತು ಅಪ್ಪವಾಗುವ ಮಟ್ಟವು ಗುಂಪಿನ ಗಾತ್ರವನ್ನೂ, ಗುಂಪಿನ ಗಾತ್ರವನ್ನೂ, ಗುಂಪು ಸೇರುವ ಸ್ಥಳವನ್ನೂ ಮತ್ತು ಗುಂಪಿನ ಸದಸ್ಯರ ನಡುವಣ ಸಂಬಂಧವನ್ನೂ ಆಧರಿಸಿದೆ.

## 2.2.4 ಸಂಸ್ಥಾ ಸಂವಹನ (Corporate communication)

ಆಡಳಿತ ಮಂಡಳಿ, ವಿಭಾಗ ಮುಖ್ಯಸ್ಥರು, ನಿರ್ವಾಹಕರು, ಮೇಲ್ವಿಚಾರಕರು ಮತ್ತು ಕೆಲಸಗಾರರು ಇವರೆಲ್ಲರನ್ನೂ ಒಂದು ಸಂಸ್ಥೆಯು ಒಳಗೊಂಡಿರುತ್ತದೆ. ಇವರೆಲ್ಲರೂ ಒಟ್ಟಾಗಿ ಕೆಲಸ ಮಾಡಬೇಕು. ಒಟ್ಟಿಗೆ ಬೆಳೆಯಬೇಕು ಮತ್ತು ಸಂಸ್ಥೆಯ ಬೆಳವಣಿಗೆಗೆ ಒಟ್ಟಾಗಿ ಪರಿಶ್ರಮ ಪಡಬೇಕು. ಬಂಡವಾಳ ಹೂಡಿಕೆದಾರರು, ಸರಬರಾಜು ಮಾಡುವವರು, ಹಂಚಿಕೆದಾರರು, ಸ್ಥಳೀಯ ಸಮುದಾಯ, ಸರ್ಕಾರ, ಮಾಧ್ಯಮಗಳು ಮತ್ತು ಇತರ ಮೂಲಗಳೆಲ್ಲದರಿಂದ ಸಂಸ್ಥೆಯು ಪರಿಣಾಮಕಾರಿಯಾದ ಬೆಂಬಲವನ್ನು ಪಡೆಯಬೇಕಾಗುತ್ತದೆ. ಆದ್ದರಿಂದ, ಸಂಸ್ಥೆ ಮತ್ತು ಸಮಾಜದ ಉಳಿದ ಭಾಗಗಳ ನಡುವೆ ಪರಸ್ಪರ ಸಂವಹನದ ಹರಿವು ಅತ್ಯವಶ್ಯ. ಸಮಾಜದ ಮುಖ್ಯವಾಹಿನಿಗೂ ಮತ್ತು ಸಂಸ್ಥೆಗೂ ನಡುವೆ ಪರಸ್ಪರ ತಿಳುವಳಿಕೆ ಮತ್ತು ಸಹಕಾರವಿರಬೇಕು. ಆದ್ದರಿಂದ ಸಂಸ್ಥಾ ಸಂವಹನವು ಸಂಸ್ಥೆಯ ಅಭಿವೃದ್ಧಿಗೆ ಅತ್ಯವಶ್ಯವಾದ ಸಾಧನವಾಗುತ್ತದೆ.

## 2.2.5 ಸಮೂಹ ಸಂವಹನ (Mass communication)

ರೇಡಿಯೋ, ಟೆಲಿವಿಷನ್ ಚಲನಚಿತ್ರಗಳು ಮತ್ತು ಪತ್ರಿಕೆಗಳು ಹಾಗೂ ಸಾಂಪ್ರದಾಯಿಕ ಮಾಧ್ಯಮಗಳು, ಇವೆಲ್ಲವನ್ನೂ ಸಮೂಹ ಸಂವಹನ ಒಳಗೊಳ್ಳುತ್ತದೆ. ರೇಡಿಯೋ ಮತ್ತು ಟೆಲಿವಿಷನ್ ಅತ್ಯಾಧುನಿಕವಾದವು. ವೇಗ ಹಾಗೂ ಕಣ್ಣಿಗೆ ಕಟ್ಟುವಂತೆ ವಿಷಯವರ್ಣನೆ ಮಾಡುವ ವಿಭಾಗಗಳಲ್ಲಿ ಉಳಿದ ಮಾಧ್ಯಮಗಳು ಇವುಗಳೊಂದಿಗೆ ಸ್ಪರ್ಧಿಸಲಾರವು. ಗ್ರಾಮೀಣ ಪ್ರದೇಶಗಳಲ್ಲಿ ಸಾಂಪ್ರದಾಯಿಕ ಮಾಧ್ಯಮಗಳು ಇಂದಿಗೂ ಪ್ರಭಾವಶಾಲಿಯಾಗಿಯೇ ಇವೆ.

ಸಮೂಹ ಮಾಧ್ಯಮಗಳು ಸಂವಹನದ ಅತ್ಯುತ್ತಮ ವಾಹನಗಳು. ಹಲವಾರು ಅಭಿವೃದ್ಧಿ ವಿಷಯಗಳು ಮತ್ತು ಸರ್ಕಾರದ ಯೋಜನೆಗಳ ಬಗ್ಗೆ ಆಲೋಚನೆಗಳನ್ನೂ ಮತ್ತು ಸಂದೇಶಗಳನ್ನು ವಿಷದವಾಗಿ ಸಾರ್ವಜನಿಕರಿಗೆ ತಲುಪಿಸಲು ಮುದ್ರಣ ಮಾಧ್ಯಮ ಪ್ರಮುಖವಾದ ಮಾರ್ಗ. ಬರವಣಿಗೆಯು ಸಂವಹನಕ್ಕೆ ಶಾಶ್ವತತೆಯನ್ನು ನೀಡುತ್ತದೆ. ದಾಖಲೆಗಳನ್ನು ಉಳಿಸುತ್ತದೆ. ನೇರವಾದ ಸಂಪರ್ಕವಿಲ್ಲದೆ ಸಂದೇಶಗಳನ್ನು ರವಾನಿಸಿದರೂ ಅವರನ್ನು ತಲುಪುವಂತೆ ಮಾಡುತ್ತದೆ. ವೃತ್ತಪತ್ರಿಕೆಗಳು, ನಿಯತಕಾಲಿಕಗಳು, ಪುಸ್ತಕಗಳು ಮತ್ತು ಇತರೆ ಮುದ್ರಣ ಪ್ರಕಾರಗಳು ಅಕ್ಷರಸ್ಥ ಕಾಲಕ್ಕೆ ಬಹಳ ಹಿಂದಿನಿಂದಲೂ ತಮ್ಮ ಸೇವೆ ಸಲ್ಲಿಸಿವೆ. ದಿಢೀರ್ ಆಗಿ, ಬಹಳ ವೇಗದಿಂದ ಸಂವಹನ ನಡೆಸುವ ರೀತಿಯವು ರೇಡಿಯೋ ಮತ್ತು ಟೆಲಿವಿಷನ್. ರೇಡಿಯೋ, ಟೆಲಿವಿಷನ್, ಕೇಬಲ್ ಟಿವಿ ಮತ್ತು ಸಿನಿಮಾಗಳನ್ನೂ ಹೊಂದಿರುವ ವಿದ್ಯುನ್ಮಾನ ಮಾಧ್ಯಮವು ಮುಖ್ಯವಾಗಿ ಮನರಂಜನಾಭಿಮುಖಿಯಾದ ವಾಹಿನಿ. ರೇಡಿಯೋ ಕೇವಲ ಒಂದು ಶ್ರವ್ಯ ಮಾಧ್ಯಮವಾಗಿದ್ದರೂ ವಾರ್ತೆಗಳು, ಹಾಡುಗಳು, ಸಂಗೀತ ಮತ್ತು ಹಾಸ್ಯ ಕಾರ್ಯಕ್ರಮಗಳನ್ನು ಪ್ರಸಾರ ಮಾಡುವುದಷ್ಟೇ ಅಲ್ಲದೆ ಮಹಿಳೆಯರು, ಯುವಕರು ಮತ್ತು ಮಕ್ಕಳ ಬಗ್ಗೆಯೂ ವಿಶೇಷ ಕಾರ್ಯಕ್ರಮಗಳನ್ನು ರೂಪಿಸುತ್ತಾ ದಿನವಹಿ ಹಲವಾರು ಘಂಟೆಗಳ ಕಾಲ ತನ್ನ ಸೇವೆ ಸಲ್ಲಿಸುತ್ತದೆ.

ಇತರ ಮಾಧ್ಯಮಗಳಿಗಿಂತ ಭಿನ್ನವಾಗಿ, ಟೆಲಿವಿಷನ್ ಇಂದು ಅತ್ಯಂತ ಶಕ್ತಿಶಾಲಿಯಾದ ಸಮೂಹ ಮಾಧ್ಯಮಗಳಲ್ಲಿ ಒಂದಾಗಿ ಬೆಳೆದಿದೆ. ಕ್ರೀಡೆಗಳ ನೇರಪ್ರಸಾರವನ್ನು ಮತ್ತು ಕೆಲವು ಮುಖ್ಯ ಕಾರ್ಯಕ್ರಮಗಳನ್ನೂ ವಿಶೇಷವಾದ ದಿನಗಳಲ್ಲಿ ಮಿಲಿಯನ್‌ಗಟ್ಟಲೆ ಜನ ವೀಕ್ಷಿಸುತ್ತಾರೆ. ಸಂಪರ್ಕದ ಉದ್ದೇಶಕ್ಕಾಗಿಯೇ ಹಲವಾರು ಉಪಗ್ರಹಗಳನ್ನು ಬಳಸಿಕೊಳ್ಳಲಾಗುತ್ತಿದೆ. ಹಲವಾರು ಕಾರ್ಯಕ್ರಮಗಳು ದಿನವೆಲ್ಲವೂ ಒಂದೇ ಕಾಲದಲ್ಲಿ ಜೊತೆಜೊತೆಗೇ ಬಿತ್ತರವಾಗುವಂತೆ ಮಾಡುವುದನ್ನು ಈ ತಂತ್ರಜ್ಞಾನದ ನಾವೀನ್ಯತೆಯು ಸಾಧಿಸಿದೆ. ಜನರನ್ನು ಆಕರ್ಷಿಸುವ ಮತ್ತು ಸಮಾಜದ ಮೇಲೆ ಪ್ರಭಾವ ಬೀರುವ, ಅತ್ಯುತ್ತಮವಾದ ಮನರಂಜನಾ ಮಾಧ್ಯಮಗಳೆಂದು ಚಲನಚಿತ್ರಗಳನ್ನು ಗುರುತಿಸಲಾಗಿದೆ. ಪ್ರಪಂಚದಲ್ಲಿಯೇ ಅತಿ ಹೆಚ್ಚು ಕಥಾ(ಚಲನ)ಚಿತ್ರಗಳನ್ನು ನಿರ್ಮಾಣ ಮಾಡುವ ದೇಶ ಭಾರತ.

## 2.2 ಶಾಬ್ದಿಕ ಮತ್ತು ಶಾಬ್ದಿಕವಲ್ಲದ ಸಂವಹನ (Verbal and non verbal communication)

ಶಾಬ್ದಿಕ ಸಂವಹನಕ್ಕೆ ನಮ್ಮ ಸಮಾಜದಲ್ಲಿ ಮಹತ್ತರವಾದ ಕಾರ್ಯ ವಿಶೇಷತೆ ಇದೆ. ಭಾಷೆಯು ಮೂಲಭೂತವಾಗಿ ಸಂಕೇತಗಳ ಮತ್ತು ಅರ್ಥಗಳ ಒಂದು ವ್ಯವಸ್ಥೆ, ಭಾಷೆಯನ್ನು ಪರಾಮರ್ಶನ, ಭಾವಾತ್ಮಕ ಮತ್ತು ವರ್ತನಾಕಾರ್ಯಗಳಿಗಾಗಿ ಬಳಸಬಹುದು. ಉನ್ನತಮಟ್ಟದ ಆಲೋಚನಾ ಪ್ರಕ್ರಿಯೆಗೆ, ಪರಿಕಲ್ಪನೆಗಳನ್ನು ಮತ್ತು ಹೊಸ ಹೊಳಹುಗಳನ್ನೂ ನಿಷ್ಕೃಷ್ಟವಾಗಿ ಸಂಕೇತಗಳ ಮೂಲಕ ವಿವರಿಸುವುದು ಅತಿ ಅವಶ್ಯಕ. ಇದು ಪ್ರಭಾವೀ ಸಂವಹನದ ಮೂಲಭೂತ ಲಕ್ಷಣ. ಶಾಬ್ದಿಕ ಸಂವಹನವು ಕೆಲವೊಮ್ಮೆ ಅನೀತಿಯ ಕಾರಣಗಳಿಗೂ ಬಳಕೆಯಾಗುವ ಸಂಭವ ಉಂಟು. ಏಕೆಂದರೆ ಜಾಗರೂಕತೆಯಿಂದ ನಡೆಯುವ ಆಲೋಚನೆಯ ಉತ್ಪನ್ನ ಇದು. ಶ್ರೋತೃಗಳನ್ನು ಗಲಿಬಿಲಿಗೊಳಿಸುವ, ದಿಕ್ಕು ತಪ್ಪಿಸುವ ಮತ್ತು ಮೋಸ ಮಾಡುವ ಶಾಬ್ದಿಕ ಸಂದೇಶಗಳಿಗೂ ಇದು ಕಾರಣವಾಗಬಹುದು.

ಪ್ರತಿಯೊಂದು ಸಂವಹನ ಕ್ರಿಯೆಯೂ ಶಾಬ್ದಿಕವಲ್ಲದ ಅಂಶಗಳನ್ನೂ ತನ್ನೊಂದಿಗೆ ಒಯ್ಯುತ್ತದೆ. ಮುಖಾಮುಖಿಯ ರೀತಿಯ ಸಂಭಾಷಣೆಗಳಲ್ಲಿ, ಟೆಲಿವಿಷನೀಕರಿಸಿದ ಅಥವಾ ವಿಡಿಯೋ ಚಿತ್ರೀಕರಣಗೊಂಡ ಪ್ರದರ್ಶನಗಳಲ್ಲಿ ಶಾಬ್ದಿಕವಲ್ಲದ ಎಲ್ಲಾ ಕ್ರಿಯೆಗಳೂ ಪ್ರಕಟಗೊಳ್ಳುತ್ತವೆ. ದೇಹಾಭಿನಯಗಳಾದ ಹಾವಭಾವಗಳು, ಮುಖಚರ್ಯೆಗಳು, ನಿಲುವಿನ ಭಂಗಿಗಳು ಮತ್ತು ಕಣ್ಣಿನ ಸಂಪರ್ಕಗಳು, ಧ್ವನಿಯ ಚರ್ಯೆಗಳಾದ ಶ್ರುತಿ, ದನಿಯ ಏರಿಕೆ, ಮಾತಿನ ವೇಗ, ಸಾಮೀಪ್ಯ ಮತ್ತು ಸ್ಪರ್ಶದ ಸಾಧ್ಯತೆಗಳು; ಭೌತಿಕ ಚಹರೆಗಳಾದ ಆಕರ್ಷಣೀಯತೆ, ದಿರಿಸು ಮತ್ತು ಮೈಮಾಟಕಾರಿಕೆಗಳು; ಕಾಲ ಸಂದೇಶಗಳಾದ ಕಾಲತೀವ್ರತೆ, ಗಮನದ ಕೇಂದ್ರೀಕರಣ, ಸುತ್ತಮುತ್ತಲಿನ ಅಲಂಕಾರಿಕಗಳು (ಉದಾಹರಣೆ: ಪೀಠೋಪಕರಣಗಳು) ಮತ್ತು ಇತರ ವಸ್ತುಗಳೆಲ್ಲವೂ ಒಟ್ಟಾರೆಯಾಗಿ ಸಂವಹನದ ರಂಗವನ್ನು ಸೃಷ್ಟಿಸುವಲ್ಲಿ ತಮ್ಮ ಪಾತ್ರವನ್ನು ನಿಭಾಯಿಸುತ್ತವೆ.

ಟೆಲಿಫೋನ್ ಸಂಭಾಷಣೆಗಳಲ್ಲಿ ಮತ್ತು ಧ್ವನಿಮುದ್ರಿತ ಸುರುಳಿಗಳ ಪ್ರದರ್ಶನಗಳಲ್ಲಿ ಶಾಬ್ದಿಕವಲ್ಲದ ಕೆಲವೇ ಕೆಲವು ಅಂಗಗಳು ಇರುತ್ತವೆ. ಆದರೂ ಧ್ವನಿ ಸಂಬಂಧಿತವಾದ ಮತ್ತು ಕಾಲವನ್ನು ಆಧರಿಸಿದ ಸಂಗತಿಗಳು ಇನ್ನೂ ಇರುತ್ತವೆ. ಉದಾಹರಣೆಗೆ, ವ್ಯಕ್ತಿಯೊಡನೆ ನೇರವಾಗಿ ಮುಖತಃ ಮಾತನಾಡದೆ, ಟೆಲಿಫೋನ್‌ನ ಮೂಲಕ ಮಾತನಾಡುವ ನಿರ್ಣಯವೇ, ಹೆಚ್ಚಾಗಿ ಭಾಗಿಯಾಗದಂತಹ ಮಾತುಕತೆಯ ಆಶಯವನ್ನು ಶಬ್ದಾತ್ಮಕವಲ್ಲದ ರೀತಿಯಲ್ಲಿ ಸೂಚಿಸುತ್ತದೆ. ಸಂಚಾರಿ ಪೋಲೀಸರ ಸೂಚನೆಗಳು ಯಾವಾಗಲೂ ಶಾಬ್ದಿಕವಲ್ಲದವು. ಪತ್ರಗಳಂತಹ ಲಿಖಿತ ರೂಪದ ಸಂವಹನವೂ ಶಾಬ್ದಿಕವಲ್ಲದ ಲಕ್ಷಣಗಳನ್ನು ಅವಶ್ಯವೆನಿಸುವಂತೆ ಮಾಡುತ್ತವೆ.

ಸಂಜ್ಞೆಗಳನ್ನು ಪ್ರದರ್ಶನ ಮಾಡುವಲ್ಲಿ ಮಾನವ ದೇಹವೇ ಅತಿ ಪ್ರಮುಖವಾದ ಪ್ರೇಷಕ (Communicator). ಆರ್ಗೈಲ್ (1972) ಅರ್ಥಗಳನ್ನು ಪರಿಣಾಮಕಾರಿಯಾಗಿ ರವಾನೆ ಮಾಡುವಲ್ಲಿ ಪಾತ್ರವಹಿಸುವ ಕೆಳಗಿನ ವಿಷಯಗಳನ್ನು ಪಟ್ಟಿ ಮಾಡಿದ್ದಾರೆ.

**ದೇಹಸ್ಪರ್ಶ:**

ನೀವು ಒಬ್ಬ ವ್ಯಕ್ತಿಯನ್ನು ಸ್ಪರ್ಶಿಸಿದಾಗ ಅದು ನಿಮ್ಮನ್ನು ಕುರಿತಾದ ಅನೇಕ ಪ್ರಮುಖ ಸಂದೇಶಗಳನ್ನು ರವಾನಿಸಬಹುದು. ಕೈಕುಲುಕಿದಾಗ ಸ್ನೇಹಪೂರ್ಣ ಅನಿಸಿಕೆಗಳು ರವಾನೆಗೊಂಡರೆ, ಬೆನ್ನು ತಟ್ಟಿದಾಗ ಅಭಿಮಾನ ಮೆಚ್ಚುಗೆಗಳು ಪ್ರಕಟವಾಗುತ್ತದೆ. ಗಲ್ಲ ತಟ್ಟಿದಾಗ ಪ್ರೀತಿ ವ್ಯಕ್ತವಾದರೆ ಅನಗತ್ಯ ದೇಹಸ್ಪರ್ಶ ಕಾಮನೆಗಳನ್ನು ಬಿಂಬಿಸಬಹುದು.

**ಸಾಮೀಪ್ಯತೆ:**

ನೀವು ಯಾರೊಬ್ಬರ ಅತಿ ಸನಿಹಕ್ಕೆ ಹೋದರೆ, ನಿಮ್ಮ ಸಂಬಂಧಗಳ ಬಗ್ಗೆ ಅದು ಸಂದೇಶಗಳನ್ನು ನೀಡಬಹುದು. ವ್ಯಕ್ತಿಗಳು ಪರಸ್ಪರ ವಿಚಾರ ವಿನಿಮಯ ಮಾಡುವಾಗ ತಮ್ಮ ನಡುವೆ ಇಟ್ಟುಕೊಳ್ಳುವ 'ಸಾಮಾಜಿಕ ದೂರ'ವನ್ನು ಸಾಮಾನ್ಯವಾಗಿ ಇದು ಸೂಚಿಸುತ್ತದೆ. ವ್ಯಕ್ತಿಯೊಬ್ಬ ಅಪರಿಚಿತನೊಬ್ಬನೊಂದಿಗೆ ಮಾತನಾಡುವಾಗ ಇಟ್ಟುಕೊಳ್ಳುವ ಭೌತಿಕ ಅಂತರ ಪರಿಚಿತನೊಬ್ಬನೊಂದಿಗೆ ವ್ಯವಹರಿಸುವಾಗ ಕಡಿಮೆಯಾಗುತ್ತದೆ. ಅದೇ ವ್ಯಕ್ತಿ ಸಹೋದ್ಯೋಗಿಯೊಬ್ಬಳೊಂದಿಗೆ ಸಂಭಾಷಿಸುವಾಗ ಇರುವ ಅಂತರ ತನ್ನ ಪತ್ನಿಯೊಂದಿಗಿರುವಾಗ ಕುಗ್ಗುತ್ತದೆ.

**ಬಾಹ್ಯ ಚಹರೆ :**

ವ್ಯಕ್ತಿಯ ಬಾಹ್ಯ ಚಹರೆಯು ಆತನ ವ್ಯಕ್ತಿತ್ವ, ಸಾಮಾಜಿಕ ಸ್ಥಾನಮಾನ ಮತ್ತು ಬಹುಮುಖ್ಯವಾಗಿ ಅನುವರ್ತನೆ, ಹೊಂದಿಕೆಗಳ ಬಗ್ಗೆ ಸೂಚನೆ ನೀಡುತ್ತದೆ. ಉದಾಹರಣೆಗೆ, ರಾಜಕಾರಣಿಯ ಖಾದಿ ದಿರಿಸು, ಸನ್ಯಾಸಿಯೊಬ್ಬನ ಖಾವಿ, ಅಧಿಕಾರಿಯೊಬ್ಬನ ಔಪಚಾರಿಕ ಉಡುಗೆ, ಕಾರ್ಖಾನೆಯೊಂದರ ನೌಕರನ ಸಮವಸ್ತ್ರ ಇತ್ಯಾದಿಗಳು ಅವರವರ ಹಿನ್ನೆಲೆ, ಕಾರ್ಯಚಟುವಟಿಕೆಗಳು ಹಾಗು ಪ್ರತಿಷ್ಠೆಯನ್ನು ಬಿಂಬಿಸುತ್ತವೆ.

**ತಲೆ ಅಲ್ಲಾಡಿಸುವುದು:**

ಮುಖ್ಯವಾಗಿ ಇದು ಸಂವಹನ ಪರಿಪಾಟಿನ ನಿರ್ವಹಣೆಯಲ್ಲಿ, ಅದರಲ್ಲೂ ವಿಶೇಷವಾಗಿ ಸರದಿಯಲ್ಲಿ ಒಬ್ಬರ / ನಂತರ ಒಬ್ಬರು ಮಾತನಾಡುವ ಸಂದರ್ಭದಲ್ಲಿ ಬರುತ್ತದೆ. ತಲೆ ಅಲ್ಲಾಡಿಸುವಿಕೆಯು ಮತ್ತೊಬ್ಬರಿಗೆ ಮಾತನಾಡುವ ಆದೇಶ / ಸೂಚನೆ ನೀಡಿದಂತೆ ಆಗಬಹುದು. ತಲೆಯಾಡಿಸುವ ದಿಕ್ಕಿನ ಅನುಸಾರವಾಗಿ ಪ್ರತಿಕ್ರಿಯೆ ನಕಾರಾತ್ಮಕ ಇಲ್ಲವೇ ಸಕಾರಾತ್ಮಕ ಎಂಬುದು ತಿಳಿಯುತ್ತದೆ.

**ಮುಖಭಾವ :**

ಹುಬ್ಬಿನ ಸ್ಥಾನ, ಕಣ್ಣಿನ ಆಕಾರ, ಬಾಯಿಯ ಆಕಾರ, ಮೂಗಿನ ಹೊಳ್ಳೆಯ ಗಾತ್ರ ಇತ್ಯಾದಿಯಾದ ಉಪಸಂಕೇತಗಳಾಗಿ ಇದನ್ನು ಒಡೆಯಬಹುದು. ಉದಾಹರಣೆಗೆ, ಕೋಣೆಯಲ್ಲಿ ಸುಂದರವಾಗಿ ಜೋಡಿಸಿಟ್ಟಿರುವ ಹೂದಾನಿಯನ್ನು ಮಕ್ಕಳು ಒಡೆದು ಹಾಕಿದಾಗ ಮನೆಯೊಡತಿಯ ಮುಖದಲ್ಲಾಗುವ ಬದಲಾವಣೆಗಳು.

ಆಂಗಿಕಗಳು :

ಕೈ ಮತ್ತು ತೋಳುಗಳು ಆಂಗಿಕದ ಪ್ರಮುಖ ಪ್ರಸಾರಕಗಳು, ಹಾಗೆಯೇ, ಮುಖ ಮತ್ತು ತಲೆಗಳು ಹೊಮ್ಮಿಸುವ ಭಾವಗಳೂ ಸಹ ಮುಖ್ಯವಾದವುಗಳೇ. ಇವು ಆಡುಭಾಷೆಯೊಂದಿಗೆ ಬರಬಹುದು ಮತ್ತು ಶಾಬ್ದಿಕ ಸಂವಹನಕ್ಕೆ ಪೂರಕವಾಗಿ ಬರಬಹುದು. ಸಾಮಾನ್ಯವಾದ ಮನೋಭಾವನೆಗಳು ಜಾಗೃತವಾಗಿರುವುದನ್ನೋ ಅಥವಾ ನಿರ್ದಿಷ್ಟವಾದ ಮಾನಸಿಕ ಅವಸ್ಥೆಯನ್ನೋ ಅವುಗಳು ಸೂಚಿಸಬಹುದು.

ಭಂಗಿ :

ನಾವು ಕುಳಿತುಕೊಳ್ಳುವ, ನಿಲ್ಲುವ ಮತ್ತು ಮಲಗಿಕೊಳ್ಳುವ ಭಂಗಿಗಳು ಕಡಿಮೆ ಪ್ರಮಾಣದಲ್ಲಿ ಆದರೆ, ವಿಶೇಷವಾದ, ವೈವಿಧ್ಯಮಯವಾದ ಅರ್ಥಗಳನ್ನು ನೀಡಬಲ್ಲವು. ಉದಾಹರಣೆಗೆ ನಿಮ್ಮ ಕೀಳರಿಮೆಯ ಮೇಲರಿಮೆ ಭಾವನೆಗಳನ್ನು ವ್ಯಕ್ತಪಡಿಸಲು ನೀವು, ನಿಮ್ಮ ಎದೆಗೆ ಅಪ್ಪಿಕೊಂಡಂತೆ ಭದ್ರವಾಗಿ ಕೈ ಕಟ್ಟಬಹುದು ಅಥವಾ ಕೈಗಳನ್ನು ಜೇಬಿನಲ್ಲಿ ಇಟ್ಟುಕೊಳ್ಳಬಹುದು. ಸಂಭಾಷಿಸುವಾಗ ವ್ಯಕ್ತಿಗಳು ತಮ್ಮ ತಲೆ, ಭುಜಗಳನ್ನು ವಿವಿಧ ಕೋನಗಳಲ್ಲಿ ತಿರುಗಿಸಿಕೊಂಡು ಅಥವಾ ಓರೆ ಮಾಡಿಕೊಂಡು ಸಂವಹನ ನಡೆಸುತ್ತಾರೆ. ತಮ್ಮ ಕೈಗಳನ್ನೂ, ಕಾಲುಗಳನ್ನೂ ವಿವಿಧ ಸ್ಥಾನಗಳಲ್ಲಿ ಇಟ್ಟುಕೊಂಡಿರುತ್ತಾರೆ. ಆ ಮೂಲಕ ತಮ್ಮ ಅಂತರ್ಯದ ಉದ್ವೇಗ ಅಥವಾ ಉದ್ವೇಗ ರಹಿತವಾದ ವಿರಾಮದ ವಿವಿಧ ಸ್ಥಿತಿಗಳ ಸೂಚನೆಯೂ ದೊರೆಯುತ್ತದೆ. ವಿವಿಧ ಭಂಗಿಗಳ ಈ ರೀತಿಯ ವಿವರಗಳು ಸಾಮಾಜಿಕ ಸಂಬಂಧಗಳನ್ನು ತೋರಿಸುತ್ತವೆ.

ಕಣ್ಣಿನ ಚಲನೆ ಮತ್ತು ಕಣ್ಣಿನ ಸಂಪರ್ಕ:

ಕಣ್ಣಿನ ಸಂಪರ್ಕವು ಸಂಬಂಧಗಳನ್ನು ಕುರಿತಂತೆ ಬಹಳ ಮುಖ್ಯವಾದ ಸಂದೇಶಗಳನ್ನು ರವಾನಿಸುವ ಒಂದು ಮಾರ್ಗ. ಅದರಲ್ಲೂ ವಿಶೇಷವಾಗಿ ಸಂಬಂಧವೊಂದರಲ್ಲಿ ನಾವು ಪ್ರಾಬಲ್ಯತೆಯನ್ನು ಬಯಸುತ್ತೇವೆಯೋ ಅಥವಾ ಸಮಸಂಯೋಜನೆಯನ್ನು ಆಶಿಸುತ್ತೇವೆಯೋ ಎಂಬುದರ ಸೂಚನೆಯೂ ಇದರಿಂದ ದೊರೆಯುತ್ತದೆ. ಪ್ರಾರಂಭದಲ್ಲಿ ಅಥವಾ ಹೇಳಿಕೆಯ ಮೊದಲಲ್ಲೇ ಕಣ್ಣಿನ ಸಂಪರ್ಕ ಮಾಡಿದರೆ ಅದು ಕೇಳುಗನ ಮೇಲೆ ಪ್ರಭುತ್ವ ಸಾಧಿಸುವ ವಾಂಛೆಯನ್ನೂ, ಕೇಳುಗನು ಹೇಳಿಕೆಯ ಮೇಲೆ ಗಮನ ನೀಡಬೇಕೆಂಬುದನ್ನು ತೋರಿಸುತ್ತದೆ. ಆದರೆ, ಅಂತ್ಯದಲ್ಲಿ ಅಥವಾ ಹೇಳಿಕೆಯ ನಂತರ ಕಣ್ಣಿನ ಸಂಪರ್ಕವಾದರೆ, ಅದು ಸಮಭಾವವನ್ನೋ ಅಥವಾ ಪ್ರತಿಕ್ರಿಯೆಯ ಆಶಯವನ್ನೋ ಬಿಂಬಿಸುತ್ತದೆ.

## 2.3.1 ಶಾಬ್ದಿಕವಲ್ಲದ ಸಂವಹನದ ಕಾರ್ಯ ಸಂಬಂಧಿ ಪ್ರಾಮುಖ್ಯತೆ

- ವ್ಯಕ್ತಿ-ವ್ಯಕ್ತಿಗಳ ನಡುವಿನ ಸಂವಹನದ ಸಂದರ್ಭದಲ್ಲಿ ಅರ್ಥನಿರ್ಣಯ ಮಾಡುವಾಗ ಶಾಬ್ದಿಕವಲ್ಲದ ಅಂಶಗಳು ಬಹಳ ಮುಖ್ಯವಾದ ನಿರ್ಣಾಯಕ ವಿಷಯಗಳಾಗುತ್ತವೆ.

- ಭಾವನೆಗಳು ಮತ್ತು ಸಂವೇದನೆಗಳು ಶಾಬ್ದಿಕ ರೀತಿಗಳಿಗಿಂತ ಹೆಚ್ಚು ನಿಷ್ಕೃಷ್ಟವಾಗಿ ಶಾಬ್ದಿಕವಲ್ಲದ ಮಾಧ್ಯಮಗಳಲ್ಲೇ ವಿನಿಮಯವಾಗುತ್ತವೆ.

- ಉಚ್ಚಮಟ್ಟದ ಸಂವಹನ ಸಾಧಿಸುವಲ್ಲಿ ತೊರೆಯಲಾರದಷ್ಟು ಹೆಚ್ಚಿನ ಪ್ರಾಮುಖ್ಯತೆಯನ್ನು ಪಡೆದಿರುವ ಶಾಬ್ದಿಕವಲ್ಲದ ಸೂಚನೆಗಳು ಸಂವಹನದ ಕಾರ್ಯವನ್ನು ಮಾಡುವಲ್ಲಿ ಸಹಾಯಕಾರಿ.

* ಶಾಬ್ದಿಕವಲ್ಲದ ಸೂಚನೆಗಳು, ಶಾಬ್ದಿಕ ಸೂಚನೆಗಳಿಗಿಂತ ಹೆಚ್ಚು ಸಮರ್ಥವಾದ ಸಂವಹನ ಸಾಧನಗಳನ್ನು ಪ್ರತಿನಿಧಿಸುತ್ತವೆ.

## 2.4 ಸಂವಹನದ ಇತರ ನಮೂನೆಗಳು

ಸಂಸ್ಥೆಯೊಂದರಲ್ಲಿ ಸಂವಹನ ಹೇಗೆ ನಡೆಯುತ್ತದೆ ಎಂಬುದನ್ನು ಅಭ್ಯಾಸ ಮಾಡುವ ಅವಶ್ಯಕತೆ ಬಹಳಷ್ಟಿದೆ. ಸಂಸ್ಥಾ ಸಂವಹನವೆಂದರೆ, ಸಂಸ್ಥೆಯೊಂದರಲ್ಲಿ ನಡೆಯುವ ಸಂವಹನ ಕಾರ್ಯ ಎಂದು ಅರ್ಥ. ಸಂವಹನದ ಗುಣಲಕ್ಷಣಗಳ ಆಧಾರದ ಮೇಲೆ ಇದನ್ನು ಔಪಚಾರಿಕ ವಿಧ್ಯುಕ್ತ ಮತ್ತು ಅನೌಪಚಾರಿಕವೆಂದು ವಿಂಗಡಿಸಬಹುದು. ಸಂವಹನ ಹರಿಯುವ ದಿಕ್ಕನ್ನು ಆಧರಿಸಿ ಮತ್ತೆ ಇದನ್ನು ಲಂಬ ರೀತಿಯ (ಮೇಲ್ಮುಖಿ ಅಥವಾ ಕೆಳಮುಖಿ) ಅಥವಾ ಸಮತಲೀಯ ಸಂವಹನವೆಂದೂ ವರ್ಗೀಕರಿಸಬಹುದು. ಮೇಲೆ ತಿಳಿಸಿದ ಎಲ್ಲಾ ಸಂವಹನ ರೂಪಗಳೂ ಮೌಖಿಕ ಅಥವಾ ಲಿಖಿತವಾಗಿರಬಹುದು.

### 2.4.1 ಔಪಚಾರಿಕ ಅಥವಾ ವಿಧ್ಯುಕ್ತ ಸಂವಹನ

ಸಂಸ್ಥೆಯ ಶ್ರೇಣಿ ವ್ಯವಸ್ಥೆಯಲ್ಲಿ ಅಧಿಕಾರ ಸ್ಥಾನಗಳನ್ನು ಹೊಂದಿರುವವರು ಪ್ರಾರಂಭಿಸಿದಂತಹ ಸಂಸ್ಥೆಗಳಲ್ಲಿ, ಸಾಮಾನ್ಯವಾಗಿ ಔಪಚಾರಿಕ ಸಂವಹನವನ್ನು ವಿಧಿಗೊಳಿಸಲಾಗುತ್ತದೆ ಮತ್ತು ಇದಕ್ಕೆ ಆಡಳಿತ ವ್ಯವಸ್ಥೆಯ ಒತ್ತಾಸೆಯೂ ಇರುತ್ತದೆ. ಇವುಗಳನ್ನು ರವಾನಿಸಲು ಒಂದು ನಿರ್ದಿಷ್ಟವಾದ ಹಾದಿಯೂ ಇದ್ದು, ಅದನ್ನು 'ಸಮುಚಿತ ಮಾರ್ಗ' ( Proper channel) ಎಂದು ಕರೆಯಲಾಗುತ್ತದೆ. ಇವುಗಳು ಸೂಚನೆಗಳಿರಬಹುದು, ನಿರ್ದೇಶನಗಳಿರಬಹುದು, ಆದೇಶಗಳಿರಬಹುದು ಅಥವಾ ಸರಕು ಕೋರಿಕೆ ಪತ್ರವಾಗಿದ್ದು, ಸಂಸ್ಥೆಯ ಉತ್ಪಾದಕತೆಗೆ ಸಂಬಂಧಿಸಿದಂತಹವುಗಳಾಗಿರಬಹುದು. ಸ್ಥಾಯೀ ಸೂಚನೆಗಳು ಹಾಗೂ ಇತರ ಅಂಶಗಳು, ಸುತ್ತೋಲೆಗಳು, ಸೂಚನೆಗಳು ಮತ್ತು ವಿವಿಧ ಕೈಪಿಡಿಗಳ ಮೂಲಕವಾಗಿ ಕೆಲಸಗಾರರ ವರ್ತನೆ, ಶಿಸ್ತು ಮುಂತಾದವುಗಳೂ ಈ ಸಂವಹನದ ವ್ಯಾಪ್ತಿಯಲ್ಲಿ ಇರಬಹುದು.

### 2.4.2 ಅನೌಪಚಾರಿಕ ಸಂವಹನ

'ಗ್ರೇಪ್ ವೈನ್' ಸಂವಹನದ ಒಂದು ಅನೌಪಚಾರಿಕ ರೂಪ. ಇಲ್ಲಿ ವ್ಯಕ್ತಿಯ ಸಂವೇದನೆಗಳನ್ನು ಹಂಚಿಕೊಳ್ಳಬಹುದು. ಇದು ಅನಧಿಕೃತವಾದುದು, ಸ್ನೇಹಿಯಾದುದು, ಕಟ್ಟುನಿಟ್ಟಿನ ಬಂಧಕ್ಕೆ ಒಳಪಡದೆ ಇರುವುದು ಮತ್ತು ಮೌಖಿಕವಾಗಿಯೂ ಇರುವ ಸಂವಹನದ ಹಾದಿ. ಸಂಸ್ಥೆಯ ಉತ್ಪಾದನೆ, ಕಾರ್ಯನೀತಿಗಳು ಮತ್ತು ಹೊರಗಿನವರಿಗೆ ಕೆಲಸಗಳನ್ನು ಗುತ್ತಿಗೆ ನೀಡುವ ಬಗ್ಗೆ, ಪ್ರಸ್ತಾಪಿಸಲಾದ ಸಲಹೆ ಸೂಚನೆಗಳ ಬಗ್ಗೆ ಕೆಲಸಗಾರರ ಪ್ರತಿಕ್ರಿಯೆಯನ್ನು ಪಡೆಯಲು ನಿರ್ವಾಹಕರು, ಕೆಲಸಗಾರರ ನಡುವೆ ಈ ರೀತಿಯ ಸಂವಹನವನ್ನು ಒಂದು ಧ್ವನಿಫಲಕವನ್ನಾಗಿ ಉಪಯೋಗಿಸಿಕೊಳ್ಳುತ್ತಾರೆ.

### 2.4.3 ಲಂಬರೀತಿಯ ಸಂವಹನ

ಆಡಳಿತ ವ್ಯವಸ್ಥೆ ಯಾವಾಗಲೂ ಕೆಳಗಿನವರೊಂದಿಗೆ ಅನೇಕ ರೀತಿಯ ಸಂವಹನ ನಡೆಸಬೇಕಾಗುತ್ತದೆ. ಅದು ಶ್ರೇಣಿಯ ಮೇಲಿನಿಂದ ಅಂದರೆ, ನಿರ್ವಾಹಕ ಮಂಡಳಿಯಿಂದ ಪ್ರಾರಂಭವಾಗಬಹುದು. ಇದನ್ನು ಕೆಳಮುಖಿದ ಸಂವಹನ ಎಂದು ಕರೆಯಲಾಗುತ್ತದೆ. ಕೆಲಸಗಾರರನ್ನು ತಲುಪುವ ಈ ಸಂವಹನವು ವಾರ್ಷಿಕ ವರದಿಗಳು ಮತ್ತು ಸುತ್ತೋಲೆಗಳ ರೂಪದಲ್ಲಿ ಇರಬಹುದು.

ಸಂವಹನ ಹರಿಯುವ ಮೂರು ದಿಕ್ಕುಗಳನ್ನು ರೆಡ್‌ಫೀಲ್ಡ್ ಹೀಗೆ ವಿವರಿಸುತ್ತಾರೆ.

ಅ. ಮೇಲ್ಮುಖಿ ಸಂವಹನ

ಆ. ಕೆಳಮುಖಿ ಸಂವಹನ

ಇ. ಸಮತಲೀಯ ಸಂವಹನ

ಮೇಲ್ಮುಖಿವಾಗಿ ಕೆಲಸಗಾರರಿಂದ ಆಡಳಿತ ವ್ಯವಸ್ಥೆಯ ಹಂತಕ್ಕೆ ಹೋಗಬೇಕಾದ ಹಲವಾರು ಸಂವಹನಗಳೂ ಇರುತ್ತವೆ. ಆಡಳಿತ ವ್ಯವಸ್ಥೆಯ ಒಪ್ಪಿಗೆ ಬೇಕಾದ ಸಲಹೆಗಳು, ದೂರುಗಳು ಕೋರಿಕೆಗಳು, ಮನವಿಗಳು, ನಿವೇದನೆಗಳ ರೂಪದಲ್ಲಿ ಈ ಸಂವಹನಗಳು ಇರಬಹುದು.

ಸಂಸ್ಥೆ ಅಥವಾ ಮೇಲಧಿಕಾರಿ

↓

ಪ್ರತಿಕ್ರಿಯೆ

↓

ಕೆಳಗಿನ ಉದ್ಯೋಗಿ

ಸೂಚನಾಫಲಕ, ಅಂತರ ವಿಭಾಗೀಯ ಚಟುವಟಿಕೆಗಳು, ಮುಖ್ಯ ಕಛೇರಿ ಮತ್ತು ಉಳಿದ ಶಾಖಾ ಕಛೇರಿಯ ಕಾರ್ಯಚಟುವಟಿಕೆಗಳನ್ನು ಕುರಿತು ಹೇಳುವ ಸಂಸ್ಥೆಯ ವಾರ್ತಾಪತ್ರಗಳು, ಸಮಾವೇಶಗಳು, ತರಬೇತಿಯ ತರಗತಿಗಳು, ಕಾರ್ಯಾಗಾರಗಳು ಮುಂತಾದ ರೂಪದಲ್ಲಿ ಒಂದು ಸಂಸ್ಥೆಯೊಳಗೆ ಸಮತಲೀಯ ಸಂವಹನ ಇರುತ್ತದೆ. ಪರಸ್ಪರರನ್ನು ಲಕ್ಷ್ಯ ಮಾಡುವಂತಹ, ಸಂಪೂರ್ಣ ಸಮಾನತೆ ಇರುವಂತಹ ವ್ಯವಸ್ಥೆಯಲ್ಲಿ ವ್ಯಕ್ತಿಗಳ ನಡುವೆ ಇರುವ ಸಂವಹನ ಇದು. ಸಮಾನ ಅಂತಸ್ತು, ಸ್ಥಾನಮಾನಗಳನ್ನು ಹೊಂದಿರುವವರಲ್ಲಿ ಪರಸ್ಪರ ಸಮತಲೀಯವಾದ ಸಂವಹನ ಇರಬಹುದು.

ನಿರ್ವಾಹಕ ⟷ ನಿರ್ವಾಹಕ

ಕೆಲಸಗಾರ ⟷ ಕೆಲಸಗಾರ

(ಉದ್ಯೋಗಿ) (ಉದ್ಯೋಗಿ)

ಸಾಮಾನ್ಯವಾಗಿ, ಸಂವಹನದ ನಮೂನೆಯನ್ನು, ಸಂವಹನದ ದಿಕ್ಕು, ಆಚಾರ ಮತ್ತು ಗುಣಲಕ್ಷಣಗಳಿಂದ ವಿವರಿಸಲಾಗುತ್ತದೆ. ಪ್ರತಿಯೊಂದು ಸಂಸ್ಥೆಯಲ್ಲಿಯೂ ಮೇಲಿನಿಂದ ಕೆಳಮುಖಿವಾಗಿ ಮತ್ತು ಕೆಳಗಿನಿಂದ ಮೇಲ್ಮುಖಿವಾಗಿಯೂ ಸಂವಹನ ನಡೆಯುತ್ತದೆ. ಸಂವಹನವು ಸಮತಲೀಯವಾಗಿಯೂ ಇರಬಹುದು.

## 2.5 ಸಾರಾಂಶ

ಸಂವಹನ ಮಾನವನ ಎಲ್ಲಾ ಚಟುವಟಿಕೆಗಳ ಕೇಂದ್ರಸ್ಥಾನದಲ್ಲಿದೆ. ಇದು ಮಾನವ ಜೀವನದ ಅವಿಭಾಜ್ಯ ಅಂಗವಾಗಿದ್ದು, ಮಾನವನ ಉಳಿವಿಗೆ ಬಹು ಮುಖ್ಯವಾದುದು. ವ್ಯಕ್ತಿಯೊಬ್ಬ ಬೇರೆಯವರೊಂದಿಗೆ ಅರ್ಥಪೂರ್ಣವಾದ ಸಂಬಂಧಗಳನ್ನು ಬೆಳೆಸಿಕೊಳ್ಳುವ ಮತ್ತು ಅನುಭವಗಳ ವಿನಿಮಯ ಮಾಡಿಕೊಳ್ಳುವ ಸಾಧ್ಯತೆಯನ್ನು ಸಂವಹನ ಒದಗಿಸುತ್ತದೆ. ಸಂವಹನವು ಭೌತಿಕ, ಜೈವಿಕ ಮತ್ತು ಸಾಮಾಜಿಕ ಪರಿಸರದೊಂದಿಗೆ ಒಡನಾಟ ಹೊಂದಿರುತ್ತದೆ.

ವ್ಯಕ್ತಿಯ ಅಂತರ್ಯ, ವ್ಯಕ್ತಿ-ವ್ಯಕ್ತಿಗಳ ನಡುವಣ, ಸಮುದಾಯ (ತಂಡ), ಸಂಸ್ಥೆಯ ಮತ್ತು ಸಮೂಹ ಸಂಪರ್ಕ ಎಂದು ಕರೆಯಲ್ಪಡುವ ಹಲವು ರೀತಿಯ ಸಂವಹನ ಪ್ರಕ್ರಿಯೆಗಳಲ್ಲಿ ಜನರು ತೊಡಗಿಕೊಂಡಿರುತ್ತಾರೆ. ಸಂವಾಹಕ ಮತ್ತು ಸಂವಹಿತರ ನಡುವೆ ಕೂಡಿಕೊಂಡಿರುವ ಹಲವಾರು ಯಾಂತ್ರಿಕ ಸಾಧನಗಳಿಂದಾಗಿ ಸಮೂಹ ಸಂವಹನವು, ಸಂವಹನದ ಇತರ ವಿಧಾನಗಳಿಗಿಂತ ಭಿನ್ನವಾಗಿದೆ. ಮೇಲೆ ಹೇಳಿದ ಐದು ರೀತಿಯ ಸಂವಹನಗಳಲ್ಲಿ, ಇಬ್ಬರ ನಡುವೆ, ವ್ಯಕ್ತಿಗಳ ನಡುವೆ ಮತ್ತು ಸಣ್ಣಗುಂಪಿನಲ್ಲಿ ನಡೆವ ಸಂವಹನಗಳಿಂದ ಪ್ರಾರಂಭವಾಗುವ ಸಂಪರ್ಕ ಪಟಲದ ಒಂದು ತುದಿಯಲ್ಲಿದೆ. ಸಮೂಹ ಸಂವಹನದ ಒಂದು ದೊಡ್ಡ ಭಾಗವು ಮುದ್ರಣ ಮತ್ತು ವಿದ್ಯುನ್ಮಾನ ಸಂಕೇತಗಳ ಮೂಲಕ ಆಗಬಹುದು. ಉಳಿದ ಮೂರು ರೀತಿಯ ಸಂವಹನಗಳಲ್ಲಿ ಶ್ರೋತೃಗಳನ್ನು ಹತೋಟಿಯಲ್ಲಿ ಇಟ್ಟುಕೊಳ್ಳಬಹುದು. ಆದರೆ, ಸಮೂಹ ಸಂಪರ್ಕಕ್ಕೆ ಸಂಬಂಧಿಸಿದಂತೆ ಯಾವುದೇ ರೀತಿಯ ನಿರ್ಬಂಧ, ಹತೋಟಿ ಇರುವುದಿಲ್ಲ.

ತಮ್ಮ ಕೆಲಸಗಳನ್ನು ನಿರ್ವಹಿಸಲು ಜನರಿಗೆ ಮಾಹಿತಿ ಅತ್ಯವಶ್ಯ. ಈ ಭೂಮಿಕೆಯಲ್ಲಿ ಸಂವಹನವು ಒಡನಾಟ, ಸಹಭಾಗಿತ್ವ ಮತ್ತು ಅಭಿವೃದ್ಧಿಯ ಪರಿಣಾಮಕಾರಿ ಸಾಧನವಾಗಬಹುದು. ಸಂವಹನವು ಒಂದು ಯೋಜಿತವಾದ, ವ್ಯವಸ್ಥಿತವಾದ ಮತ್ತು ಉದ್ದೇಶ ಪೂರಿತವಾದ ಕಾರ್ಯವಾಗಿರಬೇಕು.

## 2.6 ನಿಮ್ಮ ಪ್ರಗತಿ ಪರಿಶೀಲನೆ

**ಸೂಚನೆ: ನಿಮ್ಮ ಉತ್ತರಗಳನ್ನು ಈ ಘಟಕದಲ್ಲಿ ನೀಡಲಾಗಿರುವ ವಿವರಗಳೊಂದಿಗೆ ಹೋಲಿಸಿ.**

1. ಆಧುನಿಕ ಸಂಸ್ಥೆಯೊಂದರಲ್ಲಿ ನಡೆಯುವ ಸಂವಹನದ ವಿವಿಧ ರೀತಿಗಳು ಯಾವುವು? ಅವುಗಳ ಕಾರ್ಯಗಳೇನು?
2. ಈ ಕೆಳಗಿನ ಸಂವಹನದ ಸಂದರ್ಭಗಳನ್ನು ಸ್ಥೂಲವಾಗಿ ವಿವರಿಸಿ.
   i. ವ್ಯಕ್ತಿಯ ಅಂತರ್ಯದ ಸಂವಹನ
   ii. ವ್ಯಕ್ತಿ-ವ್ಯಕ್ತಿಗಳ ನಡುವಿನ ಸಂವಹನ
   iii. ಸಮುದಾಯ (ಗುಂಪು) ಸಂವಹನ
   iv. ಸಂಸ್ಥಾ ಸಂವಹನ
   v. ಸಮೂಹ ಸಂವಹನ

3.ವ್ಯಕ್ತಿ-ವ್ಯಕ್ತಿ ನಡುವಣ ಸಂವಹನ ಮತ್ತು ಸಮೂಹ ಸಂಪರ್ಕ ಮಾಧ್ಯಮಗಳ ನಡುವಿನ ವ್ಯತ್ಯಾಸಗಳನ್ನು ಗುರುತಿಸಿ.

## 2.7 ಹೆಚ್ಚಿನ ಓದಿಗಾಗಿ


1. Andal. N, Communication Theories and Models, Himalaya Publishing House - New Delhi, 1998.

2. Dennis Mc Quail, Towards a Sociology of Mass Communication, Mc Millan Publication - London, 1969.

3. Emery, Ault and Agees, Introduction to Mass Communication, Vakils, Fefer and Simons Pvt Ltd - Bombay, 1984.

4. Jay Black and Bryan Jenning, Introduction to Mass Communication, Win C. Brown Publishers - New York, 1983.

5. Kuppuswamy. B, Communication and Social Development in India, Sterling Publications - New Delhi, 1996.



ಬರಹ: ತೇಜಸ್ವಿ ನವಿಲೂರ್ ಮತ್ತು ಬಿ. ವಿ. ಸತ್ಯೇಂದ್ರರಾವ್

# ಟಿಪ್ಪಣಿ

# ಘಟಕ 3 ಸಂವಹನದ ವಿವಿಧ ಮಾದರಿಗಳು

ರಚನೆ

3.0 ಉದ್ದೇಶಗಳು

3.1 ಪ್ರಸ್ತಾವನೆ

3.2 ಸಂವಹನದಲ್ಲಿ ಮಾದರಿಗಳ ಬಳಕೆ

3.3 ಸಂವಹನದ ಮೂಲ ಮಾದರಿಗಳು

3.3.1 ಲಾಸ್‌ವೆಲ್ಲರ ಸೂತ್ರ

3.3.2 ಶೆನಾನ್ ಮತ್ತು ವೀವರ್ ಅವರ ಮಾದರಿ

3.3.3 ಆಸ್‌ಗುಡ್ ಮತ್ತು ಶ್ರಾಮ್ ಅವರ ವೃತ್ತಾಕೃತಿಯ ಮಾದರಿ

3.3.4 ಗರ್ಬ್ನರ್ ಅವರ ಸಂವಹನ ಮಾದರಿ

3.3.5 ನ್ಯೂಕಾಂಬ್ ಅವರ ABX ಮಾದರಿ

3.4 ಸಮೂಹ ಸಂವಹನ ಮತ್ತು ವ್ಯಕ್ತಿ ಪ್ರಭಾವದ ಮಾದರಿಗಳು

3.4.1 ಕಾಟ್ಜ್ ಮತ್ತು ಲಾಜರ್‌ಫೆಲ್ಡ್‌ರವರ ಎರಡು ಹಂತದ ಹರಿವಿನ ಮಾದರಿ

3.4.2 ನಾವೀನ್ಯತೆ ಪ್ರಸರಣದ ರೋಜರ್ಸ್ ಮತ್ತು ಶೂಮಾಕರ್ ಅವರ ಮಾದರಿ

3.5 ಕಾರ್ಯಫಲದ ಪರಿಣಾಮದ ಮಾದರಿಗಳು

3.5.1 ಕಾರ್ಯಸೂಚಿ ಯೋಜನೆಯ ಮಾದರಿ

3.6 ಶ್ರೋತೃ ವೀಕ್ಷಕ ಕೇಂದ್ರೀಯ ಮಾದರಿಗಳು

3.6.1 ಉಪಯೋಗಗಳು ಮತ್ತು ತುಷ್ಟೀಕರಣದ ಮಾದರಿ

3.7 ಸಾರಾಂಶ

3.8 ನಿಮ್ಮ ಪ್ರಗತಿ ಪರಿಶೀಲನೆ

3.9 ಹೆಚ್ಚಿನ ಓದಿಗಾಗಿ

## 3.0 ಉದ್ದೇಶಗಳು

ಸಂವಹನದ ಪ್ರಕ್ರಿಯೆಗಳನ್ನು ಉತ್ತಮವಾಗಿ ವಿವರಿಸಲು ಮತ್ತು ಅರ್ಥಮಾಡಿಕೊಳ್ಳಲು ಮಾದರಿಗಳ ಮೂಲಕ ವ್ಯಾಖ್ಯಾನಿಸಲಾಗುತ್ತದೆ. ನಿಮಗೆ ಸಂವಹನದ ಮಾದರಿಗಳ ಪರಿಚಯವಾಗುವಂತೆ, ಮಾದರಿಯಲ್ಲಿನ ಮೂಲ ಘಟಕಗಳನ್ನೂ ಮತ್ತು ಮಾದರಿಗಳು ನಿರೂಪಿಸಲು ಯತ್ನಿಸುತ್ತಿರುವ ಅಂತಸ್ಸಂಬಂಧಗಳನ್ನು ಅರ್ಥ ಮಾಡಿಕೊಳ್ಳಲು ಸಹಾಯವಾಗುವಂತೆ ಈ ಘಟಕವನ್ನು ವಿನ್ಯಾಸಗೊಳಿಸಲಾಗಿದೆ. ಸಂವಹನದ ವಿವಿಧ ಮಾದರಿಗಳ ಬಗ್ಗೆ ಅಧ್ಯಯನ ಮಾಡುವುದರಿಂದ, ಸಂವಹನ ಪ್ರಕ್ರಿಯೆಯ ಚಲನಾತ್ಮಕ ಗುಣಗಳನ್ನು ಅರಿಯಲು ಮತ್ತು ವಿವಿಧ ಸನ್ನಿವೇಶಗಳಲ್ಲಿ ಅವು ತಳೆಯುವ ವಿವಿಧ ರೂಪಗಳ ಬಗ್ಗೆ ಅರಿಯಲು ಸಾಧ್ಯವಾಗುತ್ತದೆ. ಈ ಘಟಕದ ಮೂಲ ಉದ್ದೇಶಗಳೆಂದರೆ:

* ತನ್ನ ಮೂಲ ಘಟಕಗಳ ಮೂಲಕ ಸಂವಹನ ಹರಿಯುವ ರೀತಿಯನ್ನು ಅರ್ಥಮಾಡಿಕೊಳ್ಳುವುದು;
* ಸಂವಹನ ಪ್ರಕ್ರಿಯೆಯ ಮೂಲಘಟಕಗಳ ನಡುವೆ ಇರುವ ಸಂಬಂಧವನ್ನು ಗ್ರಹಿಸುವುದು;
* ಸಂವಹನ ಪ್ರಕ್ರಿಯೆಯನ್ನು ನಕ್ಷೆ ಮಾಡುವಲ್ಲಿ ಮಾದರಿಗಳ ಬಳಕೆಯನ್ನು ವಿವೇಚಿಸುವುದು;
* ಸಂವಹನದ ವಿವಿಧ ಸನ್ನಿವೇಶಗಳಲ್ಲಿ ಪ್ರತಿಯೊಂದು ಮೂಲಘಟಕದ ಪಾತ್ರವನ್ನು ಅರಿಯುವುದು;
* ಸಂವಹನದ ವಿವಿಧ ಮಾದರಿಗಳ ತುಲನೆ ಮತ್ತು ವೈದೃಶ್ಯ ಗಣನೆ ಮಾಡುವುದು, ಮತ್ತು
* ಮಾದರಿಗಳ ಮೌಲ್ಯಮಾಪನ ಮತ್ತು ವಿವಿಧ ಸಂವಹನ ಸನ್ನಿವೇಶಗಳಿಗೆ ಅವುಗಳ ಅನ್ವಯ.

## 3.1 ಪರಿಚಯ

ನಮ್ಮ ಜೀವನದ ಅತಿಪ್ರಮುಖ ಸಂಗತಿಗಳಲ್ಲಿ ಸಂವಹನವೂ ಒಂದು. ಸಂವಹನವು ನಮ್ಮ ದೈನಂದಿನ ಜೀವನದ ಮೇಲೆ ಪ್ರಚಂಡವಾದ ಪ್ರಭಾವವನ್ನು ಬೀರುತ್ತದೆ. ಚಲನಾತ್ಮಕವಾದ ಈ ಸಂವಹನ ಪ್ರಕ್ರಿಯೆಯಲ್ಲಿ ಪ್ರೇಷಕ (ಸಂವಾಹಕ), ಸಂದೇಶ  ಮತ್ತು ಗ್ರಾಹಕ (ಸಂವಹಿತ) - ಈ ಪ್ರಮುಖ ಮೂಲಘಟಕಗಳು ವೈಶಿಷ್ಟ್ಯಪೂರ್ಣವಾದ ಗುಣಧರ್ಮಗಳನ್ನು ಹೊಂದಿರುತ್ತವೆ. ಈ ಕಾರಣದಿಂದ, ಸಂವಹನ ಪ್ರಕ್ರಿಯೆಯ ಮೂಲಘಟಕಗಳ ಬಗ್ಗೆ ಮತ್ತು ಅವುಗಳ ನಡುವಿನ ಅಂತಸ್ಸಂಬಂಧಗಳ ಬಗ್ಗೆ ಸ್ಪಷ್ಟವಾದ ತಿಳುವಳಿಕೆಯನ್ನು ಹೊಂದುವುದು ಬಹಳ ಅವಶ್ಯಕವಾಗುತ್ತದೆ. ಸಂಹವನದ ಹಲವಾರು ಮೂಲಘಟಕಗಳು ಮತ್ತು ಹತ್ತು ಹಲವು ಸನ್ನಿವೇಶಗಳಲ್ಲಿ ಇವುಗಳ ನಡುವಿನ ಸಂಬಂಧವನ್ನು ಸ್ಪಷ್ಟವಾಗಿ ತಿಳಿದುಕೊಳ್ಳುವುದರಿಂದ, ಸಂವಹನದ ಪ್ರಕ್ರಿಯೆಯಲ್ಲಿ ಸಹಜ ಸ್ವಾಭಾವಿಕವಾಗಿ ಕೂಡಿಕೊಂಡು ಬರುವ ಅರ್ಥಗಳನ್ನು ಗುರುತಿಸಲು ಸಹಾಯವಾಗುತ್ತದೆ.

## 3.2 ಸಂವಹನದಲ್ಲಿ ಮಾದರಿಗಳ ಬಳಕೆ

ವಾಸ್ತವದ ಒಂದು ಸರಳ ನಿರೂಪಣೆಯೇ ಮಾದರಿ. ಚಿತ್ರಗಳು ಮತ್ತು ಸಂಕೇತಗಳಿರುವ ನಕ್ಷೆಯ ರೂಪದಲ್ಲಿ ಮಾದರಿಗಳು ಇರುತ್ತವೆ. ಪ್ರಕ್ರಿಯೆಯಲ್ಲಿ ಇರುವ ಪ್ರಮುಖ ಮೂಲ ಘಟಕಗಳನ್ನೂ ಮತ್ತು ಅವುಗಳ ನಡುವೆ ಇರುವ ಅಂತಸ್ಸಂಬಂಧಗಳನ್ನೂ ಮಾದರಿಗಳು ತೋರಿಸಿಕೊಡುತ್ತವೆ. ವ್ಯವಸ್ಥೆಯ ಭೌತಿಕ ಅಂಶಗಳ ಸ್ವರೂಪವನ್ನೂ ಕೂಡ ಕೆಲವೊಂದು ಮಾದರಿಗಳು ನಮಗೆ ತೋರಿಸಿಕೊಡುತ್ತವೆ. ಉದಾಹರಣೆಗೆ, ಗಣಕಯಂತ್ರಗಳ ಅಂಗಗಳ ಮಾದರಿ. ಅಂತಹ ಮಾದರಿಗಳನ್ನು 'ರಚನಾ ಮಾದರಿ'ಗಳೆಂದು ಕರೆಯಲಾಗುತ್ತದೆ.

ಇತರ ಮಾದರಿಗಳು ವ್ಯವಸ್ಥೆಯ ಹಲವು ಅಂಗಗಳು, ಅಂತರ್ಗತವಾದ ಬಲಗಳು, ದಿಕ್ಕು ಮತ್ತು ಒಂದು ಮೂಲ ಘಟಕ ಮತ್ತೊಂದರ ಮೇಲೆ ಬೀರುವ ಪ್ರಭಾವ ಇತ್ಯಾದಿಗಳನ್ನು ತೋರಿಸಿಕೊಡುತ್ತವೆ. ಇಂತಹ ಮಾದರಿಗಳನ್ನು "ಕ್ರಿಯಾ ಮಾದರಿ" ಗಳೆಂದು ಕರೆಯಲಾಗುತ್ತದೆ. ಉದಾಹರಣೆಗೆ, ವಾತಾವರಣದ ಜಲಚಕ್ರ. ಸಂವಹನವು ಒಂದು ಚಲನಾತ್ಮಕ ಪ್ರಕ್ರಿಯೆಯಾಗಿರುವುದರಿಂದ ನಾವು ಇಲ್ಲಿ ಅಧ್ಯಯನ ಮಾಡುವ ಮಾದರಿಗಳು 'ಕ್ರಿಯಾ' ಸ್ವರೂಪವೇ ಆಗಿವೆ. ಮಾದರಿಗಳ ಅಧ್ಯಯನದಿಂದ ಹಲವಾರು ಪ್ರಯೋಜನಗಳಿವೆ.

**ಅ. ಸುಲಭವಾದ ಗ್ರಹಿಕೆ:** ಮಾದರಿಗಳು ಪ್ರಕ್ರಿಯೆಯೊಂದರ ಸರಳ ರೂಪಗಳು. ಯಥಾವತ್ತಾಗಿ ಅರ್ಥಮಾಡಿಕೊಳ್ಳಲು ಸಾಮಾನ್ಯವಾಗಿ ಬಹಳ ಜಟಿಲವೆನಿಸುವ ಅಂಶಗಳು ಮಾದರಿಯ ರೂಪದಲ್ಲಿದ್ದಾಗ ಅವುಗಳನ್ನು ಸುಲಭವಾಗಿ ಗ್ರಹಿಸಿಬಿಡಬಹುದು. ಪ್ರಕ್ರಿಯೆಯೊಂದರಲ್ಲಿರುವ ಅಂಶಗಳಲ್ಲಿನ ಪರಸ್ಪರ ಸಂಬಂಧಗಳೂ ಮಾದರಿ ರೂಪದಲ್ಲಿದ್ದಾಗ ಬಹುಬೇಗ ಅರ್ಥವಾಗುತ್ತವೆ.

**ಆ. ಗಮನದ ಕೇಂದ್ರೀಕರಣ:** ಸಂಕೀರ್ಣವಾದ ಪ್ರಕ್ರಿಯೆಯ ಅತಿ ಮಹತ್ವದ ಅಂಶದ ಮೇಲೆ ಗಮನವನ್ನು ಕೇಂದ್ರೀಕರಿಸಲು ಮಾದರಿಗಳು ಸಹಾಯ ಮಾಡುತ್ತವೆ. ಯಾವುದೋ ಒಂದು ಅಂಶವನ್ನು ಉಳಿದವುಗಳಿಂದ ಬೇರ್ಪಡಿಸಿ ಸಮರ್ಥಿಸಲೂ ಸಾಧ್ಯವಾಗುತ್ತದೆ.

**ಇ. ಫಲಿತಾಂಶಗಳ ಭವಿಷ್ಯ ಊಹೆ ಮಾಡುವುದು:** ನಿರ್ದಿಷ್ಟ ಸನ್ನಿವೇಶಗಳಲ್ಲಿ ಮುಂದೆ ಏನಾಗುವುದೆಂಬುದರ ಭವಿಷ್ಯವನ್ನು ಗ್ರಹಿಸಲು ಮಾದರಿಗಳು ಸಾಧ್ಯಮಾಡುತ್ತವೆ. ನಿರ್ದಿಷ್ಟವಾದ ಸನ್ನಿವೇಶಗಳನ್ನು ವೈವಿಧ್ಯಮಯವಾದ ಸಂದರ್ಭಗಳಿಗೆ ಸಾಧಾರಣೀಕರಣಗೊಳಿಸುವುದನ್ನು ಮಾದರಿಗಳು ಸಾಧ್ಯವಾಗಿಸುತ್ತವೆ.

ಸಂವಹನದ ವಿವಿಧ ಮಾದರಿಗಳನ್ನು ಅಧ್ಯಯನ ಮಾಡುವ ಈ ಸಂದರ್ಭದಲ್ಲಿ ಎಲ್ಲ ಮಾದರಿಗಳು ಎಲ್ಲಾ ಉದ್ದೇಶಗಳಿಗೂ ಸರಿ ಹೊಂದುವುದಿಲ್ಲ ಎಂಬುದನ್ನು ಗಮನದಲ್ಲಿಟ್ಟುಕೊಳ್ಳಬೇಕು. ಯಾವ ಸನ್ನಿವೇಶಕ್ಕೆ ಮಾದರಿ ಅನ್ವಯವಾಗುತ್ತದೆ ಎಂಬುದರ ಬಗ್ಗೆ ಗಮನ ಹರಿಸುವುದೂ ಬಹಳ ಮುಖ್ಯ.

## 3.3 ಸಂವಹನದ ಮೂಲ ಮಾದರಿಗಳು

### 3.3.1 ಲಾಸ್‌ವೆಲ್ಲರ ಸೂತ್ರ

ಸಂವಹನದ ಮೊತ್ತ ಮೊದಲಿನ ಹಾಗು ಅತ್ಯಂತ ಸರಳವಾದ ಮಾದರಿಗಳಲ್ಲಿ ಲಾಸ್‌ವೆಲ್ಲರ ಸೂತ್ರವೂ ಒಂದು . ಈ ಮಾದರಿಯನ್ನು ರೂಪಿಸಿದವರು, ಅಮೇರಿಕದ ರಾಜಕೀಯ ವಿಜ್ಞಾನಿ, ಹೆರಾಲ್ಡ್ ಡಿ. ಲಾಸ್‌ವೆಲ್. ಸಂವಹನ ಪ್ರಕ್ರಿಯೆಯ ಮೂಲ ಘಟಕಗಳನ್ನು ಈ ಮಾದರಿಯು ವ್ಯವಸ್ಥಿತ ರೂಪದಲ್ಲಿರಿಸುತ್ತದೆ ಮತ್ತು ಅವುಗಳ ನಡುವಣ ಸಂಬಂಧವನ್ನು ಸ್ಥಾಪಿಸುತ್ತದೆ. ಸಂವಹನ ಕಾರ್ಯವು ಈ ಕೆಳಗಿನ ಪ್ರಶ್ನೆಗಳನ್ನು ಒಳಗೊಳ್ಳುತ್ತದೆ.

ಯಾರು, ಏನನ್ನು ಹೇಳುತ್ತಾರೆ, ಯಾವುದರ ಮೂಲಕ, ಯಾರಿಗೆ, ಯಾವ ಪರಿಣಾಮದೊಂದಿಗೆ?

ಮಾದರಿಯ ರೂಪಕ್ಕೆ ಪರಿವರ್ತಿಸಿದಾಗ ಈ ಸೂತ್ರವು ಕಾಣುವುದು ಹೀಗೆ:





**ಚಿತ್ರ 3.1 ಲಾಸ್‌ವೆಲ್ಲರ ಸೂತ್ರ (1948)**

ಲಾಸ್‌ವೆಲ್ಲರ ಮಾದರಿಯ ಸರಳ ರೇಖಾತ್ಮಕವಾದುದು. ಸಂವಹನಕ್ಕೆ ಮೂಲ ಕಾರಣ ಯಾರು? ಅಂದರೆ, ಸಂವಾಹಕನಿಂದ ಈ ಮಾದರಿ ಪ್ರಾರಂಭಗೊಳ್ಳುತ್ತದೆ. ಸಂವಾಹಕ 'ಏನು ಹೇಳುತ್ತಾನೋ' ಅದು ಸಂವಹನದ ಅಡಕ ವಸ್ತುವಾಗುತ್ತದೆ. ಸಂವಾಹಕನು ತನ್ನ ಸಂದೇಶವನ್ನು ಕಳುಹಿಸಲು ಒಂದು ಮಾರ್ಗವನ್ನು ಬಳಸುತ್ತಾನೆ. ಇದೇ ಸಂವಹನದ ಮಾಧ್ಯಮ. ಈ ಸಂವಹನವು ಒಬ್ಬನಿಂದ ಗ್ರಹಿಸಲ್ಪಡುತ್ತದೆ. ಆತನೇ ಸಂವಹಿತ. ಮೂಲದಿಂದ ಸಂವಹಿಸಲ್ಪಟ್ಟ ಸಂದೇಶವು ಸಂವಹಿತನ ಮೇಲೆ ಪ್ರಭಾವ ಬೀರುತ್ತದೆ. ಈ ಮಾದರಿಯು ಸಂವಹನ ಪ್ರಕ್ರಿಯೆಯ ಮುಖ್ಯ ಘಟಕಗಳನ್ನು ಗುರುತಿಸಿ, ಪ್ರಕ್ರಿಯೆಯ ಚಲನಾತ್ಮಕತೆಯನ್ನು ಸ್ಥಿರೀಕರಿಸುತ್ತದೆ. ಆದರೆ ಈ ಮಾದರಿಯಲ್ಲಿ ಕೆಲವೊಂದು ಲೋಪದೋಷಗಳುಂಟು. ಗ್ರಾಹಕನೊಡನೆ ಸಂವಹಿಸುವ ಉದ್ದೇಶ ಸಂವಾಹಕ(ಮೂಲ)ನಿಗೆ ಯಾವಾಗಲೂ ಇದ್ದೇ ಇರುತ್ತದೆ ಎಂಬುದನ್ನು ಈ ಮಾದರಿಯು ಕಲ್ಪಿಸಿಕೊಳ್ಳುತ್ತದೆ. ಆದರೆ, ಎಲ್ಲಾ ಸನ್ನಿವೇಶಗಳಲ್ಲೂ ಇದು ನಿಜವಲ್ಲ, ಕೆಲವೊಮ್ಮೆ ಯಾವುದೇ ರೀತಿಯ ಪೂರ್ವನಿರ್ಧಾರವಿಲ್ಲದೆ ನಾವು ಕೆಲವರೊಂದಿಗೆ ಸಂವಹನ ನಡೆಸುತ್ತೇವೆ.

ಸಂದೇಶವು ಯಾವಾಗಲೂ ಪರಿಣಾಮಗಳನ್ನು ಬೀರುತ್ತವೆ ಎಂಬುದೂ ಈ ಮಾದರಿಯ ನಂಬುಗೆಯ ಭಾವನೆ. ಅತಿ ಹೆಚ್ಚಿನ ಸಂದರ್ಭಗಳಲ್ಲಿ ಇದೂ ಕೂಡ ನಿಜವಲ್ಲ. ಪ್ರತಿಕ್ರಿಯೆಯ ಅಂಶವನ್ನು ಈ ಮಾದರಿಯು ಸಂಪೂರ್ಣವಾಗಿ ನಿರ್ಲಕ್ಷಿಸಿಬಿಟ್ಟಿದೆ. ಹೀಗೆ ಹಲವಾರು ಮಿತಿಗಳು ಈ ಮಾದರಿಗಿದ್ದರೂ, ಇದು ಬಹಳ ಹಿಂದಿನ ಮಾದರಿಗಳಲ್ಲಿ ಒಂದು ಎಂಬುದನ್ನು ಗಮನಿಸಬೇಕು. ಸಂವಹನದ ಪ್ರಕ್ರಿಯೆಯನ್ನು ಸುಲಭವಾದ ರೀತಿಯಲ್ಲಿ ಜನಗಳಿಗೆ ವಿವರಿಸುವುದು ಈ ಮಾದರಿಯ ಉದ್ದೇಶವಾಗಿತ್ತು.

## 3.3.2 ಶೆನಾನ್ ಮತ್ತು ವೀವರ್ ಅವರ ಮಾದರಿ

ಶೆನಾನ್ ಮತ್ತು ವೀವರ್ ಅವರ ಮಾದರಿಯು ಸಂವಹನ ಪ್ರಕ್ರಿಯೆಯ ತಾಂತ್ರಿಕ ಅಂಶಗಳ ಬಗ್ಗೆ ಹೆಚ್ಚು ತೊಡಗಿಸಿಕೊಳ್ಳುತ್ತದೆ. ಸಂವಹನವು ಸರಳರೇಖಾತ್ಮಕವಾದ, ಒಮ್ಮುಖವಾದ ಪ್ರಕ್ರಿಯೆ ಎನ್ನುವಂತಹ ವಿವರಣೆಯನ್ನು ಈ ಮಾದರಿಯು ನೀಡುತ್ತದೆ. ಈ ಮಾದರಿಯು 'ದುಷ್ಪರಿಣಾಮ ಬೀರುವ ಅಂಶ' ಅರ್ಥಾತ್ 'ಕರ್ಕಶತೆ' ಯನ್ನು ಪರಿಚಯಿಸುತ್ತದೆ.




**ಚಿತ್ರ 3.2 ಶೆನಾನ್ ಮತ್ತು ವೀವರ್ ಮಾದರಿ**


ಈ ಮಾದರಿಯು ಸಂವಹನದ ಮಾಧ್ಯಮಗಳ ಬಗ್ಗೆ ಗಮನ ಹರಿಸುತ್ತದೆ. ಶೆನಾನ್ ಮತ್ತು ವೀವರ್ ಮಾದರಿಯಲ್ಲಿ, ಸಂವಹಿಸಬೇಕಾದ ಸಂದೇಶ / ಸಂದೇಶಗಳ ಗುಂಪನ್ನು ಸೃಜಿಸುವ ಮಾಹಿತಿಯ ಒಂದು ಮೂಲ ಇರುತ್ತದೆ. ವಾಹಕ / ಪ್ರೇಷಕ ಈ ಸಂದೇಶವನ್ನು ಸಂಜ್ಞೆಗಳಾಗಿ ಪರಿವರ್ತಿಸುತ್ತವೆ. ಗ್ರಾಹಕನಿಗೆ ಸುದ್ದಿಯನ್ನು ಪ್ರವಹಿಸುವ ಮಾಧ್ಯಮಗಳಿಗೆ ಈ ಸಂದೇಶಗಳು ಹೊಂದಿಕೊಳ್ಳುತ್ತವೆ.

ಸಂಜ್ಞಾರೂಪದ ಸಂದೇಶವನ್ನು ಗ್ರಾಹಕ (ಸಂವಹಿತ) ಅರ್ಥ ಮಾಡಿಕೊಳ್ಳುತ್ತಾನೆ. ಈ ಪ್ರಕ್ರಿಯೆಯಲ್ಲಿ ಸಂಕೇತಗಳು ದುಷ್ಪರಿಣಾಮ ಬೀರುವ ಅಂಶ ಅರ್ಥಾತ್ ಕರ್ಕಶತೆಯಿಂದ ವಿರೂಪಗೊಳ್ಳುತ್ತವೆ. ಸಂವಹನ ಪ್ರಕ್ರಿಯೆಗೆ ಒದಗುವ ತೊಂದರೆ /ಕ್ಷೋಭೆಗಳೇ ಕರ್ಕಶತೆಗಳು. ಇವು ಸಂಜ್ಞೆಗಳನ್ನು ವಿರೂಪಗೊಳಿಸುತ್ತವೆ ಅಥವಾ ಹಾನಿಗೊಳಿಸುತ್ತವೆ. ಉದಾಹರಣೆಗೆ, ಒಂದೇ ವಾಹಿನಿಯಲ್ಲಿ ಹಲವಾರು ರೇಡಿಯೋ ಸಂಕೇತಗಳು ಒಂದರ ಮೇಲೊಂದು ಒಗ್ಗೂಡಿಬಂದರೆ, ಆ ಕರ್ಕಶತೆಯು ನಿರ್ದಿಷ್ಟ ಕಾರ್ಯಕ್ರಮದ ಸಂದೇಶದ ಅರ್ಥವನ್ನು ವಿಕಾರಗೊಳಿಸುತ್ತದೆ. ಇದರ ಫಲಿತಾಂಶ ಸಂವಾಹಕನಿಗೂ, ಸಂದೇಶ ಪಡೆಯುವ ಸಂವಹಿತನಿಗೂ ನಡುವೆ ಸಮನ್ವಯ ಇಲ್ಲದಂತಾಗುವುದು. ಆದುದರಿಂದ ಸಂವಹನ ಆಗುವುದಿಲ್ಲ.

ಹೀಗಾಗಿ, ಈ ಮಾದರಿಯಲ್ಲಿ, ಪ್ರೇಷಕನ ಎಡೆಯಲ್ಲಿ ಮತ್ತು ಗ್ರಾಹಕನ ಕಡೆಯಲ್ಲಿ ಎರಡು ಮುಖ್ಯ ಕಾರ್ಯಗಳು ನಡೆಯುತ್ತವೆ. ಅತಿ ಹೆಚ್ಚು ಸಂಖ್ಯೆಯ ಸಂಜ್ಞೆಗಳನ್ನು ಸಮರ್ಥವಾಗಿ ಸಂವಹಿಸುವ ಮಾಧ್ಯಮಗಳು ಮತ್ತು ಸಂವಹನದಲ್ಲಿ ಕರ್ಕಶತೆಯ ಪಾತ್ರಗಳನ್ನು ಕುರಿತು ಶೆನಾನ್ ಮತ್ತು ವೀವರ್ ಹೆಚ್ಚಿನ ಕಾಳಜಿ ಹೊಂದಿದ್ದರು. ಗಣಿತ ರೀತಿಯ ಮಾದರಿ ಎಂದು ಕರೆಯಲ್ಪಡುವ ಇದು ಮುಖ್ಯವಾಗಿ ಟೆಲಿಸಂಪರ್ಕ ಮಾದರಿಯಾಗಿತ್ತು. ಆದರೂ, ಈ ಮಾದರಿಯನ್ನು ಮಾನವ ಸಂವಹನಕ್ಕೂ ಸಮಾನವಾಗಿ ಅನ್ವಯಿಸಬಹುದಾಗಿದೆ.

## 3.3.3 ಆಸ್‌ಗುಡ್ ಮತ್ತು ಶ್ರಾಮ್‌ರವರ ವೃತ್ತಾಕೃತಿಯ ಮಾದರಿ

ವಿಲ್‌ಬರ್ ಶ್ರಾಮ್ ಮತ್ತು ಸಿ.ಇ. ಆಸ್‌ಗುಡ್ ಅವರು ನಿರೂಪಿಸಿರುವ ಈ ಮಾದರಿಯು ಹಿಂದೆ ವಿವರಿಸಿದ ಸರಳ ರೇಖಾತ್ಮಕ ಮಾದರಿಗಳಿಗಿಂತ ವಿಭಿನ್ನವಾಗಿ ಹೆಚ್ಚು ವೃತ್ತಾಕಾರ ರೂಪದ್ದಾಗಿದೆ. ಸಂವಹನ ಪ್ರಕ್ರಿಯೆಯ ಪ್ರಮುಖ ಪಾತ್ರಗಳಾದ ಪ್ರೇಷಕ ಮತ್ತು ಗ್ರಾಹಕ ಇವರ ಮೇಲೆ ಈ ಮಾದರಿಯು ಅತಿ ಹೆಚ್ಚು ಗಮನವನ್ನು ಕೇಂದ್ರೀಕರಿಸುತ್ತದೆ. ಇಲ್ಲಿ ಪ್ರತಿಯೊಬ್ಬರೂ ಮೂರು ಕಾರ್ಯಗಳನ್ನು ನಡೆಸುತ್ತಾರೆ. ಅವುಗಳೆಂದರೆ, ಸಾಂಕೇತೀಕರಣ (Encoding) ಸಂಕೇತಗಳನ್ನು ಒಡೆಯುವುದು (Decoding) ಮತ್ತು ಅರ್ಥೈಸಿಕೊಳ್ಳುವುದು (Perception)




ಚಿತ್ರ 3.3. ಆಸ್‌ಗುಡ್ ಮತ್ತು ಶ್ರಾಮ್‌ರವರ ವೃತ್ತಾಕಾರದ ಮಾದರಿ


ಇಲ್ಲಿ, ಸಾಂಕೇತಿಕೀಕರಣವೆಂದರೆ ಸಂವಹನಕ್ಕೆ ಸರಿಹೊಂದುವಂತೆ ಸಂದೇಶವನ್ನು ರೂಪಾಂತರಗೊಳಿಸುವುದು ಅಥವಾ ಸಂಕೇತ ರೂಪಕ್ಕೆ ತರುವುದು ಎಂದರ್ಥ. ಸಂಜ್ಞೆ ಅಥವಾ ಸಂಕೇತ ರೂಪದಲ್ಲಿ ಬಂದಂತಹ ವಿಷಯವನ್ನು ಅರ್ಥಪೂರ್ಣವಾದ ಸಂದೇಶವನ್ನಾಗಿ ಪುನಃ ಪರಿವರ್ತನೆಗೊಳಿಸುವುದನ್ನು 'ಸಂಕೇತಗಳ ಒಡೆಯುವಿಕೆ' ಎಂದು ಕರೆಯಲಾಗುತ್ತದೆ. ಉದಾಹರಣೆಗೆ, ವ್ಯಕ್ತಿಯೊಬ್ಬ ತನ್ನ ಸ್ನೇಹಿತನಿಗೆ 'ಗುಡ್‌ಲಕ್' ಎಂದು ಶುಭಾಶಯ ಕೋರಬೇಕೆಂದಿದ್ದರೆ, ಪದಗಳ ರೂಪದಲ್ಲಿ 'ಗುಡ್‌ಲಕ್'ಎಂದು ತಿಳಿಸುವ ಮೂಲಕವೋ ಅಥವಾ ಹೆಬ್ಬೆರಳನ್ನು ಎತ್ತುವ 'ಥಮ್ಸ್ ಅಪ್' ಹಸ್ತವಿನ್ಯಾಸದ ಸಂಜ್ಞೆಯ ಮೂಲಕವೋ ಈ ಸಂದೇಶವನ್ನು ಸಾಂಕೇತಿಕೀಕರಣಗೊಳಿಸಬಹುದು. ಗ್ರಾಹಕನು, ಈ ಸಂದೇಶ ಸೂಚನೆಯನ್ನು ತನ್ನ ಸ್ನೇಹಿತ ಭಾವಪೂರ್ವಕವಾಗಿ ತನಗೆ ನೀಡಿದ ಶುಭಾಶಯ ಎಂದು ಅರ್ಥೈಸಿಕೊಳ್ಳುತ್ತಾನೆ. ಪ್ರತಿಕ್ರಿಯೆಗೆ ಅತಿ ಹೆಚ್ಚಿನ ಅವಕಾಶ ಇರುವಂತಹ ವ್ಯಕ್ತಿ-ವ್ಯಕ್ತಿಗಳ ನಡುವಿನ ಸಂವಹನ ಸನ್ನಿವೇಶಗಳಲ್ಲಿ ಈ ಮಾದರಿಯು ಚೆನ್ನಾಗಿ ಹೊಂದಿಕೊಳ್ಳುತ್ತದೆ. ಆದರೆ, ಸಾಮಾನ್ಯವಾಗಿ ಪ್ರತಿಕ್ರಿಯೆಗೆ ಹೆಚ್ಚಿನ ಆಸ್ಪದ ಇಲ್ಲದ ಸಮೂಹ ಸಂಪರ್ಕದಂತಹ ಸಂದರ್ಭ ಸನ್ನಿವೇಶಗಳಲ್ಲಿ ಅಷ್ಟಾಗಿ ಅನ್ವಯವಾಗುವುದಿಲ್ಲ. ಸಂವಹನದ ಪ್ರಕ್ರಿಯೆಯಲ್ಲಿ ವಾಹಕ ಮತ್ತು ಸಂವಹಿತರಿಬ್ಬರನ್ನೂ ಸಮಾನ ಪಾಲುದಾರರೆಂದು ಈ ಮಾದರಿಯು ಪರಿಗಣಿಸುತ್ತದೆ. ಆದರೆ, ಜ್ಞಾನ, ಅಂತಸ್ತು ಮತ್ತು ಸಂವಹನದ ಕೌಶಲಗಳಲ್ಲಿ ಇರುವ ವ್ಯತ್ಯಾಸದ ಕಾರಣದಿಂದ ಸಮಾನ ಪಾಲುಗಾರಿಕೆಯು ಬಹಳ ವಿರಳ.

## 3.3.4 ಗರ್ಬ್ನರ್ ಮಾದರಿ

1956ರಲ್ಲಿ ಜಾರ್ಜ್ ಗರ್ಬ್ನರ್ ಅವರಿಂದ ನೀಡಲ್ಪಟ್ಟಿರುವ ಈ ಮಾದರಿಯು ಸಂವಹನದ ವಿಭಿನ್ನ ರೀತಿಯ ಸನ್ನಿವೇಶಗಳಿಗೆ ಹೊಂದಿಕೆಯಾಗುವಷ್ಟು ಬಹುಮುಖೀಯವಾಗಿದೆ. ಸಂವಹನದಲ್ಲಿನ ಗ್ರಹಿಕೆ ಮತ್ತು ಸಂದೇಶಗಳ ಸೃಷ್ಟಿಯ ನಡುವೆ ಇರುವ ಸಂಬಂಧವನ್ನು ಈ ಮಾದರಿಯು ಬಹಳ ಸಮರ್ಥವಾಗಿ ನಿರೂಪಿಸುತ್ತದೆ. ಮಾದರಿಯ ಶಾಬ್ದಿಕ ರೂಪ ಈ ಕೆಳಕಂಡಂತಿವೆ.

1. ಯಾರೋ ಒಬ್ಬ
2. ಸಂಗತಿಯೊಂದನ್ನು ಗ್ರಹಿಸುತ್ತಾನೆ
3. ಮತ್ತು ಪ್ರತಿಕ್ರಿಯಿಸುತ್ತಾನೆ
4. ಸನ್ನಿವೇಶವೊಂದರಲ್ಲಿ
5. ಯಾವುದೋ ರೀತಿಯಿಂದ
6. ವಿಷಯ ವಸ್ತುಗಳನ್ನು ಲಭ್ಯಮಾಡಿಕೊಳ್ಳಲು
7. ಯಾವುದೋ ರೂಪದಲ್ಲಿ
8. ಮತ್ತು ಭೂಮಿಕೆಯಲ್ಲಿ
9. ವಿಷಯವನ್ನು ತಿಳಿಸುತ್ತಾನೆ
10. ಯಾವುದೋ ಪರಿಣಾಮದೊಂದಿಗೆ

ಸಂಗತಿಯನ್ನು ಗ್ರಹಿಸುವ ಮೂಲ(ಯಾರೋ ಒಬ್ಬ)ದೊಂದಿಗೆ ಈ ಮಾದರಿಯು ಪ್ರಾರಂಭಗೊಳ್ಳುತ್ತದೆ. ಈ ಸಂಗತಿಯ ಸಂಪೂರ್ಣ ಗ್ರಹಿಕೆಯಾದೊಡನೆ, ಆ ಸನ್ನಿವೇಶಕ್ಕೆ ಸರಿಹೊಂದುವ ಯಾವುದೋ ಒಂದು ರೀತಿಯಲ್ಲಿ ಆತ ಪ್ರತಿಕ್ರಿಯೆ ನೀಡುತ್ತಾನೆ. ಆತನ ಪ್ರತಿಕ್ರಿಯೆಯು ಆ ನಿರ್ದಿಷ್ಟ ರೂಪದ ಸನ್ನಿವೇಶಕ್ಕೆ ಹೇಗೋ ಸರಿಹೊಂದುವಂತಹ ಸಂದೇಶವೊಂದರ ಸೃಷ್ಟಿಗೆ ಕಾರಣವಾಗುತ್ತದೆ. ಸಂವಹನದ ನಂತರ ಮೂಲ ಕರ್ತೃವಿನ ಈ ಸಂದೇಶಕ್ಕೆ ಯಾವುದಾದರೂ ಒಂದು ಪ್ರತಿಫಲ ಫಲಿತಾಂಶ ಇರುತ್ತದೆ. ಉದಾಹರಣೆಗೆ, ನೀವು (ಯಾರೋ ಒಬ್ಬ) ಪಾನಮತ್ತನಾದ ಚಾಲಕನೊಬ್ಬ ವ್ಯಕ್ತಿಯೊಬ್ಬನಿಗೆ ಡಿಕ್ಕಿ ಹೊಡೆಯುವುದನ್ನು ನೋಡುತ್ತೀರಿ (ಸಂಗತಿ ಘಟನೆಯ ಗ್ರಹಿಕೆ), ಆರಕ್ಷಕ ಠಾಣೆಗೆ ಧಾವಿಸಿ ಒಂದು ದೂರನ್ನು ದಾಖಲಿಸುತ್ತೀರಿ (ಯಾವುದೋ ರೀತಿಯಿಂದ ಸನ್ನಿವೇಶಕ್ಕೆ ನೀಡುವ ಪ್ರತಿಕ್ರಿಯೆ). ನಿಮ್ಮ ಗ್ರಹಿಕೆಯ ಅನ್ವಯ ಪ್ರಾಥಮಿಕ ಅನ್ವೇಷಣಾ ವರದಿಯು ದಾಖಲಾಗುತ್ತದೆ (ಯಾವುದೋ ರೂಪ ಮತ್ತು ಭೂಮಿಕೆಯಲ್ಲಿ ವಸ್ತು / ವಿಷಯಗಳನ್ನು ಲಭ್ಯಮಾಡಿಕೊಳ್ಳುವುದು). ನೀವು ನಿಮ್ಮ ಸಾಕ್ಷ್ಯವನ್ನು ಪೋಲಿಸರಿಗೆ ತಿಳಿಸುತ್ತೀರಿ (ವಿಷಯವನ್ನು ತಿಳಿಸುವುದು). ನಿಮ್ಮ ಪ್ರಾಥಮಿಕ ಅನ್ವೇಷಣಾ ವರದಿಯಂತೆ ಪೋಲಿಸರು ಕ್ರಮಕೈಗೊಳ್ಳುತ್ತಾರೆ (ಯಾವುದೋ ಒಂದು ಪರಿಣಾಮದೊಂದಿಗೆ).




ಚಿತ್ರ 3.4 ಸಂವಹನದ ಗರ್ಬ್ನರ್ ಮಾದರಿ

ಗ್ರಹಿಕೆಯ ಒಂದು ಕ್ರಿಯೆಯೊಡನೆ ಈ ಮಾದರಿಯು ಆರಂಭಗೊಳ್ಳುತ್ತದೆ. ವಿಷಯಗ್ರಾಹಕ (M) ಘಟನೆ (E)ಅನ್ನು ಗ್ರಹಿಸುತ್ತಾನೆ. ಘಟನೆ Eಯ ಅವನ ಗ್ರಹಿಕೆಯನ್ನು E1 ಎಂದು ಹೆಸರಿಸಲಾಗಿದೆ. M, E ಮತ್ತು E1ಗಳ ಮಧ್ಯದ ಸಂಬಂಧದ ವಿಷಯ 'ಗ್ರಹಿಕೆ'. ಇದನ್ನು ವಿವರಿಸಲು ಗರ್ಬ್ನರ್ ಎರಡು ಮಾರ್ಗಗಳನ್ನು ಬಳಸುತ್ತಾರೆ. ಮೊದಲನೆಯದು ವ್ಯವಹಾರಿಕ ರೀತಿ. ಇದರಲ್ಲಿ E1 ಎಂಬುದು Mನ ಕಲ್ಪನೆ (ನಂಬುಗೆ), ವಿಚಾರ ಮಾಡುವ ರೀತಿ, ಹಿನ್ನೆಲೆ ಮತ್ತಿತರ ಅಂಶಗಳನ್ನು ಆಧರಿಸಿದೆ. Mಗೆ ಮತ್ತು E1ಗಳು ಹೇಗೆ ಕಾಣಿಸುತ್ತದೆ ಎಂಬುದು Mನಲ್ಲಿ ಇರುವ ಗುಣಧರ್ಮಗಳ ಮೇಲೆ ಅವಲಂಬಿತವಾಗಿದೆ.

ಎರಡನೆಯದೆಂದರೆ, ಮನೋವೈಜ್ಞಾನಿಕ ರೀತಿ. ಸೂಕ್ತವಾದ ಪರಿಸ್ಥಿತಿಗಳಲ್ಲಿ ನಿಷ್ಠೆ ಮತ್ತು ಅನುರೂಪತೆಯನ್ನು ಪ್ರಚೋದಿಸುವ ಇದರಲ್ಲಿ, Eಯೇ ಅತ್ಯಂತ ಮುಖ್ಯವಾದ ಘಟಕ. M ಯಾವ ಸನ್ನಿವೇಶದಲ್ಲಿ Eಯನ್ನು ನೋಡುತ್ತಾನೋ ಅದರ ಮೇಲೂ Mನ ಗ್ರಹಿಕೆ ಅವಲಂಬಿತವಾಗಿರುತ್ತದೆ.


ಮುಂದಿನ ಹಂತದಲ್ಲಿ M, ತನ್ನ ಗ್ರಹಿಕೆ (E1)ಯನ್ನು ಬೇರೊಬ್ಬರೊಂದಿಗೆ (M2) ಸಂವಹಿಸಲು ಉತ್ಸುಕನಾಗುತ್ತಾನೆ. ಹೀಗಾಗಿ, M ತನ್ನ ಸಂದೇಶ SE (ಸಂಗತಿ ಕುರಿತಾದ ಹೇಳಿಕೆ)ಯಯನ್ನು ಸಿದ್ಧಪಡಿಸುತ್ತಾನೆ. ಇಲ್ಲಿ S ಎಂದರೆ ಸಂದೇಶದ ರೂಪ, ಮತ್ತು E ಎಂದರೆ ಅಡಕವಾದ ವಿಷಯ, ತನ್ನ SE ಯನ್ನು ಸಂವಹಿಸಲು, ಸ್ವಲ್ಪಮಟ್ಟಿಗೆ ತನ್ನ ಹತೋಟಿಯನ್ನು ಹೊಂದಿರಬಹುದಾದ ಸಂವಹನ ಮಾಧ್ಯಮವನ್ನು (ಗಳನ್ನು) M ಬಳಸಿಕೊಳ್ಳುತ್ತಾನೆ. M2, Mನ ಸಂವಹನವಾದ SEಯನ್ನು SE1ಆಗಿ ಗ್ರಹಿಸುತ್ತಾನೆ.

ಮಾನವನ ಸಂವಹನ ವ್ಯವಸ್ಥೆಗಳು 'ತೆರೆದ ವ್ಯವಸ್ಥೆಗಳು' ಎಂಬುದಾಗಿ ಈ ಮಾದರಿಯು ಸೂಚಿಸುತ್ತದೆ. ನಮ್ಮ ಬಹಳಷ್ಟು ಸಂವಹನಗಳು ಸಂಗತಿಗಳ ಬಗೆಗಿನ ನಮ್ಮ ಸಂವೇದನೆಗಳನ್ನು ಅವಲಂಬಿಸಿರುತ್ತವೆ. ಇವು ನಮ್ಮ ಜೀವನಾನುಭವಗಳ ಮೇಲೆ ಆಧಾರಿತವಾಗಿರುತ್ತವೆ. ಮಾನವ ಸಂವಹನ ಪ್ರಕ್ರಿಯೆಯ ಈ ಮಾದರಿಯನ್ನು ಗ್ರಹಿಕೆ-ಉತ್ಪಾದನೆ-ಗ್ರಹಿಕೆಯ ಸರಪಳಿಯಾಗಿ ನಿರೂಪಿಸಬಹುದು.

ಮಾದರಿಯು ವಿವರಿಸುವ ಸಂವಹನ ಸನ್ನಿವೇಶಗಳ ಸ್ವರೂಪವನ್ನು ಆಧರಿಸಿ, ಬೇರೆ ಬೇರೆ ರೀತಿಯ ಆಕಾರಗಳನ್ನು ಈ ಮಾದರಿಗೆ ನೀಡಬಹುದು. ಹೀಗಾಗಿ, ಈ ಮಾದರಿಯು ಬಹುಮುಖೀಯವೂ, ಹಲವಾರು ಸಂದರ್ಭ ಸನ್ನಿವೇಶಗಳಿಗೆ ಹೊಂದಿಕೊಳ್ಳುವಂತಹುದೂ ಆಗಿದೆ. ಈ ಮೇಲಿನ ಮಾದರಿಯನ್ನು ಬಹಳ ಚೆನ್ನಾಗಿ ವಿವರಿಸುವ ಒಂದು ಉದಾಹರಣೆ ಈ ಕೆಳಕಂಡಂತಿದೆ. E ಎನ್ನುವುದು 'ವಾರ್ತೆ' ಯೂ ಮತ್ತು M ಎನ್ನುವುದು ಸ್ಟಾರ್‌ನ್ಯೂಸ್ ವಾಹಿನಿಯೂ ಆಗಿರಲಿ. ಸ್ಟಾರ್‌ನ್ಯೂಸ್ ವಾಹಿನಿಯಲ್ಲಿ ಮೂಡಿಬರುವ ವಾರ್ತಾಪ್ರಸಾರ ಕಾರ್ಯಕ್ರಮ SE ಆಗಿರಲಿ. M2 ಎನ್ನುವುದು ಮಾಧ್ಯಮ ಪ್ರೇಕ್ಷಕರಾಗಿರಲಿ. ಈಗ ನಾವು E ಮತ್ತು SEಗಳ ಸಮಾನಾರ್ಥವನ್ನು ಪರೀಕ್ಷಿಸಬಹುದು. (ವಾಸ್ತವ ಮತ್ತು ಯಾವುದೇ ವಿಷಯ ಕುರಿತಂತೆ ಸ್ಟಾರ್‌ನ್ಯೂಸ್ ನೀಡಿದ ವಾರ್ತಾ ವಿವರಗಳು). ಪ್ರೇಕ್ಷಕರು (M2) ಯಾವುದೇ ಸಂದೇಹಗಳಿಲ್ಲದಂತೆ, ಮಾಧ್ಯಮದಲ್ಲಿ ಅಡಕವಾದ ವಸ್ತು ವಿಷಯ (SE)ಗಳನ್ನು ಅರ್ಥ ಮಾಡಿಕೊಳ್ಳುತ್ತಾರೆಯೇ? ವಾಹಿನಿಯು ಸಂವಹನದ ಅರ್ಥದಲ್ಲಿ ಯಾವುದಾದರೂ ವಿರೂಪತೆ ಇದೆಯೇ? ಪ್ರೇಕ್ಷಕರು ಗ್ರಹಿಸಿಕೊಂಡ ಅರ್ಥದಲ್ಲಿ ಯಾವುದಾದರೂ ವಿರೂಪತೆ ಇದೆಯೇ?

## 3.3.5 ನ್ಯೂಕಾಂಬ್‌ರ ABX ಮಾದರಿ

ಈ ಮಾದರಿಯು ಇಬ್ಬರು ವ್ಯಕ್ತಿಗಳ ನಡುವಿನ ಸಂವಹನದ ಸಂಬಂಧಗಳನ್ನು ವಿವರಿಸುತ್ತದೆ. ಇಬ್ಬರು ವ್ಯಕ್ತಿಗಳ ನಡುವೆ ಇರುವ ಮೂರನೆಯ ವ್ಯಕ್ತಿ ಅಥವಾ ವಸ್ತುವಿನೊಡನೆ ಸಾಪೇಕ್ಷವಾಗಿ ಇರಬಹುದಾದ ಸಂಬಂಧಗಳ ಏಕರೂಪತೆ ಮತ್ತು ಅಸಾಂಗತ್ಯಗಳನ್ನು ಪರೀಕ್ಷಿಸಿದ ಮನೋವಿಜ್ಞಾನಿ ಹೈಡರ್ ಅವರ ಕಾರ್ಯದ ವಿಸ್ತರಣೆಯೇ 1953ರಲ್ಲಿ ನ್ಯೂಕಾಂಬ್ ಅವರಿಂದ ರೂಪಿತವಾದ ಈ ಮಾದರಿ. ಪ್ರಸಕ್ತ, ಇಬ್ಬರು ವ್ಯಕ್ತಿಗಳು ಪರಸ್ಪರ ಮೆಚ್ಚಿಕೊಳ್ಳುವುದಾದರೆ, ಸಂಬಂಧಿತವಾದ ಮೂರನೆಯ ವ್ಯಕ್ತಿ / ವಸ್ತುವಿನ ಬಗ್ಗೆಯೂ ಅದೇ ರೀತಿಯ ಭಾವನೆ ತುಂಬಿಕೊಂಡು ಆ ಸಂಬಂಧಗಳು ಸಮತೋಲಿತವಾಗಿರುತ್ತವೆ. ಇಬ್ಬರು ವ್ಯಕ್ತಿಗಳು ಪರಸ್ಪರರಲ್ಲಿ ಮತ್ತು ಮೂರನೆಯ ವ್ಯಕ್ತಿ / ವಸ್ತುವಿನ ಬಗ್ಗೆ ಮೆಚ್ಚುಗೆ ಹೊಂದಿರದವರಾಗಿದ್ದರೆ, ಅವರುಗಳ ಸಂಬಂಧದ ಕೆಲವು ನಮೂನೆಗಳು ಅಸಮತೋಲಿತವಾಗಿರುತ್ತವೆ. ಅವನ ಅಥವಾ ಅವಳ ಸಂಬಂಧಗಳಲ್ಲಿ ಅಸಮತೋಲನ ಇರುವ ಸಂದರ್ಭಗಳಲ್ಲಿ ಪ್ರತಿ ವ್ಯಕ್ತಿಯೂ ಸಮತೋಲನ ಸಾಧಿಸಲು ಪ್ರಯತ್ನಿಸುತ್ತಾನೆ. ಈಗಾಗಲೇ ಸಂಬಂಧಗಳು ಸಮತೋಲಿತವಾಗಿದ್ದರೆ, ಈ ಸಾಮರಸ್ಯವನ್ನು ಹಾಳುಗೆಡಹುವ ಅಂಶಗಳಿಗೆ ಪ್ರತಿರೋಧ ಒಡ್ಡುವ ಪ್ರಯತ್ನಗಳನ್ನು ಮಾಡಲಾಗುತ್ತದೆ.




**ಚಿತ್ರ 3.5 ನ್ಯೂಕಾಂಬ್ ಮಾದರಿ**

A ಮತ್ತು B ಪರಸ್ಪರರಲ್ಲಿಯೂ ಮತ್ತು ವಸ್ತು X ನೊಂದಿಗೂ ಅಭಿಮುಖಿರಾಗಿರುವ ಇಬ್ಬರು ವ್ಯಕ್ತಿಗಳು (ನ್ಯೂಕಾಂಬ್ 1953).

ನ್ಯೂಕಾಂಬ್ ಅವರು ಇಬ್ಬರು ಅಥವಾ ಹೆಚ್ಚು ಜನರ ಸಂವಹನಕ್ಕೆ ಹೈಡರ್ ಅವರ ಸಿದ್ಧಾಂತವನ್ನು ಅನ್ವಯಿಸಿದರು. ಮೂರನೆಯ ವಸ್ತು / ವಿಷಯ / ವ್ಯಕ್ತಿಯನ್ನು ಕುರಿತಂತೆ ಇಬ್ಬರು ವ್ಯಕ್ತಿಗಳಲ್ಲಿ ಅಸಮ್ಮತಿ ಇದ್ದರೆ, ಅವರಿಬ್ಬರೂ ಸಂವಹನದಲ್ಲಿ ತೊಡಗಿಕೊಂಡು ಅದಕ್ಕೆ ಪರಿಹಾರ ಕಂಡುಕೊಳ್ಳುವ ಪ್ರಯತ್ನ ಮಾಡುತ್ತಾರೆ. ಈ ರೀತಿಯಾಗಿ, ಇಬ್ಬರು ಅಥವಾ ಹೆಚ್ಚು ಜನರು ತಮ್ಮ ತಮ್ಮಲ್ಲಿ ಮತ್ತು ಹೊರ ಪರಿಸರದ ವಸ್ತುಗಳ ಬಗ್ಗೆ ಏಕಕಾಲಕ್ಕೆ ಅನುರೂಪತೆಯನ್ನು ಕಾಪಾಡಿಕೊಳ್ಳಲು ಸಾಧ್ಯವಾಗುವಂತೆ ಮಾಡುವ ಮಹತ್ವದ ಕಾರ್ಯವನ್ನು ಸಂವಹನ ಮಾಡುತ್ತದೆ. ಅಂದರೆ, ಪ್ರತಿಕ್ರಿಯೆ ಸಂವಹನವಾಗುತ್ತದೆ. ಸಂದೇಹ ಮತ್ತು ಅಸಮ್ಮತಿ ಇರುವಂತಹ ಸಂದರ್ಭಗಳಲ್ಲಿ ಸಂವಹನದ ಚಟುವಟಿಕೆಗಳು ಹೆಚ್ಚಾಗಿ ಕಂಡುಬರುತ್ತವೆ.

A ಮತ್ತು B ಎಂಬ ಇಬ್ಬರು ವ್ಯಕ್ತಿಗಳು ತ್ರಿಭುಜವೊಂದರ ಎರಡು ಬಾಹುಗಳಲ್ಲಿ ಇರುವುದು ಈ ಮಾದರಿಯ ನಕ್ಷಾ ರೂಪದ ನಿರೂಪಣೆ. A ಮತ್ತು Bಗೆ ಸಮಾನವಾದ ಪರಿಸರದಲ್ಲಿರುವ ವಸ್ತು ತ್ರಿಭುಜದ ಮೂರನೆಯ ಬಾಹುವಿನಲ್ಲಿರುತ್ತದೆ. ಈ ಪರಿಸರದಲ್ಲಿ A ಮತ್ತು Bಗಳ ನಡುವಿನ ಸಮರೂಪತೆಯನ್ನು ಕಾಪಾಡಿಕೊಳ್ಳುವುದರಿಂದ ಸಂವಹನವು ಆಚರಣೆಗೆ ಬರುತ್ತದೆ. ಇಬ್ಬರು ವ್ಯಕ್ತಿಗಳ ನಡುವಿನ ಯಾವುದೇ ಭಿನ್ನತೆ ಅಥವಾ ವ್ಯತ್ಯಾಸಗಳನ್ನು ಕುರಿತಂತೆ ಮಾಹಿತಿಯ ವಿನಿಮಯಕ್ಕೆ ಸಂವಹನವು ಸಹಾಯಮಾಡುವುದಲ್ಲದೆ, ಅವರಿಬ್ಬರ ನಡುವಿನ ಸ್ಥಿರತೆಯನ್ನು ಕಾಪಾಡುತ್ತದೆ. ಸಂವಹನವು ಪ್ರಾರಂಭಗೊಳ್ಳುವ ಸಾಧ್ಯತೆ ಇರುವ ಸಂದರ್ಭಗಳನ್ನು ನ್ಯೂಕಾಂಬ್ ಊಹಿಸಿದ್ದಾರೆ.

ಅ. ಎಲ್ಲಿ ವ್ಯಕ್ತಿಗಳ ನಡುವೆ ಬಹಳ ಶಕ್ತಿಶಾಲಿಯಾದ ಆಕರ್ಷಣೆ ಇರುತ್ತದೋ,

ಆ. ಎಲ್ಲಿ 'X' ಎಂಬ ವಸ್ತು ಸಹಭಾಗಿಗಳಲ್ಲಿ ಕನಿಷ್ಠ ಪಕ್ಷ ಒಬ್ಬರಿಗೆ ಅವಶ್ಯವೆನಿಸುವುದೋ ಅಥವಾ


ಇ. ಎಲ್ಲಿ 'X' ಇಬ್ಬರಿಗೂ ಪ್ರಸಕ್ತವಾಗುವುದೋ ಅಲ್ಲಿ.

ತಮ್ಮಲ್ಲಿ ಇರುವ ನಂಬುಗೆಗಳು ಅಥವಾ ಮನೋಧರ್ಮಗಳನ್ನೇ ಸದೃಢಗೊಳಿಸುವಂತಹ ಮಾಹಿತಿಯನ್ನು ತಮ್ಮದೇ ಪರಿಸರದಲ್ಲಿ ಜನರು ಹುಡುಕುತ್ತಾರೆ ಎಂಬುದನ್ನು ಈ ಮಾದರಿಯು ಸೂಚಿಸುತ್ತದೆ. ತಮ್ಮದೇ ಅಭಿಪ್ರಾಯಗಳನ್ನು ಸ್ಥಿರೀಕರಿಸುವಂತಹ ಮಾಹಿತಿ ಮೂಲಗಳಿಗಾಗಿ ಜನರು ಎದುರು ನೋಡುವ ಸಾಧ್ಯತೆಗಳೇ ಹೆಚ್ಚು. ಉದಾಹರಣೆಗೆ, ಒಂದು ನಿರ್ದಿಷ್ಟ ಬ್ರಾಂಡ್‌ನ ಕಾರನ್ನು ಕೊಳ್ಳಬೇಕೆಂದು ನಿರ್ಧರಿಸಿರುವ ಒಬ್ಬ ವ್ಯಕ್ತಿ, ಅವನ ನಿರ್ಣಯಕ್ಕೆ ಬೆಂಬಲ ನೀಡುವ ಅಥವಾ ಅದನ್ನೇ ದೃಢಪಡಿಸುವಂತಹ ಮಾಹಿತಿಗಳನ್ನೇ ಎದುರು ನೋಡುತ್ತಿರುತ್ತಾನೆ. ಮಾಧ್ಯಮಗಳ ಸಂದೇಶಗಳಿಗೆ ಅರಿಸಿಕೊಂಡು ತೆರೆದುಕೊಳ್ಳುವುದಕ್ಕೂ, ಗ್ರಹಿಸುವುದಕ್ಕೂ ಅವಕಾಶ ನೀಡುತ್ತದೆ.

## 3.4 ಸಮೂಹ ಮಾಧ್ಯಮಗಳು ಮತ್ತು ವೈಯಕ್ತಿಕ ಪ್ರಭಾವದ ಮಾದರಿಗಳು

### 3.4.1 ಕಾಟ್ಜ್ ಮತ್ತು ಲಾಜರ್‌ಫೆಲ್ಡ್ ಸಮೂಹ ಮಾಧ್ಯಮಗಳು ಮತ್ತು ವೈಯಕ್ತಿಕ ಪ್ರಭಾವದ ಎರಡು ಹಂತದ ಹರಿವಿನ ಮಾದರಿ

1940ರಲ್ಲಿ ಅಮೇರಿಕ ಸಂಯುಕ್ತ ಸಂಸ್ಥಾನಗಳ ಅಧ್ಯಕ್ಷೀಯ ಚುನಾವಣೆಯ ಪ್ರಚಾರ ಕಾರ್ಯಕ್ರಮದ ಸಂದರ್ಭದಲ್ಲಿ ಸಮೂಹ ಸಂವಹನ ಕುರಿತಂತೆ ನಡೆದ ಅಧ್ಯಯನಗಳಿಂದ ಈ ಮಾದರಿಯು ರೂಪುಗೊಂಡಿದೆ. ಎರಡು ಹಂತದಲ್ಲಿ ಹರಿಯುವ ಸಂವಹನ ಮತ್ತು ಅಭಿಪ್ರಾಯ ನೇತಾರರ ಕಲ್ಪನೆಯನ್ನು ಈ ಮಾದರಿಯು ಮೂಡಿಸುತ್ತದೆ. ಸಂದೇಶಗಳಿಗೆ ಸಂಬಂಧಿಸಿದೆ, ಸಮೂಹ ಮಾಧ್ಯಮಗಳಿಗಿಂತ ಹೆಚ್ಚಿನ ಪ್ರಭಾವವು ವ್ಯಕ್ತಿಗಳ ನಡುವಿನ ಸಂವಹನಕ್ಕೆ ಇದೆ ಎಂದು ಆ ಕಾಲಕ್ಕೆ ಭಾವಿಸಲಾಗಿತ್ತು. ರೇಡಿಯೋ ಮತ್ತು ಮುದ್ರಣದಂತಹ ಸಮೂಹ ಮಾಧ್ಯಮಗಳಿಂದ ಹೊಸ ಹೊಳಹುಗಳು ಸಂದೇಶಗಳು ಮೊದಲು ಅಭಿಪ್ರಾಯ ನೇತಾರರಿಗೂ, ನಂತರ ಅವರಿಂದ ಸಮಾಜದ ಇತರರಿಗೂ ಹರಿಯುತ್ತದೆ ಎಂದು ಅಂಗೀಕರಿಸಲಾಯಿತು. ಈ ಮಾದರಿಯನ್ನು ನಕ್ಷಾ ರೂಪದಲ್ಲಿ ಹೀಗೆ ನಿರೂಪಿಸಬಹುದು.




◯ = ಅಭಿಪ್ರಾಯ ನೇತಾರ

○ = ಅಭಿಪ್ರಾಯ ನೇತಾರರೊಂದಿಗೆ ಸಂಪರ್ಕ ಹೊಂದಿರುವ ವ್ಯಕ್ತಿಗಳು

**ಚಿತ್ರ 3.6 ಮಾಧ್ಯಮ ಪ್ರಭಾವದ ಎರಡು ಹಂತದ ಹರಿವು**

ಜನರು ಸಮಾಜ ವ್ಯವಸ್ಥೆಯ ಅವಿಭಾಜ್ಯ ಅಂಗಗಳೆಂದೂ, ಅವರು ಒಬ್ಬರೊಂದಿಗೆ ಒಬ್ಬರು ಸಂಪರ್ಕ ಹೊಂದಿರುತ್ತಾರೆಂದೂ, ಈ ಮಾದರಿಯು ಕಲ್ಪಿಸಿಕೊಳ್ಳುತ್ತದೆ. ಹೀಗೆ ಸಂಪರ್ಕಹೊಂದಿರುವುದರಿಂದ ತಮ್ಮ ಭಾವನೆಗಳನ್ನು ಮತ್ತು ಅಭಿಪ್ರಾಯಗಳನ್ನು ಪರಸ್ಪರ ಹಂಚಿಕೊಳ್ಳುವುದು ಸಾಧ್ಯವಾಗುತ್ತದೆ. ಸಮೂಹ ಮಾಧ್ಯಮಗಳಲ್ಲಿ ಮೂಡಿಬಂದ ಸಂದೇಶಗಳಿಗೆ ಜನರು ನೀಡುವ ಪ್ರತಿಕ್ರಿಯೆಯು ಸಮಾಜದಲ್ಲಿನ ಅವರ ಸಂಬಂಧಗಳಿಂದ ಪ್ರಭಾವಿತವಾಗಿರುತ್ತವೆ. ಆದರೆ, ಸಂದೇಶದ ಸ್ವೀಕಾರ ಅಥವಾ ತಿರಸ್ಕಾರವು, ಹಲವಾರು ಇತರ ಅಂಶಗಳ ಮೇಲೆ ಅವಲಂಬಿತವಾಗಿರುತ್ತದೆ. ನಿರ್ದಿಷ್ಟವಾದ ಸಂದೇಶವೊಂದಕ್ಕೆ ಕೇವಲ ತೆರೆದುಕೊಂಡ ಮಾತ್ರಕ್ಕೆ ಅದರ ಸ್ವೀಕಾರವೇನೂ ಖಾತ್ರಿಯಾಗುವುದಿಲ್ಲ. ವ್ಯಕ್ತಿಯು ತನಗೆ ತಾನೇ ಅಥವಾ ಬೇರೆಯವರೊಂದಿಗೆ ಚರ್ಚಿಸಿ ಸಂದೇಶವನ್ನು ಸ್ವೀಕರಿಸುವ ಅಥವಾ ತಿರಸ್ಕರಿಸುವ ನಿರ್ಣಯವನ್ನು ತೆಗೆದುಕೊಳ್ಳುತ್ತಾನೆ.

ಅದೇ ರೀತಿಯಾಗಿ, ನಿರ್ದಿಷ್ಟ ಸಂದೇಶವನ್ನು ಸಮೂಹ ಮಾಧ್ಯಮಗಳಿಂದ ನೇರವಾಗಿ ಪಡೆಯದಿದ್ದರೂ, ಮಾಧ್ಯಮಗಳಲ್ಲಿ ಮೂಡಿಬಂದ ಸಂದೇಶಗಳಿಗೆ ತೆರೆದುಕೊಂಡ ಸ್ನೇಹಿತರಿಂದ ಮಾಹಿತಿಯನ್ನು ಪಡೆದು, ನಂತರದಲ್ಲಿ ಆ ವ್ಯಕ್ತಿಯು ಸಂದೇಶವನ್ನು ಸ್ವೀಕರಿಸಲೂಬಹುದು. ಈ ಮಾದರಿಯು ವ್ಯಕ್ತಿಗಳನ್ನು ಎರಡು ಗುಂಪುಗಳಾಗಿ ವರ್ಗೀಕರಿಸುತ್ತದೆ. ಎರಡೂ ವರ್ಗದ ವ್ಯಕ್ತಿಗಳಿಗೆ ಪ್ರತ್ಯೇಕವಾಗಿ ಬೇರೆ ಬೇರೆ ಸ್ಥಾನಮಾನ ನೀಡುತ್ತದೆ. ಮಾಧ್ಯಮಗಳಿಗೆ ಜನರು ತೆರೆದುಕೊಳ್ಳುವ ಆಧಾರದ ಮೇಲೆ ಸಮಾಜದಲ್ಲಿನ ವ್ಯಕ್ತಿಗಳನ್ನು ಎರಡು ಗುಂಪುಗಳಾಗಿ ವಿಭಾಗ ಮಾಡಬಹುದು ಎಂದು ಈ ಮಾದರಿಯು ಹೇಳುತ್ತದೆ. ಕೆಲವು ಜನ ಉಳಿದವರಿಗಿಂತ ಹೆಚ್ಚು ಸಮೂಹ ಮಾಧ್ಯಮಗಳ ಬಳಕೆ ಮಾಡುತ್ತಾರೆ.

ಇವರು ಸಮಾಜದಲ್ಲಿ ಮಾಹಿತಿಯ ಪ್ರಾಥಮಿಕ ಆಕರಗಳಾಗುತ್ತಾರೆ. ಮಾಧ್ಯಮಗಳನ್ನು ವಿರಳವಾಗಿ ಬಳಸುವ ಜನ ಇಂಥಹವರಿಂದ ವಿವಿಧ ರೀತಿಯ ಮಾಹಿತಿಗಳನ್ನು ಪಡೆಯುತ್ತಾರೆ. ಮಾಧ್ಯಮಗಳಿಂದ ಪಡೆದ ಮಾಹಿತಿಯನ್ನು ಬಳಕೆ ಮಾಡುವುದರಲ್ಲಿ ಹೆಚ್ಚು ಕಾರ್ಯಶೀಲರಾಗಿ ಪಾತ್ರ ವಹಿಸುವ ಜನರನ್ನು ಅಭಿಪ್ರಾಯ ನೇತಾರರೆಂದು ಕರೆಯಲಾಗುತ್ತದೆ.


ಅಭಿಪ್ರಾಯ ನೇತಾರರು ಎಂದರೆ, ಹೊಸ ಹೊಳಹನ್ನು / ಮಾಹಿತಿಯನ್ನು / ಅಭಿಪ್ರಾಯವನ್ನು ಸೃಜಿಸುವವರು ಎಂದಲ್ಲ. ಅವರು, ಬೇರೆಯವರ ಮೇಲೆ ಬಹಳಷ್ಟು ಪ್ರಭಾವವನ್ನು ಹೊಂದಿರುತ್ತಾರೆ. ಅವರು ಮಾಧ್ಯಮ ಮೂಲದ ಸಂದೇಶಗಳನ್ನು ರವಾನೆ ಮಾಡುವವರು ಮಾತ್ರ. ಅವರು ಬಹಳ ಚಟುವಟಿಕೆಯುಳ್ಳವರೂ, ಸಂಘಟಕರೂ ಆಗಿದ್ದು, ತಮ್ಮ ಗುಂಪಿನ ಇತರರ ಮೇಲೆ ಬಹಳ ಹೆಚ್ಚಿನ ಮಟ್ಟದ ಪ್ರಭಾವವನ್ನು ಹೊಂದಿದವರಾಗಿರುತ್ತಾರೆ. ಮಾಧ್ಯಮಗಳಿಗೆ ಕಡಿಮೆ ಪ್ರಮಾಣದಲ್ಲಿ ತೆರೆದುಕೊಂಡಿರುವಂತಹವರಿಗೆ ಅಭಿಪ್ರಾಯ ನೇತಾರರು ಮಾರ್ಗದರ್ಶಿಗಳಂತೆ ಕೆಲಸ ಮಾಡುತ್ತಾರೆ. ಒಟ್ಟಾರೆಯಾಗಿ ಹೇಳುವುದಾದರೆ ಈ ಮಾದರಿಯು ಸಂಕೀರ್ಣವಾದ ಸಾಮಾಜಿಕ ಬಂಧದ ಜಾಲದಲ್ಲಿ ಮಾಧ್ಯಮಗಳನ್ನು ಇಡುತ್ತದೆ. ಜನತೆಯ ಮೇಲೆ ಮಾಧ್ಯಮ ಸಂದೇಶಗಳ ಪ್ರಭಾವವು ಕಠಾಗತವಾದ ಇತರ ಸಶಕ್ತ ಸಾಮಾಜಿಕ ಅಂಶಗಳಿಂದ ನಿಯಂತ್ರಿಸಲ್ಪಡುತ್ತದೆ ಎಂಬುದನ್ನು ಈ ಮಾದರಿಯು ಪ್ರತಿಪಾದಿಸುತ್ತದೆ.

ವ್ಯಕ್ತಿಗಳನ್ನು ಕ್ರಿಯಾಶೀಲರು ಮತ್ತು ಕಡಿಮೆ ಕಾರ್ಯಚಟುವಟಿಕೆ ಉಳ್ಳವರು ಎಂದು ಪೃಥಕ್ಕರಿಸುವಾಗ, ಬೇರೆ ಬೇರೆ ಕಾಲದಲ್ಲಿ ಈ ಪಾತ್ರಗಳು ಅದಲು ಬದಲಾಗುವ ಸಾಧ್ಯತೆಗಳನ್ನು ಮಾದರಿಯು ನಿರ್ಲಕ್ಷಿಸುತ್ತದೆ. ಈಗ ಬಹಳ ಉತ್ಸಾಹದಿಂದ ಮಾಧ್ಯಮಗಳ ಬಳಕೆ ಮಾಡುತ್ತಿರುವ ಜನರು ಕಾಲಕ್ರಮದಲ್ಲಿ ನಿಷ್ಕ್ರಿಯರಾಗಿ ಅಭಿಪ್ರಾಯ ನೇತಾರರಾಗುವ ಸಾಧ್ಯತೆಗಳೂ ಉಂಟು.

ಕೆಲವೊಂದು ಸನ್ನಿವೇಶಗಳಲ್ಲಿ ಅಭಿಪ್ರಾಯ ನೇತಾರರು ತಾವೇ ಮಾಹಿತಿಯನ್ನು ಪಡೆಯುವವರೂ ಆಗಬೇಕಾಗಬಹುದು. ಅಭಿಪ್ರಾಯ ನೇತಾರರು, ಅವರಿಂದ ಮಾಹಿತಿ ಪಡೆಯುವ ಜನ, ಇಷ್ಟೇ ಅಲ್ಲದೆ, ಮಾಧ್ಯಮಗಳಿಂದಾಗಲೀ, ಅಭಿಪ್ರಾಯ ನೇತಾರರಿಂದಾಗಲೀ ಮಾಹಿತಿಯನ್ನೇ ಪಡೆಯದ, ಪಡೆದರೂ ಅದರ ಬಳಕೆ ಮಾಡದ ಜನರು ಸಮಾಜದಲ್ಲಿ ಇರುತ್ತಾರೆ. ಕೆಲವೊಮ್ಮೆ ಸಮೂಹ ಮಾಧ್ಯಮಗಳ ಪ್ರಭಾವವೇ ಬಹಳಷ್ಟಿದ್ದು, ಅಭಿಪ್ರಾಯ ನೇತಾರರ ಎರಡನೇ ಹಂತದ ಮೂಲಕ ಹಾದು ಹೋಗಬೇಕಾದ ಅವಶ್ಯಕತೆಯೂ ಇಲ್ಲದೆ ಹೋಗಬಹುದು. ಅಭಿಪ್ರಾಯ ನೇತಾರರಿಂದ ಜನ ಸಮುದಾಯಗಳು ಮಾಹಿತಿ ಪಡೆಯುತ್ತವೆ ಎಂಬುದನ್ನು ಈ ಮಾದರಿಯು ಪ್ರತಿಪಾದಿಸುತ್ತದೆ. ಆದರೆ ಜನಗಳ ನಡುವಿನ ಸಂಬಂಧ ಜಾಲವು ಹೆಚ್ಚು ಸಂಕೀರ್ಣವಾಗಿದ್ದು, ಇದಕ್ಕಿಂತ ಹೆಚ್ಚಿನ ಹಂತಗಳ ಮೂಲಕ ಹಾದು ಹೋಗಬೇಕಾಗಬಹುದು.

ಹೆಚ್ಚಿನ ಮಾಹಿತಿ ಹರಿವು, ಮಾಧ್ಯಮ ಸ್ವೀಕರಿಸಲ್ಪಡುವ ಮಟ್ಟ, ಜನರ ಪಾಲ್ಗೊಳ್ಳುವಿಕೆಯ ಮಟ್ಟ ಹಾಗು ಆಸಕ್ತಿಗಳು ನಿರ್ಣಾಯಕ ಅಂಶಗಳಾಗಿ ವರ್ತಿಸುವುದರಿಂದ ಅಭಿವೃದ್ಧಿಶೀಲ ರಾಷ್ಟ್ರಗಳಿಗಿಂತ, ಹೆಚ್ಚು ಮಾಧ್ಯಮ ವ್ಯವಸ್ಥೆಗಳಿದ್ದು ಕಡಿಮೆ ಬಿಕ್ಕಟ್ಟುಗಳಿರುವ ಅಭಿವೃದ್ಧಿ ಹೊಂದಿದ ರಾಷ್ಟ್ರಗಳಿಗೆ ಈ ಮಾದರಿಯು ಹೆಚ್ಚು ಚೆನ್ನಾಗಿ ಹೊಂದಿಕೊಳ್ಳುತ್ತದೆ.

## 3.4.2 ನಾವೀನ್ಯತೆಯ ಪ್ರಸರಣದ ರೋಜರ್ ಮತ್ತು ಶೂಮಾಕರ್ ಮಾದರಿ




**ಚಿತ್ರ 3.7 ನಾವೀನ್ಯತೆ -ಪ್ರಸರಣ ಪ್ರಕ್ರಿಯೆಯ ಸ್ತರದ ರೋಜರ್ ಮತ್ತು ಶೂಮಾಕರ್ ಮಾದರಿ, 1993.**

ನಾವೀನ್ಯತೆಗಳ ಪ್ರಸರಣ ಮತ್ತು ತತ್ಪರಿಣಾಮವಾಗಿ ಅದರ ಅಳವಡಿಕೆ - ಅನ್ವಯಗಳು ಮಾಧ್ಯಮ ಸಂಶೋಧನೆಯ ಪ್ರಮುಖ ಕಾಳಜಿಗಳಲ್ಲಿ ಒಂದಾಗಿವೆ. ಒಂದು ನಾವೀನ್ಯತೆಯು ಕೆಲವೊಂದು ಮಾಧ್ಯಮಗಳ ಮೂಲಕ ಕಾಲಕ್ರಮದಲ್ಲಿ ಸಮಾಜದ ಸದಸ್ಯರಿಗೆ ಸಂವಹನವಾಗುವ ಪ್ರಕ್ರಿಯೆಯೇ /ನಾವೀನ್ಯತೆಯ ಪ್ರಸರಣ ಎಂದು ನಿಷ್ಕರ್ಷಿಸಲಾಗುತ್ತದೆ. ಪ್ರಸರಣದ ಪ್ರಕ್ರಿಯೆಯಲ್ಲಿ ಪ್ರಮುಖವಾದ ನಾಲ್ಕು ಘಟಕಗಳಿವೆ. ಅವುಗಳೆಂದರೆ, ನಾವೀನ್ಯತೆ, ಸಂವಹನ ಮಾಧ್ಯಮಗಳು, ಕಾಲ ಮತ್ತು ವ್ಯವಸ್ಥೆ. ನಾವೀನ್ಯತೆ ಎಂದರೆ, ಸಮಾಜ ವ್ಯವಸ್ಥೆಗೆ ಹೊಸದಾದ ಒಂದು ಹೊಳಹು ಅಥವಾ ಕ್ರಿಯೆ. ಸೂಪರ್ ಮಾರ್ಕೆಟ್‌ನ ಮೂಲೆ ಮೂಲೆಯ ಮೇಲೆ ನಿಗಾ ಇಡುವ ಸ್ಕ್ಯಾನಿಂಗ್‌ನ ಹೊಸ ವ್ಯವಸ್ಥೆಯಿಂದ ಹಿಡಿದು, ಜನನ ನಿಯಂತ್ರಣದ ಹೊಸ ತಂತ್ರಗಳೂ ಇದರ ವ್ಯಾಪ್ತಿಯಲ್ಲಿ ಬರಬಹುದು. ಈ ನಾವೀನ್ಯತೆಗಳನ್ನು ಕುರಿತು ಮಾಹಿತಿಯನ್ನು ಜನತೆಗೆ ತಲುಪಿಸುವ ಸಾಧನಗಳೇ ಸಂವಹನ ಮಾಧ್ಯಮಗಳು. ಸಮೂಹ ಮಾಧ್ಯಮಗಳಾದ ರೇಡಿಯೋ, ಟೆಲಿವಿಷನ್, ವೃತ್ತಪತ್ರಿಕೆಗಳು ಹಾಗು ವ್ಯಕ್ತಿ-ವ್ಯಕ್ತಿಗಳ ನಡುವಿನ ಸಂವಹನ ಇವೆಲ್ಲವುಗಳನ್ನೂ ಪ್ರಸರಣದ ಉದ್ದೇಶಕ್ಕಾಗಿ ಬಳಸಿಕೊಳ್ಳಲಾಗುತ್ತದೆ. ಇಲ್ಲಿ 'ಕಾಲ' ಎಂದರೆ, ಸಮಾಜ ವ್ಯವಸ್ಥೆಯಲ್ಲಿ ನಾವೀನ್ಯತೆಯು ಪಸರಿಸುವ ಪ್ರಮಾಣ ಅಥವಾ ಜನತೆಯು ನಾವೀನ್ಯತೆಯನ್ನು ಗ್ರಹಿಸಲು, ಅಳವಡಿಸಿಕೊಳ್ಳಲು ತೆಗೆದುಕೊಳ್ಳುವ ಕಾಲ. ಸಮಾನ ಸಂಸ್ಕೃತಿಯನ್ನು ಹಂಚಿಕೊಳ್ಳುವಂತಹ ವ್ಯಕ್ತಿಗಳು ಅಥವಾ ಸಂಘ ಸಂಸ್ಥೆಗಳೇ ಸಮಾಜ ವ್ಯವಸ್ಥೆ. ಈ ಸಮಾಜ ವ್ಯವಸ್ಥೆಯ ಸದಸ್ಯರೇ ನಾವೀನ್ಯತೆಯ ಸಂಭವನೀಯ ಅಳವಡಿಕೆದಾರರು.

ವೈಜ್ಞಾನಿಕ ಸಂಸ್ಥೆಗಳ ಸಂಶೋಧನೆಗಳು, ಸಾರ್ವಜನಿಕ ಕಾರ್ಯನೀತಿಗಳಲ್ಲಿನ ಬದಲಾವಣೆಗಳು ಮುಂತಾದವುಗಳನ್ನು ಜನತೆಗೆ ತಲುಪಿಸುವ ಕಾರ್ಯ ಸಾಗುವುದು ಸಮೂಹ ಮಾಧ್ಯಮಗಳ ಪ್ರಯತ್ನಗಳಿಂದಲೇ. ಸಾಮಾನ್ಯವಾಗಿ ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ನಾವೀನ್ಯತೆಗಳ ಉದ್ದೇಶಿತ ಗುರಿ ಗ್ರಾಮೀಣ ಜನತೆಯೇ ಆಗಿರುತ್ತಾರೆ. ಕೃಷಿ, ಆರೋಗ್ಯ, ಸಾಮಾಜಿಕ ಮತ್ತು ರಾಜಕೀಯ ಜೀವನಗಳಿಗೆ ಈ ನಾವೀನ್ಯತೆಗಳು ಸಂಬಂಧಿಸಿರುತ್ತವೆ. ಮಾಧ್ಯಮ ಮೂಲಗಳಲ್ಲದೆ, ಸ್ನೇಹಿತರು, ನೆರೆಹೊರೆಯವರು ಮುಂತಾದವರನ್ನು ನಾವೀನ್ಯತೆಯ ಪ್ರಸರಣದ ಪರಿಣಾಮಕಾರಿ ಪ್ರತಿನಿಧಿಗಳೆಂದು ಪರಿಗಣಿಸಬೇಕಾಗುತ್ತದೆ.

'ನಾವೀನ್ಯತೆ - ಪ್ರಸರಣ' ಪ್ರಕ್ರಿಯೆಯಲ್ಲಿ ಸ್ಪಷ್ಟವಾಗಿ ನಾಲ್ಕು ಹಂತಗಳನ್ನು ರೋಜರ್ ಮತ್ತು ಶೂಮಾಕರ್ ಮಾದರಿ ಗುರುತಿಸುತ್ತದೆ. ಅವುಗಳೆಂದರೆ.

1. **ಜ್ಞಾನ/ಅರಿವು:** ನಾವೀನ್ಯತೆಯ ಅಸ್ತಿತ್ವದ ಬಗ್ಗೆ ವ್ಯಕ್ತಿಗೆ ಅರಿವು ಮೂಡಿಸುವ ಪ್ರಕ್ರಿಯೆಯು ಮೊದಲ ಹಂತ. ಇದು ಆತನಿಗೆ ನಾವೀನ್ಯತೆಯ ಕಾರ್ಯವಿಧಾನ ಮತ್ತು ಅನುಕೂಲಗಳ ಬಗ್ಗೆ ಪ್ರಾಥಮಿಕ ಜ್ಞಾನ ನೀಡುವುದು.

2. **ಮನವೊಲಿಕೆ:** ನಾವೀನ್ಯತೆಯ ಬಗ್ಗೆ ವ್ಯಕ್ತಿಗೆ ತಿಳುವಳಿಗೆ ನೀಡಿದ ನಂತರ, ಅದರ ಒಳಿತು ಕೆಡಕುಗಳನ್ನು ತುಲನಾತ್ಮಕವಾಗಿ ನೋಡಿ, ನಾವೀನ್ಯತೆಯ ಪರವಾದ ಅಥವಾ ವಿರುದ್ಧವಾದ ಅಭಿಪ್ರಾಯವನ್ನು ಆತ ರೂಪಿಸಿಕೊಳ್ಳುತ್ತಾನೆ.

3. **ನಿರ್ಧಾರಣ:** ನಾವೀನ್ಯತೆಯ ಬಗ್ಗೆ ಆತನ ಅಭಿಪ್ರಾಯ ಏನೇ ಇರಲಿ, ತನ್ನ ಮಿತ್ರರು ಮತ್ತು ನೆರೆಹೊರೆಯವರೊಂದಿಗೆ ಸಂವಹನದಲ್ಲಿ ತೊಡಗಿಕೊಂಡು, ನಾವೀನ್ಯತೆಯನ್ನು ಅಳವಡಿಸಿಕೊಳ್ಳುವ ಅಥವಾ ತಿರಸ್ಕರಿಸುವ ತನ್ನ ನಿರ್ಣಯವನ್ನು ಕೈಗೊಳ್ಳುತ್ತಾನೆ.

4. **ದೃಢೀಕರಣ:** ನಾವೀನ್ಯತೆಯನ್ನು ಕುರಿತಂತೆ ತಾನು ತೆಗೆದುಕೊಂಡಿರುವ ನಿರ್ಣಯವನ್ನು ದೃಢೀಕರಿಸಲು ವ್ಯಕ್ತಿ ಉತ್ಸುಕನಾಗಿರುತ್ತಾನೆ. ನಂತರದಲ್ಲಿ ವ್ಯತಿರಿಕ್ತವಾದ ಸಂದೇಶಗಳಿಗೆ ಒಡ್ಡಿಕೊಳ್ಳುವಂತಹ ಸಂದರ್ಭಗಳಲ್ಲಿ ಆತ ತೆಗೆದುಕೊಂಡಿರುವ ನಿರ್ಣಯ ಬದಲಾಗುವ ಸಾಧ್ಯತೆಗಳೂ ಉಂಟು.

'ನಾವೀನ್ಯತೆ - ಪ್ರಸರಣ' ದ ಪ್ರಕ್ರಿಯೆಯಲ್ಲಿ ಮೂರು ಹಂತಗಳಾದ ಹಿಂದಿನ ನಡಾವಳಿ, ಪ್ರಕ್ರಿಯೆ ಮತ್ತು ಪರಿಣಾಮ ಇವುಗಳನ್ನು ಈ ಮಾದರಿಯು ಪ್ರತ್ಯೇಕವಾಗಿ ಗುರುತಿಸುತ್ತದೆ.

ಅ. **ಹಿಂದಿನ ನಡಾವಳಿ:** ನಾವೀನ್ಯತೆಯ ಬಗೆಗಿನ ಮಾಹಿತಿಗೆ ವ್ಯಕ್ತಿಯೊಬ್ಬ ತೆರೆದುಕೊಳ್ಳುವಂತೆ ಮಾಡುವಂತಹ ಜನರನ್ನು ಒಳಗೊಳ್ಳುತ್ತದೆ. ನಾವೀನ್ಯತೆಯ ಅವಶ್ಯಕತೆಯನ್ನು ವ್ಯಕ್ತಿಯು ಅನುಭವಿಸುವಂತೆ ಮಾಡುವ ಸನ್ನಿವೇಶ ಎಂದೂ ಇದನ್ನು ಅರ್ಥೈಸಬಹುದು. ಪರಿವರ್ತನೆಯನ್ನು ಸುಲಭವಾಗಿ ಸ್ವಾಗತಿಸುವ ಅಥವಾ ಹೊಸ ಮಾಹಿತಿಗಾಗಿ ಎದುರುನೋಡುವ ಮಂದಿಯೇ ಅಂತಹ ಯಾವುದೇ ಹೊಸ ನಾವೀನ್ಯತೆಗಳನ್ನು ಸ್ವಾಗತಿಸುವವರಲ್ಲಿ ಮೊದಲಿಗರಾಗಿರುತ್ತಾರೆ.

ಆ. **ಪ್ರಕ್ರಿಯೆ:** ಕಲಿಕೆ, ಮನೋಧರ್ಮ ಪರಿವರ್ತನೆ ಮತ್ತು ನಿರ್ಣಯಗಳ ಈ ಪ್ರಕ್ರಿಯೆಯು, ನಾವೀನ್ಯತೆಗಳ ಅಳವಡಿಕೆಯ ಮೇಲೆ ಪ್ರಚಂಡವಾದ ಪ್ರಭಾವವನ್ನು ಹೊಂದಿದೆ. ನಾವೀನ್ಯತೆಯ ಗುಣಲಕ್ಷಣಗಳು ಮತ್ತು ಸಮಾಜ ವ್ಯವಸ್ಥೆಯ ಮೌಲ್ಯಗಳು ಪ್ರಕ್ರಿಯೆಯಲ್ಲಿ ಮಹತ್ವದ ಪಾತ್ರವನ್ನು ವಹಿಸುತ್ತದೆ.

ಇ. **ಪರಿಣಾಮಗಳು:** ನಾವೀನ್ಯತೆಯ ಅಳವಡಿಕೆಯ ನಂತರ ಅಥವಾ ತಿರಸ್ಕಾರದ ನಂತರದ ಸ್ಥಿತಿಯನ್ನು ಅಂದರೆ, ನಂತರದ ಅಳವಡಿಕೆ ಅಥವಾ ನಿಲ್ಲಿಸುವಿಕೆಯನ್ನು ಇದು ಸೂಚಿಸುತ್ತದೆ.


ನಾವೀನ್ಯತೆಯ ಪ್ರಸರಣದ ವಿವಿಧ ಹಂತಗಳಲ್ಲಿ, ಸಂವಹನದ ಹಲವಾರು ಮೂಲಗಳಾದ ಸಮೂಹ ಮಾಧ್ಯಮಗಳು, ಜಾಹೀರಾತಿನ ವಿಷಯಗಳು, ಸಾಮಾನ್ಯವಾದ ಅನಿರ್ಬಂಧಿತ ಸಾಮಾಜಿಕ ಸಂಪರ್ಕಗಳೇ ಮುಂತಾದ ಇತರ ಅಂಶಗಳೂ ಪಾತ್ರವಹಿಸುತ್ತವೆ. ಸಮೂಹ ಮಾಧ್ಯಮಗಳು ಮತ್ತು ಜಾಹೀರಾತುಗಳು ನಾವೀನ್ಯತೆ ಕುರಿತಂತೆ ಅರಿವು ಮೂಡಿಸಬಹುದು. ನೆಲಮಟ್ಟದಲ್ಲಿ ಕೆಲಸ ಮಾಡುತ್ತಿರುವ ಸಂಘಟನೆಗಳು ಮನವೊಲಿಕೆ ಮಾಡಬಹುದು ಮತ್ತು ಸ್ನೇಹಿತರು ಹಾಗೂ ನೆರೆಹೊರೆಯವರು ನಾವೀನ್ಯತೆಯನ್ನು ಅಳವಡಿಸಿಕೊಳ್ಳುವಂತೆ ಅಥವಾ ತಿರಸ್ಕರಿಸುವಂತೆ ಮನವೊಲಿಕೆ ಮಾಡಬಹುದು.

ನಾವೀನ್ಯತೆ ಪ್ರಸರಣವನ್ನು ಅಧ್ಯಯನ ಮಾಡಲು ಇದು ಒಂದು ಪ್ರಮುಖವಾದ ಮಾದರಿಯಾಗಿದೆ.

## 3.5 ಸಮೂಹ ಸಂಪರ್ಕದ ಪರಿಣಾಮಗಳ ಮಾದರಿಗಳು

### 3.5.1 ಕಾರ್ಯಸೂಚಿ ನಿರ್ಧರಣದ ಮಾದರಿ

ಅತಿ ಹೆಚ್ಚು ಮಾಧ್ಯಮ ಸಂದೇಶಗಳ ಪ್ರಮುಖ ಉದ್ದೇಶ ಜನಾಭಿಪ್ರಾಯಗಳ ಮೇಲೆ ಪ್ರಭಾವ ಬೀರುವುದು. ಕೆಲವೊಂದು ಅಂಶಗಳ ಮೇಲೆ ಗಮನ ನೀಡುವುದರ ಮೂಲಕ ಮಾಧ್ಯಮಗಳು ಜನಾಭಿಪ್ರಾಯವನ್ನು ರೂಪಿಸುತ್ತವೆ, ಮತ್ತು ಅವುಗಳ ಮೇಲೆ ಪ್ರಭಾವ ಬೀರುತ್ತವೆ. ಮಾಧ್ಯಮಗಳಿಂದ ಚರ್ಚಾವಿಷಯಗಳು ಯಾವುವು ಎಂಬುದನ್ನು ಅರಿತುಕೊಂಡು ಮಾಧ್ಯಮಗಳಲ್ಲಿ ಅವು ಎಷ್ಟು ಬಿಂಬಿತವಾಗುತ್ತವೆ ಎಂಬುದನ್ನು ಆಧರಿಸಿ, ಅವುಗಳಿಗೆ ಎಷ್ಟು ಪ್ರಾಶಸ್ತ್ಯ ನೀಡಬೇಕೆಂಬುದನ್ನು ನಿರ್ಧರಿಸುತ್ತಾರೆ. ಅರ್ಥಾತ್, ಜನಾಭಿಪ್ರಾಯಕ್ಕೆ ಕಾರ್ಯಸೂಚಿಯನ್ನು ನಿರ್ಧರಿಸುವುದು ಮಾಧ್ಯಮಗಳು.




**ಚಿತ್ರ 3.8 ಕಾರ್ಯಸೂಚಿ ನಿರ್ಧಾರಣದ ಮಾದರಿ**

ಮಾಧ್ಯಮಗಳಲ್ಲಿ ಅತಿ ಹೆಚ್ಚು ವರದಿಯಾದ ವಿಷಯಗಳು ಉಳಿದೆಲ್ಲವುಗಳಿಗಿಂತ ಹೆಚ್ಚು ಪ್ರಮುಖವಾದವು ಎಂದು ಸಾರ್ವಜನಿಕರು ಕಲ್ಪಿಸಿಕೊಳ್ಳುತ್ತಾರೆ. ಹಲವಾರು ವಿಷಯಗಳ ಬಗ್ಗೆ ಜನರು ಅರಿಯುವುದು ಮಾಧ್ಯಮಗಳಿಂದ ಸಾಮಾನ್ಯವಾಗಿ, ಮಾಹಿತಿ ನೀಡುವ ಪ್ರಮುಖ ಆಕರಗಳು ಮಾಧ್ಯಮಗಳೇ, ಹಲವಾರು ಮಾಧ್ಯಮಗಳಿಗೆ ತೆರೆದುಕೊಂಡ ಜನ ಈ ವಿಷಯಗಳನ್ನು ಕುರಿತು ತಮ್ಮದೇ ಆದ ಅಭಿಪ್ರಾಯವನ್ನು ರೂಪಿಸಿಕೊಳ್ಳುತ್ತಾರೆ. ಆದ್ದರಿಂದ, ಕೆಲವೇ ವಿಚಾರಗಳ ಮೇಲೆ ಹೆಚ್ಚು ಹೆಚ್ಚು ಗಮನವನ್ನು ಏಕತ್ರಗೊಳಿಸಿ, ಮಾಧ್ಯಮಗಳೇ ಜನಾಭಿಪ್ರಾಯಕ್ಕೆ ಕಾರ್ಯಸೂಚಿಯನ್ನೂ ನಿರ್ಧರಿಸುತ್ತವೆ ಎಂದು ನಂಬಲಾಗಿದೆ.

## 3.6 ಸಾರಾಂಶ

ಸಂವಹನದ ಹಲವಾರು ಮಾದರಿಗಳ ಅಭ್ಯಾಸದ ಮೂಲಕವಾಗಿ ಸಂವಹನದ ಅಧ್ಯಯನವನ್ನು ಸರಳಗೊಳಿಸಬಹುದು. ನೈಜ ಸನ್ನಿವೇಶ/ಸಂಗತಿಯನ್ನು ನಕ್ಷೆಗಳು ಮತ್ತು ಸಂಕೇತಗಳ ರೂಪದಲ್ಲಿ ಮಾದರಿಗಳು ಬಿಂಬಿಸುತ್ತವೆ. ಸಂಗತಿಯನ್ನು ಸ್ಪಷ್ಟವಾಗಿ ಹಾಗು ಸುಲಭವಾಗಿ ಗ್ರಹಿಸುವಲ್ಲಿ ಮಾದರಿಗಳು ಸಹಕಾರಿ. ಸಂವಹನದ ಮೊತ್ತ ಮೊದಲ ಮಾದರಿಗಳಾದ ಲಾಸ್‌ವೆಲ್ ಸೂತ್ರ ಮತ್ತು ಶೆನಾನ್ ಹಾಗು ವೀವರ್ ಮಾದರಿಗಳು ಸರಳ ರೇಖಾತ್ಮಕವಾಗಿದ್ದವು. ಸಂವಹನದ ಹಲವಾರು ಮೂಲಭೂತವಾದ ಅಂಶಗಳನ್ನು ಗುರುತಿಸಿ, ಅವುಗಳ ನಡುವಣ ಸಂಬಂಧವನ್ನು ಈ ಮಾದರಿಗಳು ನಿರೂಪಿಸಿದವು. ನಂತರ ಬಂದ ಆಸ್‌ಗುಡ್ ಮತ್ತು ಶ್ರಾಮ್ ಮಾದರಿಗಳು ಹೆಚ್ಚು ಹೆಚ್ಚು ವೃತ್ತಾಕಾರವಾಗಿದ್ದ, ಗರ್ಬ್ನರ್ ಮಾದರಿಯನ್ನು ವಿವಿಧ ರೀತಿಯ ಸಂದೇಶಗಳಿಗೆ ಅನ್ವಯ ಮಾಡಬಹುದು ಮತ್ತು ಇದು ಗ್ರಹಿಕೆ ಮತ್ತು ಸಂದೇಶಗಳ ಸೃಷ್ಟಿಯ ಬಗ್ಗೆಯೂ ಹೆಚ್ಚಿನ ಗಮನವನ್ನು ಕೇಂದ್ರೀಕರಿಸುತ್ತದೆ. ನ್ಯೂಕಾಂಬ್ ಅವರ ABX ಮಾದರಿಯು, ಸಂವಹನದಲ್ಲಿ ಪಾತ್ರವಹಿಸುವವರು ಮತ್ತು ಅವರ ನಡುವಿನ ಸಂವಹನದ ವ್ಯಾಪ್ತಿಯನ್ನು ವಿಸ್ತರಿಸುವ ಮೂರನೆಯ ಒಂದು ವಸ್ತುವಿನ ನಡುವಿನ ಸಂಬಂಧದ ಸ್ವಮಸ್ಥಿತಿಗೆ ಗಮನವನ್ನು ಬದಲಾಯಿಸಿತು.

ವ್ಯಕ್ತಿ ಮಾದರಿಗಳಾದ ಕಾಟ್ಜ್ ಮತ್ತು ಲಾಜರ್‌ಫೆಲ್ಡ್ ಮಾದರಿ ಹಾಗು ರೋಜರ್ ಮತ್ತು ಶೂಮಾಕರ್ ಮಾದರಿಗಳು ಸಮಾಜದ ಜನತೆಯ ಮೇಲೆ ಸಮೂಹ ಮಾಧ್ಯಮಗಳನ್ನು ಹೊರತಾದ ವೈಯಕ್ತಿಕ ಪ್ರಭಾವಗಳ ಸಾಧ್ಯತೆಗಳನ್ನು ವಿಚಾರ ಮಾಡಿದವು. ಕಾರ್ಯಸೂಚಿ ನಿರ್ಧಾರಣದ ಮಾದರಿಯು ಜನರ ಮೇಲಿನ ಮಾಧ್ಯಮಗಳ ಪ್ರಭಾವದ ಬಗ್ಗೆ ಗಮನ ಕೇಂದ್ರೀಕರಿಸಿತು.

ಮಾಧ್ಯಮಗಳು ಜನಾಭಿಪ್ರಾಯದ ಕಾರ್ಯಸೂಚಿಯನ್ನು ನಿರ್ಧರಿಸುತ್ತವೆ ಎಂದು ಅದು ಪ್ರತಿಪಾದಿಸಿತು. ಚಲನಾತ್ಮಕವಾದ ಸಂವಹನ ಪ್ರಕ್ರಿಯೆಯ ವಿವೇಚನೆ ಮಾಡಲು ಮತ್ತು ವಿಭಿನ್ನ ಸನ್ನಿವೇಶಗಳಲ್ಲಿ ಸಂವಹನದ ಮೂಲ ಘಟಕಗಳ ನಡುವಿನ ಸಂಬಂಧಗಳಲ್ಲಿ ಸಂಭವಿಸುವ ಪರಿವರ್ತನೆಯನ್ನು ಅರಿತುಕೊಳ್ಳಲೂ ಮಾದರಿಗಳ ಅಧ್ಯಯನವು ನಮಗೆ ಸಹಕಾರಿ.

**ಚಟುವಟಿಕೆ:**

I. ಕೆಳಗೆ ಕೊಟ್ಟಿರುವ ಸಂವಹನ ಸನ್ನಿವೇಶಗಳಲ್ಲಿ ಮೂಲ, ಸಂದೇಶ, ಮಾಧ್ಯಮ ಮತ್ತು ಗ್ರಾಹಕ ಇವುಗಳನ್ನು ಗುರುತಿಸಿ.

   1. ತರಗತಿಯಲ್ಲಿನ ಉಪನ್ಯಾಸ.
   2. ಕ್ರಿಕೆಟ್ ಪಂದ್ಯವೊಂದರ ವೀಕ್ಷಕ ವಿವರಣೆ.

## 3.7 ನಿಮ್ಮ ಪ್ರಗತಿ ಪರಿಶೀಲನೆ

**ಸೂಚನೆ: ನಿಮ್ಮ ಉತ್ತರಗಳನ್ನು ಈ ಘಟಕದಲ್ಲಿ ನೀಡಲಾಗಿರುವ ವಿವರಗಳೊಂದಿಗೆ ಹೋಲಿಸಿ.**

1. ಲಾಸ್‌ವೆಲ್ ಸಂವಹನ ಮಾದರಿಯನ್ನು ವಿವರಿಸಿ.
2. ಶೆನಾನ್ ಮತ್ತು ವೀವರ್ ಸಂವಹನ ಮಾದರಿಯನ್ನು ವಿಶದೀಕರಿಸಿ.
3. ಆಸ್‌ಗುಡ್ ಮತ್ತು ಶ್ರಾಮ್ ಅವರ ಚಕ್ರಾಕಾರದ ಸಂವಹನ ಮಾದರಿಯ ಬಗ್ಗೆ ಚರ್ಚಿಸಿ.
4. ಗರ್ಬ್ನರ್ ಸಂವಹನ ಮಾದರಿಯನ್ನು ವಿವರಿಸಿ,
5. ನ್ಯೂಕಾಂಬ್ ಅವರ ABX ಮಾದರಿಯನ್ನು ವಿವರಿಸಿ.
6. ಮಾಧ್ಯಮ ಪ್ರಭಾವದ ಎರಡು ಹಂತದ ಹರಿವನ್ನು ವಿವರಿಸಿ.
7. ನಾವೀನ್ಯತೆಯ ಪ್ರಸರಣದ ರೋಜರ್ ಮತ್ತು ಶೂಮಾಕರ್ ಮಾದರಿಯನ್ನು ವಿವರಿಸಿ.
8. ಕಾರ್ಯಸೂಚಿ ನಿರ್ಧರಣದ ಮಾದರಿಯನ್ನು ವಿವರಿಸಿ.

## 3.8 ಹೆಚ್ಚಿನ ಓದಿಗಾಗಿ

1. Dennis Mc Quail, Communication Models for the Study of Mass Communication, Longman Inc -New York, 1989.

ಬರಹ: ತೇಜಸ್ವಿ ನವಿಲೂರ್ ಮತ್ತು ಬಿ.ವಿ. ಸತ್ಯೇಂದ್ರರಾವ್

# ಘಟಕ 4 ಸಂಸ್ಕೃತಿ ಮತ್ತು ಸಂಹವನ

ರಚನೆ


4.0 ಉದ್ದೇಶಗಳು

4.1 ಪ್ರಸ್ತಾವನೆ

4.2 ಸಂಸ್ಕೃತಿ

4.2.1 'ಸಂಸ್ಕೃತಿ' - ಅರ್ಥ ವಿವರಣೆ

4.2.2 ಸಂಸ್ಕೃತಿಯ ಮೌಲ್ಯಗಳೆಂದರೇನು?

4.2.3 ಸಂಸ್ಕೃತಿ ಮತ್ತು ಸಮಾಜೀಕರಣ

4.3 ಸಂವಹನದ ಸಂಸ್ಕೃತಿ

4.3.1 ಸಂಸ್ಕೃತಿಯ ಮೂಲಧಾತುವಾಗಿ ಸಂವಹನ

4.3.2 ಸಂವೇದನೆ ಮತ್ತು ಗ್ರಹಿಕೆಗಳ ಮೇಲೆ ಸಂಸ್ಕೃತಿಯ ಪ್ರಭಾವ

4.4 ಜಾಗತೀಕರಣ

4.4.1 ಮಾಧ್ಯಮಗಳ ಜಾಗತೀಕರಣ

4.4.2 ಜನಪ್ರಿಯ ಸಂಸ್ಕೃತಿ

4.4.3 ಸಾಂಸ್ಕೃತಿಕ ಸಾಮ್ರಾಜ್ಯಶಾಹಿ

4.5 ಸಾರಾಂಶ

4.6 ನಿಮ್ಮ ಪ್ರಗತಿ ಪರಿಶೀಲನೆ

4.7 ಹೆಚ್ಚಿನ ಓದಿಗಾಗಿ

## 4.0 ಉದ್ದೇಶಗಳು

ಮಾನವನ ವರ್ತನೆ ಮತ್ತು ತಿಳುವಳಿಕೆಗಳ ಮೇಲೆ ಸಂಸ್ಕೃತಿಯು ಮಹತ್ತಾದ ಪ್ರಭಾವವನ್ನು ಹೊಂದಿದೆ. ನಿರ್ದೇಶಿತ ಶ್ರೋತೃಗಳ ಸಂಸ್ಕೃತಿಯನ್ನು ಅರಿತುಕೊಳ್ಳದೆ ಸಂವಹನ ತಂತ್ರಗಳನ್ನು ಪರಿಣಾಮಕಾರಿಯಾಗಿ ಯೋಜಿಸಲು ಸಾಧ್ಯವಿಲ್ಲ. ಈ ಘಟಕವು ಸಂಸ್ಕೃತಿ ಮತ್ತು ಸಂವಹನಗಳ ಸಹಸಂಬಂಧವನ್ನು ವಿವರಿಸುವ ಅಂಶಗಳನ್ನು ಹೊಂದಿದೆ ಮತ್ತು ಕೆಳಗಿನ ವಿಷಯಗಳನ್ನು ಅರಿಯುವಲ್ಲಿ ಈ ಘಟಕವು ಸಹಕಾರಿ.

* ಸಂಸ್ಕೃತಿ ಮತ್ತು ಸಾಂಸ್ಕೃತಿಕ ಮೌಲ್ಯಗಳ ಪರಿಕಲ್ಪನೆ;
* ವ್ಯಕ್ತಿಯ ಸಮಾಜೀಕರಣ ಪ್ರಕ್ರಿಯೆಯಲ್ಲಿ ಸಂಸ್ಕೃತಿಯ ಪಾತ್ರ;
* ಸಂವೇದನೆ ಹಾಗೂ ಸಂವಹನ ವರ್ತನೆಗಳ ಮೇಲೆ ಸಂಸ್ಕೃತಿಯ ಪ್ರಭಾವ;
* ಜನಪ್ರಿಯ ಸಂಸ್ಕೃತಿಯ ಅರ್ಥ;
* ಮಾಧ್ಯಮಗಳ ಜಾಗತೀಕರಣದ ಪ್ರಕ್ರಿಯೆ, ಮತ್ತು
* ಸಾಂಸ್ಕೃತಿಕ ಸಾಮ್ರಾಜ್ಯಶಾಹಿಯ ಕ್ರಿಯಾ ಸಂಯೋಜನೆ.

## 4.1 ಪ್ರಸ್ತಾವನೆ

ನೀವು ವ್ಯಕ್ತಿಯೊಬ್ಬನ ಸಂಸ್ಕೃತಿ ಮತ್ತು ಸಾಂಸ್ಕೃತಿಕ ಮೌಲ್ಯಗಳನ್ನು ಅರ್ಥಮಾಡಿಕೊಂಡರೆ, ನಿಮ್ಮನ್ನು ಆ ಸನ್ನಿವೇಶದಲ್ಲಿ ಅಳವಡಿಸಿಕೊಳ್ಳುವ ಮೂಲಕ ಒಬ್ಬ ಯಶಸ್ವಿ ಸಂವಾಹಕರಾಗಬಹುದು. ಆದರೆ, ಸಂಸ್ಕೃತಿ ಎಂದರೇನು? ಸಾಂಸ್ಕೃತಿಕ ಮೌಲ್ಯಗಳೆಂದರೇನು? ಜಗತ್ತನ್ನು ನೋಡುವ ಬಗ್ಗೆ, ನಿಮ್ಮ ಗ್ರಹಿಕೆಯ ಬಗ್ಗೆ ಅವು ಹೇಗೆ ಪ್ರಭಾವ ಬೀರಬಹುದು ಮತ್ತು ಸಂವಹನಾ ವರ್ತನೆಯ ಮೇಲೆ ಹೇಗೆ ಪರಿಣಾಮ ಬೀರಬಲ್ಲದು? ಸಮೂಹ ಮಾಧ್ಯಮಗಳು ಸಂಸ್ಕೃತಿಯನ್ನು ಹೇಗೆ ಪ್ರೋತ್ಸಾಹಿಸುತ್ತವೆ? ಈ ಎಲ್ಲಾ ಪ್ರಶ್ನೆಗಳಿಗೂ ಮುಂದೆ ಉತ್ತರಿಸಲಾಗುವುದು. ಅಲ್ಲದೆ, ಮಾಧ್ಯಮಗಳ ಜಾಗತೀಕರಣ ಮತ್ತು ಸಾಂಸ್ಕೃತಿಕ ಸಾಮ್ರಾಜ್ಯಶಾಹಿಯ ಕ್ರಿಯಾ ಸಂಯೋಜನೆಯನ್ನೂ ಸ್ಥೂಲವಾಗಿ ಚರ್ಚಿಸಲಾಗುವುದು. ಸಂವಹನದ ಸಾಂಸ್ಕೃತಿಕ ಭೂಮಿಕೆಯನ್ನು ಅರ್ಥಮಾಡಿಕೊಳ್ಳುವಲ್ಲಿ ಈ ಘಟಕವು ಸಹಕಾರಿಯಾಗಲಿದೆ.

## 4.2 ಸಂಸ್ಕೃತಿ

### 4.2.1 ಸಂಸ್ಕೃತಿ - ಅರ್ಥವಿವರಣೆ

ಸಂಸ್ಕೃತಿಯು ಈಗ ವಾಗ್ವಾದ ಮತ್ತು ಚರ್ಚಾರಂಗದಲ್ಲಿ ಕೇಂದ್ರ ಸ್ಥಾನದಲ್ಲಿರುವುದಕ್ಕೆ ಕಾರಣಗಳೇನು? ಒಂದು ರೀತಿಯಲ್ಲಿ ನೋಡಿದರೆ, ಸಂಸ್ಕೃತಿಯು ಎಂದಿನಿಂದಲೂ ಪ್ರಮುಖವೇ ಆಗಿತ್ತು. ಸಾಧಾರಣವಾಗಿ ಹೇಳುವುದಾದರೆ, ಸನ್ನಿವೇಶವೊಂದಕ್ಕೆ ನಾವು ನಮ್ಮ ಸಂಸ್ಕೃತಿಯ ಚೌಕಟ್ಟಿನೊಳಗೇ ಪ್ರತಿಕ್ರಿಯೆ ಸೂಚಿಸುತ್ತೇವೆ. ನಾವು ಅನುಸರಿಸಲು ಕೆಲವೊಂದು ನಿಯಮಾವಳಿಗಳನ್ನೋ ಅಥವಾ ಮೌಲ್ಯಗಳನ್ನೋ ಸಂಸ್ಕೃತಿಯು ಹಾಕಿಡುತ್ತದೆ. ಇವುಗಳಿಗೆ ಹೊಂದಿಕೊಂಡು, ಅದಕ್ಕೆ ಅನುಸಾರವಾಗಿ ನಡೆದುಕೊಳ್ಳಬೇಕೆಂದು ನಿರೀಕ್ಷಿಸಲಾಗುತ್ತದೆ.

ಜೀವನದುದ್ದಕ್ಕೂ ನಮಗೆ ಮಾರ್ಗದರ್ಶನ ನೀಡುವಂತಹ ನಂಬುಗೆಗಳು, ಆಶೋತ್ತರಗಳು, ವಾಡಿಕೆಗಳು, ಸಂವಹನದ ರೀತಿಗಳು ಮತ್ತು ಬದುಕುವ ರೀತಿ ಇವುಗಳೆಲ್ಲವನ್ನೂ ಸಂಸ್ಕೃತಿಯು ಒಳಗೊಳ್ಳುತ್ತದೆ. ಉದಾಹರಣೆಗೆ, ವ್ಯಕ್ತಿಯೊಬ್ಬನಿಗೆ ಶುಭಾಶಯ ಕೋರಲು ನಾವು ಕೈಜೋಡಿಸುತ್ತೇವೆ. ಅತಿಥಿಗಳಿಗೆ ಮೊದಲು ಊಟ ಬಡಿಸುತ್ತೇವೆ. ತಂದೆ ತಾಯಂದಿರನ್ನು ಮಕ್ಕಳು ರಕ್ಷಿಸಬೇಕೆಂದು ನಿರೀಕ್ಷಿಸಲಾಗುತ್ತದೆ. ನಮ್ಮ ಕರ್ಮಾನುಸಾರವಾಗಿ ಜೀವನದ ಸುಖ - ದುಃಖಗಳನ್ನು ಅನುಭವಿಸುತ್ತೇವೆ ಎಂಬುದನ್ನು ನಮ್ಮಲ್ಲಿ ಬಹಳಷ್ಟು ಮಂದಿ ನಂಬುತ್ತೇವೆ. ನಾವು ಒಂದು ನಿರ್ದಿಷ್ಟವಾದ ರೀತಿಯಲ್ಲಿ ಮಾತನಾಡುವುದು, ವರ್ತಿಸುವುದು ನಮ್ಮ ಸಾಂಸ್ಕೃತಿಕ ಹಿನ್ನೆಲೆಯ ಕಾರಣದಿಂದಲೇ.

ಸಂಸ್ಕೃತಿಯನ್ನು ಅರ್ಥೈಸುವುದು ಬಹಳ ಕಷ್ಟವಾದ ಕೆಲಸ. ಏಕೆಂದರೆ, ಸಂಸ್ಕೃತಿಗೆ ಒಮ್ಮತ ಅಭಿಪ್ರಾಯದ ಒಂದೇ ಅರ್ಥ ವಿವರಣೆ ಇಲ್ಲ. ರೇಮಂಡ್ ವಿಲಿಯಮ್ಸ್ ಸಂಸ್ಕೃತಿಯನ್ನು ವ್ಯಕ್ತಿಯ ವರ್ತನೆಯನ್ನು ನಿರ್ದೇಶಿಸುವ ವಾಡಿಕೆಗಳು, ಆದರ್ಶಗಳು, ಮೌಲ್ಯಗಳು ಮತ್ತು ಕಲ್ಪನೆಗಳೆಲ್ಲವನ್ನೂ ಒಳಗೊಂಡ 'ಬಾಳುವ ಒಂದು ರೀತಿ' ಎನ್ನುತ್ತಾರೆ. ಫ್ರಾಸರ್ (1978) ಅವರು, ಒಂದು ತಲೆಮಾರಿನಿಂದ ಮತ್ತೊಂದು ತಲೆಮಾರಿಗೆ ಹರಿದು ಬರುವ ಸಂಪ್ರದಾಯಗಳು, ವಾಡಿಕೆಗಳು, ರೂಢಿಗಳು, ನಂಬುಗೆಗಳು, ಮೌಲ್ಯಗಳು ಮತ್ತು ಯೋಚನಾವಿಧಾನಗಳೇ ಸಂಸ್ಕೃತಿ ಎಂದು ಅರ್ಥ ಹೇಳುತ್ತಾರೆ. ನಮ್ಮ ದೈನಂದಿನ ಜೀವನವನ್ನು ನಾವು ಹೇಗೆ ಅರ್ಥ ಮಾಡಿಕೊಂಡಿದ್ದೇವೆ ಎಂಬುದನ್ನು ಈ ಮೌಲ್ಯಗಳು ಮತ್ತು ವಾಡಿಕೆಗಳು ತಿಳಿಸುತ್ತವೆ.

ವಿಶಾಲಾರ್ಥದಲ್ಲಿ ಹೇಳುವುದಾದರೆ, ನಮ್ಮ ಎಲ್ಲಾ ಚಟುವಟಿಕೆಗಳನ್ನೂ ನಿಯಂತ್ರಿಸುವ ನಂಬುಗೆಗಳು ಮತ್ತು ಆಚರಣೆಗಳೆಲ್ಲದರ ಸಮಷ್ಟಿಯನ್ನು 'ಸಂಸ್ಕೃತಿ' ಎನ್ನಬಹುದು. ವಿಶೇಷ ರೀತಿಯ ವರ್ತನೆ, ನಡವಳಿಕೆ ಮತ್ತು ಜೀವನವನ್ನು ಅರ್ಥೈಸುವ ಒಂದು ನಿರ್ದಿಷ್ಟ ರೀತಿಯನ್ನು ಸಂಸ್ಕೃತಿಯು ಹೊಂದಿರುವುದರಿಂದ, ಬೇರೆ ಬೇರೆ ಸಂಸ್ಕೃತಿಗಳಿಗೆ ಸೇರಿದ ಜನರು, ಆಯಾ ಸಂಸ್ಕೃತಿಗಳು ಬೆಳೆಸಿ, ಪ್ರೋತ್ಸಾಹಿಸುವ ಮೌಲ್ಯಗಳ ಆಧಾರದ ಮೇಲೆ ಪ್ರತಿಕ್ರಿಯೆಗಳನ್ನು ಸೂಚಿಸುತ್ತಾರೆ. ಬೇರೆ ಬೇರೆ ಸಾಂಸ್ಕೃತಿಕ ಹಿನ್ನೆಲೆಗಳಿಂದ ಬಂದಿರುವಂತಹ ಒಬ್ಬ ಭಾರತೀಯ ಸಂಗೀತಗಾರ, ಅಮೇರಿಕೆಯ ವಿದ್ಯಾರ್ಥಿ ಮತ್ತು ಯೂರೋಪ್‌ನ ಗೃಹಿಣಿ, ತಮ್ಮ ತಮ್ಮ ಸಾಂಸ್ಕೃತಿಕ ಮೌಲ್ಯಗಳನ್ನು ಇತರರಿಗೆ ವರ್ಗಾಯಿಸುತ್ತಾರೆ. ಇದನ್ನು ಸಮಾಜೀಕರಣ ಪ್ರಕ್ರಿಯೆ ಎಂದು ಕರೆಯಲಾಗುತ್ತದೆ.

## 4.2.2 ಸಾಂಸ್ಕೃತಿಕ ಮೌಲ್ಯಗಳು

ಪ್ರತಿಯೊಂದು ಸಂಸ್ಕೃತಿಯಲ್ಲಿಯೂ ಸಾಂಪ್ರದಾಯಿಕ ಸಂಸ್ಥೆಗಳಾದ ಕುಟುಂಬ, ಧರ್ಮ ಮತ್ತು ಶಾಲೆಗಳು ಕೆಲವೊಂದು ಪರಿಕಲ್ಪನೆಗಳನ್ನೂ, ಆಲೋಚನೆಗಳನ್ನೂ ಬಿತ್ತಿ ಬೆಳೆಸುತ್ತವೆ. ಇವೇ ನಮ್ಮ ಮೌಲ್ಯ ಹಾಗು ವ್ಯವಸ್ಥೆಯ ಬುನಾದಿಯಾಗುತ್ತವೆ. ಮೌಲ್ಯ ಎನ್ನುವುದು ಜನರ ಪೂರ್ವಾರ್ಜಿತ ಆಸ್ತಿ. ಇದು ಒಂದು ತಲೆಮಾರಿನಿಂದ ಮುಂದಿನ ತಲೆಮಾರಿಗೆ ಸಾಗುವಂತಹುದು. ಈ ಮೌಲ್ಯಗಳು ನಮ್ಮ ಕಾರ್ಯಗಳನ್ನು ನಿರ್ದೇಶಿಸುತ್ತವೆ. ಈ ಮೌಲ್ಯಗಳನ್ನು ಯಾರೂ ನಮಗೆ ಹೇಳಿಕೊಡುವುದಿಲ್ಲ. ಆಂತರಿಕ ಪ್ರೇರಣೆಯಿಂದ ನಾವು ನಮ್ಮ ಹಿರಿಯರಿಂದ ಸಾಂಸ್ಕೃತಿಕ ಮೌಲ್ಯಗಳನ್ನು ಗ್ರಹಿಸುತ್ತೇವೆ. ಯಾವುದನ್ನು ನಂಬಬೇಕು, ಒಂದು ಸನ್ನಿವೇಶದಲ್ಲಿ ನಮ್ಮಿಂದ ಏನನ್ನು ನಿರೀಕ್ಷಿಸಲಾಗುತ್ತದೆ ಮತ್ತು ಅದಕ್ಕೆ ನಾವು ಹೇಗೆ ಪ್ರತಿಕ್ರಿಯಿಸಬೇಕು ಎಂಬುದನ್ನು ಅಪ್ರಜ್ಞಾಪೂರ್ವಕವಾಗಿಯೇ ಕಲಿತುಬಿಡುತ್ತೇವೆ. ಒಂದೇ ಸಂಸ್ಕೃತಿಗೆ ಸೇರಿದ ಸದಸ್ಯರು ಒಂದೇ ರೀತಿಯ, ಹೆಚ್ಚು ವ್ಯತ್ಯಾಸಗಳಿಲ್ಲದಂತಹ ಆಲೋಚನೆಗಳನ್ನೇ ಹೊಂದಿರುತ್ತಾರೆ. ಸಂಸ್ಕೃತಿಯೊಂದಿಗೆ ಜೋಡಿಸಲ್ಪಟ್ಟ ಮೌಲ್ಯಗಳು, ಗುಂಪಿಗೆ ಒಂದು 'ವಿಶೇಷ ಗುರುತು' ನೀಡುತ್ತವೆ. ಉದಾಹರಣೆಗೆ, ಹಿರಿಯರನ್ನು ಹೆಸರಿಡಿದು ಕೂಗುವುದನ್ನು ದೌಷ್ಟ್ಯವೆಂದು ವಿಚಾರ ಮಾಡಿದರೆ, ಪಾಶ್ಚಿಮಾತ್ಯರಲ್ಲಿ ಹಾಗೆಂದೇನೂ ಪರಿಗಣಿಸಲಾಗುವುದಿಲ್ಲ.

ಆಂಗ್ಲೋ - ಅಮೇರಿಕಾದ ಸಂಪ್ರದಾಯದಲ್ಲಿ ಖಾಸಗಿತನಕ್ಕೆ ಹೆಚ್ಚು ಬೆಲೆ ಇದ್ದರೆ, ಭಾರತೀಯ ಸಂಪ್ರದಾಯದಲ್ಲಿ ಇಲ್ಲ. ಉದಾಹರಣೆಗೆ ಭಾರತದಲ್ಲಿ ಟಿವಿ ವೀಕ್ಷಣೆ ಒಂದು ಸಾಮಾಜಿಕ ಕ್ರಿಯೆ ಎನ್ನಿಸಿದರೆ, ಅಮೇರಿಕಾದ ಸಂದರ್ಭದಲ್ಲಿ ಅದು ಒಂದು ಖಾಸಗಿ ವಿಷಯ.

ಸಾಂಸ್ಕೃತಿಕ ಮೌಲ್ಯಗಳು ಎದ್ದು ಕಾಣುವುದು ರೂಢಿಗಳಲ್ಲಿ, ನಮ್ಮ ವರ್ತನೆಯನ್ನು ನಿರ್ದೇಶಿಸುವಂತಹ ಸಾಮಾಜಿಕ ಒಪ್ಪಿಗೆ ಪಡೆದ ಮಾರ್ಗದರ್ಶಿ ಸೂತ್ರಗಳನ್ನು ಅವು ಪ್ರತಿಫಲಿಸುತ್ತವೆ. ಅದೇ ಕಾಲಕ್ಕೆ, ಸಾಂಸ್ಕೃತಿಕ ಮೌಲ್ಯಗಳೇನೂ ನಿಂತ ನೀರಲ್ಲ. ಬದಲಾಗುತ್ತಿರುವ ನಮ್ಮ ಅವಶ್ಯಕತೆಗಳು, ಹಳೆಯ ಮೌಲ್ಯಗಳ ಜಾಗದಲ್ಲಿ ನೂತನ ಮೌಲ್ಯಗಳು ಬರುವಂತೆ ಮಾಡುತ್ತವೆ. ಉದಾಹರಣೆಗೆ ತೆಗೆದುಕೊಳ್ಳುವುದಾದರೆ, ಜನರು ಧರ್ಮಶ್ರದ್ಧೆಯುಳ್ಳವರಾದ್ದರಿಂದ, ಮಕ್ಕಳು ದೇವರ ವರಪ್ರಸಾದವೆಂದು ಬಹಳ ಶ್ರದ್ಧೆಯಿಂದ ಬಲವಾಗಿ ನಂಬಲಾಗುತ್ತದೆ. ಆದರೆ ಇಂದು, ಜನರು ಪ್ರನಾಳಶಿಶುಗಳನ್ನು ಪಡೆಯಲೂ ಹೋಗುತ್ತಿದ್ದಾರೆ. ಸಾಂಸ್ಕೃತಿಕ ಮೌಲ್ಯಗಳು ನಿರಂತರವಾಗಿ ಪರಿವರ್ತನೆಗೊಳ್ಳುತ್ತಿರುತ್ತವೆ ಎಂಬುದನ್ನು ಇದು ಸೂಚಿಸುತ್ತದೆ. ಒಂದೇ ಸ್ಥಿತಿಯಲ್ಲೇ ಉಳಿದುಕೊಂಡು ಬದಲಾವಣೆಯನ್ನೇ ಕಾಣದ ಯಾವ ಸಂಸ್ಕೃತಿಯೂ ಪ್ರಪಂಚದಲ್ಲಿಲ್ಲ.

ಆರ್ಥಿಕ, ಸಾಮಾಜಿಕ, ರಾಜಕೀಯ ಮತ್ತು ತಂತ್ರಜ್ಞಾನದ ಬದಲಾವಣೆಗಳು ಕಣ್ಣಿಗೆ ಕಾಣುವಷ್ಟು ನಿಚ್ಚಳವಾದ ಬದಲಾವಣೆಗಳನ್ನು ಸಂಸ್ಕೃತಿಯಲ್ಲಿ ಮೂಡಿಸುತ್ತವೆ. "ಏಷ್ಯಾದ ಮೌಲ್ಯಗಳು ಕೈಗಾರಿಕೀಕರಣ ಪೂರ್ವದ ರೂಢಿಗಳು. ಕೈಗಾರಿಕೀಕರಣ, ನಗರೀಕರಣ ಮತ್ತು ಆರ್ಥಿಕ ಬೆಳವಣಿಗೆ ಅಂತಿಮವಾಗಿ ಈ ಮೌಲ್ಯಗಳನ್ನು ಬದಲಾಯಿಸುತ್ತವೆ" ಎಂದು ಮೀಡ್ (1998) ವಾದಿಸುತ್ತಾರೆ.

ಇನ್ನೊಂದು ಉದಾಹರಣೆಯನ್ನು ತೆಗೆದುಕೊಂಡು ಸಾಂಸ್ಕೃತಿಕ ಮೌಲ್ಯಗಳ ಪರಿವರ್ತನೆಯನ್ನು ವಿಚಾರ ಮಾಡೋಣ. ಹಿರಿಯರು, ತಮ್ಮ ವೃದ್ಧಾಪ್ಯದಲ್ಲಿ ತಮ್ಮ ಮಕ್ಕಳೊಂದಿಗೆ, ಅದರಲ್ಲೂ ವಿಶೇಷವಾಗಿ ಮಗನೊಂದಿಗೆ ವಾಸಮಾಡುವುದು ಸಾಮಾನ್ಯ. ತಂದೆತಾಯಿಗಳಿಗೆ ವಯಸ್ಸಾದಂತೆ ಅವರನ್ನು ನೋಡಿಕೊಳ್ಳುವುದು ಆತನ ಜವಾಬ್ದಾರಿ. ವೃದ್ಧಾಶ್ರಮಗಳು ಈ ಹಿಂದೆ ಎಂದೂ ಕೇಳಿರದಂತಹವುಗಳಾಗಿದ್ದವು. ಕಾರಣಗಳು ಏನೇ ಇದ್ದರೂ, ದೇಶದಾದ್ಯಂತ ಹಲವಾರು ವೃದ್ಧಾಶ್ರಮಗಳನ್ನು ನಾವಿಂದು ಕಾಣುತ್ತೇವೆ. ವೃದ್ಧಾಶ್ರಮಗಳ ಸಂಖ್ಯೆಯು ಹೆಚ್ಚುತ್ತಲೇ ಇದೆ.

### 4.2.3 ಸಂಸ್ಕೃತಿ - ಮತ್ತು ಸಮಾಜೀಕರಣ

'ಸಮಾಜೀಕರಣ' ಎನ್ನುವುದು ಒಂದು ವಿಶಾಲವಾದ ಪರಿಕಲ್ಪನೆ. ಸಮಾಜಕ್ಕೆ ಒಪ್ಪಿಗೆಯಾಗುವಂತಹ ತಂತ್ರಗಳನ್ನು ಬಳಸಿಕೊಂಡು ಸಂವಹನ ನಡೆಸಲು, ಆಲೋಚನೆ ಮಾಡಲು, ಸಮಸ್ಯೆಗಳನ್ನು ಬಗೆಹರಿಸಲು ಮತ್ತು ನಮ್ಮದೇ ಆದ ಅಳವಡಿಕೆಗಳನ್ನು ಮಾಡಿಕೊಳ್ಳಲು ಸಮಾಜೀಕರಣವು ನಮ್ಮನ್ನು ಸಜ್ಜುಗೊಳಿಸುತ್ತದೆ. ಸಮಾಜವು ಒತ್ತಿ ಹೇಳುವಂತಹ ರೂಢಿಗಳಿಗೆ, ಮೌಲ್ಯಗಳಿಗೆ ಮತ್ತು ನಡವಳಿಕೆಗಳ ನಮೂನೆಗಳಿಗೆ ನಮ್ಮನ್ನು ನಾವು ಒಗ್ಗಿಸಿಕೊಳ್ಳುವಂತಹ ಪ್ರಕ್ರಿಯೆಯೇ ಸಮಾಜೀಕರಣ. ನಾವು ಮಕ್ಕಳಾಗಿ ಪ್ರಪಂಚಕ್ಕೆ ಬಂದಾಗ, ಇಲ್ಲಿನ ಕಾರ್ಯಚಟುವಟಿಕೆಗಳಲ್ಲಿ ಭಾಗವಹಿಸುವ ಸಾಮರ್ಥ್ಯವೇನೂ ನಮಗೆ ಇರುವುದಿಲ್ಲ. ಅನುಕರಣೆ ಮತ್ತು ಪ್ರಯತ್ನಶೀಲತೆಗಳಿಂದಾಗಿ, ಸನ್ನಿವೇಶವೊಂದರಲ್ಲಿ ಸಮಾಜವು ಸಮುಚಿತವೆಂದು ಹೇಳುವ ರೀತಿಯಲ್ಲಿ ಪ್ರತಿಕ್ರಿಯಿಸುವುದನ್ನು ನಾವು ಕಲಿಯುತ್ತೇವೆ. ಹೀಗೆ ಪ್ರತಿಕ್ರಿಯೆ ನೀಡುವ ಮತ್ತು ಸಂವಹಿಸುವ ಸಾಮರ್ಥ್ಯವೇ, ಒಬ್ಬ ಪುರುಷ / ಮಹಿಳೆಗೆ ಸಾಂಸ್ಕೃತಿಕ ಪರಂಪರೆಯನ್ನು ಪಡೆಯುವ ಮತ್ತು ಅದನ್ನು ಮುಂದಿನ ತಲೆಮಾರಿಗೆ ವರ್ಗಾಯಿಸುವ ಸಾಧ್ಯತೆಗಳನ್ನು ಒದಗಿಸುವುದು. ವ್ಯಕ್ತಿಯೊಬ್ಬನ ಸಮಾಜೀಕರಣಕ್ಕೆ ಕುಟುಂಬ, ಸ್ನೇಹಿತರು, ಶಾಲೆ, ಸಮೂಹ ಮಾಧ್ಯಮಗಳೇ ಮುಂತಾದ ಹಲವಾರು ಸಾಂಸ್ಕೃತಿಕ ಸಂಸ್ಥೆಗಳು ತಮ್ಮ ಕಾಣಿಕೆಯನ್ನು ಸಲ್ಲಿಸುತ್ತವೆ. ಈ ಕಾರಣದಿಂದ ಹೀಗೆ ವ್ಯಕ್ತಿಯೊಬ್ಬನ ಸಮಾಜೀಕರಣದ ಪ್ರಕ್ರಿಯೆಗೆ ಸಂಸ್ಕೃತಿಯು ವಿಶೇಷವಾದ ಕಾಣಿಕೆ ನೀಡುತ್ತದೆ.

ಬೇರೆ ಬೇರೆ ಸಾಂಸ್ಕೃತಿಕ ಹಿನ್ನೆಲೆಗಳನ್ನು ಹೊಂದಿರುವ ಜನರು, ಅವರ ಸಮಾಜಗಳಲ್ಲಿ ಪ್ರಸಕ್ತ ಇರುವ ಸಾಂಸ್ಕೃತಿಕ ಮೌಲ್ಯಗಳ ಆಧಾರದ ಮೇಲೆ ಬೇರೆ ಬೇರೆ ರೀತಿಯ ಪ್ರತಿಕ್ರಿಯೆಗಳನ್ನು ತೋರುತ್ತಾರೆ. ಹೆಂಡತಿಯನ್ನು ಹೊಡೆಯುವುದಕ್ಕೆ ಅಥವಾ ಹುಡುಗಿಯನ್ನು ಚುಡಾಯಿಸುವುದಕ್ಕೆ ಭಾರತೀಯ ಹುಡುಗಿಯೊಬ್ಬಳು ತೋರುವ ಪ್ರತಿಕ್ರಿಯೆಯು ಅಮೇರಿಕಾದ ಯುವತಿಯೊಬ್ಬಳ ಪ್ರತಿಕ್ರಿಯೆಗಿಂತ  ತೀರಾ ಭಿನ್ನವಾಗಿರಬಹುದು. ಪಿತೃಪ್ರಧಾನ ಕುಟುಂಬಕ್ಕೆ ಒಂದು ಸಂಸ್ಕೃತಿಯು ಹೆಚ್ಚು ಬೆಲೆ ನೀಡಿದರೆ, ಮತ್ತೊಂದು ಸಂಸ್ಕೃತಿಯು ತಂದೆಗೆ ಕಡಿಮೆ ಪ್ರಾಧಾನ್ಯತೆಯ ಪಾತ್ರವನ್ನು ನೀಡಬಹುದು. ಸಮಾಜದ ಹೊಸ ಸದಸ್ಯರಾಗಿ ನಾವು ವಾಡಿಕೆಗಳು, ಸಂಪ್ರದಾಯಗಳು, ಕಲಾಕೃತಿಗಳು ಮತ್ತು ಎಲ್ಲರೂ ಒಪ್ಪುವ ಸಮಾನ ನಂಬುಗೆಗಳು ಮೊದಲಾದ ಎಲ್ಲಾ ಅಂಶಗಳನ್ನು ಅಂತರ್ಗತಗೊಳಿಸಿಕೊಳ್ಳುವ ಪ್ರಯತ್ನ ಮಾಡುತ್ತೇವೆ.

## 4.3 ಸಂವಹನದ ಸಂಸ್ಕೃತಿ

### 4.3.1 ಸಂಸ್ಕೃತಿಯು ಮೂಲಧಾತುವಾಗಿ ಸಂಹವನ

ನಮ್ಮ ನಮ್ಮ ಸಾಂಸ್ಕೃತಿಕ ಮೌಲ್ಯ ಹಾಗು ವ್ಯವಸ್ಥೆಯ ನೆಲೆಗಟ್ಟಿನೊಳಗೇ ನಾವೆಲ್ಲರೂ ಸಂವಹನ ನಡೆಸುತ್ತೇವೆ. ನಾವು ಏನನ್ನು ನಿರೀಕ್ಷಿಸಬೇಕು ಮತ್ತು ಏನನ್ನು ಆಶಿಸಬಾರದು ಎಂಬುದನ್ನು ಮೌಲ್ಯಗಳು ನಮಗೆ ತಿಳಿಹೇಳುತ್ತವೆ. ಯಾವುದೇ ಸಂಸ್ಕೃತಿಗೆ ಸೇರಿದ ಬೇರೆ ಬೇರೆ  ಮೌಲ್ಯಗಳನ್ನೂ, ಆಶಯಗಳನ್ನೂ, ನಾವು ಅರ್ಥಮಾಡಿಕೊಂಡರೆ, ಅವರೊಡನೆ ಸುಲಭವಾಗಿ ಸಂವಹಿಸಬಹುದು. ಅದರಲ್ಲೂ, ಬೇರೆ ಬೇರೆ ಸಂಸ್ಕೃತಿಗಳ ಜನರು  ಭೇಟಿಯಾದಾಗ, ಒಬ್ಬರು ಮತ್ತೊಬ್ಬರನ್ನು ತಪ್ಪಾಗಿ ಅರ್ಥ ಮಾಡಿಕೊಳ್ಳುವ ಸಾಧ್ಯತೆಗಳೇ ಹೆಚ್ಚಾಗಿ ಇರುತ್ತವೆ. ತಪ್ಪು ತಿಳುವಳಿಕೆಗಳು ಉಂಟಾಗುವುದು ಸಂಸ್ಕೃತಿಯ ಗ್ರಹಿಕೆಗಳ ವ್ಯತ್ಯಾಸಗಳಿಂದ ಮತ್ತು ಸಂವಹನದ ಮೇಲೆ ಅದು ಬೀರುವ ಪರಿಣಾಮಗಳಿಂದ, ಒಬ್ಬರು ಮತ್ತೊಬ್ಬರ ಸಂಸ್ಕೃತಿಯ ಹಿನ್ನೆಲೆಯನ್ನು ಅರ್ಥಮಾಡಿಕೊಳ್ಳುವುದಾದರೆ, ಬೇರೆ ಸಂಸ್ಕೃತಿಯ ಯಾವುದೇ ಸನ್ನಿವೇಶದಲ್ಲಿ ಅವರು ಒಗ್ಗಿಕೊಳ್ಳಬಹುದು.

ಸಂಸ್ಕೃತಿ ಎನ್ನುವುದು ನಾವು ಕಲಿಯುವ ಮತ್ತು ಹಂಚಿಕೊಳ್ಳುವ ಒಂದು ಸಂಕೇತ. ಕಲಿಕೆಗೆ ಮತ್ತು ಹಂಚಿಕೊಳ್ಳುವಿಕೆಗೆ ಸಂವಹನ ಬೇಕು. ಆಲೋಚನೆಗಳ ರವಾನೆ ಮಾಡುವುದನ್ನು ಸಂವಹನ ಸಾಧ್ಯವಾಗಿಸುತ್ತದೆ. ನಮ್ಮ ಪ್ರತಿಯೊಂದು ಸಾಮಾಜಿಕ ಕ್ರಿಯೆಯೂ ಸಂವಹನವನ್ನು ಒಳಗೊಂಡಿರುತ್ತದೆ.

ನೀವು ಸಂದೇಶಗಳನ್ನು ಸಂಕೇತಗಳಾಗಿಸುವ ಮತ್ತು ಸಂಕೇತಗಳನ್ನು ಒಡೆಯುವ ರೀತಿಯ ಮೇಲೆ ನಿಮ್ಮ ಸಾಂಸ್ಕೃತಿಕ ಹಿನ್ನೆಲೆಯು ಪ್ರಭಾವ ಬೀರುತ್ತದೆ. ನಿಮ್ಮ ಸಾಂಸ್ಕೃತಿಕ ನಂಬುಗೆಗಳು ನಿಮ್ಮ ಆಲೋಚನೆಗಳ  ಮೇಲೆ ಪ್ರಭಾವ ಬೀರುತ್ತವೆ. ಸಂದೇಶಗಳು ಎಂದರೆ ಅವು ಸಂಕೇತರೂಪದ ಆಲೋಚನೆಗಳಷ್ಟೇ. ಒಂದು ಉದಾಹರಣೆಯನ್ನು ತೆಗೆದುಕೊಂಡು, ಸಾಂಸ್ಕೃತಿಕ ನಂಬುಗೆಗಳು ಸಂವಹನದ ಪ್ರಕ್ರಿಯೆಯ ಮೇಲೆ ಹೇಗೆ ಪರಿಣಾಮ ಬೀರುತ್ತವೆ ಎಂಬುದನ್ನು ಚರ್ಚಿಸೋಣ.

ಚೀನಾದ ತತ್ವಶಾಸ್ತ್ರದ ಕನ್‌ಫ್ಯೂಷಿಯನಿಸಂ, ಸದಾಚಾರ, ಕಠಿಣ ಪರಿಶ್ರಮ, ಕುಟುಂಬಕ್ಕೆ ಮರ್ಯಾದೆ ನೀಡುವುದು ಮುಂತಾದ ಮೌಲ್ಯಗಳನ್ನು ಒತ್ತಿಹೇಳುತ್ತದೆ. ಕನ್‌ಫ್ಯೂಷಿಯನಿಸಂ, ಸಾಮಾಜಿಕ ಸಂಬಂಧಗಳನ್ನೂ ನಿರ್ದೇಶಿಸುತ್ತದೆ. ಉದಾಹರಣೆಗೆ, ಕನ್‌ಫ್ಯೂಷಿಯನಿಸಂ ಅನ್ನು ಅನುಸರಿಸುವ ಕೊರಿಯಾದಲ್ಲಿ, ಸಂಭಾಷಣೆಯ ಮೊದಲ ಕೆಲವು ನಿಮಿಷಗಳಲ್ಲೇ ಅಪರಿಚಿತನಾಗಿದ್ದರೂ ಮತ್ತೊಬ್ಬರ ವಯಸ್ಸು ತಿಳಿದುಬಿಡುತ್ತದೆ ಮತ್ತು ಆದರಿಂದಾಗಿ, ಭಾಷೆಯಲ್ಲಿ ಬದಲಾವಣೆ ಮಾಡಿಕೊಂಡು ಗೌರವ ಸೂಚಿಸುವುದು ಸಾಧ್ಯವಾಗುತ್ತದೆ ಎಂದು ಯುಮ್ ಗುರುತಿಸುತ್ತಾರೆ (1988). ಕೊರಿಯಾದಲ್ಲಿ ವೈಯಕ್ತಿಕ ಸಂತೋಷ ಸಂಬಂಧಿ ಪ್ರವಾಸಗಳನ್ನು ವ್ಯಾವಹಾರಿಕ ಪ್ರವಾಸಗಳೊಂದಿಗೆ ಹೊಂದಿಸಿಕೊಳ್ಳಲಾಗುತ್ತದೆ ಎಂಬುದನ್ನು ಅವರು ಸೂಚಿಸಿದ್ದಾರೆ.

ಸಾರ್ವಜನಿಕ ಮತ್ತು ಖಾಸಗಿ ಜೀವನವನ್ನು ಪ್ರತ್ಯೇಕವಾಗಿ ಇರುವ ಪಾಶ್ಚಾತ್ಯ ನಮೂನೆಗೆ ಇದು ತೀರಾ ವಿರುದ್ಧವಾಗಿದೆ. ಸಂಸ್ಕೃತಿಯ ಹಿನ್ನೆಲೆಯಲ್ಲಿ ಕಂಡುಬರುವ ಈ ವ್ಯತ್ಯಾಸಗಳು ಬೇರೆಯವರೊಂದಿಗಿನ ಸಂವಹನ ವರ್ತನೆಯ ಮೇಲೂ ಪ್ರಭಾವ ಬೀರುತ್ತವೆ. ಆದ್ದರಿಂದಲೇ ಸಂಹವನ ಮತ್ತು ಸಂಸ್ಕೃತಿಗಳನ್ನು ಬೇರೆ ಮಾಡಲಾಗದು. ಸಂವಹನದ ನಮೂನೆಗಳು ಮತ್ತು ಕಾರ್ಯಗಳು ಸಾಂಸ್ಕೃತಿಕ ನೀತಿ ನಿಯಮಗಳಿಂದ ನಿಯಂತ್ರಿಸಲ್ಪಡುತ್ತವೆ.

## 4.3.2 ವ್ಯಕ್ತಿಗಳ ಗ್ರಹಿಕೆಗಳ ಮೇಲೆ ಸಂಸ್ಕೃತಿಯ ಪ್ರಭಾವ

ನಾವು ಪ್ರಪಂಚವನ್ನು ನೋಡುತ್ತೇವೆ. ನಮ್ಮ ಸಾಂಸ್ಕೃತಿಕ ಹಿನ್ನೆಲೆಯ ಆಧಾರದ ಮೇಲೆ ವಿಷಯಗಳನ್ನು ಗ್ರಹಿಸುತ್ತೇವೆ. ಅಂತೆಯೇ ಬೇರೆ ಬೇರೆ ಸಂಸ್ಕೃತಿಗಳಿಗೆ ಸೇರಿದ ಜನರು ಪ್ರಪಂಚವನ್ನು ಬೇರೆ ಬೇರೆ ರೀತಿಯಾಗಿ ಗ್ರಹಿಸುತ್ತಾರೆ. ಏಕೆಂದರೆ, ಸತ್ಯದ ಪರಿಕಲ್ಪನೆಯನ್ನು ವಿವಿಧ ಸಂಸ್ಕೃತಿಗಳು ಬೇರೆ ಬೇರೆ ರೀತಿಯಾಗಿ ವಿವರಿಸಿವೆ. ಹಾಗೆಯೇ, ಇದು ವ್ಯಕ್ತಿಗಳ ವರ್ತನೆಯ ಮೇಲೂ ಪ್ರಭಾವ ಬೀರಿದೆ. ಹಿಂದೂ ಸಂಸ್ಕೃತಿಯ ಅನ್ವಯ ಪ್ರಕೃತಿಯು ಪವಿತ್ರವಾದುದು, ಪೂಜನೀಯವಾದುದು. ಆದ್ದರಿಂದ ಮರಗಳನ್ನು ಮತ್ತು ಹಾವುಗಳನ್ನೂ ಪೂಜಿಸುವುದು ನಮಗೆ ಸರ್ವೇ ಸಾಧಾರಣ ಎನಿಸಿದರೂ, ಬೇರೆ ಸಂಸ್ಕೃತಿಗೆ ಸೇರಿದವರಿಗೆ ಈ ಆಚರಣೆಗಳು ವಿಚಿತ್ರ, ವಿಲಕ್ಷಣ ಎನಿಸುತ್ತವೆ. ಕೆಲವೊಂದು ಸಂಸ್ಕೃತಿಗಳಲ್ಲಿ ಪ್ರಾಣಿಬಲಿ ನೀಡುವುದು ದೇವರ ವರಪ್ರಸಾದಕ್ಕೆ ಕಾರಣೀಭೂತವಾಗುವುದು ಎಂದು ತಿಳಿಯಲಾಗುತ್ತದೆ. ಒಂದು ಸಂಸ್ಕೃತಿಯು ಯಾವುದನ್ನು ಪವಿತ್ರ ಎಂದು ಪರಿಗಣಿಸುವುದೋ ಅದೇ ಆಚರಣೆಯನ್ನೂ ಮತ್ತೊಂದು ಸಂಸ್ಕೃತಿಯು ಪಾಪಕಾರಕ ಎಂದು ಹೇಳಬಹುದು.

ಪ್ರತಿದಿನವೂ, ಅಪರಿಮಿತವಾದ ಮಾಹಿತಿಯನ್ನು ನಾವು ಪಡೆಯುತ್ತೇವೆ. ಇವೆಲ್ಲವನ್ನೂ ನಾವು ಪ್ರಜ್ಞಾಪೂರ್ವಕವಾಗಿ ಅರ್ಥೈಸುವುದಿಲ್ಲ. ನಮಗೆ ಯಾವುದು ಪ್ರಸ್ತುತ ಎಂಬುದನ್ನು ನಮ್ಮ ಸಂಸ್ಕೃತಿ ಹೇಳಿಕೊಡುತ್ತದೆ. ಪಡೆದ ಮಾಹಿತಿಗಳನ್ನು ವಿವಿಧ ಸಂಸ್ಕೃತಿಗಳಿಗನ್ವಯ ಅರ್ಥೈಸುವುದರಲ್ಲಿ ನಾಟಕೀಯವೆನಿಸುವಷ್ಟು ವಿಭಿನ್ನತೆ, ವ್ಯತ್ಯಾಸಗಳು ಕಂಡುಬರುತ್ತವೆ. ಉದಾಹರಣೆಗೆ, ಸಮಾಜದಲ್ಲಿ ಮಹಿಳೆಯ ಪಾತ್ರ, ಪುರುಷರು ಮತ್ತು ಮಹಿಳೆಯರು ಸಂವಹನ ನಡೆಸುವ ಮತ್ತು ವರ್ತಿಸುವ ರೀತಿಯು ಸಾಂಸ್ಕೃತಿಕ ಮೌಲ್ಯಗಳಿಂದಲೇ ಪ್ರಭಾವಿತಗೊಂಡಿರುತ್ತದೆ. ಏಕೆಂದರೆ, ಮಕ್ಕಳಾಗಿದ್ದಾಗಲೇ ನಾವು ಲಿಂಗಭೇದದಿಂದಾಗಿ, ತತ್ಸಂಬಂಧಿಯಾದ ಕೆಲವೊಂದು ಮನೋವೃತ್ತಿಗಳನ್ನು ಪಡೆದುಕೊಳ್ಳುತ್ತೇವೆ.

ಕುಟುಂಬ ಮತ್ತು ಇತರ ಸಾಮಾಜಿಕ ಸಂಸ್ಥೆಗಳು, ಸಂಸ್ಕೃತಿಯ ನಿಯಮಾವಳಿಗಳಂತೆ ನಮ್ಮ ವರ್ತನೆಯ ಮೇಲೆ ಕೆಲವೊಂದು ನಿಬಂಧನೆಗಳನ್ನು ಹೇರುತ್ತವೆ. ಪುರುಷರಾಗಿ / ಮಹಿಳೆಯಾಗಿ ನಿಮ್ಮನ್ನು ಕುರಿತು ನೀವು ಹೇಗೆ ಚಿಂತಿಸುತ್ತೀರಿ. ಬೇರೆಯವರೊಂದಿಗೆ ಹೇಗೆ ಒಡನಾಡುತ್ತೀರಿ ಎಂಬುದನ್ನು ಸಂಸ್ಕೃತಿಯು ರೂಪಿಸುತ್ತದೆ. ಏಕೆಂದರೆ, ನಮ್ಮ ಸಂವೇದನೆಗಳು, ಆಲೋಚನೆಗಳು ಮತ್ತು ಕಾರ್ಯಗಳೆಲ್ಲವೂ ಲಿಂಗ ಸಂಬಂಧಿಯಾದ ಸಾಂಸ್ಕೃತಿಕ ನಿರೀಕ್ಷೆಗಳೊಂದಿಗೆ ಬಂಧಿತವಾಗಿರುತ್ತವೆ. ಹೆಂಗಸರು ಸಾಮಾನ್ಯವಾಗಿ ವಿಧೇಯರೂ, ಅವಲಂಬಿತರೂ ಆಗಿರುತ್ತಾರೆ. ಗಂಡಸರು ವೈಯಕ್ತಿಕವಾದ ಗುಣಲಕ್ಷಣಗಳ ಹೊರತಾಗಿಯೂ ಹೆಚ್ಚು ದೃಢರಾಗಿರುತ್ತಾರೆ. ಹಾಫ್‌ಸ್ಟೇಡ್ (1980) ಅವರು, ಸಂಸ್ಕೃತಿಯ ಬದಲಾವಣೆಯನ್ನು ಸೂಚಿಸುವಲ್ಲಿ ವ್ಯಕ್ತಿಯ ಲಿಂಗವೂ ಮೌಲ್ಯದ ಒಂದು ಆಯಾಮ ಎಂದು ಗುರುತಿಸಿದರು. ಇನ್ನೊಂದು ಉದಾಹರಣೆಯನ್ನು ತೆಗೆದುಕೊಂಡು ವಿಶ್ಲೇಷಿಸೋಣ. ಅಮೇರಿಕಾದ ಜನರು ಸಮಸ್ಯೆಗಳ ನಿವಾರಣೋಪಾಯಗಳನ್ನು ಕಂಡುಹಿಡಿಯಲು ವೈಜ್ಞಾನಿಕ ಪದ್ಧತಿಗಳನ್ನು ಬಲವಾಗಿ ನಂಬುತ್ತಾರೆ. ಎಲ್ಲಾ ಮನುಷ್ಯಜೀವಿಗಳಿಗೂ ಒಳ್ಳೆಯದು ಅಥವಾ ಕೆಟ್ಟದ್ದನ್ನೂ ಮಾಡುವ ಶಕ್ತಿ ಸಾಮರ್ಥ್ಯ ಇದೆ, ಎಂದೂ ಅವರು ನಂಬುತ್ತಾರೆ.

ಜನಗಳಿಗೆ ಸ್ವತಂತ್ರವಾದ, ನಿರ್ಬಂಧಿತವಾದ ಆಯ್ಕೆ ಇದೆ. ವ್ಯಕ್ತಿಗಳೇ ಅವರ ಕಾರ್ಯಗಳಿಗೆ ಜವಾಬ್ದಾರರು ಎಂದೂ ಅವರು ತಿಳಿಯುತ್ತಾರೆ. ಇದಕ್ಕೆ ವ್ಯತಿರಿಕ್ತವಾಗಿ, ದೈವೀಶಕ್ತಿಯು ನಿರ್ಧರಿಸಿದಂತೆ ಆಗುತ್ತದೆ ಎಂಬುದು ಬಹಳಷ್ಟು ಭಾರತೀಯರ ನಂಬುಗೆ. ಬೇರೆ ಬೇರೆ ರೀತಿಯ ಸಾಂಸ್ಕೃತಿಕ ಹಿನ್ನೆಲೆಯನ್ನು ಹೊಂದಿರುವಂತಹ ಭಾರತೀಯ ಮತ್ತು ಅಮೇರಿಕೆಯ ರೈತರು ಒಂದೇ ಸಮಸ್ಯೆಗೆ, ಉದಾಹರಣೆಗೆ, ಕುಂಠಿತಗೊಂಡ ಕಡಿಮೆ ಕೃಷಿ ಉತ್ಪಾದನೆಗೆ, ಬೇರೆ ಬೇರೆ ರೀತಿಯಾಗಿ ಪ್ರತಿಕ್ರಿಯೆ ತೋರುತ್ತಾರೆ. ಅಮೇರಿಕೆಯ ಕೃಷಿಕ ರೈತ ಸಮಸ್ಯೆಯನ್ನು ವೈಜ್ಞಾನಿಕವಾಗಿ ವಿಶ್ಲೇಷಿಸುವ ಪ್ರಯತ್ನ ಮಾಡಿದರೆ, ಭಾರತದ ರೈತ ಇದು ಅವರ ಹಣೆಬರಹವೆಂದು ಕೈಚೆಲ್ಲಿ ಕೂರಬಹುದು. ಈ ರೈತರು ಬೆಳೆದುಬಂದಿರುವ ಸಾಂಸ್ಕೃತಿಕ ಹಿನ್ನೆಲೆಗಳೇ ಇಂತಹ ವ್ಯತ್ಯಾಸಕ್ಕೆ ಕಾರಣ. ಅಂದರೆ, ಜೀವನದ ಅರ್ಥವೂ ನಮ್ಮ ಸಂಸ್ಕೃತಿಯಿಂದ ಪ್ರಭಾವಿತವಾಗಿದೆ ಎಂದು ಅರ್ಥ.

## 4.4 ಜಾಗತೀಕರಣ ಮತ್ತು ಸಾಂಸ್ಕೃತಿಕ ಸಾಮ್ರಾಜ್ಯಶಾಹಿ

### 4.4.1 ಮಾಧ್ಯಮಗಳ ಜಾಗತೀಕರಣ

ಜಾಗತಿಕ ಮಾಧ್ಯಮಗಳ ಉದಯ ತೀರಾ ಇತ್ತೀಚಿಗಿನ ಬೆಳವಣಿಗೆ. ಆದರೆ, ಮಾಧ್ಯಮಗಳು ಹೊರದೇಶಗಳಲ್ಲಿ ಕಾರ್ಯಾಚರಣೆ ನಡೆಸುವುದೇನೂ ಹೊಸದಲ್ಲ. ದಶಕಗಳಿಂದಲೂ ಪುಸ್ತಕ, ಚಲನಚಿತ್ರ ಮತ್ತು ಸಂಗೀತ ನಿರ್ಮಾಣಗಳನ್ನು ಟ್ರಾನ್ಸ್‌ನ್ಯಾಷನಲ್ ಕಾರ್ಪೋರೇಷನ್(TNC)ಗಳು ಮಾಡುತ್ತಲೇ ಬಂದಿದ್ದವು. ಟ್ರಾನ್ಸ್‌ನ್ಯಾಷನಲ್ ಕಾರ್ಪೋರೇಷನ್ ಎಂದರೆ ಒಂದಕ್ಕಿಂತ ಹೆಚ್ಚು ದೇಶಗಳಲ್ಲಿ ಅವಶ್ಯಕ ಮೂಲ ಸೌಕರ್ಯಗಳನ್ನು ಹೊಂದಿದ್ದು, ವಿಶಾಲವಾಗಿ, ಅದು ಹಲವು ದೇಶಗಳ ನಿಟ್ಟಿನಿಂದ ಯೋಜನೆ ಮಾಡುವಂತಹುದು. ಇಪ್ಪತ್ತನೆಯ ಶತಮಾನದಲ್ಲಿ ಇಂಥಹ TNCಗಳು ಹೆಚ್ಚು ಹೆಚ್ಚು ಬೆಳೆದು, ಪ್ರಾಮುಖ್ಯತೆಯನ್ನು ಪಡೆದು ಜಾಗತೀಕರಣಕ್ಕೆ ದಾರಿಮಾಡಿಕೊಟ್ಟಿವೆ. ನಿಜವಾಗಿ, ಜಾಗತಿಕ ಮಾರುಕಟ್ಟೆಗೆ ಕೊಡುಗೆ ಸಲ್ಲಿಸಿದ ಮೊತ್ತ ಮೊದಲ ಮಾಧ್ಯಮವೆಂದರೆ, ಚಲನಚಿತ್ರೋದ್ಯಮ. ಹಾಲಿವುಡ್‌ನ ಚಿತ್ರಗಳಲ್ಲಿ ಡಿಸ್ನಿಯ ಪಾತ್ರಗಳು ಮತ್ತು ಪಾಶ್ಚಿಮಾತ್ಯ ಜನಪ್ರಿಯ ಸಂಗೀತಗಳು ಜಾಗತಿಕ ಮಾಧ್ಯಮಗಳಿಗೆ ನಿಜವಾದ ಉದಾಹರಣೆಗಳು.

ಉಪಗ್ರಹ ಪ್ರಸಾರ, ವಿಡಿಯೊ ಕ್ಯಾಸೆಟ್ ರೆಕಾರ್ಡರ್‌ಗಳು, ಫೈಬರ್ ಆಪ್ಟಿಕ್ (ದೃಗ್ನಾರು) ಕೇಬಲ್‌ಗಳು ಮತ್ತು ದೂರವಾಣಿ ವ್ಯವಸ್ಥೆಗಳ ಅಭಿವೃದ್ಧಿಯಲ್ಲಿ ಆಗಿರುವ ತಂತ್ರಜ್ಞಾನದ ಬದಲಾವಣೆಗಳ ಫಲಿತಾಂಶವೇ ಜಾಗತಿಕ ಮಾಧ್ಯಮಗಳು. ಬಹುಬೇಗನೆ  ಅಸಾಧ್ಯವೆನಿಸುವಂತೆ ಪ್ರಮುಖವಾಗಿ ಹೊರಹೊಮ್ಮಿದ ಮಾಧ್ಯಮ ತಂತ್ರಜ್ಞಾನವೆಂದರೆ ನೇರಪ್ರಸಾರದ ಟೆಲಿವಿಷನ್ ಉಪಗ್ರಹಗಳು. ಅತಿ ಹೆಚ್ಚಿನ ಟೆಲಿವಿಷನ್ ಕಾರ್ಯಕ್ರಮಗಳನ್ನು ಹಲವಾರು ದೇಶಗಳು ಪಾಶ್ಚಿಮಾತ್ಯ ರಾಷ್ಟ್ರಗಳಿಂದ, ಅದರಲ್ಲೂ ಮುಖ್ಯವಾಗಿ ಅಮೇರಿಕದಿಂದ ಆಮದು ಮಾಡಿಕೊಳ್ಳಲು ಪ್ರಾರಂಭಿಸಿದವು. ಏಕೆಂದರೆ, ಸ್ವದೇಶೀ ನಿರ್ಮಾಣಕ್ಕಿಂತ, ಆಮದು ಮಾಡಿಕೊಂಡ ಕಾರ್ಯಕ್ರಮಗಳ ಬೆಲೆಯೇ ಕಡಿಮೆಯಾಗಿತ್ತು.

1970ರ ದಶಕದ ಮೊದಲಲ್ಲಿ ಬೇರೆಲ್ಲಾ ರಾಷ್ಟ್ರಗಳೂ ರಫ್ತು ಮಾಡಿದ ಕಾರ್ಯಕ್ರಮಗಳ ಒಟ್ಟಾರೆ ಅವಧಿಗಿಂತ ಎರಡು ಪಟ್ಟಿನ ಕಾರ್ಯಕ್ರಮಗಳನ್ನು ಅಮೇರಿಕ ಒಂದೇ ರಫ್ತು ಮಾಡಿತು. ಪಾಶ್ಚಿಮಾತ್ಯ ದೇಶಗಳು, ಅದರಲ್ಲೂ ಮುಖ್ಯವಾಗಿ ಅಮೇರಿಕಾ ಸಂಯುಕ್ತ ಸಂಸ್ಥಾನ ಚಲನಚಿತ್ರಗಳು, ಜನಪ್ರಿಯ ಸಂಗೀತದ ಟೆಲಿವಿಷನ್ ಕಾರ್ಯಕ್ರಮಗಳು, ವಾರ್ತೆಗಳು, ಪುಸ್ತಕಗಳು, ನಿಯತಕಾಲಿಕೆಗಳು ಮತ್ತು ಜಾಹೀರಾತುಗಳು, ಇವುಗಳೆಲ್ಲದರ ಒಡಗೂಡಿ ಬರುವ ಅವರ ಮೌಲ್ಯಗಳು ಮತ್ತು ಜೀವನ ಶೈಲಿಗಳ ಬಹುದೊಡ್ಡ ರಫ್ತುಗಾರರು. ಅಂತರರಾಷ್ಟ್ರೀಯ ಜಾಹೀರಾತುಗಳಲ್ಲಿ ಆಗುತ್ತಿರುವ ಹೆಚ್ಚಳವು ಜಾಗತಿಕ ಮಾಧ್ಯಮಗಳ ಅಭಿವೃದ್ಧಿಗೆ ಉತ್ತೇಜನ ನೀಡಿತು.

ಬಹಳ ಮುಖ್ಯವಾಗಿ ಜಾಹೀರಾತುಗಳು ಬೆಳೆಯುತ್ತಿರುವುದಲ್ಲದೆ, ಪ್ರಬಲವಾದ ಸಾಂಸ್ಕೃತಿಕ ಶಕ್ತಿಯಾಗಿಯೂ ಅವು ರೂಪುಗೊಳ್ಳುತ್ತಿವೆ. ಪ್ರವರ್ಧಮಾನಕ್ಕೆ ಬರುತ್ತಿರುವ ಜಾಗತಿಕ ಮಾಧ್ಯಮಗಳಲ್ಲಿ ಹೆಚ್ಚಿನವುಗಳ ಲಕ್ಷಣ - ಲಾಭಗಾರಿಕೆ.

ವಾರ್ತೆಗಳು ಮತ್ತು ಮನರಂಜನೆಯನ್ನೂ ಒಳಗೊಂಡಂತೆ ಅನಿರ್ಬಂಧಿತವಾಗಿ ಹರಿಯುತ್ತಿರುವ ಪಾಶ್ಚಿಮಾತ್ಯ ಮಾಧ್ಯಮಗಳು ಅಭಿವೃದ್ಧಿಶೀಲ ರಾಷ್ಟ್ರಗಳಿಗೆ ತಲೆಶೂಲೆಯ ಮೂಲವಾಗಿದೆ. ಈ ರೀತಿಯ ಮಾಧ್ಯಮಗಳಲ್ಲಿ ಅಡಕವಾಗಿರುವ ಅಂಶಗಳು ಜನತೆಯ ಗುರಿಗಳು ಮತ್ತು ಆಶೋತ್ತರಗಳ ಮೇಲೆ ಪರಿಣಾಮ ಬೀರುತ್ತಿರುವುದರಿಂದ ಆಗುತ್ತಿರುವ ಸಾಂಸ್ಕೃತಿಕ ಅಕ್ರಮಣದ ಬಗ್ಗೆ ತೃತೀಯ ವಿಶ್ವದ ರಾಷ್ಟ್ರಗಳು ಆತಂಕ ವ್ಯಕ್ತಪಡಿಸಿವೆ. ನಮ್ಮ ದೈನಂದಿನ ಸಾಂಸ್ಕೃತಿಕ ಅನುಭವದ ಮಟ್ಟದಲ್ಲೇ ಇಂತಹ ಉದಾಹರಣೆಗಳನ್ನು ಸುಲಭವಾಗಿ ಗುರುತಿಸಬಹುದು. ಪಾಶ್ಚಾತ್ಯರ ಆಹಾರ ರುಚಿ / ಸ್ವಾದಗಳ ಜಾಗತೀಕರಣ, ಪಾಶ್ಚಿಮಾತ್ಯ ರೀತಿಯ ಸಂಗೀತದ ಪ್ರಭಾವ, ಬಟ್ಟೆ ಧರಿಸುವ ವಾಡಿಕೆಯಲ್ಲಿನ ಬದಲಾವಣೆಗಳು, ಆಂಗಿಕ ಹಾವ ಭಾವಗಳು ಇತ್ಯಾದಿ, ಇತ್ಯಾದಿ.

ಹೀಗೆಯೆ ಪಾಶ್ಚಿಮಾತ್ಯ ಸಂಸ್ಕೃತಿಗಳಲ್ಲೂ ಆಗುತ್ತಿರುವ ಬದಲಾವಣೆಗಳನ್ನು ಕಾಣಬಹುದು. ಬಹಳಷ್ಟು ಪಾಶ್ಚಿಮಾತ್ಯರು ಇಸ್ಲಾಂ ಮತ್ತು ಬೌದ್ಧ ಧರ್ಮಗಳನ್ನು ಸ್ವೀಕರಿಸುತ್ತಿರುವುದು ಇದಕ್ಕೊಂದು ಉದಾಹರಣೆ. ಮಾಧ್ಯಮಗಳಿಗೆ ಜಾಗತಿಕ ಮಟ್ಟದ ವ್ಯಾಪ್ತಿ ಇರುವುದರಿಂದ, ಬೇರೆ ಬೇರೆ ದೇಶದ ಜನರೊಂದಿಗೆ ಹೆಚ್ಚಿನ ಸಂಬಂಧವು ಸಾಧ್ಯವಾಗಿ, ಒಂದು ರೀತಿಯ 'ಜಾಗತಿಕ ಸಂಸ್ಕೃತಿ' ಮೂಡಿ ಬರುತ್ತಿದೆ. ಮಾಧ್ಯಮಗಳ ಜಾಗತೀಕರಣಕ್ಕೆ ಸಂಬಂಧಿಸಿದ ಇನ್ನೊಂದು ಪ್ರಭಾವ ಎಂದರೆ, ಪಶ್ಚಿಮದ ಕೆಲವೊಂದು ಮೌಲ್ಯಗಳನ್ನು ದೇಶಗಳ ಎಲ್ಲೆಗಳನ್ನು ಮೀರಿ ಎಲ್ಲೆಡೆಗೆ ಹೊತ್ತೊಯ್ಯುವ ಮಾಧ್ಯಮಗಳ ಸಾಮರ್ಥ್ಯ.

## 4.4.2 ಜನಪ್ರಿಯ ಸಂಸ್ಕೃತಿ

ಮಾಧ್ಯಮಗಳ ಜಾಗತೀಕರಣ ಮತ್ತು ವಾಣಿಜ್ಯೀಕರಣದ ಒಂದು ಪರಿಣಾಮವೆಂದರೆ, ಜನಪ್ರಿಯ ಸಂಸ್ಕೃತಿಯು ಬಹಳ ಬೇಗನೆ ಪ್ರಸಾರಗೊಂಡಿದ್ದು. ಒಂದು ಪ್ರಮುಖ ತಂತ್ರಜ್ಞಾನ ಮತ್ತು ಸಾಮಾಜಿಕ ಸಂಸ್ಥೆಗಳ ನಡುವೆ ಪರಸ್ಪರ ನಡೆದ ವಿನಿಮಯದ ಉತ್ಪನ್ನ ಇದು. ಇದು ಸಾಧ್ಯವಾದದ್ದು ಸಮೂಹ ಸಂಪರ್ಕದಿಂದ ಜನತೆಯಲ್ಲಿ ಸರ್ವೇಸಾಮಾನ್ಯವಾಗಿ ಇರುವ ಆಲೋಚನೆ/ಕಲ್ಪನೆಗಳು ಮತ್ತು ನಡವಳಿಕೆಗಳನ್ನು ಜನಸ್ತೋಮದ ಮುಂದೆ ಇಟ್ಟು, ಆ ನಮೂನೆಗಳನ್ನು ಇದು ಬಲಪಡಿಸುತ್ತದೆ. ಜನಪ್ರಿಯ ಸಂಸ್ಕೃತಿಗೂ, ಉನ್ನತಮಟ್ಟದ ಸಂಸ್ಕೃತಿ ಅಥವಾ ಉಚ್ಚ (Elite) ಸಂಸ್ಕೃತಿಗೂ ಹೋಲಿಸಿ ಭೇದ ತೋರಿಸಲಾಗುತ್ತದೆ. ಉತ್ತಮವೆಂದು ಪರಿಗಣಿಸಲಾದ ಸಾಹಿತ್ಯ, ಕವನ, ತತ್ವಶಾಸ್ತ್ರ, ಚಿತ್ರಕಲೆ, ನಾಟಕ, ಶಿಲ್ಪಕಲೆ ಇತ್ಯಾದಿಗಳೆಲ್ಲವನ್ನೂ ಉಚ್ಚಸಂಸ್ಕೃತಿಯು ಒಳಗೊಳ್ಳುತ್ತದೆ.

ಮನರಂಜನೆಯನ್ನೇ ಉದ್ದೇಶವಾಗಿಟ್ಟುಕೊಂಡಿರುವ ಜನಪ್ರಿಯ ಚಟುವಟಿಕೆಗಳು, ಕಲಾವಸ್ತುಗಳು, ಸಂಗೀತ, ಪುಸ್ತಕಗಳು, ಚಿತ್ರಗಳು ಇವುಗಳಿಂದ ಜನಪ್ರಿಯ ಸಂಸ್ಕೃತಿಯನ್ನು ಗುರುತಿಸಲಾಗುತ್ತದೆ. ಇವುಗಳು ಆಧರಿಸಿಕೊಂಡಿರುವುದು, ಸಮೂಹ ಮಾಧ್ಯಮಗಳಲ್ಲಿ ಸಾಮಾನ್ಯವಾಗಿ ಕಂಡು ಬರುವ ನಮೂನೆಯನ್ನು, ಅದರಲ್ಲೂ ಮುಖ್ಯವಾಗಿ ಕಥೆ ಕಾದಂಬರಿಗಳು, ನಾಟಕ ಮತ್ತು ಅಂತರಾಷ್ಟ್ರೀಯ ಸಂಬಂಧದ ವಸ್ತುವಿಷಯಗಳನ್ನು ಜನಪ್ರಿಯ ಸಂಸ್ಕೃತಿಯು ಕಲಾತ್ಮಕ ಮೌಲ್ಯಗಳಿಗೆ ಬದಲಾಗಿ ಮನರಂಜನೆಯನ್ನು ಒಂದು ಸರಕಾಗಿಟ್ಟುಕೊಂಡು ಮಾರಾಟ ಮಾಡುತ್ತದೆ ಎಂದೂ ಅದನ್ನು ಟೀಕಿಸಲಾಗುತ್ತದೆ. ಹಾಲಿವುಡ್ ಚಿತ್ರಗಳ ಜನಪ್ರಿಯತೆ, ರೀಡರ್ಸ್ ಡೈಜೆಸ್ಟ್ ನಿಯತಕಾಲಿಕದ ಅಧಿಕಪ್ರಸಾರ, ಭಾರತೀಯರು ಇಟಾಲಿಯನ್ ಆಹಾರವನ್ನು ಸೇವಿಸುತ್ತಿರುವುದು, ಟೆಲಿವಿಷನ್ ಮೆಗಾ (ಸೋಪ್) ಧಾರಾವಾಹಿಗಳು ಇವುಗಳೆಲ್ಲಾ ಜನಪ್ರಿಯ ಸಂಸ್ಕೃತಿಗೆ ಉದಾಹರಣೆಗಳು.

ಜನಪ್ರಿಯ ಸಂಸ್ಕೃತಿಯ ಇತರ ಉದಾಹರಣೆಗಳೆಂದರೆ, ಪಾಶ್ಚಾತ್ಯ ಪ್ರಭಾವಿತವಾದ ಭಾರತೀಯ ಕಲಾಕಾರರ ಪಾಪ್ ಮತ್ತು ರಾಕ್ ಸಂಗೀತ, ಡೇಟಿಂಗ್ ಮತ್ತು ತಂಪುಪಾನೀಯಗಳ ಸೇವನೆ, ಹೀಗಾಗಿ ಸಾಮಾಜಿಕ ಚಟುವಟಿಕೆಯ ರೂಪವಾಗಿ ಜನಪ್ರಿಯ ಸಂಸ್ಕೃತಿಯು ಹೆಚ್ಚೂಕಡಿಮೆ ಸಾರ್ವತ್ರಿಕ ಎನ್ನುವಂತಹ ವರ್ತನೆಯನ್ನು ಪ್ರತಿನಿಧಿಸುತ್ತಿದೆ.

ಕೆಲ ವರ್ಷಗಳ ಹಿಂದೆ ಕಂಡು ಕೇಳರಿಯದಿದ್ದ ಅನೇಕ ಆಚರಣೆಗಳೂ ಕೂಡ ಇಂದು ಜನಪ್ರಿಯವಾಗಿವೆ ಅಥವಾ ಹೆಚ್ಚಿನ ಮಹತ್ವದೊಡನೆ ನೆಲೆಗೊಳ್ಳುತ್ತಿವೆ. ಸೇಂಟ್ ವ್ಯಾಲೆಂಟೈನ್ ಅಥವಾ ಪ್ರೇಮಿಗಳ ದಿನ, ಕ್ರಿಶ್ಚಿಯನ್ ಹೊಸ ವರ್ಷಾಚರಣೆ, ಪಿಜ್ಜಾ ಬರ್ಗರ್‌ಗಳ ಸೇವನೆ, ಸಂತೋಷವಾದಾಗ ಬಿಯರ್ ಶಾಂಪೇನ್ ಬಾಟಲಿಯ ಮುಚ್ಚಳ ಅಥವಾ ಬಿರುಡೆಯನ್ನು ತೆಗೆದು ಬಾಟಲಿಯನ್ನು ಕುಲುಕಿ ನೊರೆಯುಕ್ಕಿಸಿ ಮೆರೆಯುವುದು ಇವೆಲ್ಲವೂ ನಮ್ಮ ಸಂಸ್ಕೃತೀಯ ವರ್ತನೆಗಳಲ್ಲದಿದ್ದರೂ ಆಳವಾಗಿ ಬೇರೂರುತ್ತಿವೆ. ಇತ್ತೀಚೆಗೆ ಜಸ್ಸಿಕಾ ಲಾಲ್ ಕೊಲೆ ಹಗರಣದ ತೀರ್ಪು ಹೊರಬಿದ್ದಾಗ ಮಾಧ್ಯಮಗಳೆದುರು ಬಿಯರ್ ಉಕ್ಕಿಸಿ ಸಂಬಂಧಿಗಳು ಹರ್ಷಿಸಿದ್ದು ಜನರಿಗೆ ಅಪ್ರಾಯಮಾನವಾಗಿ ಕಾಣಲಿಲ್ಲ.

## 4.4.3 ಸಾಂಸ್ಕೃತಿಕ ಸಾಮ್ರಾಜ್ಯಶಾಹಿ ಅಧಿಪತ್ಯ

ನಾವು ಗಮನಿಸಿರುವಂತೆ ಜಾಗತೀಕರಣದ ಯುಗದಲ್ಲಿ ಅಮೇರಿಕಾದಂತಹ ದೇಶಗಳು ಸುದ್ದಿಗಳು ಮತ್ತು ಮನರಂಜನಾ ಕಾರ್ಯಕ್ರಮಗಳ ಬಹುದೊಡ್ಡ ರಫ್ತುಗಾರರಾಗಿದ್ದಾರೆ. ಬಹಳ ಶಕ್ತಿಶಾಲಿಯಾದ ಸಮೂಹ ಮಾಧ್ಯಮಗಳನ್ನು ಹೊಂದಿರುವ ಈ ದೇಶಗಳು ಅಂತರರಾಷ್ಟ್ರೀಯ ಮಾರುಕಟ್ಟೆಗಳನ್ನು ಹಿಡಿದು, ಮಾರಾಟ ಮಾಡಬಲ್ಲವು. ಹೆಚ್ಚುತ್ತಿರುವ ಈ ಉತ್ಪನ್ನಗಳ ಜನಪ್ರಿಯತೆಯನ್ನು ಸಾಂಸ್ಕೃತಿಕ ಅಧಿಪತ್ಯದ ರೂಪಗಳೆಂದು ಕೆಲವೊಂದು ಸಮಾಜಗಳು ಗ್ರಹಿಸುತ್ತಿವೆ. ಈ ಮೂಲಕ ನಿಜವಾಗಿ ಮಾರಲ್ಪಡುತ್ತಿರುವುದು ಸಂಸ್ಕೃತಿಯ ಒಂದು ಭಾಗವೇ. ಸಮೂಹ ಮಾಧ್ಯಮಗಳು ಮುಖ್ಯವಾದ ಸಾಂಸ್ಕೃತಿಕ ಮೌಲ್ಯಗಳನ್ನು ಹೊತ್ತೊಯ್ಯುತ್ತವೆ. ಉದಾಹರಣೆಗೆ, 125 ದೇಶಗಳಲ್ಲಿ ಮ್ಯಾಕ್ ಡೊನಾಲ್ಡ್ಸ್‌ನ 25,000 ರೆಸ್ಟೋರೆಂಟ್‌ಗಳಿವೆ. ಅವು ತಮ್ಮ ಜಾಹಿರಾತುಗಳಲ್ಲಿ ಒಂದು ಖಚಿರಾದ ಪರಿಸರವನ್ನು ತೋರಿಸುವ ಪ್ರಯತ್ನ ಮಾಡಿ, ಒಂದು ವಿಶಿಷ್ಟ ರೀತಿಯ ಜೀವನಶೈಲಿಯನ್ನು ಪ್ರೋತ್ಸಾಹಿಸುತ್ತದೆ. ಜಾಗತಿಕ ಟೆಲಿವಿಷನ್ ಮುಖಾಂತರ ನಡೆಯುವ ಈ ಉತ್ಪನ್ನಗಳ ಮಾರಾಟವು ಜಾಗತಿಕ ಪಾಪ್ ಸಂಸ್ಕೃತಿಯ ಬೆಳವಣಿಗೆಗೆ ದಾರಿ ಮಾಡಿಕೊಟ್ಟಿದೆ. ಇವುಗಳನ್ನು ಪಡೆಯುತ್ತಿರುವ ರಾಷ್ಟ್ರಗಳು ಅಪ್ರಜ್ಞಾಪೂರ್ವಕವಾಗಿ ಅಥವಾ ಬಹುಶಃ ಗುಣದೋಷ ವಿಮರ್ಶೆಯನ್ನೇ ಮಾಡದೆ, ಈ ಮೌಲ್ಯಗಳನ್ನು ಹೀರಿಕೊಳ್ಳಬಹುದು. ಇದು ಸಾಂಸ್ಕೃತಿಕ ಪಾರತಂತ್ರ್ಯಕ್ಕೆ ಅಥವಾ ಪರಾವಲಂಬನೆಗೆ ದಾರಿ ಮಾಡಿಕೊಡಬಹುದು.

ಕಾರ್ಯಕ್ರಮಗಳನ್ನು ಎರವಲು ಪಡೆಯುತ್ತಿರುವ ಸಂಸ್ಕೃತಿಯು ಪ್ರೇಷಕ ಸಂಸ್ಕೃತಿಯ ಉತ್ಪನ್ನಗಳಿಗೆ, ಜೀವನಶೈಲಿಗಳಿಗೆ ಒಗ್ಗಿಕೊಳ್ಳುವುದನ್ನು ಸಾಂಸ್ಕೃತಿಕ ಪಾರತಂತ್ರ್ಯ ಎಂದು ಕರೆಯಬಹುದು. ಉದಾಹರಣೆಗೆ, ಪ್ರಪಂಚದಾದ್ಯಂತ ಗುರುತಿಸಲ್ಪಡುವ ಅಮೇರಿಕಾದ ಪ್ರತೀಕವೆಂದರೆ ಕೋಕಾಕೋಲಾ.

600 ದಶಲಕ್ಷ ಬಾಟಲಿಗಳಷ್ಟು ಪೇಯವನ್ನು ಅಮೇರಿಕನ್ನರೇ ಗುಟುಕರಿಸಿದರೂ ಕಂಪನಿಯ ಶೇ. 80ರಷ್ಟು ನಿರ್ವಹಣಾ ಆದಾಯ ಬರುವುದು ಅಮೇರಿಕಾದ ಹೊರಗಿನಿಂದಲೇ. ತನ್ನ ಉತ್ಪನ್ನದೊಡನೆ ಕೋಕಾಕೋಲಾ ದಶಕಗಳಿಂದಲೂ ಪ್ರಪಂಚದಾದ್ಯಂತ ತನ್ನ ಲಾಂಛನಗಳನ್ನು ಪ್ರದರ್ಶಿಸುತ್ತಲೇ ಇದೆ. ಇನ್ನೊಂದು ಉದಾಹರಣೆಯಾಗಿ 'ಡೇಟಿಂಗ್' ಅನ್ನೇ ತೆಗೆದುಕೊಳ್ಳೋಣ. ಮದುವೆಗೆ ಮುನ್ನವೇ ಹುಡುಗ ಹುಡುಗಿಯರು ವಿಹಾರ ಮಾಡುವ ಈ ಪರಿ, ಭಾರತೀಯ ಯುವಕರು ಅಳವಡಿಸಿಕೊಳ್ಳುತ್ತಿರುವ ಪಾಶ್ಚಾತ್ಯ ಪರಿಕಲ್ಪನೆ.

ಜಾಗತೀಕರಣವು ನಮ್ಮೆಲ್ಲರನ್ನು ಸಾಂಸ್ಕೃತಿಕ ಸಾಮೀಪ್ಯತೆಯೆಡೆಗೆ ಒಯ್ಯುತ್ತಿದೆ. ಅವರ ಕಾರ್ಯಕ್ರಮಗಳನ್ನು ನಾವು ನೋಡುತ್ತಿರುವುದರೊಂದಿಗೇ ಅವರ ಜೀವನಶೈಲಿಯನ್ನು ನಾವು ಗಮನಿಸುತ್ತಿದೇವೆ. ಉದಾಹರಣೆಗೆ, ಒಂದು ಮಗು ಕಾರ್ಟೂನ್ ನೆಟ್‌ವರ್ಕ್‌ನ ಕಾರ್ಯಕ್ರಮಗಳನ್ನು ವೀಕ್ಷಿಸುತ್ತಿರುವಾಗ ಅಥವಾ ಸ್ಟಾರ್ ಪ್ಲಸ್ ವಾಹಿನಿಯ 'ಸ್ಮಾಲ್ ವಂಡರ್'ನಂತಹ ಧಾರವಾಹಿಯನ್ನು ನೋಡುವಾಗ, ಭಾರತೀಯ ಕೌಟುಂಬಿಕ ಸನ್ನಿವೇಶದಲ್ಲಿ ಎದುರಾಗದ ಬೇರೆ ರೀತಿಯ ಪದ್ಧತಿಗಳಿಗೆ ಅಥವಾ ಜೀವನಶೈಲಿಗೆ ತೆರೆದುಕೊಳ್ಳುತ್ತದೆ. ಕಾಲಕ್ರಮೇಣ, ಕಾರ್ಯಕ್ರಮದಲ್ಲಿ ಸೂಚಿಸಲ್ಪಡುವ ಸಂದೇಶಗಳಿಂದ ಅದು ಪ್ರಭಾವಿತವಾಗಿಬಿಡಬಹುದು. ಒಮ್ಮೆ ಇಂತಹ ವಿಭಿನ್ನ ಸಂಸ್ಕೃತೀಯ ಅಂಶಗಳು ನೆಲೆಗೊಂಡವೆಂದರೆ, ಜೀವನವಿಡೀ ವೈರುಧ್ಯಗಳನ್ನೆದುರಿಸುವ ಪ್ರಮೇಯ ಎದುರಾಗುತ್ತದೆ.

ಹೀಗಾಗಿ, ಸಾಂಸ್ಕೃತಿಕ ಅಧಿಪತ್ಯವಾದದ ಅನ್ವಯ, ತಮ್ಮ ಕಾರ್ಯಕ್ರಮಗಳ ಮೂಲಕ ಟ್ರಾನ್ಸ್‌ನ್ಯಾಷನಲ್ ಕಾರ್ಪೋರೇಷನ್‌ಗಳು ತಮ್ಮದೇ ಸಂಸ್ಕೃತಿಯನ್ನು ಹೆಚ್ಚು ಹೆಚ್ಚು ಪ್ರೋತ್ಸಾಹಿಸಿಕೊಳ್ಳುತ್ತಿರುವುದರಿಂದ ಸಾಂಸ್ಕೃತಿಕ ವೈವಿಧ್ಯತೆಯು ನಷ್ಟವಾಗುತ್ತಿದೆ ಎಂದು ಅಭಿವೃದ್ಧಿಶೀಲ ರಾಷ್ಟ್ರಗಳು ವಾದ ಮಾಡುತ್ತಿವೆ. ಸಮೂಹ ಮಾಧ್ಯಮಗಳ ಮೂಲ ಸಂಸ್ಕೃತಿಗಳ ನಡುವೆ ಸಂಸ್ಪರ್ಶವಾದಾಗ, ಸಂಸ್ಕೃತಿಯ ಯಾವುದೇ ಅಂಶದಲ್ಲಿ ಆದರೂ ಪರಿವರ್ತನೆ ಆಗಬಹುದು.

## 4.5 ಸಾರಾಂಶ

ಮಾನವನ ಎಲ್ಲಾ ಚಟುವಟಿಕೆಗಳಲ್ಲಿಯೂ ಸಂಸ್ಕೃತಿಯ ಅವಿಭಾಜ್ಯ ಅಂಗವಾಗಿದೆ. ನಂಬುಗೆಗಳು, ವಾಡಿಕೆಗಳು, ಪ್ರತೀಕಗಳು, ಮೌಲ್ಯಗಳು, ರೂಢಿಗತ ವರ್ತನೆಗಳು, ಆಹಾರ, ದಿರಿಸು (ವಸ್ತ್ರ), ಸಂವಹನದ ನಮೂನೆಗಳು ಮತ್ತು ಇತರ ಹಲವಾರು ವಿಷಯಗಳನ್ನು ಸಂಸ್ಕೃತಿಯು ಒಳಗೊಂಡಿರುತ್ತದೆ. ನಡವಳಿಕೆಯ ವಿಶೇಷ ರೀತಿಗಳನ್ನೂ ಮತ್ತು ಜೀವನವನ್ನೂ ಅರ್ಥೈಸುವ ಧಾಟಿಯನ್ನೂ ಒಳಗೊಳ್ಳುವುದರಿಂದ ಸಂಸ್ಕೃತಿಯ ತಾನಾಗಿಯೇ ಅಭಿವ್ಯಕ್ತಿಯ ರೂಪಗಳ ಮೇಲೂ ಪ್ರಭಾವ ಬೀರುತ್ತದೆ. ಬೇರೆ ಮಾತುಗಳಲ್ಲಿ ಹೇಳುವುದಾದರೆ, ಭಾವನೆಗಳನ್ನು ಆಂತರಿಕವಾಗಿ ಇಟ್ಟುಕೊಂಡು, ನಾವು ಸಂಸ್ಕೃತಿಯೊಂದಿಗೆ ತಾದಾತ್ಮ್ಯ ಬೆಳೆಸಿಕೊಳ್ಳಬಹುದು. ಇದು ಜೀವನ ಕುರಿತಂತೆ ನಮ್ಮ ಗ್ರಹಿಕೆಯನ್ನೂ, ನಮ್ಮ ಸಂವಹನಾ ವರ್ತನೆಯನ್ನೂ ನಿರ್ದೇಶಿಸುತ್ತದೆ.

ಅಸಾಧ್ಯವೆನಿಸುವಷ್ಟು ವೇಗವಾಗಿ ಸಂಪರ್ಕ ತಂತ್ರಜ್ಞಾನದಲ್ಲಿ ನಡೆದ ಅಭಿವೃದ್ಧಿಗಳು, ವಿವಿಧ ಸಂಸ್ಕೃತಿಗಳೊಡನೆ ಸಾಮೀಪ್ಯವುಂಟು ಮಾಡುವಂತಹ ಜಾಗತಿಕ ಮಾಧ್ಯಮಗಳ ಬೆಳವಣಿಗೆಗೆ ಕಾರಣವಾಗಿದೆ. ಪಾಶ್ಚಿಮಾತ್ಯ ಚಿತ್ರಗಳು, ರೇಡಿಯೋ ಮತ್ತು ಟೆಲಿವಿಷನ್ ಕಾರ್ಯಕ್ರಮಗಳು, ಸಂಗೀತ, ಗ್ರಾಹಕ ಉತ್ಪನ್ನಗಳು ಇವುಗಳೆಲ್ಲದರ ಲಭ್ಯತೆಯು ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ಶಂಕೆಯನ್ನು ಮೂಡಿಸಿವೆ. ಪಾಶ್ಚಿಮಾತ್ಯ ಮಾಧ್ಯಮಗಳು ಪ್ರಾದೇಶಿಕ ಮತ್ತು ಸ್ಥಳೀಯ ಸಂಸ್ಕೃತಿಗಳನ್ನು ನಿರ್ನಾಮ ಮಾಡಿಬಿಡುತ್ತವೆ ಎಂಬುದು ಅವರ ಸಂದೇಹ. ದೇಶೀಯವಾದ ಸಂಸ್ಕೃತಿಗಳ ಮತ್ತು ವೈವಿಧ್ಯತೆಗಳನ್ನು ತುಳಿದು ಜಗದ್ವಿಶಾಲವಾದ ಒಂದು ಸಂಸ್ಕೃತಿಯು ಮೂಡುತ್ತಿರುವುದರ ಬಗ್ಗೆ ಜನಪ್ರಿಯ ಸಂಸ್ಕೃತಿಗಳ ಟೀಕಾಕಾರರು ಆತಂಕಗೊಂಡಿದ್ದಾರೆ.

ಚಟುವಟಿಕೆ:

1. ನಿಮ್ಮ ತಂದೆತಾಯಿಗಳು ಅಥವಾ ಅಜ್ಜ ಅಜ್ಜಿಯರೊಂದಿಗೆ ಹಿಂದಿನ ಸಂಪ್ರದಾಯಗಳನ್ನು ಕುರಿತು ಒಂದು ಸಂದರ್ಶನ ನಡೆಸಿ. ಉದಾಹರಣೆಗೆ ಅತಿಥಿಗಳನ್ನು ಅವರು ಹೇಗೆ ಸತ್ಕರಿಸುತ್ತಿದ್ದರು? ಇತ್ಯಾದಿ ಅಂತಹ ಐದು ಸಂಪ್ರದಾಯಗಳನ್ನು ಗುರುತಿಸಿ ಅವುಗಳನ್ನು ಪ್ರಸಕ್ತ ಸಂದರ್ಭಗಳೊಂದಿಗೆ ಹೋಲಿಸಿ.

## 4.6 ನಿಮ್ಮ ಪ್ರಗತಿ ಪರಿಶೀಲನೆ

1. ಸಾಂಸ್ಕೃತಿಕ ಮೌಲ್ಯಗಳ ಬಗ್ಗೆ ನೀವು ಅಧ್ಯಯನ ಮಾಡಿರುವ ಆಧಾರದ ಮೇಲೆ, ಕೆಲವೊಂದು ಭಾರತೀಯ ಸಾಂಸ್ಕೃತಿಕ ಮೌಲ್ಯಗಳನ್ನು ಪಟ್ಟಿ ಮಾಡಿ.
2. ಸಾಂಸ್ಕೃತಿಕ ಮೌಲ್ಯಗಳು ಮತ್ತು ಸಮಾಜೀಕರಣದ ಪರಿಕಲ್ಪನೆಯನ್ನು ವಿವರಿಸಿ.
3. ಶಾಲೆಯ ಸನ್ನಿವೇಶವೊಂದನ್ನು ತೆಗೆದುಕೊಂಡು, ನಿಮ್ಮ ಶಿಕ್ಷಕರೊಂದಿಗೆ ಮತ್ತು ಅನ್ಯಲಿಂಗದವರೊಡನೆ ನಡೆವ ನಿಮ್ಮ ಸಂಭಾಷಣೆಯನ್ನು ಸಂಸ್ಕೃತಿಯು ಹೇಗೆ ಪ್ರಭಾವಿತಗೊಳಿಸುತ್ತದೆ ಎಂಬುದನ್ನು ವಿವರಿಸಿ.
4. ಜೀವನವನ್ನು ಕುರಿತ ನಿಮ್ಮ ಗ್ರಹಿಕೆಯ ಮೇಲೆ ಸಂಸ್ಕೃತಿಯು ಹೇಗೆ ಪ್ರಭಾವ ಬೀರುತ್ತದೆ ಎಂಬುದನ್ನು ವಿವರಿಸಿ. ಒಂದು ಉದಾಹರಣೆ ಕೊಡಿ.
5. ಮಾಧ್ಯಮಗಳ ಜಾಗತೀಕರಣದ ಬಗ್ಗೆ ಒಂದು ಟಿಪ್ಪಣಿ ಬರೆಯಿರಿ.

## 4.7 ಹೆಚ್ಚಿನ ಓದಿಗಾಗಿ


1. Curran, Mass Communication and Society, Edward Arnold - London, 1977.
2. Herman and Chesney, The Global Media; The New Missionaries of Corporate Capitalism, Madhyam Books, New Delhi, 1977.
3. Fred Jondt, Intercultural Communication: An Introduction, Sage Publications - New Delhi, 1999.
4. Walter Russel Mead, Asian Values, Asian Miralce and Asian Mirage? Media Asia 26,1998.
5. Prosser, The Cultural Dialogue: An Introduction of Intercultural Communication, Miffitim, Boston, Houghton, 1978.
6. Sitaram K.S. Culture and Communication: A World View, McGrow Hill - New York, 1998.



ಬರಹ: ತೇಜಸ್ವಿ ನವಿಲೂರ್ ಮತ್ತು ಬಿ. ವಿ. ಸತ್ಯೇಂದ್ರರಾವ್

# ಟಿಪ್ಪಣಿ

# ಘಟಕ 5 ಸರ್ಕಾರ, ಸಮಾಜ ಮತ್ತು ಸಂವಹನ

ರಚನೆ


5.0 ಉದ್ದೇಶಗಳು

5.1 ಪ್ರಸ್ತಾವನೆ

5.2 ಚುನಾಯಿತ ಸರ್ಕಾರ ಮತ್ತು ಸಾರ್ವಜನಿಕ ಜವಾಬ್ದಾರಿ

5.2.1 ಅರಿವುಳ್ಳ ಪ್ರಜಾ ಸಮೂಹ

5.2.2 ಪಂಚವಾರ್ಷಿಕ ಯೋಜನೆಗಳು ಮತ್ತು ಅಭಿವೃದ್ಧಿ

5.3 ಗ್ರಾಮೀಣ ಭಾರತ

53.1 ಭಾರತೀಯ ಸಮಾಜದ ಗುಣಲಕ್ಷಣಗಳು

5.3.2 ವೈವಿಧ್ಯತೆಯಲ್ಲಿ ಏಕತೆ

5.4 ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ಸಂವಹನದ ಪಾತ್ರ

5.4.1 ಭಾರತದಲ್ಲಿ ಮಾಹಿತಿ ಕ್ರಾಂತಿ

5.4.2 ಸಹಭಾಗಿತ್ವ ಸಂಹವನ

5.5 ಸಾರಾಂಶ

5.6 ನಿಮ್ಮ ಪ್ರಗತಿ ಪರಿಶೀಲನೆ

5.7 ಹೆಚ್ಚಿನ ಓದಿಗಾಗಿ

## 5.0 ಉದ್ದೇಶಗಳು

ಪರಿಣಾಮಕಾರಿ ಹಾಗೂ ಫಲಪ್ರದ ಆಡಳಿತ ನೀಡುವುದು ಪ್ರತಿಯೊಂದು ಚುನಾಯಿತ ಸರ್ಕಾರದ ಹೊಣೆ ಹಾಗು ಪ್ರಜೆಗಳ ಹಿತ ಕಾಯುವುದು ಅದರ ಪ್ರಮುಖ ಜವಾಬ್ದಾರಿಗಳಲ್ಲೊಂದು. ಪ್ರಜಾಪ್ರಭುತ್ವದಲ್ಲಿ, ಸಾಮಾಜಿಕ ಸ್ವಾಸ್ಥ್ಯ ಸರ್ಕಾರಗಳನ್ನು ನೇರವಾಗಿ ಅವಲಂಬಿಸುತ್ತದೆ. ಈ ನಿಟ್ಟಿನಲ್ಲಿ ಪ್ರಜೆಗಳ - ಸರ್ಕಾರದ ನಡುವಿನ ಸಂಬಂಧಗಳಲ್ಲಿ ಸಂವಹನ ಮಹತ್ವಪೂರ್ಣ ಪಾತ್ರ ನಿರ್ವಹಿಸುತ್ತದೆ. ಈ ಘಟಕದ ಅಧ್ಯಯನದಿಂದ ನೀವು ಈ ಕೆಳಕಂಡ ಅಂಶಗಳನ್ನು ತಿಳಿಯಬಹುದು.

* ಸರ್ಕಾರ ಮತ್ತು ಸಾರ್ವಜನಿಕ ಜವಾಬ್ದಾರಿಗಳನ್ನು ಅರಿಯುವುದು;
* ಭಾರತೀಯ ಸಂವಹನ ಅಗತ್ಯತೆಗಳನ್ನು ಅರಿಯುವುದು;
* ಭಾರತೀಯ ಸಮಾಜದ ಸ್ವರೂಪವನ್ನು ತಿಳಿಯುವುದು;
* ಅಭಿವೃದ್ಧಿ ಪ್ರಕ್ರಿಯೆಯಲ್ಲಿ ಸಂವಹನದ ಪಾತ್ರ, ಮತ್ತು
* ಸಹಭಾಗಿತ್ವ ಸಂವಹನದ ಮಹತ್ವ ಅರಿಯುವುದು.

## 5.1 ಪ್ರಸ್ತಾವನೆ

ಈ ಘಟಕದಲ್ಲಿ, ನಾವು ಭಾರತದಂತಹ ಪ್ರಜಾಪ್ರಭುತ್ವ ರಾಷ್ಟ್ರದಲ್ಲಿ ಒಂದು ಒಳ್ಳೆಯ ಸರ್ಕಾರ ಮತ್ತು ಸಾರ್ವಜನಿಕ ಜವಾಬ್ದಾರಿಯ ಮಹತ್ವವನ್ನು ತಿಳಿದುಕೊಳ್ಳೋಣ. ಹಾಗೆಯೇ, ಭಾರತದಂತಹ ವೈವಿಧ್ಯಮಯ ದೇಶದಲ್ಲಿ ಸಾಮಾಜಿಕ ರಚನೆ ಮತ್ತು ಸ್ವರೂಪ, ಅಭಿವೃದ್ಧಿ ಕಾರ್ಯಗಳಲ್ಲಿ ಸಂವಹನ ಪಾತ್ರವನ್ನು ಸಹ ವಿಶ್ಲೇಷಿಸೋಣ.

## 5.2 ಪ್ರಜಾಪ್ರಭುತ್ವವಾದಿ ಸರ್ಕಾರ ಮತ್ತು ಸಾರ್ವಜನಿಕ ಜವಾಬ್ದಾರಿ

ಸಾರ್ವಜನಿಕ ಹಿತಾಸಕ್ತಿಗೆ ಬದ್ಧವಾದ ಯಾವುದೇ ಸರ್ಕಾರ, ತಾನು ಹಾಕಿಕೊಂಡ ಗುರಿಗಳನ್ನು ತಲುಪಲು, ಸರ್ಕಾರಿ ತತ್ವಗಳನ್ನು ಆಧರಿಸಿದ ಒಂದು ವ್ಯವಸ್ಥೆಯ ಮೇಲೆ ಕಾರ್ಯ ನಿರ್ವಹಿಸಬೇಕಾಗುತ್ತದೆ. ಭಾರತ ಸರ್ಕಾರ ಕೂಡ ಯೋಜನಾಬದ್ಧ ಅಭಿವೃದ್ಧಿಯನ್ನು ಕೈಗೊಳ್ಳಲು ತನ್ನ ಸಾಂಪ್ರದಾಯಿಕ ಕಾರ್ಯಾಂಗದ ಮೇಲೆ ಅವಲಂಬಿತವಾಗಿ ಹಲವಾರು ಯೋಜನೆಗಳನ್ನು ಕಾರ್ಯಗತಗೊಳಿಸುತ್ತಿದೆ. ಈ ಕಾರ್ಯಾಂಗದ ವ್ಯವಸ್ಥೆ ಸಾಮ್ರಾಜ್ಯಶಾಹಿ ಬ್ರಿಟಿಷ್ ಆಡಳಿತದ ಬಳುವಳಿಯಾಗಿ ಬಂದಂತಹದ್ದು. ಭಾರತದಲ್ಲಿದ್ದ ಬ್ರಿಟಿಷ್ ಆಡಳಿತಶಾಹಿ ವ್ಯವಸ್ಥೆ ಯಾವುದೇ ರೀತಿಯ ಅಭಿವೃದ್ಧಿ ಕಾರ್ಯಗಳನ್ನು ಹಮ್ಮಿಕೊಳ್ಳದ ಜನ ವಿರೋಧಿ ನೀತಿ ಅನುಸರಿಸುತ್ತಿತ್ತು. ಆಗ ಆಡಳಿತಗಾರರ ಮುಖ್ಯ ಕೆಲಸವೆಂದರೆ ಕಾನೂನು ಸುವ್ಯವಸ್ಥೆಯನ್ನು ಕಾಪಾಡುವುದು ಮತ್ತು ತೆರಿಗೆಗಳನ್ನು ಸಂಗ್ರಹಿಸುವುದಾಗಿತ್ತು.

ಸ್ವಾತಂತ್ರ್ಯ ಬಂದ ನಂತರ ರಾಷ್ಟ್ರದ ಸ್ವರೂಪವೇ ಬದಲಾಯಿತು. ಸಂವಿಧಾನದ ಅಳವಡಿಕೆಯೊಡನೆ ಪ್ರಜಾಪ್ರಭುತ್ವವಾದಿ, ಸಮಾಜವಾದಿ ಮೌಲ್ಯಗಳನ್ನಾಧರಿಸಿದ ಬದಲಾವಣೆಗಳನ್ನು ಆಡಳಿತ ವ್ಯವಸ್ಥೆಗೆ ತರಲಾಯಿತು. ಪ್ರಜಾಪ್ರಭುತ್ವದಿಂದಾಗಿ ಸಂಸತ್ತು, ಸದಸ್ಯತ್ವ, ಮಂತ್ರಿ ಪದವಿ, ಚುನಾವಣೆ ಹಾಗೂ ರಾಜಕೀಯ ಪಕ್ಷಗಳು ಮತ್ತು ಸಾರ್ವಜನಿಕ ಜವಾಬ್ದಾರಿಯ ಪರಿಕಲ್ಪನೆ ಸಾಕಾರಗೊಂಡವು. ಅದೇ ರೀತಿ ಕಾರ್ಯಾಂಗದ ಚಟುವಟಿಕೆಯಲ್ಲಿನ ವೈವಿಧ್ಯತೆಯ ಲಕ್ಷಣಗಳೂ ಕೂಡ ತೀವ್ರ ಬದಲಾವಣೆಗೊಳಪಟ್ಟವು. ಸರ್ಕಾರದ ಧೋರಣೆಗಳು ರಾಷ್ಟ್ರೀಯ ಅಭಿವೃದ್ಧಿಯೆಡೆಗೆ ಪ್ರಾಶಸ್ತ್ಯ ನೀಡಿದವು. ಸರ್ಕಾರದ ಕಾರ್ಯಚಟುವಟಿಕೆಗಳು ವಿಸ್ತಾರಗೊಂಡಂತೆ ಹಾಗು ಆರ್ಥಿಕ ಮತ್ತು ಸಾಮಾಜಿಕ ಅಭಿವೃದ್ಧಿಗೆ ಒತ್ತು ನೀಡಿದಂತೆ, ಸಾರ್ವಜನಿಕ ಜವಾಬ್ದಾರಿಗಳೂ ಸಹ ಮಹತ್ವವನ್ನು ಪಡೆದಿವೆ.

ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಯಾವುದೇ ಚುನಾಯಿತ ಸರ್ಕಾರ ತನ್ನ ಕರ್ತವ್ಯ ನಿರ್ವಹಣೆ ಹಾಗು ಅಧಿಕಾರ ಚಲಾವಣೆಯ ಸಮಯಗಳಲ್ಲಿ ಸಾರ್ವಜನಿಕರಿಗೆ ಹೊಣೆಗಾರರಾಗಬೇಕಾಗಿರುವುದು ಅತ್ಯಾವಶ್ಯ. ಇದು ಅಧಿಕಾರ ದುರುಪಯೋಗ ಮತ್ತು ದುಂದುಗಾರಿಕೆಗೆ ಹಾಕುವ ಕಡಿವಾಣ. ಸಾರ್ವಜನಿಕ ಜವಾಬ್ದಾರಿ ಎಂದರೆ, ಸರ್ಕಾರ ತನ್ನ ಅಧಿಕಾರ ಚಲಾವಣೆಯ ಅವಧಿಯಲ್ಲಿ ಆಗಿರುವ ಎಲ್ಲ ವಿದ್ಯಮಾನಗಳ ಬಗ್ಗೆ ಸಾರ್ವಜನಿಕರು ಒಪ್ಪುವಂತಹ ಸೂಕ್ತ ವಿಷಯಗಳನ್ನು ತೆರೆದಿಡುವುದಾಗಿದೆ ಅಥವಾ ಸಾರ್ವಜನಿಕರಿಗಿರುವ ವಿಶೇಷಾಧಿಕಾರ ಎಂದು ಅರ್ಥೈಸಬಹುದು.

## 5.2.1 ಅರಿವುಳ್ಳ ಪ್ರಜಾಸಮೂಹ

ಯಾವುದೇ ಸರ್ಕಾರ ಸುಲಲಿತವಾಗಿ ಕಾರ್ಯನಿರ್ವಹಿಸಬೇಕಾದರೆ, ಅದು ತನ್ನ ಪ್ರಜೆಗಳೊಂದಿಗೆ ಉತ್ತಮ ಬಾಂಧವ್ಯ ಹೊಂದಿರಬೇಕಾಗುತ್ತದೆ. ಇದು ಭಾರತದಂತಹ ಬೃಹತ್ ಪ್ರಜಾಪ್ರಭುತ್ವವಾದಿ ರಾಷ್ಟ್ರದಲ್ಲಿ ಜನರ ಬೆಂಬಲಗಳು, ನಿರ್ಧಾರಗಳು ಸರ್ಕಾರದ ಅಳಿವು-ಉಳಿವಿನ ಪ್ರಶ್ನೆಯಾಗಿರಬಹುದು. ಯಾವುದೇ ರಾಷ್ಟ್ರೀಯ ನೀತಿ ನಿಯಮಾವಳಿಗಳನ್ನು ರೂಪಿಸುವಾಗ ಸಾರ್ವಜನಿಕ ಆಶೋತ್ತರಗಳನ್ನು ಸರ್ಕಾರ ಗಣನೆಗೆ ತೆಗೆದುಕೊಳ್ಳಬೇಕಾಗುತ್ತದೆ.

ಸರ್ಕಾರ ಜನರ ಒಳಿತಿಗಾಗಿ ಕೇವಲ ಯೋಜನೆಗಳನ್ನು ಹಮ್ಮಿಕೊಂಡರೆ ಅಥವಾ ನೀತಿ ನಿಯಮಾವಳಿಗಳನ್ನು ಹಮ್ಮಿಕೊಂಡರಷ್ಟೇ ಸಾಲದು. ದೇಶದ ಉದ್ದಗಲಕ್ಕೂ ಇರುವ ಪ್ರಜೆಗಳಿಗೆ ಈ ಬಗ್ಗೆ ಮಾಹಿತಿ ನೀಡಬೇಕಾಗುತ್ತದೆ. ಸರ್ಕಾರದ ಯೋಜನೆಗಳು, ಕಾರ್ಯಕ್ರಮಗಳು ಸಾಧನೆಗಳನ್ನು ಸೂಕ್ತ ಮಾಹಿತಿ ಸೇವೆಗಳ ಮೂಲಕ ಒದಗಿಸಬೇಕಾಗುತ್ತದೆ. ಇದಕ್ಕಾಗಿ ಭಾರತ ಸರ್ಕಾರ, ಸಾರ್ವಜನಿಕ ಮಾಹಿತಿಯನ್ನು ಪರಿಣಾಮಕಾರಿಯಾಗಿ ಪ್ರಜೆಗಳಿಗೆ ತಲುಪಿಸಲು ವಿವಿಧ ಮಾಧ್ಯಮ ವಿಭಾಗಗಳನ್ನೊಳಗೊಂಡ ವಾರ್ತಾ ಮತ್ತು ಪ್ರಸಾರ ಸಚಿವಾಲಯವನ್ನು ಸ್ಥಾಪಿಸಿದೆ.

ಈ ವಿಭಾಗಗಳು ಕಾಲಕಾಲಕ್ಕೆ ಸರ್ಕಾರಿ ಕಾರ್ಯಕ್ರಮಗಳ ಸಾಧನೆ, ಯೋಜನೆಗಳ ಬಗೆಗಿನ ಜನರ ಪ್ರತಿಕ್ರಿಯೆಗಳನ್ನು ಸಂಗ್ರಹಿಸಿ ಸರ್ಕಾರಕ್ಕೆ ತಲುಪಿಸುವ ಕೆಲಸವನ್ನು ಕೂಡ ಮಾಡುತ್ತವೆ. ಇದು ಸರ್ಕಾರ ಜನರ ಅಗತ್ಯತೆಗಳನ್ನು ಅರ್ಥ ಮಾಡಿಕೊಂಡು ಸೂಕ್ತ ತೀರ್ಮಾನಗಳನ್ನು ತೆಗೆದುಕೊಳ್ಳಲು ಸಹಾಯ ಮಾಡುತ್ತದೆ.

ಮಾಹಿತಿ ಜ್ಞಾನಾಭಿವೃದ್ಧಿಗೆ ಸಹಾಯಕ. ಆದುದರಿಂದಲೇ ಜ್ಞಾನ ವಿವಿಧ ವಿಷಯಗಳ ಬಗೆಗಿನ ಅಭಿಪ್ರಾಯಗಳನ್ನು ರೂಪಿಸಿಕೊಳ್ಳುವಲ್ಲಿ ಮಹತ್ತರ ಪಾತ್ರ ವಹಿಸುತ್ತದೆ. ಸಾರ್ವಜನಿಕರಿಗಿರುವ ಒಟ್ಟಾರೆ ಅಭಿಪ್ರಾಯ ಕಾಲ ಕಾಲಕ್ಕೆ ಬದಲಾಯಿಸುತ್ತಿರುತ್ತದೆ. ಅಂತೆಯೇ, ಪ್ರಜಾಪ್ರಭುತ್ವ ತತ್ವಗಳ ಆಧಾರದ ಮೇಲೆ ಚುನಾಯಿತಗೊಂಡ ಸರ್ಕಾರ ಯಾವಾಗಲೂ ಸಾರ್ವಜನಿಕ ಚರ್ಚೆಗೆ ಅವಕಾಶಗಳನ್ನು ಕಲ್ಪಿಸಿ, ಒಟ್ಟಾರೆ ಅಭಿಪ್ರಾಯ ರೂಪಿಸಲು ಬದ್ಧವಾಗಿರಬೇಕಾಗುತ್ತದೆ. ಸಂಪೂರ್ಣ ಅರಿವುಳ್ಳ ಪ್ರಜೆಗಳು ರಚನಾತ್ಮಕ ಹಾಗೂ ಪರಿಣಾಮಕಾರಿ ತೀರ್ಮಾನಗಳಿಗೆ ಯಾವಾಗಲೂ ಕಾರಣರಾಗುತ್ತಾರೆ.

## 5.2.2 ಪಂಚವಾರ್ಷಿಕ ಯೋಜನೆಗಳು ಹಾಗು ಅಭಿವೃದ್ಧಿ

ರಾಷ್ಟ್ರೀಯ ಅಗತ್ಯತೆಗಳನ್ನು, ಸಂಪನ್ಮೂಲ ಸದ್ಬಳಕೆ ಹಾಗೂ ಅಭಿವೃದ್ಧಿಗಳನ್ನು ಗಮನದಲ್ಲಿರಿಸಿಕೊಂಡು ಕೇಂದ್ರ ಸರ್ಕಾರ 1950ರಲ್ಲಿ ಯೋಜನಾ ಆಯೋಗವನ್ನು ಸ್ಥಾಪಿಸಿ ಪಂಚವಾರ್ಷಿಕ ಯೋಜನೆಗಳನ್ನು ಜಾರಿಗೆ ತಂದಿತು. ಈ ಪಂಚವಾರ್ಷಿಕ ಯೋಜನೆಗಳ ಎಲ್ಲಾ ಪ್ರಗತಿಪರ ಕಾರ್ಯಕ್ರಮಗಳನ್ನು ಐದು ವರ್ಷಗಳಿಗೊಮ್ಮೆ ಪರಿಶೀಲಿಸಿ ಅದರಲ್ಲಿರುವ ಲೋಪದೋಷಗಳನ್ನು ನಿವಾರಿಸಿ ದೇಶದ ಸರ್ವತೋಮುಖ ಅಭಿವೃದ್ಧಿಗೆ ಸಹಾಯಕವಾಗುವಂತೆ ಯೋಜಿಸಲಾಗಿದೆ. 1951 ಹಾಗು 1997ರ ನಡುವೆ ಯೋಜನಾ ಆಯೋಗ ಎಂಟು ಪಂಚವಾರ್ಷಿಕ ಯೋಜನೆಗಳು ಹಾಗೂ ಐದು ವಾರ್ಷಿಕ ಯೋಜನೆಗಳನ್ನು ಜಾರಿಗೊಳಿಸಿದೆ.

ಎಲ್ಲಾ ಪಂಚವಾರ್ಷಿಕ ಯೋಜನೆಗಳು ಪ್ರಜೆಗಳ ಸರ್ವಾಂಗೀಣ ಅಭಿವೃದ್ಧಿಗೆ ಲಕ್ಷ್ಯ ವಹಿಸಿವೆ. ಯೋಜನೆಗಳನ್ನು ಜಾರಿಗೊಳಿಸಲು ಹಾಗು ಅಭಿವೃದ್ಧಿ ಪ್ರಕ್ರಿಯೆಯಲ್ಲಿ ಪ್ರತಿ ಹಂತದಲ್ಲೂ ಜನರ ಸಹಭಾಗಿತ್ವಕ್ಕೆ ಒತ್ತು ನೀಡಲಾಗಿದೆ. ಆರ್ಥಿಕ ದುರ್ಬಲತೆಯನ್ನು ಹೋಗಲಾಡಿಸಲು ಮಾಹಿತಿ ದುರ್ಬಲತೆಯನ್ನು ಹೋಗಲಾಡಿಸುವುದು ಅತ್ಯಾವಶ್ಯಕ ಎನ್ನುವುದು ತಜ್ಞರ ಅಭಿಪ್ರಾಯ. ಆದುದರಿಂದಲೇ ಪ್ರಜೆಗಳ ಮಾಹಿತಿ ಅಜ್ಞಾನವನ್ನು ಹೋಗಲಾಡಿಸುವುದು ವಾರ್ತೆ ಹಾಗೂ ಸಾರ್ವಜನಿಕ ಸಂಪರ್ಕ ಇಲಾಖೆಗಳ ಪರಮ ಗುರಿಯಾಗಿದೆ.

## 5.3 ಗ್ರಾಮೀಣ ಭಾರತ

ಭಾರತದ ಬಹುಮುಖ್ಯ ಗುಣಲಕ್ಷಣವೆಂದರೆ, ಅದರ ಗ್ರಾಮೀಣ ಸ್ವರೂಪ ದೇಶದ ಶೇ. 70ಕ್ಕೂ ಹೆಚ್ಚು ಜನರು ಸುಮಾರು 6 ಲಕ್ಷ ಹಳ್ಳಿಗಳಲ್ಲಿ ವಾಸಿಸುತ್ತಿದ್ದು, ವ್ಯವಸಾಯವನ್ನೇ ನಂಬಿರುವ ರೈತಾಪಿ ಜನರಾಗಿದ್ದಾರೆ. ರಚನಾತ್ಮಕ ಕಾರ್ಯಗಳ ಮೂಲಕ ಸಮಗ್ರ ಬದಲಾವಣೆ ತರುವುದು ಯಾವುದೇ ಅಭಿವೃದ್ಧಿ ಯೋಜನೆಯ ಗುರಿಯಾಗುತ್ತದೆ. ದೇಶದ ಬಹುತೇಕ ಪ್ರಜೆಗಳು ಗ್ರಾಮೀಣ ಪರಿಸರದಲ್ಲಿದ್ದು, ವ್ಯವಸಾಯ ಆಧಾರಿತ ಚಟುವಟಿಕೆಗಳಲ್ಲಿ ತೊಡಗಿರುವುದರಿಂದ, ವ್ಯವಸಾಯ ವಲಯವನ್ನು ಆಧುನೀಕರಣಗೊಳಿಸುವತ್ತ ಹೆಚ್ಚು ಒತ್ತು ನೀಡಲಾಗುತ್ತಿದೆ. ಆದರೆ ಎಲ್ಲ ಸರ್ಕಾರಿ, ಅರೆ ಸರ್ಕಾರಿ ಹಾಗು ಸ್ವಯಂಸೇವಾ ಸಂಸ್ಥೆಗಳು ತಮ್ಮ ಯೋಜನೆಗಳನ್ನು ರೂಪಿಸುವಾಗ ಗ್ರಾಮ್ಯ ಸಂವಹನಕ್ಕೆ ಹೆಚ್ಚು ಮಹತ್ವ ನೀಡದಿರುವುದು ಕಂಡು ಬರುತ್ತದೆ. ಬಹಳಷ್ಟು ಸಾರಿ ಗ್ರಾಮ್ಯ ಸಂವಹನ ಕಲ್ಪನೆಗಳೇ ಈ ಯೋಜನೆ ನಿರೂಪಕರಿಗೆ, ಧೋರಣೆ ನಿರೂಪಕರಿಗೆ ತಿಳಿಯದಿರುವುದು ವಿಷಾದದ ಸಂಗತಿ. ಈ ಹಿನ್ನಲೆಯಲ್ಲಿ ಕೃಷಿ ಕಾರ್ಮಿಕರು ಸಣ್ಣ ಹಿಡುವಳಿದಾರರು, ಕುಶಲಕರ್ಮಿಗಳೇ ಇರುವ ಗ್ರಾಮೀಣ ಭಾರತದ ಜನತೆ ಆಧುನಿಕ ತಂತ್ರಜ್ಞಾನ ಹಾಗು ರೇಡಿಯೋ, ಟಿವಿಗಳಂತಹ ಸಮೂಹ ಮಾಧ್ಯಮಗಳು ಮಾಹಿತಿ ಪಸರಿಸುವಲ್ಲಿ ನಿರ್ಣಾಯಕ ಪಾತ್ರ ವಹಿಸಬೇಕಾಗುತ್ತದೆ. ಸರ್ಕಾರಿ ಪ್ರಯತ್ನಗಳು ಇಲ್ಲದಿರುವಲ್ಲಿ ಅಥವಾ ಪರಿಣಾಮಕಾರಿಯಾಗಿ ಇಲ್ಲದಿದ್ದಂತಹ ಸಂದರ್ಭಗಳಲ್ಲಿ ಸಮೂಹ ಮಾಧ್ಯಮಗಳು ಮಾಹಿತಿ ರವಾನೆ, ಸಮರ್ಪಣೆ ಹಾಗು ಜ್ಞಾನ ವೃದ್ಧಿಗೆ ತಮ್ಮ ಕಾಣಿಕೆ ಸಲ್ಲಿಸಿವೆ. ಬದಲಾವಣೆಯ ಗಾಳಿ ಬೀಸಲು ಅಗತ್ಯವಾದ ಸಂವಹನಾತ್ಮಕ ಅಂಶಗಳ ಸೇತುಬಂಧವನ್ನು ನಿರ್ಮಿಸುವಲ್ಲಿ ಅವು ಕೆಲಮಟ್ಟಿಗೆ ಸಫಲವಾಗಿವೆ. ಆರೋಗ್ಯ, ವಸತಿ, ನೈರ್ಮಲ್ಯ, ಸಾರಿಗೆ, ರಸ್ತೆ ಸಂಪರ್ಕಗಳು ನಿಧಾನವಾಗಿ ಗ್ರಾಮೀಣ ಪರಿಸರದ ಮೇಲೆ ಪ್ರಭಾವ ಬೀರುತ್ತಿದ್ದು, ಒಟ್ಟಾರೆ ಜೀವನಮಟ್ಟ ಸುಧಾರಿಸುತ್ತಿದೆ.

### 5.3.1 ಭಾರತೀಯ ಸಮಾಜದ ಸ್ವರೂಪ

ವೈವಿಧ್ಯತೆಯೇ ಭಾರತೀಯ ಸಮಾಜದ ಹೆಗ್ಗುರುತು. ಧಾರ್ಮಿಕ ಹಾಗು ಭಾಷಾ ವಿಭಿನ್ನತೆಯ ನಡುವೆಯೇ ಧಾರ್ಮಿಕ ಸಹಿಷ್ಣುತೆ, ಭಾಷಾ ಸಹಿಷ್ಣುತೆಗೆ ದೇಶ ಒತ್ತು ನೀಡಿದೆ. ಇದು ಒಟ್ಟಾರೆ ಮಾನವಾಭಿವೃದ್ಧಿಯ ನಿಟ್ಟಿನಲ್ಲಿ ಅತ್ಯಗತ್ಯವಾಗಿರುವ ಕ್ರಮವಾಗಿದೆ.

ಆದರೆ ಹಿಂದೂ ಸಂಪ್ರದಾಯ ಸ್ವೀಕರಿಸಿದ ಜಾತಿ ಪದ್ಧತಿ ಸಮಾಜದ ಮೇಲೆ ಇನ್ನೂ ತನ್ನ ಬಿಗಿ ಹಿಡಿತ ಹೊಂದಿದೆ. ಸಾಂಪ್ರದಾಯಿಕ ಹಾಗೂ ಧಾರ್ಮಿಕ ಆಚರಣೆಗಳ ಆಧಾರದ ಮೇಲೆ ಕಟ್ಟಲ್ಪಟ್ಟ ಜಾತಿ ವ್ಯವಸ್ಥೆ ಎಷ್ಟು ಪ್ರಬಲವಾಗಿ ಬೆಳೆದಿದೆಯೆಂದರೆ, ಕೇವಲ ಜೀವನ ಶೈಲಿ, ಹಾಗೂ ಕೆಲ ನಡವಳಿಕೆಯ ಆಧಾರದ ಮೇಲೆಯೇ ಜಾತಿಯನ್ನು ಗುರುತಿಸುವ ಕಾರ್ಯಗಳಾಗುತ್ತಿವೆ. ಹೆಸರಾಂತ ಸಮಾಜಶಾಸ್ತ್ರಜ್ಞ ಎಂ.ಎನ್. ಶ್ರೀನಿವಾಸ್ ಹೇಳುವಂತೆ 'ಜಾತಿ ಒಂದು ಸಂಕೀರ್ಣ ವ್ಯವಸ್ಥೆ, ಈವತ್ತಿಗೂ ಬಹುಪಾಲು ಎಲ್ಲ ಹಿಂದೂಗಳ ಜೀವನವನ್ನು ಜಾತಿ ಹಲವಾರು ಪ್ರಮುಖ ವಿಷಯಗಳಲ್ಲಿ ಆಳುತ್ತಿದೆ.

## 5.3.2 ವಿವಿಧತೆಯಲ್ಲಿ ಏಕತೆ

ವಿಸ್ತಾರ ಭಾರತ, ವಿವಿಧತೆಯಲ್ಲಿ ಏಕತೆಗೆ ಅತ್ಯುತ್ತಮ ಉದಾಹರಣೆ. ಧಾರ್ಮಿಕ, ಸಾಂಸ್ಕೃತಿಕ ಹಾಗೂ ಭಾಷಾ ವೈವಿಧ್ಯತೆಯ ನಡುವೆಯೂ ದೇಶ, ಒಂದಾಗಿ ಮುನ್ನಡೆಯುತ್ತಿದೆ. ಸಮಾಜದ ವಿವಿಧ ಸ್ತರಗಳಲ್ಲಿ ಜನರ ನಡುವಿನ ಸಾಮಾಜಿಕ ಸಾಮರಸ್ಯತೆ ಭಾರತೀಯತೆಯನ್ನು ಪ್ರತಿಬಿಂಬಿಸುತ್ತದೆ. ಧಾರ್ಮಿಕ ಭಾವನೆಗಳು, ನಂಬಿಕೆಗಳು ಬಲವಾಗಿ ಬೇರೂರಿರುವ ಭಾರತದ ಸಾಮಾಜಿಕ ವ್ಯವಸ್ಥೆಯಲ್ಲಿ, ನಗರಗಳಲ್ಲಿ ನೆಲೆ ನಿಂತಿರುವ ಮೇಲ್ವರ್ಗದ ಜನ ಹಾಗೂ ಎಲ್ಲ ರೀತಿಯಿಂದಲೂ ಶೋಷಣೆಗೆ ಗುರಿಯಾಗುವ ಗ್ರಾಮೀಣ ಜನತೆ ಜತೆ ಜತೆಯಾಗಿ ಬಾಳುತ್ತಿದ್ದಾರೆ.

ಸರ್ಕಾರ ಶ್ರೀಮಂತ - ಬಡವರ ನಡುವಿನ ಅಂತರವನ್ನು ತನ್ನ ಅಭಿವೃದ್ಧಿ ಕಾರ್ಯಕ್ರಮಗಳಿಂದ ಕಡಿಮೆ ಮಾಡಲು ಶ್ರಮ ವಹಿಸುವುದರಿಂದ ಕೂಡ ಎಲ್ಲ ವರ್ಗದ ಜನರು ಆಶಾಭಾವನೆ ಹೊಂದುವುದು ಸಾಧ್ಯವಾಗಿದೆ.

## 5.4 ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ಸಂವಹನದ ಪಾತ್ರ

ಸಂವಹನ ಪ್ರಕ್ರಿಯೆ ಹೊಸ ವಿಷಯ ಯೋಜನೆಗಳನ್ನು ಜನರಿಗೆ ತಲುಪಿಸುವ ಮಹತ್ವದ ಪಾತ್ರವನ್ನು ವಹಿಸುತ್ತದೆ. ಇದು ಅಭಿವೃದ್ಧಿಶೀಲ ಬದಲಾವಣೆಯನ್ನು ಸರಿದಿಕ್ಕಿನಲ್ಲಿ ಮುನ್ನಡೆಸುವ ಕಾರ್ಯನಿರ್ವಹಿಸುತ್ತದೆ. ಜ್ಞಾನಾಭಿವೃದ್ಧಿ ಹಾಗೂ ಕುಶಲತೆಯನ್ನು ಜನರಿಗೆ ತಲುಪಿಸುವ ಜೊತೆಗೆ, ಸಂವಹನ ಅವರಲ್ಲಿ ಅಭಿರುಚಿ ಮತ್ತು ಮೌಲ್ಯಗಳನ್ನು ತರುತ್ತದೆ. ಆದರೆ ಕೇವಲ ಸಂವಹನಾ ಪ್ರಕ್ರಿಯೆ, ಅಭಿವೃದ್ಧಿಯ ಪ್ರಮುಖ ಅಂಶಗಳನ್ನು ಒಳಗೊಳ್ಳದಿದ್ದರೆ, ಸ್ವತಃ ತಾನಾಗಿ ಯಾವುದೇ ಅಗತ್ಯತೆಯನ್ನು ಪೂರೈಸುವುದಿಲ್ಲ.

ಹೆಸರಾಂತ ಸಂವಹನ ತಜ್ಞ ವಿಲ್ಬರ್ ಶ್ರಾಮ್ ಹೇಳುವಂತೆ "ಮಾಧ್ಯಮಗಳಿಗೆ ಯಾವುದೇ ಗ್ರಾಮೀಣಾಭಿವೃದ್ಧಿ ಪ್ರಕ್ರಿಯೆಯನ್ನು ಪ್ರಾರಂಭಿಸುವ, ಪ್ರೇರೇಪಿಸುವ, ಬಡಿದೆಬ್ಬಿಸುವ ಹಾಗೂ ಉತ್ತೇಜಿಸುವ ಶಕ್ತಿಯಿದೆ, ಇವೆಲ್ಲವೂ ವೈವಿಧ್ಯಮಯ ಅಭ್ಯಾಸಗಳು, ಆಸಕ್ತಿಗಳು, ನಂಬಿಕೆ, ಯೋಜನೆಗಳನ್ನು ನೀಡುವುದರ ಮೂಲಕ ಸಾಧ್ಯವಾಗುತ್ತದೆ."

ಸಂವಹನ ಪ್ರಕ್ರಿಯೆಯಿಂದ ಪ್ರಾರಂಭಗೊಂಡ ಯಾವುದೇ ಅಭಿವೃದ್ಧಿ ನಿರಂತರ ಹಾಗೂ ಸ್ವಯಂ ನಿರ್ವಹಣಾ ಸಾಮರ್ಥ್ಯವನ್ನು ಹೊಂದಿದ್ದು, ಅರ್ಥಪೂರ್ಣವಾಗಿರುತ್ತದೆ. ಮಾಧ್ಯಮಗಳ ಮೂಲಕ ತಲುಪುವ ಮಾಹಿತಿ ವ್ಯಕ್ತಿಯೊಬ್ಬನ ಮನೋವಿಕಾಸ ಮತ್ತು ವ್ಯಕ್ತಿತ್ವಗಳ ಮೇಲೆ ಅನೇಕ ರೀತಿಯಲ್ಲಿ ಪ್ರಭಾವ ಬೀರುತ್ತವೆ. ಮಾಧ್ಯಮಗಳ ಪ್ರಭಾವಶಾಲಿ ಶಕ್ತಿಯಿಂದಾಗಿಯೇ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ಅನೇಕ ಚರ್ಚೆ ತೀರ್ಮಾನಗಳಾಗುತ್ತವೆ. ಅಭಿವೃದ್ಧಿ ಕಾರ್ಯಗಳಲ್ಲಿ ಸಂವಹನ ಅನಕ್ಷರತೆಯನ್ನು ತೊಡೆದುಹಾಕಿ ರಾಷ್ಟ್ರೀಯ ಪ್ರಗತಿಯತ್ತ ಕೊಂಡೊಯ್ಯುತ್ತದೆ.

ಹೊಸತನವನ್ನು ಕಂಡುಕೊಳ್ಳಲು ಮತ್ತು ಅಳವಡಿಸಿಕೊಳ್ಳಲು ಸಮೂಹ ಮಾಧ್ಯಮಗಳು ಜನಸಾಮಾನ್ಯರಲ್ಲಿ ಆಸಕ್ತಿ ಹುಟ್ಟುವಂತೆ ಮಾಡುತ್ತವೆ. ಮಾಧ್ಯಮಗಳಲ್ಲಿ ಪರಿಣಾಮಕಾರಿ ಸಂದೇಶಗಳು ಬದಲಾವಣೆಗಳನ್ನು ಸ್ವೀಕರಿಸುವ ವಾತಾವರಣವನ್ನು ಕಲ್ಪಿಸುತ್ತವೆ. ಅಷ್ಟೇ ಅಲ್ಲದೆ, ಪರಿಣಾಮಕಾರಿ ಸಂವಹನ ಜನ ಸಾಮಾನ್ಯರು ಅಭಿವೃದ್ಧಿ ಪ್ರಕ್ರಿಯೆಯಲ್ಲಿ ತಮ್ಮ ಪಾತ್ರವನ್ನು ಗುರುತಿಸಿಕೊಳ್ಳುವಲ್ಲಿಯೂ ಅವರನ್ನು ಸಜ್ಜುಗೊಳಿಸುತ್ತದೆ.

ಅಭಿವೃದ್ಧಿಯ ಉದ್ದೇಶಗಳನ್ನು ಈಡೇರಿಸಿಕೊಳ್ಳಲು, ಸಾಮಾಜಿಕ ವ್ಯವಸ್ಥೆಯಲ್ಲಿ ಕೆಲ ಮೂಲಭೂತ ಹಾಗೂ ರಚನಾತ್ಮಕ ಬದಲಾವಣೆಗಳನ್ನು ತರಬೇಕಾಗುತ್ತದೆ. ಇದಕ್ಕಾಗಿ ಧೋರಣೆಗಳನ್ನು ನಿರೂಪಿಸುವ ಹಂತದಲ್ಲೇ ಸಂವಹನ ವ್ಯಕ್ತಿಯನ್ನು ಅಳವಡಿಸಿಕೊಳ್ಳುವ ಪ್ರಯತ್ನಗಳು ಆಗಬೇಕಾಗುತ್ತವೆ. ಆದರೆ ಈ ಅಭಿವೃದ್ಧಿ ಉದ್ದೇಶಗಳನ್ನು ಸಾಧಿಸಲು ಪ್ರಬಲ ರಾಜಕೀಯ ಇಚ್ಛಾಸೆ ಹಾಗೂ ಆಡಳಿತಾತ್ಮಕ ಕಾರ್ಯಸಾಧನೆ ಅತ್ಯಾವಶ್ಯಕ. ಹಾಗೆಯೇ, ಪರಿಣಾಮಕಾರಿಯಾದ ಸಂವಹನ ಬುಡಮಟ್ಟದಿಂದಲೂ ಪ್ರತಿಕ್ರಿಯೆಗಳನ್ನು ಸುಲಭವಾಗಿ ಪಡೆಯಲು ಅನುವು ಮಾಡಿಕೊಡುತ್ತದೆ.

## 5.4.1 ಭಾರತದಲ್ಲಿ ಮಾಹಿತಿ ಕ್ರಾಂತಿ

ಭಾರತದಲ್ಲಿ ಮಾಹಿತಿಕ್ರಾಂತಿಯ ಪ್ರಾರಂಭ ತುಸು ನಿಧಾನವಾಗಿ ಪ್ರಾರಂಭವಾಯಿತೆನ್ನಬಹುದು. 1970ರ ದಶಕದ ಪ್ರಾರಂಭದಲ್ಲಿ ಮಾಹಿತಿ ಕ್ರಾಂತಿಯ ಕಲ್ಪನೆ ಬೇರೂರುತ್ತಿದ್ದಂತೆ, ನವಯುಗದ ಮಾಹಿತಿ ಅಗತ್ಯತೆಗಳ ಬಗ್ಗೆ ಒಲವು ತೋರಲಾಯಿತು. ಪ್ರಾರಂಭದಲ್ಲಿ ಗಣಕಯಂತ್ರಗಳನ್ನು ಕೆಲ ರೀತಿ ರಿವಾಜುಗಳನ್ನು ಅನುಸರಿಸಲು ಹಾಗೂ ಮಾಹಿತಿಯನ್ನು ವಿಶ್ಲೇಷಿಸಲು ಕೆಲವು ಸರ್ಕಾರಿ ವಿಭಾಗಗಳು ಬಳಸಲು ತೊಡಗಿದವು. ಭಾರತೀಯ ರೈಲ್ವೆ ಮತ್ತು ಭಾರತೀಯ ವಿಮಾನಯಾನ ಇಲಾಖೆಗಳು ಗಣಕಯಂತ್ರಗಳನ್ನು ಬಳಸಿಕೊಂಡು ಮುಂಗಡ ಕಾಯ್ದಿರಿಸುವ ವ್ಯವಸ್ಥೆಯನ್ನು ಜಾರಿಗೆ ತಂದವು. 1982ರ ಏಷ್ಯನ್ ಕ್ರೀಡಾಕೂಟದ ಸಮಯದಲ್ಲಿ ಜಾರಿಗೊಳಿಸಲಾದ ಬಣ್ಣದ ಟಿವಿ ಪ್ರಸಾರದ ಯಶಸ್ಸು, 1983ರ ಟಿವಿ ಜಾಲವನ್ನು ವಿಸ್ತರಿಸುವ ಮಹತ್ವಾಕಾಂಕ್ಷೆಯ ಯೋಜನೆಗೆ ಚಾಲನೆ ನೀಡಿತು. 1980ರ ದಶಕದ ಕೊನೆಯ ಹೊತ್ತಿಗೆ ದೇಶದಲ್ಲಿ ಪ್ರಸಾರ ವ್ಯವಸ್ಥೆಯ ಭಾರಿ ವಿಸ್ತರಣೆಯಾಯಿತು. ಜೊತೆ ಜೊತೆಯಾಗಿ ಖಾಸಗಿ ಒಡೆತನದ ಹಲವಾರು ಟಿವಿ ವಾಹಿನಿಗಳು ತಲೆಯೆತ್ತಲು ಪ್ರಾರಂಭಿಸಿದವು.

1984 ಮತ್ತು 1989ರ ಅವಧಿಯಲ್ಲಿ ದೂರ ಸಂಪರ್ಕ ಕ್ಷೇತ್ರದಲ್ಲಿ ಸರ್ಕಾರ ಉದಾರ ಧೋರಣೆಗಳನ್ನು ಅನುಸರಿಸುತ್ತಿದ್ದಂತೆ ಗಣಯಂತ್ರದ ಬಳಕೆಯಲ್ಲಿ ದೇಶ ಅಸಾಧಾರಣ ಮುನ್ನಡೆ ಸಾಧಿಸಿತು. 1990ರ ದಶಕದ ಪ್ರಾರಂಭದಲ್ಲಿ ದೇಶ ಹೊಸ ತಾಂತ್ರಿಕತೆಗಳನ್ನು ಅಳವಡಿಸಿಕೊಳ್ಳುತ್ತಿದ್ದಂತೆ, ಕೇಬಲ್ ಟಿವಿ ಹಾಗೂ ಉಪಗ್ರಹವಾಹಿನಿಗಳ ಅಗಾಧ ಬೆಳವಣಿಗೆಗಳಿಂದ ಬಹು ಮಾಧ್ಯಮ ಸಂಪರ್ಕಕ್ರಾಂತಿ ಸಾಧ್ಯವಾಯಿತು. ಈ ದಿನಗಳಲ್ಲಿ ಮಾಹಿತಿಕ್ರಾಂತಿ ದೇಶದ ಎಲ್ಲ ಪ್ರಮುಖ ಕ್ಷೇತ್ರಗಳಲ್ಲಿಯೂ ಬದಲಾವಣೆಯನ್ನು ತಂದಿದೆ. ಭಾರತದ ವಾಣಿಜ್ಯಕ್ಷೇತ್ರ ಸಂಪೂರ್ಣ ಗಣಕೀಕೃತಗೊಂಡು ಪ್ರಗತಿಯತ್ತ ದೇಶ ದಾಪುಗಾಲಿಡಲು ತನ್ನದೇ ಕಾಣಿಕೆ ಸಲ್ಲಿಸುತ್ತಿದೆ. ಮಾಹಿತಿ ಪ್ರಸರಣೆ ಮತ್ತು ದೂರಸಂಪರ್ಕ ಕ್ಷೇತ್ರಗಳು ತ್ವರಿತಗತಿಯ ಪ್ರಗತಿಶೀಲ ಕ್ಷೇತ್ರಗಳಾಗಿ ಹೊರಹೊಮ್ಮಿವೆ. ಹಾಗೆಯೇ, ಮಾಹಿತಿ ತಂತ್ರಜ್ಞಾನ ಕ್ಷೇತ್ರ ಇಂದು ಭಾರತೀಯ ವಾಣಿಜ್ಯ ವ್ಯವಹಾರದ ಮುಂಚೂಣಿ ಕ್ಷೇತ್ರವಾಗಿ ಪರಿಗಣಿಸಲ್ಪಟ್ಟಿದೆ. 1962ರಲ್ಲಿ ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ (ISRO) ಸ್ಥಾಪನೆಯೊಂದಿಗೆ ದೇಶ ಉಪಗ್ರಹ ಸಂವಹನದೆಡೆಗೆ ಅಡಿಯಿಟ್ಟಿತು ಎನ್ನಬಹುದು. 1966ರಲ್ಲಿ ಯುನೆಸ್ಕೋದ ಉಪಗ್ರಹ ಸಂಪರ್ಕ ಕ್ಷೇತ್ರದ ಪರಿಣತ ಸಲಹೆಗಾರರು ಮಾಡಿದ ಶಿಫಾರಸ್ಸಿನಂತೆ, 1975 -76ರಲ್ಲಿ ಆರು ರಾಜ್ಯಗಳು 2,400 ಹಳ್ಳಿಗಳನ್ನು ಒಳಗೊಂಡಂತೆ ಯೋಜಿಸಿ, ಜಾರಿಗೊಳಿಸಿದ ಉಪಗ್ರಹ ಆಧಾರಿತ ಟಿವಿ ಕಲಿಕಾ ಪ್ರಯೋಗ, ಅತ್ಯಂತ ಯಶಸ್ವಿ ಪ್ರಯತ್ನವಾಗಿ ಹೊರಹೊಮ್ಮಿತು. ಭಾರತ ಈ ವಲಯದ ಅಭಿವೃದ್ಧಿಶೀಲ ರಾಷ್ಟ್ರಗಳ ಪೈಕಿ ಉಪಗ್ರಹ ಸಂವಹನ ತಂತ್ರಜ್ಞಾನವನ್ನು ರಾಷ್ಟ್ರೀಯ ಅಭಿವೃದ್ಧಿ ಕಾರ್ಯಗಳಿಗೆ ಬಳಸಲು ಅಡಿಯಿಟ್ಟ ಮೊಟ್ಟಮೊದಲ ರಾಷ್ಟ್ರವಾಗಿ ಹೊರಹೊಮ್ಮಿತು.

## 5.5 ಸಾರಾಂಶ

ಈ ಘಟಕದಲ್ಲಿ ನೀವು ಪ್ರಜಾಪ್ರಭುತ್ವ, ವಿವಿಧತೆಯೇ ಬಹುಮುಖ್ಯವಾದ ಭಾರತೀಯ ಸಮಾಜ ಹಾಗೂ ಸಂವಹನದ ನಡುವಿನ ಬಂಧಗಳ ಹಲವಾರು ಅಂಶಗಳನ್ನು ತಿಳಿದುಕೊಂಡಿರಿ. ಘಟಕದ ಪ್ರಾರಂಭದಲ್ಲಿ ನಾವು ವಸಾಹತುಶಾಹಿಯಿಂದ ಮೊದಲ್ಗೊಂಡು ಇಲ್ಲಿಯವರೆಗೆ ದೇಶದ ಆಡಳಿತ ವ್ಯವಸ್ಥೆಯಲ್ಲಾದ ಹಲವಾರು ಬದಲಾವಣೆಗಳ, ಧೋರಣೆಗಳ ಬಗ್ಗೆ ತಿಳಿದುಕೊಂಡಿದ್ದೇವೆ. ಇತ್ತೀಚಿನ ದಿನಗಳಲ್ಲಿ ಸಾಮಾಜಿಕ ಜವಾಬ್ದಾರಿಗಳು ಹಾಗೂ ಸಾರ್ವಜನಿಕ ಉತ್ತರದಾಯಿತ್ವ ಮೊದಲೆಂದಿಗಿಂತಲೂ ಹೆಚ್ಚಿನ ಪ್ರಾಮುಖ್ಯತೆಯನ್ನು ಪಡೆದುಕೊಂಡಿವೆ. ಬೇರೆ ಬೇರೆ ಅಭಿವೃದ್ಧಿ ಯೋಜನೆಗಳಲ್ಲಿ, ಕಾರ್ಯಕ್ರಮಗಳಲ್ಲಿ ಜನಸಾಮಾನ್ಯರು ಪಾಲ್ಗೊಳ್ಳಲು, ಭಾಗವಹಿಸುವಂತಾಗಲು ಅಗತ್ಯ ಮಾಹಿತಿ ನೀಡುವಿಕೆಗೆ ಸಾಮಾಜಿಕ ಜವಾಬ್ದಾರಿಯ ಅಂಶ ಅನುವುಮಾಡಿಕೊಟ್ಟಿದೆ. ಸಮಾಜದ ಸಂವಹನಾತ್ಮಕ ಅಗತ್ಯತೆಗಳು ಸರ್ಕಾರದ ವಾರ್ತಾ ಮತ್ತು ಪ್ರಸಾರ ಸಚಿವಾಲಯದ ಅಧೀನದಲ್ಲಿ ಹಲವಾರು ಮಾಧ್ಯಮ ಘಟಕಗಳು ಸ್ಥಾಪನೆಗೊಳ್ಳುವಂತೆ ಒತ್ತಡ ಹೇರಿದ ಪರಿಣಾಮವಾಗಿ ಸರ್ಕಾರ ಹಲವಾರು ಅಂತಹ ಘಟಕಗಳನ್ನು ಸ್ಥಾಪಿಸಿತು. ಭಾರತೀಯ ಸಾಮಾಜಿಕ ವ್ಯವಸ್ಥೆಯ ಪ್ರಮುಖ ಅಂಶವೆಂದರೆ, ಧಾರ್ಮಿಕ, ಭಾಷಾವಾರು, ಸಾಂಸ್ಕೃತಿಕ ಹಾಗೂ ಜನಾಂಗೀಯ ವಿಭಿನ್ನತೆಯ ಗ್ರಾಮೀಣ ಜನಸಮೂಹದ ಸಹಬಾಳ್ವೆ. ಅಂತೆಯೇ ಭಿನ್ನತೆಯ ನಡುವೆಯೂ ಏಕತೆ ಸಾಧಿಸಿದ ಭಾರತೀಯ ಸಮಾಜದಲ್ಲಿ ಸಂವಹನದ ಪಾತ್ರ ಮಹತ್ತರವಾದುದು.

## 5.6 ನಿಮ್ಮ ಪ್ರಗತಿ ಪರಿಶೀಲನೆ

ಸೂಚನೆ: ನಿಮ್ಮ ಉತ್ತರಗಳನ್ನು ಈ ಘಟಕದಲ್ಲಿ ನೀಡಲಾಗಿರುವ ಮಾಹಿತಿಯೊಂದಿಗೆ ಹೋಲಿಸಿ.

1. ಗ್ರಾಮೀಣ ಭಾರತದ ಗುಣಲಕ್ಷಣಗಳನ್ನು ವಿವರಿಸಿ.
2. ವಿವಿಧತೆಯಲ್ಲಿ ಏಕತೆಯ ಪರಿಕಲ್ಪನೆಯನ್ನು ವಿವರಿಸಿ.
3. ಸರ್ಕಾರ ಮತ್ತು ಸಾರ್ವಜನಿಕ ಉತ್ತರದಾಯಿತ್ವದ ಬಗ್ಗೆ ಟಿಪ್ಪಣಿ ಬರೆಯಿರಿ.
4. ಪಂಚವಾರ್ಷಿಕ ಯೋಜನೆಗಳ ಮೂಲಭೂತ ಉದ್ದೇಶಗಳನ್ನು ಗುರುತಿಸಿ.
5. ಭಾರತದ ಮಾಹಿತಿ ಕ್ರಾಂತಿಯ ಬಗ್ಗೆ ಟಿಪ್ಪಣಿ ಬರೆಯಿರಿ

## 5.7 ಹೆಚ್ಚಿನ ಓದಿಗಾಗಿ


1. Curran, Mass Communication and Society, Edward Arnold - London, 1977.
2. Fred Jondt, Intercultural Communication; An Introduction, Sage Publications - New Delhi, 1999.
3. Srinivas Melkote, Communication for the Development in the Third World. Rawat Publications - New Delhi, 1994.
4. Srinivas Melkote, Communication Gap in the Process of Development, Rawat Publications - New Delhi, 1994.
5. Prosser, The Cultural Dialogue; An Introduction to Intercultural Communications, Mirfitim Boston, Highton, 1978.



ಬರಹ: ತೇಜಸ್ವಿ ನವಿಲೂರ್ ಮತ್ತು ಬಿ. ವಿ. ಸತ್ಯೇಂದ್ರರಾವ್

# ಘಟಕ 1 ಸಿದ್ಧಾಂತದ ಸ್ವರೂಪ ಮತ್ತು ಬೆಳವಣಿಗೆ

ರಚನೆ

1.0 ಉದ್ದೇಶಗಳು

1.1 ಪ್ರಸ್ತಾವನೆ

1.2 ಸಿದ್ಧಾಂತದ ಪರಿಭಾಷೆ

1.2.1 ರಚನಾಕ್ರಮ

1.2.2 ಸಿದ್ಧಾಂತದ ನಿರ್ಮಾಣ ಎಂದರೇನು?

1.3 ಸಿದ್ಧಾಂತದ ಪರೀಕ್ಷಣೆ

1.3.1 ಸಿದ್ಧಾಂತದ ಮೌಲ್ಯಮಾಪನ

1.3.2 ಸಿದ್ಧಾಂತ ಮತ್ತು ಸಂಶೋಧನೆಗಳ ನಡುವಿನ ಸಂಬಂಧ

1.4 ಸಾರಾಂಶ

1.5 ನಿಮ್ಮ ಪ್ರಗತಿ ಪರಿಶೀಲನೆ

1.6 ಹೆಚ್ಚಿನ ಓದಿಗಾಗಿ

## 1.0 ಉದ್ದೇಶಗಳು

ಬಹಳ ಜಟಿಲವಾದಂತಹ ಪರಿಕಲ್ಪನೆಗಳನ್ನು ವಿಶದೀಕರಿಸಲು ಪರಿಣಿತರು ಬಹಳಷ್ಟು ಬಾರಿ ತರ್ಕಬದ್ಧ ಆಧಾರ ಪ್ರತಿಜ್ಞೆ(Postulate)ಗೊಳಪಟ್ಟ ಸಿದ್ಧಾಂತಗಳನ್ನು ಬಳಸಿಕೊಳ್ಳುತ್ತಾರೆ. ವೈಜ್ಞಾನಿಕವಾಗಿ ತೀರ್ಮಾನಿತವಾಗಿರುವಂತಹ, ಕಾಲದ ಪರೀಕ್ಷೆಯನ್ನು ಮೀರಿ ನಿಂತಂತಹ ಪರಿಕಲ್ಪನೆಗಳೇ ಸಿದ್ಧಾಂತಗಳು. ಸಿದ್ಧಾಂತದ ಅರ್ಥ ಮತ್ತು ಅದರ ಘಟಕಾಂಶಗಳನ್ನು ಈ ಘಟಕವು ನಿಮಗೆ ಪರಿಚಯಿಸಲಿದೆ. ಈ ಘಟಕದಲ್ಲಿ ನೀವು ಕೆಳಕಂಡ ವಿಷಯಗಳನ್ನು ಅರಿಯಲಿದ್ದೀರಿ.

* ಸಿದ್ಧಾಂತವೊಂದನ್ನು ನಿರ್ಮಾಣ ಮಾಡುವುದು ಹೇಗೆ;
* ಸಿದ್ಧಾಂತದ ಪ್ರಾಮುಖ್ಯತೆ, ಮತ್ತು
* ಅದರ ಅನ್ವಯಿಕೆಯಿಂದ ಮೂಡಿಬರುವ ಫಲಿತಾಂಶದೊಂದಿಗಿನ ಅದರ ಸಂಬಂಧ.

## 1.1 ಪ್ರಸ್ತಾವನೆ

'ಥಿಯರಿ' ಪದದ ಹುಟ್ಟು, ಪರೀಕ್ಷಣೆ ಅಥವಾ ಶೋಧನೆ ಎಂಬ ಅರ್ಥವನ್ನು ಹೊಂದಿರುವ 'ಥಿಯೋರಿಯಾ' ಎಂಬ *ಗ್ರೀಕ್* ಪದದಿಂದ. 'ಥಿಯರಿ' ಎಂದರೆ, ಯಾವುದೇ ಒಂದು ಜ್ಞಾನಕ್ಷೇತ್ರದಲ್ಲಿನ ಮೂಲ ಕಲ್ಪನೆಗಳ ಒಂದು ವ್ಯವಸ್ಥೆ, ನಿಯಮಗಳು ಮತ್ತು ನೈಜ ವಾಸ್ತವದ ಅವಶ್ಯಕ ಸಂಬಂಧಗಳ ಒಟ್ಟಾರೆ ಚಿತ್ರಣವನ್ನು ಮೂಡಿಸುವಂತಹ ಒಂದು ವೈಜ್ಞಾನಿಕ ಜ್ಞಾನದ ರೂಪ.

'ವಿಷಯ ಅಥವಾ ಸಂಗತಿಗಳನ್ನು ನಿರೂಪಿಸುವ ಉದ್ದೇಶದಿಂದ ತರ್ಕಬದ್ಧವಾಗಿ ವಾದ ಮಾಡಿರುವಂತಹ ಕಲ್ಪನೆಗಳ ಒಂದು ವರ್ಗ' ಅಥವಾ 'ಅಧ್ಯಯನದ ವಿಷಯವೊಂದು ಆಧಾರಿತವಾಗಿರುವ ಮೂಲತತ್ವಗಳು' ಎಂಬುದಾಗಿ 'ದಿ ಆಕ್ಸ್‌ಫರ್ಡ್ ಅಡ್ವಾನ್ಸ್‌ಡ್ ಲರ್ನರ್ಸ್ ಡಿಕ್ಷನರಿ' ಸಿದ್ಧಾಂತವನ್ನು ವಿವರಿಸುತ್ತದೆ. ಇದಕ್ಕೆ ಉದಾಹರಣೆಯೆಂದರೆ ಡಾರ್ವಿನ್ನನ 'ವಿಕಾಸ ವಾದ' ಅಥವಾ ಆಲ್ಬರ್ಟ್ ಐನ್‌ಸ್ಟೀನ್‌ನ 'ಸಾಪೇಕ್ಷ ವಾದ'. ಆದರೆ, ತರ್ಕವನ್ನು ಅಷ್ಟಾಗಿ ಆಧರಿಸದ ಹಲವಾರು ವಾದ, ಸಿದ್ಧಾಂತಗಳನ್ನು ನಾವು ಕಾಣುತ್ತೇವೆ. ಉದಾಹರಣೆಗೆ ತೆಗೆದುಕೊಳ್ಳುವುದಾದರೆ, ಮಕ್ಕಳ ಲಾಲನೆ ಪಾಲನೆಯ ವಿಷಯದ ಸುತ್ತ ಇರುವ ವಾದಗಳು; ಕಾರ್ಯ ಕಾರಣ ಸಂಬಂಧವನ್ನು ವೈಜ್ಞಾನಿಕವಾಗಿ ವಿವರಿಸದೆ ಇರುವ ಸಿದ್ಧಾಂತಗಳು, ಇತ್ಯಾದಿ.

ವಸ್ತುವಿಷಯಗಳು ಹೇಗಿವೆ ಅಥವಾ ವಸ್ತುವೊಂದು ಹೇಗೆ ಕಾರ್ಯ ಮಾಡುತ್ತದೆ ಎಂಬುದನ್ನು ಕುರಿತ ಊಹೆಯೂ ಸಿದ್ಧಾಂತವೇ. ಯಾವುದೇ ಕ್ರಿಯೆಯನ್ನು ಮಾಡುವುದರಿಂದ ಅಥವಾ ಮಾಡದೇ ಇರುವುದರಿಂದ ಉದ್ಭವಿಸುವ ಪರಿಣಾಮಗಳ ವ್ಯತ್ಯಾಸದ ಬಗೆಗಿನ ಕಲ್ಪನೆ ಇದು ಎಂದೂ ವಿವರಿಸಬಹುದು. ವಸ್ತುಗಳು ಒಂದರ ಜೊತೆ ಒಂದು ಹೇಗೆ ಸಂಬಂಧಿಸಿವೆ ಎಂಬುದನ್ನು ಕುರಿತಾದ ಕಲ್ಪನೆಗಳೂ ಸಿದ್ಧಾಂತಗಳೇ. ಪರಿಕಲ್ಪನೆಗಳು ಹೇಗೆ ಒಂದಕ್ಕೊಂದು ಬೆಸೆದುಕೊಂಡಿವೆ ಎಂಬುದನ್ನು ಕುರಿತಾದ ಅಮೂರ್ತ ಕಲ್ಪನೆಗಳು ಸಿದ್ಧಾಂತಗಳು. ವಸ್ತುಗಳು ಹೇಗಿರಬೇಕು ಎಂದು ಪರಿಭಾವಿಸಲಾಗುತ್ತದೆ ಎಂಬುದರ ಹೇಳಿಕೆ ಕೂಡ ಸಿದ್ಧಾಂತ.

ಸಿದ್ಧಾಂತ ಎಂಬುದು ಒಂದು ಹೋಲಿಕೆ, ವಿಶ್ವ ಹೇಗಿರಬೇಕು ಎಂಬುದರ ಮಾನಸಿಕ ಚಿತ್ರಣ. ಸಿದ್ಧಾಂತಗಳನ್ನು ವ್ಯಕ್ತಪಡಿಸಲು ಹಲವಾರು ವಿಧಾನಗಳಿವೆ. ಕೆಲವು ಬಹಳ ವಿಧ್ಯುಕ್ತವಾದರೆ, ಮತ್ತೆ ಕೆಲವು ಅನೌಪಚಾರಿಕ. ಕೆಲವೊಂದು ಸಿದ್ಧಾಂತಗಳು ಬಹಳ ವಿಸ್ತೃತ, ಜಟಿಲ ಮತ್ತು ಸಂಕೀರ್ಣ. ಆದರೆ, ಯಾವುದೇ ಒಂದು ಸಿದ್ಧಾಂತದ ಅಪೇಕ್ಷಿತ ಗುಣಧರ್ಮಗಳೆಂದರೆ, ಸರಳತೆ ಮತ್ತು ಸ್ಪಷ್ಟತೆ.

## 1.2 ಸಿದ್ಧಾಂತದ ಪರಿಭಾಷೆ

ಗಿಯರಿ(1998)ಯವರ ಪ್ರಕಾರ, ಒಂದು ಸಿದ್ಧಾಂತವು ಎರಡು ಘಟಕಗಳನ್ನು ಹೊಂದಿರುತ್ತದೆ.

1. ಮಾದರಿಗಳ ಒಂದು ಸಮೂಹ.
2. ಈ ಮಾದರಿಗಳನ್ನು ನೈಜ ಪ್ರಪಂಚದ ವ್ಯವಸ್ಥೆಗಳೊಂದಿಗೆ ಬೆಸೆಯುವ ಹಲವು ಆಧಾರ ಸೂತ್ರ ಕಲ್ಪನೆಗಳು.

ಮಾದರಿಗಳು ಮತ್ತು ವಾಸ್ತವ ಪ್ರಪಂಚ - ಇವುಗಳೊಂದಿಗೆ ಸಂಬಂಧ ಕಲ್ಪಿಸುವ ಜೋಡಣೆಗಳು, ಪದಗಳೊಂದಿಗೆ ವಸ್ತುಗಳನ್ನು ಅಥವಾ ಪದಗಳೊಂದಿಗೆ ಇತರ ಪದಗಳನ್ನು ಸೇರಿಸುವಂತಹ ಯಥಾರ್ಥ ನಿಯಮಗಳ ಹಾಗೇನೂ ಅಲ್ಲ, ಅಲ್ಲದೆ, ಒಂದು ಸಂಪೂರ್ಣವಾದ ಮಾದರಿ ಮತ್ತು ಯಾವುದೋ ವಾಸ್ತವ ವ್ಯವಸ್ಥೆಗಳ ನಡುವಿನ ಸಾದೃಶ್ಯದ ಸಂಬಂಧಗಳೇ ಇವು. ವಾಸ್ತವ ವ್ಯವಸ್ಥೆಯನ್ನು ಯಾವುದೋ ಒಂದು ಮಾದರಿಗೆ ಹೋಲುವಂತಹುದು ಎಂಬುದಾಗಿ ಗುರುತಿಸಲಾಗಿದೆ. ಒಂದು ಸಿದ್ಧಾಂತ ಎಂದರೆ, ಆಂತರಿಕವಾಗಿ ಸಮಂಜಸವಾಗಿರುವಂತಹ ತಾರ್ಕಿಕ ಹೇಳಿಕೆಗಳಿಂದ ಬದ್ಧವಾಗಿರುವ ರಚನಾಕ್ರಮಗಳ ಒಂದು ಗುಂಪು.

ಮೂಲ ಕಲ್ಪನೆಗಳು ಮತ್ತು ಮೂಲ ಕಲ್ಪನೆಗಳ ನಡುವಿನ ಕಾರ್ಯಾತ್ಮಕ ಸಂಬಂಧಗಳ ಅಭಿವ್ಯಕ್ತಿಯು, ಸಮ್ಮತವಾದ ಸೈದ್ಧಾಂತಿಕ ಹೇಳಿಕೆಗಳೆಲ್ಲವನ್ನೂ ಇವು ಒಳಗೊಂಡಿರುತ್ತವೆ. ಮೂಲಕಲ್ಪನೆಗಳು ಮತ್ತು ಸಂಬಂಧಗಳು, ಯಾವುದೇ ವೈಜ್ಞಾನಿಕ ಸಿದ್ಧಾಂತದ ನಿರ್ಮಾಣ ಸ್ತಂಭಗಳು. ಅವುಗಳು ಹೆಚ್ಚು ಸ್ಪಷ್ಟವೂ, ನಿಖರವೂ ಆದಂತೆ, ಸಿದ್ಧಾಂತದ ಮೌಲ್ಯಮಾಪನ ಮಾಡುವುದು ಸುಲಭವಾಗುತ್ತದೆ. ಮೂಲಕಲ್ಪನೆಗಳಿಗೆ ಹಲವಾರು ಗುಣಧರ್ಮಗಳಿರುತ್ತವೆ. ಪರಿಕಲ್ಪನೆಗಳು ಮುಖ್ಯವಾಗಿ ಎರಡು ವಿಧದಲ್ಲಿ ಬರುತ್ತವೆ. ಸ್ಥಿರಾಂಕ ಮತ್ತು ಚರಾಂಶಗಳು ಎಂದು. ಬದಲಾಗದಂತಹವು ಸ್ಥಿರಾಂಕಗಳು. ಪ್ರಮುಖವಾದ ವಿಭಿನ್ನತೆ ಎಂದರೆ, ಚರಾಂಶಗಳು ಬದಲಾಗುವಂತಹವು. ಅವುಗಳಿಗೆ ಒಂದಕ್ಕಿಂತ ಹೆಚ್ಚಿನ ಮಜಲುಗಳುಂಟು ಆದರೆ, ಸ್ಥಿರಾಂಕಗಳು ಎಂದರೆ ಅವು ಅಷ್ಟೇ. ಅವು ಬದಲಾಗುವುದಿಲ್ಲ.

### 1.2.1 ರಚನಾಕ್ರಮ (Construct) ಎಂದರೇನು?

ಪ್ರತ್ಯೇಕ / ನಿರ್ದಿಷ್ಟ ಅಂಶಗಳನ್ನು ಸಾಮಾನ್ಯೀಕರಣಗೊಳಿಸುವುದರಿಂದ ಅನುಗಮನ ರೀತಿಯಿಂದ ರೂಪುಗೊಂಡ ಪರಿಕಲ್ಪನೆಗಳೇ ರಚನಾಕ್ರಮಗಳು. ರಚನಾಕ್ರಮಗಳು ಅಮೂರ್ತವಾದಂತಹವು. ಸೈದ್ಧಾಂತಿಕ ಪರಿಭಾಷೆಗಳ ಮೂಲಕವಾಗಿ ಅವುಗಳನ್ನು ಅರ್ಥೈಸಲಾಗುತ್ತದೆ. ಅಮೂರ್ತತೆಯ ಸ್ತರದಲ್ಲಿಯೂ ವ್ಯತ್ಯಾಸಗಳಿರುತ್ತವೆ. ಅವು ಹೆಚ್ಚು ಅಮೂರ್ತವಾದಂತೆ, ಅವು ವ್ಯಾಪಿಸುವ ಕ್ಷೇತ್ರ ಹೆಚ್ಚು ನಿರ್ದಿಷ್ಟವಾಗುತ್ತದೆ. ರಚನಾಕ್ರಮಗಳನ್ನು ಸೈದ್ಧಾಂತಿಕ ಚರಾಂಶಗಳು ಎಂದು ಪರಿಗಣಿಸಬಹುದು. ಅಂದರೆ ಅವು ಬೇರೆ ಬೇರೆ ಮೌಲ್ಯಾಂಕಗಳನ್ನು ಪಡೆದುಕೊಳ್ಳಬಹುದು ಎಂದು ಅರ್ಥ. ಸಿದ್ಧಾಂತಗಳಲ್ಲಿ ಸಂಬಂಧಿಕ ಹೇಳಿಕೆಯು ಎರಡು ಅಥವಾ ಹೆಚ್ಚಿನ ಸಂಖ್ಯೆಯ ಚರಾಂಶಗಳನ್ನು ಕುರಿತದ್ದಾಗಿರುತ್ತದೆ. ಎಲ್ಲ ಸಂಬಂಧಗಳೂ ಸರಳವಾಗೇನೂ ಇರುವುದಿಲ್ಲ. ಅವು ಗುಣಾತ್ಮಕ ಅಥವಾ ವಿಲೋಮ / ಋಣಾತ್ಮಕವಾಗಿರಬಹುದು. ಅದು ಚರಾಂಶದಲ್ಲಿನ ಹೆಚ್ಚಳವು ಮತ್ತೊಂದರ ಮೌಲ್ಯವನ್ನು ಕಡಿಮೆ ಮಾಡುವಂತಹ ಸಂಬಂಧವಿರಬಹುದು.

ಅತಿ ಹೆಚ್ಚಿನ ಸಿದ್ಧಾಂತಗಳು, ಎರಡಕ್ಕಿಂತ ಹೆಚ್ಚಿನ ರಚನಾಕ್ರಮಗಳನ್ನು ಹೊಂದಿರುತ್ತವೆ ಮತ್ತು ಸಂಬಂಧವು ಬಹಳ ಸಂಕೀರ್ಣವೂ ಆಗಿರಬಹುದು. ಸಂವಹನ ರಚನಾಕ್ರಮಗಳ ನಡುವಿನ ಸಂಬಂಧಗಳನ್ನು ಕುರಿತಾದ ಹಲವಾರು ಪ್ರಶ್ನೆಗಳು 'ಖಂಡಿತವೆನ್ನುವಂತೆ ಹೇಳಲಾಗುವುದಿಲ್ಲ' ಎಂದು ಕೊನೆಗೊಳ್ಳುವುದನ್ನು ನೀವು ಈಗಾಗಲೇ ಗಮನಿಸಿರಬಹುದು.

ಸಿದ್ಧಾಂತಗಳು ನಿರ್ದಿಷ್ಟ ಚೌಕಟ್ಟಿನ ನಿರ್ಬಂಧ (Boundary condition)ಗಳನ್ನು ಒಳಗೊಂಡಿರುತ್ತವೆ. ಯಾವ ಕ್ಷೇತ್ರದಲ್ಲಿನ ಸಂಗತಿಗಳನ್ನು ಸಿದ್ಧಾಂತಗಳು ವಿವರಿಸುತ್ತವೆ ಮತ್ತು ಇದರ ವ್ಯಾಪ್ತಿಯಿಂದ ಹೊರಗೆ ಇರುವುವು ಯಾವುವು ಎಂಬುದನ್ನು ಈ ನಿರ್ದಿಷ್ಟ ಚೌಕಟ್ಟಿನ ನಿರ್ಬಂಧಗಳು ಸ್ಪಷ್ಟಪಡಿಸುತ್ತವೆ. ನಿರ್ದಿಷ್ಟ ಚೌಕಟ್ಟಿನ ನಿರ್ಬಂಧ (Boundary condition)ಗಳನ್ನು ಸಿದ್ಧಾಂತದ ಒಂದು ಅಂಗವಾಗಿಯೇ ಮುಂಚೆಯೇ ಸೇರಿಸಬಹುದು. ಆದರೆ ಹೆಚ್ಚಿನ ಸಂದರ್ಭಗಳು ಯಾವುದೋ ನಿರ್ದಿಷ್ಟ ಸನ್ನಿವೇಶಗಳಲ್ಲಿ ಸಿದ್ಧಾಂತವು ಕೆಲಸ ಮಾಡುವುದಿಲ್ಲ ಎಂದು ಈಗಾಗಲೇ ಸಂಶೋಧನೆಯ ಪ್ರಯೋಗಾತ್ಮಕ ಅಧ್ಯಯನ ಹಾಗು ಫಲಿತಾಂಶಗಳಿಂದ ತಿಳಿದು ಬಂದಿದೆ.

### 1.2.1.1 ಸಿದ್ಧಾಂತದ ಅಂಗಗಳು

1. **ಆಧಾರ ಪ್ರತಿಜ್ಞೆ:** ದೃಷ್ಟಿಕೋನದ ಚೌಕಟ್ಟು, ಕಾರ್ಯವಿಧಾನಗಳು ಅಥವಾ ಪೂರ್ವ ನಿರ್ಧಾರಗಳು.

2. **ಮೂಲಕಲ್ಪನೆಯ ಚೌಕಟ್ಟು:** ವಿವರಿಸಲಾಗುತ್ತಿರುವುದರ ಸ್ವರೂಪವನ್ನು ನಿರೂಪಿಸಲು ಬಳಸಲಾಗುತ್ತಿರುವ, ನಿರೂಪಿತ ಚರಾಂಶಗಳ ಸಂಗ್ರಹ ಮತ್ತು ವಿವರಣಾತ್ಮಕ ಪದಗಳು.

3. **ಸೈದ್ಧಾಂತಿಕ ಕೊಂಡಿ / ಜೋಡಣೆಗಳು:** ಮೂಲ ಕಲ್ಪನೆಗಳಲ್ಲಿ ಕಾರ್ಯಕಾರಣ ಅಥವಾ ಇತರ ರೂಪದ ಸಂಬಂಧಗಳೆಡೆಗೆ ತಾರ್ಕಿಕವಾಗಿ ಕರೆದೊಯ್ಯುವ ಕಲ್ಪನೆಗಳು ಮತ್ತು ಈ ರೀತಿಯಾಗಿ ಮೂಡಿಬಂದ ಸೈದ್ಧಾಂತಿಕ ಹೇಳಿಕೆಗಳು.

## 1.2.2 ಸಿದ್ಧಾಂತದ ರಚನೆ

ತನ್ನದೇ ರೀತಿಯಲ್ಲಿ ಪ್ರತಿಯೊಂದು ಸಂಪೂರ್ಣವಾಗಿ ಸಮ್ಮತವಾಗಿರುವಂತೆ ಸಿದ್ಧಾಂತವನ್ನು ಹಲವಾರು ರೀತಿಗಳಲ್ಲಿ ರಚನೆ ಮಾಡಬಹುದು. ಸಿದ್ಧಾಂತದ ರಚನೆಯು ಕೇವಲ ಒಂದು ಯಾಂತ್ರಿಕ ಪ್ರಕ್ರಿಯೆಯಲ್ಲ, ಅದು ಸಾಕಷ್ಟು ಸೃಜನಶೀಲತೆಯನ್ನು ಒಳಗೊಳ್ಳುತ್ತದೆ ಎಂಬುದನ್ನು ನೆನಪಿನಲ್ಲಿಟ್ಟುಕೊಳ್ಳಬೇಕು. ಸಾಮಾನ್ಯವಾಗಿ, ಸಿದ್ಧಾಂತವನ್ನು ಪರೀಕ್ಷೆಗೆ ಮಾಡುವುದೂ ಸಹ ಸಿದ್ಧಾಂತದ ಅವಿಭಾಜ್ಯ ಅಂಗವೇ ಹೊರತು, ಅದು ನಂತರದ ಹಂತವೇನಲ್ಲ ಎಂಬುದನ್ನು ಗಮನಿಸಿಕೊಳ್ಳಬೇಕು.

ಸಮಾಜ ವಿಜ್ಞಾನದ ಬಹಳ ಮುಖ್ಯವಾದ ಆಧಾರ ಸಿದ್ಧಾಂತದವೆಂದರೆ ಎಲ್ಲಾ ಸಂಗತಿಗಳಿಗೂ ಪೂರ್ವಿಕವಾದ ಕಾರಣಗಳಿದ್ದು, ಅವುಗಳನ್ನು ಗುರುತಿಸಿ ತರ್ಕಬದ್ಧವಾಗಿ ಅರ್ಥಮಾಡಿಕೊಳ್ಳಬಹುದು ಎಂಬ ಕಲ್ಪನೆ ಸಾಮಾಜಿಕ ಜೀವನದಲ್ಲಿ ವ್ಯಕ್ತವಾಗುವಂತಹ ಕಾರಣ ಸಂಬಂಧಗಳನ್ನು ಸ್ಥಿರ ಮತ್ತು ಚರಾಂಶಗಳ ನಡುವಿನ ಸಂಬಂಧವೆಂದು ವಿವರಿಸಲಾಗುತ್ತದೆ.

ಸಮಾಜ ವಿಜ್ಞಾನದಲ್ಲಿ ಸಿದ್ಧಾಂತ ಎಂಬ ಪದವನ್ನು ಅಂತರಿಕ ಸಂಬಂಧವುಳ್ಳ ಪ್ರಮೇಯ ಅಥವಾ ಆರ್ಥಿಕ ಕಲ್ಪನೆಗಳನ್ನು ವಿವರಿಸಲು ಬಹಳವಾಗಿ ಬಳಲಾಗುತ್ತದೆ. ಸಿದ್ಧಾಂತ ರಚನೆ ಮಾಡಲು ಹಲವಾರು ಘಟಕಗಳಿವೆ.

* ಹಿಂದಿನ ಸಂಶೋಧನೆ, ಪ್ರಾಕ್‌ಕಲ್ಪನೆ ಅಥವಾ ಅಧ್ಯಯಿತ ಊಹೆಗಳ ಮೇಲೆ ಆಧಾರಗೊಂಡಂತಹ ಆಧಾರ ಪ್ರತಿಜ್ಞೆ ( Postulate )ಗಳ ಒಂದು ವ್ಯವಸ್ಥೆ.

* ಆಧಾರ ಪ್ರತಿಜ್ಞೆಗಳಲ್ಲಿರುವ ಮುಖ್ಯ ಪದಗಳ ಭಾಷೆ ಮತ್ತು ನಿರೂಪಿತವಾಗದ ಪದಗಳ ಪಟ್ಟಿ.

* ತರ್ಕಬದ್ಧವಾಗಿ ಆಧಾರ ಪ್ರತಿಜ್ಞೆಗಳಿಂದ ನಿಷ್ಪನ್ನಗೊಂಡು ಪ್ರಯೋಗಾತ್ಮಕ ಅವಲೋಕನದ ಮೂಲಕವಾಗಿ ಪರೀಕ್ಷೆಗೆ ಒಳಪಡುವ ತೀರ್ಮಾನಗಳು.

ಸುದೀರ್ಘವಾದ ಬದ್ಧತೆ ಮತ್ತು ಕ್ರಮೇಣವಾಗಿ ಜ್ಞಾನಾರ್ಜನೆ ಮಾಡಿಕೊಳ್ಳುವುದು ಅನುಗಮನದ ರೀತಿಯ ಶೋಧನೆಗೆ ಒಲವು ತೋರುತ್ತದೆ. ಸಂಶೋಧಕನ ಹೆಚ್ಚುತ್ತಿರುವ ಅರ್ಥಮಾಡಿಕೊಳ್ಳುವ ಕೌಶಲ್ಯದಿಂದಾಗಿ, ದತ್ತಾಂಶಗಳು ನಿಧಾನವಾಗಿ ಮೂಲ ಕಲ್ಪನೆಗಳಾಗಿ ಮತ್ತು ನಿರ್ದಿಷ್ಟ ಸಂಶೋಧನಾ ಪ್ರಮೇಯಗಳಾಗಿ ರೂಪುಗೊಳ್ಳುತ್ತವೆ. ಯೋಜನೆಯ ಅಂತ್ಯದ ಹೊತ್ತಿಗಷ್ಟೇ ಇದರ ಬಗ್ಗೆ ಸಂಪೂರ್ಣವಾದ ತಿಳುವಳಿಕೆ ಮೂಡುವುದು. ಸಮಾಜವಿಜ್ಞಾನದ ಸಿದ್ಧಾಂತ ಮತ್ತು ಸಂಶೋಧನೆಗಳು ನಿಗಮನ ಮತ್ತು ಅನುಗಮನ ಎಂಬ ಎರಡು ತರ್ಕವಿಧಾನಗಳ ಮೂಲಕ ಜೋಡಣೆಗೊಂಡಿವೆ. ಸಿದ್ಧಾಂತ ಆಧಾರಿತವಾದ ಸಂಶೋಧನೆಯು ಪುನರಾವೃತ್ತಗೊಳ್ಳುವ ಹಂತಗಳಾದ ಅನುಗಮನ, ನಿಗಮನ ಮತ್ತು ಪರೀಕ್ಷಣೆಗಳನ್ನು ಒಳಗೊಂಡಿದೆ.

## 1.2.2.1 ನಿಗಮನ (Deduction)

ಸಾಮಾನ್ಯ ತತ್ವದ ಆಧಾರದ ಮೇಲೆ ಆಧಾರ ಕಲ್ಪನೆ (Hypothesis)ಗಳ ಆಶಯಗಳನ್ನು ಅಭಿವೃದ್ಧಿಪಡಿಸಲಾಗಿರುವ ಒಂದು ತಾರ್ಕಿಕ ಮಾದರಿ. ಉದಾಹರಣೆಗೆ, ಶಿಕ್ಷಣ ಸಂಸ್ಥೆಗಳ ಪ್ರಾಂಶುಪಾಲರುಗಳು ಕಟ್ಟುನಿಟ್ಟಿನವರಾಗಿರುತ್ತಾರೆ ಎಂಬ ಸಾಮಾನ್ಯ ನಿಯಮದಿಂದ ಪ್ರಾರಂಭಿಸಿ, ಗಮನದಲ್ಲಿರುವ ಪ್ರಾಂಶುಪಾಲರು, ವಿದ್ಯಾರ್ಥಿಗಳು ಆನಂದ ವಿಹಾರ ಅಥವಾ ಪ್ರವಾಸಕ್ಕೆ ಹೋಗಲು ಅಪ್ಪಣೆ ಕೊಡುವುದಿಲ್ಲ ಎಂದು ಪೂರ್ವಭಾವಿಯಾಗಿ ನಿರೀಕ್ಷೆ ಮಾಡಬಹುದು. ಈ ನಿರೀಕ್ಷೆ ನಿಗಮನದ ಫಲಶ್ರುತಿ. ಈ ಉದಾಹರಣೆಗಳನ್ನು ನೋಡಿ. ಎಲ್ಲ ಪುರುಷರು ಮರ್ತ್ಯರೇ. ಮೋಹನ ಒಬ್ಬ ಪುರುಷ. ಮೋಹನನೂ ಮರ್ತ್ಯನೇ.

## 1.2.2.2 ಅನುಗಮನ (Induction)

ಒಂದು ಪ್ರತ್ಯೇಕ / ನಿರ್ದಿಷ್ಟ ಅವಲೋಕನದಿಂದ ಸಾಮಾನ್ಯ ತತ್ವಗಳನ್ನು ಅಭಿವೃದ್ಧಿಪಡಿಸುವಂತಹ ದೃಷ್ಟಿಯಿಂದ ಸಮಷ್ಟಿಯೆಡೆಗಿನ ಒಂದು ತಾರ್ಕಿಕ ಮಾದರಿ ಇದು. ಯುವ ವಯಸ್ಕರು ಟೆಲಿವಿಷನ್‌ನಲ್ಲಿ ಹಿಂಸೆಯನ್ನು ಕಾಣಲು ಬಯಸುತ್ತಾರೆ ಎಂಬುದನ್ನು ಅವಲೋಕಿಸಿದ ಮೇಲೆ, ಅವರು ಶೈಕ್ಷಣಿಕ ಕಾರ್ಯಕ್ರಮಗಳನ್ನು ವೀಕ್ಷಿಸಲು ಬಯಸುವುದಿಲ್ಲ ಎಂಬ ತೀರ್ಮಾನಕ್ಕೆ ಒಬ್ಬ ಬರಬಹುದು. ಇನ್ನೊಂದು ಉದಾಹರಣೆ ನೋಡಿ. ಬಹುಸಂಖ್ಯಾತ ಸಮುದಾಯವು 'ಎಕ್ಸ್' ಪಕ್ಷಕ್ಕೆ ಮತ ನೀಡುವ ಸಾಧ್ಯತೆ ಇರುವುದರಿಂದ, ಅಲ್ಪಸಂಖ್ಯಾತರು 'ವೈ' ಪಕ್ಷಕ್ಕೆ ಹೆಚ್ಚು ಸೇರಿದ್ದಾರೆ ಎಂದೂ ಸಹ ಒಬ್ಬ ತೀರ್ಮಾನಿಸಬಹುದು.

ಪರೀಕ್ಷಣೆಯ ನಂತರ ಫಲಿತಾಂಶಗಳು ಮತ್ತೊಂದು ಅನುಗಮನಕ್ಕೆ ದಾರಿ ಮಾಡಿಕೊಡುತ್ತವೆ ಮತ್ತು ಈ ಸರಣಿ ಮತ್ತೊಮ್ಮೆ ಆರಂಭವಾಗುತ್ತದೆ. ಅನುಗಮನಾತ್ಮಕವಾದ ತರ್ಕವು ಒಂದು ನಿರ್ದಿಷ್ಟ ಪ್ರಸರಣದಿಂದ ಸಾಮಾನ್ಯ ಸೈದ್ಧಾಂತಿಕ ತೀರ್ಮಾನಕ್ಕೆ ತರ್ಕ ಮಾಡುವುದನ್ನು ಒಳಗೊಳ್ಳುತ್ತದೆ. ಹೊಸ ಸಿದ್ಧಾಂತವನ್ನು ನಿಗಮನ ರೂಪದಿಂದ ಪರೀಕ್ಷಣೆ ಮಾಡಬಹುದು.

ನಿಗಮನ ರೂಪದ ಆಧಾರ ಕಲ್ಪನೆಯ ಪರೀಕ್ಷಣಾ ಸಂಶೋಧನೆಯು ಹೆಚ್ಚು ಕಡಿಮೆ ಯಾವಾಗಲೂ ಪರಿಮಾಣಾತ್ಮಕವಾದರೆ, ಸಿದ್ಧಾಂತವನ್ನು ರೂಪಿಸುವ ಅನುಗಮನಾತ್ಮಕ ಸಂಶೋಧನೆಯು ಹೆಚ್ಚು ಸಾರಿ ಗುಣಾತ್ಮಕವಾಗಿರುತ್ತದೆ. ಆದರೆ, ಇವುಗಳೇನೂ ನಿಷ್ಠುರವಾದ ಕಟ್ಟುನಿಟ್ಟಿನ ನಿಯಮಗಳೇನಲ್ಲ. ಇಂದಿನ ಬಹು ಹೆಚ್ಚಿನ ಸಮಾಜ ವಿಜ್ಞಾನ ಸಂಶೋಧನೆಯು ಅನುಗಮನ ಮತ್ತು ನಿಗಮನದ ಘಟಕಗಳೆರಡನ್ನೂ ಮೇಳೈಸಿಕೊಂಡಿರುತ್ತದೆ. ಸಂಕೇತಗಳಾಗಿ ಬಿಂಬಿಸಲು ಸಾಧ್ಯವಾದ ಹಾಗು ಅಕ್ಷರಗಳಲ್ಲಿ ಸಂಕೇತಗಳಿಗಾಗಿ ಹುಡುಕಿ ಪರೀಕ್ಷೆ ನಡೆಸಬಹುದಾದ ಮತ್ತು ಸಂಕೇತಗಳ ಸಂಬಂಧಗಳನ್ನು ಅಧ್ಯಯನ ಮಾಡಬಹುದಾದ ಸಿದ್ಧಾಂತಗಳನ್ನು ಸಂಕೇತ ಮತ್ತು ಹಿಂಪಡೆವ ವಿಧಾನವು ಅಭಿವ್ಯಕ್ತಿಗೊಳಿಸುತ್ತದೆ. ಹಲವಾರು ಮಾಧ್ಯಮಗಳ ಗುಣಾತ್ಮಕ ವಿಶ್ಲೇಷಣೆಗೆ ಸಾಮಾನ್ಯವಾಗಿ ಈ ವಿಧಾನವನ್ನು ಬಳಸಲಾಗುತ್ತದೆ.

## 1.2.2.3 ಸಿದ್ಧಾಂತಗಳ ರಚನೆ ಮಾಡಲು ಕೆಲವೊಂದು ಸೂಚನೆಗಳು

ಸಿದ್ಧಾಂತಗಳ ರಚನೆಯು ಹೆಚ್ಚಿನ ಹಿಂದೆ ಹೆಚ್ಚೆ ಜೋಡಿಸುವಂತಹ ಅನುಕರಣಾ ಕಾರ್ಯವಾಗಿರದಿದ್ದರೂ, ಸಿದ್ಧಾಂತದ ರಚನೆಗೆ ಬೇಕಾಗುವ ಘಟಕಗಳನ್ನು ಸೂಚಿಸುವ ಕೆಳಗಿನ ಪಟ್ಟಿಯು ನಿಮಗೆ ಸಹಾಯ ನೀಡಬಹುದು.

1. ವಿಷಯವನ್ನು ನಿರ್ದಿಷ್ಟಪಡಿಸಿಕೊಳ್ಳಿ.

2. ನಿಮ್ಮ ಸಿದ್ಧಾಂತವು ಉದ್ದೇಶಿಸುವ ಸಂಗತಿಗಳ ಹರಹನ್ನು ನಿರ್ದಿಷ್ಟಪಡಿಸಿಕೊಳ್ಳಿ. ಸಿದ್ಧಾಂತವು ಎಲ್ಲಾ ಮಾನವರ ಜೀವನಕ್ಕೆ ಅನ್ವಯವಾಗುವಂತಹುದೇ ಇತ್ಯಾದಿ. ಅದು ಕೇವಲ ಒಂದು ದೇಶಕ್ಕೆ ಅನ್ವಯವಾಗುವುದೇ? ಕೇವಲ ಯುವಜನತೆಗೆ ಅನ್ವಯವಾಗುತ್ತದೆಯೇ?

3. ನಿಮ್ಮ ಪ್ರಮುಖ ಪರಿಕಲ್ಪನೆ ಮತ್ತು ಚರಾಂಶಗಳನ್ನು ಗುರುತಿಸಿ, ನಿರ್ದಿಷ್ಟಪಡಿಸಿ.

4. ಈ ಚರಾಂಶಗಳ ನಡುವಿನ ಸಂಬಂಧಗಳ ಬಗ್ಗೆ ಏನು ತಿಳಿದಿದೆ (ಪ್ರಮೇಯಗಳು) ಎಂಬುದನ್ನು ಒಟ್ಟುಗೂಡಿಸಿ.

5. ಈ ಪ್ರಮೇಯಗಳಿಂದ ನೀವು ಪರೀಕ್ಷಣೆ ಮಾಡುತ್ತಿರುವ ವಿಷಯದ ಬಗ್ಗೆ ತಾರ್ಕಿಕವಾಗಿ ವಿವೇಚನೆ ಮಾಡಿ.

## 1.3 ಸಿದ್ಧಾಂತದ ಪರೀಕ್ಷಣೆ

ಸಾಮಾಜಿಕ ಸಂಶೋಧನೆಯು ತನ್ನ ಧ್ಯೇಯೋದ್ದೇಶಗಳನ್ನು ಪೂರ್ಣಗೊಳಿಸಬೇಕಾದರೆ, ಸಾಮಾಜಿಕ ಸಿದ್ಧಾಂತಗಳು ಎಂದು ಕರೆಯಲ್ಪಡುವ ಕಲ್ಪನೆಗಳ ರಾಶಿಯನ್ನು, ಅವುಗಳ ಪರಿಣಾಮಗಳನ್ನು ಪರೀಕ್ಷಣೆ ಮಾಡುವ ಮತ್ತು ವಿವರಣೆ ನೀಡುವ ಅವುಗಳ ಸಾಮರ್ಥ್ಯವನ್ನು ಪರಿಷ್ಕರಣಗೊಳಿಸುವ ಮೂಲಕ ಉತ್ತಮಗೊಳಿಸುವುದು, ವಿಸ್ತರಿಸುವುದು ಅವಶ್ಯಕ. ಒಂದು ಸಿದ್ಧಾಂತ ಅಥವಾ ಅದರ ಯಾವುದಾದರೂ ಅಂಗವನ್ನು ಪರೀಕ್ಷಣೆ ಮಾಡಬೇಕೆಂದರೆ, ಪ್ರತಿಯೊಂದು ಪ್ರಮೇಯದ ರಚನಾಕ್ರಮಗಳನ್ನು ಅಭಿವ್ಯಕ್ತಿಗೊಳಿಸುವ ಮತ್ತು ಕೆಲವು ನಿರ್ದಿಷ್ಟ ವಿಷಯಗಳಲ್ಲಿ ಅವುಗಳನ್ನು ಅವಲೋಕಿಸುವ ಹಾದಿಯೊಂದನ್ನು ಕಂಡುಕೊಳ್ಳಬೇಕಾಗುತ್ತದೆ. ರಚನಾಕ್ರಮವನ್ನು ಒಂದು ಮೂರ್ತವಾದ ಮತ್ತು ಅವಲೋಕಿಸಬಹುದಾದ ರೂಪಕ್ಕೆ ಪರಿವರ್ತಿಸಲು ನಾವು ಒಂದು ಕಾರ್ಯಾತ್ಮಕ ಪರಿಭಾಷೆಯನ್ನು ರೂಪಿಸಬೇಕಾಗುತ್ತದೆ.

ಯಾವುದೇ ವಿಷಯವನ್ನು ಕುರಿತಂತೆ, ಕಾರ್ಯದ ಪದಗಳಲ್ಲಿ ಅವಲೋಕನಗಳನ್ನು ವರ್ಗೀಕರಿಸಬೇಕಾದ ಒಂದು ಗಟ್ಟಿಯಾದ ಮತ್ತು ನಿರ್ದಿಷ್ಟವಾದ ನಿರೂಪಣೆಯನ್ನು ಕಾರ್ಯಾತ್ಮಕ ಪರಿಭಾಷೆ ಎಂದು ಅರ್ಥಮಾಡಿಕೊಳ್ಳಬಹುದು. ಉದಾಹರಣೆಗೆ, ಈ ಕೋರ್ಸಿನಲ್ಲಿ 'ಎ' ದರ್ಜೆಯನ್ನು ಪಡೆಯುವುದು ಎಂದು ನಾವು ಹೇಳಿದರೆ, 'ಅಂತಿಮ ಪರೀಕ್ಷೆಯಲ್ಲಿ ಕಡೆಯ ಪಕ್ಷ ಶೇ. 90ರಷ್ಟು ಪ್ರಶ್ನೆಗಳಿಗೆ ಸರಿ ಉತ್ತರ ನೀಡುವುದು' ಎಂಬ ಕ್ರಿಯಾತ್ಮಕ ಪರಿಭಾಷೆಯನ್ನು ನೀಡುತ್ತಿದ್ದೇವೆ. ನಾವು ಪ್ರಮೇಯವೊಂದನ್ನು ಕ್ರಿಯಾತ್ಮಕವನ್ನಾಗಿ ಮಾಡಿದಾಗ, ಸಿದ್ಧಾಂತದಿಂದ ನಿಷ್ಪನ್ನ ಮಾಡಲಾದ ವಿಷಯದ ಸ್ವರೂಪಗಳ ಬಗೆಗಿನ ನಿರೀಕ್ಷೆಯಾದ ಒಂದು ಆಧಾರ ಕಲ್ಪನೆ (Hypothesis)ಆಗುತ್ತದೆ. ಸಿದ್ಧಾಂತವು ಸರಿಯಾಗಿದ್ದರೆ, ವಾಸ್ತವ ಪ್ರಪಂಚದಲ್ಲಿ ಕಾಣಲೇಬೇಕಾದಂತಹ ವಿಷಯವೊಂದರ ಹೇಳಿಕೆ ಇದಾಗಿರುತ್ತದೆ.

ಕ್ರಿಯಾತ್ಮಕ ಪದಗಳ ನಡುವಿನ ಸಂಬಂಧಗಳ ಬಗ್ಗೆ ಮುನ್ಸೂಚನೆಯೊಂದನ್ನು ಒಂದು ಆಧಾರ ಕಲ್ಪನೆ ಸಾಮಾನ್ಯವಾಗಿ ಹೊಂದಿರುತ್ತದೆ. ಬಹಳ ಹೆಚ್ಚಿನ ರಚನಾಕ್ರಮಗಳು ಒಂದಕ್ಕಿಂತ ಹೆಚ್ಚಿನ ರೀತಿಯಲ್ಲಿ ಮತ್ತು ಒಂದಕ್ಕಿಂತ ಹೆಚ್ಚು ನಮೂನೆ / ಮಾದರಿಗಳಲ್ಲಿ ವ್ಯಕ್ತವಾಗಬಹುದಾದ್ದರಿಂದ, ಸಿದ್ಧಾಂತದಿಂದ ಮಾಡಬಹುದಾದ ಯಾವುದೇ ನಿಗಮನಗಳು ಪ್ರತಿಯೊಂದು ಕ್ರಿಯಾತ್ಮಕ ಪರಿಭಾಷೆ ಮತ್ತು ನಮೂನೆಗಳಿಗೆ ಒಂದೊಂದು ಗುಂಪಿನಂತೆ ಹಲವಾರು ಆಧಾರ ಕಲ್ಪನೆಯ ಪರೀಕ್ಷೆಗಳನ್ನು ಹೊಂದಿರಬಹುದು. ಆಧಾರ ಕಲ್ಪನೆಗಳನ್ನು ಸಿದ್ಧಾಂತಗಳಿಂದ ನಿಷ್ಪತ್ತಿಗೊಳಿಸಲಾಗುತ್ತದೆ ಮತ್ತು ನೇರವಾಗಿ ಆಧಾರ ಕಲ್ಪನೆಗಳ ಮೇಲೆ ಪ್ರಭಾವ ಹೊಂದಿರುವ ದತ್ತಾಂಶಗಳಿಂದ ನಂತರದಲ್ಲಿ ಅವುಗಳ ಪರಿಣಾಮಗಳನ್ನು ಪರೀಕ್ಷಣೆ ಮಾಡಲಾಗುತ್ತದೆ. ಹೆಚ್ಚಿನ ಸಂದರ್ಭಗಳಲ್ಲಿ ಒಂದು ನಿರ್ದಿಷ್ಟ ಆಧಾರ ಕಲ್ಪನೆಯ ಪರೀಕ್ಷಣೆಗಾಗಿಯೇ ದತ್ತಾಂಶಗಳನ್ನು ವಿಶೇಷವಾಗಿ ಸಂಗ್ರಹಿಸಲಾಗುತ್ತದೆ. ಆದರೂ, ಈಗಾಗಲೇ ಲಭ್ಯವಿರುವಂತಹ ದತ್ತಾಂಶಗಳ ಮೇಲೆಯೂ ಸಮಾಜ ವಿಜ್ಞಾನದ ಸಂಶೋಧನೆಗಳು ಅವಲಂಬಿತವಾಗಿರುತ್ತವೆ.

ಬೆಂಬಲ ಪಡೆಯುವಲ್ಲಿ ಸೋಲುವ ಕಲ್ಪನೆಗಳು ಕಾಲಕ್ರಮದಲ್ಲಿ ತಮ್ಮ ಪ್ರಭಾವವನ್ನು ಕಳೆದುಕೊಂಡರೆ, ನಿರಂತರವಾಗಿ ಬೆಂಬಲ ಪಡೆಯುವ ಕಲ್ಪನೆಗಳು ಗುಂಪಿನಲ್ಲಿ ಹೆಚ್ಚಿನ ಸ್ಥಾನಮಾನಗಳನ್ನು ಪಡೆದುಕೊಳ್ಳುತ್ತದೆ. ಯಶಸ್ವಿಯಾಗದ ಒಂದು ಆಧಾರ ಕಲ್ಪನೆಯು ತಕ್ಷಣವೇ ಸಿದ್ಧಾಂತವನ್ನು ಸಂಹರಿಸಿಬಿಡುವುದಿಲ್ಲ. ಆದರೆ, ಬೆಂಬಲ ಪಡೆಯದ ಕಲ್ಪನೆಗಳು ಪ್ರಚಲಿತವಾದ ಆಲೋಚನೆಗಳಿಂದ ಮರೆಯಾಗುತ್ತವೆ. ಬಹಳ ಫಲವತ್ತಾದ ಮತ್ತು ಸಶಕ್ತವಾದ ಆಲೋಚನಾ ವಿಧಾನಗಳನ್ನು ಗುರುತಿಸುವುದು ಬಹಳ ಮುಖ್ಯ. ಬೇರೆ ಬೇರೆ ಕಲ್ಪನೆಗಳನ್ನು ಸಮಾಜ ಜೀವನದ ನಮೂನೆಗಳು ಹಾಗೂ ಲಕ್ಷಣಗಳ ವಿವರಣೆಗಳಾಗಿ ತೋಲನೆ ಮಾಡಿ ಅವುಗಳ ಮೌಲ್ಯನಿರ್ಧಾರಣೆಯನ್ನು ಮಾಡಬೇಕು. ಸಿದ್ಧಾಂತಗಳ ಪರೀಕ್ಷಣೆಯು ಅವುಗಳ ಪರಿಷ್ಕಾರಕ್ಕೂ ಕಾರಣವಾಗುತ್ತದೆ. ಒಬ್ಬ ಸಮಾಜ ವಿಜ್ಞಾನ ಸಂಶೋಧಕನು ತಾತ್ವಿಕವಾಗಿ ಸಿದ್ಧಾಂತದ, ಪರಿಣಾಮಗಳ ಮೇಲೆ ಕೆಲಸ ಮಾಡಲು ಶ್ರಮಿಸುತ್ತಾನೆ ಮತ್ತು ಅದರ ಪರಿಷ್ಕರಣೆಯನ್ನು ಮುಂದುವರೆಸುತ್ತಾನೆ. ಹೀಗೆ ಮಾಡಿದಾಗ ಮಾತ್ರ ಕಲ್ಪನೆಗಳ ಗುಂಪೊಂದನ್ನು ಹಂತ ಹಂತವಾಗಿ ಉತ್ತಮಗೊಳಿಸಲೂ, ವಿಶದೀಕರಿಸಲೂ ಸಾಧ್ಯವಾಗುತ್ತದೆ.

ಕ್ರಿಯಾತ್ಮಕ ಪರಿಭಾಷೆಗಳು ಯಾವಾಗಲೂ ಅವುಗಳ ಸೈದ್ಧಾಂತಿಕ ರಚನಾಕ್ರಮಗಳನ್ನು ಸಂಪೂರ್ಣವಾದ ರೀತಿಯಲ್ಲಿ ಪ್ರತಿನಿಧಿಸಲು ಸಾಧ್ಯವಾಗುವುದಿಲ್ಲವಾದ ಕಾರಣ, ಒಂದು ನಿರ್ದಿಷ್ಟ ಆಧಾರಕಲ್ಪನೆಯ ಪರೀಕ್ಷಣೆಯ ಸೈದ್ಧಾಂತಿಕ ಮಹತ್ವದ ಬಗ್ಗೆ ಸ್ವಲ್ಪಮಟ್ಟಿಗಿನ ಸಂದೇಹ ಇದ್ದೇ ಇರುತ್ತದೆ. ಪ್ರತ್ಯೇಕವಾಗಿ ಆಧಾರ ಕಲ್ಪನೆಗಳು ಸಂಶೋಧನಾ ತೀರ್ಮಾನಗಳಿಂದ ಬೆಂಬಲಿಸಲ್ಪಟ್ಟಿದ್ದರೂ ಸಹ, ಸಾಮಾನ್ಯ ಸೈದ್ಧಾಂತಿಕ ಪ್ರಮೇಯವು ಪೂರ್ತಿಯಾಗಿ ಬೆಂಬಲಿತವಾಗಿದೆ ಎಂಬುದರ ಬಗ್ಗೆ ಭರವಸೆ ಹೊಂದಿರುವುದು ಅಸಾಧ್ಯ. ಪ್ರತಿಯೊಂದು ಸಿದ್ಧಾಂತವೂ ತರ್ಕದ ಪರೀಕ್ಷೆಗೆ ಒಪ್ಪಿಕೊಳ್ಳಲೇಬೇಕಾಗುತ್ತದೆ.

## 1.3.1 ಸಿದ್ಧಾಂತದ ಮೌಲ್ಯಮಾಪನ

ಕೆಳಗಿನ ಗುಣಗಳನ್ನು ಹೊಂದಿದ್ದರೆ ಒಂದು ಸಿದ್ಧಾಂತವು ಉತ್ತಮವಾದುದೆಂದು ಪರಿಗಣಿಸಲಾಗುತ್ತದೆ.

**1. ವಿವರಣಾತ್ಮಕ ಸಾಮರ್ಥ್ಯ.**

ವಿವರಿಸಲೆಂದು ರೂಪಿಸಲಾದ ವಿಷಯಗಳಿಗೆ ವ್ಯಾಖ್ಯಾನ ನೀಡುವ ಸಿದ್ಧಾಂತದ ಸಾಮರ್ಥ್ಯ. ಸಿದ್ಧಾಂತವು ವಿವರಿಸುವ ಸಂಗತಿಗಳ ಹರಹನ್ನೂ ಇಲ್ಲಿ ಪರಿಗಣಿಸಲಾಗುತ್ತದೆ. ವ್ಯಾಪ್ತಿಯು ಹೆಚ್ಚಿದರೆ, ಸಿದ್ಧಾಂತವೂ ಹೆಚ್ಚು ಸಶಕ್ತವಾದುದು ಎಂದೆನಿಸುತ್ತದೆ.

**2. ಪೂರ್ವಾನುಮಾನದ ಸಾಮರ್ಥ್ಯ.**

ಸಂಗತಿಗಳನ್ನು ಪೂರ್ವಾನುಮಾನ ಮಾಡುವ ಸಿದ್ಧಾಂತದ ಸಾಮರ್ಥ್ಯ. ಪೂರ್ವಾನುಮಾನ ಮಾಡುವುದು ಸಿದ್ಧಾಂತಗಳಿಗೆ ಸಾಧ್ಯವಾಗಬಹುದು. ಆದರೆ ಸಂಭವನೀಯತೆಗೆ, ಸಮಂಜಸವಾದ ವಿವರಣೆಗಳನ್ನು ನೀಡುವ ಸಾಮರ್ಥ್ಯವನ್ನು ಅವು ಹೊಂದಿಲ್ಲದಿರಬಹುದು.

**3. ಮಿತವಂತಿಕೆ.**

ಸಂಕೀರ್ಣವಾದ ಸಿದ್ಧಾಂತಗಳಿಗಿಂತ ಸರಳವಾದ ಸಿದ್ಧಾಂತಗಳಿಗೆ ಆದ್ಯತೆ ನೀಡಲಾಗುತ್ತದೆ. ಈ ಎರಡೂ ಸಮಾನ ರೀತಿಯಾಗಿ ಪೂರ್ವಾನುಮಾಡಿ, ವ್ಯಾಖ್ಯಾನಿಸುತ್ತವೆ ಎಂಬ ಊಹೆಯ ಮೇಲೆ ಸಿದ್ಧಾಂತದ ಸಂಕೀರ್ಣತೆಯು ಅದು ವಿವರಿಸಲು ಯತ್ನಿಸುತ್ತಿರುವ ವಾಸ್ತವತೆಯೊಂದಿಗೆ ಸಹಸಂಬಂಧವನ್ನು ಹೊಂದಿದೆ.

**4. ತಪ್ಪನ್ನು ಸಾಬೀತು ಮಾಡುವ ಸಾಮರ್ಥ್ಯ.**

ಸಿದ್ಧಾಂತಗಳು ತಪ್ಪೆಂದು ಸಾಬೀತು ಪಡಿಸುವ ಸಾಧ್ಯತೆಗಳು ಇರಲೇಬೇಕಾಗುತ್ತದೆ. ಇಲ್ಲವಾದಲ್ಲಿ ಸಂಶೋಧನೆ ಸರಿದಾರಿಯಲ್ಲಿ ಸಾಗಿದಾಗ ಅಧ್ಯಯನಗಳ ಪರೀಕ್ಷೆಯನ್ನು ತಾಳಿಕೊಂಡ ತಪ್ಪುಗಳನ್ನು ಸರಿಪಡಿಸಲು ಸಾಧ್ಯವಾಗುವುದಿಲ್ಲ. ಸಿದ್ಧಾಂತವೊಂದರಲ್ಲಿ ಅನೇಕ ರಚನಾಕ್ರಮಗಳಿದ್ದಲ್ಲಿ, ಋಣಾತ್ಮಕ ಸಾಕ್ಷ್ಯಾಧಾರಗಳನ್ನು ನೀಡುವ ವಿಷಯಗಳು ವಿವರಿಸಲ್ಪಟ್ಟು ಅದನ್ನು ತಪ್ಪೆಂದು ಸಾಬೀತು ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ.

ಸಿದ್ಧಾಂತವು ಸತ್ಯದೂರ, ನಿರಾಧಾರ ಎಂದು ಪ್ರಮಾಣೀಕರಿಸುವುದೂ ಸಾಧ್ಯವಿರಬೇಕು. ಹಾಗಿಲ್ಲದಿದ್ದರೆ, ಇದು ಸಂಶೋಧನೆಯೊಂದಿಗೆ ಸಾಮಂಜಸ್ಯ ಹೊಂದಿದ್ದರೂ, ಪರೀಕ್ಷಣೆಯನ್ನು ಇದು ಮೀರಿ ಉಳಿದುಕೊಂಡಿದೆ ಎಂದು ಹೇಳಲಾಗುವುದಿಲ್ಲ. ಹಲವಾರು ನಾಮಮಾತ್ರ ರಚನಾಕ್ರಮಗಳು ಒಂದು ಸಿದ್ಧಾಂತದಲ್ಲಿದ್ದರೆ, ಅದನ್ನು ಸುಳ್ಳೆಂದು ನಿರೂಪಿಸುವುದು ಕಷ್ಟವಾಗಬಹುದು. ಏಕೆಂದರೆ, ನಕಾರಾತ್ಮಕವಾದ ಪ್ರಮಾಣಗಳೇ ಇಲ್ಲದಂತೆ ಇದರಿಂದ ವಿವರಣೆಗಳನ್ನು ನೀಡಬಹುದು.

**5. ಆಂತರಿಕ ಸಾಮಂಜಸ್ಯ**

ಪ್ರಾಯೋಗಿಕ ಪರೀಕ್ಷಣೆಗಳಿಗೆ ಸಿದ್ಧಾಂತದ ಆಂತರಿಕ ತರ್ಕದ ಮೌಲ್ಯ ನಿರ್ಧರಣೆ ಮಾಡುವುದು ಅವಲಂಬಿತವಾಗದೆಯೇ ಎಂಬುದು ತಿಳಿದಿರಬೇಕು. ಸೈದ್ಧಾಂತಿಕ ಪ್ರಮೇಯಗಳು ಒಂದಕ್ಕೊಂದು ಸಮಂಜಸವಾಗಿರಬೇಕು. ಇಲ್ಲದಿದ್ದರೆ, ಸಿದ್ಧಾಂತದ ಒಳಗೆ ಪ್ರಾಯೋಗಿಕ ಫಲಿತಾಂಶಗಳನ್ನು ಅರ್ಥೈಸುವುದು ಕಷ್ಟವಾಗಬಹುದು.

**6. ಸ್ವಯಂ ಅನ್ವೇಷಣಾ ಪ್ರಚೋದನೆ**

ಉತ್ತಮವಾದ ಸಿದ್ಧಾಂತಗಳು ಹೊಸ ಆಧಾರ ಕಲ್ಪನೆಗಳನ್ನು ಹುಟ್ಟುಹಾಕುತ್ತವೆ. ಇವು ಸಂಭಾವ್ಯ ಜ್ಞಾನದ ವ್ಯಾಪ್ತಿಯನ್ನು ವಿಸ್ತರಿಸುತ್ತವೆ.

**7. ಕ್ರಮಬದ್ಧಗೊಳಿಸುವ ಸಾಮರ್ಥ್ಯ.**

ಉಪಯುಕ್ತವಾದ ಸಿದ್ಧಾಂತಗಳು ಹೊಸಜ್ಞಾನವನ್ನು ರೂಪಿಸುವುದಷ್ಟೇ ಅಲ್ಲದೆ, ನಿಷ್ಕೃಷ್ಟವಾಗಿರುವ ಜ್ಞಾನವನ್ನು ಕ್ರಮಬದ್ಧಗೊಳಿಸುವ ಸಾಮರ್ಥ್ಯವನ್ನು ಹೊಂದಿರುತ್ತದೆ.

## 1.3.2 ಸಿದ್ಧಾಂತ ಮತ್ತು ಸಂಶೋಧನೆಗಳ ನಡುವಿನ ಸಂಬಂಧ

ನೈಜತೆಯನ್ನು ತಾರ್ಕಿಕ ಪದಗಳಲ್ಲಿ ವಿವರಿಸುವ ಮಾರ್ಗ ಒಂದು ಸಿದ್ಧಾಂತವಾದರೆ, ನಮ್ಮ ಸಿದ್ಧಾಂತದ ನೈಜ ಚಿತ್ರಗಳನ್ನು ನಾವು ಅವಲೋಕನ ಮಾಡುವುದರೊಂದಿಗೆ ಹೋಲಿಸಿ ನೋಡುವ ಪ್ರಕ್ರಿಯೆ ಸಂಶೋಧನೆಯಾಗುತ್ತದೆ. ಸಿದ್ಧಾಂತ ಮತ್ತು ಸಂಶೋಧನೆ, ಈ ಎರಡೂ ವೈಜ್ಞಾನಿಕ ವೈಚಾರಿಕತೆಗೆ ಅವಶ್ಯವಾದವು. ಏಕೆಂದರೆ, ಬಹಳ ಅರ್ಥಪೂರ್ಣ ಎನ್ನಿಸುವಂತಹ ವಿವರಣೆಗಳು ಎಷ್ಟೋಬಾರಿ ಪ್ರಾಯೋಗಿಕ ಅವಲೋಕನಗಳಿಂದ ಬೆಂಬಲ ಪಡೆಯುವುದೇ ಇಲ್ಲ.

ಪ್ರವರ್ತಮಾನವಾದ ತಾರ್ಕಿಕ ಪ್ರತಿಪಾದನೆಯ ವೈಜ್ಞಾನಿಕ ಪದ್ಧತಿಯಿಂದ ಸಾಮಾಜಿಕ ಸಂಶೋಧನೆಯು ಮಾರ್ಗದರ್ಶನ ಪಡೆಯುತ್ತದೆ ಮತ್ತು ಅನುಗಮನ ಹಾಗೂ ನಿಗಮನ ತಾರ್ಕಿಕ ವಿಧಾನಗಳೆರಡರಿಂದಲೂ ಸಾಮಾಜಿಕ ಸಿದ್ಧಾಂತವು ಜೋಡಿತವಾಗಿದೆ. ಈ ಎರಡೂ ತಾರ್ಕಿಕ ವಿಧಾನಗಳು ವೈಜ್ಞಾನಿಕ ಪ್ರಕ್ರಿಯೆ ಪಾರಸ್ಪರಿಕವಾಗಿ ಕಾರ್ಯನಿರ್ವಹಿಸುತ್ತವೆ. ಸಿದ್ಧಾಂತಗಳು ಆಧಾರ ಕಲ್ಪನೆಗಳನ್ನು ಮೂಡಿಸುತ್ತವೆ, ಆಧಾರ ಕಲ್ಪನೆಗಳು ಅವಲೋಕನಗಳನ್ನು ಸೂಚಿಸುತ್ತವೆ; ಅವಲೋಕನಗಳು ಸಾಧಾರಣೀಕರಣವನ್ನು ರೂಪಿಸುತ್ತವೆ ಮತ್ತು ಈ ಸಾಮಾನ್ಯೀಕರಣದ ಆಧಾರದ ಮೇಲೆ ಸಿದ್ಧಾಂತಗಳನ್ನು ಸುಧಾರಣೆ ಮಾಡಲಾಗುತ್ತದೆ. ವಸ್ತುವಿಷಯಗಳು ಹೇಗಿವೆ ಎಂಬುದನ್ನು ಕುರಿತಂತೆ ನಮ್ಮ ಮನಸ್ಸಿನಲ್ಲಿರುವ ಚಿತ್ರಣವನ್ನು ಬೆಂಬಲಿಸುವ ಯಾವುದಾದರೂ ಸಾಕ್ಷ್ಯಾಧಾರಗಳು ಇವೆಯೇ ಎಂಬುದನ್ನು ನಿರ್ಧರಿಸುವ ಒಂದು ಮಾರ್ಗವೇ ಸಂಶೋಧನಾ ಪ್ರಕ್ರಿಯೆ. ಸಂಶೋಧನಾ ಪ್ರಕ್ರಿಯೆಯಿಂದ ಕಲೆಹಾಕುವ ಸಾಕ್ಷ್ಯವನ್ನು ದತ್ತಾಂಶ (Data) ಎಂದು ಕರೆಯಲಾಗುತ್ತದೆ.

ಪ್ರಶ್ನೆಗಳಿಗೆ ಉತ್ತರ ಸಿಗುವ ರೀತಿಯಲ್ಲಿ ಸಿದ್ಧಾಂತ ಮತ್ತು ಸಂಶೋಧನೆಗಳ ನಡುವೆ ಸಂಬಂಧ ರೂಪಿಸುವುದೇ ಸಂಶೋಧನಾ ಪ್ರಕ್ರಿಯೆಗೆ ಇರುವ ಸವಾಲು. ಇದಕ್ಕೆ ಸಿದ್ಧಾಂತ ಮತ್ತು ದತ್ತಾಂಶಗಳೆರಡೂ ಬೇಕಾಗುತ್ತದೆ. ಯಾವುದೇ ಪ್ರಶ್ನೆಯೊಂದು ಎದುರಾದಾಗ ಇದಕ್ಕೆ ಉತ್ತರವಾಗಿ ಸಿದ್ಧಾಂತವೊಂದನ್ನು ರೂಪಿಸುತ್ತೇವೆ ಮತ್ತು ನಮ್ಮ ಸೈದ್ಧಾಂತಿಕ ಉತ್ತರವು ಕೆಲಸ ಮಾಡುತ್ತದೆಯೋ ಇಲ್ಲವೋ ಎಂಬುದನ್ನು ಕಂಡುಕೊಳ್ಳಲು ದತ್ತಾಂಶಗಳನ್ನು ಸಂಗ್ರಹಿಸಿ ಪರೀಕ್ಷೆಗೆ ನಡೆಸುತ್ತೇವೆ. ಪ್ರಶ್ನೆಗೆ ಬರುವ ಉತ್ತರದ ಬಗ್ಗೆ ಯಾವುದೇ ಕಲ್ಪನೆ (ಸಿದ್ಧಾಂತ) ಇಲ್ಲದೆ, ದತ್ತಾಂಶಗಳನ್ನು ಸಂಗ್ರಹಿಸುವುದು ಅಸಾಧ್ಯ. ಕೇವಲ ಸಿದ್ಧಾಂತ ಮಾತ್ರ ಆದರೆ ಅದು ಅಸಮರ್ಪಕ. ಏಕೆಂದರೆ ಅದು ಪ್ರಮಾಣೀಕೃತವಾಗಿರುವುದಿಲ್ಲ ಮತ್ತು ಪರೀಕ್ಷಿಸಲ್ಪಟ್ಟಿರುವುದಿಲ್ಲ. ನಮ್ಮ ಪ್ರಶ್ನೆಗಳಿಗೆ ಉತ್ತರಿಸಲು ಸಿದ್ಧಾಂತ ಮತ್ತು ದತ್ತಾಂಶ - ಈ ಎರಡೂ ನಮಗೆ ಬೇಕು.

ಸಾಕ್ಷಿಗಳನ್ನು ಕಲೆಹಾಕಿ, ಮೌಲ್ಯಮಾಪನ ಮಾಡಿರುವುದರ ಫಲವಾಗಿ ಸಂಶೋಧನೆಯು ಪ್ರಾಯೋಗಿಕ ಪ್ರಶ್ನೆಗಳಿಗೆ ಉತ್ತರಗಳನ್ನು ನೀಡಬಲ್ಲದು. ಸಂಶೋಧನಾ ಪ್ರಕ್ರಿಯೆಯು ಕೇವಲ ದತ್ತಾಂಶಗಳನ್ನು ಕಲೆ ಹಾಕುವುದಕ್ಕೆ ಸೀಮಿತವಾದುದಲ್ಲ. ಸಮಾಜ ವಿಜ್ಞಾನದ ಸಂಶೋಧನೆ ಮಹತ್ವದ್ದು ಎನ್ನಿಸುವಂತಹ ಜ್ಞಾನ ನಿಧಿಯನ್ನು ಅದು ಒದಗಿಸುತ್ತದೆ.

## 1.4 ಸಾರಾಂಶ

ಒಂದು ಮತ್ತೊಂದರೊಂದಿಗೆ ಹೇಗೆ ಸಂಬಂಧಿತವಾಗಿದೆ ಎಂಬುದರ ಕಲ್ಪನೆಗಳೇ ಸಿದ್ಧಾಂತಗಳು. ಮೂಲಕಲ್ಪನೆಗಳು ಪರಸ್ಪರ ಸಂಬಂಧಿತವಾಗಿರುವ ರೀತಿಗಳನ್ನು ಕುರಿತಾದ ಅಮೂರ್ತ ಕಲ್ಪನೆಗಳೇ ಸಿದ್ಧಾಂತಗಳು. ಪ್ರಪಂಚವು ಹೇಗೆ ಇರಬಹುದು ಎಂಬುದನ್ನು ಕುರಿತಾದ ಒಂದು ಕಲ್ಪನೆ, ಮಾನಸಿಕ ಚಿತ್ರಣವೇ ಸಿದ್ಧಾಂತ. ಕೆಲವೊಂದು ಸಿದ್ಧಾಂತಗಳು ವಿಸ್ತೃತವೂ, ಜಟಿಲವೂ, ಸಂಕೀರ್ಣವೂ, ದಿಗ್ಭ್ರಾಂತಿಗೊಳಿಸುವಂತಹವೂ ಆಗಿರುತ್ತವೆ.

ಯಾವುದೇ ವೈಜ್ಞಾನಿಕವಾದದ ಮೂಲ ಆಧಾರಸ್ತಂಭಗಳೆಂದರೆ ಪರಿಕಲ್ಪನೆ ಮತ್ತು ಸಂಬಂಧಗಳು. ಸಿದ್ಧಾಂತದಲ್ಲಿನ ಸಂಬಂಧಗಳನ್ನು ಕುರಿತಾದ ಹೇಳಿಕೆಗಳು ಎರಡು ಅಥವಾ ಹೆಚ್ಚು ಚರಾಂಶಗಳನ್ನು ಕುರಿತಾದುದು. ಬಹಳ ಹೆಚ್ಚಿನ ಸಿದ್ಧಾಂತಗಳು ಎರಡಕ್ಕಿಂತ ಹೆಚ್ಚಿನ ರಚನಾಕ್ರಮಗಳನ್ನು ತಮ್ಮಲ್ಲಿ ಹೊಂದಿರುತ್ತವೆ ಮತ್ತು ಅವುಗಳ ಸಂಬಂಧ ಸಂಕೀರ್ಣವಾಗಬಹುದು. ಸಿದ್ಧಾಂತಗಳು (Boundary condition) ನಿರ್ದಿಷ್ಟ ಚೌಕಟ್ಟಿನ ನಿರ್ಬಂಧಗಳನ್ನು ಹೊಂದಿರುತ್ತವೆ. ಪರೀಕ್ಷಣೆಯು ಸಾಮಾನ್ಯವಾಗಿ ಸಿದ್ಧಾಂತ ರಚನೆಯ ಒಂದು ಭಾಗವೇ ಹೊರತು ನಂತರದ ಹಂತವೇನಲ್ಲ.

ಸೈದ್ಧಾಂತಿಕ ಪರಿಭಾಷೆಗಳ ಮೂಲಕ ಅರ್ಥಗಳನ್ನು ನೀಡಿರುವುದರಿಂದ ರಚನಾಕ್ರಮಗಳು ಅಮೂರ್ತವಾದವು ಮತ್ತು ಅವುಗಳ ಅಮೂರ್ತತೆಯ ಮಟ್ಟಗಳಲ್ಲಿ ವ್ಯತ್ಯಾಸಗಳಿರಬಹುದು.

ಪರಸ್ಪರ ಸಂಬಂಧಿತವಾದ ಪ್ರಮೇಯಗಳು ಅಥವಾ ಆಧಾರ ಕಲ್ಪನೆಗಳನ್ನು ವಿವರಿಸಲು ಸಿದ್ಧಾಂತ ಎಂಬ ಪದವನ್ನು ಸಮಾಜವಿಜ್ಞಾನಗಳಲ್ಲಿ ಬಳಸಲಾಗುತ್ತದೆ. ಸಿದ್ಧಾಂತ ಆಧಾರಿತ ಸಂಶೋಧನೆಯು ಪುನರಾವೃತ್ತಿಗೊಳ್ಳುವ ಕೆಲವು ಹಂತಗಳನ್ನು ಹೊಂದಿರುತ್ತದೆ. ಅನುಗಮನ, ನಿಗಮನ ಮತ್ತು ಪರೀಕ್ಷಣೆ, ಹೊಸ ಸಿದ್ಧಾಂತವನ್ನು ನಿಗಮನಾತ್ಮಕವಾಗಿ ಪರೀಕ್ಷಣೆ ಮಾಡಬಹುದು. ನಿಗಮನ ವಿಧಾನದಿಂದ ಆಧಾರ ಕಲ್ಪನೆಯನ್ನು ಪರೀಕ್ಷಣೆ ಮಾಡುವ ಸಂಶೋಧನೆಯು ಹೆಚ್ಚು ಕಡಿಮೆ ಯಾವಾಗಲೂ ಪರಿಮಾಣಾತ್ಮಕವಾದರೆ (Quantitative), ಸಿದ್ಧಾಂತವನ್ನು ಹುಟ್ಟುಹಾಕುವ ಅನುಗಮನಾತ್ಮಕ ಸಂಶೋಧನೆಯು ಹೆಚ್ಚು ಕಡಿಮೆ ಗುಣಾತ್ಮಕವಾದುದು (Qualitative).

ಆಧಾರ ಕಲ್ಪನೆಗಳನ್ನು ಸಿದ್ಧಾಂತಗಳಿಂದ ನಿಷ್ಪನ್ನಗೊಳಿಸಲಾಗುತ್ತದೆ ಮತ್ತು ಆಧಾರ ಕಲ್ಪನೆಯೊಂದಿಗೆ ನೇರವಾಗಿ ಪ್ರಭಾವ ಹೊಂದಿರುವ ದತ್ತಾಂಶಗಳೊಂದಿಗೆ ಅವುಗಳ ಪರಿಣಾಮಗಳನ್ನು ಪರೀಕ್ಷಣೆ ಮಾಡಲಾಗುತ್ತದೆ. ಒಂದು ಯಶಸ್ವಿಯಾದ ಏಕೈಕ ಆಧಾರ ಕಲ್ಪನೆಯು ಸಿದ್ಧಾಂತವನ್ನು ತಕ್ಷಣವೇ ಸಂಹರಿಸಲಾರದು. ಆದರೆ, ಬೆಂಬಲ ಪಡೆಯದಂತಹ ಕಲ್ಪನೆಗಳು ಪ್ರಚಲಿತವಾದ ಆಲೋಚನೆಯಿಂದ ದೂರವಾಗಿ ಮರೆಯಾಗಿಬಿಡುತ್ತವೆ. ಸಿದ್ಧಾಂತಗಳ ಪರೀಕ್ಷಣೆಯು ಅವುಗಳ ಪರಿಷ್ಕರಣೆಗೂ ಕಾರಣವಾಗುತ್ತದೆ.

ಒಂದು ಉತ್ತಮವಾದ ಸಿದ್ಧಾಂತವು ವಿವರಣಾತ್ಮಕ ಸಾಮರ್ಥ್ಯ, ಪೂರ್ವಾನುಮಾನದ ಸಾಮರ್ಥ್ಯ, ಮಿತವಂತಿಕೆ, ಆಂತರಿಕ ಸಾಮಂಜಸ್ಯ, ಸ್ವಯಂ ಅನ್ವೇಷಣಾ ಪ್ರಚೋದನೆ ಮತ್ತು ಕ್ರಮಬದ್ಧಗೊಳಿಸುವ ಸಾಮರ್ಥ್ಯಗಳನ್ನು ಹೊಂದಿರುತ್ತದೆ. ಉತ್ತಮವಾದ ಸಿದ್ಧಾಂತಗಳು ಸಂಭಾವ್ಯ ಜ್ಞಾನದ ಹರಹನ್ನು ವಿಸ್ತರಿಸುವಂತಹ ಹೊಸ ಆಧಾರ ಕಲ್ಪನೆಗಳಿಗೆ ಕಾರಣವಾಗುತ್ತವೆ.

ಆದರೆ ಪ್ರತಿಯೊಂದು ಸಿದ್ಧಾಂತವೂ ತರ್ಕದ ಪರೀಕ್ಷಣೆಯನ್ನು ಎದುರಿಸಿ ನಿಲ್ಲಲೇಬೇಕಾಗುತ್ತದೆ. ಪ್ರವರ್ತಮಾನದ ತಾರ್ಕಿಕ ಪ್ರತಿಪಾದನೆಯ ವೈಜ್ಞಾನಿಕ ಪದ್ಧತಿಯಿಂದ ಸಾಮಾಜಿಕ ಸಂಶೋಧನೆಯು ಮಾರ್ಗದರ್ಶನ ಪಡೆಯುತ್ತದೆ ಮತ್ತು ಅನುಗಮನ ಹಾಗೂ ನಿಗಮನದ ತಾರ್ಕಿಕ ವಿಧಾನಗಳಿಂದ ಸಾಮಾಜಿಕ ಸಿದ್ಧಾಂತಕ್ಕೆ ಜೋಡಣೆಗೊಂಡಿದೆ. ಈ ಎರಡೂ ತಾರ್ಕಿಕ ವಿಧಾನಗಳು ವೈಜ್ಞಾನಿಕ ಪ್ರಕ್ರಿಯೆಯಲ್ಲಿ ಪಾರಸ್ಪರಿಕವಾಗಿ ಕಾರ್ಯನಿರ್ವಹಿಸುತ್ತವೆ.

ಸಿದ್ಧಾಂತಗಳು ಆಧಾರ ಕಲ್ಪನೆಗಳನ್ನು ಮೂಡಿಸುತ್ತವೆ. ಆಧಾರ ಕಲ್ಪನೆಗಳು ಅವಲೋಕನಗಳನ್ನು ಸೂಚಿಸುತ್ತವೆ, ಅವಲೋಕನಗಳು ಸಾಧಾರಣೀಕರಣವನ್ನು ರೂಪಿಸುತ್ತವೆ ಮತ್ತು ಈ ಸಾಮಾನ್ಯೀಕರಣದ ಆಧಾರದ ಮೇಲೆ ಸಿದ್ಧಾಂತಗಳನ್ನು ಸುಧಾರಣೆ ಮಾಡಲಾಗುತ್ತದೆ. ಪ್ರಶ್ನೆಗಳಿಗೆ ಉತ್ತರಗಳನ್ನು ಕಂಡುಕೊಳ್ಳುವ ರೀತಿಯಾಗಿ, ಸಿದ್ಧಾಂತ ಮತ್ತು ಸಂಶೋಧನೆಗಳ ನಡುವೆ ಸಂಬಂಧವನ್ನು ಮೂಡಿಸುವುದೇ ಸಂಶೋಧನಾ ಪ್ರಕ್ರಿಯೆಗೆ ಇರುವ ಸವಾಲು. ಇದಕ್ಕೆ ಸಿದ್ಧಾಂತ ಮತ್ತು ದತ್ತಾಂಶಗಳೆರಡೂ ಬೇಕಾಗುತ್ತವೆ. ಪ್ರಶ್ನೆಗಳಿಗೆ ಬರುವ ಸಂಭಾವ್ಯ ಉತ್ತರದ ಬಗ್ಗೆ ಯಾವುದೇ ಕಲ್ಪನೆ (ಸಿದ್ಧಾಂತ) ಇಲ್ಲದೆ, ದತ್ತಾಂಶಗಳನ್ನು ಸಂಗ್ರಹಣೆ ಮಾಡುವುದು ಅಸಾಧ್ಯ. ಕೇವಲ ಸಿದ್ಧಾಂತಗಳಷ್ಟೇ ಆದರೆ ಅವು ಅಸಮರ್ಪಕ. ಏಕೆಂದರೆ ಅವು ಪ್ರಮಾಣೀಕೃತವಾಗಿರುವುದಿಲ್ಲ ಮತ್ತು ಪರೀಕ್ಷಿಸಲ್ಪಟ್ಟಿರುವುದಿಲ್ಲ. ನಮ್ಮ ಪ್ರಶ್ನೆಗಳಿಗೆ ಉತ್ತರಗಳನ್ನು ದೊರಕಿಸಿಕೊಳ್ಳಲು ನಮಗೆ ಸಿದ್ಧಾಂತ ಮತ್ತು ದತ್ತಾಂಶ ಈ ಎರಡೂ ಬೇಕು.

## 1.5 ನಿಮ್ಮ ಪ್ರಗತಿ ಪರಿಶೀಲನೆ

**ಸೂಚನೆ: ನಿಮ್ಮ ಉತ್ತರಗಳನ್ನು ಈ ಘಟಕದಲ್ಲಿ ನೀಡಲಾಗಿರುವ ಮಾಹಿತಿಯೊಂದಿಗೆ ಹೋಲಿಸಿ.**

1. ಸಿದ್ಧಾಂತದ ಪರಿಭಾಷೆಯನ್ನು ತಿಳಿಸಿ. ವೈಜ್ಞಾನಿಕ ಸಿದ್ಧಾಂತದ ರಚನೆಯ ಮೂಲ ಘಟಕಗಳು ಯಾವುವು? ವಿವರಿಸಿ.

2. ರಚನಾಕ್ರಮ ಎಂದರೇನು? ಸಿದ್ಧಾಂತವೊಂದನ್ನು ರಚಿಸುವ ದಿಕ್ಕಿನಲ್ಲಿ ಹೇಗೆ ಮುಂದುವರಿಯಬಹುದು? ವಿವರಿಸಿ.

3. ನಿಗಮನ ಮತ್ತು ಅನುಗಮನ ವಿಧಾನಗಳಿಗಿರುವ ವ್ಯತ್ಯಾಸಗಳೇನು? ವಿವರಿಸಿ.

4. ಆಧಾರ ಕಲ್ಪನೆಯ ಪರಿಭಾಷೆಯನ್ನು ತಿಳಿಸಿ. ಒಂದು ಆಧಾರ ಕಲ್ಪನೆಯನ್ನು ಹೇಗೆ ನಿಷ್ಪನ್ನಗೊಳಿಸಲಾಗುತ್ತದೆ? ವಿವರಿಸಿ.

5. ಉತ್ತಮವಾದ ಸಿದ್ಧಾಂತಗಳ ಗುಣಲಕ್ಷಣಗಳೇನು? ವಿವರಿಸಿ.

6. ಸಿದ್ಧಾಂತ ಮತ್ತು ಸಂಶೋಧನೆಗಳಿಗಿರುವ ಸಂಬಂಧವನ್ನು ಸಮೀಕ್ಷಿಸಿ.

## 1.6 ಹೆಚ್ಚಿನ ಓದಿಗಾಗಿ


1. Bouma and Atkinson, A Handbook of Social Science Research, Oxford University Press - New York, 1995.

2. David Dooley, Social Research Methods, Prentice - Hall of India Pvt. Ltd.-New Delhi, 1995.



**ಬರಹ: ತೇಜಸ್ವಿ ನವಿಲೂರ್ ಮತ್ತು ಬಿ. ಪಿ. ಸತ್ಯೇಂದ್ರ ರಾವ್**

# ಘಟಕ 2 ಸಂವಹನ: ನಿಯಂತ್ರಣ ಮತ್ತು ಜವಾಬ್ದಾರಿಗಳು

ರಚನೆ

2.0 ಉದ್ದೇಶಗಳು

2.1 ಪ್ರಸ್ತಾವನೆ

2.2 ಮಾಧ್ಯಮ ನಿಯಂತ್ರಣ

2.3 ನಿಯಂತ್ರಣದ ವಿಧಾನಗಳು - ರಾಜಕೀಯ ನಿಯಂತ್ರಣ

2.4 ಸಾಮಾಜಿಕ ಮತ್ತು ಸಾಂಸ್ಕೃತಿಕ ನಿಯಂತ್ರಣ

2.5 ಸಾಂಸ್ಥಿಕ ಮತ್ತು ತಾಂತ್ರಿಕ ನಿಯಂತ್ರಣಗಳು

2.6 ಆರು ಪ್ರಮಾಣಿಕ ಮಾಧ್ಯಮ ಸಿದ್ಧಾಂತಗಳು

2.6.1 ಸರ್ವಾಧಿಕಾರಿತನದ ಸಿದ್ಧಾಂತ

2.6.2 ಸ್ವತಂತ್ರ ಅಥವಾ ಮುಕ್ತ ಪತ್ರಿಕೋದ್ಯಮದ ಸಿದ್ಧಾಂತ

2.6.3 ಸಾಮಾಜಿಕ ಜವಾಬ್ದಾರಿಯ ಸಿದ್ಧಾಂತ

2.6.4 ಸೋವಿಯತ್ ಮಾಧ್ಯಮಗಳ ಸಿದ್ಧಾಂತ

2.6.5 ಅಭಿವೃದ್ಧಿ ಮಾಧ್ಯಮ ಸಿದ್ಧಾಂತ

2.6.6 ಪ್ರಜಾತಾಂತ್ರಿಕ ಸಹಭಾಗಿತ್ವದ ಮಾಧ್ಯಮ

2.7 ಸಾರಾಂಶ

2.8 ನಿಮ್ಮ ಪ್ರಗತಿ ಪರಿಶೀಲನೆ

2.9 ಹೆಚ್ಚಿನ ಓದಿಗಾಗಿ

## 2.0 ಉದ್ದೇಶಗಳು

ಪ್ರಜಾಪ್ರಭುತ್ವದಲ್ಲಿ, ನಾಲ್ಕನೆಯ ಅಂಗವಾದ ಮಾಧ್ಯಮಗಳಿಗೆ ಬಹಳ ಪ್ರಮುಖವಾದ ಪಾತ್ರವಿದೆ. ಮಾಧ್ಯಮ ಸ್ವಾತಂತ್ರ್ಯವನ್ನು ಸಶಕ್ತರೀತಿಯಿಂದ ಬಹುವಾಗಿ ಪ್ರತಿಪಾದಿಸಿದರೂ, ನೀತಿನಿಯಮಗಳ ಚೌಕಟ್ಟಿನ ಮಿತಿಗಳಲ್ಲಿ ಮಾಧ್ಯಮಗಳನ್ನು ಇರಿಸಲು ನಿಯಂತ್ರಣ ವ್ಯವಸ್ಥೆಯೂ ಬೇಕೆನಿಸುತ್ತದೆ. ಮಾಧ್ಯಮಗಳನ್ನು ನಿಯಂತ್ರಿಸುವ ವಿಧಾನಗಳು ಹಾಗು ತಮ್ಮ ಜವಾಬ್ದಾರಿಗಳನ್ನು ಅರಿಯುವಂತೆ ಹೇಗೆ ಮಾಧ್ಯಮಗಳಿಗೆ ನಿರ್ದೇಶನ ನೀಡಲಾಗುತ್ತದೆ ಎಂಬುದನ್ನು ಕುರಿತು ಈ ಘಟಕದಲ್ಲಿ ನೀವು ತಿಳಿಯಲಿದ್ದೀರಿ. ಈ ಘಟಕವನ್ನು ಅಧ್ಯಯನ ಮಾಡಿದ ನಂತರ ಕೆಳಗಿನ ವಿಷಯಗಳನ್ನು ನೀವು ಅರಿಯಲಿದ್ದೀರಿ:

* ಮಾಧ್ಯಮ ನಿಯಂತ್ರಣ ಮತ್ತು ಜವಾಬ್ದಾರಿಗಳನ್ನು ಕುರಿತ ಮೂಲಭೂತ ಅಂಶಗಳು;
* ಮಾಧ್ಯಮ ನಿಯಂತ್ರಣದ ಹಲವು ರೂಪಗಳು;
* ಮಾಧ್ಯಮಗಳ ಸಾಮಾಜಿಕ ಮತ್ತು ಸಾಂಸ್ಕೃತಿಕ ಜವಾಬ್ದಾರಿ;
* ಪತ್ರಿಕೆಗಳನ್ನು ಕುರಿತಾದ ನಾಲ್ಕು ಮೂಲ ಸಿದ್ಧಾಂತಗಳನ್ನೂ ಸೇರಿ, ಆರು ಪ್ರಮಾಣಿಕ ಮಾಧ್ಯಮ ಸಿದ್ಧಾಂತಗಳು, ಮತ್ತು
* ಪ್ರತಿಯೊಂದು ಪ್ರಮಾಣಿಕ ಸಿದ್ಧಾಂತದ ಸಾರಾಂಶ.

## 2.1 ಪ್ರಸ್ತಾವನೆ

ಸಮೂಹ ಮಾಧ್ಯಮಗಳು ಒಂದು ಪ್ರಮುಖ ಸಾಮಾಜಿಕ ಸಂಸ್ಥೆಯ ಸ್ಥಾನಮಾನವನ್ನು ಪಡೆದುಕೊಂಡಿವೆ. ಆರ್ಥಿಕ, ರಾಜಕೀಯ ಮತ್ತು ಸಾಂಸ್ಕೃತಿಕ ರೂಢಿ ಪದ್ಧತಿಗಳ ಪ್ರಕಾರವಾಗಿ ಆಧುನಿಕ ಮಾನವ ಸಮಾಜಗಳು ರೂಪುಗೊಂಡಿವೆ. ಕೆಲವೊಂದು ಪ್ರಬಲಕಲ್ಪನೆಗಳು, ಒಂದು ರೀತಿಯಲ್ಲಿ ಸಮಾಜವನ್ನು ರೂಪಿಸುತ್ತವೆ, ನಿಯಂತ್ರಿಸುತ್ತವೆ. ಎಲ್ಲಾ ಸಮಾಜಗಳಲ್ಲಿಯೂ, ಎಲ್ಲಾ ಕಾಲಕ್ಕೂ ಸಂಘರ್ಷಗಳು ಇದ್ದೇ ಇರುತ್ತವೆ. ಹಲವಾರು ಕ್ಷೇತ್ರಗಳಲ್ಲಿ ಇರುವ ಅಸಮಾನತೆಗಳ ಕಾರಣದಿಂದಲೇ ಸಂಘರ್ಷಗಳು ಮೂಡುತ್ತವೆ ಮತ್ತು ಪ್ರಬಲಗೊಳ್ಳುತ್ತವೆ. ಮಾಧ್ಯಮಗಳಲ್ಲಿ ಇವುಗಳನ್ನು ಅಭಿವ್ಯಕ್ತಗೊಳಿಸಲಾಗುತ್ತದೆ. ಆದರೆ, ಐತಿಹಾಸಿಕತೆಯ ಶಕ್ತಿಗಳು, ಜನರ ಮನಸ್ಸಿನಲ್ಲಿ ಮಾಧ್ಯಮಗಳಿಗಿಂತ ಹೆಚ್ಚು ಪ್ರಭಾವಯುತವಾಗಿ ಕೆಲಸ ಮಾಡುತ್ತವೆ ಮತ್ತು ಒಂದೇ ರೀತಿಯಾಗಿ ಚಿಂತನೆ ಮಾಡುವ ಕೆಲ ಗುಂಪುಗಳು ಅವುಗಳ ಮೂಲಕ ಸಮಾಜವು ಕಾರ್ಯನಿರ್ವಹಿಸುವ ರೀತಿಯನ್ನು ಹತೋಟಿಯಲ್ಲಿಡುತ್ತವೆ. ಐತಿಹಾಸಿಕತೆಯ ಶಕ್ತಿಗಳು ಮಾಧ್ಯಮಗಳಿಗಿಂತ ಸಶಕ್ತವಾದವು. ಏಕೆಂದರೆ, ಮಾಧ್ಯಮಗಳು ತಾವೇ ಆ ಶಕ್ತಿಯ ಅಭಿವ್ಯಕ್ತಿಗಳು ಮತ್ತು ಅದ್ದರಿಂದ ನಿಯಂತ್ರಿತವಾದಂತಹವು.

## 2.2 ಮಾಧ್ಯಮ ನಿಯಂತ್ರಣ

ಇದು ಸಮಾಜದ ಬೇರೆ ಬೇರೆ ಹಂತಗಳಲ್ಲಿ ಆಗುತ್ತದೆ. ಸಮೂಹ ಮಾಧ್ಯಮಗಳು ಮಾನವ ಸಂವಹನ ಪಿರಮಿಡ್‌ನ ತುತ್ತ ತುದಿಯಲ್ಲಿವೆ. ವ್ಯವಸ್ಥೆ / ಸಂಸ್ಥೆಗಳ ನಡುವೆ (ಉದಾಹರಣೆಗೆ, ರಾಜಕೀಯ ವ್ಯವಸ್ಥೆ ಅಥವಾ ವ್ಯಾಪಾರೀ ಕಾರ್ಪೋರೇಷನ್‌ಗಳು), ಗುಂಪುಗಳ ನಡುವೆ (ಕುಟುಂಬಗಳಲ್ಲಿ), ವ್ಯಕ್ತಿಗಳ ನಡುವೆ (ದಂಪತಿಗಳು, ವಿವಿಧ ವ್ಯಕ್ತಿಗಳು) ಮತ್ತು ವ್ಯಕ್ತಿಯ ಅಂತರ್ಯದಲ್ಲಿ (ಪ್ರತಿ ವ್ಯಕ್ತಿಯ ಮಸ್ತಿಷ್ಕದಲ್ಲಿ) ಇವು ಸಮಾಜದಲ್ಲಿ ನಡೆಯುವ ಸಂವಹನದ ಆರು ಸ್ತರಗಳು.

ಸಮೂಹ ಸಂವಹನ ಸ್ತರದ ಕೆಲವೊಂದು ಸಂದರ್ಭಗಳ ಕಡೆಯಿಂದ ಹಲವಾರು ರೀತಿಯ ಸಂವಹನ ನಡೆಯುವಂತಹ ಪಿರಮಿಡ್‌ನ ಬುಡಕ್ಕೆ ಸಾಗೋಣ. ಮ್ಯಾಕ್‌ಕ್ವೇಲ್ ಅವರ ಪ್ರಕಾರ, ಪ್ರತಿಯೊಂದು ಸ್ತರದ ಸಂವಹನವೂ ಪ್ರತ್ಯೇಕವಾದ ನಿರ್ದಿಷ್ಟ ಸಮಸ್ಯೆಗಳು ಹಾಗೂ ಪ್ರಾತಿನಿಧ್ಯತೆಗಳು ಮತ್ತು ತಮ್ಮದೇ ಆದ ಸಾಕ್ಷ್ಯಾಧಾರಗಳು ಮತ್ತು ಸಿದ್ಧಾಂತದ ಬಂಧವನ್ನು ಅವಶ್ಯವಾಗಿ ಹೊಂದಿರುತ್ತವೆ".

ಹಾಗೆಯೇ ಸಮಾಜದಲ್ಲಿನ ಈ ಪ್ರತಿಯೊಂದು ಸ್ತರದಲ್ಲಿರುವ ಸಂವಹನದ ನಿಯಂತ್ರಣ ಮತ್ತು ಜವಾಬ್ದಾರಿಗಳನ್ನು ಕುರಿತಾದ ಪ್ರಶ್ನೆಗಳನ್ನು ಚರ್ಚಿಸಬೇಕಾಗುತ್ತದೆ. ಆದರೆ, ವಿಭಿನ್ನವಾದ ಈ ಎಲ್ಲ ಸ್ತರಗಳಿಗೂ, ಸಾಮಾನ್ಯವಾದ ಕೆಲವೊಂದು ಪ್ರಶ್ನೆಗಳಿವೆ. ಅವುಗಳೆಂದರೆ :

**1. ಸಂವಹಿಸುವವರು ಯಾರು?**

ಅಂದರೆ ಸಂದೇಶದ ಮೂಲ / ಪ್ರೇಷಕ ಯಾರು? ಸಂವಹಿತನಿಗೆ ವಿಷಯವನ್ನು ತಿಳಿಸುವ ಮತ್ತು ಗ್ರಾಹಕರ ಪ್ರತಿಕ್ರಿಯೆಗಳನ್ನು ಪರೀಕ್ಷೆ ಮಾಡುವುದಕ್ಕಿಂತ ಹೆಚ್ಚಿನದಾದ ಯಾವುದಾದರೂ ವಿಶೇಷವಾದ ಗುರಿಗಳು ಸಂವಾಹಕನಿಗೆ ಇದೆಯೇ? ಉದಾಹರಣೆಗೆ, ಸಮಾಜದ ಒಂದು ನಿರ್ದಿಷ್ಟ ವರ್ಗದ ಮೇಲೆ ಪ್ರಭಾವ ಬೀರಿ, ಅದರ ಮನವೊಲಿಕೆ ಮಾಡಿ, ತಾನು ಬೆಳೆಸಿಕೊಂಡಿರುವ ಧೋರಣೆಗಳಿಗೆ ಅನುರೂಪವಾಗಿ ಅದನ್ನು ಸೆಳೆಯುವಂತೆ ಮಾಡುವ ವಿಶೇಷವಾದ ಕಾರಣಗಳು ಯಾವುದಾದರೂ ಸಂವಾಹಕನಿಗೆ ಇವೆಯೇ? ಎಂಬುದಾಗಿ.

**2. ಸಂದೇಶವನ್ನು ಪಡೆಯುವವರು ಯಾರು?**

ಗ್ರಾಹಕ / ರ ಸಾಮಾಜಿಕ / ಜನಸಂಖ್ಯಾತ್ಮಕ ಗುಣಲಕ್ಷಣಗಳು ಯಾವುವು? ಸಂದೇಶವನ್ನು ಪಡೆಯುತ್ತಿರುವುದು ಪುರುಷನೇ, ಮಹಿಳೆಯೇ? ಪುರುಷ ಅಥವಾ ಮಹಿಳೆಯರ ಸಮೂಹವೇ? ಹಿರಿಯ ನಾಗರೀಕರ ಗುಂಪೇ? ಯುವಕರು ಅಥವಾ ಹದಿಹರೆಯದವರೇ? ಸಿರಿವಂತರೇ, ಬಡವರೇ? ಗ್ರಾಹಕರು ಸುಶಿಕ್ಷಿತರೇ ಅಥವಾ ಅಸಮರ್ಪಕ ಪ್ರಮಾಣದ ಶಿಕ್ಷಣವನ್ನು ಪಡೆದಿರುವವರೇ? ಅವರ ವೃತ್ತಿ ಯಾವುವು? ಅವರ ವಾರ್ಷಿಕ ಆದಾಯ ಎಷ್ಟು? ಎಂದೆಲ್ಲ.

**3. ಸಂದೇಶ ಏನು?**

ಅಂದರೆ, ಸಂವಹನದಲ್ಲಿ ಅಡಕವಾದ ವಸ್ತು ವಿಷಯಗಳೇನು? ಸಂವಹನದ ಸ್ವರೂಪದ ಅಥವಾ ವಿಧಾನ ಯಾವುದು? ಪ್ರಾಥಮಿಕವಾಗಿ ಅದು ರಾಜಕೀಯ, ಆರ್ಥಿಕ, ಸಾಮಾಜಿಕ (ಧಾರ್ಮಿಕ, ಸಾಂಸ್ಕೃತಿಕ, ಶೈಕ್ಷಣಿಕ)ವೇ ಅಥವಾ ಬೇರೆ ರೀತಿಯ ಸಂದೇಶವೇ?

**4. ಸಂದೇಶವನ್ನು ಸಂವಹಿಸಲು ಯಾವ ಮಾಧ್ಯಮವನ್ನು ಬಳಸಲಾಗುತ್ತದೆ.**

ಅದು ವೃತ್ತಪತ್ರಿಕೆಯೇ, ನಿಯತಕಾಲಿಕವೇ, ಒಂದು ರೇಡಿಯೋ ಕೇಂದ್ರ ಅಥವಾ ಟೆಲಿವಿಷನ್ ಕೇಂದ್ರವೇ? ಅಥವಾ ಸಂದೇಶವೊಂದನ್ನು ಹೊತ್ತಿರುವ ಚಲನಚಿತ್ರವೇ? ಯಾವ ಭಾಷೆಯನ್ನು ಬಳಸಲಾಗಿದೆ. ಸಂದೇಶಗಳನ್ನು ರವಾನಿಸಲು ಯಾವ ತಂತ್ರ(ಜ್ಞಾನ)ಗಳನ್ನು ಅಳವಡಿಸಿಕೊಳ್ಳಲಾಗಿದೆ.

ಈ ಮಾಧ್ಯಮದ ಮಾಲೀಕರು ಯಾರು? ಪ್ರಕಾಶಕ / ಕೇಂದ್ರದ ಮಾಲೀಕ / ಚಿತ್ರ ನಿರ್ಮಾಪಕ / ನಿರ್ದೇಶಕ ಯಾರು? ಈ ಮಾಲೀಕರಿಗೆ ನಿರ್ದಿಷ್ಟವಾದ ಒಂದು ಆರ್ಥಿಕ ಅಥವಾ ರಾಜಕೀಯ ತತ್ವ / ಬದ್ಧತೆ ಇದೆಯೇ? ಮಾಲೀಕರು ಅಥವಾ ಅವನ / ಅವಳ ಸಂಪಾದಕ ಹಾಗು ಕ್ಷೇತ್ರ ಸಿಬ್ಬಂದಿಯವರು ಎಷ್ಟು ವಸ್ತುನಿಷ್ಠರಾಗಿರಬಹುದು? ಮಾಲೀಕರು ಸಂದೇಶದ ವಸ್ತುವಿನ ಆಯ್ಕೆ ಹಾಗು ಆಯ್ದ ವಸ್ತುವಿನ ರಚನೆಯನ್ನು ನಿಯಂತ್ರಿಸುತ್ತಾರೆಯೇ?

**5. ಸಂವಹನದ ಉದ್ದೇಶಿತ ಹಾಗೂ ಅನುದ್ದಿಷ್ಟವಾದ ಫಲಿತಾಂಶಗಳೇನು?**

ಜನರು / ಗ್ರಾಹಕರು ಸಂದೇಶಕ್ಕೆ ಹೇಗೆ ಪ್ರತಿಕ್ರಿಯಿಸಿದ್ದಾರೆ? ಸಂವಹನದ ಪರಿಣಾಮಗಳ ಬಗ್ಗೆ ವಾಹಿನಿಗಳ ಮಾಲೀಕರಿಗೆ ಹಿತಾಸಕ್ತಿಯಿಲ್ಲದೆಯೇ? ತಮ್ಮ ಸಾಮಾಜಿಕ ಜವಾಬ್ದಾರಿಗಳ ಬಗ್ಗೆ ಯಾವುದೇ ರೀತಿಯ ಚಿಂತನವನ್ನು ಅವರು ಮಾಡುತ್ತಾರೆಯೇ? ಸಮಾಜದಲ್ಲಿ ಅವ್ಯವಸ್ಥೆಯನ್ನು ಮೂಡಿಸಬಲ್ಲ ಸಂದೇಶಗಳನ್ನು ಸಂವಹಿಸುವಲ್ಲಿ ಸಂಯಮ ಹೊಂದುವ ಅವಶ್ಯಕತೆಯನ್ನು ಕುರಿತಂತೆ ಅವರು ಕಾಳಜಿಯನ್ನು ಹೊಂದಿದ್ದಾರೆಯೇ? ಯಾವುದೇ ರೀತಿಯ ಸಾಮಾಜಿಕ ಜವಾಬ್ದಾರಿಯನ್ನು ಅವರು ನಿರ್ವಹಿಸುತ್ತಾರೆಯೇ? ಮಾಧ್ಯಮ ಹಿತಾಸಕ್ತಿ ಮತ್ತು ಜವಾಬ್ದಾರಿಯ ಅಂಶಗಳನ್ನು ಅರ್ಥ ಮಾಡಿಕೊಳ್ಳಲು "ರಾಷ್ಟ್ರ, ಸಮಾಜ ಮತ್ತು ಸಂಸ್ಕೃತಿಯೊಂದಿಗಿನ ಮಾಧ್ಯಮ ಸಂಬಂಧಗಳು, ಉತ್ಪಾದನೆ ಹಾಗೂ ವಿತರಣಾ ಸಂಸ್ಥೆಯ ಸನ್ನಿವೇಶ ಪರಿಸ್ಥಿತಿಗಳು, ಅದರ ವಸ್ತುವಿಷಯದ ವಿವಿಧತೆಗಳು; ಶ್ರೋತೃಗಣದ ಬಳಕೆಯ ರೀತಿ; ಸಂವಾಹಕರು ಮತ್ತು ಶ್ರೋತೃಗಣದ ನಡುವಣ ಸಂಬಂಧಗಳು ಮತ್ತು ಸಾಮಾಜಿಕ ಬಳಕೆಯಲ್ಲಿ ಮಾಧ್ಯಮ ಬಳಕೆಯನೆಲೆ" ಈ ಎಲ್ಲದರ ಬಗ್ಗೆ ನಾವು ತಿಳಿಯಬೇಕಾಗುತ್ತದೆ.

## 2.3 ನಿಯಂತ್ರಣದ ವಿಧಾನಗಳು: ರಾಜಕೀಯ ನಿಯಂತ್ರಣ

ಸಮಾಜದಲ್ಲಿ ರಾಜಕೀಯ ಅಂಶಗಳು ಅಧಿಕಾರ ಸಂಬಂಧಿಯಾಗಿ ಇರತಕ್ಕವು. ಸಾಮಾನ್ಯವಾದ ಸಾಮಾಜಿಕ ಮತ್ತು ಸಾಂಸ್ಕೃತಿಕ ಅಂಶಗಳಿಗಿಂತ ಭಿನ್ನವಾಗಿ ಇದನ್ನು ಗುರುತಿಸಬಹುದು. ರಾಜಕೀಯ ಅಂಶಗಳು ಬಾಹ್ಯರೀತಿಯ ಒತ್ತಡಗಳಾಗಿದ್ದು, ಮಾಧ್ಯಮಗಳನ್ನು ನಿಯಂತ್ರಿಸುತ್ತವೆ. ಪ್ರಬಲವಾದ / ಅಧಿಕಾರಾರೂಢ ರಾಜಕೀಯ ಶಕ್ತಿಗಳ ಒಲವುಗಳ ಬದ್ಧವಾಗಿರುವಂತೆ ಅವು ಮಾಧ್ಯಮದ ಮೇಲೆ ಒತ್ತಡ ಹೇರುತ್ತದೆ; ವ್ಯತಿಕ್ರಮವಾಗಿ ವಿರೋಧ ಮಾಧ್ಯಮಗಳು ಬಾಹ್ಯನಿಯಂತ್ರಣಗಳ ಬಗ್ಗೆ ವಿಮರ್ಶಾತ್ಮಕವಾದ ದೃಷ್ಟಿ ಹೊಂದುವಂತೆ ನಿರ್ಬಂಧಪಡಿಸುತ್ತವೆ.

ಐತಿಹಾಸಿಕವಾಗಿ, ಅಧಿಕಾರದಲ್ಲಿರುವ ರಾಜರು, ನಿರಂಕುಶ ಪ್ರಭುಗಳು ಮತ್ತು ಮಿಲಿಟರಿ / ಸರ್ವಾಧಿಕಾರಿಗಳು ತಮ್ಮ ತಮ್ಮ ಮನೋಲಹರಿಯ ಪ್ರಕಾರವಾಗಿ ನಡೆಯುವಂತೆ ಮಾಧ್ಯಮಗಳ ಮೇಲೆ ದಬ್ಬಾಳಿಕೆ ನಡೆಸುತ್ತಾರೆ. ವಿರೋಧಕ್ಕೆ ಅವಕಾಶವಿರುವುದಿಲ್ಲ. ಯಾವುದೇ ವಿಷಯವನ್ನು ಪ್ರಕಾಶನ ಮಾಡುವ ಮುನ್ನ ಪೂರ್ವಾನುಮತಿ ಪಡೆಯಬೇಕಾಗುತ್ತದೆ. ಮನರಂಜನಾ ಕಾರ್ಯಕ್ರಮಗಳನ್ನು ಸಹ 'ಪ್ರಕಟಣೆ ಪ್ರಸ್ತುತಿ'ಗೆ ಮುನ್ನ ಪರೀಕ್ಷಣೆ ಮಾಡಲಾಗುತ್ತದೆ / ನಿಯಂತ್ರಿಸಲಾಗುತ್ತದೆ / ಸೆನ್ಸಾರ್ ಮಾಡಲಾಗುತ್ತದೆ. ಯಾವುದೇ ವಿಷಯವನ್ನು ಸಾರ್ವಜನಿಕ ಮಾಧ್ಯಮ ಮತ್ತು ಸಾರ್ವಜನಿಕ ಉಪನ್ಯಾಸದ ಮೂಲಕವಾಗಿ ದೊರೆಯುವಂತೆ ಮಾಡು ಎಂಬ ತಾಂತ್ರಿಕ ಅರ್ಥದಲ್ಲಿ 'ಪ್ರಕಟಣೆ' ಎಂಬ ಪದವನ್ನು ಇಲ್ಲಿ ಬಳಸಲಾಗಿದೆ.

1970ರ ಮಧ್ಯಭಾಗದಲ್ಲಿ, ತುರ್ತು ಪರಿಸ್ಥಿತಿಯ ಅವಧಿ (1975-77)ಯಲ್ಲಿ ಭಾರತದಲ್ಲಿ ಇದನ್ನು ನಾವು ಅನುಭವಿಸಿದೆವು. ಸ್ವಲ್ಪ ಕಾಲ ಪತ್ರಿಕೆಗಳು ವಿರೋಧ ವ್ಯಕ್ತಪಡಿಸಿದವು. ಆದರೆ, ಹಲವಾರು ಪತ್ರಿಕೆಗಳು ಸರ್ಕಾರದ ಸೆನ್ಸಾರ್ ಶಿಪ್‌ನ ರೂಢಿಯ ದೇಖರೆಗೆ ಬಿದ್ದುಬಿಟ್ಟವು.

ಹಲವಾರು ದೇಶಗಳ ರಾಜಕೀಯ ಚರಿತ್ರೆಯಲ್ಲಿ ಕಂಡುಬರುವಂತೆ, ಇಂತಹ ಅಸಾಮಾನ್ಯ ಕಾಲದಲ್ಲಿ ಮಾಧ್ಯಮಗಳ ಸ್ವಾತಂತ್ರ್ಯಕ್ಕೆ ಕತ್ತರಿಪ್ರಯೋಗ ಮಾಡಲಾಗುತ್ತದೆ. ವೃತ್ತಪತ್ರಿಕೆಗಳು ಮತ್ತು ನಿಯತಕಾಲಿಕಗಳು ರೇಡಿಯೋ ಮತ್ತು ಟಿವಿಯಂತಹ ಸಾಂಪ್ರದಾಯಿಕ ಮಾಧ್ಯಮಗಳ ಮೇಲಷ್ಟೇ ಅಲ್ಲದೆ, ಪುಸ್ತಕಗಳು, ಗ್ರಂಥಗಳು, ಕರಪತ್ರಗಳು ಮತ್ತು ಇತರ ಮುದ್ರಿತ ವಸ್ತುಗಳು, ಅಲ್ಲದೆ ರಾಷ್ಟ್ರದ ಕಾರ್ಯನಿರ್ವಹಣೆಯ ಮೇಲೂ ಕಠಿಣ ನಿಯಂತ್ರಣವನ್ನು ಹೇರಲಾಗುತ್ತದೆ. ಭಾರತದ ಮೇಲೆ ಚೀನಾ ಅಥವಾ ಪಾಕಿಸ್ತಾನೀಯರ ದುರಾಕ್ರಮಣದಂತಹ ರಾಷ್ಟ್ರೀಯ ತುರ್ತುಗಳಲ್ಲಿ ಮತ್ತು ಪೋಟಾದಂತಹ ಆಂತರಿಕ ಸರ್ವಾಧಿಕಾರಿ ಕಾಯಿದೆ / ಕಾನೂನುಗಳನ್ನು ಕಾರ್ಯಗತಗೊಳಿಸುವಾಗ - ಪ್ರಾದೇಶಿಕ ಸರ್ಕಾರಗಳೂ ಸಹ ಮಾಧ್ಯಮಗಳ ಮೇಲೆ ನಿರ್ಬಂಧಗಳನ್ನು ಹೇರುವ ಪ್ರಯತ್ನ ಮಾಡುತ್ತವೆ.

ಮಾಧ್ಯಮಕ್ಕೆ ಸೇರಿದಂತಹ ಮಾಧ್ಯಮ ಕಂಪನಿಗಳ ಇನ್ನಿತರ ವ್ಯಾಪಾರ ಸಾಮ್ರಾಜ್ಯಗಳಿಗೆ ಸರ್ಕಾರದಿಂದ ತೊಂದರೆಯಾಗಬಹುದೆಂದು ಹೆದರಿ ಹಲವು ಮಾಧ್ಯಮಗಳು ಸರ್ಕಾರಗಳ ಅನುವರ್ತಿಯಾಗಿಯೇ ಹೆಜ್ಜೆ ಹಾಕುತ್ತವೆ. ಬಂಡವಾಳ ಹಿಂತೆಗೆತದ ಪ್ರಸಕ್ತ ಸನ್ನಿವೇಶದಲ್ಲಿ, ಹಲವಾರು ಕೈಗಾರಿಕೆಗಳು ಮತ್ತು ವ್ಯಾಪಾರಗಳನ್ನು ಖಾಸಗೀಕರಣ ಮಾಡುತ್ತಿರುವಾಗ ಸರ್ಕಾರದ ಹಸ್ತಕ್ಷೇಪಕ್ಕೆ ಸಂಬಂಧಿಸಿದಂತೆ, ಪರಿಸ್ಥಿತಿಯು ನಿಧಾನವಾಗಿ ಬದಲಾಗುತ್ತಿದೆ.

ಆದರೆ ಮಾಧ್ಯಮ ನಿಯಂತ್ರಣಗಳು ಕೇವಲ ಸರ್ಕಾರಗಳಿಂದ ಮಾತ್ರ ಹೇರಲ್ಪಡುವುದಿಲ್ಲ. ಬಹುದೊಡ್ಡ ವ್ಯಾಪಾರ, ವ್ಯವಹಾರಗಳಂತೆ ಮಾಧ್ಯಮಗಳನ್ನು ನಿರ್ವಹಿಸಲ್ಪಡುವುದರಿಂದ ಖಾಸಗೀ ಒಡೆತನದ ನಿಯಂತ್ರಣವೂ ಇರುತ್ತದೆ.

## 2.4 ಸಾಮಾಜಿಕ ಮತ್ತು ಸಾಂಸ್ಕೃತಿಕ ನಿಯಂತ್ರಣ

ಮ್ಯಾಕ್ ಕ್ವೇಲ್ ಅವರ ಪ್ರಕಾರ, ಸಮಾಜದಲ್ಲಿ ಮಾಧ್ಯಮಗಳನ್ನು ಕುರಿತಂತೆ ಮೂರು ವಿಭಿನ್ನ ರೀತಿಯ ಸಾಮಾನ್ಯ ಆಶಯಗಳು ಇರುತ್ತವೆ.

i) ಸಾಮಾಜಿಕ ಹಾಗೂ ನೈತಿಕ ಮನೋಧರ್ಮಗಳನ್ನು ಉತ್ತಮಗೊಳಿಸಲು ಮಾಧ್ಯಮಗಳು ಸಹಾಯ ಮಾಡಬೇಕು. ಸಮಾಜದ ನೈತಿಕ ಶಕ್ತಿಯನ್ನು ಕುಗ್ಗಿಸುವಂತಹ ಯಾವುದನ್ನೂ ಅದು ಮಾಡಬಾರದು. ಮನರಂಜನೆಯು 'ಶುದ್ಧವಾದ, ವಿನೋದ'ವಾಗಿರಬೇಕು. ಅದು ನೈತಿಕತೆಯನ್ನು ಕೆಡಿಸಬಾರದು. ಅದು ಸಮಾಜದ ಸದಸ್ಯರ ಅದರಲ್ಲೂ ಮುಖ್ಯವಾಗಿ ಯುವಕರು ಮತ್ತು ಹದಿಹರಯದವರ ನೈತಿಕತೆಯನ್ನು ಹಾಳು ಮಾಡಬಾರದು. ಮಾಧ್ಯಮ ಮೇಳಗಳು ನೈತಿಕ ಮಾನಕಗಳಿಗೆ ಬದ್ಧವಾಗಿರಬೇಕು. ಮಾಧ್ಯಮದ ಭಾಷೆಯು ಶುದ್ಧವಾಗಿರಬೇಕು ಮತ್ತು ಉನ್ನತವಾಗುವಂತಿರಬೇಕು. ಅಸಭ್ಯವಾಗಿ ಹಾಗು ಕೀಳುತನದ್ದಾಗಿರಬಾರದು. ಸಮಾಜದ ಮೌಲ್ಯಗಳನ್ನು ಅದು ಎತ್ತಿ ಹಿಡಿಯಬೇಕು. ಮಾಧ್ಯಮಗಳ ಮೂಲಕ ಸಕಾರಾತ್ಮಕವಾದ ಮೌಲ್ಯಗಳನ್ನು ನೀಡಬೇಕು. ನಕಾರಾತ್ಮಕತೆಗೆ ಪ್ರೋತ್ಸಾಹ ನೀಡಬಾರದು. ಅನೈತಿಕತೆಗೆ ಪ್ರೋತ್ಸಾಹ ನೀಡಬಾರದು.

ii) ಮಾಧ್ಯಮವು 'ನೈಜ'ವಾಗಿರಬೇಕು. ಮುಖ್ಯವಾಗಿ ಹದಿಹರಯದವರಲ್ಲಿ ಅದು ಹುಚ್ಚು ಕಲ್ಪನೆಗಳನ್ನು ಹುಟ್ಟುಹಾಕಬಾರದು. ಸಮಾಜದ ಪ್ರಸಕ್ತ ವಿದ್ಯಮಾನಗಳಿಗೆ ಮಾಧ್ಯಮಗಳು ಪ್ರಾಮಾಣಿಕವಾಗಿರಬೇಕು.

iii) ಸಮಾಜದ ಸೌಂದರ್ಯಕ್ಕೆ ಮತ್ತು ಸಾಂಸ್ಕೃತಿಕ ರೂಢಿಗಳಿಗೆ ಬದ್ಧವಾಗಿರಬೇಕು. ಕನಿಷ್ಠ ದರ್ಜೆಯ 'ಸಮೂಹ ಸಂಸ್ಕೃತಿ'ಗೆ ಊಣಬಡಿಸುವ ಬದಲು, ಸಾಧ್ಯವಾದಷ್ಟುಮಟ್ಟಿಗೆ ಉನ್ನತ ಸಂಸ್ಕೃತಿಯ, ಕಲಾಪ್ರಮಾಣಗಳಿಗೆ ಬದ್ಧವಾಗಿರಬೇಕು. "ಸಮೂಹ ಸಂಸ್ಕೃತಿ" ಎಂದರೆ, ಸಮೂಹ ಮಾರುಕಟ್ಟೆಗಳಿಗೆಂದೇ ಉತ್ಪಾದಿಸಲಾದಂತಹ ಸಾಂಸ್ಕೃತಿಕ ಉತ್ಪನ್ನಗಳು. ಈ ಪರಿಕಲ್ಪನೆಯೊಂದಿಗೆ ಸೇರಲ್ಪಟ್ಟಿರುವುದೆಂದರೆ, ಉತ್ಪನ್ನದ ಒಂದೇರೀತಿಯ ದರ್ಜೆ ಮತ್ತು ಅದರ ಬಳಕೆಯಲ್ಲಿನ ಸಾಮೂಹಿಕ ನಡವಳಿಕೆ.

ಪಾರಂಪರಿಕವಾದ ಸಾಮಾಜಿಕ ಸಂಸ್ಥೆಗಳು ಉನ್ನತ ಸಂಸ್ಕೃತಿಯನ್ನು ಸಂರಕ್ಷಿಸುತ್ತವೆ ಮತ್ತು ಅದಕ್ಕೆ ಪ್ರೋತ್ಸಾಹ ನೀಡುತ್ತವೆ. ಹಾಗು ಇದನ್ನು ಸಾಮಾಜಿಕವಾಗಿ ಉತ್ಕೃಷ್ಟವಾದ್ದೆಂದು ಪರಿಗಣಿಸಲಾಗುತ್ತದೆ. ಆದರೆ, ಸಮೂಹ ಸಂಸ್ಕೃತಿಯನ್ನು ಮಾಧ್ಯಮ ಮಾರುಕಟ್ಟೆಯ ಇಚ್ಛಾನಿಷ್ಠಗಳಿಗೆ ಬಿಡಲಾಗುತ್ತದ. ಹತ್ತಿರದಲ್ಲಿ ಮತ್ತು ಬಹುದೂರದಲ್ಲಿ ಇರುವಂತಹ ವಿಭಿನ್ನವಾದ ಹಾಗು ಅತ್ಯಂತ ವಿಶಾಲವಾದ ಶ್ರೋತೃಗಣಕ್ಕೆ ಸರಿಹೊಂದುವಂತೆ, ತತ್‌ಕ್ಷಣವೇ ರವಾನಿಸಲು ತಂತ್ರಜ್ಞಾನಗಳನ್ನು ಬಳಸಿಕೊಂಡು, ಸಮೂಹ ಮಾರುಕಟ್ಟೆಯ ಉಪಯೋಗಕ್ಕಾಗಿ ಇದನ್ನು ಅಧಿಕ ಪ್ರಮಾಣದಲ್ಲಿ ಉತ್ಪಾದನೆ ಮಾಡಲಾಗುತ್ತದೆ. ಇದರ ಉದ್ದೇಶವೆಂದರೆ ತತ್‌ಕ್ಷಣದ ತೃಪ್ತಿ ಮತ್ತು ಚಿತ್ತಾಪಕರ್ಷಣ. ಅಂತಹ ಕಾರ್ಯಕ್ರಮಗಳ ವಿಷಯವಸ್ತುಗಳು ಸಾಮಾನ್ಯವಾಗಿ ಟೊಳ್ಳಾಗಿದ್ದು, ಕನಿಷ್ಠ ಸಾಮಾನ್ಯರಿಗೆ ಮೆಚ್ಚುಗೆಯಾಗುತ್ತದೆ ಮತ್ತು ಮಾರುಕಟ್ಟೆಯ ಆಶಯಗಳು, ಆಯ್ಕೆಗಳಿಂದ ನಿಯಂತ್ರಿಸಲ್ಪಡುತ್ತವೆ.

## 2.5 ಸಾಂಸ್ಥಿಕ ಮತ್ತು ತಾಂತ್ರಿಕ ನಿಯಂತ್ರಣಗಳು

ಮಾಧ್ಯಮದ ಸಾಂಸ್ಥಿಕ ಸ್ವರೂಪ ಮತ್ತು ಉತ್ಪಾದನಾ ತಂತ್ರಗಳನ್ನು ಕುರಿತಂತೆ ಬಳಕೆದಾರರ ಅರಿವು ಮತ್ತು ಜ್ಞಾನ ವೃದ್ಧಿಯಾದಾಗ ಮಾತ್ರ, ಸಾಮಾನ್ಯ ಬಳಕೆದಾರರಿಗೆ ಮಾಧ್ಯಮದ ಈ ನಿಯಂತ್ರಣಗಳು ಅನುಭವ ವೇದ್ಯವಾಗುತ್ತವೆ. ಮೊದಲಿಗೆ ಸಂಸ್ಥೆಯ ಮಹತ್ವದ ನೆಲೆಯನ್ನು ಅರ್ಥಮಾಡಿಕೊಳ್ಳಬೇಕು. ಅಂದರೆ, ಅವರ ಮಹತ್ವ ಇರುವುದು ಸಂದೇಶದ ಮೇಲೆಯೋ ಅಥವಾ ಅದರ ಉತ್ಪಾದನೆ ಹಾಗು ವಿತರಣೆಯ ಮೇಲೆಯೋ ಎಂಬುದಾಗಿ. ಪ್ರತಿಯೊಂದಕ್ಕೂ ನೀಡಲಾಗಿರುವ ಪ್ರಾಮುಖ್ಯತೆಯ ಪರಿಮಾಣವು ಮಾಧ್ಯಮ ಸಂಸ್ಥೆಯ ರೂಪ ಮತ್ತು ಶ್ರೋತೃಗಣದೊಂದಿಗಿನ ಅದರ ಸಂಬಂಧದ ಮೇಲೆ ಸಶಕ್ತವಾಗಿ ಪರಿಣಾಮ ಬೀರಬಲ್ಲದು. ಎರಡನೆಯದಾಗಿ, ಇದರೊಂದಿಗೆ ಸೇರಿಕೊಂಡಿರುವ ತಂತ್ರಜ್ಞಾನದ ಸಂಕೀರ್ಣತೆಯು ಅದರಿಂದ ಚಲಾಯಿಸಲ್ಪಡುವ ನಿಯಂತ್ರಣದ ಮೇಲೆ ಪ್ರಭಾವ ಬೀರುತ್ತದೆ. ಉತ್ಪಾದನೆಯ ತಂತ್ರಜ್ಞಾನವು ಶ್ರೋತೃಗಣಕ್ಕೆ ತಿಳಿದಿರದಿದ್ದರೆ, ತಂತ್ರಜ್ಞಾನದಿಂದ ಚಲಾಯಿಸಲ್ಪಡುವ ನಿಯಂತ್ರಣವನ್ನು ಅರ್ಥ ಮಾಡಿಕೊಳ್ಳಲಾಗುವುದಿಲ್ಲ.

ಮೂರನೆಯದಾಗಿ, ಮಾಧ್ಯಮದಲ್ಲಿ ಯಾರು ಕೆಲಸ ಮಾಡುತ್ತಾರೋ ಅವರ ವೃತ್ತಿ ಪರಿಭಾಷೆಯ ಸ್ವರೂಪವು ಮಾಧ್ಯಮ ಮತ್ತು ಅದರ ಉತ್ಪನ್ನಗಳ ಮೇಲೆ ನಿಯಂತ್ರಣವನ್ನು ವಿಧಿಸುತ್ತದೆ. ಆದರೆ, ಈಗ ಎಲ್ಲ ಮಾಧ್ಯಮಗಳಲ್ಲಿಯೂ ಕಂಪ್ಯೂಟರೀಕೃತ ಸಂಪರ್ಕ ತಂತ್ರಜ್ಞಾನವನ್ನು ಬಳಸಿಕೊಳ್ಳಲಾಗುತ್ತಿರುವುದರಿಂದ ಮಾಧ್ಯಮಗಳೊಳಗೆ ಮತ್ತು ವಿವಿಧ ಮಾಧ್ಯಮಗಳಲ್ಲಿ ಪೃಥಕ್ಕರಣದ ಸಾಲುಗಳು ಮಸುಕಾಗುತ್ತಿವೆ.

## 2.6 ಆರು ಪ್ರಮಾಣಿಕ ಸಿದ್ಧಾಂತಗಳು

ಮಾಧ್ಯಮಗಳ ಜವಾಬ್ದಾರಿ ಮತ್ತು ನಿಯಂತ್ರಣಗಳನ್ನು ನಾವು ಚರ್ಚಿಸುವಾಗ, ಮಾಧ್ಯಮಗಳ ಸ್ವರೂಪ ಮತ್ತು ಆಚರಣೆಯ ಆರು ಪ್ರಮಾಣಿಕ ಸಿದ್ಧಾಂತಗಳ ಪ್ರಮುಖ ಗುಣಲಕ್ಷಣಗಳನ್ನು ಚರ್ಚಿಸಬೇಕಾಗುತ್ತದೆ.

ಇತ್ತೀಚಿನ ವರ್ಷಗಳಲ್ಲಿ ನಿಯಂತ್ರಣದ ಹಲವಾರು ರೂಪಗಳಿಂದಾಗಿ ಸಮೂಹ ಮಾಧ್ಯಮಗಳಲ್ಲಿ ಕೆಲವೊಂದು ಸಮಸ್ಯೆಗಳು ತಲೆದೋರಿವೆ. ಪತ್ರಿಕೆ ಹಾಗು ಇತರ ಮಾಧ್ಯಮಗಳ ಒಡೆತನದ ಶಕ್ತಿಕೇಂದ್ರವು (ಸರ್ಕಾರೀ ಮತ್ತು ಖಾಸಗೀ ಮಾಲೀಕತ್ವಗಳೆರಡೂ) ಈ ಪ್ರಮಾಣಿಕ ಸಿದ್ಧಾಂತಗಳ ಪರೀಕ್ಷಣೆಯನ್ನು ಅವಶ್ಯಕವನ್ನಾಗಿಸಿವೆ. ಪತ್ರಿಕೆಗಳನ್ನು ಕುರಿತಂತೆ ಪ್ರಮುಖ ಸಿದ್ಧಾಂತಗಳ ತುಲನಾತ್ಮಕವಾದ ವಿವರಣೆ ಕುರಿತಂತೆ ಮೊದಲ ಪ್ರಯತ್ನ ನಡೆದದ್ದು, ಎಫ್. ಸೀಬರ್ಟ್, ಟೀ ಪೀಟರ್‌ಸನ್ ಮತ್ತು ಡಬ್ಲ್ಯು. ಶ್ರಾಮ್‌ರವರು 1956ರಲ್ಲಿ ತಮ್ಮ ಫೋರ್ ಥಿಯರೀಸ್ ಆಫ್ ಪ್ರೆಸ್‌ಅನ್ನು ಪ್ರಕಟಪಡಿಸಿದಾಗ.

## 2.6.1 ಸರ್ವಾಧಿಕಾರಿತನದ ಸಿದ್ಧಾಂತ

ರಾಜಪ್ರಭುತ್ವ ಮತ್ತು ನಿರಂಕುಶ ಆಳ್ವಿಕೆಯುಗಳ ಕಾಲದ, ಪತ್ರಿಕೋದ್ಯಮದ ಮೊದಲ ಹಂತಗಳಲ್ಲಿನ ಪತ್ರಿಕೆಗಳನ್ನು ಈ ಸಿದ್ಧಾಂತವು ಮುಖ್ಯವಾಗಿ ಕುರಿತದ್ದಾಗಿದೆ. ಪೂರ್ವ ನಿರ್ಬಂಧ ಮತ್ತು ನಂತರದ ಸೆನ್ಸಾರ್‌ಶಿಪ್‌ಗೆ ಸಮರ್ಥನೆಯನ್ನು ಇದು ನೀಡುತ್ತದೆ. ಆ ದಿನಗಳಲ್ಲಿ, ಸರ್ಕಾರದ ಪೂರ್ವಾನುಮತಿ ಹಾಗು ಪರವಾನಗಿ ಪಡೆಯುವ ಪದ್ಧತಿಯನ್ನು ಯಾವ ಪ್ರಕಾಶಕರು ಉಲ್ಲಂಘನೆ ಮಾಡುತ್ತಾರೋ ಅಥವಾ ಯಾರು ಸರ್ಕಾರದ ಮೇಲೆ, ಅದರಲ್ಲೂ ಮುಖ್ಯವಾಗಿ ರಾಜಕೀಯ ಮತ್ತು ವೈಚಾರಿಕ ಭ್ರಷ್ಟತೆಗಳನ್ನು ಕುರಿತು ಟೀಕೆಗಳನ್ನು ಮಾಡುತ್ತಾರೋ ಅವರನ್ನು ಶಿಕ್ಷೆಗೆ ಒಳಪಡಿಸಲಾಗುತ್ತಿತ್ತು.

ಹಲವಾರು ರೀತಿಯ ಪತ್ರಿಕಾ ನಿಯಂತ್ರಣಗಳು ಇರುತ್ತಿದ್ದವು. ಶಾಸನಾತ್ಮಕ ನಿಯಂತ್ರಣ, ಉತ್ಪಾದನೆಯ ಮೇಲೆ ನೇರವಾಗಿ ರಾಷ್ಟ್ರದ ಹತೋಟಿ, ಆಚಾರ ಸಂಹಿತೆಯೊಂದನ್ನು ಹೇರುವುದು, ಹೆಚ್ಚುವರಿ ತೆರಿಗೆ ಮತ್ತು ದಂಡಗಳನ್ನು ನೀಡುವಂತೆ ಮಾಡುವುದು, ಹಲವಾರು ರೀತಿಯ ಆರ್ಥಿಕ ದಿಗ್ಬಂಧನಗಳನ್ನು ವಿಧಿಸುವುದು, ಯಂತ್ರೋಪಕರಣಗಳ ಆಯಾತದ ಮೇಲೆ ನಿಯಂತ್ರಣ, ಸಂಪಾದಕ ವರ್ಗವನ್ನು ನೇಮಿಸುವಂತಹ ಸರ್ಕಾರದ ಹಕ್ಕು ಮತ್ತು ಎಲ್ಲಕ್ಕೂ ಮಿಗಿಲಾಗಿ ಪತ್ರಿಕಾಲಯ ಮತ್ತು ಅದರ ಪರಿಕರಗಳನ್ನು ಮುಟ್ಟುಗೋಲು ಹಾಕಿಕೊಳ್ಳುವ ಮತ್ತು ಪ್ರಕಾಶಕ ಹಾಗು ಸಂಪಾದಕರನ್ನು ಸೆರೆಮನೆಗೆ ತಳ್ಳುವ ಮತ್ತು ಬಹಳ ಹೆಚ್ಚು ಪ್ರಮಾಣ ದಂಡಗಳನ್ನು ಹೇರುವಂತೆ ಸರ್ಕಾರದ ನಿರಂಕುಶ ಶಕ್ತಿ.

ಪ್ರಜಾಸತ್ತಾತ್ಮಕತೆಯ ಪೂರ್ವದ ಸಮಾಜಗಳಲ್ಲಿ ಅದರಲ್ಲೂ ಮುಖ್ಯವಾಗಿ ಸರ್ವಾಧಿಕಾರಿಗಳು ಮತ್ತು ಮಿಲಿಟರಿ ಆಡಳಿತಗಾರರು / ಮಾರ್ಷಲ್ ಲಾ ಆಡಳಿತಗಾರರ ಆಳ್ವಿಕೆಯಲ್ಲಿ ಈ ರೀತಿಯ ನಿಯಂತ್ರಣವನ್ನು ಸಾಮಾನ್ಯವಾಗಿ ಹೇರಲಾಗುತ್ತದೆ. ಆದರೆ, ಪ್ರಜಾಸತ್ತಾತ್ಮಕ ಆಡಳಿತಗಾರರಿಂದಲೂ ತುರ್ತು ಪರಿಸ್ಥಿತಿಯಂತಹ ಸಂದರ್ಭಗಳಲ್ಲಿ ನಿರಂಕುಶತೆಯೆಡೆಗಿನ ಪ್ರವೃತ್ತಿ ನೋಡಸಿಗುತ್ತವೆ. ಈ ಸಿದ್ಧಾಂತದ ಪ್ರಧಾನ ಗುಣಲಕ್ಷಣಗಳ ಸಾರಾಂಶವನ್ನು ಈ ಕೆಳಕಂಡಂತೆ ಪಟ್ಟಿ ಮಾಡಬಹುದು.

ಅ. ವ್ಯವಸ್ಥಿತವಾಗಿರುವ ಅಧಿಕಾರವನ್ನು ಕಡೆಗಣಿಸುವ ಮತ್ತು ಕ್ರಮವನ್ನು ಕ್ಷೋಭೆಗೀಡುಮಾಡುವ ಯಾವುದೇ ಕೆಲಸವನ್ನು ಮಾಧ್ಯಮಗಳು ಮಾಡಬಾರದು.

ಆ. ವ್ಯವಸ್ಥಿತವಾದ ಅಧಿಕಾರಕ್ಕೆ ಅವು ಅಧೀನವಾಗಿರತಕ್ಕದ್ದು.

ಇ. ಬಹುಸಂಖ್ಯಾತರ ಅಥವಾ ಪ್ರಬಲ ವಿರುದ್ಧ, ನೈತಿಕ ಹಾಗೂ ರಾಜಕೀಯ ಮೌಲ್ಯಗಳ ವಿರುದ್ಧದ ಯಾವುದೇ ದಾಳಿಯನ್ನು ತೋರೆಯುವುದು.

ಈ. ಈ ಅಂಶಗಳನ್ನು ಹೇರಲು ಸೆನ್ಸಾರ್‌ಶಿಪ್ ಅನ್ನು ಸಮರ್ಥನೆ ಮಾಡುವುದು.

ಉ. ಅಧಿಕಾರದಲ್ಲಿರುವವರ ಮೇಲೆ ಅಸ್ವೀಕಾರಾರ್ಹವಾದ ದಾಳಿಗಳು, ಸರ್ಕಾರದ ಕಾರ್ಯನೀತಿಯಿಂದ ವಿಮುಖವಾಗುವುದು ಅಥವಾ ನೈತಿಕ ಸಂಹಿತೆಗಳ ವಿರುದ್ಧದ ಎಲ್ಲಾ ಚಟುವಟಿಕೆಗಳೂ, ಕ್ರಿಮಿನಲ್ ಅಪರಾಧಗಳಾಗುತ್ತವೆ.

ಊ. ಪತ್ರಕರ್ತರು ಮತ್ತು ಇತರ ಮಾಧ್ಯಮ ವೃತ್ತಿನಿರತರಿಗೆ ತಮ್ಮ ಸಂಸ್ಥೆಯೊಳಗೆ ಯಾವುದೇ ರೀತಿಯ ಸ್ವಾತಂತ್ರ್ಯವಿರುವುದಿಲ್ಲ.

## 2.6.2 ಸ್ವತಂತ್ರ ಅಥವಾ ಮುಕ್ತ ಪತ್ರಿಕೋದ್ಯಮ (Freee Press) ಸಿದ್ಧಾಂತ

ಹದಿನೇಳನೆಯ ಶತಮಾನದಲ್ಲಿ ಗ್ರೇಟ್ ಬ್ರಿಟನ್ ಮತ್ತು ಇನ್ನೂ ಕೆಲವು ಐರೋಪ್ಯ ದೇಶಗಳಲ್ಲಿ ಪತ್ರಿಕೆಗಳು ಸರ್ಕಾರದ ನಿಯಂತ್ರಣದಿಂದ ಮುಕ್ತವಾದವು. ಹಲವಾರು ದೇಶಗಳಲ್ಲಿ ಪ್ರಜಾಪ್ರಭುತ್ವದ ಬಲವರ್ಧನೆಯಾದಂತೆ ಪತ್ರಿಕೋದ್ಯಮ ಹೆಚ್ಚು ಮುಕ್ತವಾಯಿತು. ಹದಿನೆಂಟನೆಯ ಶತಮಾನದಲ್ಲಿ, ಅಮೇರಿಕ ಸಂವಿಧಾನದ ಮೊದಲ ತಿದ್ದುಪಡಿಯು ಪತ್ರಿಕೆಗಳಿಗೆ ಅನಿಯಂತ್ರಿತ ಸ್ವಾತಂತ್ರ್ಯವನ್ನು ನೀಡಿದಾಗ, ಈ ಸಿದ್ಧಾಂತವು, ಮುಕ್ತ ಪತ್ರಿಕೋದ್ಯಮ (ಫ್ರೀ ಪ್ರೆಸ್) ಸಿದ್ಧಾಂತ ಎಂದು ಹೆಸರು ಪಡೆಯಿತು.

ಯಾವುದೇ ನಿರ್ಬಂಧವಿಲ್ಲದೆ, ವ್ಯಕ್ತಿಯೊಬ್ಬ ತನಗೆ ಯಾವುದು ಸರಿ ಎಂದು ತೋರುತ್ತದೆಯೋ ಅದನ್ನು ಅಭಿವ್ಯಕ್ತಿ ಮಾಡಲು, ಪ್ರಕಾಶನ ಮಾಡಲು ಮತ್ತು ಪ್ರಸಾರ ಮಾಡಲು ಸ್ವತಂತ್ರನಿದ್ದಾನೆ ಎಂಬುದನ್ನು ಈ ಸಿದ್ಧಾಂತವು ಪ್ರಚಾರಪಡಿಸುತ್ತದೆ. ಯಾವುದೇ ನಿರ್ಬಂಧವಿಲ್ಲದ, ಮುಕ್ತವಾದ, ಸಾರ್ವತ್ರಿಕ ಅಭಿವ್ಯಕ್ತಿಯೇ ವಸ್ತುಸತ್ಯಕ್ಕೆ ಬರಲು ಮತ್ತು ಲೋಪದೋಷಗಳನ್ನು ತೋರ್ಪಡಿಸಲು ಇರುವ ಅತ್ಯಂತ ಸೂಕ್ತವಾದ ಮಾರ್ಗ ಎಂಬ ಆಧಾರ ಕಲ್ಪನೆಯ ಮೇಲೆ ಈ ಸಿದ್ಧಾಂತವನ್ನು ರೂಪಿಸಲಾಗಿದೆ. ಹದಿನೇಳನೆಯ ಶತಮಾನದಲ್ಲಿ, ತನ್ನ ಪ್ರಬಂಧ 'ಏರೋಪಾಜಿಟಿಕ'ದಲ್ಲಿ ಬಹಳ ಸ್ಪಷ್ಟವಾದ ರೀತಿಯಲ್ಲಿ ಜಾನ್ ಮಿಲ್ಟನ್ ಸೆನ್ಸಾರ್‌ಶಿಪ್‌ಅನ್ನು ಖಂಡಿಸಿದ್ದಾರೆ. ಹಲವಾರು ವರ್ಷಗಳ ನಂತರ, ಪ್ರಜಾಪ್ರಭುತ್ವದ ಮೂಲೆಗಲ್ಲಾಗಿ ಮುಕ್ತ ಪತ್ರಿಕೋದ್ಯಮದ ಅವಶ್ಯಕತೆಯನ್ನು ಮತ್ತು ಜನರು ತಪ್ಪು(ಅನ್ಯಾಯ)ನ ಬದಲಿಗೆ ಸರಿ(ನ್ಯಾಯ)ಯಾದುದನ್ನು ಆಯ್ಕೆ ಮಾಡುವ ಅತ್ಯುತ್ತಮ ಸಾಧನ ಇದು ಎಂದೂ ಜಾನ್‌ಸ್ಟುವರ್ಟ್ ಮಿಲ್ ಹೇಳಿದ್ದಾರೆ. ಈ ಸಿದ್ಧಾಂತದ ಪ್ರಮುಖ ಗುಣಲಕ್ಷಣಗಳು ಈ ಕೆಳಕಂಡಂತಿವೆ.

ಅ. ಯಾವುದೇ ಮೂರನೆಯ ಶಕ್ತಿಯಿಂದ ಯಾವುದೇ ರೀತಿಯ ಸೆನ್ಸಾರ್‌ಶಿಪ್‌ಗೆ ಒಳಗಾಗದಂತೆ ಪ್ರಕಾಶನವು ಮುಕ್ತವಾಗಿರಬೇಕು.

ಆ. ಯಾವುದೇ ಪರವಾನಗಿ ಅಥವಾ ಲೈಸೆನ್ಸಿನ ಅವಶ್ಯಕತೆ ಇಲ್ಲದ ರೀತಿಯಲ್ಲಿ ಪ್ರಕಾಶನ ಹಾಗು ವಿತರಣೆಯ ಕಾರ್ಯಗಳು ಮುಕ್ತವಾಗಿರಬೇಕು.

ಇ. ಸರ್ಕಾರಗಳು, ಸರ್ಕಾರೀ ಅಥವಾ ರಾಜಕೀಯ ಪಕ್ಷಗಳ ಮೇಲಿನ ವಾಗ್ದಾಳಿಗಳು (ವ್ಯಕ್ತಿಗಳ ಮೇಲಲ್ಲ)ಶಿಕ್ಷೆಗೆ ಒಳಗಾಗುವಂತಿರಬಾರದು.

ಈ. ಏನನ್ನೇ ಆದರೂ ಪ್ರಕಟಣೆ ಮಾಡುವಂತೆ ಯಾವುದೇ ರೀತಿಯ ಒತ್ತಡವೂ ಇರಬಾರದು.

ಉ. ಅಭಿಪ್ರಾಯ ಮತ್ತು ನಂಬುಗೆಗಳ ರೂಪದಲ್ಲಿ ತಪ್ಪುಗಳನ್ನು ಪ್ರಕಟಿಸಬಹುದು.

ಊ. ಪ್ರಕಟಣೆಗಾಗಿ ಮಾಹಿತಿ ಸಂಗ್ರಹ ಮಾಡಲು ಯಾವುದೇ ನಿರ್ಬಂಧ ಇರಕೂಡದು.

ಋ. ರಾಷ್ಟ್ರೀಯ ಸೀಮೆಗಳನ್ನು ಮೀರಿ ಸಂದೇಶಗಳನ್ನು ಆಯಾತ, ನಿರ್ಯಾತಮಾಡುವ ಅಥವಾ ಕಳುಹಿಸುವ / ಪಡೆಯುವ ವಿಷಯದಲ್ಲಿ ಯಾವುದೇ ನಿರ್ಬಂಧವಿರಕೂಡದು.

ಎ. ತಮ್ಮ ಕಾರ್ಯಸಂಸ್ಥೆಯಲ್ಲಿ ಸಾಕಷ್ಟು ಮಟ್ಟದಲ್ಲಿ ವೃತ್ತಿ ಸ್ವಾತಂತ್ರ್ಯವನ್ನು ಸಾಧಿಸುವ ಹಕ್ಕು ಪತ್ರಕರ್ತರಿಗಿರಬೇಕು.

## 2.6.3 ಸಾಮಾಜಿಕ ಜವಾಬ್ದಾರಿಯ ಸಿದ್ಧಾಂತ

ಸ್ವತಂತ್ರ ಪತ್ರಿಕೋದ್ಯಮ ಸಿದ್ಧಾಂತದ ಆಧಾರದ ಮೇಲೆ ನಡೆದುಕೊಂಡವರು ತೋರಿಸಿದ ಸಾಮಾಜಿಕ ಜವಾಬ್ದಾರಿಯ ಕಾರಣದಿಂದಲೇ ಮುಖ್ಯವಾಗಿ ಈ ಸಿದ್ಧಾಂತ ಮೂಡಿ ಬಂದಿದೆ. ಹತ್ತೊಂಬತ್ತನೆಯ ಶತಮಾನದ ಕೊನೆಯ ಸುಮಾರಿಗೆ ವೃತ್ತಪತ್ರಿಕೆಗಳು ಹಾಗು ಜರ್ನಲ್‌ಗಳಲ್ಲಿನ ಬರಹಗಳು ಸ್ವಾತಂತ್ರ್ಯದ ಹೆಸರಿನಲ್ಲಿ ಎಲ್ಲ ರೀತಿಯ ಸುಳ್ಳು, ಉತ್ಪ್ರೇಕ್ಷೆ ಮತ್ತು ಉದ್ರೇಕಕಾರಿ ಬಣ್ಣ ಹಚ್ಚಿಕೊಂಡವು. ಮುಕ್ತ ಮಾರುಕಟ್ಟೆಯು ಸ್ವೇಚ್ಛೆಯ ಬರಹಕ್ಕೆ ದಾರಿಯಾಯಿತು. ಮುಕ್ತತೆಯ ಕಲ್ಪನೆಗೆ ಒತ್ತಾಸೆ ನೀಡಿದವರು, ಮುಕ್ತ ಮಾರುಕಟ್ಟೆಯಲ್ಲಿರುವ ಕಲ್ಪನೆಗಳ ಪೈಪೋಟಿಯು ಎಲ್ಲ ಅಭಿಪ್ರಾಯ ಬೇಧಗಳನ್ನು ಹೊರತರುವುದೆಂದೂ, ಘಟನೆಯೊಂದಕ್ಕೆ ಸಂಬಂಧಿಸಿದಂತೆ ಎಲ್ಲ ಅಂಶಗಳೂ ಆಚೆಗೆ ಬರುವುದೆಂಬ ನಂಬುಗೆಯನ್ನು ಹೊಂದಿದ್ದರು.

ಸಮಾಜದ ಮಾಹಿತಿಗೆ ಸಂಬಂಧಿಸಿದ, ಸಾಮಾಜಿಕ ಹಾಗೂ ನೈತಿಕ ಅವಶ್ಯಕತೆಗಳನ್ನು ತಲುಪುವಲ್ಲಿ ಬಹಳ ಕಡಿಮೆ ದರ್ಜೆಯಲ್ಲಿದ್ದ ಪತ್ರಿಕೆಗಳ ಕಾರ್ಯರೀತಿಯನ್ನು ನೋಡಿ ಅಮೇರಿಕಾ ಸರ್ಕಾರವು ನಿಯೋಗವೊಂದನ್ನು ರಚಿಸಿತು. ಇದು ಶಿಕಾಗೋ ವಿಶ್ವವಿದ್ಯಾನಿಲಯದ ಅಧ್ಯಕ್ಷರಾಗಿದ್ದ ರಾಬರ್ಟ್ ಎಂ. ಹುಚಿನ್ಸ್‌ರವರ ಅಧ್ಯಕ್ಷತೆಯಲ್ಲಿ ಪತ್ರಿಕೋದ್ಯಮದ ಸ್ವಾತಂತ್ರ ಕುರಿತಾಗಿದ್ದ ನಿಯೋಗವಾಗಿತ್ತು (ಇದನ್ನು ಹುಚಿನ್ಸ್ ಕಮಿಶನ್ ಎಂದೂ ಕರೆಯಲಾಗುತ್ತದೆ). ಈ ಸಿದ್ಧಾಂತ ಆಧಾರ ನಂಬುಗೆಗಳೆಂದರೆ, ಮಾಧ್ಯಮಗಳು ಸಮಾಜದ ಅವಶ್ಯಕ ಕಾರ್ಯಗಳನ್ನು ಎಸಗುತ್ತವೆ. ದಿನದ ಪ್ರಮುಖ ಘಟನೆಗಳ ನೈಜವಾದ ಮತ್ತು ಸಮಗ್ರವಾದ ವಿವರಗಳನ್ನು ಒದಗಿಸುವ ಮೂಲಕ, ಆ ಕರ್ತವ್ಯಗಳನ್ನು ಅವು ಪೂರ್ಣಗೊಳಿಸಬೇಕು. ಅಲ್ಲದೆ, ಹಲವಾರು ಅಭಿಪ್ರಾಯಗಳಿಗೆ, ಅಂದರೆ, ಬಹುಸಂಖ್ಯಾತ ಅಭಿಪ್ರಾಯಗಳನ್ನು ವಿರೋಧಿಸುವ ದೃಷ್ಟಿಗೂ ಅದು ವೇದಿಕೆಯನ್ನೊದಗಿಸಬೇಕು.

ಸಾಮಾಜಿಕ ಜವಾಬ್ದಾರಿಯ ಸಿದ್ಧಾಂತವು ಮಾಧ್ಯಮ ಸ್ವಾತಂತ್ರ್ಯವನ್ನು ಒತ್ತಿ ಹೇಳುತ್ತದೆ. ಆದರೆ, ಒಂದು ಸಾರ್ವಜನಿಕ ದತ್ತಿಯಿಂದ ಮಾಧ್ಯಮ ಒಡೆತನ ಮತ್ತು ನಿಯಂತ್ರಣವನ್ನು ಎತ್ತಿ ಹಿಡಿಯುತ್ತದೆಯೇ ಹೊರತು ಖಾಸಗಿ ಅಧಿಕಾರವಾಗಿ ಅಲ್ಲ. ಮಾಧ್ಯಮ ವೃತ್ತಿನಿರತರು ಒಡೆತನ ಮತ್ತು ಸ್ವಾತಂತ್ರ್ಯವನ್ನು ಬಳಸಿಕೊಳ್ಳಬೇಕು. ಆದರೆ ಅವರು ಮಾಧ್ಯಮ ಬಳಕೆದಾರರು ಮತ್ತು ಷೇರುದಾರರು / ಮಾಲೀಕರಿಗೆ ಮಾತ್ರವಲ್ಲದೆ, ವಿಶಾಲಾರ್ಥದಲ್ಲಿ ಸಂಪೂರ್ಣ ಸಮಾಜಕ್ಕೇ ಜವಾಬ್ದಾರರಾಗಿರತಕ್ಕದ್ದು.

ಡೆನಿಸ್ ಮ್ಯಾಕ್ ಕ್ವೇಲ್ ಈ ಸಿದ್ಧಾಂತದ ಪ್ರಮುಖ ಗುಣಲಕ್ಷಣಗಳನ್ನು ಕೆಳಕಂಡಂತೆ ಪಟ್ಟಿ ಮಾಡಿದ್ದಾರೆ.

ಅ. ಮಾಧ್ಯಮವು ಸಮಾಜದ ಕೆಲವೊಂದು ಕಾರ್ಯಭಾರಗಳನ್ನು ಒಪ್ಪಿಕೊಳ್ಳಬೇಕು ಮತ್ತು ಅವುಗಳನ್ನು ಪೂರೈಸಬೇಕು.

ಆ. ತಿಳುವಳಿಕೆ ನೀಡುವಿಕೆ, ಸತ್ಯನಿಷ್ಠತೆ, ನಿಖರತೆ, ವಾಸ್ತವಿಕತೆ ಮತ್ತು ಸಮತೋಲಕ್ಕೆ ಸಂಬಂಧಿದಂತೆ ಉತ್ತಮವಾದ ವೃತ್ತಿಪರತೆಯ ಮಾನಕಗಳನ್ನು ರೂಪಿಸುವ ಮೂಲಕ ಮುಖ್ಯವಾಗಿ ಈ ಕಾರ್ಯಭಾರಗಳನ್ನು ಪೂರೈಸಬೇಕು.

ಇ. ಕಾನೂನು ಮತ್ತು ವ್ಯವಸ್ಥೆಯ ಚೌಕಟ್ಟಿನಲ್ಲಿ ಮಾಧ್ಯಮವು ಸ್ವಯಂನಿಯಂತ್ರಿತವಾಗಿರಬೇಕು.

ಈ. ಯಾವುದೇ ವಿಷಯವು ಅಪರಾಧ, ಹಿಂಸೆ ಮತ್ತು ಸಾಮಾಜಿಕ ಅಸ್ಥಿರತೆ ಅಥವಾ ಅಲ್ಪಸಂಖ್ಯಾತ ಸಮೂಹಗಳಿಗೆ ಆಕ್ರಮಣಕಾರಿಯಾದ ರೀತಿಯಲ್ಲಿದ್ದರೆ ಮಾಧ್ಯಮಗಳು ಅವುಗಳಿಂದ ದೂರವಿರಬೇಕು.

ಉ. ಒಟ್ಟಾರೆಯಾಗಿ, ಮಾಧ್ಯಮಗಳು ಅನೇಕತ್ವವಾದಿಯಾಗಿರಬೇಕು ಮತ್ತು ಹಲವಾರು ಅಭಿಪ್ರಾಯ ಬೇಧಗಳಿಗೆ ಹಾಗು ಪುನರುತ್ತರದ ಹಕ್ಕಿಗೆ ಅವಕಾಶವನ್ನು ಕಲ್ಪಿಸಿ, ತಮ್ಮ ಸಮಾಜಗಳ ವಿವಿಧತೆಯನ್ನು ಪ್ರತಿಬಿಂಬಿಸಬೇಕು.

ಊ. ಅತ್ಯುತ್ತಮ ಮಟ್ಟದ ಕಾರ್ಯಾಚರಣೆಯನ್ನು ಬಯಸುವ ಹಕ್ಕು ಸಮಾಜ ಮತ್ತು ಸಾರ್ವಜನಿಕರಿಗೆ ಇದೆ. ಸಾರ್ವಜನಿಕರಿಗೆ ಒಳ್ಳೆಯದನ್ನು/ಖಾತ್ರಿಗೊಳಿಸಲು ಹಸ್ತಕ್ಷೇಪವನ್ನು ಸಮರ್ಥನೆ ಮಾಡಬಾರದು.

ಋ. ಪತ್ರಕರ್ತರು ಮತ್ತು ಮಾಧ್ಯಮ ವೃತ್ತಿನಿರತರು ಸಮಾಜ ಹಾಗು ನೌಕರಿ ನೀಡಿದವರಿಗೆ ಮತ್ತು ಮಾರುಕಟ್ಟೆಗೂ ಉತ್ತರದಾಯಿತ್ವ ಹೊಂದಿರಬೇಕು.

## 2.6.4 ಸೋವಿಯತ್ ಮಾಧ್ಯಮ ಸಿದ್ಧಾಂತ

ಸೋವಿಯತ್ ಒಕ್ಕೂಟವು ಈಗ ಅಸ್ತಿತ್ವದಲ್ಲಿಲ್ಲದಿದ್ದರೂ, ಈ ಸಿದ್ಧಾಂತದ ಮೂಲತತ್ವಗಳು ಕಮ್ಯುನಿಸ್ಟ್ / ಸೋಷಿಯಲಿಸ್ಟ್ ದೇಶಗಳಿಗೆ ಅನ್ವಯವಾಗುವಂತಹವು.

1917ರ ಅಕ್ಟೋಬರ್ ಕ್ರಾಂತಿಯ ನಂತರ, ರಷ್ಯಾದಲ್ಲಿ ಹೊಸ ರಾಜಕೀಯ ವ್ಯವಸ್ಥೆಯೊಂದು ಮೂಡಿಬಂದಿತು. ಅಂತಿಮವಾಗಿ ಮಾರ್ಕ್ಸ್ ಮತ್ತು ಎಂಗೆಲ್ಸ್‌ರವರ ಸೂತ್ರಗಳಲ್ಲಿ ಆಧಾರ ಹೊಂದಿರುವಂತಹ, ವಿ.ಐ.ಲೆನಿನ್ ಅವರ ಮುಂದಾಳುತ್ವದಲ್ಲಿ ಮಾಧ್ಯಮ ಸಿದ್ಧಾಂತವೊಂದು ಮೂಡಿಬಂದಿತು.

**ಈ ಸಿದ್ಧಾಂತದ ಮೂಲಭೂತವಾದ ಆಧಾರ ಸೂತ್ರಗಳೆಂದರೆ :**

ಅ. ನಿರೂಪಣೆಯೇ ಹೇಳುವಂತೆ, ಒಂದು ಸೋಶಿಯಲಿಸ್ಟ್ ಸಮಾಜದಲ್ಲಿ, ಕಾರ್ಮಿಕ ವರ್ಗ ಅಧಿಕಾರವನ್ನು ಹಿಡಿದಿರುತ್ತದೆ.ಆ ಅಧಿಕಾರವನ್ನು ಉಳಿಸಿಕೊಳ್ಳಲು ಅದು ಬೌದ್ಧಿಕ ಉತ್ಪಾದನೆಯ ಸಾಧನ ಸಾಹಿತ್ಯ, ಮಾಧ್ಯಮ ಇತ್ಯಾದಿಗಳನ್ನು ನಿಯಂತ್ರಿಸಬೇಕು. ಕಾರ್ಮಿಕ ವರ್ಗದ ಏಜೆನ್ಸಿಗಳು (ಕಾರ್ಯಸ್ವರೂಪವಾಗಿ ಒಂದೇ ಏಜೆನ್ಸಿ, ಅರ್ಥಾತ್ ಕಮ್ಯುನಿಸ್ಟ್ ಪಕ್ಷ) ಎಲ್ಲಾ ಮಾಧ್ಯಮಗಳನ್ನು ನಿಯಂತ್ರಿಸುವ ಶಕ್ತಿಯನ್ನು ಹೊಂದಿರಬೇಕು.

ಆ. ಸೋಶಿಯಲಿಸ್ಟ್ ಸಮಾಜಗಳು ವರ್ಗರಹಿತವಾದವು ಮತ್ತು ಅವುಗಳಲ್ಲಿ ವರ್ಗ ಸಂಘರ್ಷ ಇರುವುದಿಲ್ಲ. ರಾಜಕೀಯ ಸಂಘರ್ಷದ ಆಧಾರದ ಮೇಲೆ ಮಾಧ್ಯಮಗಳನ್ನು ಯೋಚಿಸಬಾರದು.

**ಈ ಸಿದ್ಧಾಂತ ಪ್ರಮುಖ ಲಕ್ಷಣಗಳ ಸಾರಾಂಶವನ್ನು ಕೆಳಕಂಡಂತೆ ತಿಳಿಸಬಹುದು.**

ಅ. ಮಾಧ್ಯಮವು ಕಾರ್ಮಿಕ ವರ್ಗದ ಆಶೋತ್ತರಗಳಿಗೆ ಸ್ಪಂದಿಸಬೇಕು ಮತ್ತು ಅದರ ನಿಯಂತ್ರಣದಲ್ಲಿ ಇರಬೇಕು.

ಆ. ಅವುಗಳು ಖಾಸಗಿ ಒಡೆತನದಲ್ಲಿ ಇರಬಾರದು.

ಇ. ಅಪಿತವಾದ ಮಟ್ಟಕ್ಕೆ ಸಾಮಾಜಿಕೀಕರಣ ಮಾಡುವುದು, ಶಿಕ್ಷಣ, ಮಾಹಿತಿ, ಪ್ರೋತ್ಸಾಹನ ಮತ್ತು ಸಜ್ಜುಗೊಳಿಸುವುದು, ಇವುಗಳ ಮೂಲಕ ಸಮಾಜದ ಪರವಾಗಿ ಸಕಾರಾತ್ಮಕ ಕಾರ್ಯಗಳನ್ನು ಎಸಗುವಲ್ಲಿ ನೆರವಾಗಬೇಕು.

ಈ. ಅವುಗಳ ಒಟ್ಟಾರೆ ಕಾರ್ಯಗಳು ಹಾಗು ಸಮಾಜದ ಮಿತಿಯಲ್ಲಿ, ಮಾಧ್ಯಮಗಳು, ತಮ್ಮ ಶ್ರೋತೃವರ್ಗದ ಆಶೋತ್ತರಗಳು ಮತ್ತು ಅವಶ್ಯಕತೆಗಳಿಗೆ ಸ್ಪಂದಿಸಬೇಕು.

ಉ. ಸೆನ್ಸಾರ್‌ಶಿಪ್ ಅನ್ನು ಬಳಸಿ ಅಥವಾ ಇತರ ಕಾನೂನು ಕ್ರಮಗಳನ್ನು ತೆಗೆದುಕೊಂಡು, ಸಮಾಜ ವಿರೋಧಿ ಪ್ರಕಾಶಗಳನ್ನು ತಡೆಯುವ ಮತ್ತು ಶಿಕ್ಷಿಸುವ ಹಕ್ಕು ಸಮಾಜಕ್ಕಿದೆ.

ಊ. ಮಾರ್ಕ್ಸ್ ಮತ್ತು ಲೆನಿನ್ ಅವರ ತತ್ವಗಳ ಅನುಸಾರವಾಗಿ ಮಾಧ್ಯಮಗಳು ಸಮಾಜ ಮತ್ತು ವಿಶ್ವದ ಸಂಪೂರ್ಣ ಹಾಗು ವಾಸ್ತವಿಕ ನೋಟವನ್ನು ನೀಡಬೇಕು.

ಋ. ಪತ್ರಕರ್ತರು ಜವಾಬ್ದಾರಿಯುತವಾದ ವೃತ್ತಿಯನ್ನು ಹೊಂದಿದ್ದು, ಅವರ ಗುರಿಗಳು ಮತ್ತು ಆದರ್ಶಗಳ ಸಮಾಜದ ಹಿತಕ್ಕೆ ಮೇಳೈಸುವಂತಿರಬೇಕು.

ಎ. ಸ್ವದೇಶದ ಮತ್ತು ಇತರ ದೇಶಗಳ ಪ್ರಗತಿಪರ ಚಳುವಳಿಗಳಿಗೆ ಮಾಧ್ಯಮವು ನೆರವು ನೀಡಬೇಕು.

ಸೀಬರ್ಟ್ ಮತ್ತು ಇತರರಿಂದ 1956ರಲ್ಲಿ ಹೊರತರಲಾದ ನಾಲ್ಕು 'ಪತ್ರಿಕೋದ್ಯಮ ಸಿದ್ಧಾಂತ'ಗಳಿಗೆ ಹೆಚ್ಚುವರಿಯಾಗಿ ಡೆನಿಸ್ ಮ್ಯಾಕ್ ಕ್ವೇಲ್ ಅವರು ಇನ್ನೂ ಎರಡು ಹೊಸ ಸಿದ್ಧಾಂತಗಳನ್ನು ಹೊರತಂದಿದ್ದಾರೆ. ಅವುಗಳೆಂದರೆ, ಅಭಿವೃದ್ಧಿ ಮಾಧ್ಯಮ ಸಿದ್ಧಾಂತ ಮತ್ತು ಪ್ರಜಾಸತ್ತಾತ್ಮಕ ಸಹಭಾಗಿತ್ವ ಸಿದ್ಧಾಂತಗಳು.

## 2.6.5 ಅಭಿವೃದ್ಧಿ ಮಾಧ್ಯಮ ಸಿದ್ಧಾಂತ

ಸಾಮಾನ್ಯವಾಗಿ ಅಭಿವೃದ್ಧಿಶೀಲ ರಾಷ್ಟ್ರಗಳಿಗೆ ಈ ಸಿದ್ಧಾಂತವು ಅನ್ವಯವಾಗುವುದಾದರೂ, ಅಂತಹ ಎಲ್ಲಾ ರಾಷ್ಟ್ರಗಳಿಗೂ ಒಂದೇ ರೀತಿಯಾಗಿ ಈ ಸಿದ್ಧಾಂತವನ್ನು ಅನ್ವಯಿಸಲಾಗುವುದಿಲ್ಲ. ಏಕೆಂದರೆ, ಅಭಿವೃದ್ಧಿಯ ಪರಿಕಲ್ಪನೆಯೇ ಜನರಿಂದ ಜನಕ್ಕೆ (ದೇಶದಿಂದ ದೇಶಕ್ಕೆ) ಬೇರೆಯಾಗುತ್ತದೆ. ಈ ಸಿದ್ಧಾಂತದ ಪ್ರಮುಖ ಗುಣಲಕ್ಷಣಗಳನ್ನು ಮ್ಯಾಕ್ ಕ್ವೇಲ್ ಈ ಕೆಳಕಂಡಂತೆ ತಿಳಿಸಿದ್ದಾರೆ.

ಅ. ರಾಷ್ಟ್ರೀಯವಾಗಿ ರೂಪಿತವಾಗಿರುವ ಕಾರ್ಯನೀತಿಗಳಿಗೆ ಅನುರೂಪವಾಗಿ ಸಕಾರಾತ್ಮಕವಾಗಿ ಅಭಿವೃದ್ಧಿಯ ಕೆಲಸಗಳನ್ನು ಮಾಧ್ಯಮಗಳು ಒಪ್ಪಿಕೊಳ್ಳಬೇಕು ಮತ್ತು ನಿರ್ವಹಿಸಬೇಕು.

ಆ. ಆರ್ಥಿಕ ಆದ್ಯತೆಗಳು ಮತ್ತು ಸಾಮಾಜಿಕ ಅಭಿವೃದ್ಧಿಯ ಅವಶ್ಯಕತೆಗಳು, ಇವಕ್ಕೆ ಪೂರಕವಾಗಿ ಪತ್ರಿಕಾ ಸ್ವಾತಂತ್ರ್ಯವು ನಿರ್ಬಂಧಕ್ಕೆ ಒಳಪಡಲು ತಯಾರಿರಬೇಕು.

ಇ. ರಾಷ್ಟ್ರೀಯ ಸಂಸ್ಕೃತಿ ಮತ್ತು ಭಾಷೆಗೆ ಮಾಧ್ಯಮವು ಆದ್ಯತೆ ನೀಡಬೇಕು.

ಈ. ಭೌಗೋಳಿಕವಾಗಿ, ಸಾಂಸ್ಕೃತಿಕವಾಗಿ ಅಥವಾ ರಾಜಕೀಯವಾಗಿ ಹತ್ತಿರವಾಗಿರುವ ಇತರ ಅಭಿವೃದ್ಧಿಶೀಲ ದೇಶಗಳೊಂದಿಗಿನ ಸಂಪರ್ಕ ಕೊಂಡಿಗಳಿಗೆ ವಾರ್ತೆ ಮತ್ತು ಮಾಹಿತಿಗಳಲ್ಲಿ ಆದ್ಯತೆಯನ್ನು ಅವು ನೀಡಬೇಕು.

ಉ. ಮಾಹಿತಿ ಕಲೆ ಹಾಕುವ ಮತ್ತು ಪ್ರಸರಣೆ ಮಾಡುವ ತಮ್ಮ ಕೆಲಸದಲ್ಲಿ ಪತ್ರಕರ್ತರು ಮತ್ತು ಇತರ ಮಾಧ್ಯಮ ಕರ್ಮಚಾರಿಗಳಿಗೆ ಜವಾಬ್ದಾರಿಯೂ ಉಂಟು, ಸ್ವಾತಂತ್ರ್ಯವೂ ಉಂಟು.

ಊ. ಅಭಿವೃದ್ಧಿ ಉದ್ದೇಶಗಳ ಹಿತಾಸಕ್ತಿಯಲ್ಲಿ, ಮಾಧ್ಯಮ ಕಾರ್ಯಾಚರಣೆಯಲ್ಲಿ ಹಸ್ತಕ್ಷೇಪ ಮಾಡುವ ಅಥವಾ ನಿರ್ಬಂಧಿಸುವ ಹಕ್ಕು ಸರ್ಕಾರಕ್ಕಿದೆ ಮತ್ತು ಇದಕ್ಕಾಗಿ ಸೆನ್ಸಾರ್‌ಶಿಪ್, ಸಬ್ಸಿಡಿ ಮತ್ತು ನೇರ ನಿಯಂತ್ರಣಗಳನ್ನು ಸಮರ್ಥನೆ ಮಾಡಬಹುದು.

## 2.6.6 ಪ್ರಜಾಸತ್ತಾತ್ಮಕ - ಸಹಭಾಗಿತ್ವ ಸಿದ್ಧಾಂತ

ಇದು ಇತ್ತೀಚಿಗಿನ ಸಿದ್ಧಾಂತ. "ಇತರ ಸಿದ್ಧಾಂತಗಳ ವಿರುದ್ಧ ಹಾಗೂ ನಿಜವಾದ ಅನುಭವಗಳ ಪ್ರತಿಕ್ರಿಯೆಯಾಗಿ ಮತ್ತು ಹೊಸ ರೀತಿಯ ಮಾಧ್ಯಮ ಸಂಸ್ಥೆಗಳೆಡೆಗಿನ ಸಕಾರಾತ್ಮಕ ನಡೆಯಾಗಿ ಇದು ಮೂಡಿ ಬಂದಿದೆ" ಎಂದು ಮ್ಯಾಕ್‌ಕ್ವೇಲ್ ಅಭಿಪ್ರಾಯಪಡುತ್ತಾರೆ.

ಅಭಿವೃದ್ಧಿ ಹೊಂದಿರುವಂತಹ ಸ್ವತಂತ್ರ, ಮುಕ್ತ ಸಮಾಜಗಳಲ್ಲಿ ಈ ಸಿದ್ಧಾಂತವು ಮುಖ್ಯವಾಗಿ ನೆಲೆಯನ್ನು ಪಡೆದಿದೆ. ಅದರ ಕೆಲವು ಘಟಕಗಳು, ಅದರಲ್ಲೂ ಮುಖ್ಯವಾಗಿ ಲಂಬದ ಬದಲಿಗೆ ಸಮತಲೀಯವಾಗಿರುವ, ಮೇಲಿನಿಂದ ಕೆಳಕ್ಕೆ ಹರಿವ ಸಂವಹನಕ್ಕೆ ಅದು ನೀಡುವ ಪ್ರಾಮುಖ್ಯತೆಯಲ್ಲಿ ಇದು ಅಭಿವೃದ್ಧಿ ಮಾಧ್ಯಮ ಸಿದ್ಧಾಂತಕ್ಕೆ ಹತ್ತಿರವಾಗಿ ಸೇರುತ್ತದೆ. ಒಂದು ನಿಜವಾದ ಪ್ರಜಾಸತ್ತಾತ್ಮಕ ಸಮಾಜದಲ್ಲಿ, ಸಂವಹನದ ಸ್ವಲ್ಪ ಪ್ರಮಾಣ ಲಂಬ ರೀತಿಯಿಂದ ಮೇಲಿನಿಂದ ಕೆಳಮುಖವಾಗಿ ಹರಿದರೂ, ಜನಗಳಲ್ಲಿ ಸಮತಲೀಯವಾಗಿ ಸಾಗಬೇಕು. ಜನಗಳು ಸಹಭಾಗಿಗಳಾಗಿ, ಬೆಂಬಲ ನೀಡಿದಾಗ ಮಾತ್ರ ಪ್ರಜಾಸತ್ತೆಯು ಗೆಲ್ಲಬಹುದೇ ಹೊರತು, ಉದ್ಯೋಗಸ್ಥರು ಮತ್ತು ಅವರ ಮೇಲಧಿಕಾರಿಗಳು, ಆಳ್ವಿಕೆ ನಡೆಸುವವರಿಂದ ನಿರ್ದೇಶಿತವಾದಾಗ ಅಲ್ಲ. ಈ ಸಿದ್ಧಾಂತವು ಮಾಧ್ಯಮ ಸಂಸ್ಥೆಗಳ ಕೇಂದ್ರೀಕರಣ ಮತ್ತು ಅಧಿಕಾರಶಾಹಿಯ ವಿರುದ್ಧವಾಗಿ ನಿಲ್ಲುತ್ತದೆ. ಸಾಮಾಜಿಕ ಜವಾಬ್ದಾರಿಯನ್ನು ಇದು ಬೆಂಬಲಿಸುತ್ತದೆ. ಬಹಳ ಹೆಚ್ಚಿನ ವ್ಯಕ್ತಿಗಾರಿಕೆ ಮತ್ತು ಗಣ್ಯಪ್ರಜ್ಞೆಗಳಿಂದಾಗಿ, ಸಾರ್ವಜನಿಕ ಪ್ರಸಾರ ವ್ಯವಸ್ಥೆಗಳ ಬಗೆಗಿನ ನಿರೀಕ್ಷೆಗಳು ಹುಸಿಯಾಗಿವೆ.

'ಪ್ರಜಾಸತ್ತಾತ್ಮಕ - ಸಹಭಾಗಿತ್ವ' ಎಂಬ ಪದವೂ ವ್ಯವಸ್ಥಿತವಾದ ರಾಜಕೀಯ ಪಕ್ಷಗಳೆಡೆಗಿನ ನಿರಾಶೆಯನ್ನು ಅಭಿವ್ಯಕ್ತಗೊಳಿಸುತ್ತದೆ. ಕೇವಲ ರಾಜಕೀಯ ಅಥವಾ ತಾತ್ವಿಕ ಸಿದ್ಧಾಂತಗಳನ್ನು ಆಧರಿಸದೆ, ಪ್ರತಿಯೊಂದು ಸನ್ನಿವೇಶದಲ್ಲಿ ಸಮಾಜಕ್ಕಿರುವ ಅವಶ್ಯಕತೆಯನ್ನರಿತು ಕಾರ್ಯವೆಸಗುವ 'ಪಕ್ಷ-ರಹಿತ'ವಾದ ಪಕ್ಷದ ದಿಕ್ಕಿನಲ್ಲಿ ಇದು ಕೈತೋರುತ್ತಿದೆ.

**ಈ ಸಿದ್ಧಾಂತದ ಪ್ರಮುಖ ಲಕ್ಷಣಗಳನ್ನು ಮ್ಯಾಕ್‌ಕ್ವೇಲ್ ಅವರು ಕೆಳಕಂಡಂತೆ ಸಂಗ್ರಹಿಸಿ ಹೇಳಿದ್ದಾರೆ.**

ಅ. ಪ್ರತಿಯೊಬ್ಬ ಪೌರನಿಗೆ ಮತ್ತು ಅಲ್ಪಸಂಖ್ಯಾತ ಪಂಗಡಗಳಿಗೆ ಅವರವರ ಅವಶ್ಯಕತೆಯ ನಿರ್ಧರಣದ ಪ್ರಕಾರವಾಗಿ ಮಾಧ್ಯಮಗಳನ್ನು ಲಭ್ಯ ಮಾಡಿಕೊಳ್ಳುವ ಮತ್ತು ಮಾಧ್ಯಮಗಳಿಂದ ಸೇವೆ ಪಡೆದುಕೊಳ್ಳುವ ಹಕ್ಕುಂಟು.

ಅ. ಮಾಧ್ಯಮ ಸಂಸ್ಥೆಗಳು ಮತ್ತು ವಿಷಯಗಳು, ಕೇಂದ್ರೀಕೃತ ರಾಜಕೀಯ ಅಥವಾ ಸರ್ಕಾರದ ಅಧಿಕಾರಶಾಹಿಯ ನಿಯಂತ್ರಣಕ್ಕೆ ಒಳಪಡಬಾರದು.

ಇ. ಮಾಧ್ಯಮಗಳು ಪ್ರಾಥಮಿಕವಾಗಿ ಅವುಗಳ ಶ್ರೋತೃವರ್ಗಕ್ಕೆಂದೇ ಇರಬೇಕೆ ಹೊರತು ಮಾಧ್ಯಮ ಸಂಸ್ಥೆಗಳು, ವೃತ್ತಿಪರರು ಅಥವಾ ಕಕ್ಷಿದಾರರು / ಸಹಭಾಗಿಗಳಿಗಲ್ಲ.

ಈ. ಸಮೂಹ ಪಂಗಡಗಳು, ಸಂಸ್ಥೆಗಳು ಮತ್ತು ಸ್ಥಳೀಯ ಸಮುದಾಯಗಳು ತಮ್ಮದೇ ಆದ ಮಾಧ್ಯಮಗಳನ್ನು ಹೊಂದಿರಬೇಕು.

ಉ. ದೊಡ್ಡ ಪ್ರಮಾಣದ, ಏಕಮುಖಿಯಾದ, ವೃತ್ತಿಪರಗೊಂಡ ಮಾಧ್ಯಮಕ್ಕಿಂತ ಸಣ್ಣಪ್ರಮಾಣದ, ಪಾರಸ್ಪರಿಕತೆ ಹೊಂದಿರುವ, ಸಹಭಾಗಿತ್ವ ರೀತಿಯ ಮಾಧ್ಯಮಗಳು ಉತ್ತಮ.

ಊ. ಸಮೂಹ ಮಾಧ್ಯಮಗಳಿಗೆ ಸಂಬಂಧಿಸಿರುವಂತಹ ಕೆಲವೊಂದು ಸಾಮಾಜಿಕ ಅವಶ್ಯಕತೆಗಳು ಪ್ರತಿಯೊಬ್ಬ ಉಪಭೋಕ್ತನವೈಯಕ್ತಿಕ ಬೇಡಿಕೆಗಳಿಂದಾಗಲೀ ಅಥವಾ ರಾಷ್ಟ್ರ ಮತ್ತು ಅದರ ಇತರ ಸಂಸ್ಥೆಗಳಿಂದಾಗಲೀ ಸಾಕಷ್ಟು ಪ್ರಮಾಣದಲ್ಲಿ ಅಭಿವ್ಯಕ್ತಗೊಳ್ಳುವುದಿಲ್ಲ.

ಕೇವಲ ವೃತ್ತಿನಿರತರಿಗಷ್ಟೇ ಬಿಟ್ಟು ಬಿಡಲಾರದಷ್ಟು ಸಂಪರ್ಕ, ಸಂವಹನ ಪ್ರಮುಖವಾದುದು.

## 2.7 ನಿಮ್ಮ ಪ್ರಗತಿ ಪರಿಶೀಲನೆ

**ಸೂಚನೆ: ನಿಮ್ಮ ಉತ್ತರಗಳನ್ನು ಈ ಘಟಕದಲ್ಲಿ ನೀಡಲಾಗಿರುವ ಮಾಹಿತಿಯೊಂದಿಗೆ ಹೋಲಿಸಿ.**

1. ಮಾಧ್ಯಮ ನಿಯಂತ್ರಣದ ವಿಧಾನಗಳನ್ನು ವಿವರಿಸಿ.

2. ಪತ್ರಿಕೆಯ ಸರ್ವಾಧಿಕಾರಿ ಸಿದ್ಧಾಂತವನ್ನು ಚರ್ಚಿಸಿ.

3. ಮುಕ್ತ ಪತ್ರಿಕೋದ್ಯಮ ಸಿದ್ಧಾಂತವನ್ನು ವಿವರಿಸಿ.

4. ಪತ್ರಿಕೆಯ 'ಸಾಮಾಜಿಕ ಜವಾಬ್ದಾರಿ'ಯ ಸಿದ್ಧಾಂತವನ್ನು ವಿಶದೀಕರಿಸಿ.

5. ಸೋವಿಯತ್ ಮಾಧ್ಯಮ ಸಿದ್ಧಾಂತವನ್ನು ವಿವರಿಸಿ.

6: ಅಭಿವೃದ್ಧಿ ಮಾಧ್ಯಮ ಸಿದ್ಧಾಂತವನ್ನು ವಿವರಿಸಿ.

7. ಪ್ರಜಾಸತ್ತಾತ್ಮಕ ಸಹಭಾಗಿತ್ವದ ಸಿದ್ಧಾಂತವನ್ನು ವಿವರಿಸಿ.

## 2.8 ಹೆಚ್ಚಿನ ಓದಿಗಾಗಿ


1. Bouma and Atkinson, A Handbook of Social Science Research, Oxford University Press - New York, 1995.

2. David Dooley, Social Research Methods, Prentice - Hall of India Pvt. Ltd.-New Delhi, 1995.



ಬರಹ: ತೇಜಸ್ವಿ ನವಿಲೂರ್ ಮತ್ತು ಬಿ.ಪಿ. ಸತ್ಯೇಂದ್ರ ರಾವ್

# ಘಟಕ 3 ಕಲಿಕೆಯ ಸಿದ್ಧಾಂತಗಳು

ರಚನೆ


3.0 ಉದ್ದೇಶಗಳು

3.1 ಪ್ರಸ್ತಾವನೆ

3.2 ಕಲಿಕೆಯ ಪರಿಭಾಷೆ

3.3 ಕಲಿಕೆಯ ವಿಧಾನಗಳು

3.4 ಗ್ರಹಿಕೆ

3.5 ಸ್ಮರಣೆ

3.6 ಕಲಿಕೆಯ ಪ್ರಕ್ರಿಯೆ

3.6.1 ಶಾಲೆಯಲ್ಲಿ

3.6.2 ಪ್ರಯೋಗಶಾಲೆಯಲ್ಲಿ

3.7 ಕಲಿಯುವ ಪ್ರತಿಯೊಬ್ಬನೂ ತಿಳಿಯಬೇಕಾದದ್ದು

3.8 ಕಲಿಕೆಯ ಸಿದ್ಧಾಂತಗಳು

3.9 ಕಲಿಕೆಗಳ ಅರ್ಥವಿವರಣೆಗಳು

3.10 ಸಾರಾಂಶ

3.11 ನಿಮ್ಮ ಪ್ರಗತಿ ಪರಿಶೀಲನೆ

## 3.0 ಉದ್ದೇಶಗಳು

ಸಂವಹನ ಪ್ರಕ್ರಿಯೆಯ ಪ್ರಾಥಮಿಕ ಕಾರ್ಯವೆಂದರೆ ಬದಲಾವಣೆಗಳನ್ನು ತರುವುದು. ಶ್ರೋತೃವರ್ಗದಲ್ಲಿ ಬದಲಾವಣೆಯನ್ನು ತರಲು ಗ್ರಾಹಕನು ಅರ್ಥಮಾಡಿಕೊಳ್ಳಬೇಕಾದ ಸಂದೇಶ ಮತ್ತು ಸಂದೇಶದ ಗ್ರಹಿಕೆಗೆ ಆತನಲ್ಲಿ ಆಗಬೇಕಾದ ಬದಲಾವಣೆಗಳನ್ನು ಸಂವಾಹಕನು ಅರ್ಥಮಾಡಿಕೊಳ್ಳಬೇಕು. ಇದು ಕಲಿಕೆಯ ಪ್ರಕ್ರಿಯೆಯ ಮೂಲಕ ಆಗುತ್ತದೆ. ಈ ಬಗ್ಗೆ ಹೆಚ್ಚಿನ ಮಾಹಿತಿಯನ್ನು ತಿಳಿಯಲು ಅನುವಾಗುವಂತೆ ಕೆಳಕಂಡ ವಿಷಯಗಳಿಗೆ ನಿಮ್ಮನ್ನು ಈ ಘಟಕವು ಪರಿಚಯಿಸಲಿದೆ.

* ಕಲಿಕೆಯ ಒಂದು ಕಾರ್ಯಾತ್ಮಕ ಪರಿಭಾಷೆ ಮತ್ತು ಸಂವಹನಕ್ಕೆ ಅನ್ವಯವಾಗುವಂತಹ ಕಲಿಕೆಯ ಕೆಲವೊಂದು ಸಿದ್ಧಾಂತಗಳು;

* ಕಲಿಕೆಯ ಪ್ರಕ್ರಿಯೆ;

* ಕಲಿಕೆ ಮತ್ತು ಸಂವಹನ - ಈ ಎರಡೂ ಪ್ರಕ್ರಿಯೆಗಳ ತೋಲನೆ, ಮತ್ತು

* ಗ್ರಹಿಕೆಯ ಪ್ರಕ್ರಿಯೆ ಹಾಗು ಗ್ರಹಿಕೆ ಮತ್ತು ಸಂವಹನಗಳ ನಡುವಿನ ಸಾದೃಶ್ಯ.

## 3.1 ಪ್ರಸ್ತಾವನೆ

**ಕಲಿಕೆ ಎಂದರೇನು?**

ಈ ಪ್ರಶ್ನೆಗೆ ಉತ್ತರಿಸುವ ಮುನ್ನ, ಕಲಿಕೆಯು ಶಿಕ್ಷಣ ಕ್ಷೇತ್ರಕ್ಕೆ ಸಂಬಂಧಿಸಿದೆಯೆಂದೂ, ಸಂವಹನ ಪರಿಣತರಿಗಿಂತ ಹೆಚ್ಚಾಗಿ ಶೈಕ್ಷಣಿಕ ಮನಃಶಾಸ್ತ್ರಜ್ಞರಿಂದಲೇ ಹೆಚ್ಚಾಗಿ ಅರ್ಥೈಸಲ್ಪಟ್ಟಿರುವುದೆಂದೂ ನಾವು ಗಮನಿಸಿಕೊಳ್ಳಬೇಕು. ಸಂವಹನ ಸಿದ್ಧಾಂತ, ಸಂಶೋಧನೆ ಮತ್ತು ಅನ್ವಯಿಕೆಗಳ ನಡುವಿನ ಅಂತಃಸಂಬಂಧದ ಭೂಮಿಕೆಯಲ್ಲಿ ಇದನ್ನು ಇಲ್ಲಿ ಪರಿಶೀಲಿಸಲಾಗುತ್ತಿದೆ.

ವಾಕ್ ಸಂವಹನ, ಅದರಲ್ಲೂ ಜನಪ್ರಿಯ ಮಾತಿನಲ್ಲಿ ಬಳಸುವುದಕ್ಕಿಂತ ಹೆಚ್ಚಿನ ವಿಶಾಲಾರ್ಥದಲ್ಲಿ ಮನಃಶಾಸ್ತ್ರಜ್ಞರು 'ಕಲಿಕೆ'ಯನ್ನು ಬಳಸುತ್ತಾರೆ. ಮನಃಶಾಸ್ತ್ರದ ಬಳಕೆಯಲ್ಲಿ, ಯಾವುದು ಕಲಿಯಲ್ಪಟ್ಟಿದೆಯೋ ಅದು 'ಸರಿ' ಅಥವಾ ಹೊಂದುವಂತಹುದು ಆಗಿಲ್ಲದಿರಬಹುದು. ಏಕೆಂದರೆ, ನಾವು ಕೆಟ್ಟ ಮತ್ತು ಒಳ್ಳೆಯ ಹವ್ಯಾಸಗಳೆರಡನ್ನು ಕಲಿಯುತ್ತೇವೆ. ಕಲಿಯುಕೆಯು ಯಾವಾಗಲೂ ಪ್ರಜ್ಞಾಪೂರ್ವಕವಾಗಿ ಅಥವಾ ಉದ್ದೇಶಪೂರ್ವಕವಾಗಿಯೇ ಆಗಬೇಕೆಂದಿಲ್ಲ. ನಾವು ತಿಳುವಳಿಕೆಯಿಲ್ಲದೆ, ಅಪ್ರಜ್ಞಾಪೂರ್ವಕವಾಗಿ ಮಾಡಿರಬಹುದಾದ ತಪ್ಪುಗಳ ಅರಿವಿನ ಮೂಲಕವಾಗಿಯೂ ಇದು ಆಗಬಹುದು. ಯಾವುದೇ ತಿಳುವಳಿಕೆಯ ಕ್ರಿಯೆಗಳನ್ನು ಇದು ಒಳಗೊಳ್ಳಬೇಕಿಲ್ಲ. ಕಲಿಕೆಯ ಫಲಿತಾಂಶಗಳನ್ನು ಹಲವು ವಿಧದ ಪ್ರತಿಕ್ರಿಯೆಗಳಲ್ಲಿ ವಿವೇಚನೆ ಮಾಡಬಹುದು. ಚಾಲನೆ ಮಾಡುವುದು, ಆಪ್ತ ಸ್ನೇಹಿತನೊಂದಿಗೆ ಪ್ರೇಕ್ಷಣೀಯ ಸ್ಥಳಕ್ಕೆ ಕೈಗೊಂಡ ಸುಖಪ್ರವಾಸವನ್ನು ಸ್ಮರಿಸಿಕೊಳ್ಳುವುದು, ರಾಜಕೀಯ ಸಿದ್ಧಾಂತವೊಂದನ್ನು ನಂಬುವುದು ಅಥವಾ ಶಿಸ್ತಿನ ಒಬ್ಬ ಶಿಕ್ಷಕ ಅಥವಾ ಮೇಲಧಿಕಾರಿಯನ್ನು ಇಷ್ಟಪಡದೆ ಇರುವುದು.

ಹಾಗಾದರೆ, ಕಲಿಕೆ ಎಂದರೇನು? 'ಕಲಿಕೆ' ಎಂಬ ಪದಕ್ಕೆ ಶಬ್ದಕೋಶಗಳು ನೀಡುವ ಅರ್ಥಗಳೆಂದರೆ, ಜ್ಞಾನವನ್ನು ಸಂಪಾದನೆ ಮಾಡುವುದು, ಅನುಭವ ಅಥವಾ ಅಧ್ಯಯನದ ಮೂಲಕವಾಗಿ ಯಾವುದಾದರೂ ವಿಷಯವನ್ನು ಕುರಿತಂತೆ ವ್ಯಾಪಕವಾದ ಗ್ರಹಿಕೆ ಅಥವಾ ನೈಪುಣ್ಯತೆ. ಮನದಟ್ಟು ಮಾಡಿಕೊಳ್ಳುವುದು ಮತ್ತು ತಿಳುವಳಿಕೆಯುಳ್ಳವರಾಗಿ ಆಗುವುದು. ಶೋಧ, ಜ್ಞಾನ, ಅರಿವು ಎಂಬ ಸಮಾನಾರ್ಥಕ ಪದಗಳನ್ನೂ 'ಕಲಿಕೆ'ಗೆ ನೀಡಲಾಗುತ್ತದೆ.

ಈ ಎಲ್ಲ ಅರ್ಥವಿವರಣೆಗಳು ಸಂವಹನದೊಂದಿಗೂ ಸಂಬಂಧ ಹೊಂದಿವೆ. ಮಾಹಿತಿಯನ್ನು ರವಾನೆ ಮಾಡಲು ಸಂವಹನ ಬೇಕೇಬೇಕು. ಸಂವಹನಕ್ಕಾದರೋ ಒಂದು ಸನ್ನಿವೇಶ, ವ್ಯಕ್ತಿ ಅಥವಾ ಸಂಗತಿಯ ತಿಳುವಳಿಕೆ ಅತ್ಯವಶ್ಯ. 'ಕಮ್ಯುನಿಕೇಷನ್' - ಸಂವಹನ ಎಂಬ ಪದವೇ ಹಂಚಿಕೊಳ್ಳುವುದು' ಎಂದು ಅರ್ಥಬರುವ 'ಕಮ್ಯುನಿಸ್' ಎಂಬ ಧಾತುವಿನಿಂದ ನಿಷ್ಪನ್ನವಾಗಿರುವುದರಿಂದ, ಕಲಿಕೆಯು ಜಡರೀತಿಯ ಮಾಹಿತಿಯನ್ನಷ್ಟೇ ಅಲ್ಲದೆ, ಹಂಚಿಕೊಳ್ಳುವುದನ್ನೂ ಒಳಗೊಳ್ಳುತ್ತದೆ.

ಕಲಿಕೆಯು ವ್ಯಕ್ತ್ಯಂತರ ಹಾಗು ಸಮೂಹ ಸಂವಹನವನ್ನು ಎಷ್ಟು ಒಳಗೊಳ್ಳುತ್ತದೋ, ಅಷ್ಟೇ ಪ್ರಮಾಣದಲ್ಲಿ ವ್ಯಕ್ತಿಯಲ್ಲಿ ಆಂತರಿಕವಾದ ಸಂವಹನವನ್ನೂ ಒಳಗೊಳ್ಳುತ್ತದೆ. 'ಆಂತರಿಕ' ಎಂದರೆ ಒಳಗೆ. ವ್ಯಕ್ತಿಯಲ್ಲಿ ಆಂತರಿಕ ಸಂವಹನವೆಂದರೆ, ವ್ಯಕ್ತಿಯೋರ್ವನ ದೇಹದೊಳಗೇ, ತನ್ನಲ್ಲಿಯೇ ಎಂದು ಅರ್ಥ ಬರುತ್ತದೆ. ನಮ್ಮ ಕಣ್ಣು, ಕಿವಿ, ಮೂಗು, ಚರ್ಮ, ಮತ್ತು ನಾಲಗೆಗಳ ಮೂಲಕ ನಾವು ಹೊರಗಿನ ಪ್ರಚೋದನೆಗಳನ್ನು ಪಡೆಯುತ್ತೇವೆ. ಅಂದರೆ, ದೃಷ್ಟಿ, ಶಬ್ದ, ಗಂಧ, ಸ್ಪರ್ಶ ಮತ್ತು ರಸರುಚಿಗಳ ಸಂವೇದನೆಯ ಮೂಲಕ ಕಲಿಯುತ್ತೇವೆ. ಆದರೆ, ಈ ಎಲ್ಲ ಸಂವೇದನೆಗಳೂ ದೇಹದ ಯಾವುದೇ ಒಂದು ಭಾಗದಿಂದ, ಸಂಪೂರ್ಣವಾಗಿ ದೇಹಕ್ಕೆ ರವಾನೆಗೊಳ್ಳುವುದಾದರೂ ಹೇಗೆ?

ಕಶೇರುಕ ಪ್ರಾಣಿಗಳು (ಮಾನವನೂ ಸೇರಿದಂತೆ) ಮೂಳೆಯ ಬೆನ್ನೆಲುಬನ್ನೂ ಮತ್ತು ತಲೆಬುರುಡೆಯನ್ನು ಹೊಂದಿದ್ದು ಇದರಲ್ಲಿ ನರಮಂಡಲದ ಕೇಂದ್ರಭಾಗವು ಸ್ಥಿತವಾಗಿರುತ್ತದೆ. ಈ ಮಂಡಲದ ಹೊರಭಾಗವು ದೇಹದ ಉಳಿದ ಎಲ್ಲೆಡೆಯಲ್ಲಿಯೂ ವ್ಯಾಪಿಸಿಕೊಂಡಿರುತ್ತದೆ. ಮಿದುಳು ಮತ್ತು ಬೆನ್ನುಹುರಿಗಳು, ತಲೆಬುರುಡೆಯ ಕೆಳಗೆ ಇರುವ ಒಂದು ಸಂದಿನ ಮೂಲಕ ಸೇರಿ ಒಂದಾಗಿವೆ. ನರಗಳ ಮೂಲಕವಾಗಿ, ಇವೆರಡೂ ದೇಹದ ಇತರ ಭಾಗಗಳೊಂದಿಗೆ ಸಂಪರ್ಕಿತವಾಗಿರುತ್ತವೆ. ಸಸ್ತನಿಗಳು (ಮಾನವರೂ ಸೇರಿದಂತೆ) 12 ಜೊತೆ ಕಪಾಲದ (Cranial) ನರಗಳನ್ನೂ, 30 ಜೊತೆ ಹೆನ್ನುಹುರಿಯ (Spinal) ನರಗಳನ್ನು ಹೊಂದಿರುತ್ತವೆ. ದೃಷ್ಟಿ ಮತ್ತು ಶ್ರವಣ, ಸಂವೇದನೆ ಮತ್ತು ರುಚಿ ಇವುಗಳು ಎರಡನೆಯ, ಏಳನೆಯ ಮತ್ತು ಎಂಟನೆಯ ಕಪಾಲ ನರಗಳ ಮೂಲಕ ಸಂಬಂಧಕವಾಗುತ್ತವೆ. ತಲೆ, ಕಣ್ಣು, ಮುಖ, ನಾಲಗೆ ಮತ್ತು ವಾಯುನಾಳ ಹಾಗು ಅಗಿಯುವುದು ಮತ್ತು ನುಂಗುವುದನ್ನು ಮಾಡುವ ಮಾಂಸಪಿಂಡಗಳ ಚಾಲಕ ಕಾರ್ಯಗಳನ್ನು ಕಪಾಲದ ನರಗಳು ಮಾಡುತ್ತವೆ.

ದೇಹದ ಒಂದು ಭಾಗದಿಂದ ಇತರ ಭಾಗಗಳಿಗೆ ಬಹಳ ವೇಗವಾಗಿ ಮಾಹಿತಿಯನ್ನು ರವಾನಿಸುವ / ಪಡೆಯುವ ನರಮಂಡಲದ ಘಟಕಗಳನ್ನು (ವಿಶೇಷತೆಯನ್ನು ಹೊಂದಿಲ್ಲದ ಅಥವಾ ಬಹಳ ದಕ್ಷವಾದ) ನರಕೋಶ (Neuron)ಗಳು ಎಂದು ಕರೆಯಲಾಗುತ್ತದೆ. ಪ್ರತಿಯೊಂದು ನರಕೋಶವೂ ಕೋಶ ಕಾಯ ಎಂದು ಕರೆಯಲ್ಪಡುವ ಕೋಶಕೇಂದ್ರವನ್ನು ಹೊಂದಿರುವ ಒಂದು ಕೇಂದ್ರ ಭಾಗವನ್ನು, ಮತ್ತು ಗ್ಯಾಂಗ್ಲಿಯಾ ಎಂದು ಕರೆಯಲ್ಪಡುವ ರಚನೆಗಳನ್ನು ಹೊಂದಿರುತ್ತದೆ. ಹೀಗಾಗಿ, ಮನುಷ್ಯ ಹಾಗೂ ಪ್ರಾಣಿಗಳ ದೇಹಗಳು ಸಂವಹನದ ಮಹತ್ ವ್ಯವಸ್ಥೆಗಳನ್ನು ಆಂತಿರಕವಾಗಿ ತಮ್ಮಲ್ಲೇ ಹೊಂದಿವೆ. ಮನೋವಿಜ್ಞಾನ ಎಂಬುದು ನಡಾವಳಿಯ ವಿಜ್ಞಾನ. ಮಾನವನ ನಡವಳಿಕೆಯು ಸಾಧ್ಯವಾಗಿರುವುದು, ದೇಹದ ಎಲ್ಲ ಭಾಗವನ್ನು ತಲುಪುವ ಸಂಕೀರ್ಣ ಸಂಪರ್ಕ ವ್ಯವಸ್ಥೆಯಾದ ನರಮಂಡಲದ ಕಾರ್ಯಾಚರಣೆಯಿಂದ.

ಹೀಗೆ, ಕಲಿಕೆಯು ಒಂದು ಬಹಳ ಸಂಕೀರ್ಣವಾದ ಸಂಪರ್ಕ ವ್ಯವಸ್ಥೆ. ನಮ್ಮ ದೇಹದ ಎಲ್ಲೆಡೆ ಇರುವ ಸಂವೇದನ ಗ್ರಾಹಿಗಳಿಂದ ಬಾಹ್ಯ ಪರಿಸರದ ಪ್ರಚೋದನೆಗಳು ಎಲೆಕ್ಟ್ರೋ-ಕೆಮಿಕಲ್ ರೀತಿಯ ಪ್ರೇರಣೆಯಾಗಿ ಪರಿವರ್ತನೆಗೊಳ್ಳುತ್ತವೆ. ಈ ಗ್ರಾಹಿಗಳು ಆಂತರಿಕವಾದ ಹಾಗು ಬಾಹ್ಯ ಸ್ಥಿತಿಗಳಾದ ಬೆಳಕು, ಶಬ್ದ, ಒತ್ತಡ, ಬೆಚ್ಚಗಿರುವಿಕೆ, ತಂಪಾಗಿರುವಿಕೆ ಮತ್ತು ರಾಸಾಯನಿಕ ಪ್ರಚೋದನೆಗಳಿಗೆ ಸಂವೇದಿಯಾಗಿರುತ್ತವೆ. ಒಳಬರುವ ಪ್ರೇರಣೆಗಳನ್ನು ಸಂಕೀರ್ಣವಾದ ಕೇಂದ್ರಗಳು ಒಗ್ಗೂಡಿಸಿ, ಸಂಸ್ಕರಿಸಿ, ಪ್ರೇರಣೆಗಳನ್ನು ಹೊರಹೋಗುವ ನರಗಳಿಗೆ ಕಳುಹಿಸುತ್ತವೆ.

## 3.2 ಕಲಿಕೆಯ ಪರಿಭಾಷೆ

ಅಭ್ಯಾಸದ ಪರಿಣಾಮಸ್ವರೂಪವಾಗಿ ಹೆಚ್ಚು ಕಡಿಮೆ ಖಾಯಂ ಆಗಿ ಉಳಿಯುವ ನಡವಳಿಕೆಯ ಬದಲಾವಣೆಯೇ ಕಲಿಕೆ ಎಂದು ಸಾಮಾನ್ಯವಾಗಿ ಅದರ ಅರ್ಥನಿರೂಪಣೆ ಮಾಡಲಾಗುತ್ತದೆ. ಸಂದೇಶಗಳನ್ನು ಪಡೆಯುವವರ ನಡಾವಳಿಗಳಲ್ಲಿ ಬದಲಾವಣೆಯನ್ನು ತರುವ ಪ್ರಕ್ರಿಯೆ ಇದು ಎಂದೂ ಇದನ್ನು ಗುರುತಿಸಲಾಗುತ್ತದೆ. ಸಂದೇಶಗಳನ್ನು ಪಡೆಯುವವರಲ್ಲಿ ಬದಲಾವಣೆಗಳನ್ನು ಮೂಡಿಸಲು ಅವಶ್ಯವಾದ ಶಕ್ತಿಯನ್ನು ಇದು ಸಂವಾಹಕರು ಮತ್ತು ಅದರ ಸಂದೇಶಗಳಿಗೆ ಅವಕಾಶ ಮಾಡುತ್ತದೆ. ಪ್ರಚೋದನೆ - ಪ್ರತಿಕ್ರಿಯೆಯ ಸಿದ್ಧಾಂತ ಮತ್ತು ಅದರ ಇತರ ಭೇದಗಳು ಹಾಗು ಬುಲೆಟ್ ಅಥವಾ ಹೈಪರ್‌ಡರ್ಮಿಕ್ ನೀಡಲ್ ಮಾದರಿಗಳು, ಸಂವಾಹಕನು ಯಾವ ರೀತಿಯಾಗಿ ಪ್ರಭಾವ ಬೀರಲು ಬಯಸುತ್ತಾನೋ ಅದೇ ರೀತಿಯಾಗಿ, ಸಂದೇಶಗಳನ್ನು ಪಡೆಯುವ ಗ್ರಾಹಕರು ಪ್ರಭಾವಿತರಾಗುತ್ತಾರೆ ಎಂದು ಸಾಧನೆ ಮಾಡುತ್ತದೆ. ಇದನ್ನೇ ಬೇರೆ ರೀತಿಯಾಗಿ ಹೇಳುವುದಾದರೆ, ಗ್ರಾಹಕರು ಏನಮ್ಮರು ಅಥವಾ ಸಂದೇಶ ರೂಪಿಸುವವರ ಆಸಕ್ತಿಗೆ ಅನುಗುಣವಾಗಿ ಬೇಕೆಂದ ರೀತಿಯಲ್ಲಿ ಅವರನ್ನು ಎರಕ ಹೊಯ್ಯುಕೊಳ್ಳಬಹುದು.

ಸಂವಹನದ ಪ್ರಭಾವ ಕುರಿತಂತೆ 1950 ಮತ್ತು 1960ರ ದಶಕದಲ್ಲಿ ಆರಂಭಿಸಲಾದ ಮತ್ತು 1970 ಹಾಗೂ 1980ರ ದಶಕದಲ್ಲಿ ಕೈಗೊಳ್ಳಲಾದ ಸಂಶೋಧನಾ ಯೋಜನೆಗಳೆಲ್ಲವೂ ಸಂವಹಿತನ ದೇಹ ವ್ಯವಸ್ಥೆಯೊಳಗೆ, ವಿಶೇಷವಾಗಿ ಮಸ್ತಿಷ್ಕದೊಳಗೆ ಹೊಸ ಪ್ರಚೋದನೆಗಳು ಹೊಕ್ಕಾಗ, ಆತ - ಅವುಗಳನ್ನು ನಮ್ರವಾಗಿ ಪಡೆದುಕೊಳ್ಳುತ್ತಾರೆ ಎಂಬ ಮೂಲನಂಬುಗೆಯನ್ನೇ ಆಧಾರ ಮಾಡಿಕೊಂಡಿದ್ದವು. ಯಾವುದೇ ಪ್ರಶ್ನೆ, ತಕರಾರು ಇಲ್ಲದಂತೆ ಸಂದೇಶಗಳಿಗೆ ಅನುಕೂಲಕರವಾದ ರೀತಿಯಲ್ಲಿ ಸಂವಹಿತ ಪ್ರತಿಸ್ಪಂದಿಸುತ್ತಾನೆ ಎಂಬ ಎಣಿಕೆ ಇವುಗಳದಾಗಿತ್ತು.

## 3.3 ಕಲಿಕೆಯ ವಿಧಾನಗಳು

### 3.3.1 ಸಹವರ್ತನೀಯ ಕಲಿಕೆ: ( Associative Learning )

ಸಹವರ್ತನೀಯ ಕಲಿಕೆಯು ಅತ್ಯಂತ ಸರಳವಾದ ಕಲಿಕೆಯಾಗಿದೆ. ಇವಾನ್ ಪೌಲೋವ್ (1849-1936) ನಾಯಿಗಳ ಮೇಲೆ ನಡೆಸಿದ ಪ್ರಯೋಗಗಳ ಮೂಲಕವಾಗಿ ರೂಢಿಸಲಾದ ಪ್ರತಿವರ್ತನೆಯನ್ನು ಪ್ರತ್ಯಕ್ಷವಾಗಿ ತೋರಿಸಿದ್ದಾನೆ. ಗಂಟೆ ಬಾರಿಸಿದಾಗಲೆಲ್ಲ ಊಟದ ತಟ್ಟೆ ನೀಡುವುದನ್ನು ಮತ್ತೆ ಮತ್ತೆ ಮಾಡುತ್ತಾ ಬಂದು, ನಂತರದಲ್ಲಿ, ಕೇವಲ ಗಂಟೆ ಬಾರಿಸಿದ ಮಾತ್ರಕ್ಕೆ ನಾಯಿಯು ಜೊಲ್ಲು ಸುರಿಸುತ್ತದೆ ಎಂಬುದನ್ನು ಋಜುವಾತು ಮಾಡಿದ್ದಾನೆ. ಹಾಗಾಗಿ, ಗಂಟೆಯ ಬಾರಿಸುವಿಕೆಯು ನಾಯಿಗೆ ಜೊಲ್ಲು ಸುರಿಸುವಂತೆ ಮಾಡುವ ಒಂದು ರೂಢಿಸಿದ ಪ್ರಚೋದನೆ ಆಯಿತೆಂದು ಆತ ದೃಢೀಕರಿಸಿದ. ಇಲ್ಲಿ ಮೊದಲ ಪ್ರಚೋದನೆಯಾದ ಆಹಾರವನ್ನು, ಗಂಟೆಯ ಸದ್ದಿನೊಂದಿಗೆ ಸಹಾನುವರ್ತಿಯಾಗಿ ಮಾಡಲಾಯಿತು. ನಂತರದಲ್ಲಿ, ಗಂಟೆಯೇ ಜೊಲ್ಲು ಸುರಿಸುವಿಕೆಗೆ ಪ್ರಚೋದನೆಯಾಗಿಬಿಟ್ಟಿತು.

### 3.3.2 ಬಹು ಪ್ರಚೋದನೆಗಳ ಕಲಿಕೆ: ( Multiple Response Learning )

ಮೇಲೆ ವಿವರಿಸಿರುವಂತಹ ಪರಿಕಮ್ಮ್ಯವನ್ನು ಒಗ್ಗಿಸುವ ಪ್ರಕ್ರಿಯೆಗಿಂತ ಬಹು ಪ್ರಚೋದನೆಗಳ ಕಲಿಕೆಯು ವಿಭಿನ್ನವಾದುದು. ಬೈಸಿಕಲ್ ಅನ್ನು ಹೊಡೆಯುವ / ಚಾಲನೆ ಮಾಡುವ ಅಥವಾ ಪಿಯಾನೋ ವಾದನ ಮಾಡುವಂತಹ (ಒಂದಕ್ಕಿಂತ ಹೆಚ್ಚು ಗುರುತಿಸಿದ ಕಾರ್ಯಗಳನ್ನು ಕಲಿಯುವ) ಸಂಕೀರ್ಣ ಸಂವೇದನೆ - ಚಾಲನೆಯ ಕೌಶಲ್ಯಗಳನ್ನು ಇದು ಒಳಗೊಳ್ಳುತ್ತದೆ. ಅಭ್ಯಾಸದ ಪ್ರಮಾಣ ಮತ್ತು ಕಾಲದ ಅಂತರ - ಈ ಎರಡೂ ಕೌಶಲ್ಯಗಳನ್ನು ಕಲಿಯುವಲ್ಲಿ ಬಹಳ ಮುಖ್ಯವಾದವು ಎಂಬುದನ್ನು ಪ್ರಯೋಗಗಳು ತೋರಿಸಿಕೊಟ್ಟಿವೆ.

## 3.4 ಗ್ರಹಿಕೆ ( Perception )

'ಗ್ರಹಿಕೆ'ಗೆ ಶಬ್ದಕೋಶವು ನೀಡುವ ಅರ್ಥವಿವರಣೆಗಳೆಂದರೆ: 'ವಿವೇಚನೆ', 'ಯಾವುದೇ ಪ್ರಜ್ಞೆಯ ಸಾಂದ್ರೀಕರಣವನ್ನು ಅರ್ಥಮಾಡಿಕೊಳ್ಳುವುದು' ಮತ್ತು 'ಸಂವೇದನೆಗಳನ್ನು ಸಂಯೋಜಿಸಿಕೊಂಡು ಒಂದು ವಸ್ತುವಾಗಿ ಗುರುತಿಸುವುದು'. ಪರಿಸರವೊಂದರಲ್ಲಿ ವಸ್ತುಗಳು ಮತ್ತು ಸಂಗತಿಗಳನ್ನು ಗ್ರಹಿಸುವ ಕ್ರಿಯೆಯು ಕೆಳಗಿನ ಅಂಶಗಳನ್ನು ಬಿಂಬಿಸುವ ಚಟುವಟಿಕೆಗಳನ್ನು ಆಧರಿಸಿದೆ:

ಅ) ಪ್ರಚೋದನೆಯ ಗುಣ, ಮತ್ತು

ಆ) ಅನುವಂಶೀಯತೆ ಮತ್ತು ಕಲಿಕೆಗಳು ಗ್ರಹಿಸುವವನಿಗೆ ನೀಡಿರುವಂತಹ ನರಕೇಂದ್ರ ವ್ಯವಸ್ಥೆಯ ಸ್ವರೂಪ.

ಪರಿಸರದಲ್ಲಿನ ಬದಲಾವಣೆ ಅಥವಾ ವಿಚ್ಛಿನ್ನತೆಗಳ ಮೇಲೆಯೇ ಎಲ್ಲ ಗ್ರಹಿಕೆಗಳೂ ಆಧಾರಿತವಾಗಿವೆ. ಉದಾಹರಣೆಗೆ, ಹಸಿರು ಪರದೆಯ ಮೇಲಿನ ಹಸಿರು ಮಾವಿನಕಾಯಿಯ ಚಿತ್ರವು ಗ್ರಹಿಕೆಗೆ ಬಾರದೆ ಇರಬಹುದು. ಆದರೆ, ಅದೇ ಪರದೆಯ ಮೇಲೆ ಇರುವ ಚಿನ್ನದ ಬಣ್ಣದ ಮಾವಿನಕಾಯಿ ಗ್ರಹಿಕೆಗೆ ಬರುತ್ತದೆ. ಅದೇ ರೀತಿಯಾಗಿ, ಜೀವನದಲ್ಲಿ ಸ್ಥಾನ / ನೆಲೆಯೊಂದಿಗೆ ಗ್ರಹಿಕೆಯೂ ಬದಲಾಗುತ್ತದೆ. ಮನುಷ್ಯನೊಬ್ಬ ಜೀವನದಲ್ಲಿ ಯಥಾಸ್ಥಿತಿ ಅಥವಾ ಯಥಾಸ್ಥಾನದಲ್ಲಿದ್ದರೆ, ಆತ ಅಥವಾ ಆಕೆಯ ಗ್ರಹಿಕೆಯು ಒಂದೇ ರೀತಿಯಾಗಿ ಇರುತ್ತದೆ. ಆದರೆ, ಸ್ಥಾನಮಾನ ಬದಲಾದಂತೆ, ಗ್ರಹಿಕೆಯೂ ವ್ಯತ್ಯಾಸಗೊಳ್ಳುತ್ತದೆ.

ಅದೇ ರೀತಿಯಾಗಿ, ಒಂದು ವಸ್ತುವನ್ನು ದೃಶ್ಯವೊಂದರ ಭಾಗವಾಗಿ ನೋಡಿ, ಅದನ್ನು ದೃಶ್ಯದ ಅವಶ್ಯಕ ಅಂಗವೆಂದು ಒಪ್ಪಿಕೊಂಡ ಮೇಲೆ, ಅದರ ಅಸ್ತಿತ್ವವನ್ನು ನಾವು ನಂಬುವಂತಾಗುತ್ತೇವೆ ಮತ್ತು ವಸ್ತುವು ವಾಸ್ತವವಾಗಿ ಅಲ್ಲಿ ಇಲ್ಲದಿರುವಾಗಲೂ ಸಹ ಅದನ್ನು ಗುರುತಿಸತೊಡಗುತ್ತೇವೆ. ಏಕೆಂದರೆ, ಅದನ್ನು ದೃಶ್ಯದ ಅವಿಭಾಜ್ಯ ಅಂಗವಾಗಿ ಅದನ್ನು ಒಪ್ಪಿಕೊಳ್ಳುವುದನ್ನು ನಾವು ಕಲಿತಿರುತ್ತೇವೆ. ಗ್ರಹಿಕೆಯು ಕಲಿಕೆಯಿಂದ ಬಹಳವಾಗಿ ಪ್ರಭಾವಿತವಾಗುತ್ತದೆ.

ಮೆಲ್ವಿನ್ ಡಿಫ್ಲೂರ್ 'ಸಮೂಹ ಸಂಪರ್ಕ ಸಿದ್ಧಾಂತ'ಗಳಲ್ಲಿ ಹೇಳುವಂತೆ,

'ಮಾನವನ ಕಲಿಕೆಯು ಒಂದು ಮುಖ್ಯವಾದ ಮನೋವೃತ್ತಿ ಅಥವಾ ಹವ್ಯಾಸಗಳ ಗಳಿಕೆ. ಹೀಗಾಗಿ ವ್ಯಕ್ತಿತ್ವದ ಸ್ವರೂಪದ, ಪ್ರಕೃತಿಯಂತೆ, ಗ್ರಹಿಕೆಯು ವ್ಯಕ್ತಿಯಿಂದ ವ್ಯಕ್ತಿಗೆ ಕ್ರಮಬದ್ಧವಾಗಿ ವ್ಯತ್ಯಾಸಗೊಳ್ಳುತ್ತದೆ'. ಯಾವುದೇ ಮಾಧ್ಯಮದ ಶ್ರೋತೃಗಣವು ಒಂದೇ ರೀತಿಯಾದ ಏಕಶಿಲಾ ಸ್ವರೂಪದಂತೆ ಇರುವುದಿಲ್ಲ ಎಂಬುದು ಇದರಿಂದ ಸಿದ್ಧವಾಗುತ್ತದೆ. ಶ್ರೋತೃ ಸದಸ್ಯರು ಕಾರ್ಯಕ್ರಮಗಳಿಗೆ ಒಂದೇ ರೀತಿಯಾಗಿ ಸೇರುವುದಿಲ್ಲ. ಹೀಗಾಗಿ, ವ್ಯಕ್ತಿಯೊಬ್ಬನ ಸಂವಹನ ನಡಾವಳಿಯಲ್ಲಿ ಆಯ್ಕೆಯನ್ವಯದ ಗಮನ ಮತ್ತು ಗ್ರಹಿಕೆಯ ತತ್ವವು ಮೂಲಭೂತ ತತ್ವವಾಗಿ ಕೆಲಸ ಮಾಡುತ್ತದೆ.

ಒಂದೇ ಸಂದೇಶಕ್ಕೆ ಬೇರೆ ಬೇರೆ ಮಂದಿ ಬೇರೆ ಬೇರೆ ರೀತಿಯ ಪ್ರತಿಕ್ರಿಯೆಯನ್ನು ನೀಡುತ್ತಾರೆ ಎಂಬುದನ್ನು ವಿಷದೀಕರಿಸಲು ಮತ್ತು ಸಮೂಹ ಸಂಪರ್ಕದ ವ್ಯಕ್ತಿಗತ ವ್ಯತ್ಯಾಸದ ಸಿದ್ಧಾಂತವನ್ನು ಪುಷ್ಟೀಕರಿಸಲು ಸಮೂಹ ಸಂವಹನದ ಎಸ್.ಆರ್. ಸಿದ್ಧಾಂತದಲ್ಲಿ ಈ ತತ್ವವನ್ನು ಸೇರಿಸಲಾಯಿತು. ಕಾರಣ ಮತ್ತು ಕಾರ್ಯದ ನಡುವೆ, ಎಸ್.ಆರ್. ಸಿದ್ಧಾಂತದಲ್ಲಿ ಅನುವಂಶಿಕತೆಗಿಂತ ಕಲಿಕೆಯ ಫಲಿತಾಂಶವೇ ಹಸ್ತಕ್ಷೇಪ ಮಾಡುತ್ತದೆ.

ಇಲ್ಲಿ ಗಮನಿಸಬೇಕಾದ ಮತ್ತೊಂದು ಅಂಶವೆಂದರೆ, ಗ್ರಹಿಸಲಾದ ಮಾಹಿತಿಯು ವ್ಯಕ್ತಿಯೋರ್ವನ ವಾಡಿಕೆಯ ಹಾಗು ಆಯಾ ಕ್ಷಣದ ಅವಶ್ಯಕತೆಗಳನ್ನು ಅವಲಂಬಿಸಿರುತ್ತದೆ.

## 3.5 ಸ್ಮರಣೆ

ಕಲಿಕೆಯ ಮೇಲೆ ಪ್ರಭಾವ ಬೀರುವ ಮುಖ್ಯವಾದ ಮತ್ತೊಂದು ಅಂಶವೆಂದರೆ ಸ್ಮರಣೆ. ಸ್ಮರಣೆಯ ಬಳಕೆಯು, ಕಲಿಕೆ ಮತ್ತು ಆಲೋಚನೆಯ ಪ್ರಕ್ರಿಯೆಗೆ ಬಹಳ ಮುಖ್ಯವಾದುದು. ಮನಶಾಸ್ತ್ರಜ್ಞರು ನೆನಪು ಮಾಡಿಕೊಳ್ಳುವುದರಲ್ಲಿ ನಾಲ್ಕು ರೀತಿಗಳನ್ನು ಗುರುತಿಸುತ್ತಾರೆ.

ಅ. **ಜ್ಞಾಪಿಸಿಕೊಳ್ಳುವುದು (Recollection):** ಪರಿಪೂರ್ಣವಾದ ಅಥವಾ ಆಂಶಿಕವಾದ ಜ್ಞಾಪನಗಳು (Cue) ಅಥವಾ ಸೂಚನೆಗಳು ಇದು ಒಳಗೊಳ್ಳುತ್ತದೆ.

ಆ. **ಹಿಂಗರೆಯುವುದು (Recall):** ಹಿಂದಿನ ಯಾವುದೇ ವಿಷಯವನ್ನು ಕ್ರಿಯಾತ್ಮಕವಾಗಿ ಮತ್ತು ನೆರವಿಲ್ಲದಂತೆ ನೆನಪಿಸಿಕೊಳ್ಳುವುದು.

ಇ. **ಗುರುತುಹಿಡಿಯುವುದು (Recognition):** ಈ ಹಿಂದೆ ಎದುರಿಸಿರುವಂತಹ ಪ್ರಚೋದನೆಗಳನ್ನು ಗುರುತಿಸುವ ಸಾಮರ್ಥ್ಯವನ್ನು ಇದು ಉಲ್ಲೇಖಿಸುತ್ತದೆ.

ಈ. **ಪುನರ್‌ಕಲಿಕೆ (Relearning):** ಸ್ಮರಣೆಯ ಪ್ರಭಾವಗಳನ್ನು ರುಜುವಾತುಪಡಿಸುವುದು; ಈಗಾಗಲೇ ಪರಿಚಯ ಇರುವ ವಿಷಯವನ್ನು ಎರಡನೆಯ ಬಾರಿ ಕಲಿಯುವುದು, ಪರಿಚಯವೇ ಇಲ್ಲದಿರುವ ವಿಷಯವನ್ನು ಕಲಿಯುವುದಕ್ಕಿಂತ ಎಷ್ಟೋ ಸಾರಿ ಸುಲಭವೆನ್ನಿಸುತ್ತದೆ.

ವಿಷಯವನ್ನು ಸ್ಮರಣೆಯಲ್ಲಿ ಹಿಡಿದಿಟ್ಟುಕೊಳ್ಳಲಾಗುವ ವಸ್ತುವಿನ ಪ್ರಮಾಣವನ್ನು ಇವುಗಳಿಂದ ವೃದ್ಧಿಗೊಳಿಸಬಹುದು.

ಅ. ಕಲಿಕೆಯ ಕಾಲದಲ್ಲಿ ಕಾಲ ಕಾಲಕ್ಕೆ ಪುನರಾವಲೋಕನವನ್ನು ಮಾಡುವ ಮೂಲಕ ಕ್ರಿಯಾತ್ಮಕ ಹಿಂಗರೆತವನ್ನು ಅಭ್ಯಾಸ ಮಾಡುವುದು, ಮತ್ತು

ಆ. ಪ್ರಭುತ್ವ ಪಡೆಯುವುದಕ್ಕಿಂತ ಹೆಚ್ಚಿನ ಮಟ್ಟಕ್ಕೆ ವಸ್ತುವನ್ನು ಬಹಳ ಹೆಚ್ಚಾಗಿ ಕಲಿಯುವುದು. ಉದಾಹರಣೆಗೆ, ಸ್ಮರಣೆಗಳು ಅಥವಾ aide- memoire (ಜ್ಞಾಪಕ ಮಾಡಿಕೊಳ್ಳಲು ಸಹಾಯ ಮಾಡುವ ವಸ್ತುಗಳು) ನೆರವು ನೀಡುವಂತಹವು. ಕೆಲವೊಮ್ಮೆ, ತಿರಸ್ಕಾರ, ನಿರ್ದಿಷ್ಟ ಘಟನೆ ಅಥವಾ ವ್ಯಕ್ತಿಯ ಸ್ಮರಣೆಯನ್ನು ಪ್ರಚೋದನೆ ಮಾಡಬಹುದು. ನಿರಂತರವಾದ, ಪ್ರಜ್ಞಾಪೂರ್ವಕವಾದ ಅಭ್ಯಾಸದಿಂದ ಸ್ಮರಣೆಯ ವರ್ಧನೆ ಮಾಡಬಹುದು. ಸ್ಮರಣೆಗಳು ಸಾಮಾನ್ಯವಾಗಿ ಗ್ರಹಿಕೆಗಳಿಗಿಂತ ಕಡಿಮೆ ಸ್ಪಷ್ಟವೂ ಮತ್ತು ವಿವರಣಾತ್ಮಕವೂ ಆಗಿರುತ್ತವೆ. ಪರಿಗಣನೆ ಮಾಡಬೇಕಾದ ಮತ್ತೊಂದು ಅಂಶವೆಂದರೆ, ಆಲೋಚನೆ ಮಾಡುವುದು. ಹೊರಪ್ರಪಂಚದ ಗುರಿಗಳು ಮತ್ತು ಘಟನೆಗಳಿಗೆ ನಿಲ್ಲುವ ಸಂಕೇತಗಳು ಮತ್ತು ಆಂತರಿಕವಾದ ಬಿಂಬಗಳ ಕೌಶಲ್ಯಪೂರ್ಣ ಬಳಕೆಗಳನ್ನು ಇದು ಒಳಗೊಳ್ಳುತ್ತದೆ.

ತಕ್ಷಣದ ಗ್ರಹಿಕೆಗಳಿಂದ ಹೊರ ಹೋಗಲು ಆಲೋಚನೆಗಳು ವ್ಯಕ್ತಿಯೊಬ್ಬನಿಗೆ ಸಾಧ್ಯಮಾಡುತ್ತವೆ. ಈಗ ಸದ್ಯಕ್ಕೆ ಇಲ್ಲದಿರುವ, ಆದರೆ ಸ್ಮರಿಸಿಕೊಂಡ ಅಥವಾ ಕಲ್ಪಿಸಿಕೊಡುವಂತಹ ಘಟನೆ / ಸಂಗತಿಗಳನ್ನು ಸೇರಿಸಿ, ಅವುಗಳ ನಡುವೆ ಸಂಬಂಧ ಕಲ್ಪಿಸುವ ಮೂಲಕ ಆಲೋಚನೆಗಳು ಇದನ್ನು ಸಾಧ್ಯಮಾಡುತ್ತವೆ.

ಆಲೋಚನೆಯಲ್ಲಿ ಬಳಸಲ್ಪಡುವ ಸಂಕೇತಗಳಿಗೆ, ಭಾಷೆಯು ಪ್ರಮುಖ ಆಕರವನ್ನು ಒದಗಿಸುತ್ತದೆ. ಸಮಾನ ಗುಣಗಳನ್ನು ಹೊಂದಿರುವ ವಸ್ತುಗಳು ಅಥವಾ ಘಟನೆಗಳನ್ನು ಅಮೂರ್ತ ಕಲ್ಪನೆಗಳನ್ನು ಬಿಂಬಿಸುವ ಭಾಷೆ ಅಥವಾ ಪದಗಳ ಸಹಾಯದಿಂದ ವಿವರಿಸಲಾಗುತ್ತದೆ. ಅಮೂರ್ತವಾದವುಗಳಿಗಿಂತ ಮೂರ್ತವಾದ ಕಲ್ಪನೆಗಳನ್ನು ವಿವರಿಸುವುದು ಸುಲಭ. ನಾವು ಆಕಾರವನ್ನು ಅನುಭವಕ್ಕೆ ತಂದುಕೊಳ್ಳಬಹುದಾದರೂ, ಸಂಖ್ಯೆಗಳನ್ನು ಎಣಿಸಬಹುದಾದರೂ ಅಥವಾ ಸ್ಪಷ್ಟವಾದ ರೀತಿಯಲ್ಲಿ ಬಣ್ಣವನ್ನು ಕಾಣಬಹುದಾದರೂ ಸಹ ಆಕಾರ, ಸಂಖ್ಯೆ, ಬಣ್ಣ ಇತ್ಯಾದಿಗಳನ್ನು ಅಮೂರ್ತವಾದ ರೀತಿಯಲ್ಲೇ ವಿಶದೀಕರಿಸಲಾಗುತ್ತದೆ.

## 3.6 ಕಲಿಕೆಯ ಪ್ರಕ್ರಿಯೆ

### 3.6.1 ಶಾಲೆಯಲ್ಲಿ

ಕಲಿಕೆಯೇ ಪ್ರಧಾನವಾಗಿರುವ ಒಂದು ಸ್ಥಳ - ಶಾಲೆ. ಒಂದು ಮಗು, ಸಂಕೀರ್ಣವಾದ ಕಲಿಕೆಯ ಸನ್ನಿವೇಶಗಳ ಗೊಂದಲ ಪ್ರಪಂಚವನ್ನು ಶಾಲೆಯಲ್ಲಿ ಎದುರಿಸುತ್ತದೆ. ತರಗತಿಯ ಸನ್ನಿವೇಶಗಳ ಹಲವಾರು ಅಂಶಗಳಿಂದ ವಿವಿಧ ರೀತಿಯಲ್ಲಿ ಪ್ರಭಾವಕ್ಕೊಳಗಾಗುತ್ತದೆ. ಸೂಚಿಸಲಾದ ಪಠ್ಯಕ್ಕಿಂತ ಸಾಕಷ್ಟು ಹೆಚ್ಚಿನದನ್ನು ಶಿಕ್ಷಕರಿಂದ ಕಲಿಯುತ್ತದೆ.

ಮಗುವಿನ ಕಲಿಕೆಗೆ ಪುಸ್ತಕಗಳು ಬಹಳ ಮುಖ್ಯವಾದ ಆಕರಗಳು. ಆದರೆ, ಆತನ ಜೊತೆಯಲ್ಲಿ ಇರುವ ವಿದ್ಯಾರ್ಥಿಗಳು, ಶಿಕ್ಷಕರು, ಶಾಲೆಯ ಕಟ್ಟಡ ಮತ್ತು ಆಡಳಿತಗಾರರು, ಮಗುವು ಪಾರಸ್ಪರಿಕವಾಗಿ ಸಂವಹಿಸುವ ಬೇರೆಯವರು, ಈ ಎಲ್ಲರೂ ಅದರ ಕಲಿಕೆಯ ಮೂಲಗಳೇ. ಅದು ಕಲಿಯುವ ಕೆಲವು ಪಾಠಗಳು ಪಠ್ಯದ್ದಾದರೆ, ಉಳಿದ ಕೆಲವು ಪಠ್ಯೇತರ. ಕೆಲವೊಂದು ಯುಕ್ತ, ಬೇರೆಯವು ಪ್ರಕಟಿತ ಮತ್ತು ನಾಟಕೀಯ. ಪ್ರಪಂಚದ ನೋಟಗಳೊಂದಿಗೆ ಹಲವು ಮನೋಧರ್ಮಗಳು, ಭಾವತೀವ್ರತೆಗಳು, ಸಾಮಾಜಿಕ ನಡಾವಳಿಗಳು ಮತ್ತು ಪ್ರತಿಕ್ರಿಯೆಗಳ ರೀತಿಗಳು ಹಾಗು ಮಾನವ ಸಂಬಂಧಗಳ ಪಾಠಗಳನ್ನು ಶಾಲೆಯಿಂದ ಕಲಿತುಕೊಳ್ಳಲಾಗುತ್ತದೆ. ಬಹಳ ಮುಖ್ಯವಾದ ವಿಷಯವೆಂದರೆ, ಮಗುವು ತನ್ನ ತಂದೆ ತಾಯಿಗಳು, ಓರಿಗೆಯವರು, ನೆರೆಹೊರೆಯವರು ಮತ್ತು ಸಮುದಾಯದ ಹಿರಿಯರೊಂದಿಗೆ ನಡೆದುಕೊಳ್ಳುವ ರೀತಿಯನ್ನು ಮನೆಯಲ್ಲಿ ಕಲಿಯುವುದರೊಂದಿಗೇ ಬೇರೆಯವರೊಂದಿಗೆ ಬೆರೆತುಕೊಂಡು ಹೋಗುವ ಕೌಶಲ್ಯಗಳು, ಓರಿಗೆಯವರೊಂದಿಗೆ, ಶಿಕ್ಷಕರೊಂದಿಗೆ ಮತ್ತು ಇತರರೊಂದಿಗೆ ಸಂವಹಿಸುವುದನ್ನೂ ಕಲಿತುಕೊಳ್ಳುತ್ತದೆ.

### 3.6.2 ಪ್ರಯೋಗಶಾಲೆಯಲ್ಲಿ

ಪ್ರಯೋಗಶಾಲೆಯ ಕಲಿಕೆಯಲ್ಲಿ ಕಲಿಕೆಯ ಎರಡು ಸಂಕೀರ್ಣ ಸನ್ನಿವೇಶಗಳಿವೆ.

1. ಕಲಿಯುವವನಿಗೆ ಒಂದು ಸಮಸ್ಯೆಯನ್ನು ನೀಡಲಾಗುತ್ತದೆ ಮತ್ತು ಅದಕ್ಕೆ ಪರಿಹಾರ ಕಂಡುಹಿಡಿಯಬೇಕು. ಉದಾಹರಣೆಗೆ, ಸಮಸ್ಯೆಯೊಂದು ಹೀಗಿರಬಹುದು: ಕೊಠಡಿಯೊಂದರಲ್ಲಿ ಛಾವಣಿಯಿಂದ ಜೋತುಬಿದ್ದಿರುವ ಎರಡು ದಾರಗಳನ್ನು ಒಟ್ಟಾಗಿ ಕಟ್ಟಬೇಕು. ಆದರೆ ಅವುಗಳನ್ನು ಒಂದಕ್ಕೊಂದು ಕಟ್ಟುವುದು ಕೇಳುವಷ್ಟು ಸರಳವಲ್ಲ. ಏಕೆಂದರೆ, ಈ ದಾರಗಳು ಒಟ್ಟಿಗೆ ತರಲಾರದಷ್ಟು ದೂರದಲ್ಲಿವೆ. ಕಲಿಯುವವನಿಗೆ ಒಂದು ಸರಿಹೋಗುವಷ್ಟೇ ಉದ್ದವಾದ ಇಕ್ಕಳವನ್ನು ನೀಡಲಾಗುತ್ತದೆ. ಇದರಿಂದ ಈ ಎರಡೂ ಹಗ್ಗಗಳನ್ನು ಹತ್ತಿರ ತಂದು ಕಟ್ಟಲು ಸಾಧ್ಯವೇ?

ಹಲವಾರು ಪ್ರಯತ್ನಗಳು ನಿಷ್ಫಲಗೊಳ್ಳುತ್ತವೆ. ವಿದ್ಯಾರ್ಥಿಗೆ ಸಹಾಯ ಮಾಡುವ ಒಂದೇ ತಂತ್ರವೆಂದರೆ, ಇಕ್ಕಳವನ್ನು ದಾರಕ್ಕೆ ಕಟ್ಟಿ, ಮತ್ತೊಂದು ದಾರದ ಹತ್ತಿರ ಹೋಗುವ ತೆರದಲ್ಲಿ ಅದನ್ನು ಲೋಲಕದಂತೆ ತೂಗಿಸುವುದು. ಅತಿ ಹತ್ತಿರಕ್ಕೆ ಬಂದಾಗ ಆ ಸ್ಥಳದಲ್ಲಿ ಮತ್ತೊಂದು ದಾರವನ್ನು ಹಿಡಿದುಕೊಳ್ಳುವುದು. ಆಗ

ಮಾತ್ರ ವಿದ್ಯಾರ್ಥಿ ಯಶಸ್ವಿಯಾಗುತ್ತಾನೆ. ಹಿಂದಿನ ಅನುಭವದ ಮೇಲೆ ಆಧಾರಿತವಾದ ಸರಳ ಪರಿಹಾರೋಪಾಯಗಳು ಸಮಸ್ಯಾಪೂರಣ ಮಾಡುವುದರಲ್ಲಿ ಕಲಿಯುವವನಿಗೆ ಸಹಾಯಕವಾಗುತ್ತವೆ. ದಾರವನ್ನು ಲೋಲಕದಂತೆ ತೂಗಿಸುವ ಪರಿಕಲ್ಪನೆಯು ಕಲಿಯುವವನಿಗೆ ಸಹಾಯ ಮಾಡುತ್ತದೆ. ಇಂತಹ ಒಂದು ಪ್ರತಿಭಾಪೂರ್ಣವಾದ ಹೊಳಹು ಹೊಳೆಯದೆ ವಿದ್ಯಾರ್ಥಿಯು ಯಶಸ್ವಿಯಾಗಲಾರ.

2. ಪ್ರಯೋಗಶಾಲೆಯ ಕಲಿಕೆಯ ಮತ್ತೊಂದು ಉದಾಹರಣೆಯು ಕುರುಡು ಪಾಠ ಅಥವಾ ಕಂಠಪಾಠ ಮಾಡುವುದರ ಮೂಲಕದ ಕಲಿಕೆಯನ್ನು ಒಳಗೊಳ್ಳುತ್ತದೆ. ಕಲಿಯುವವನಿಗೆ, ವಿರುದ್ಧ ಪದಗಳನ್ನು ಹೊಂದಿರುವ ಜೋಡಿಪದಗಳನ್ನು ನೀಡಲಾಗುತ್ತದೆ ಎಂದಿಟ್ಟುಕೊಳ್ಳೋಣ. ಉದಾಹರಣೆಗೆ: ಗಟ್ಟಿ, ಮೆದು, ವೇಗ, ನಿಧಾನ ಎಂಬಿತ್ಯಾದಿಯಾಗಿ. ಈ ಪದಗಳಿಗೆ ವಿರುದ್ಧ ಪದಗಳನ್ನು ಕೇಳುವಾಗ ಒಂದು ಹಂತದಲ್ಲಿ ಆ ಪದಗಳ ಕ್ರಮವನ್ನು ಅದಲು ಬದಲಾಗಿ ಕೇಳಲಾಗುತ್ತದೆ. ಉದಾಹರಣೆಗೆ ವೇಗ, ಗಟ್ಟಿ ಇತ್ಯಾದಿಯಾಗಿ. ಇದಕ್ಕೆ ಪ್ರತಿಕ್ರಿಯೆಯು ನಿಧಾನ, ಮೆದು ಎಂಬಿತ್ಯಾದಿ ಬರಬೇಕು. ಆದರೆ ಕೆಲವೊಂದು ಕಲಿಯುವ ಮಂದಿ ಜೋಲಿ ಹೊಡೆಯುತ್ತಿರುವವರಂತೆ ತಪ್ಪು ಹೇಳಿ ಇಕ್ಕಟ್ಟಿಗೆ ಸಿಲುಕಿಕೊಳ್ಳುತ್ತಾರೆ. ಅವರು ಇನ್ನೂ ಉತ್ತರಿಸುವ ಹಳೆಯ ನಮೂನೆಯನ್ನೇ ಕುರುಡಾಗಿ ಅನುಸರಿಸುತ್ತಿರುತ್ತಾರೆ. ಕಲಿಯುವವ ಸಾಕಷ್ಟು ಜಾಗೃತನಾಗಿರಬೇಕು ಮತ್ತು ಕ್ರಮಾಂಕವನ್ನು ಬದಲಾಯಿಸಿದರೂ ಸರಿಯಾದ ವಿರುದ್ಧಾರ್ಥಕ ಪದಗಳನ್ನು ನೀಡುವಂತಿರಬೇಕು.

## 3.7 ಕಲಿಯುವ ಪ್ರತಿಯೊಬ್ಬನೂ ತಿಳಿಯಬೇಕಾದದ್ದು

'ಪದಗಳು' ತಾವು ಏನನ್ನು ಪ್ರತಿನಿಧಿಸುವ ಅಥವಾ ವಿವರಿಸುವ ಪ್ರಯತ್ನವನ್ನು ಮಾಡುತ್ತವೆಯೋ ಅದನ್ನು ಪ್ರತಿನಿಧಿಸುವುದೂ ಇಲ್ಲ, ವಿವರಿಸುವುದೂ ಇಲ್ಲ. ಅವು ಎಷ್ಟೇ ಮೌಲ್ಯಯುತವಾದವೆಂದು ಅವುಗಳನ್ನು ಪರಿಗಣಿಸಿದರೂ, ಈ ಪದಗಳು ಅವು ವಿವರಿಸಲು ಯತ್ನಿಸುವ ವಸ್ತು ಅಥವಾ ಪರಿಕಲ್ಪನೆಗಳ ಕೇವಲ ನೆರಳುಗಳಷ್ಟೇ. ಎಲ್ಲ ಪದಗಳೂ ಮತ್ತು ನಿಯಮಗಳೂ ಅಮೂರ್ತವಾದವುಗಳೇ ಅಥವಾ ಅವುಗಳು ಬಹುಪಾಲು ಅಮೂರ್ತ ರೂಪದವೇ. ಅಮೂರ್ತತೆಯ ಪ್ರಕ್ರಿಯೆಯು ಎಲ್ಲ ವಿವರಣೆಗಳಲ್ಲೂ ಮತ್ತು ಎಲ್ಲಾ ಆಲೋಚನೆಗಳಲ್ಲೂ ಸಾಗುತ್ತದೆ. ಪ್ರತಿಯೊಂದು ಬೌದ್ಧಿಕಕ್ರಿಯೆಯೂ ನಮ್ಮ ಇಂದ್ರಿಯಗಳಿಗೆ ಪ್ರಸ್ತುತವಾಗುವಂತಹ, ನೈಜತೆಯ ಸಂಘಟನೆ ಮತ್ತು ಸರಳೀಕರಣಗಳನ್ನು ಒಳಗೊಳ್ಳುತ್ತದೆ. ಕಲೆ, ವಿಜ್ಞಾನ, ಕ್ರೀಡೆ, ವ್ಯವಹಾರ ಅಥವಾ ಮಾನವನ ಆಸಕ್ತಿ ಇಂತಹ ಯಾವುದೇ ಕಾರ್ಯಕ್ಷೇತ್ರಕ್ಕೂ ಇದು ಅನ್ವಯವಾಗುತ್ತದೆ.

ಒಂದು ಮಹಿಳಾ ವಾಲಿಬಾಲ್ ಆಟದ ರೇಡಿಯೋ ಪ್ರಸಾರವನ್ನು ಮೂರು ಮಂದಿ ಮಾಡುತ್ತಿದ್ದಾರೆಂದು ಕಲ್ಪಿಸಿಕೊಳ್ಳೋಣ. ಇದರಲ್ಲಿ ಸಾಮಾನ್ಯವಾಗಿ ನಿಯತಕಾಲಿಕವೊಂದರ ಮಹಿಳಾ ಮತ್ತು ಫ್ಯಾಷನ್ ವಿಭಾಗವನ್ನು ನೋಡಿಕೊಳ್ಳುವ ಸಂಪಾದಕರು ಒಬ್ಬರೆಂದೂ, ವಾಲಿಬಾಲ್ ಆಟಗಾರ್ತಿಯೊಬ್ಬರ ಹೆಮ್ಮೆಯ ತಾಯಿ ಮತ್ತೊಬ್ಬರೆಂದೂ, ಇನ್ನೊಬ್ಬರು ರಾಜಕೀಯ ಸುದ್ದಿಗಳನ್ನು ವರದಿ ಮಾಡುವವರೆಂದೂ ಇಟ್ಟುಕೊಳ್ಳೋಣ.

ಪ್ರತಿಯೊಬ್ಬರ ಪ್ರಸಾರವೂ ಭಿನ್ನವಾಗಿರುತ್ತದೆ. ಫ್ಯಾಷನ್ ಪುಟದ ಸಂಪಾದಕರು, ಹುಡುಗಿಯರು ಧರಿಸಿದ್ದ ವರ್ಣಮಯವಾದ ಸಮವಸ್ತ್ರಗಳು, ಫ್ಯಾಷನಬಲ್ ಆದ ಅವರ ಕ್ರೀಡಾ ಶೂಗಳು ಮತ್ತು ಅವರ ತಲೆಗೂದಲ ವಿನ್ಯಾಸ ಹಾಗು ಗಿಡ್ಡತನಗಳನ್ನು ತಮ್ಮ ವಿವರಣೆಯಲ್ಲಿ ಸೇರಿಸುತ್ತಾರೆ.

ಆಟಗಾರ್ತಿಯ ಹೆಮ್ಮೆಯ ತಾಯಿಯು ಹುಡುಗಿಯರ ಚುರುಕುತನ, ಚಾಕಚಕ್ಯತೆ ಅದರಲ್ಲೂ ಮುಖ್ಯವಾಗಿ ನಂ.3ರ ಆಟಗಾರ್ತಿ(ವಿವರಣೆಗಾರ್ತಿಯ ಮಗಳು)ಯದು ಹಾಗು ಕುಟುಂಬದಲ್ಲಿ ಕ್ರೀಡೆಯು ಹೇಗೆ ರಕ್ತಗತವಾಗಿ ಹರಿಯುತ್ತಿದೆ ಎಂಬುದರ ಬಗ್ಗೆ ಗಮನಹರಿಸಬಹುದು.

ಯಾವ ಆಟಗಾರ್ತಿಯರನ್ನು ಆಯ್ಕೆ ಮಾಡಿಲ್ಲ ಮತ್ತು ಏಕೆ? ಎಂಬುದನ್ನು ರಾಜಕೀಯ ವರದಿಗಾರ ಕಂಡುಕೊಳ್ಳುತ್ತಾನೆ ಮತ್ತು ಆಯ್ಕೆಗೆ ಸರಿಯಾದ ಮಾನಕಗಳನ್ನು ಅನುಸರಿಸಿದ್ದರೆ, ಪಂದ್ಯದ ಫಲಿತಾಂಶವು ಏನಾಗಬಹುದಿತ್ತು ಎಂಬುದನ್ನು ಗುರುತಿಸುತ್ತಾನೆ.

ವಾಲಿಬಾಲ್ ಪಂದ್ಯ - ಇಲ್ಲಿನ ವಾಸ್ತವ ಸತ್ಯ. ಆದರೆ ಇಲ್ಲಿ ಅದನ್ನು ಬೇರೆ ಬೇರೆ ದೃಷ್ಟಿಕೋನಗಳಿಂದ, ಬೇರೆ ಬೇರೆ ಅಂಶಗಳಿಗೆ ಪ್ರಾಧಾನ್ಯತೆ ನೀಡುವ ಮೂಲಕ ವಿವರಿಸಲಾಗಿದೆ. ಪ್ರತಿಯೊಂದು ವಿವರಣೆಯೂ - ಕಂಡ, ವಿವರಿಸಿದ, ಅರ್ಥೈಸಿದ ಹಾಗು ಪ್ರತಿಕ್ರಿಯಿಸಲಾಗದಂತೆ ನಿಜವಾಸ್ತವದ ಕೆಲವೊಂದು ಅಂಶಗಳ ಬಗ್ಗೆ ಮಾತ್ರ ಸಮಾನವಾಗಿ ಸಂಬಂಧಿಸಿರುತ್ತವೆ. ಕೆಲವೊಂದು ವಿವರಣೆಗಳು ಉಳಿದವುಗಳಿಗಿಂತ ಹೆಚ್ಚು ನಿಖರವೂ, ಹೆಚ್ಚು ವಿವರಣಾತ್ಮಕವೂ ಆಗಿರುತ್ತವೆ. ಆದರೆ ಯಾವುದೇ ವಿವರಣೆಯೂ ಪರಿಪೂರ್ಣವಲ್ಲ.

ವ್ಯಕ್ತಿಯೊಬ್ಬ 'ಕಾರ್' ಎಂಬುದರ ಉಲ್ಲೇಖ ಮಾಡಿದರೆ, ಆತನಿಗೆ ಆ ಕಾರಿನ ಬಗ್ಗೆ ತನ್ನದೇ ಆದ ಕೆಲವೊಂದು ಕಲ್ಪನೆಗಳಿರುತ್ತದೆ. ಅದೇ ರೀತಿಯಾಗಿ, ಕೇಳುಗನಿಗೂ ಸಹ ಆತನದೇ ಆದ ಒಂದು ಕಲ್ಪನೆಗಳ ಶ್ರೇಣಿ ಇರುತ್ತದೆ. 'ಮಾರುತಿ 800'ಅನ್ನು ವಿವರಣೆ ಕಾರು ಎಂದು ಸೂಚಿಸುತ್ತಿದ್ದರೆ, ಪದವನ್ನು ಆಧರಿಸಿಕೊಂಡು ಕೇಳುಗ 'ಫಿಯೆಟ್ ಸಿಯೆನಾ' ಎಂದು ಅರ್ಥ ಮಾಡಿಕೊಳ್ಳಬಹುದು. 'ಕಾರ್' ಯಾವುದೆಂಬುದನ್ನು ನೀವು ನಿರ್ದಿಷ್ಟಪಡಿಸುವವರೆಗೂ ಅರ್ಥೈಸುವಿಕೆಯು ಅಪೂರ್ಣವಾಗಿಯೇ ಇರುತ್ತದೆ.

ಇನ್ನೊಂದು ಉದಾಹರಣೆ ತೆಗೆದುಕೊಳ್ಳಿ.

ರಾಮನು ತನ್ನ ಸಹಪಾಠಿಯಾದ ರವಿಯನ್ನು ಸುರೂಪಿ (ಚೆಲುವ, ಸುಂದರ ಎಂದಲ್ಲ - ಏಕೆಂದರೆ ಸೌಂದರ್ಯ ಎಂಬ ಪದ ಬಳಕೆಯಲ್ಲಿರುವುದು ಸ್ತ್ರೀಯರಿಗಾಗಿ) ಎಂದು ವಿವರಿಸಬಹುದು. ಇದನ್ನು ಕೇಳಿದ ರಾಜ್ ಇದಕ್ಕೆ ವಿರೋಧ ವ್ಯಕ್ತಪಡಿಸುತ್ತಾನೆ. 'ರವಿ ಸುರೂಪಿಯೇನಲ್ಲ; ಆತ ವಿಚಿತ್ರವಾದ ಒಂದು ರೀತಿಯಲ್ಲಿ ನಡೆಯುತ್ತಾನೆ' ಎಂದು ಹೇಳುತ್ತಾನೆ. ರಾಮನು ರವಿಯ ಮುಖದ ಬಗ್ಗೆ ಮಾತ್ರ ಉದ್ದೇಶಿಸುತ್ತಿದ್ದನು. ಮುಖದ ವಿವರಣೆಯೊಂದಿಗೆ ಆತನ ರೂಪವು ಸಂಪೂರ್ಣವಾಗುತ್ತದೆ ಎಂಬ ಕಲ್ಪನೆ ಆತನದು. ಆದರೆ, ರವಿಯ ಭಂಗಿ (ನಡೆವ ರೀತಿಯನ್ನು) ರಾಜ್ ಗಮನಕ್ಕೆ ತೆಗೆದುಕೊಳ್ಳುತ್ತಾನೆ. ತಮ್ಮ ತಮ್ಮ ಪೂರ್ವಾಧಾರಗಳ ಪ್ರಕಾರ ಒಂದು ಹಂತದವರೆಗೆ ಇಬ್ಬರೂ ಸರಿ. 'ಸುರೂಪ'ವು ಒಬ್ಬನಿಗೆ ಒಂದು ಅರ್ಥವನ್ನು ನೀಡಿದರೆ, ಮತ್ತೊಬ್ಬನಿಗೆ ಇನ್ನೊಂದು ಅರ್ಥ ನೀಡುತ್ತಿದೆ. ಗಮನಿಸಿ - ಪದಗಳು ಅವು ಪ್ರತಿನಿಧಿಸುವ ವಸ್ತುಗಳ ಪೇಲವ ನೆರಳುಗಳು ಅಷ್ಟೆ.

## 3.8 ಕಲಿಕೆಯ ಸಿದ್ಧಾಂತಗಳು

ಕಲಿಕೆಯ ಸಿದ್ಧಾಂತವೊಂದು ಮೂರು ಬೇರೆ ರೀತಿಯ, ಆದರೆ, ಬಹಳ ನಿಕಟವಾಗಿ ಸಂಬಂಧವುಳ್ಳ ಮೂರು ಅಂಶಗಳನ್ನು ಒಳಗೊಳ್ಳುತ್ತದೆ.

ಮೊದಲನೆಯದಾಗಿ, ಅರಿವಿನ ಕ್ಷೇತ್ರವೊಂದಕ್ಕೆ ಮಾರ್ಗ ಇದು. ವಿಶ್ಲೇಷಿಸುವ ಒಂದು ರೀತಿ ಮತ್ತು ಕಲಿಕೆಯ ಬಗ್ಗೆ ಮಾತನಾಡುವ ಹಾಗು ಸಂಶೋಧನೆ ನಡೆಸುವ ಮತ್ತು ಕಲಿಕೆಯ ಯಾವ ಅಂಶಗಳು ಅಧ್ಯಯನ ಯೋಗ್ಯವೆಂದು ಗೊತ್ತು ಮಾಡಿಕೊಳ್ಳುವುವು - ಕಲಿಕೆಯ ಸಿದ್ಧಾಂತಗಳು.

ಎರಡನೆಯದಾಗಿ ಬೃಹತ್‌ಪ್ರಮಾಣದ ಕಲಿಕೆಯನ್ನು ಸಾಕಷ್ಟು ಚಿಕ್ಕದಾಗಿ ಸಾಂದ್ರೀಕರಿಸುವ ಪ್ರಯತ್ನಗಳು - ಕಲಿಕೆಯ ಸಿದ್ಧಾಂತಗಳು. ನಿಖರವಾಗಿ ಹೇಳಬೇಕೆಂದರೆ, ಚೆನ್ನಾಗಿ ಅಭಿವೃದ್ಧಿಹೊಂದಿರುವ ಭೌತಶಾಸ್ತ್ರದಂತಹ ವಿಜ್ಞಾನಗಳ ಸಿದ್ಧಾಂತಗಳು ನಿಯಮಗಳನ್ನು ಸಂಕ್ಷೇಪಿಸುವಲ್ಲಿ ಸಾಕಷ್ಟು ಚೆನ್ನಾಗಿ ಕೆಲಸ ಮಾಡುತ್ತವೆ.

ಹೆಚ್ಚು ವಿಸ್ತೃತವಾಗಿರುವಂತಹ ನಿಯಮಗಳಿಂದ ಯಾವ ರೀತಿಯ ಪೂರ್ವಾನುಮಾನಗಳನ್ನು ಮಾಡಬಹುದೋ ಅಷ್ಟೇ ನಿಖರವಾದ ಅನುಮಾನಗಳನ್ನು ಸಿದ್ಧಾಂತಗಳಿಂದಲೂ ಮಾಡಬಹುದಾಗಿದೆ. ಆದರೆ, ಕಲಿಕೆಯ ಸಿದ್ಧಾಂತಗಳು ಮಾತ್ರ ಸಂಪೂರ್ಣತೆ ಮತ್ತು ನಿಖರತೆಯ ದೃಷ್ಟಿಯಿಂದ ಬಹಳಷ್ಟಾಗಿ ಸೋಲುತ್ತವೆ.

ಮೂರನೆಯದಾಗಿ, ಕಲಿಕೆ ಎಂದರೇನು ಮತ್ತು ಅದು ಏಕೆ ಈ ರೀತಿಯಾಗಿ ಕೆಲಸ ಮಾಡುತ್ತದೆ ಎಂಬುದನ್ನು ವಿವರಿಸುವ ಒಂದು ಸೃಜನಾತ್ಮಕ ಪ್ರಯತ್ನ ಕಲಿಕೆಯ ಸಿದ್ಧಾಂತ. ಕಲಿಕೆಯು 'ಹೇಗೆ' ಎಂಬುದನ್ನು ನಿಯಮಗಳು ನೀಡಿದರೆ, 'ಏಕೆ' ಎಂಬುದನ್ನು ನೀಡುವ ಪ್ರಯತ್ನವನ್ನು ಸಿದ್ಧಾಂತಗಳು ಮಾಡುತ್ತವೆ.

'ತಾನು ಜೀವಿಸುತ್ತಿರುವ ಪ್ರಪಂಚದ ಆಧಾರ ಸ್ವರೂಪವನ್ನು ನಿರ್ಧರಿಸುವ ಮಾನವನ ಅತ್ಯುಚ್ಛ ಪ್ರಯತ್ನಗಳನ್ನು ಸಿದ್ಧಾಂತಗಳು ಪ್ರತಿನಿಧಿಸುತ್ತವೆ.

## 3.9 ಕಲಿಕೆಯ ಅರ್ಥವಿವರಣೆಗಳು

19ನೆಯ ಶತಮಾನದ ಕೊನೆಯಭಾಗ ಮತ್ತು ಇಪ್ಪತ್ತನೆಯ ಶತಮಾನದ ಮೊದಲಭಾಗದಲ್ಲಿ, ಕಲಿಕೆಯ ಸಿದ್ಧಾಂತಗಳು ಮತ್ತು ಅವುಗಳ ಅರ್ಥವಿವರಣೆಯಲ್ಲಿ ವಿಶೇಷವಾಗಿ ಆಸಕ್ತಿ ಹೊಂದಿದ್ದ ಹಲವಾರು ಮನಃಶಾಸ್ತ್ರಜ್ಞರು, ಮನೋವೈದ್ಯರು ಮತ್ತು ಇತರ ಪರಿಣಿತರಲ್ಲಿ ಪ್ರಮುಖರಾದವರೆಂದರೆ, ಜಾನ್.ಬಿ.ವಾಟ್ಸನ್(1878-1958) ಮತ್ತು ಎಡ್ವಿನ್ ಆರ್. ಗುಥ್ರೀ (1886-1959) ಅವರುಗಳು.

ಎಲ್ಲಾ ಕಲಿಕೆಗಳನ್ನು ಶಾಸ್ತ್ರೀಯವಾದ ರೂಢೀಕರಣಗಳು ಎಂದು ವಾಟ್ಸನ್ ಪರಿಗಣಿಸುತ್ತಾರೆ. ಮಾನವ ಜೀವಿಗಳಾದ ನಾವು, ಅನುದ್ದಿಷ್ಟ ಅನುವರ್ತನೆ / ಅನಾಲೋಚಿತ ಪ್ರತಿಕ್ರಿಯೆಗಳೆಂದು ಕರೆಯಲ್ಪಡುವ ಕೆಲವು ಪ್ರಚೋದನೆ - ಪ್ರತಿಕ್ರಿಯೆಗಳ ಜೋಡಣೆಗಳೊಂದಿಗೆ ಹುಟ್ಟಿರುತ್ತೇವೆ. ಉದಾಹರಣೆಗೆ ಮೂಗು ಕಿರಿಕಿರಿಯಾದಾಗ ಸೀನುವುದು, ಮೊಣಕಾಲಿನ ಮೇಲೆ ತಟ್ಟಿದಾಗ ಉಂಟಾಗುವ ಅನೈಚ್ಛಿಕವಾಗಿ ತಕ್ಷಣ ಸೆಳೆತವುಂಟಾಗುವುದು. ವಾಟ್ಸನ್ ಅವರ ಪ್ರಕಾರ, ಹೊಸ ಪ್ರಚೋದನೆ ಪ್ರತಿಕ್ರಿಯೆಗಳ ಸಂಬಂಧಗಳ ಬಾಹುಳ್ಯವನ್ನು ರೂಪಿಸಲು ರೂಢೀಕರಣಗಳು ಸಹಾಯ ಮಾಡಬಹುದಾದರೂ ಅನುದ್ದಿಷ್ಟ ಅನುವರ್ತನಗಳು ನಮ್ಮ ನಡಾವಳಿಗಳನ್ನು ನಿರ್ಧರಿಸುತ್ತವೆ.

ಹಾಗಾದರೆ, ಹಲವು ಹೊಸ ಪ್ರಚೋದನೆ - ಪ್ರತಿಕ್ರಿಯೆಗಳ ಸಂಬಂಧಗಳೊಂದಿಗೆ, ನಾವು ಹೊಸ ಹವ್ಯಾಸಗಳನ್ನು ಕಲಿಯುವುದು ಹೇಗೆ?

ಯಾವುದೇ ವಿಶಿಷ್ಟ ರೀತಿಯ ಮಾನಸಿಕ ಸಾಮರ್ಥ್ಯಗಳು, ವಿಶೇಷ ಗುಣಗಳು ಅಥವಾ ಪ್ರಕೃತಿಗಳೊಂದಿಗೆ ಮಾನವ ಜೀವಿಗಳು ಹುಟ್ಟುವುದಿಲ್ಲ, ನಾವು ಅನುವಂಶಿಕವಾಗಿ ಪಡೆಯುವುದು ಏನಿದ್ದರೂ ನಮ್ಮ ದೇಹ ಮತ್ತು ಕೆಲವು ಅನುವರ್ತನೆಗಳನ್ನು ಮಾತ್ರ. ಸಾಮರ್ಥ್ಯಗಳು ಮತ್ತು ವ್ಯಕ್ತಿತ್ವನಲ್ಲಿರುವ ವ್ಯತ್ಯಾಸಗಳೆಲ್ಲವೂ ಕಲಿಕೆಯ ನಡಾವಳಿಯಲ್ಲಿ ಇರತಕ್ಕಂತಹ ವ್ಯತ್ಯಾಸದ ಪರಿಣಾಮ ಸ್ವರೂಪಗಳು ಅಷ್ಟೆ. ವಾಟ್ಸನ್, ನಿಸರ್ಗ - ಶಿಕ್ಷಣದ ವಾಗ್ವಾದದಲ್ಲಿ ಅನುವಂಶೀಯತೆಯ ವಿರುದ್ಧ, ಪರಿಸರಪರವಾದ ಪ್ರತಿಪಾದಕರಾಗಿದ್ದರು. ನಾವು ಸಂಪೂರ್ಣವಾಗಿ ನಿರ್ಭರರಾಗಿರುವುದು, ನಾವು ಏನನ್ನು ಪರಿಸರದಿಂದ ಕಲಿತಿದ್ದೇವೆಯೋ ಅದರ ಮೇಲೆ (ಸ್ಪಷ್ಟವಾಗಿ, ಶಾರೀರಿಕ ಸಂರಚನೆಯ ವ್ಯತ್ಯಾಸಗಳನ್ನು ಹೊರತುಪಡಿಸಿ). ಸರಿಯಾಗಿ ರೂಢಿಗತಗೊಳಿಸಲಾದ ಎಂದರೆ, ಸೂಕ್ತವಾಗಿ ಕಲಿತ ಅಥವಾ ಸುಶಿಕ್ಷಿತನಾದ ಮನುಷ್ಯ ತಾನು ಏನು ಬೇಕಾದರೂ ಆಗಬಹುದು. ಮನುಷ್ಯರು ಏನಾದರೂ ಆಗಬಹುದು. ಸಾಧ್ಯತೆಗೆ ಯಾವ ಮಿತಿಯೂ ಇಲ್ಲ.

ವಸ್ತುನಿಷ್ಠತೆ ಮತ್ತು ಕಲಿಕೆಯ ಶಕ್ತಿಯಲ್ಲಿನ ನಂಬುಗೆಯು ಈ ಜೋಡಣೆಯು ಜನತೆಯ ಕಲ್ಪನೆಯನ್ನು ಹಿಡಿದಿಟ್ಟುಕೊಂಡಿತು. ಕಲಿಕೆಯ ಇನ್ನೂ ಕೆಲವು ನಿರ್ದಿಷ್ಟ ಕಲಿಕೆಗಳೊಂದಿಗೆ ಮಕ್ಕಳನ್ನು ಪಾಲನೆ ಮಾಡುವುದು, ಶಿಕ್ಷಣ, ಜಾಹೀರಾತು ಮತ್ತು ಸಾಮಾಜಿಕ ಸಂಘಟನೆಗಳನ್ನು ಕುರಿತಂತೆ ಇದು ಮಹತ್ವದ ಪರಿಣಾಮಗಳನ್ನು ಹೊಂದಿತ್ತು.

ವ್ಯಕ್ತಿಯೋರ್ವನು ಹೇಗೆ ಕಲಿಯುತ್ತಾನೆ ಎಂಬುದನ್ನು ವಿವರಿಸಲು ರೂಢಿಗತವಾಗಿಸುವಿಕೆಯನ್ನು ಬಳಕೆ ಮಾಡಬಹುದೇ? ಉದಾಹರಣೆಗೆ ಇತಿಹಾಸದ ತಥ್ಯಗಳು. ಒಂದು ಪ್ರಶ್ನೆಗೆ ಅಥವಾ ಇತರ ರೂಢಿಗತ ಪ್ರಚೋದನೆಗೆ ಪ್ರತಿಕ್ರಿಯೆ ನೀಡಲು ಸರಿಯಾದ ಸರಣಿಯಲ್ಲಿ ಅನುಕ್ರಮವಾಗಿ ಪದಗಳನ್ನು ನೀಡಲು ಕಲಿಯುವ ಪ್ರಕ್ರಿಯೆ ವಾಟ್ಸನ್ ಅವರಿಗೆ 'ಜ್ಞಾನಾರ್ಜನೆ' ಆಗಿತ್ತು. ಮನುಷ್ಯನು ಅನುಭವಿಸುವ, ಆಲೋಚಿಸುವ, ಹೇಳುವ ಅಥವಾ ಮಾಡುವ ಪ್ರತಿಯೊಂದು ಕ್ರಿಯೆಯೂ ಸಂಪೂರ್ಣವಾಗಿ ಅಥವಾ ಬೇರೆ ಬೇರೆ ಪ್ರಮಾಣದಲ್ಲಿ ದೇಹದ ಚಟುವಟಿಕೆಯನ್ನು ಒಳಗೊಂಡಿರುತ್ತದೆ ಎಂದು ವಾಟ್ಸನ್ ನಂಬಿದ್ದರು. ಇದು ಮನಶಾಸ್ತ್ರಕ್ಕೆ ಅದರ ಮೂಲಭೂತ ಕೊಡುಗೆ ಮತ್ತು ನಾಡಾವಳಿಯವಾದಕ್ಕೆ ಧ್ಯೇಯವಾಣಿಯಾಗಿ ಹೊರಹೊಮ್ಮಿತು.

ಮನಃಶಾಸ್ತ್ರವನ್ನು ವ್ಯಕ್ತಿನಿಷ್ಠತೆ ಮತ್ತು ಸಹಜಜ್ಞಾನ ಸಿದ್ಧಾಂತದಿಂದ ಬಿಡಿಸಿದ್ದಕ್ಕಾಗಿ ವಾಟ್ಸನ್ ಅವರನ್ನು ಮೆಚ್ಚಿದರೂ ಸಂಕೀರ್ಣವಾದ ಕಲಿಕೆಯನ್ನು ಅರ್ಥಮಾಡಿಕೊಳ್ಳಲು ಪ್ರತಿಪಾದ್ಯವಾಗುವಂತಹ ಸಿದ್ಧಾಂತವೊಂದನ್ನು ಅವರು ಕಟ್ಟಲಾಗಲಿಲ್ಲ. 'ಕಲಿಕೆಯ ಮನಃಶಾಸ್ತ್ರ' (Psychology of Learning - 1935, 1952 ಮತ್ತು 1959ರಲ್ಲಿ ಪರಿಷ್ಕೃತ)ದ ಲೇಖಕರಾದ ಎಡ್ವಿನ್ ಆರ್ ಗುಥ್ರೀ (1886-1959) ಅವರು ಒಂದು ಅನೌಪಚಾರಿಕ ಕಥಾನಕದ ಶೈಲಿಯಲ್ಲಿ ತಮ್ಮ ನಿಗಮನಾತ್ಮಕವಾದ ಸಿದ್ಧಾಂತವನ್ನು ಪ್ರತಿಪಾದಿಸಿದರು. ಅವರು ಮೂಲತತ್ವಗಳು ವಾಟ್ಸನ್ ಅವರಂತೆಯೇ ಇದ್ದವು. ಇದರ ಪ್ರಕಾರ.

"ಚಲನೆಯೊಂದಿಗೆ ಸೇರಿಬಂದಿರುವ ಪ್ರಚೋದನೆಗಳ ಸಂಯೋಜನೆಯು, ತಾನು ಪುನರಾವೃತ್ತಿಯಾದಾಗ ಅದೇ ಚಾಲನೆಯಿಂದ ಹಿಂಬಾಲಿಸಲ್ಪಡುವಂತಹ ಪ್ರವೃತ್ತಿಯನ್ನು ಹೊಂದಿರುತ್ತದೆ. ಅಂದರೆ, ಸನ್ನಿವೇಶವೊಂದರಲ್ಲಿ ನೀವು ಏನನ್ನಾದರೂ ಮಾಡಿದರೆ, ಅಂಥಹುದೇ ಸನ್ನಿವೇಶದಲ್ಲಿ ಬಿಟ್ಟಾಗ ಮತ್ತೆ ಅದನ್ನೇ ಮಾಡುವ ಪ್ರವೃತ್ತಿಯನ್ನು ತೋರುತ್ತದೆ".

ಹಲವಾರು ಮನಃಶಾಸ್ತ್ರಜ್ಞರು ಗುಥ್ರೀಯವರ ತತ್ವಗಳನ್ನು ಪ್ರಶ್ನೆ ಮಾಡಿದರು. ಮೊದಲನೆಯದಾಗಿ ವ್ಯಕ್ತಿಯೊಬ್ಬ ಒಂದೇ ಸನ್ನಿವೇಶದಲ್ಲಿ ಹಲವು ಬಾರಿ ಬೇರೆ ಬೇರೆ ಕ್ರಿಯೆಗಳನ್ನು ಮಾಡುತ್ತಾನೆ. ಹಾಗಾದರೆ ಮೊದಲಿಗೆ ಯಾವುದು ಆಗುತ್ತದೆ? ಎಂದರೆ ಗುಥ್ರೀಯವರ ಪ್ರಕಾರ 'ಇದಕ್ಕೆ ಇತ್ತೀಚಿನ ಹಿಂದಿನದು' ಇದು ವಾಟ್ಸನ್ ಅವರ ನೂತನತೆ (recency)ಯ ಪರಿಕಲ್ಪನೆಗೆ ಸದೃಶವಾದುದು. ಇತ್ತೀಚೆಗೆ ಯಾವುದು ಆಗಿರುತ್ತದೆಯೋ ಅದೇ ಮುಂದಿನ ಪ್ರತಿಕ್ರಿಯೆಯಾಗುತ್ತದೆ. ಆದರೆ ವಾಟ್ಸನ್ ಅವರ ಆವರ್ತನವು ಗುಥ್ರೀಯವರಿಗೆ ಮೆಚ್ಚುಗೆಯಾಗಲಿಲ್ಲ. ವಾಟ್ಸನ್ ಅವರಿಗೆ ಪ್ರಚೋದನೆ - ಪ್ರತಿಕ್ರಿಯೆಯ ಜೋಡಿಯು ಅದರ ಸತ್ವದಲ್ಲಿ ಬದಲಾವಣೆ ಹೊಂದತಕ್ಕದೂ ಮತ್ತು ಅಭ್ಯಾಸದೊಂದಿಗೆ ಗಟ್ಟಿಗೊಳ್ಳುತ್ತಾ ಬೆಳೆಯುವುದೂ ಆಗಿತ್ತು. ಗುಥ್ರೀಯವರಿಗೆ ಇದು ಸಂಪೂರ್ಣವಾದ ಅಥವಾ ಸ್ವಲ್ಪವೂ ಇರದ ಬಂಧವಾಗಿತ್ತು. ಈ ಜೋಡಣೆ ಇರುತ್ತದೆ ಅಥವಾ ಇರುವುದಿಲ್ಲ. ಶಕ್ತಿಯಲ್ಲಿ ಯಾವುದೇ ವ್ಯತ್ಯಾಸವೂ ಆಗುವುದಿಲ್ಲ ಎಂಬುದು ಅವರ ವಿಚಾರವಾಗಿತ್ತು.

ಬಿ.ಎಫ್. ಸ್ಕಿನ್ನರ್, ನೀಲ್ ಮಿಲ್ಲರ್ ಮತ್ತು ಇತರ ಪರಿಣತರ ಸಿದ್ಧಾಂತಗಳು ಮೇಲೆ ವಿವರಿಸಿರುವ ಎರಡು ಚೌಕಟ್ಟುಗಳ ನಡುವೆ ಬರುತ್ತದೆ.

## 3.10 ಸಾರಾಂಶ

ಜ್ಞಾನಾರ್ಜನೆ ಮಾಡುವ ಪ್ರಕ್ರಿಯೆ; ಯಾವುದೇ ವಿಷಯವನ್ನು ಕುರಿತಂತೆ ಅನುಭವ ಅಥವಾ ಅಧ್ಯಯನದ ಮೂಲಕ ವ್ಯಾಪಕವಾದ ಗ್ರಹಿಕೆ ಅಥವಾ ನೈಪುಣ್ಯತೆ ಸಾಧಿಸುವುದನ್ನು ಕಲಿಕೆ ಎಂದು ಕರೆಯಲಾಗುತ್ತದೆ. ಸನ್ನಿವೇಶ, ವ್ಯಕ್ತಿ ಅಥವಾ ಘಟನೆಯ ಜ್ಞಾನವು ಸಂವಹನಕ್ಕೆ ಅತ್ಯವಶ್ಯ. ಕಲಿಕೆಯು ವ್ಯಕ್ತಿಯಲ್ಲಿ ಆಂತರಿಕವಾದ, ವ್ಯಕ್ತ್ಯಂತರವಾದ ಹಾಗು ಸಮೂಹ ಸಂಪರ್ಕಗಳನ್ನು ಒಳಗೊಳ್ಳುತ್ತದೆ. ಅಭ್ಯಾಸದ ಪರಿಣಾಮ ಸ್ವರೂಪವಾಗಿ ಹೆಚ್ಚು ಕಡಿಮೆ ಖಾಯಂ ಆಗಿ ಉಳಿಯುವ ನಡಾವಳಿಯ ಬದಲಾವಣೆ - ಕಲಿಕೆ, ಸ್ಮರಣೆಯ ಉಪಯೋಗವು ಕಲಿಕೆ ಹಾಗು ಆಲೋಚನಾ ಪ್ರಕ್ರಿಯೆಗೆ ಕೇಂದ್ರವಿದ್ದಂತೆ.

ಪ್ರಪಂಚವನ್ನು ಕುರಿತ ದೃಷ್ಟಿಯನ್ನಲ್ಲದೆ ಹಲವಾರು ಮನೋಧರ್ಮಗಳು, ಭಾವನೆಗಳು, ಸಾಮಾಜಿಕ ನಡವಳಿಕೆ ಮತ್ತು ಪ್ರತಿಕ್ರಿಯೆಗಳ ರೀತಿಗಳನ್ನು ಮಾನವೀಯ ಸಂಬಂಧಗಳ ಪಾಠಗಳೊಂದಿಗೆ ಶಾಲೆಯಲ್ಲಿ ಕಲಿಯಲಾಗುತ್ತದೆ. ಯಾವುದೇ ವಿಶೇಷ ರೀತಿಯ ಬೌದ್ಧಿಕ ಸಾಮರ್ಥ್ಯಗಳು, ಗುಣ ಅಥವಾ ಪ್ರಕೃತಿಗಳು ಮಾನವಜೀವಿಗಳಿಗೆ ಹುಟ್ಟಿನಿಂದಲೇ ಬಂದಿರುವುದಿಲ್ಲ, ಸಾಮರ್ಥ್ಯಗಳು ಮತ್ತು ವ್ಯತ್ಯಾಸಗಳು ಕಲಿಕೆಯ ನಡವಳಿಕೆಯಲ್ಲಿರುವ ವ್ಯತ್ಯಾಸಗಳಷ್ಟೇ.

## 3.11 ನಿಮ್ಮ ಪ್ರಗತಿ ಪರಿಶೀಲನೆ

**ಸೂಚನೆ: ನಿಮ್ಮ ಉತ್ತರಗಳನ್ನು ಈ ಘಟಕದಲ್ಲಿ ನೀಡಲಾಗಿರುವ ಮಾಹಿತಿಯೊಂದಿಗೆ ಹೋಲಿಸಿ.**

1. ಕಲಿಕೆ ಎಂದರೇನು? ಸಂವಹನಗಳೊಂದಿಗೆ ಇದು ಹೇಗೆ ಸೇರಿಕೊಂಡಿದೆ? ವಿವರಿಸಿ.

2. ಗ್ರಹಿಕೆ ಎಂದರೇನು? ಇಂದ್ರಿಯ ಪ್ರಚೋದನೆಯೊಂದಿಗೆ ಇದು ಹೇಗೆ ಸಂಬಂಧಿತವಾಗಿದೆ? ವಿವರಿಸಿ.

3. ವಾಟ್ಸನ್ ಮತ್ತು ಗುಥ್ರೀ ಅವರ ಕಲ್ಪನೆಗಳ ಪ್ರಮುಖ ವಿಚಾರಗಳನ್ನು ತಿಳಿಸಿ.

## 3.12 ಹೆಚ್ಚಿನ ಓದಿಗಾಗಿ


1. Bouma and Atkinson, A Handbook of Social Science Research, Oxford University Press - New York, 1995.

2. David Dooley, Social Research Methods, Prentice - Hall of India Pvt. Ltd.-New Delhi, 1995.


**ಬರಹ: ತೇಜಸ್ವಿ ನವಿಲೂರ್ ಮತ್ತು ಬಿ. ವಿ. ಸತ್ಯೇಂದ್ರ ರಾವ್**

# ಘಟಕ 4 ಜ್ಞಾನಾತ್ಮಕ ಸಿದ್ಧಾಂತಗಳು

ರಚನೆ

4.0 ಉದ್ದೇಶಗಳು

4.1 ಪ್ರಸ್ತಾವನೆ

4.2 ಪ್ರಕೃತಿ, ಪರಿಸರ ಮತ್ತು ಸಂಸ್ಕೃತಿ

4.3 ಮಾನವ ಜೀವಿಗಳ ಮೂಲ ಸ್ವಭಾವ

4.4 ಸಂವಹನ ಮತ್ತು ಜ್ಞಾನ

4.5 ಸಾರಾಂಶ

4.6 ನಿಮ್ಮ ಪ್ರಗತಿ ಪರಿಶೀಲನೆ

4.7 ಹೆಚ್ಚಿನ ಓದಿಗಾಗಿ

## 4.0 ಉದ್ದೇಶಗಳು

ಮಾಧ್ಯಮಗಳಲ್ಲಿ ಅಡಕವಾದ ಹಲವಾರು ವಸ್ತುವಿಷಯಗಳನ್ನು ಶ್ರೋತೃಗಣ ಗ್ರಹಿಸುತ್ತದೆ ಮತ್ತು ಕಲಿಯುತ್ತದೆ. ಈ ಪ್ರಕ್ರಿಯೆಯು ಸಾಮಾಜಿಕ ಪರಿಸರ, ಜ್ಞಾನ, ಅರಿವಿನಂತಹ ಹಲವಾರು ಅಂಶಗಳ ಮೇಲೆ ಆಧಾರಿತವಾಗಿದೆ. ಮಾಧ್ಯಮ ವೃತ್ತಿನಿರತರು ಈ ಬಗ್ಗೆ ಪರಿಪೂರ್ಣ ಜ್ಞಾನವನ್ನು ಹೊಂದಿರಬೇಕಾದ ಅವಶ್ಯಕತೆಯಿರುವುದರಿಂದ ವಿದ್ಯಾರ್ಥಿಗಳು ಕೆಳಕಂಡ ವಿಷಯಗಳನ್ನು ಅರ್ಥಮಾಡಿಕೊಳ್ಳುವಂತೆ ಈ ಘಟಕವನ್ನು ವಿನ್ಯಾಸಗೊಳಿಸಲಾಗಿದೆ.

* ಜ್ಞಾನಾತ್ಮಕ ಗ್ರಹಿಕೆಯ ಪ್ರಕ್ರಿಯೆಗಳಲ್ಲಿ ಸಾಮಾಜಿಕ ಅಂಶಗಳು;
* ಜ್ಞಾನ ಮತ್ತು ಕಲಿಕೆಗಳ ನಡುವಿನ ಸಂಬಂಧ;
* ಜ್ಞಾನ ಮತ್ತು ಸಂವಹನಗಳ ನಡುವಿನ ಸಂಬಂಧ, ಹಾಗು
* ಸಂವಹನಕ್ಕೆ ಅನ್ವಯಿಸಿದಂತೆ ಜ್ಞಾನಾತ್ಮಕ ಸಿದ್ಧಾಂತಗಳ (Cognitive Theories) ಮೂಲಗಳು.

## 4.1 ಪ್ರಸ್ತಾವನೆ

'Cognition' ಎಂಬ ಪದಕ್ಕೆ ನಿಘಂಟಿನ ಅರ್ಥ 'ಜ್ಞಾನ' ಎಂದು. ಮನಃಶಾಸ್ತ್ರದಲ್ಲಿ, ಬಹಳ ವಿಶಾಲಾರ್ಥದಲ್ಲಿ ಅಂದರೆ, ಪ್ರಚೋದನೆ ಮತ್ತು ಗ್ರಹಿಕೆಗಳನ್ನು ಒಳಗೊಂಡಂತೆ ಹಾಗು ಭಾವನೆ ಮತ್ತು ಪ್ರೇರಣೆಗಳನ್ನೂ ಕೂಡಿದಂತಹ ವಿಶಿಷ್ಟವಾದ ಅರ್ಥ ಇದಕ್ಕಿದೆ. ಮಹದಾಸೆ ಮತ್ತು ಇಚ್ಛೆಗಳನ್ನು ಒಳಗೊಂಡಂತಹ ಮನಸ್ಸಿನ ಕ್ರಿಯಾಶೀಲನಾದ ಭಾಗವನ್ನು 'ಪ್ರೇರಣೆ'ಯು ನಿರ್ದೇಶಿಸುತ್ತದೆ.

### 4.1.1 ಗ್ರಹಿಕೆ

Cognition - ಎನ್ನುವುದು ಒಂದು ಮನಃಶಾಸ್ತ್ರೀಯವಾದ ಪದ ಮತ್ತು ಗ್ರಹಿಕೆಗೆ ಸಂಬಂಧಿತವಾಗಿರುವಂತೆ ಇದನ್ನು ಬಳಸಲಾಗುತ್ತದೆ. ಗ್ರಹಿಕೆಯಾದರೋ ತಾನು ಸಂವಹನ ನಡಾವಳಿಯೊಂದಿಗೆ ಬೆಸೆದುಕೊಂಡಿದೆ. ಸೆಕಾರ್ಡ್ ಮತ್ತು ಬ್ಯಾಕ್‌ಮನ್ (ಸೋಶಿಯಲ್ ಸೈಕಾಲಜಿ,1964) ಅದರ ಪ್ರಕಾರ, ಇಂದ್ರಿಯ ಪ್ರಚೋದನೆಗಳಿಂದ ನೇರವಾಗಿ ಹುಟ್ಟಿದ ಅನುಭವಗಳ ರೀತಿಯಲ್ಲಿ ಗ್ರಹಿಕೆಯ ಅರ್ಥ ನಿರೂಪಣೆ ಮಾಡಬಹುದು ಉದಾಹರಣೆಗೆ - ಟಿ.ವಿ. ಪರದೆಯು ಹೊರಸೂಸುತ್ತಿರುವ ಗಾಢವಾದ ಹಾಗೂ ತಿಳಿ ವರ್ಣದ ಬೆಳಕಿನ ಚುಕ್ಕೆಗಳನ್ನು ನಾವು ಅಲ್ಲಿ ನೋಡುತ್ತಿರುವ ವ್ಯಕ್ತಿಯ ಚಿತ್ರವೆಂದು ಗ್ರಹಿಸುತ್ತೇವೆ. ಅವನನ್ನು ಒಬ್ಬ ನಾಯಕ ಅಥವಾ ಖಳನಾಯಕನಾಗಿ ನೋಡುತ್ತೇವೆ. ಒಬ್ಬ ಒಳ್ಳೆಯ ಮನುಷ್ಯ ಅಥವಾ ಕೆಟ್ಟವನೆಂದೂ, ಕೆಲವೊಂದು ಭಾವನೆಗಳು ಮತ್ತು ಉದ್ದೇಶಗಳನ್ನು ಹೊಂದಿರುವ ವ್ಯಕ್ತಿಯನ್ನಾಗಿಯೂ ಗುರುತಿಸುತ್ತೇವೆ. ಪರದೆಯ ಮೇಲೆ ಕಾಣಬರುವ ವ್ಯಕ್ತಿಯೊಂದಿಗೆ ನಾವು ಭಾವನೆಗಳನ್ನೂ ಮತ್ತು ಜ್ಞಾನ / ಅರಿವನ್ನೂ ಗುರುತಿಸುತ್ತೇವೆ. ನಿಜ ಜೀವನದ ಪರಿಸ್ಥಿತಿಗಳಲ್ಲಿಯೂ ಹೀಗೆಯೇ. ನಾವು ದಿನನಿತ್ಯವೂ ವ್ಯವಹರಿಸುವ ಜನಗಳು ಕೇವಲ ಚಿತ್ರಗಳೂ ಅಲ್ಲ ಅಥವಾ ವಸ್ತುಗಳೂ ಅಲ್ಲ. ಭಾವನೆಗಳು ಮತ್ತು ಅರಿವುಗಳನ್ನು ನಾವು ಇವರಲ್ಲಿಯೂ ಹೊಂದಿಸುತ್ತೇವೆ. ನಮ್ಮದೇ ಆದ ಭಾವನೆಗಳು ಮತ್ತು ಅವರಿಗೆ ವರ್ಗಾವಣೆ ಮಾಡುತ್ತೇವೆ. ಹೀಗಾಗಿ ಸಾಮಾಜಿಕ ಅಂತರ್ವಾಹನ ಮತ್ತು ಸಾಮಾಜಿಕ ಗ್ರಹಿಕೆಗಳಲ್ಲಿ ಜ್ಞಾನಾತ್ಮಕ ಮತ್ತು ಭಾವನಾತ್ಮಕ ಪ್ರಕ್ರಿಯೆಗಳು ಬಹಳ ಮುಖ್ಯವಾದವು ಎಂದು ಹೇಳಬಹುದು. ಆದ್ದರಿಂದ ಸಾಮಾಜಿಕ ಸಂವಹನದಲ್ಲಿ ಅರಿವಿನ ಪಾತ್ರವು ನಿರ್ಣಾಯಕವಾದ ಅಂಶವಾಗುತ್ತದೆ.

ಗ್ರಹಿಕೆಯ ಅಧ್ಯಯನ - ಮಾನವ ಜೀವಿಗಳು ತಮ್ಮ ಪ್ರಪಂಚವನ್ನು ಅರ್ಥ ಮಾಡಿಕೊಳ್ಳುವ ಬಗೆ ಎಂತು, ಅವರು ಹೇಗೆ ಜ್ಞಾನ ಪಡೆದವರಾಗುತ್ತಾರೆ, ಎಂಬ ಬಹಳ ಹಳೆಯ ಸಮಸ್ಯೆಯ ಅಧ್ಯಯನ. ನಡಾವಳಿಯ ಮನಃಶಾಸ್ತ್ರದ ಕ್ಷೇತ್ರಕ್ಕೆ ಈಗ ಇದು ಸೇರಿಕೊಂಡಿದೆಯಾದರೂ, ಹಿಂದಿನ ದಿನಗಳಲ್ಲಿ ಇದು ಶರೀರಶಾಸ್ತ್ರಜ್ಞರ ಮತ್ತು ಭೌತಶಾಸ್ತ್ರಜ್ಞರ ಕಾರ್ಯಕ್ಷೇತ್ರವಾಗಿತ್ತು. ನಮ್ಮ ಪ್ರಪಂಚವನ್ನು ಅರ್ಥಮಾಡಿಕೊಳ್ಳಲು ಭೌತ ವಿಜ್ಞಾನಗಳಾದ ಭೌತಶಾಸ್ತ್ರ ಮತ್ತು ರಸಾಯನಶಾಸ್ತ್ರಗಳ ಆಧಾರದ ಮೇಲೆ ಭೌತಿಕ ಪ್ರಪಂಚವನ್ನು ಅರ್ಥಮಾಡಿಕೊಂಡರಷ್ಟೇ ಸಾಲದು. ಜೈವಿಕ ಪ್ರಕ್ರಿಯೆಗಳನ್ನು ಅಧ್ಯಯನ ಮಾಡುವುದು ಮತ್ತು ಮನಸ್ಸಿನ ಗ್ರಹಿಕೆ, ನಡವಳಿಕೆಯ ಸಮಸ್ಯೆಗಳನ್ನು ಅಭ್ಯಸಿಸುವುದು ಕೆಳಕಂಡ ಕಾರ್ಯಗಳಿಂದಾಗಿ ಬಹಳ ಮುಖ್ಯವಾಗುತ್ತದೆ.

1. ಯಾವಾಗ ನಮ್ಮ ಅವಲೋಕನಗಳಲ್ಲಿ ಲೋಪದೋಷಗಳು ಉಂಟಾಗುತ್ತವೆಯೋ ಆಗ (ಉದಾಹರಣೆಗೆ, ಕೇವಲ ಕಿಟಕಿಯಿಂದಾಚೆ ಇಣುಕಿ ಹವಾಮಾನವನ್ನು ತೀರ್ಮಾನ ಮಾಡುವುದರಿಂದ, ಆಗ ಇಳಿಯುವ ವಿಮಾನ ಅಪಘಾತಕ್ಕೀಡಾಗಬಹುದು ಎಂಬ ಅನಿಸಿಕೆ). ಅದೇ ರೀತಿಯಾಗಿ, ವಾಹನಗಳ ನಡುವೆ ಇರುವ ಜಾಗ ಅಥವಾ ರಸ್ತೆಯ ಅಂಚಿಗೆ ಇರುವ ಜಾಗದ ಪ್ರಮಾಣವನ್ನು ಚಾಲಕರು ಸರಿಯಾಗಿ ನಿರ್ಣಯಿಸದೆ ಹೋದಾಗ ರಸ್ತೆ ಅಪಘಾತ ಸಂಭವಿಸಬಹುದು.

   ಆದರೆ ನಿರ್ಣಯದಲ್ಲಿನ ಲೋಪದೋಷಗಳು ಭೌತಿಕ ರೂಪಗಳಿಗೆ ಮಾತ್ರ ಸಂಬಂಧ ಹೊಂದಿರದೆ, ಸಾಮಾಜಿಕ ಸನ್ನಿವೇಶಗಳಿಗೂ ಅನ್ವಯವಾಗುತ್ತದೆ. ಕೆಲವೊಂದು ಕಾರ್ಪೊರೇಟ್, ರಾಜಕೀಯ ನಿರ್ಣಯಕಾರರು, ಸನ್ನಿವೇಶವೊಂದಕ್ಕೆ ಸಂಬಂಧಿಸಿದಂತೆ ತಮ್ಮ ತಪ್ಪುಜ್ಞಾನ ಮತ್ತು ಗ್ರಹಿಕೆಯಿಂದ ಯಾವುದೋ ವಿಷಯವನ್ನು ಆರಂಭಿಸುತ್ತಾರೆ ಮತ್ತು ಆದರಿಂದಾಗಿ ಸಾಮಾಜಿಕ ಅಶಾಂತಿಯನ್ನು ಹುಟ್ಟು ಹಾಕುತ್ತಾರೆ. ಕಾಣುವ ಪ್ರಪಂಚ ಮತ್ತು ನಿಜ ಪ್ರಪಂಚಗಳ ನಡುವಿನ ವೈಪರೀತ್ಯಗಳು ಹುಟ್ಟಲು ಕಾರಣ ಜ್ಞಾನ / ಗ್ರಹಿಕೆಯಲ್ಲಿರುವ ಲೋಪದೋಷಗಳು.

2. ನಾವು ನಮ್ಮ ಇಂದ್ರಿಯಗಳನ್ನು ನಂಬಬಹುದೇ. ಶತಮಾನಗಳಿಂದಲೂ ವಿಜ್ಞಾನಿಗಳು ಮತ್ತು ತತ್ವಶಾಸ್ತ್ರಜ್ಞರನ್ನು ಕಾಡುತ್ತಿರುವ ಪ್ರಶ್ನೆ ಇದು. ತಪ್ಪುಗ್ರಹಿಕೆಗಳು ಮತ್ತು ಭ್ರಮೆಗಳಿಂದ ಉಂಟಾಗುವ ಸಂಗತಿ, ಸನ್ನಿವೇಶಗಳನ್ನು ನಾವೆಲ್ಲರೂ ಎದುರಿಸಿದ್ದೇವೆ. ಆದ್ದರಿಂದ ಗ್ರಹಿಕೆ ಮತ್ತು ಜ್ಞಾನಾತ್ಮಕ ಪ್ರಕ್ರಿಯೆಗಳ ಅಧ್ಯಯನ ಬಹಳ ಮುಖ್ಯವಾದುದು ಎನಿಸುತ್ತದೆ.

   ಮಾಧ್ಯಮೀಯ ಸಂವಹನದ ವಿದ್ಯಾರ್ಥಿಗಳಿಗೆ ಈ ಅಧ್ಯಯನವು ವಿಶೇಷವಾಗಿ ಪ್ರಸಕ್ತವಾದುದು. ಮಾಧ್ಯಮ ಪ್ರಪಂಚ ಅದರಲ್ಲೂ ಮುಖ್ಯವಾಗಿ ಚಲನಚಿತ್ರ ಮತ್ತು ಟಿವಿ / ವಿಡಿಯೋ ಪ್ರಪಂಚವು, ಚಲಿಸುವ ಹಾಗು ಸ್ಥಿರ ಕ್ಯಾಮರಾಗಳು, ಚಿತ್ರಗಳ ಮೂಲಕ ಸೃಷ್ಟಿ ಆಗುವ ಭ್ರಮಾತ್ಮಕ ಪ್ರಪಂಚವೇ. ವಿಶೇಷವಾಗಿ ರಚಿಸಲಾಗಿರುವ ಬದಲಿಗಳು ಅಥವಾ ಪರ್ಯಾಯಗಳಿಂದ ತುಂಬಲ್ಪಡುವ, ಇಚ್ಛೆಯಂತೆ ಬದಲಾಯಿಸುವ ಪ್ರಪಂಚ ಇದು. ಆದರೆ, ಇದಕ್ಕೆ ವೀಕ್ಷಕರಾದ ನಾವು ಇದು ವಾಸ್ತವದ ನೈಜ ಮತ್ತು ಅಥವಾ ಘಟನೆ ಎಂಬಂತೆ ಪ್ರತಿಕ್ರಿಯಿಸುತ್ತೇವೆ.

3. ನೈಜವಾದ ರೀತಿಯಲ್ಲಿ ಘಟನೆ / ಸಂಗತಿಗಳನ್ನು ರಚನೆ ಮಾಡಬಹುದು. ಯಾವುದೇ ರೀತಿಯ ಕೃತಕತೆಯನ್ನು ನಾವು ಹೊರಗೆ ಕಾಣಲಾಗುವುದಿಲ್ಲ. ಟಿ.ವಿ. ವಾರ್ತೆಗಳು - ಒಂದು ರಚಿತವಾದಂತಹ ನೈಜತೆ, ತಮ್ಮಂತಾವೇ ಸಂಪೂರ್ಣ ನೈಜರೂಪದವಲ್ಲ. ನಿಜವೆಂದರೆ, ಎಲ್ಲ ಸುದ್ದಿಗಳೂ ರಚಿತವಾದ ನೈಜ ರೂಪಗಳೇ. ಛಾಯಾಚಿತ್ರಗಳ ಬಗ್ಗೆ ಹೇಳುವುದಾದರೂ ಏನು? "ಘಟನೆ / ಸಂಗತಿಯ ಕೆಲವೊಂದು ಅಂಶಗಳನ್ನು ಮಾತ್ರ ಆಯ್ಕೆ ಮಾಡಿಕೊಂಡು, ಉಳಿದ ಕೆಲವು ಅಂಶಗಳನ್ನು ಹೊರಬಿಟ್ಟು, ಅದರ ಆಧಾರದ ಮೇಲೆಯೇ ನೈಜತೆಯ ಒಂದು ರೂಪವನ್ನು ಕ್ಯಾಮರಾ ಸೃಷ್ಟಿಸಬಲ್ಲದು.

4. ಸ್ವಯಂಚಾಲಿತವಾದ ಬಾಗಿಲು ತೆಗೆಯುವ ವ್ಯವಸ್ಥೆಯು ನಿಮ್ಮನ್ನೇನೂ ನೋಡಬೇಕಾಗಿಲ್ಲ. ಬಹಳ ಹೆಚ್ಚು ರಕ್ಷಣೆ ಒದಗಿಸಲಾದ ಬ್ಯಾಂಕೊಂದರ ಬಾಗಿಲಲ್ಲಿ ಇರುವ ಕಾವಲುಗಾರನೊಬ್ಬ ನಿಮ್ಮನ್ನು ನೋಡಬಹುದು, ತಡೆಯಬಹುದು ಮತ್ತು ಪ್ರಶ್ನಿಸಬಹುದು. ಆದರೆ, ನೀವು ಬಾಗಿಲಿನ ಬಳಿಗೆ ಬಂದೊಡನೆಯೇ ಸ್ವಯಂಚಾಲಿತವಾದ ಸಾಧನವು ನಿಮಗಾಗಿ ಬಾಗಿಲನ್ನು ತೆರೆಯುತ್ತದೆ. ಯಂತ್ರ ಅಥವಾ ವಿದ್ಯುನ್ಮಾನ ಸಾಧನವನ್ನು ಬಾಗಿಲಿನ ಕಡೆಗೆ ಬರುತ್ತಿರುವ ಕನಿಷ್ಠ ತೂಕದ ಮಾನವನನ್ನು ಗ್ರಹಿಸುತ್ತದೆ. ಒಂದು ಬೆಕ್ಕು, ಅಥವಾ ನಾಯಿ ಬಾಗಿಲಿನ ಬಳಿ ಬಂದರೆ, ಅದು ಬಾಗಿಲು ತೆರೆಯದೆ ಇರಬಹುದು. ಆದರೆ, ಈ ರೀತಿಯಾಗಿ ಮಾನವ ಮನವನ್ನು ತೆರೆಯುವ ಪ್ರೋಗ್ರಾಂ ಮಾಡಲ್ಪಟ್ಟಿವನಲ್ಲ. ನಮ್ಮ ಮೇಲೆ ಪ್ರಭಾವ ಬೀರುವ ಕಾರ್ಯ ಮಾಡುತ್ತಿರುವ ಸಾಮಾಜಿಕ ಶಕ್ತಿಗಳಿವೆ. ನಮ್ಮ ಮನಸ್ಸು ಒಂದು ರೀತಿಯಾಗಿ ಗ್ರಹಿಸುತ್ತದೆ ಮತ್ತು ಜ್ಞಾನವು ಬೇರೆ ರೀತಿಯಾಗಿ ವರ್ತಿಸುತ್ತದೆ. ಆದ್ದರಿಂದ, ನಮ್ಮ ಮನಸ್ಸಿನ ಮೇಲೆ ಕೆಲಸ ಮಾಡುವ ಮತ್ತು ನಮ್ಮ ಆಲೋಚನೆಗಳು ಹಾಗು ಕಾರ್ಯಗಳನ್ನು ರೂಪಿಸುವಂತಹ ಸಾಮಾಜಿಕ ಮತ್ತು ಜೈವಿಕ ಪ್ರಕ್ರಿಯೆಗಳನ್ನು ಅರ್ಥ ಮಾಡಿಕೊಳ್ಳುವುದು ಅತಿ ಅವಶ್ಯಕ.

5. ನಮ್ಮ ಗ್ರಹಿಕೆ ಮತ್ತು ಜ್ಞಾನಗಳಿಕೆ, ನಮ್ಮ ಗ್ರಹಣೇಂದ್ರಿಯಗಳು ದ್ವಾರ ಮಾರ್ಗಗಳಿದ್ದಂತೆ ಎಂಬುದನ್ನು ನಾವು ತಿಳಿದಿದ್ದೇವೆ. ಅವುಗಳು ಸರಿಯಾದ ರೀತಿಯಲ್ಲಿ ಕಾರ್ಯನಿರ್ವಹಿಸಬೇಕು. ಕಣ್ಣು, ಕಿವಿ, ಚರ್ಮ, ನಾಲಿಗೆ ಮತ್ತು ಮೂಗು - ಈ ಗ್ರಹಣೇಂದ್ರಿಯಗಳು ಹೊರ ಪ್ರಪಂಚದ ಚಿತ್ರಗಳನ್ನು ತಮ್ಮಂತಾವೇ ಮೆದುಳಿಗೆ ನೀಡುತ್ತವೆ ಎಂದು ನಮ್ಮಲ್ಲಿ ಕೆಲವರು ಕಲ್ಪಿಸಿಕೊಂಡಿರಬಹುದು. ಆದರೆ, ಇದು ಸಂಪೂರ್ಣವಾಗಿ ಹೀಗಲ್ಲ, ಇವುಗಳು ಬಹಳ ಕಷ್ಟದ, ಜಟಿಲವಾದ ಪ್ರಶ್ನೆಗಳು. ಜ್ಞಾನ, ಗ್ರಹಿಕೆ, ಕಲಿಕೆ ಮತ್ತು ಸಂವಹನ ಪ್ರಕ್ರಿಯೆಗಳನ್ನು ಸ್ಪಷ್ಟವಾಗಿ ಅರ್ಥ ಮಾಡಿಕೊಳ್ಳಲು ಮನಃಶಾಸ್ತ್ರೀಯ, ಜೈವಿಕ ಮತ್ತು ತಾತ್ವಿಕ ಅಂಶಗಳನ್ನು ಅರಿಯ ಬೇಕಾಗುತ್ತದೆ.

## 4.2 ಪ್ರಕೃತಿ, ಪರಿಸರ ಮತ್ತು ಸಂಸ್ಕೃತಿ

ಮಾನವನ ಮನಸ್ಸಿನ ಜ್ಞಾನ ಮತ್ತು ಗ್ರಹಿಕೆಯ ಸಂಪೂರ್ಣ ಕ್ಷೇತ್ರವು, ನಾವು ಏನಾಗಿದ್ದೇವೆ (ಮಾನವನ ಪ್ರಕೃತಿ), ನಾವು ಯಾವುದರಿಂದ ಆವೃತರಾಗಿದ್ದೇವೆ (ಪರಿಸರ) ಮತ್ತು ಜೀವದಲ್ಲಿ ಹೇಗೆ ಬದುಕುತ್ತಿದ್ದೇವೆ (ಸಂಸ್ಕೃತಿ) ಎಂಬುದಕ್ಕೆ ಸಂಬಂಧಿಸಿದೆ.

ನಾವು ಪ್ರಕೃತಿಯ ಬಗ್ಗೆ ಮಾತನಾಡುವಾಗ - ನಾವು ಮೊದಲಿಗೆ ಹೇಳುವುದೇ ಮಾನವನ ಜೀವನದ ವಿಶೇಷವಾದ (ಸ್ಥಳಕ್ಕೆ ಸಂಬಂಧಿಸಿದೇ ರಂಗದ ಬಗ್ಗೆ, ನಿಸರ್ಗ ಎಂದರೆ ನಾವು ಅರ್ಥ ಮಾಡುವುದು ಜೀವಂತ ವಸ್ತುಗಳ ಜೈವಿಕ ಗುಣವಿಶೇಷಣಗಳು ಮತ್ತು ಅವು ಗುರುತಿಸುವ ಜೀವನದ ಪ್ರಾಪಂಚಿಕ (ಕಾಲ ಸೂಚಕ) ಅಂಶಗಳ ಬಗ್ಗೆ. ಸಂವಹನ, ಸಂಸ್ಕೃತಿ ಮತ್ತು ಜೀವನದ ಇಂತಹ ಇತರ ಅಂಶಗಳು, ಭೌತಿಕ ಮತ್ತು ಜೈವಿಕ ಶಕ್ತಿಗಳೊಡನೆ ಒಳಗೆ ಮತ್ತು ಹೊರಗೆ ಬಹಳ ನಿಕಟವಾಗಿ ಬೆಸೆದುಕೊಂಡಿದ್ದು, ಕಾಲವು ಕಳೆದಂತೆ ಅವು ಜೀವನದಿಂದ ಮರಣದೆಡೆಗೆ ಸಾಗಿ ಮತ್ತೆ ಜನ್ಮ ತಳೆಯುತ್ತವೆ. ಚಕ್ರ ಮುಂದೆ ಸಾಗುತ್ತದೆ.

ಕಾಲ, ದೇಶಗಳಿಗೆ ಪ್ರತಿಯಾಗಿ ನಿಂತುಕೊಂಡಿರುವ ಮಾನವರನ್ನು ವಿಕಾಸಹೊಂದುತ್ತಿರುವ ಮತ್ತು ಪರಿಸರದ ಭಾಗವಾಗಿ ಇದ್ದುಕೊಂಡು ಅದಕ್ಕೆ ಹೊಂದಿಕೊಳ್ಳುತ್ತಿರುವ ಜೀವಿಗಳೆಂದು ತಿಳಿಯಬಹುದಾಗಿದೆ. ಇಡೀ ವಿಶ್ವವನ್ನೇ ನಮ್ಮ ಪರಿಸರ ಎಂದು ನಾವು ತಿಳಿದುಕೊಂಡರೆ, ವಿಶ್ವವಿಕಾಸದ ಘಟನೆ / ಸಂಗತಿಗಳೊಂದಿಗೆ ನಾವು ಹೇಗೆ ಸಂಬಂಧ ಹೊಂದಿದ್ದೇವೆ ಎಂಬುದನ್ನು ನೋಡಬಹುದು.

ಆದರೆ, ನಮ್ಮ ಸನಿಹದ ಪರಿಸರಕ್ಕೆ ಹೆಚ್ಚಾಗಿ ಬೆಸೆದುಕೊಂಡಿರುವುದರಿಂದ ಸಾವಯವ ವಿಕಾಸ ಅಥವಾ ಭೂಗ್ರಹದ ಮೇಲಿನ ಜೀವ ವಿಕಾಸದ ಘಟನೆಗಳ ಭಾಗವಾಗಿಬಿಡುತ್ತೇವೆ. ಅದರಿಂದಾಗಿ ಸಾಮಾಜಿಕ ಮತ್ತು ಮನೋವಿಕಾಸದ ಭಾಗವೂ ಸಹ ಆಗಿ ಹೋಗುತ್ತೇವೆ. ಹಲವಾರು ಮಿಲಿಯನ್ ವರ್ಷಗಳಷ್ಟು ಕಾಲದಲ್ಲಿ ಕೇವಲ ಭೌತಿಕ ಪ್ರಕೃತಿಯನ್ನಷ್ಟೇ ಅಲ್ಲದೆ ಮಾನವ ಸ್ವಭಾವವನ್ನು ಪರಿವರ್ತನೆ ಮಾಡುವುದರಲ್ಲಿಯೂ ಮಾನವರು ಯಶಸ್ವಿಯಾಗಿದ್ದಾರೆ.

ಮಾನವ ಜೀವಿಯ ಮೇಲೆ ಪ್ರಭಾವ ಬೀರುವ ಎಲ್ಲ ಅಂಶಗಳನ್ನೂ ಒಟ್ಟಾರೆಯಾಗಿ ಮಾನವನ ಪರಿಸರವು ಒಳಗೊಳ್ಳುತ್ತದೆ. ಒಂದು ಜೀವಂತ ಪ್ರಾಣಿಯು ಆಂತರಿಕವಾಗಿ ಮತ್ತು ಬಾಹ್ಯದಲ್ಲಿ ಪ್ರತಿಕ್ರಿಯೆ ಸೂಸುವ ಎಲ್ಲ ಪ್ರಚೋದನೆಗಳನ್ನೂ ಅದು ವ್ಯಾಪಿಸಿಕೊಂಡಿರುತ್ತದೆ. ಮಾನವ ಜೀವಿಗಳ ಮೇಲೆ ಕೆಲಸ ಮಾಡುವ ಬಾಹ್ಯ ಪ್ರಭಾವಗಳೆಂದರೆ, ಭೌತಿಕ ಮತ್ತು ರಾಸಾಯನಿಕ ಶಕ್ತಿಗಳು ಮತ್ತು ಇತರ ಮಾನವರೊಂದಿಗಿನ ಸಂಪರ್ಕದಿಂದ ರೂಪುಗೊಳ್ಳುವ ಸಾಮಾಜಿಕ ಮತ್ತು ಸಾಂಸ್ಕೃತಿಕ ಶಕ್ತಿಗಳು. ಆಂತರಿಕ ಪ್ರಭಾವಗಳು ಮೂಲದ ಮತ್ತು ಕಲಿಕೆಯಿಂದ ಬಂದ ಪ್ರೇರಣೆಗಳು. ಕಲಿಕೆಯಿಂದ ಬಂದ ಪ್ರೇರಣೆಗಳು ಸಾಮಾಜಿಕ -ಸಾಂಸ್ಕೃತಿಕ ಬಾಹ್ಯ ಪ್ರಪಂಚದಿಂದ ವಿನ್ಯಾಸಗೊಂಡಿದ್ದರೂ ಸಹ ಕೊನೆಯಲ್ಲಿ ತಮ್ಮದೇ ರೀತಿಯಲ್ಲಿ ಅವುಗಳೂ ಸಹ ಪ್ರಭಾವೀ ಅಂತಃ ಶಕ್ತಿಗಳಾಗಿಬಿಡುತ್ತವೆ.

ಭೌತಿಕ ಪರಿಸರವು ಸಂಸ್ಕೃತಿಯ ಮೇಲೆ ಪ್ರಭಾವ ಬೀರುತ್ತದೆ. 200 ವರ್ಷಗಳಿಗೂ ಹಿಂದೆ, ಭೂಮಿಯ ಮೇಲೆ ಒಟ್ಟಾರೆಯಾಗಿ ಒಂದು ಬಿಲಿಯನ್ (ನೂರು ಕೋಟಿ) ಮಂದಿ ಇದ್ದರು. ಆದರೆ ಇಂದು, ಭಾರತದಲ್ಲೇ ಒಂದು ಬಿಲಿಯನ್ನಿಗೂ ಹೆಚ್ಚು ಜನಸಂಖ್ಯೆಯಿದ್ದು, ಪ್ರಪಂಚದಲ್ಲಿ ಒಟ್ಟಾರೆಯಾಗಿ ಆರು ಬಿಲಿಯನ್ (600 ಕೋಟಿ) ನಷ್ಟು ಜನರಿದ್ದಾರೆ. ಇಷ್ಟೊಂದು ಜನ ತಾವು ಬದುಕಲು, ತಮ್ಮನ್ನು ತಾವು ಆಶ್ರಯಿಸಿಕೊಳ್ಳಲು ಏನು ಮಾಡುತ್ತಾರ ಎಂಬುದು ಇಪ್ಪತ್ತೊಂದನೆಯ ಶತಮಾನದಲ್ಲಿ ಮಾನವ ವರ್ಗದ ಸಂಸ್ಕೃತಿಯನ್ನು ನಿರ್ಧರಿಸುತ್ತದೆ. ಆದರೆ, ಹಳೆ ಶಿಲಾಯುಗದ ಕಾಲದ (10,000ದಿಂದ 12,000 ವರ್ಷಗಳಷ್ಟು ಹಳೆಯದಾದ) ಸಂಸ್ಕೃತಿಯ ಪ್ರಭಾವಗಳೇ ನಾವು ಇಂದು ಜೀವಿಸುತ್ತಿರುವ ಪರಮಾಣು, ಅಂತರಿಕ್ಷ ಅಥವಾ ಮಾಹಿತಿಯುಗದವರೆಗೂ ನಮ್ಮನ್ನು ತಂದು ನಿಲ್ಲಿಸಿವೆ.

ನಾವು ಏನನ್ನು ಅಭಿವೃದ್ಧಿ ಎಂದು ಕರೆಯುತ್ತೇವೆಯೋ ಅಲ್ಲಿಗೆ ನಮ್ಮನ್ನು ತಂದಿರುವುದು ಲೋಹಗಳಾಗಲೀ, ವಿಜ್ಞಾನ ಅಥವಾ ಮಾಹಿತಿಯಾಗಲೀ ಅಲ್ಲ - ಎಂಬುದನ್ನು ನಾವು ನೆನಪಿನಲ್ಲಿಟ್ಟುಕೊಳ್ಳಬೇಕು (ನಿಜವಾದ ಅರ್ಥದಲ್ಲಿ ಇದು ಅಭಿವೃದ್ಧಿಯೇ ಅಲ್ಲ. ಏಕೆಂದರೆ, ಈ ಎಲ್ಲ ಬೆಳವಣಿಗೆಗಳೂ ಮಿಲಿಯಾಂತರ ಜನಗಳಿಗೆ ಸುಖ ಮತ್ತು ಭೋಗ ವಿಲಾಸಗಳನ್ನು ತಂದಿರುವಂತೆಯೇ, ಬಹಳ ಹೆಚ್ಚಿನ ಜನರಿಗೆ ಸಾವು ಮತ್ತು ವಿನಾಶ, ವಿಪತ್ತುಗಳನ್ನೂ ತಂದೊಡ್ಡಿದೆ). ಭೂಗರ್ಭದಿಂದ ಲೋಹಗಳನ್ನು ಹೊರತಂದದ್ದು ಮತ್ತು ವಿದ್ಯುನ್ಮಾನ ರೀತ್ಯಾ ಮಾಹಿತಿಯನ್ನೂ ವರ್ಗಾವಣೆ ಮಾಡುವುದೂ ಸೇರಿದಂತೆ ವೈಜ್ಞಾನಿಕ ಮತ್ತು ತಂತ್ರಜ್ಞಾನಾತ್ಮಕ ಸಾಧನಗಳನ್ನು ಆವಿಷ್ಕಾರ ಮಾಡಿರುವುದು ಮಾನವನ ಚಾತುರತೆಗೆ ಸಾಕ್ಷಿ.

ಮಾನವ ಜೀವಿಗಳು ಪ್ರಾಣಿಗಳಿಗಿಂತ ಭಿನ್ನವಾಗಿ, ಸಂಸ್ಕೃತಿಯನ್ನು ರೂಪಿಸುವಂತಹ ಸಾಮಾಜಿಕ ಗುಂಪುಗಳಲ್ಲಿ ಜೀವಿಸುತ್ತಾರೆ. ಸಾಂಸ್ಕೃತಿಕ ಒತ್ತಡದ ಅಡಿಯಲ್ಲಿ ಅವರು ಜಾನಪದ, ಜೀವನದ ಜಾನಪದಗಳು, ನೈತಿಕ ಮಾನಕಗಳು, ಸಾಮಾಜಿಕ ಸಂಸ್ಥೆಗಳು, ಕಾನೂನುಗಳು ಇತ್ಯಾದಿಯಾದವುಗಳನ್ನು ರೂಪಿಸಿಕೊಳ್ಳುತ್ತಾರೆ. ಹೀಗಾಗಿ, ಸಾಮಾಜಿಕ ಮತ್ತು ಸಾಂಸ್ಕೃತಿಕ ಜೀವನವು ಮಾನವನ ಜೀವನಕ್ಕೆ ಮೂಲಭೂತವಾದುದು ಮತ್ತು ಜೀವನದ ಭೌತಿಕ ಮತ್ತು ಜೈವಿಕ ಪ್ರಕೃತಿಯಷ್ಟೇ ಅಥವಾ ಅದಕ್ಕಿಂತ ಹೆಚ್ಚು ಪ್ರಮುಖವಾದುದು ಎಂಬುದನ್ನು ನಾವು ನೋಡಬಹುದು.

ನಿಸರ್ಗದ ಶಕ್ತಿ (ಸೂರ್ಯ, ಚಂದ್ರ, ನಕ್ಷತ್ರಗಳು, ಗಾಳಿ, ಪರ್ವತಗಳು, ಬೆಂಕಿ, ಸಾಗರಗಳು, ನದಿಗಳು ಮತ್ತು ಪ್ರಾಣಿಗಳು)ಗಳು ಪೂಜೆಯ ವಸ್ತುಗಳಾಗುತ್ತವೆ. ಯಾವುದಾದರೂ ನಿರ್ದಿಷ್ಟ ಪಂಗಡವೊಂದು ಅವುಗಳ ಬಗ್ಗೆ ಒಂದು ರೀತಿಯ ಮನೋವರ್ತನೆಯನ್ನು ಬೆಳೆಸಿಕೊಂಡಾಗ ಸಾಂಸ್ಕೃತಿಕ ರೂಪಗಳಾಗುತ್ತವೆ.

## 4.3 ಮಾನವ ಜೀವಿಗಳ ಮೂಲ ಸ್ವಭಾವ

ಮುಂದಿನ ಸಾಮಾಜಿಕ ಸನ್ನಿವೇಶದಲ್ಲಿನ ಸಂಕೀರ್ಣವಾದ ನಡಾವಳಿಯನ್ನು ನಿರ್ಧರಿಸುವಂತಹ ಯಾವುದೇ ನಿರ್ದಿಷ್ಟ ರೀತಿಯ ನಡವಳಿಕೆಯ ನಮೂನೆಗಳೂ ಇರುವುದಿಲ್ಲ ಎಂಬುದನ್ನು ಮನಃಶಾಸ್ತ್ರಜ್ಞರು ಸಾಧಾರಣವಾಗಿ ಒಪ್ಪುತ್ತಾರೆ. ಬೇರೆ ಪದಗಳಲ್ಲಿ ಹೇಳುವುದಾದರೆ ಅಲ್ಲಿ ಅನುವಂಶಿಕ ಅಂಶಗಳು ವ್ಯಕ್ತಿಯ ಸಾಮಾಜಿಕ ನಡಾವಳಿಗಳನ್ನು ನಿರ್ಧರಿಸುವುದಿಲ್ಲ.

ಹುಟ್ಟಿನಲ್ಲಿ, ಮಾನವ ಜೀವನವು ಮಾಂಸ ಮತ್ತು ಮೂಳೆಗಳನ್ನೂ, ದುಗ್ಧರಸ ಮತ್ತು ರಕ್ತ ವ್ಯವಸ್ಥೆಯನ್ನು ಒಂದು ನಿರ್ನಾಳ ಗ್ರಂಥಿಗಳ ವ್ಯವಸ್ಥೆ ಮತ್ತು ನರಮಂಡಳವನ್ನು ಒಳಗೊಂಡಿರುತ್ತದೆ. ಮೆದುಳು ಮತ್ತು ಜೀವದ ಪ್ರತಿಯೊಂದು ಜೀವಂತ ಭಾಗವನ್ನೂ ತಲುಪುವ ನರಗಳ ಜಾಲವನ್ನು ನರಮಂಡಳವು ಹೊಂದಿರುತ್ತದೆ.

ಮಾನವ ಜೀವಿಯ ಮೂಲ ಸ್ವರೂಪಗಳು ಮುಖ್ಯವಾಗಿ ಮಾನವನ ಮೂಲ ಸ್ವಭಾವಕ್ಕೆ ಕಾರಣವಾಗುಂತಹವು. ರೆಪ್ಪೆ ಬಡಿಯುವುದು, ಎವೆಯಿಕ್ಕಿ ನೋಡುವುದು, ಸೀನುವುದು, ಚೀಪುವುದು, ಜಿಗ್ಗುವಿಕೆ ಮೊದಲಾದಂತಹ ವಿವಿಧ ರೀತಿಯ ಸರಳ ಪ್ರತಿಕ್ರಿಯೆಗಳನ್ನು ಇದು ಒಳಗೊಳ್ಳುತ್ತದೆ. ಈ ಪ್ರತಿಕ್ರಿಯೆಗಳನ್ನು ಅನುದ್ದಿಷ್ಟ ಪ್ರತಿಕ್ರಿಯೆಗಳು ಎಂದೂ ಕರೆಯಲಾಗುತ್ತದೆ. ಆದರೆ, ಇದರೊಂದಿಗೆ ಸಂಕೀರ್ಣವಾದ ಸ್ವಯಂಚಾಲಿತ ಮತ್ತು ಅನುವಂಶಿಕವಾದ ಚಾಲನೆಗಳನ್ನು ಆಧರಿಸಿದ ನಿರ್ದಿಷ್ಟ ಪ್ರತಿಕ್ರಿಯೆಗಳು ಎಂದು ಕರೆಯಲಾಗುವ ಸಹಜ ಪ್ರವೃತ್ತಿಗಳನ್ನು ಮಾನವನ ಮೂಲ ಸ್ವಭಾವವು ಒಳಗೊಳ್ಳುತ್ತದೆ.

ಮೂಲ ಸಹಜ ಪ್ರವೃತ್ತಿಗಳು ಹಸಿವು, ಭಯ, ನಿದ್ರೆ, ವಿಸರ್ಜನೆ, ಮೈಥುನ, ವಾಂಛೆ ಇತ್ಯಾದಿಗಳೆಲ್ಲವನ್ನೂ ಒಳಗೊಳ್ಳುತ್ತದೆ. ಯಾವಾಗ ಮೂಲ ಪ್ರವೃತ್ತಿಗಳು ತಣಿಯುವುದಿಲ್ಲವೋ ಆಗ ಕೋಪ ಹುಟ್ಟುತ್ತದೆ. ಪರಿಚಿತದಲ್ಲಿ ಸನ್ನಿವೇಶಗಳು ಎದುರಾದಾಗ, ಆತಂಕ, ಹೆದರಿಕೆ, ತಪ್ಪಿಸಿಕೊಳ್ಳುವ ಪ್ರವೃತ್ತಿ ಅಥವಾ ಪಾರುಮಾಡಿಕೊಳ್ಳುವ ಅಥವಾ ತಪ್ಪಿಸಿಕೊಳ್ಳುವ ಕ್ರಿಯೆ ಮಾಡಲು ಜನರು ಮುಂದಾಗುತ್ತಾರೆ. ಆದರೆ, ಹಲವಾರು ನಡಾವಳಿಗಳನ್ನು ನಾವು ಅನುಭವದಿಂದ ಕಲಿಯುತ್ತೇವೆ. ನಮ್ಮ ಅಭಿವೃದ್ಧಿಯು ಅವಶ್ಯವಾಗಿ ಕಲಿಕೆಯು ಮತ್ತು ಜ್ಞಾನಾತ್ಮಕವಾದ ಒಂದು ಪ್ರಕ್ರಿಯೆ. ನಾವು ಹೊಸ ಜ್ಞಾನವನ್ನು ಕ್ರೋಢೀಕರಿಸಿಕೊಳ್ಳುತ್ತೇವೆ ಮತ್ತು ನಮ್ಮ ಪ್ರತಿಕ್ರಿಯೆಗಳ ವ್ಯಾಪ್ತಿ ಹಾಗೂ ನಡಾವಳಿಯ ರೀತಿಗಳನ್ನು ಹಿಗ್ಗಿಸಿಕೊಳ್ಳುತ್ತೇವೆ. ಅಂಗ ಸಂಬಂಧಿ ಅವಶ್ಯಕತೆಗಳನ್ನು ತೃಪ್ತಿಗೊಳಿಸುವಂತಹ ಪ್ರಥಮ ಪ್ರತಿಕ್ರಿಯೆಗಳಾದ ಅನುದ್ದಿಷ್ಟ ಪ್ರತಿಕ್ರಿಯೆಗಳಿಂದ ಆರಂಭಿಸಿ, ನಾವು ಸಂಕೀರ್ಣವಾದಂತಹ ಹವ್ಯಾಸಗಳನ್ನು ಕಲಿತುಕೊಳ್ಳುತ್ತೇವೆ ಮತ್ತು ಸರಳವಾದ ಕಂಠಸ್ಥ ಧ್ವನಿಗಳಿಂದ ಇತಿಹಾಸ ಮತ್ತು ಸಾಹಿತ್ಯ ಇತ್ಯಾದಿಗಳಿಗೆ ದಾರಿತೋರುವಂತಹ ಸಾಂಕೇತಿಕ ಭಾಷೆಯ ಪ್ರತಿಕ್ರಿಯೆಗಳನ್ನು ನಾವು ಬೆಳೆಸಿಕೊಳ್ಳುತ್ತೇವೆ. ಇವೆಲ್ಲವೂ ಜ್ಞಾನವನ್ನು ಹೀರಿಕೊಳ್ಳುವ ನಮ್ಮ ಮೆದುಳಿನ ಸಾಮರ್ಥ್ಯ - ಅರಿವಿನ ಮೇಲೆ ನಿರ್ಧಾರವಾಗಿರುತ್ತದೆ.

## 4.4 ಸಂವಹನ ಮತ್ತು ಜ್ಞಾನ

ಹೀಗಾಗಿ, ಸಮಾಜದಲ್ಲಿ ಮಾನವನ ನಡಾವಳಿಯು ಸಾಧ್ಯವಾಗಿರುವುದು - ದೇಹದ ಎಲ್ಲಾ ಭಾಗಗಳಿಗೂ ತಲುಪುವಂತಹ ಸಂಕೀರ್ಣ ವ್ಯವಸ್ಥೆಯಾದ ನರಮಂಡಲದಿಂದ ಎಂಬುದನ್ನು ನಾವು ನೋಡಬಹುದು.

ಭೌತಿಕ ಮತ್ತು ಸಾಮಾಜಿಕ ಪರಿಸರದ ಪ್ರಚೋದನೆಯು ದೇಹದ ಎಲ್ಲೆಡೆ ಇರುವಂತಹ ವಿಶೇಷವಾದ ಗ್ರಾಹಿಗಳಿಂದ ನರಗಳ ವಿದ್ಯುತ್ - ರಾಸಾಯನಿಕ ರೀತಿಯ ಪ್ರೇರಣೆಗಳಾಗಿ ಪರಿವರ್ತನೆ ಹೊಂದುತ್ತವೆ. ಬೆಳಕು, ಶಬ್ದ, ಒತ್ತಡ, ತಾಪಮಾನದ ಏರುಪೇರುಗಳು ಮತ್ತು ರಾಸಾಯನಿಕ ಪ್ರಚೋದನೆಗಳಂತಹ ಆಂತರಿಕ ಮತ್ತು ಬಾಹ್ಯಸ್ಥಿತಿಗಳಿಗೆ ಈ ಗ್ರಾಹಿಗಳು ಸಂವೇದನಾಶೀಲವಾಗಿರುತ್ತವೆ.

ಗ್ರಾಹಿಗಳು, ಒಳಬರುವ ಪ್ರೇರಣೆಗಳನ್ನು ಕೇಂದ್ರ ನರಮಂಡಲ - ಮಿದುಳು ಮತ್ತು ಬೆನ್ನುಹುರಿಗಳಿಗೆ ರವಾನೆ ಮಾಡುವಂತಹ ಪ್ರತಿಯೊಂದು ನರತಂತುವಿನೊಂದಿಗೆ ಜೋಡಣೆ ಹೊಂದಿರುತ್ತವೆ.

ಮಾನವನ ಶರೀರದ ಒಳಗೆ ನಡೆಯುವ ಸಂಪರ್ಕ ವ್ಯವಸ್ಥೆಯ ಸರಳೀಕೃತವಾದ ಒಂದು ರೂಪವೆಂದರೆ - ಬಾಗಿಲ ಕರೆಗಂಟೆಯು ಬಾರಿಸುವುದು. ಆದರೆ, ಪ್ರಚೋದನೆ ಮತ್ತು ಪ್ರತಿಕ್ರಿಯೆಗಳು ಬಹಳ ಸಂಕೀರ್ಣ ಹಾಗೂ ಜಟಿಲವಾದವು 'ನ್ಯೂರಾನ್'ಗಳೆಂದು ಕರೆಯಲ್ಪಡುವ ಬಿಲಿಯಾಂತರ ನರಕೋಶಗಳಿಂದ ನರಮಂಡಲವು ಮಾಡಲ್ಪಟ್ಟಿದೆ. ಈ ನ್ಯೂರಾನ್‌ಗಳು ಬಹಳ ವಿಸ್ತೃತವಾಗಿ ಅಂತಃ ಸಂಬಂಧಗೊಂಡಿರುವಂತಹವು.

ಅನುದ್ದಿಷ್ಟ, ಪ್ರೇರಿತ, ಅಪ್ರೇರಿತ ನಡಾವಳಿಗಳೆಲ್ಲವೂ ಒಂದು ನಿರ್ದಿಷ್ಟ ಕ್ರಿಯೆಗೆ ಬೇಕಾದ ಹಲವಾರು ಮಾಂಸಖಂಡಗಳ ನರಗಳಿಂದ ನಿಯಂತ್ರಿಸಲ್ಪಟ್ಟಿದೆ ಎಂಬ ಅಂಶವನ್ನು ವಿಕಾಸದ ದೀರ್ಘಾವಧಿಯಲ್ಲಿ ಕಂಡುಕೊಳ್ಳಲಾಯಿತಾದರೂ, ಇವೆಲ್ಲವೂ ಇದೀಗ ಹೆಚ್ಚೂ ಕಡಿಮೆ ಸ್ವಯಂಸಿದ್ಧವೇನೋ ಎನ್ನುವಂತೆ ಕಂಡುಬರುತ್ತವೆ.

## 4.5 ಸಾರಾಂಶ

ಮಾನವ ಜೀವಿಯ ಸಂವಹನ ನಡಾವಳಿಯ ಮೇಲೆ ಜ್ಞಾನ ಅವಲಂಬಿತವಾಗಿರುತ್ತದೆ. ಆದರೆ ಇದು ಬಹುಕಾಲದಿಂದ ಕಲಿತ ನಡಾವಳಿಗಳ ಮಾನವ ಸ್ವಭಾವವನ್ನು ಆಧರಿಸಿದೆ. ಮಾನವನ ಸ್ವಭಾವವು ಪ್ರಾಥಮಿಕವಾಗಿ ಭೌತಿಕವೂ ಅಲ್ಲ, ಜೈವಿಕವೂ ಅಲ್ಲ, ಇದು ಭೌತಿಕ ಮತ್ತು ರಾಸಾಯನಿಕ. ಆದರೆ ಭೌತಶಾಸ್ತ್ರ, ರಸಾಯನಶಾಸ್ತ್ರ ಮತ್ತು ಜೀವಶಾಸ್ತ್ರಗಳಿಂದ ಮಾತ್ರ ಅದನ್ನು ವಿವರಿಸಲಾಗುವುದಿಲ್ಲ.

ಒಟ್ಟು ಮಾನವ ಜೀವಿ ಏನು ಎಂಬುದು ಪ್ರಾಥಮಿಕವಾಗಿ ಸಾಮಾಜಿಕ ಸಂಪರ್ಕಗಳ ಮೂಲಕವಾದ ಆತ ಅಥವಾ ಆಕೆಯ ನಡಾವಳಿಗಳಿಂದ. ಒಂದು ಮಗು ಮನುಷ್ಯನಲ್ಲ; ಮನುಷ್ಯನಾಗಿ ಅಭಿವೃದ್ಧಿಹೊಂದಲು ಬೇಕಾದ ಎಲ್ಲ ಸಾಮರ್ಥ್ಯವೂ ಅದರಲ್ಲಿ ಇರುತ್ತದೆ. ಮಾನವನ ಅಭಿವೃದ್ಧಿಯ ಕಥೆ ಎಂದರೆ, ಸಮೂಹ ಸಹಭಾಗಿತ್ವದ ಗಾಥೆ. ಪ್ರತಿ ವ್ಯಕ್ತಿಯೊಂದಿಗೂ ಈ ಕಥೆಯು ಬದಲಾವಣೆಯನ್ನು ಹೊಂದಿರಬಹುದಾದರೂ, ಎಲ್ಲ ಮಾನವ ಜೀವಿಗಳಲ್ಲೂ ಇದು ಒಂದೇ ರೀತಿಯ ಪ್ರವೃತ್ತಿಯನ್ನು ದಾರಿಯನ್ನು ತೆಗೆದುಕೊಳ್ಳುತ್ತದೆ.

ಮಗು ತನ್ನ ತಂದೆ ತಾಯಿಗಳೊಡನೆ, ಒಡಗೆಯವರು, ಸ್ನೇಹಿತರು ಮತ್ತು ಶಿಕ್ಷಕರ ಜೊತೆ ನಡೆಸುವ ಕೊನೆಯಿಲ್ಲದ ಸಂಭಾಷಣೆಗಳಲ್ಲಿ ಅದು ತತ್ವಶಾಸ್ತ್ರ, ವೈಜ್ಞಾನಿಕ ಸೂತ್ರಗಳು ಮತ್ತು ತನ್ನ ಜನರ ಹವ್ಯಾಸಗಳನ್ನು ಪಡೆದುಕೊಳ್ಳುತ್ತದೆ. ಗ್ರಹಿಕೆ, ಜ್ಞಾನ ಮತ್ತು ಸಂವಹನಗಳು ಮಗುವಿನ ನೈಸರ್ಗಿಕ ಸಹಜ ಪ್ರವೃತ್ತಿ ಮತ್ತು ಅನುದ್ದಿಷ್ಟ ವರ್ತನೆಗಳನ್ನು ಸಾಮಾಜಿಕವಾಗಿ, ಸಾಂಸ್ಕೃತಿಕವಾಗಿ ಒಪ್ಪಿಗೆಯಾಗುವಂತಹ ನಡಾವಳಿಯಾಗಿ ಪರಿವರ್ತಿಸುತ್ತಿದೆ. ನಡಾವಳಿಯ ಅದರ ಎಲ್ಲ ಮಾದರಿಗಳೂ ಸಹ ಸಾಮಾಜಿಕ ಆಶಯಗಳ ಮೇಲೇ ಅವಲಂಬಿತವಾಗಿರುತ್ತದೆ. ನಡತೆ, ನೀತಿ ಸಂಹಿತೆ, ಪುರುಷ ಸ್ತ್ರೀಯರಿಗೆ ಸಂಬಂಧಿಸಿದ ಮಾನಕಗಳು, ಮಾನವರ ಸಾರ್ವಜನಿಕ ನಡಾವಳಿಗಳೆಲ್ಲವೂ ಅವರ ಸಾಮಾಜಿಕ - ಸಾಂಸ್ಕೃತಿಕ ಪರಿಸರದ ಹುಟ್ಟುವವುಗಳೇ. ಅವರ ಸ್ವಯಂ ನಿಯಂತ್ರಣ, ಸ್ವಯಂ ಪ್ರಜ್ಞಾತ್ಮಕವಾದ ನಡಾವಳಿ ಮತ್ತು ಉದ್ದೇಶಪೂರ್ವಕವಾದ ಬೆಳವಣಿಗೆಗಳು ಅವರ ಸ್ವಯಂ ಕಲ್ಪನೆಯನ್ನೂ ರೂಪಿಸುತ್ತವೆ.

ಸಸ್ತನಿ ಜೀವಿಗಳ ಮಗುವು ಸ್ವತಂತ್ರವಾಗಿಯೇ ಹುಟ್ಟುತ್ತದೆ. ಆದರೆ, ಈ ಜೀವಿಯು ಕ್ರಮೇಣ ತನ್ನ ಮೊದಲಿನ ಸ್ವಾಯತ್ತತೆಯನ್ನು ಬಿಡುತ್ತಾ ಬಂದು, ಅದು ಜೀವಿಸುತ್ತಿರುವ ಸಾಮಾಜಿಕ ಸಮುದಾಯದಿಂದ ಮಾನ್ಯತೆಯನ್ನು ಪಡೆದಿರುವಂತಹ ನಡಾವಳಿಯ ಮಾದರಿಗಳನ್ನು ಒಪ್ಪಿಕೊಳ್ಳುತ್ತದೆ. ಈ ನಮೂನೆಗಳನ್ನು ಅಂತರ್ಗತಗೊಳಿಸಿಕೊಂಡು, ಮಾನವರು ಕಾಲಕ್ರಮೇಣ ತಮ್ಮಂತಾವೇ ಅದರಂತೆ ಆಚರಿಸತೊಡಗುತ್ತಾರೆ. ಮಾನವ ನಿಸರ್ಗವನ್ನು ಗೆದ್ದ ಕಥೆಯು, ನಿಸರ್ಗದ ಮೇಲೆ ಸಂಸ್ಕೃತಿಯ ಪ್ರಭುತ್ವದ ಕಥೆ ಮತ್ತು ಇದು ಬಹಳವಾಗಿ ಜ್ಞಾನದ ಪ್ರಭಾವವೇ.

## 4.6 ನಿಮ್ಮ ಪ್ರಗತಿ ಪರಿಶೀಲನೆ

**ಸೂಚನೆ:** ನಿಮ್ಮ ಉತ್ತರವನ್ನು ಈ ಘಟಕದಲ್ಲಿ ನೀಡಲಾಗಿರುವ ಮಾಹಿತಿಯೊಂದಿಗೆ ಹೋಲಿಸಿ.

1. ಜ್ಞಾನ ಎಂದರೇನು? ಕಲಿಕೆ ಮತ್ತು ಸಂವಹನಗಳೊಂದಿಗೆ ಅದರ ಸಂಬಂಧವೇನು? ವಿವರಿಸಿ.

2. ಮಾನವನ ಸ್ವಭಾವ ಎಂತಹುದು? ಅದರ ಗುಣಲಕ್ಷಣಗಳೇನು? ಮಾನವನ ಸ್ವಭಾವದಲ್ಲಿ ಅನುದ್ದಿಷ್ಟ ಪ್ರತಿಕ್ರಿಯೆ ಮತ್ತು ಮೂಲ ಪ್ರವೃತ್ತಿಗಳು ವಹಿಸುವ ಪಾತ್ರವೇನು? ವಿವರಿಸಿ.

3. ಜ್ಞಾನಾತ್ಮಕ ಪ್ರಕ್ರಿಯೆಯು ಒಂದು ಮಗುವಿನಲ್ಲಿ ಹೇಗೆ ಕಾರ್ಯ ನಡೆಸುತ್ತದೆ? ಕೇಂದ್ರ ನರಮಂಡಲದ ವ್ಯವಸ್ಥೆ ಮತ್ತು ಬಾಹ್ಯ ಪ್ರಪಂಚದಿಂದ ಬರುವ ಪ್ರಚೋದನೆಗಳನ್ನು ವಿಶೇಷವಾಗಿ ಗಮನದಲ್ಲಿಟ್ಟುಕೊಂಡು ಉತ್ತರಿಸಿ.

4. ಸಂವಹನ ಮತ್ತು ಸಂಸ್ಕೃತಿಯ ಅಭಿವೃದ್ಧಿಯಲ್ಲಿ ಅನುವಂಶೀಯತೆಯ ಪಾತ್ರವೇನು? ವಿವರಿಸಿ.

## 4.7 ಹೆಚ್ಚಿನ ಓದಿಗಾಗಿ


1. Bouma and Atkinson, A Handbook of Social Science Research, Oxford University Press - New York, 1995.

2. David Dooley, Social Research Methods, Prentice - Hall of India Pvt. Ltd.-New Delhi, 1995.


ಬರಹ: ತೇಜಸ್ವಿ ನವಿಲೂರ್ ಮತ್ತು ಬಿ. ಪಿ. ಸತ್ಯೇಂದ್ರ ರಾವ್

# ಘಟಕ 5 ಮಧ್ಯವ್ಯಾಪ್ತಿಯ ಸಿದ್ಧಾಂತಗಳು

ರಚನೆ


5.0 ಉದ್ದೇಶಗಳು

5.1 ಪ್ರಸ್ತಾವನೆ

5.2 ಉಪಯೋಗಗಳು ಮತ್ತು ತಣಿಕೆ

5.2.1 ಮಾಧ್ಯಮಗಳು ತನ್ನ ಶ್ರೋತೃವರ್ಗದ ಅಗತ್ಯತೆಗಳನ್ನು ಪೂರೈಸುತ್ತವೆ

5.3 ಕಾರ್ಯಸೂಚಿಯ ನಿಯೋಜನೆ

5.3.1 ಅರ್ಥ ಮತ್ತು ಪರಿಭಾಷೆ

5.3.2 ಮಾಧ್ಯಮ ಕಾರ್ಯಸೂಚಿಯ ಅಧ್ಯಯನಗಳು

5.3.3 ಸಾರ್ವಜನಿಕ ಕಾರ್ಯಸೂಚಿಯ ಅಧ್ಯಯನಗಳು

5.3.4 ಕಾರ್ಯನೀತಿ ಸೂತ್ರ ಕಾರ್ಯಸೂಚಿಯ ಅಧ್ಯಯನಗಳು

5.4 ರೂಢಿ ಬೆಳವಣಿಗೆ ಸಿದ್ಧಾಂತ (Cultivation Theory)

5.4.1 ರೂಢಿ ಬೆಳವಣಿಗೆ ಸಿದ್ಧಾಂತದ ನಂಬುಗೆಗಳು

5.4.2 ರೂಢಿ ಬೆಳವಣಿಗೆ ಸಿದ್ಧಾಂತದ ಬಗೆಗಿನ ಟೀಕೆಗಳು

5.5 ಸಾರಾಂಶ

5.6 ನಿಮ್ಮ ಪ್ರಗತಿ ಪರಿಶೀಲನೆ

## 5.0 ಉದ್ದೇಶಗಳು

ಉಪಯೋಗಗಳು ಮತ್ತು ತಣಿಕೆ, ಕಾರ್ಯಸೂಚಿಯ ನಿಯೋಜನೆ ಮತ್ತು ರೂಢಿ ಬೆಳವಣಿಗೆ ಸಿದ್ಧಾಂತಗಳ (Cultivation Theory) ಪರಿಕಲ್ಪನೆಗಳನ್ನು ನಿಮಗೆ ಪರಿಚಯ ಮಾಡಿಸುವ ಉದ್ದೇಶವನ್ನು ಈ ಘಟಕ ಹೊಂದಿದೆ. ಜನರು ಮಾಧ್ಯಮಗಳನ್ನು ಏಕೆ ಬಳಸುತ್ತಾರೆ, ನಮ್ಮ ಸಮಾಜದಲ್ಲಿ ಮಾಧ್ಯಮಗಳು ಹೇಗೆ ಕೆಲಸ ಮಾಡುತ್ತವೆ ಮತ್ತು ಸಾಮಾಜಿಕ ವ್ಯವಸ್ಥೆಯೊಂದರಲ್ಲಿ ಅವುಗಳ ಪ್ರಾಮುಖ್ಯತೆ ಏನು ಎಂಬುದನ್ನು ಗ್ರಹಿಸುವುದು ನಿಮಗೆ ಸಾಧ್ಯವಾಗುತ್ತದೆ. ಶ್ರೋತೃವರ್ಗದ ಮೇಲೆ ಮಾಧ್ಯಮಗಳ ದೀರ್ಘಾವಧಿಯ ಪ್ರಭಾವಗಳು, ಯಾವುದಾದರೂ ಇದ್ದರೆ, ಅವುಗಳನ್ನು ನೀವು ಕಲಿಯಲಿದ್ದೀರಿ. ಈ ಘಟಕವನ್ನು ಓದಿದ ನಂತರ ಕೆಳಗಿನ ಅಂಶಗಳನ್ನು ಅರ್ಥಮಾಡಿಕೊಳ್ಳುವುದು ನಿಮಗೆ ಸಾಧ್ಯವಾಗಬೇಕು.

* ಉಪಯೋಗಗಳು ಮತ್ತು ತಣಿಕೆಯ ಪರಿಕಲ್ಪನೆ;
* ಶ್ರೋತೃಗಣದ ವಿವಿಧ ರೀತಿಗಳು ಮತ್ತು ಜನರು ಮಾಧ್ಯಮಗಳನ್ನು ಏಕೆ ಬಳಸುತ್ತಾರೆ ಎಂಬುದಕ್ಕೆ ವಿವಿಧ ಕಾರಣಗಳು;
* ಕಾರ್ಯಸೂಚಿಯ ಪರಿಭಾಷೆ ಮತ್ತು ಅರ್ಥವಿವರಣೆ;
* ಮಾಧ್ಯಮಗಳ ಭೂಮಿಕೆಯಲ್ಲಿ ಅದರ ಪ್ರಾಮುಖ್ಯತೆಯನ್ನು ಗುರುತಿಸುವುದು;
* ಕಾರ್ಯಸೂಚಿಯನ್ನು ನಿರ್ಧರಿಸುವಲ್ಲಿ ಸಮೂಹ ಮಾಧ್ಯಮಗಳ ಮೇಲಿನ ಪ್ರಭಾವಗಳು;
* ಮಾಧ್ಯಮ, ಸಾರ್ವಜನಿಕ ಹಾಗು ಕಾರ್ಯನೀತಿಸೂತ್ರದ ಕಾರ್ಯಸೂಚಿಗಳು;
* ಮಾಧ್ಯಮ ಹಾಗೂ ಸಾರ್ವಜನಿಕ ಕಾರ್ಯಸೂಚಿಗಳ ಮಾಪನ;
* ರೂಢಿ ಬೆಳವಣಿಗೆ ಸಿದ್ಧಾಂತ;
* ರೂಢಿ ಬೆಳವಣಿಗೆ ಸಿದ್ಧಾಂತದ ಮೂಲನಂಬುಗೆಗಳು, ಮತ್ತು
* ರೂಢಿ ಬೆಳವಣಿಗೆ ಸಿದ್ಧಾಂತದ ಮೇಲಿನ ಟೀಕೆಗಳು.

## 5.1 ಪ್ರಸ್ತಾವನೆ

ಹೆರಾಲ್ಡ್ ಲಾಸ್‌ವೆಲ್ ಅವರಿಂದ ಮಂಡಿಸಲ್ಪಟ್ಟಿರುವ ಮತ್ತು ಬುಲೆಟ್ ಸಿದ್ಧಾಂತದಿಂದ ಉದಾಹರಿಸಲ್ಪಟ್ಟಿರುವ 'ಮಾಧ್ಯಮಗಳ ನೇರ ಪ್ರಭಾವಗಳು' ಹಾಗು ಲಾಜರ್‌ಫೆಲ್ಡ್ ಮತ್ತು ಕಾಟ್ಜ್‌ರವರಿಂದ ಮಂಡಿಸಲ್ಪಟ್ಟಿರುವ "ಪರೋಕ್ಷ ಪ್ರಭಾವ'ಗಳ ಮಾದರಿಗಳ ಬಗ್ಗೆ ಈ ಹಿಂದಿನ ಘಟಕಗಳಲ್ಲಿ ನೀವು ಕಲಿತಿರಿ. ಇತ್ತೀಚೆಗೆ ಪ್ರತಿಪಾದನೆ ಮಾಡಲಾದ ಮಧ್ಯವ್ಯಾಪ್ತಿಯ ಸಿದ್ಧಾಂತಗಳ (Middle Range Theories) ಬಗ್ಗೆ ನೀವು ಈ ಘಟಕದಲ್ಲಿ ಕಲಿಯಲಿದ್ದೀರಿ. 1950 ದಶಕದಲ್ಲಿ ಸಮಾಜಶಾಸ್ತ್ರದ ಸಂಶೋಧನೆಗಳಿಂದ ಮಂಡನೆ ಮಾಡಲ್ಪಟ್ಟ ಸಿದ್ಧಾಂತಗಳ ಉಪಶಾಖೆಗಳೇ ಸಂವಹನದಲ್ಲಿನ ಮಧ್ಯವ್ಯಾಪ್ತಿಯ ಸಿದ್ಧಾಂತಗಳು. ಅಮೇರಿಕದ ಸಮಾಜಶಾಸ್ತ್ರಜ್ಞ ರಾಬರ್ಟ್ ಮರ್ಟನ್, ತನ್ನ ಪ್ರಸಿದ್ಧ ಕೃತಿ 'ಸೋಶಿಯಲ್ ಥಿಯರಿ ಅಂಡ್ ಸೋಶಿಯಲ್ ಸ್ಟ್ರಕ್ಚರ್'ನ ಭಾಗವಾಗಿ ಮಧ್ಯವ್ಯಾಪ್ತಿಯ ಸಿದ್ಧಾಂತಗಳನ್ನು 1957ರಲ್ಲಿ ಸಮರ್ಥನೆ ಮಾಡಿದ್ದಾರೆ.

ದಿನನಿತ್ಯದ ಸಂಶೋಧನೆಯಲ್ಲಿ ಬರುವಂತಹ ಪ್ರಮುಖವಾದ ಕಾರ್ಯಾಧಾರ ಕಲ್ಪನೆಗಳು ಮತ್ತು ಸಾಮಾಜಿಕ ನಡಾವಳಿಯಲ್ಲಿ ಅವಲೋಕಿಸಲ್ಪಡುವ ಎಲ್ಲ ಏಕರೂಪತೆಗಳನ್ನೂ ವಿವರಿಸಲು, ಏಕೀಕೃತ ಸಿದ್ಧಾಂತವನ್ನು ಅಭಿವೃದ್ಧಿಪಡಿಸುವ ಕ್ರಮಬದ್ಧ ಪ್ರಯತ್ನಗಳ ನಡುವೆ ಇರತಕ್ಕವುಗಳೆಂದು ಮಧ್ಯವ್ಯಾಪ್ತಿಯ ಸಿದ್ಧಾಂತಗಳನ್ನು ವಿವರಿಸಬಹುದು. ಸಾಮಾಜಿಕ ನಡಾವಳಿಗಳ ಎಡಾರಾಗಿ ಮಾಧ್ಯಮಗಳನ್ನು ಅವಲೋಕಿಸಲು ಈ ಸಿದ್ಧಾಂತಗಳನ್ನು ಸಂವಹನಕ್ಕೆ ಅನ್ವಯಿಸಲಾಯಿತು.

ಶ್ರೋತೃವರ್ಗದಿಂದ ಮಾಧ್ಯಮಗಳ ಉಪಯೋಗ, ವಿಚಾರಾಂಶಗಳಿಗೆ ಆದ್ಯತೆಗಳನ್ನು ರೂಪಿಸುವಲ್ಲಿ ಮಾಧ್ಯಮಗಳ ಪಾತ್ರ ಮತ್ತು ಶ್ರೋತೃಗಣದ ಮೇಲೆ ಅವು ಹೊಂದಿರಬಹುದಾದ ದೀರ್ಘಾವಧಿಯ ಪ್ರಭಾವಗಳನ್ನು ಕುರಿತು ಈ ಸಿದ್ಧಾಂತಗಳು ನೋಟಹರಿಸುತ್ತವೆ. ಮಧ್ಯವ್ಯಾಪ್ತಿಯ ಸಿದ್ಧಾಂತಗಳಿಂದ ಅಭಿವೃದ್ಧಿಪಡಿಸಲಾದ ಪ್ರಕಟಿತ ಮತ್ತು ಅಪ್ರಕಟಿತ ಕ್ರಿಯೆಗಳು, ಪಾತ್ರಗಣಗಳು ಮತ್ತು ಅನುದ್ದಿಷ್ಟ ಪರಿಣಾಮಗಳಂತಹ ಹಲವಾರು ಪರಿಕಲ್ಪನೆಗಳು ಸಂವಹನ ಸಂಶೋಧಕರಿಂದ ಅವರ ಕಾರ್ಯಗಳಲ್ಲಿ ಬಳಸಿಕೊಳ್ಳಲ್ಪಟ್ಟಿವೆ. ರಾಬರ್ಟ್ ಮರ್ಟನ್ ಅವರಿಂದ ಸೂಚಿಸಲ್ಪಟ್ಟ ಮಧ್ಯವ್ಯಾಪ್ತಿಯ ಸಿದ್ಧಾಂತಗಳನ್ನು ಉದಾಹರಿಸಲು ಕಾರ್ಯಸೂಚಿ ನಿಯೋಜನೆ, ಉಪಯೋಗ ಮತ್ತು ತಣಿಕೆ ಹಾಗು ರೂಢಿ ಬೆಳವಣಿಗೆ ಸಿದ್ಧಾಂತಗಳನ್ನು ಸಂವಹನ ಸಂಶೋಧಕರು ಪ್ರತಿಪಾದಿಸಿದ್ದಾರೆ.

## 5.2 ಉಪಯೋಗಗಳು ಮತ್ತು ತಣಿಕೆ

ಕಣ್ಗಾವಲು ಕಾಯುವಿಕೆ, ಸಹಸಂಬಂಧ, ಸಂಸ್ಕೃತಿಯ ಪ್ರಸಾರ ಮತ್ತು ಮನರಂಜನೆಯಂತಹ ಕಾರ್ಯಸೇವೆಗಳನ್ನು ಮಾಧ್ಯಮಗಳು ಮಾಡುತ್ತವೆ ಎಂಬುದನ್ನು ನಾವು ಈಗಾಗಲೇ ಕಲಿತಿದ್ದೇವೆ. ಮಾಧ್ಯಮಗಳು ಶ್ರೋತೃಗಣಕ್ಕೆ ಏನು ಮಾಡಬಲ್ಲವು ಎಂಬುದರ ಬಗ್ಗೆಯೇ ಇಲ್ಲಿಯವರೆಗೂ ಚರ್ಚಿಸುತ್ತಾ ಬಂದಿದ್ದೇವೆ. ಆದರೆ, 1940ರ ದಶಕದಷ್ಟು ಹಿಂದೆಯೇ, ಜನರು ಮಾಧ್ಯಮದೊಂದಿಗೆ ಏನು ಮಾಡುತ್ತಾರೆ ಎಂಬುದನ್ನು ಕುರಿತು ಆಲೋಚಿಸಲು ಸಂಶೋಧಕರು ಪ್ರಾರಂಭಿಸಿದರು. ಸಾಕಷ್ಟು ವೃತ್ತಪತ್ರಿಕೆಗಳು, ನಿಯತಕಾಲಿಕಗಳು, ಚಲನಚಿತ್ರಗಳು ಮತ್ತು ರೇಡಿಯೋ ಕೇಂದ್ರಗಳನ್ನು ಹೊಂದಿದ ಅಮೇರಿಕಾ ಸಂಯುಕ್ತ ಸಂಸ್ಥಾನವು ಒಂದು 'ಮಾಧ್ಯಮ ಸಮಾಜ'ವಾಯಿತು. 1940ರ ದಶಕದ ಮೊದಲ ಭಾಗದಲ್ಲಿ ಮಾಧ್ಯಮ ಶ್ರೋತೃಗಣದೆಡೆಗೂ ತಮ್ಮ ಗಮನವನ್ನು ಹರಿಸಲು ಸಂಶೋಧಕರು ಉಪಕ್ರಮಿಸಿದರು. ಅವರು ತಮ್ಮನ್ನೇ ತಾವು ಕೇಳಿಕೊಂಡ ಕೆಲವೊಂದು ಪ್ರಶ್ನೆಗಳೆಂದರೆ;

* ಹಲವಾರು ವಿಧದ ಮಾಧ್ಯಮ ಕಾರ್ಯಕ್ರಮಗಳಲ್ಲಿ ಶ್ರೋತೃಗಳು ಹೇಗೆ ಮತ್ತು ಏಕೆ ಭಾಗವಹಿಸುತ್ತಾರೆ?

* ಹಲವಾರು ಮಾಧ್ಯಮಗಳು ಉಪಲಬ್ಧವಿರುವಾಗಲೂ ಆ ಮಾಧ್ಯಮವನ್ನು ಮತ್ತು ಹಲವಾರು ಮಾಧ್ಯಮಗಳ ಮೂಲಕ ಬರುವ ಸಂದೇಶಗಳ ಪ್ರವಾಹದಲ್ಲಿ ಆ ವಿಷಯವನ್ನು ಏಕೆ ಆಯ್ಕೆಮಾಡಿಕೊಂಡರು?

* ಕೇವಲ ತಮ್ಮೆಡೆಗೆ ಬಂದುದನ್ನೇ ಓದುತ್ತಾ, ಕೇಳುತ್ತಾ, ನೋಡುತ್ತಾ ಶ್ರೋತೃಗಳು ಜಡರಾಗಿ, ನಿಷ್ಕ್ರಿಯರಾಗಿರುತ್ತಾರೆಯೇ? ಅಥವಾ ಕ್ರಿಯಾಶೀಲರಾಗಿದ್ದು, ಬೇಕಾದ ಕೆಲವೊಂದು ವಿಷಯಗಳನ್ನು ಅರಸುತ್ತಾ, ಮತ್ತೆ ಕೆಲವನ್ನು ಬೇಡವೆಂದು ತಿರಸ್ಕರಿಸುತ್ತಾರೆಯೇ?

* ಶ್ರೋತೃಗಣವನ್ನು ತಲುಪಿದ ಸಂದೇಶಗಳು ಸಾಧಿಸುವುದಾದರೂ ಏನನ್ನು?

ಉಪಯೋಗಗಳು ಮತ್ತು ತಣಿಕೆಯ ಮಾರ್ಗವು ಇಂತಹ ಪ್ರಶ್ನೆಗಳಿಗೆ ಉತ್ತರಿಸುವ ಪ್ರಯತ್ನ ಮಾಡಿತು. 1940 ಮತ್ತು 1950ರ ದಶಕದಲ್ಲಿ ನಡೆಸಲಾದ ಅಧ್ಯಯನಗಳು ಹಲವಾರು ಕೌತುಕಪೂರ್ಣವಾದ, ಆದರೆ ಜನರು ಮಾಧ್ಯಮಗಳನ್ನು ಏಕೆ ಬಳಸುತ್ತಾರೆ ಎಂಬುದಕ್ಕೆ ಅಸಂಬಂಧಿತವಾದ ಅಧ್ಯಯನಗಳಿಗೆ ದಾರಿ ಮಾಡಿಕೊಟ್ಟವು. ಹಲವು ಮಾಧ್ಯಮಗಳನ್ನು ಬಳಸುವುದರಿಂದ ಮಾಧ್ಯಮ ಗ್ರಾಹಕರು ಯಾವ ಉಪಯೋಗಗಳನ್ನು ಪಡೆದುಕೊಂಡಿದ್ದಾರೆ ಎಂಬ ಮಾಹಿತಿಯನ್ನು ಹೊರತರಲು ಸರ್ವೇಕ್ಷಣೆಗಳನ್ನೂ, ಪ್ರಕರಣ ಅಧ್ಯಯನಗಳನ್ನೂ ನಡೆಸಲಾಯಿತು ಮತ್ತು ಇತರ ರೀತಿಯ ಶ್ರೋತೃಗಣ ವಿಶ್ಲೇಷಣೆಯನ್ನೂ ಕೈಗೊಳ್ಳಲಾಯಿತು.

'ಉಪಯೋಗಗಳು ಮತ್ತು ತಣಿಕೆ'ಯ ಸಿದ್ಧಾಂತದ ಹಿಂದಿರುವ ಮೊದಲು ಹರ್ಟ್ ಹರ್ಝೋಗ್‌ದೆಂದು ಪರಿಗಣಿಸಲಾಗುತ್ತದೆ. 1940ರ ದಶಕದಲ್ಲಿ ರೇಡಿಯೋ ಸೋಪ್ ಅಪೆರಾಗಳಿಗೆ ಅಮೇರಿಕಾದ ಅಷ್ಟೊಂದು ಮಂದಿ ಗೃಹಿಣಿಯರು ಏಕೆ ಆಕರ್ಷಿತರಾಗಿದ್ದರು ಎಂಬುದನ್ನು ವಿವರಿಸಲು ಈ ಸಂಶೋಧಕಿ ಉತ್ಸುಕರಾಗಿದ್ದರು. ಬೇರೆ ರೀತಿಯಾಗಿ ಹೇಳುವುದಾದರೆ, ಮಾಧ್ಯಮಗಳು ಶ್ರೋತೃಗಳಿಗೆ ಏನು ಮಾಡುತ್ತವೆ ಎಂಬುದರ ಬದಲಿಗೆ, ಮಾಧ್ಯಮದೊಂದಿಗೆ ಜನರು ಏನು ಮಾಡುತ್ತಾರೆ ಎಂದು ಆಕೆ ಕೇಳಿದಳು. ಸಂಭಾವ್ಯ, ಹಣ ನೀಡುವ ಮತ್ತು ತಲುಪಲ್ಪಟ್ಟವರು ಎಂದು ಮಾಧ್ಯಮ ಶ್ರೋತೃಗಣವನ್ನು ವರ್ಗೀಕರಿಸಬಹುದು.

ಅಂಗೀಕಾರ, ಶಿಕ್ಷಣ, ವಯೋಮಾನ ಮತ್ತು ಲಿಂಗ ಇತ್ಯಾದಿ ಹಲವಾರು ಅಂಶಗಳನ್ನು ಅವಲಂಬಿಸಿ, ಯಾರು ಯಾರನ್ನು ತಲುಪಲು ಸಾಧ್ಯವೋ ಅವರೆಲ್ಲರ ಗುಂಪೇ, ಸಂಭಾವ್ಯ ಶ್ರೋತೃಗಣ. ವೃತ್ತಪತ್ರಿಕೆಗಳು, ಆಡಿಯೋ / ವಿಡಿಯೋ ಕ್ಯಾಸೆಟ್‌ಗಳು, ಸಿ.ಡಿ.ಗಳು, ಚಲನಚಿತ್ರದ ಟಿಕೇಟ್‌ಗಳು ಮತ್ತು ಕೇಬಲ್ ಟಿವಿ ಮುಂತಾದ ಹಲವು ಮಾಧ್ಯಮ ಉತ್ಪನ್ನಗಳನ್ನು ಕೊಳ್ಳುವವರು ಹಣ ನೀಡುವ ಶ್ರೋತೃಗಣ. ಯಾರು ಮಾಧ್ಯಮವನ್ನೇ ನಿಜವಾಗಿ ತಮಗೆಂದು ಬಳಕೆ ಮಾಡುತ್ತಾರೋ - ವೃತ್ತಪತ್ರಿಕೆಗಳ ಹಲವು ಓದುಗರು, ತಲುಪಲ್ಪಟ್ಟವರು.

## 5.2.1 ಮಾಧ್ಯಮಗಳು ತಮ್ಮ ಶ್ರೋತೃವರ್ಗದ ಅಗತ್ಯತೆಗಳನ್ನು ಪೂರೈಸುತ್ತವೆ.

ಶ್ರೋತೃಗಣದ ಸದಸ್ಯರಿಗೆ ಕೆಲವೊಂದು ಅವಶ್ಯಕತೆಗಳಿದ್ದು, ಅವು ಮಾಧ್ಯಮಗಳಿಂದ ಪೂರೈಸಲ್ಪಡುತ್ತವೆ ಎಂಬುದನ್ನು 'ಉಪಯೋಗಗಳು ಮತ್ತು ತಣಿಕೆ'ಯ ಸಿದ್ಧಾಂತವು ಹೊರಗೆಡಹುತ್ತದೆ. ಮಾಧ್ಯಮಗಳಿಂದ ಪೂರೈಸಲ್ಪಡುವ ಅವಶ್ಯಕತೆಯನ್ನು ಮಾಧ್ಯಮ ತಣಿಕೆ ಎಂದು ಕರೆಯಲಾಗುವುದು. ವಿವಿಧ ಬಳಕೆಗಳನ್ನು ಹಲವಾರು ಸಂಶೋಧಕರು - ಜ್ಞಾನ, ಗಮನವನ್ನು (ಮನಸ್ಸನ್ನು) ಬೇರೆಡೆಗೆ ತಿರುಗಿಸುವುದು, ಸಾಮಾಜಿಕ ಉಪಯುಕ್ತತೆ ಮತ್ತು ಹಿಂಜರಿತ ಎಂದು ವರ್ಗೀಕರಿಸಿದ್ದಾರೆ.

**ಜ್ಞಾನ:** ಇದು, ಯಾವುದೇ ವಿಷಯವನ್ನು ಅರಿತುಕೊಳ್ಳುವ ಕಾರ್ಯ. ಮಾಹಿತಿಯನ್ನು ಪಡೆಯಲು ವ್ಯಕ್ತಿಯೊಬ್ಬ ಮಾಧ್ಯಮಗಳನ್ನು ಬಳಸಿದರೆ, ಅವನು ಅದನ್ನು ಜ್ಞಾನೋದ್ದೇಶಕ್ಕಾಗಿ ಬಳಸುತ್ತಿದ್ದಾನೆ ಎಂದರ್ಥ. ಎರಡು ರೀತಿಯ ಜ್ಞಾನಾತ್ಮಕ ಕ್ರಿಯೆಗಳನ್ನು ಸಂಶೋಧಕರು ಕಂಡುಕೊಂಡಿದ್ದಾರೆ. ಒಂದು ತನ್ನನ್ನು ತಾನು ಇತ್ತೀಚಿನ ಮಾಹಿತಿ ಗ್ರಹಿಕೆಯನ್ನು ಸಾಧ್ಯ ಮಾಡಿಕೊಳ್ಳಲು ಮಾಧ್ಯಮಗಳನ್ನು ಬಳಸುವುದಾದರೆ, ಮತ್ತೊಂದು, ವ್ಯಕ್ತಿಯೊಬ್ಬನ ಕುತೂಹಲ / ಆಸಕ್ತಿಗೆ ಸಂಬಂಧಿಸಿದ ವಿಷಯಗಳ ಬಗ್ಗೆ ಅರಿತುಕೊಳ್ಳಲು ಮಾಧ್ಯಮಗಳನ್ನು ಬಳಕೆ ಮಾಡುವುದು.

**ಗಮನವನ್ನು ಬೇರೆಡೆಗೆ ತಿರುಗಿಸುವುದು:** ಗಮನವನ್ನು ಬೇರೆಡೆಗೆ ತಿರುಗಿಸುವಿಕೆ - ಪ್ರಚೋದನೆ, ವಿಶ್ರಾಂತಿ, ಭಾವನೆಗಳ ವಿಮೋಚನೆ ಮತ್ತು ಇಂತಹ ಹಲವು ರೂಪಗಳನ್ನು ಹೊಂದಿದೆ. ಮನುಷ್ಯ ಒಬ್ಬ ಸಮಾಜ ಜೀವಿಯಾಗಿದ್ದು, ಬೇಸರದೊಂದಿಗೆ ಆತ ಹೇಗಲಾರ. ಆತ ಉತ್ತೇಜನವನ್ನು ಅರಸುತ್ತಾನೆ. ಜೋರಾದ ಸಂಗೀತ, ಚಿತ್ರಗಳು ಇತ್ಯಾದಿಗಳ ರೂಪದಲ್ಲಿ ಮಾಧ್ಯಮಗಳು ಈ ಉತ್ತೇಜನವನ್ನು ಒದಗಿಸುತ್ತವೆ.

ರೈಲುಗಾಡಿಯು ಬರಲು ಕಾಯುವಾಗಲೂ ಜನರು ಪ್ಲಾಟ್‌ಫಾರ್ಮ್‌ಗಳಲ್ಲಿ ಬಿತ್ತರಿಸಲಾಗುವ ವಾಣಿಜ್ಯಕಗಳನ್ನು (Commercials) ನೋಡುತ್ತಿರುತ್ತಾರೆ. ರೈಲುಗಾಡಿಗಾಗಿ ಕಾಯುವ ಸನ್ನಿವೇಶದ ಬೇಸರಿಕೆಯನ್ನು ನೀಗಿಸಿಕೊಳ್ಳಲು ಜನರು ಹೀಗೆ ಮಾಡುತ್ತಾರೆ.

ನಾವು ಒಂದು ನಿರ್ದಿಷ್ಟ ಚಲನಚಿತ್ರವನ್ನು ಏಕೆ ನೋಡುತ್ತೇವೆ ಎಂದು ಯಾರಾದರೂ ಕೇಳಿದರೆ, ನಮ್ಮ ಮನಸ್ಸಿಗೆ ಬರುವ ಮೊದಲ ಉತ್ತರವೆಂದರೆ "ಕೇವಲ ವಿಶ್ರಾಂತಿಗಾಗಿ" ಎಂದು. ಕಾದಂಬರಿಗಳನ್ನು ಓದುತ್ತಾ ಅಥವಾ ಕಾರ್ಟೂನ್ ಶೋಗಳನ್ನು ನೋಡುತ್ತಾ ನಾವು ವಿಶ್ರಾಂತಿ ಪಡೆಯುತ್ತೇವೆ. ತುಂಬಾ ಹೆಚ್ಚಾಗಿ ಉತ್ತೇಜಿತಗೊಳ್ಳುವುದು ಇಂದ್ರಿಯಗಳ ಹೊರೆಗೆ (Sensory overload) ಕಾರಣವಾಗುವುದೆಂದೂ, ಅದರ ಪರಿಹಾರಕ್ಕಾಗಿ ಕೆಲವು ರೀತಿಯ ಮನರಂಜನೆಗಳನ್ನು ಜನರು ಅರಸುತ್ತಾರೆಂದೂ ಮನಃಶಾಸ್ತ್ರಜ್ಞರು ಕಂಡುಕೊಂಡಿದ್ದಾರೆ.

ಭಯಾನಕವೆನಿಸುವ ಒಂದು ಒಳ್ಳೆಯ ಚಿತ್ರಕ್ಕೆ ಹೋಗಿ ಮತ್ತು ಅಲ್ಲಿ ಜನರು ತೋರುವ ಪ್ರತಿಕ್ರಿಯೆಗಳನ್ನು ನೋಡಿ. ಅವರು ಹೆದರಿಕೆಯಿಂದ ಅರಚುತ್ತಾರೆ, ನಿಟ್ಟುಸಿರು ಬಿಡುತ್ತಾರೆ, ಭಯಗೊಂಡು ಅಳುತ್ತಾರೆ. ಮೆಲೋಡ್ರಾಮಾ ಇರುವ ಒಂದು ಚಲನಚಿತ್ರವೂ ಸಹ ಕೆಲವು ವೀಕ್ಷಕರ ಕಣ್ಣುಗಳಲ್ಲಿ ನೀರು ತರಬಹುದು. ನಾಯಕನೊಬ್ಬ ಚಿತ್ರದಲ್ಲಿ ಸರಿಯಾದ ಕಾಲಕ್ಕೆ ಬಾಂಬ್ ಒಂದನ್ನು ನಿಷ್ಕ್ರಿಯಗೊಳಿಸಿದರೆ, ಚಿತ್ರಮಂದಿರದಲ್ಲಿ ಶಿಳ್ಳೆ, ಕರತಾಡನಗಳು ಕೇಳಿಬರಬಹುದು. ಜನರು ಇಂತಹ ಸನ್ನಿವೇಶಗಳಿಗೆ ಏಕೆ ಪ್ರತಿಕ್ರಿಯಿಸುತ್ತಾರೆಂದರೆ, ಅವರು ಭಾವನಾತ್ಮಕ ಸಂತೃಪ್ತಿಯನ್ನು ಅರಸುತ್ತಿರುತ್ತಾರೆ. ಒಂದು ಪ್ರಮಾಣದಲ್ಲಿ ಜನರು ಭಾವನಾತ್ಮಕ ಸಂತೃಪ್ತಿಯನ್ನು ಪಡೆದು ಆನಂದಪಡುತ್ತಾರೆ. ರುದ್ರನಾಟಕಗಳನ್ನು ನೋಡುವಾಗ, ಅದುಮಿಟ್ಟಿದ್ದ ಶಕ್ತಿಯನ್ನು ಹೊರದೂಡುವ "ಕೆಥಾರ್ಸಿಸ್" ಎಂಬ ಸ್ಥಿತಿಯೊಂದರ ಬಗ್ಗೆ ಅರಿಸ್ಟಾಟಿಲ್ ಹೇಳಿದ್ದರು. ಮಾಧ್ಯಮ ವಸ್ತುವಿಗೆ ಹಚ್ಚಲಾಗುವ ಮೊದಲ ಕಾರ್ಯವೆಂದರೆ ಬಹುಶಃ ಭಾವನಾತ್ಮಕ ತೃಪ್ತಿಯ ಉದ್ದೇಶವೇ.

**ಸಾಮಾಜಿಕ ಉಪಯುಕ್ತತೆ:** ಚಿತ್ರವೊಂದನ್ನು ನೀವು ನೋಡಿದ ಮೇಲೆ ನಿಮ್ಮ ಗೆಳೆಯರು ಅಥವಾ ಸಂಬಂಧಿಗಳೊಡನೆ ಅದರ ಬಗ್ಗೆ ಚರ್ಚೆ ಮಾಡುವುದಿಲ್ಲವೇ? ಸಾಮಾನ್ಯವಾಗಿ ಚಿತ್ರದ ಬಗ್ಗೆ ನೀವು ಸಂಭಾಷಣೆಯನ್ನು ಆರಂಭಿಸುತ್ತೀರಿ ಮತ್ತು ಚಲನಚಿತ್ರವನ್ನು ಕುರಿತು ಸ್ವಲ್ಪ ಕಾಲ ಮಾತನಾಡುತ್ತೀರಿ. ಪ್ರತಿಕ್ರಿಯೆಯಾಗಿ ಒಡನಾಡಿಗಳೂ ಸಹ ಸಂಭಾಷಣೆಗೆ ತಮ್ಮ ಕಾಣಿಕೆ ಸಲ್ಲಿಸುತ್ತಾರೆ. ಇದರ ಅರ್ಥ ನೀವು ಸಂಭಾಷಣೆಯ ಒಂದು ಕರೆನ್ಸಿಯಾಗಿ ಈ ಅವಶ್ಯಕತೆಯನ್ನು ಮಾಧ್ಯಮಗಳು ಉದ್ದೇಶಿಸುತ್ತವೆ ಎಂದು ಹೇಳಲಾಗುತ್ತದೆ. ಸಮಾಜದ ಇತರ ಸದಸ್ಯರೊಂದಿಗೆ ನೀವು ಸಂವಹಿಸಲು ಅವು ಸಹಾಯ ಮಾಡಿದಾಗ ಮಾಧ್ಯಮಗಳ ಸಾಮಾಜಿಕ ಉಪಯೋಗವು ಪೂರ್ಣಗೊಂಡಂತಾಗುತ್ತದೆ. ಚಿತ್ರತಾರೆಯರು ಮತ್ತು ಇತರ ಬಹು ಜನಪ್ರಿಯ ವ್ಯಕ್ತಿಗಳನ್ನು ಕುರಿತಂತೆ, ನಾವು ಅವರನ್ನು ವೈಯಕ್ತಿಕವಾಗಿ ಬಲ್ಲೆವು ಎಂಬಂತೆ ನಾವು ಬಹಳಷ್ಟು ಬಾರಿ ಮಾತನಾಡುವುದು. ದೇಶದಲ್ಲಿ ಹೊಸ ರಾಜ್ಯಗಳ ಸ್ಥಾಪನೆ ಕುರಿತಾದ ಅನಿಸಿಕೆಗಳು ಇವು ಅಂತಹ ಕೆಲವು ಉದಾಹರಣೆಗಳು. ಇಂತಹ ಸಮಸ್ಯೆಗಳನ್ನು ಆದ್ಯತೆಯ ಮೇಲೆ ಉದ್ದೇಶಿಸಬೇಕೆಂಬ ಭಾವನೆಯಿಂದ ಕೆಲ ಕಾಲ ಈ ವಿಷಯವನ್ನೇ ಕುರಿತಂತೆ ಪ್ರತಿಯೊಬ್ಬರೂ ಚರ್ಚೆ ನಡೆಸುತ್ತಿರುವಂತೆ ಕಂಡುಬರುತ್ತದೆ. ಹೀಗಾಗಿ, ಇಂತಹ ವಿಚಾರಾಂಶಗಳನ್ನು ಚರ್ಚಿಸಲೇಬೇಕು ಎಂಬ ಕಾರ್ಯಸೂಚಿಯೊಂದನ್ನು ತನಗೆ ತಾನೇ ಹಾಕಿಕೊಂಡು, ಸಮಾಜವು ಈ ಸಮಸ್ಯೆಯನ್ನು ಪರಿಹರಿಸಲು ಪ್ರಯತ್ನಿಸುತ್ತದೆ.

## 5.3.1 ಅರ್ಥ ಮತ್ತು ಪರಿಭಾಷೆ

ಆಕ್ಸ್‌ಫರ್ಡ್ ಶಬ್ದಕೋಶವು 'Agenda (ಕಾರ್ಯಸೂಚಿ)' ಎಂಬ ಪದಕ್ಕೆ "ಚರ್ಚಿಸಬೇಕಾದ ವ್ಯವಹಾರದ ವಿಷಯಗಳು ಅಥವಾ ಇವುಗಳ ಒಂದು ಪಟ್ಟಿ" ಎಂದು ಅರ್ಥವಿವರಣೆ ನೀಡುತ್ತದೆ. "ಮಾಧ್ಯಮ ವೃತ್ತಿನಿರತರು, ಸಾರ್ವಜನಿಕರು ಮತ್ತು ಕಾರ್ಯನೀತಿ ರೂಪಿಸುವವರ ಗಮನ ಸೆಳೆಯಲು, ವಿವಾದಾಂಶಗಳ ನಡುವೆ ನಡೆಯುತ್ತಿರುವ ಪೈಪೋಟಿ"ಯನ್ನು ಕಾರ್ಯಸೂಚಿಯ ನಿಯೋಜನೆ ಎಂದು ಅರ್ಥೈಸಬಹುದು. ಅಮೇರಿಕಾ ಸಂಯುಕ್ತ ಸಂಸ್ಥಾನಗಳಲ್ಲಿ, ಚುನಾವಣೆಗಳ ಭೂಮಿಕೆಯಲ್ಲಿ ಬಹಳ ಹಿಂದಿನಿಂದಲೂ  ಗಮನಿಸಲಾದ ಮತ್ತು ಅಭ್ಯಸಿಸಲಾದ ವಿಷಯಗಳನ್ನು ಸಾಧಾರಣವಾದ ಪದಗಳಲ್ಲಿ ವಿವರಿಸಲು ಮ್ಯಾಕ್ ಕೊಂಬ್ಸ್ ಮತ್ತು ಶಾ (1972, 1993) ಅವರುಗಳಿಂದ ಈ ಪದವು ಚಲಾವಣೆಗೆ ಬಂತು. ವಿವಾದಾಂಶಗಳನ್ನು ರಚಿಸುವ ಶಕ್ತಿ ಎಂಬುದಾಗಿ ಲಾಜರ್‌ಫೆಲ್ಡ್ ಮತ್ತಿತರು ಇದನ್ನು ಉಲ್ಲೇಖಿಸುತ್ತಾರೆ.

ಸಮಾಜದಲ್ಲಿ ಕೆಲವೊಂದು ವಿವಾದಾಂಶಗಳ ಮಾಹಿತಿಯು ಸಾರ್ವಜನಿಕರಿಗೆ ಉಪಲಬ್ಧವಿದ್ದರೆ, ಮತ್ತೆ ಕೆಲವು ಲಭ್ಯವಿರುವುದಿಲ್ಲ. ಸಾರ್ವಜನಿಕ ಅಭಿಪ್ರಾಯವನ್ನು ಹೇಗೆ ರೂಪಿಸಲಾಗುತ್ತದೆ ಮತ್ತು ಕಾರ್ಯನೀತಿ ರೂಪಕರು ಕೆಲವು ಅಂಶಗಳನ್ನು ಕಡೆಗಣಿಸಿ, ಉಳಿದ ಕೆಲವು ಅಂಶಗಳನ್ನೇ ಏಕೆ ಉದ್ದೇಶಿಸುತ್ತಾರೆ ಎನ್ನುವುದನ್ನು ಕಾರ್ಯನೀತಿ ನಿಯೋಜನೆಯು ವಿವರಿಸುತ್ತದೆ. ಕಾರ್ಯನೀತಿ ನಿಯೋಜನೆಯನ್ನು ಕುರಿತು ಮಾಡಲಾಗುವ ಅಧ್ಯಯನವು ಸಾಮಾಜಿಕ ಪರಿವರ್ತನೆಯನ್ನು ಅರಿತುಕೊಳ್ಳಲು ನಮಗೆ ಸಹಾಯ ಮಾಡುತ್ತದೆ. ವಿಷಯಾಂಶ - ವಿವಾದಾಂಶಗಳ ನಡುವಿನ ಪೈಪೋಟಿಯೇ ಕಾರ್ಯಸೂಚಿ ನಿಯೋಜನೆಯನ್ನು ನಿರ್ಧರಿಸುವುದು ಎಂಬುದನ್ನು ನಾವು ಈಗ ತಾನೆ ಕಂಡಿದ್ದೇವೆ. ಹಾಗಾದರೆ, ವಿವಾದಾಂಶ ಎಂದರೇನು? "ಚರ್ಚೆ ಅಥವಾ ವಾದಕ್ಕೆ ಬಹುಮುಖ್ಯವಾದ ವಿಷಯ - issue" ಎಂಬುದಾಗಿ ಆಕ್ಸ್‌ಫರ್ಡ್ ಶಬ್ದಕೋಶ ವಿವರಿಸುತ್ತದೆ. "ಹುದ್ದೆ ಅಥವಾ ಸಂಪನ್ಮೂಲಗಳ ವಿತರಣೆಗೆ ಸಂಬಂಧಿಸಿದಂತೆ, ಚೆನ್ನಾಗಿ ಗುರುತಿಸಲಾಗುವ ಎರಡು ಅಥವಾ ಹೆಚ್ಚಿನ ಗುಂಪುಗಳ ನಡುವೆ, ಕಾರ್ಯವಿಧಾನ ಮತ್ತು ಸ್ವಾತಂತ್ರ್ಯಕ್ಕಾಗಿ ನಡೆಯುವ ಘರ್ಷಣೆ"ಯನ್ನು ವಿವಾದಾಂಶವೆಂದು ಅರ್ಥೈಸಬಹುದು. ಇನ್ನೊಂದು ಅಂಶವನ್ನು ನೀವು ಗುರುತಿಸಿರಬಹುದು. ಈ ಸಂಗತಿಯನ್ನು ಅನುಸಾಮಾಜಿಕ ಸಂಬಂಧ ಎಂದು ಕರೆಯಲಾಗುತ್ತದೆ.

**ಹಿಂಪರಿತ:** ನಿಮಗೆ ಬಹಳ ಇಷ್ಟವಾದ ಒಂದು ಕಾರ್ಯಕ್ರಮವನ್ನು ನೀವು ಟಿವಿಯಲ್ಲಿ ನೋಡುತ್ತಿರುವಿರೆಂದೂ ಮತ್ತು ಅದೇ ವೇಳೆಗೆ ಯಾರೋ ಬಾಗಿಲನ್ನು ತಟ್ಟುತ್ತಾರೆಂದೂ ಭಾವಿಸಿಕೊಳ್ಳೋಣ. ಸಾಧಾರಣವಾಗಿ ಬಾಗಿಲು ತೆರೆಯುವಂತೆ ನೀವು ನಿಮ್ಮ ಸಹೋದರ ಅಥವಾ ಸಹೋದರಿಗೆ ಹೇಳಿ ಕಾರ್ಯಕ್ರಮ ವೀಕ್ಷಣೆಯನ್ನು ಮುಂದುವರೆಸುತ್ತೀರಿ ಅಥವಾ ನಿಮ್ಮ ಮನೆಗೆ ಸ್ನೇಹಿತರು ಬಂದಾಗಲೂ ಟೆಲಿವಿಷನ್ ಅನ್ನು ಚಾಲೂ ಇಟ್ಟಿರುತ್ತೀರಿ. ಸಂಭಾಷಣೆಯು ರಸಹೀನವೆನಿಸಿದೊಡನೆಯೇ ನೀವು ಟೆಲಿವಿಷನ್ ವೀಕ್ಷಿಸಲು ತೊಡಗುತ್ತೀರಿ ಮತ್ತು ಅತಿಥಿಗಳನ್ನು ಕಡೆಗಣಿಸುತ್ತೀರಿ. ಕೆಲವೊಂದು ಚಟುವಟಿಕೆಗಳಿಂದ ನಮ್ಮನ್ನು ಹಿಂದೆ ಸೆಳೆದುಕೊಳ್ಳಲು ಮತ್ತು ತಮ್ಮ ಹಾಗು ಇತರರ ನಡುವೆ ಒಂದು ನಡುಕಾಪು ವಲಯವನ್ನು ಸೃಷ್ಟಿಸಿಕೊಳ್ಳಲು ಜನಗಳು ಮಾಧ್ಯಮಗಳನ್ನು ಬಳಸುತ್ತಾರೆ. ನಾವು ಪೇಚಾಟಕ್ಕೆ ಸಿಲುಕಿಕೊಂಡಾಗ ಎಷ್ಟು ಬಾರಿ ನಮ್ಮನ್ನು ನಾವು ವೃತ್ತಪತ್ರಿಕೆಯಲ್ಲಿ ಹುದುಗಿಸಿಕೊಂಡಿಲ್ಲ?.

ಶ್ರೋತೃಗಳನ್ನು ಕೇವಲ ಮಾಹಿತಿಯನ್ನು ಪಡೆಯುವ ನಿಷ್ಕ್ರಿಯ ಎಂದು ಗ್ರಹಿಸಲಾದ (ಬುಲೆಟ್ ಸಿದ್ಧಾಂತ) ಕಾಲದಿಂದ ಸಂವಹನ ಸಂಶೋಧನೆಯು ಬಹಳ ದೂರವನ್ನು ಕ್ರಮಿಸಿ ಬಂದಿದೆ. ಜನರಿಗೆ ತಮ್ಮ ಅಗತ್ಯತೆಗಳ ಅರಿವು ಇದೆ ಮತ್ತು ಅವರು ಅವುಗಳನ್ನು ಪದಗಳಲ್ಲಿ ಹೇಳಬಲ್ಲರು ಎಂದು 'ಉಪಯೋಗಗಳು ಮತ್ತು ತಣಿಕೆ'ಯ ಸಿದ್ಧಾಂತ ನಂಬುತ್ತದೆ.

## 5.3 ಕಾರ್ಯಸೂಚಿಯ ನಿಯೋಜನೆ

ತನ್ನ ವಿಚಾರಾಂಶಗಳ ಪ್ರಾಶಸ್ತ್ಯೀಕರಣ ಮಾಡಿಕೊಂಡೇ ಪ್ರತಿಯೊಂದು ಸಾಮಾಜಿಕ ವ್ಯವಸ್ಥೆಯೂ ಕಾರ್ಯ ನಡೆಸುತ್ತದೆ. ಗುರಿಯೊಂದನ್ನು ತಲುಪುವೆಡೆಗೆ ಕೆಲಸ ಮಾಡಲು ಎಲ್ಲಿ ಪ್ರಾರಂಭಿಸಬೇಕು ಎನ್ನುವುದನ್ನು ನಿರ್ಧರಿಸಲು ವಿಚಾರಾಂಶಗಳ ಆದ್ಯತೆಯನ್ನು ನಿರ್ಧರಿಸುವುದು ಸಮಾಜಕ್ಕೆ ಬಹಳ ಮುಖ್ಯ. ವಿಚಾರಾಂಶಗಳಿಗೆ ಆದ್ಯತೆಯನ್ನು ನೀಡುವ ಮೂಲಕ ಸಮಾಜವು ತನಗೆ ತಾನೇ ಒಂದು ಕಾರ್ಯಸೂಚಿಯನ್ನು ನಿಯೋಜಿಸಿಕೊಳ್ಳುತ್ತದೆ, ಮತ್ತು ಅದನ್ನು ಸಾಧಿಸುವ ದಿಕ್ಕಿನಲ್ಲಿ ಕೆಲಸ ಮಾಡಲು ಪ್ರಾರಂಭಿಸುತ್ತದೆ.

ಒಂದು ನಿರ್ದಿಷ್ಟ ಕಾಲದಲ್ಲಿ ಕೆಲವೊಂದು ವಿಚಾರಾಂಶಗಳು ಚಲಾವಣೆಯನ್ನು ಪಡೆಯುತ್ತವೆ ಮತ್ತು ಇದೇ ವಿಷಯವನ್ನು ಕುರಿತೇ ಪ್ರತಿಯೊಬ್ಬರೂ ಚರ್ಚಿಸುತ್ತಿದ್ದಾರೆ ಎಂದೆನಿಸುತ್ತದೆ ಎಂಬುದನ್ನು ನೀವು ಗಮನಿಸಿರಬಹುದು. ಪೆಟ್ರೋಲ್ ಮತ್ತು ಡೀಸೆಲ್‌ನ ಬೆಲೆಗಳಲ್ಲಿ ಹೆಚ್ಚಳ ಅಥವಾ ಕಾನೂನು ಭ್ರಷ್ಟನೊಬ್ಬ ಚಿತ್ರನಟನನ್ನು ಅಪಹರಿಸಿರುವುದು ಅಥವಾ ಇದು ಪ್ರಾಮುಖ್ಯತೆಯನ್ನು ಪಡೆದು ಸಮಾಜದಲ್ಲಿ ಮುಖ್ಯವಾಗಿ, ಚರ್ಚಿಸಲ್ಪಡತಕ್ಕದ್ದೇ ಇಲ್ಲವೇ ಎಂಬುದನ್ನು ವಿವಾದಾಂಶದ ಸ್ವರೂಪವೇ ನಿರ್ಧರಿಸುತ್ತದೆ. ವಿವಾದಾಂಶವೊಂದರ ಘರ್ಷಣೆಯ ಸ್ವರೂಪ ಅದನ್ನು 'ಸುದ್ದಿಯೋಗ್ಯ'ವನ್ನಾಗಿಸುತ್ತದೆ. ಇದು ಪತ್ರಿಕೆಯ ಮುಖಪುಟವನ್ನು ತಲುಪಬಹುದು ಅಥವಾ ಅದರ ಅಗ್ರಮಾನ್ಯ ಸುದ್ದಿಯಾಗಬಹುದು. ಮುಂದುವರೆದು, ವಿವಾದಾಂಶಗಳನ್ನು ಏಕಪಕ್ಷ ಅಥವಾ ಎರಡು ಪಕ್ಷದವೆಂದೂ ವರ್ಗೀಕರಿಸಬಹುದು.

ಉದಾಹರಣೆಗೆ, ಮರಣಾಂತ್ಯ ರೋಗದಿಂದ ಬಳಲುತ್ತಿರುವ ವ್ಯಕ್ತಿಯೊಬ್ಬನನ್ನು ನೋವಿಲ್ಲದಂತೆ ಸಾಯಿಸುವ ರೀತಿ ದಯಾಸಾವು (ಯುತನೇಸಿಯಾ) ಮತ್ತು ಭಾರತೀಯ ಅರ್ಥವ್ಯವಸ್ಥೆಯ ಉದಾರೀಕರಣ ಈ ಎರಡೂ ಎರಡು ಮುಖವುಳ್ಳ ವಿವಾದಾಂಶಗಳು. ಸಮಾಜದ ಒಂದು ವರ್ಗ ಇದಕ್ಕೆ ಬೆಂಬಲ ವ್ಯಕ್ತಪಡಿಸಿದರೆ, ಮತ್ತೊಂದು ಪಕ್ಷ ಇದನ್ನು ಬಲವಾಗಿ ವಿರೋಧಿಸುತ್ತದೆ. ಆದರೆ, ಭ್ರಷ್ಟಾಚಾರ ಮತ್ತು ರಾಜಕೀಯದ ಪಾತಕೀಕರಣ ಇತ್ಯಾದಿ ವಿಷಯಗಳಿಗೆ ಪರವಾಗಿ ಬಲವಾಗಿ ವಿರೋಧಿಸುತ್ತದೆ. ಆದರೆ, ಭ್ರಷ್ಟಾಚಾರ ಮತ್ತು ರಾಜಕೀಯದ ಪಾತಕೀಕರಣ ಇತ್ಯಾದಿ ವಿಷಯಗಳಿಗೆ ಪರವಾಗಿ ಯಾರೂ ಸಾರ್ವಜನಿಕವಾಗಿ ನಿಲ್ಲಲಾರರು. ಈ ರೀತಿಯಾದ ಅನೇಕ ಏಕಪಕ್ಷೀಯವಾದ ವಿವಾದಾಂಶಗಳಿರುವ ವಿಷಯಗಳಿವೆ. ಇಂತಹ ಅಂಶಗಳನ್ನು ಸಂಯೋಗಾತ್ಮಕ (Valence) ಅಂಶಗಳೆಂದು ಕರೆಯಲಾಗುತ್ತದೆ. ಏಕಪಕ್ಷೀಯವಾದರೂ, ಸಾಮಾಜಿಕ ಅನಿಷ್ಟಗಳೆಂದು ನೋಡುವುದರಿಂದ ಇವುಗಳನ್ನು ಕುರಿತು ಸಮಾಜದಲ್ಲಿ ಒಮ್ಮತದಿಂದ ಚರ್ಚಿಸಲಾಗುತ್ತದೆ.

ಏಕಪಕ್ಷೀಯ ಅಥವಾ ದ್ವಿಪಕ್ಷೀಯವಾದ ವಿವಾದಾಂಶಗಳು ಸಾಮಾಜಿಕ ಸಮಸ್ಯೆಗಳಾಗಿದ್ದು, ಆಂತರಿಕ ಘರ್ಷಣೆಗಳನ್ನು ಹೊಂದಿರುತ್ತವೆ. ಸಂಯೋಗಾತ್ಮಕ ವಿಚಾರಾಂಶಗಳನ್ನು ಚರ್ಚಿಸುವುದು ಪರಿಹಾರೋಪಾಯಗಳನ್ನು ತಲುಪಲಿಕ್ಕಾಗಿ (ಏಕೆಂದರೆ, ಅವುಗಳ ಅಸ್ತಿತ್ವವನ್ನು ಯಾರೂ ಪ್ರಶ್ನಿಸುವುದಿಲ್ಲ). ಆದರೆ ಕಾರ್ಯನೀತಿ ರೂಪಿಸುವವರು ಅನುಕೂಲಕ್ಕಾಗಿ ಬಳಸಬಹುದಾದ ಕಾರಣದಿಂದಲೇ ದ್ವಿಪಕ್ಷೀಯ ವಿವಾದಾಂಶಗಳಿಗೆ ಬೆಲೆ.

ಆದ್ದರಿಂದ, ಘರ್ಷಣೆಯ ಪರಿಮಾಣ, ಒಂದು ನಿರ್ದಿಷ್ಟ ವಿವಾದಾಂಶದೆಡೆಗೆ ಗಮನ ಸೆಳೆಯಲು ಸಮರ್ಥಿಸುವ ವ್ಯಕ್ತಿ ಅಥವಾ ಗುಂಪುಗಳು ಕಾರ್ಯಸೂಚಿಯಲ್ಲಿ ವಿವಾದಾಂಶವು 'ಮೇಲೆ ಏಳುತ್ತಿದೆಯೇ ಅಥವಾ ಇಳಿಯುತ್ತಿದೆಯೇ' ಎಂಬುದನ್ನು ನಿರ್ಧರಿಸುತ್ತವೆ. ವ್ಯಕ್ತಿಗಳೂ ಹಾಗೂ ಜನಗಳ ಗುಂಪು ಕಾರ್ಯಸೂಚಿಯನ್ನು ನಿರ್ಧರಿಸುವುದರಿಂದ, ತಮ್ಮ ಗುರಿಸಾಧಿಸಲು ಅಂತಹ ಗುಂಪುಗಳು ಮಾಧ್ಯಮವನ್ನು ತಂತ್ರಗಾರಿಕೆಯಿಂದ ಬಳಕೆ ಮಾಡಲು ಪ್ರಯತ್ನಿಸುತ್ತದೆ. ಕುಲಾಂತರಿ (Geneticaly modified) ಬೀಜಗಳು ಮತ್ತು ಆಹಾರಗಳ ವಿವಾದಾಂಶವನ್ನು ತೆಗೆದುಕೊಳ್ಳೋಣ.

ಪರಿಸರವಾದಿಗಳು ಮತ್ತು ಸರ್ಕಾರೇತರ ಸಂಸ್ಥೆಗಳು ಅಂತಹ ಬೀಜಗಳ ಜಾಲವನ್ನು ದೇಶದ ಒಳತರುವುದನ್ನು ವಿರೋಧಿಸಿದರು ಮತ್ತು ಮಾಧ್ಯಮದಲ್ಲಿ ಈ ವಿವಾದಾಂಶವು ವಿವರವಾಗಿ ಚರ್ಚೆಯಾಗುವುದನ್ನು ಖಾತ್ರಿ ಮಾಡಿಕೊಳ್ಳಲು ಮಾಧ್ಯಮ ಪ್ರಕಟಣೆಗಳನ್ನು ಬಿಡುಗಡೆ ಮಾಡಿದರು.

ಮಾಧ್ಯಮ ಸಮ್ಮೇಳನಗಳನ್ನೂ, ಕಾರ್ಯಾಗಾರಗಳನ್ನೂ, ಮತ್ತು ಸೆಮಿನಾರ್‌ಗಳನ್ನೂ ದೇಶದ ವಿವಿಧ ಭಾಗಗಳಲ್ಲಿ ಏಕಕಾಲಕ್ಕೆ ಆಯೋಜನೆ ಮಾಡಿದರು. ಸಾರ್ವಜನಿಕ ಕಾರ್ಯನೀತಿ ಪ್ರವರ್ತಕಗಳೆಂದು ಕರೆಯಲ್ಪಡುವವನ್ನು ಇಂತಹ ಚರ್ಚೆಗಳು ಆರಂಭಿಸುತ್ತವೆ. ಸಾರ್ವಜನಿಕ ಸಂಭಾಷಣೆಯನ್ನು ಪ್ರಾರಂಭಿಸಲು ಮಾಧ್ಯಮಗಳನ್ನು ತಂತ್ರಾತ್ಮಕವಾಗಿ ಬಳಕೆ ಮಾಡುವುದನ್ನು ಮಾಧ್ಯಮ ಸಮರ್ಥನೆ (Media advocacy) ಎಂದು ಕರೆಯಲಾಗುತ್ತದೆ. ಮಾಧ್ಯಮ ಸಮರ್ಥನೆಯ ಉಪಯೋಗ ಮಾಡಿಕೊಳ್ಳುವವರು ಕೇವಲ ಕಾರ್ಯಕರ್ತರಷ್ಟೇ ಅಲ್ಲ. ಸಾಮಾಜಿಕ ಜವಾಬ್ದಾರಿ ವಿಷಯವಾಗಿ ಕೆಲವೊಮ್ಮೆ ಮಾಧ್ಯಮಗಳು ತಾವೇ ಇಂತಹ ವಿವಾದಾಂಶಗಳ ಚರ್ಚೆ ಮಾಡಬಹುದು. ಇಂಡಿಯನ್ ಎಕ್ಸ್‌ಪ್ರೆಸ್ ಮತ್ತು ದಿ ಹಿಂದೂ ಪತ್ರಿಕೆಗಳು ಬೋಫೋರ್ಸ್ ಹಗರಣದ ಕಾಲಕ್ಕೆ ಕೈಗೊಂಡ ಪ್ರಚಾರ ನಮ್ಮ ನೆನಪಿನಲ್ಲಿ ಇನ್ನೂ ಹಸಿರಾಗಿಯೇ ಇದೆ.

ಕಾರ್ಯಸೂಚಿಯ ನಿಯೋಜನೆಯು ಮೇಲ್ನೋಟಕ್ಕೆ ಕಾಣುವಷ್ಟು ಸರಳವಾದ ಪ್ರಕಿಯೆ ಏನಲ್ಲ. ಮಾಧ್ಯಮ ಕಾರ್ಯಸೂಚಿ, ಸಾರ್ವಜನಿಕ ಕಾರ್ಯಸೂಚಿ ಮತ್ತು ಕಾರ್ಯನೀತಿಯ ಕಾರ್ಯಸೂಚಿ ಹಾಗು ಈ ಮೂರರ ನಡುವಿನ ಪಾರಸ್ಪರಿಕ ಸಂಬಂಧಗಳನ್ನು ಕಾರ್ಯಸೂಚಿ ನಿಯೋಜನೆಯ ಪ್ರಕ್ರಿಯೆ ಒಳಗೊಂಡಿದೆ ಎಂಬುದನ್ನು ನಾವು ಮನಗಾಣಬೇಕು.

ಯಾರು ಮುಖ್ಯ ಪ್ರಮುಖವಾದ ವಿಷಯಗಳು ಎಲ್ಲಿ ಸಂಭವಿಸುತ್ತವೆ ಮತ್ತು ಈ ಸಂಗತಿಗಳು ಏಕೆ ಮುಖ್ಯ ಎಂಬುದನ್ನು ಕುರಿತಂತೆ ಜನರು ಏನು ಆಲೋಚಿಸುತ್ತಾರೆ ಎನ್ನುವುದರ ಮೇಲಿನ ಸಂಭಾವ್ಯ ಪರಿಣಾಮಗಳನ್ನು ಕಡೆಗಣಿಸಿದ್ದಕ್ಕಾಗಿ ಹಿಂದಿನ ಕಾರ್ಯಸೂಚಿ ನಿಯೋಜನೆಯ ಸಂಶೋಧನೆಯನ್ನು ಇಂದು ಪ್ರಬಲವಾಗಿ ಟೀಕೆ ಮಾಡಲಾಗುತ್ತಿದೆ. ಮಾಧ್ಯಮಗಳ ಆದ್ಯತೆಗಳು, ಸಾರ್ವಜನಿಕರ ಹಾಗು ಕಾರ್ಯನೀತಿ ರೂಪಿಸುವವರ ಆದ್ಯತೆಗಳ ವ್ಯತ್ಯಾಸಗಳನ್ನು ಸ್ಪಷ್ಟವಾಗಿ ಗುರುತಿಸಬೇಕಾಗುತ್ತದೆ. ಆದ್ದರಿಂದ, ಕಾರ್ಯಸೂಚಿ ನಿಯೋಜನೆಯ ಪ್ರಕ್ರಿಯೆಯು ಮಾಧ್ಯಮ ವೃತ್ತಿನಿರತರು, ಸಾರ್ವಜನಿಕರು ಮತ್ತು ಕಾರ್ಯನೀತಿ ರೂಪಕರ ಗಮನವನ್ನು ಸೆಳೆಯಲು ನಡೆಯುತ್ತಿರುವ, ವಿವಾದಾಂಶಗಳ ಪ್ರತಿಪಾದಕರ ನಡುವೆ ನಡೆಯುತ್ತಿರುವ ಪೈಪೋಟಿಯೂ ಆಗುತ್ತದೆ.

ಕಾರ್ಯಸೂಚಿ ನಿಯೋಜನೆಗೆ ಸಂಬಂಧಿಸಿದಂತೆ, 'ಪ್ರಾಧಾನ್ಯತೆ' ಎನ್ನುವುದು ಒಂದು ಕೀಲಿ ಪದ. ವಿವಾದಾಂಶವೊಂದು ಕಾರ್ಯಸೂಚಿಯ ಮೇಲೆ ಎಷ್ಟು ಪ್ರಮುಖವಾಗಿದೆ ಎಂಬುದನ್ನು ಗ್ರಹಿಸುವ ಮಟ್ಟ ಇದು. ಅಂದರೆ, ವಿವಾದಾಂಶದ ಪ್ರಾಧಾನ್ಯತೆ' ಕಡಿಮೆಯಾಯಿತೆಂದರೆ, ಅದರ ಬಗ್ಗೆ ಚರ್ಚೆಯಾಗುವುದು ನಿಂತುಹೋಗುತ್ತದೆ. ಯಾವ ವಿಷಯವನ್ನು ಆದ್ಯತೆಯ ಆಧಾರದ ಮೇಲೆ ಯೋಚಿಸತಕ್ಕದ್ದು, ಚರ್ಚಿಸತಕ್ಕದ್ದು ಎಂಬುದನ್ನು ಮಾಧ್ಯಮ ಕಾರ್ಯಸೂಚಿಯ ಮೇಲಿನ ಪ್ರಾಧಾನ್ಯತೆಯು ಅದರ ವೀಕ್ಷಕರು, ಓದುಗರು ಮತ್ತು ಕೇಳುಗರಿಗೆ ತಿಳಿಹೇಳುತ್ತದೆ.

## 5.3.2 ಮಾಧ್ಯಮ ಕಾರ್ಯಸೂಚಿ ಅಧ್ಯಯನಗಳು

ಕಾರ್ಯಸೂಚಿ ನಿಯೋಜನೆಯನ್ನು ಹಲವಾರು ಅಂಶಗಳು ನಿರ್ಧರಿಸುತ್ತವೆ ಎಂಬುದನ್ನು ನಾವು ಗುರುತಿಸಿದ್ದೇವೆ. ವಿವಾದಾಂಶವೊಂದನ್ನು ಯಾವುದು ಮಾಧ್ಯಮ ಕಾರ್ಯಸೂಚಿಯ ಮೇಲೆ ಇರಿಸುತ್ತದೆ ಎಂಬುದನ್ನು ಪರೀಕ್ಷಿಸೋಣ. ಪ್ರಾಧಾನ್ಯತೆ, ವಿವಾದಾಂಶಕ್ಕೆ ಸಂಬಂಧಿಸಿದಂತೆ ಮಾಧ್ಯಮ ಸಂಸ್ಥೆಯಲ್ಲಿರುವ ಹಲವಾರು ದ್ವಾರಪಾಲಕರ ಪ್ರತಿಕ್ರಿಯೆಗಳು, ಮಾಧ್ಯಮ ಸಂಸ್ಥೆಯಲ್ಲಿನ ಕಾರ್ಯಪರಿಸರ, ಸುದ್ದಿ ಮತ್ತು ಮನರಂಜನೆಯ ಮೂಲಗಳು ಗಮನ ಸೆಳೆಯಲು ಮಾಧ್ಯಮ ವ್ಯಕ್ತಿಗಳನ್ನು ಹೇಗೆ ಅರಸುತ್ತಾರೆ ಎಂಬೆಲ್ಲ ಅಂಶಗಳೂ ಮಾಧ್ಯಮ ಕಾರ್ಯಸೂಚಿಯಲ್ಲಿ ವಿವಾದಾಂಶವೊಂದರ ಸ್ಥಾನವನ್ನು ನಿರ್ಧರಿಸುತ್ತವೆ.

ಮಾಧ್ಯಮಗಳ, ಸಾರ್ವಜನಿಕ ಮತ್ತು ಕಾರ್ಯನೀತಿ ಪೂರಕ ಕಾರ್ಯಸೂಚಿಗಳ ಆದ್ಯತೆಗಳನ್ನು ಪೃಥಕ್ಕರಿಸುವ ಅವಶ್ಯಕತೆಯನ್ನು ಒತ್ತಿ ಹೇಳುತ್ತಾ, ರೋಜರ್ಸ್ ಮತ್ತು ಡಿಯರಿಂಗ್ (1987)ರವರು, ಮಾಧ್ಯಮಗಳು ತಮ್ಮ ವಿಶ್ವಾಸಾರ್ಹತೆಯಲ್ಲಿಯೂ ವ್ಯತ್ಯಾಸಗಳನ್ನು ಹೊಂದಿರುತ್ತವೆ ಎಂಬುದನ್ನು ಗುರುತಿಸಿದರು. ಅವರ ಪ್ರಕಾರ, ಸುದ್ದಿ ಸಂಗತಿಗಳು ಬಗ್ಗೆ ಮಾಧ್ಯಮಗಳು ಹೊಂದಿರುವ ಬೆಲೆಯನ್ನೇ ಸಾರ್ವಜನಿಕರು ಹೊಂದಿಲ್ಲದಿರಬಹುದು. ಹಿಂದಿನ ಕಾರ್ಯಸೂಚಿಗಳನ್ನು ತಲೆಕೆಳಗಾಗಿಸುವಂತೆ ಅನಿರೀಕ್ಷಿತವಾದ ರೀತಿಗಳಲ್ಲಿ 'ನಿಜ ಪ್ರಪಂಚದ ಘಟನೆಗಳು' (ಮಾಧ್ಯಮದ ನಂಬುಗೆಗಳಿಗೆ ವ್ಯತಿರಿಕ್ತವಾಗಿ) ಹಸ್ತಕ್ಷೇಪ ಮಾಡಬಹುದೆಂದು ಐಯಂಗಾರ್ ಮತ್ತು ಕಿಂಡರ್ (1987)ರವರು ಇದಕ್ಕೆ ಹೆಚ್ಚುವರಿಯಾಗಿ ಸೇರಿಸಿದ್ದಾರೆ.

ಈ ಉದಾಹರಣೆಯನ್ನು ಗಮನಿಸಿ:

ಇಂಡಿಯನ್ ಎಕ್ಸ್‌ಪ್ರೆಸ್‌ನಂತಹ ವೃತ್ತಪತ್ರಿಕೆಗಳು ಅಂದಿನ ಪ್ರಧಾನಿಯಾಗಿದ್ದ ಇಂದಿರಾಗಾಂಧಿಯವರನ್ನು ಎದುರಿಸಿ ತುರ್ತುಪರಿಸ್ಥಿತಿಯನ್ನು ಹೇರಿದ್ದಕ್ಕಾಗಿ ಆಕೆಯನ್ನು ಉಗ್ರವಾಗಿ ಟೀಕಿಸಿದವು ಮತ್ತು ತುರ್ತುಪರಿಸ್ಥಿತಿ ವಿರುದ್ಧ ಜನಾಭಿಪ್ರಾಯವನ್ನು ಮೂಡಿಸುವಲ್ಲಿ ಯಶಸ್ವಿಯಾದವು. ನಂತರ, ಚಿಕ್ಕಮಗಳೂರು ಕ್ಷೇತ್ರದಿಂದ ಇಂದಿರಾಗಾಂಧಿ ಸ್ಪರ್ಧಿಸಿದಾಗ, ತನ್ನ ನ್ಯೂಸ್ ಕಾಲಂಗಳ ಮೂಲಕ ಇಂಡಿಯನ್ ಎಕ್ಸ್‌ಪ್ರೆಸ್ ಆಕೆಯನ್ನು ಸಂಪೂರ್ಣವಾಗಿ ವಿರೋಧಿಸಿತು. ಆದರೆ, ಕೊನೆಯಲ್ಲಿ ಇಂದಿರಾಗಾಂಧಿ ಆ ಕ್ಷೇತ್ರದಿಂದ ಚುನಾಯಿತರಾದರು. ಇಂದಿರಾಗಾಂಧಿಯವರ ವಿರುದ್ಧ ಪ್ರಚಾರಮಾಡಿ ಏನನ್ನು ಸಾಧಿಸಬಹುದೆಂದು ಇಂಡಿಯನ್ ಎಕ್ಸ್‌ಪ್ರೆಸ್ ಭಾವಿಸಿತ್ತೋ ಅವೆಲ್ಲವೂ ಆಕೆ ಗೆದ್ದ ಕೂಡಲೇ ಇಲ್ಲದಂತಾಯಿತು.

ಕೇವಲ ಮಾಧ್ಯಮಗಳು ಮಾತ್ರ ಶ್ರೋತೃಗಳ ಮೇಲೆ ಪ್ರಭಾವ ಬೀರುವುದಿಲ್ಲ. ಸಮೂಹ ಮಾಧ್ಯಮಗಳ ಮೇಲೇ ಹಲವಾರು ಪ್ರಭಾವಗಳು ಕೆಲಸ ಮಾಡುತ್ತವೆ ಎಂಬುದನ್ನು ಸಂಶೋಧಕರು ರುಜುವಾತುಪಡಿಸಿದ್ದಾರೆ. ಜಾಹೀರಾತುದಾರರು, ಸಾರ್ವಜನಿಕ ಸಂಪರ್ಕ ಸಿಬ್ಬಂದಿ, ವಿಜ್ಞಾನಿಗಳು ಹಾಗು ಸಾರ್ವಜನಿಕ ಮನೋವೃತ್ತಿಗಳು ಮತ್ತು ನಡಾವಳಿಯ ಮಾದರಿಗಳ ಮೇಲೆ ಹಿಡಿತಹೊಂದಿರುವ ವ್ಯಕ್ತಿಗಳೂ ಸಹ ಪ್ರಭಾವ ಬೀರುತ್ತಾರೆ. ಇದಕ್ಕೆ ಒಂದು ಸಂಭಾವ್ಯ ಕಾರಣವೆಂದರೆ, ತಮ್ಮ ಶ್ರೋತೃವರ್ಗದೊಂದಿಗೆ ಹೆಚ್ಚು ಸಂಪರ್ಕ ಹೊಂದದೆ ಮಾಧ್ಯಮ ವ್ಯಕ್ತಿಗಳು ಕಾರ್ಯನಿರ್ವಹಿಸುತ್ತಾರೆ ಮತ್ತು ಈ ಕಾರಣದಿಂದಲೇ ಈ ಮೇಲಿನ ಅಂಶಗಳಿಂದ ತಾವೇ ಪ್ರಭಾವಿತರಾಗಿಬಿಡುವ ಅವಕಾಶವನ್ನು ನೀಡುತ್ತಾರೆ.

**ಮಾಧ್ಯಮ ಕಾರ್ಯಸೂಚಿಯ ಮಾಪನ:** 'ವಿಷಯ ವಿಶ್ಲೇಷಣೆ' ಎಂಬ ಒಂದು ತಂತ್ರವನ್ನು ಉಪಯೋಗಿಸಿಕೊಂಡು ಮಾಧ್ಯಮ ಕಾರ್ಯಸೂಚಿಯ ಮಾಪನ ಮಾಡಲಾಗುತ್ತದೆ. ಸಂದೇಶಗಳಲ್ಲಿರುವ ಅರ್ಥದ ಪರಿಮಾಣ ಮಾಡುವುದೇ ವಿಷಯ ವಿಶ್ಲೇಷಣೆ. ಆದ್ದರಿಂದಲೇ, ವೃತ್ತಪತ್ರಿಕೆಗಳ ವಿಷಯ ವಿಶ್ಲೇಷಣೆಯನ್ನು ನಿರ್ದಿಷ್ಟ ವಿವಾದಾಂಶಕ್ಕೆ ಮೀಸಲಿಟ್ಟಿರುವ 'ಕಾಲಂ ಅಂಗುಲ'ಗಳ ಸ್ಥಳದ ಲೆಕ್ಕದಲ್ಲಿ ಮಾಧ್ಯಮ ಕಾರ್ಯಸೂಚಿಯನ್ನು ಅಳೆಯುತ್ತಾರೆ. ಒಬ್ಬ ಟೆಲಿವಿಷನ್ ವಿಷಯ ವಿಶ್ಲೇಷಕನು ನಿರ್ದಿಷ್ಟ ವಿವಾದಾಂಶಕ್ಕೆ ಮೀಸಲಿಟ್ಟ ಕಾಲ (ಗಂಟೆ, ನಿಮಿಷ ಹಾಗು ಸೆಕೆಂಡ್)ವನ್ನು ಮಾಪನ ಮಾಡುತ್ತಾನೆ.

## 5.3.3 ಸಾರ್ವಜನಿಕ ಕಾರ್ಯಸೂಚಿಯ ಅಧ್ಯಯನಗಳು

ಈಗಾಗಲೇ ತಿಳಿಸಿರುವಂತೆ, ಕಾರ್ಯಸೂಚಿಯನ್ನು ನಿಯೋಜಿಸುವುದು ಮತ್ತು ಜನಾಭಿಪ್ರಾಯವನ್ನು ಎರಕಹೊಯ್ಯುವುದನ್ನು ಮಾಡುವುದು ಕೇವಲ ಮಾಧ್ಯಮಗಳೇ ಅಲ್ಲ. ಸಾರ್ವಜನಿಕರಿಗೂ ತಮ್ಮದೇ ಆದ ಕಾರ್ಯಸೂಚಿ ಇರುತ್ತದೆ. ಕೆಲವೊಮ್ಮೆ ಇವೆರಡೂ ವಿರುದ್ಧವಾಗಿರಬಹುದು. ಯಾವುದೇ ಒಂದು ಕಾಲಕ್ಕೆ, ಸಾರ್ವಜನಿಕರು ನಿರ್ಧರಿಸಿಕೊಂಡಿರುವ ವಿಚಾರ ವಿಷಯಗಳ ಆದ್ಯತೆಯ ಪಟ್ಟಿ ಸಾರ್ವಜನಿಕ ಕಾರ್ಯಸೂಚಿ. ಸಾರ್ವಜನಿಕರು ಯಾವುದನ್ನು ಆದ್ಯತೆಯದು ಎಂದು ಪರಿಗಣಿಸುತ್ತಾರೋ ಅದು ಮಾಧ್ಯಮಗಳ ಪ್ರಾಶಸ್ತ್ಯಗಳೊಂದಿಗೆ ಹೊಂದಾಣಿಕೆ ಆಗಿಯೇ ಇರುತ್ತದೆ ಎಂದೇನಿಲ್ಲ. ಉದಾಹರಣೆಗೆ, ಚರ್ಚೆ ಮಾಡಲು, ಬೆಲೆಯ ಹೆಚ್ಚಳವು ಪ್ರಮುಖವಾದ ವಿಷಯ ಎಂದು ಸಾರ್ವಜನಿಕರು ಪರಿಗಣಿಸಿದರೆ, ಮಾಧ್ಯಮಗಳು ನೀರಸ ರಾಜಕೀಯವನ್ನೇ ಚರ್ಚಿಸುತ್ತಾ ಇರಬಹುದು. ಸಾರ್ವಜನಿಕ ಅಭಿಪ್ರಾಯಗಳನ್ನು ಹಿಡಿದುಕೊಂಡು, ಸಾಮಾನ್ಯವಾಗಿ ಸಾರ್ವಜನಿಕ ಕಾರ್ಯಸೂಚಿಯ ಮಾಪನ ಮಾಡಲಾಗುತ್ತದೆ. ಸಾಮಾನ್ಯವಾದ ಜನಾಭಿಪ್ರಾಯ ಸಂಗ್ರಹಣೆಯ ಒಂದು ನಿರ್ದಿಷ್ಟವಾದ ವಸ್ತು ವಿಚಾರವನ್ನು ಕುರಿತಂತೆ (ಮತ್ತೆ ಇದೂ ಸಹ ಮಾಧ್ಯಮವು ಯಾವುದನ್ನು ಮುಖ್ಯವೆಂದು ಪರಿಗಣಿಸುತ್ತದೋ ಅದು) ಪ್ರತಿಕ್ರಿಯೆ ನೀಡುವವನ ಅಭಿಪ್ರಾಯವನ್ನು ಕೇಳಿದರೆ, ಸಾರ್ವಜನಿಕ ಅಭಿಪ್ರಾಯದ ಪ್ರಮಾಣ ಸೂಚ್ಯಂಕವನ್ನು ನಿರ್ಧರಿಸಲು ಬಹುಮುಖ್ಯವಾದ ಸಮಸ್ಯೆ ಯಾವುದೆಂಬ ದಾರಿಯನ್ನು ಅನುಸರಿಸುತ್ತದೆ. "ದೇಶವು ಇಂದು ಎದುರಿಸುತ್ತಿರುವ ಅತಿ ಮುಖ್ಯವಾದ ಸಮಸ್ಯೆ ಯಾವುದು? "ಎಂಬಂತಹ ಪ್ರಶ್ನೆಗಳನ್ನು ಸಾರ್ವಜನಿಕರಿಗೆ ಕೇಳಲಾಗುತ್ತದೆ. ಬಹಳ ಹೆಚ್ಚಿನ ಸಂದರ್ಭಗಳಲ್ಲಿ, ಕೆಲವೊಂದು ಸಮಸ್ಯೆಗಳ ವರ್ಗವು ಕಾಲದ ಒಂದು ಅವಧಿಯಲ್ಲಿ ಬದಲಾಗುವುದೇ ಇಲ್ಲ (ಭ್ರಷ್ಟಾಚಾರ, ನಿರುದ್ಯೋಗ, ಘಾತಕ ಕಾರ್ಯಗಳು ಮತ್ತು ಆಡಳಿತದಲ್ಲಿ ಸ್ವಜನ ಪಕ್ಷಪಾತ). ಆದರೆ, ಈ ವಿವಾದಾಂಶಗಳ ವಸ್ತುಗಳು ಕಾಲಕಾಲಕ್ಕೆ ಬದಲಾಗುತ್ತವೆ. ಮೂಲತಃ ಅಮೇರಿಕಾದ ಒಂದು ಪರಿಕಲ್ಪನೆಯಾದ, ಸಾರ್ವಜನಿಕ ಕಾರ್ಯಸೂಚಿಯ ಮಾಪನವು ಭಾರತದಲ್ಲಿ ಇನ್ನು ಶೈಶವಾವಸ್ಥೆಯಲ್ಲೇ ಇದೆ.

## 5.3.4 ಕಾರ್ಯನೀತಿಯ ಸೂತ್ರದ ಕಾರ್ಯಸೂಚಿಯ ಅಧ್ಯಯನಗಳು

ಒಂದು ಸಾರ್ವಜನಿಕ ಕಾರ್ಯನೀತಿ ಸೂತ್ರವನ್ನು ಸಾಮಾನ್ಯವಾಗಿ ಒಂದು ಹೊಸ ಕಾನೂನು ಅಥವಾ ಕಟ್ಟಳೆಯ ರೂಪದಲ್ಲಿ ಹೊರತರಬಹುದು. ಸಾರ್ವಜನಿಕ ಕಾರ್ಯನೀತಿಗಳು ಯಾವಾಗಲೂ ಸಂಬಂಧಿತ ಸಮಸ್ಯೆಗೆ ಪರಿಹಾರ ಒದಗಿಸದೇ ಹೋಗಬಹುದು. ಆದರೆ, ಕೊನೆಯ ಪಕ್ಷ ಈ ಸಮಸ್ಯೆಗೆ ಒಂದು ಪ್ರತಿಕ್ರಿಯೆಯನ್ನು ಸಾಂಕೇತವನ್ನಾಗಿಸುವಲ್ಲಿ ಯಶಸ್ವಿಯಾಗುತ್ತದೆ. ಮಾಧ್ಯಮ ಮತ್ತು ಸಾರ್ವಜನಿಕ ಕಾರ್ಯಸೂಚಿಯ ಮೇಲೆ ಪ್ರಭಾವ ಬೀರುವಷ್ಟು ಸಮರ್ಥವಾಗಿರುವುದರಿಂದ ಕಾರ್ಯನೀತಿ ಸೂತ್ರದ ಕಾರ್ಯಸೂಚಿಯು ಮಹತ್ವವನ್ನು ಪಡೆಯುತ್ತದೆ. ಎರಡಕ್ಕಿಂತ ಹೆಚ್ಚು ಮಕ್ಕಳನ್ನು ಹೊಂದಿರುವ ಎಲ್ಲಾ ಸರ್ಕಾರೀ ನೌಕರರೂ ಪಡಿತರ ಚೀಟಿಗಳನ್ನು ಪಡೆಯಲು ಅನರ್ಹರಾಗುತ್ತಾರೆ ಎಂಬ ರಾಜ್ಯಸರ್ಕಾರದ ಪ್ರಕಟಣೆಯೊಂದು ಸಾರ್ವಜನಿಕ ಕಾರ್ಯಸೂಚಿಯ ಮೇಲೆ ಪ್ರಭಾವ ಬೀರುವುದು ನಿಶ್ಚಿತ ಮತ್ತು ಇದು ಮಾಧ್ಯಮಗಳಿಂದಲೂ ಬಹುವಾಗಿ ಚರ್ಚಿಸಲ್ಪಡುತ್ತದೆ.

ಸಾರ್ವಜನಿಕ ಕಾರ್ಯಸೂಚಿಯು ಕಾರ್ಯನೀತಿ ಸೂತ್ರದ ಕಾರ್ಯಸೂಚಿಯ ಮೇಲೆ ಬಹಳ ಹೆಚ್ಚಿನ ಪ್ರಭಾವವನ್ನು ಬೀರುತ್ತದೆ ಎಂದು ನಂಬಲಾಗುತ್ತದೆ. ಹಣಕಾಸು ಸಚಿವರು ಅವಶ್ಯಕ ಸಾಮಗ್ರಿಗಳ ಬೆಲೆಯಲ್ಲಿ ಏರಿಕೆ ಮಾಡಿದಾಗ, ಇಡೀ ದೇಶವೇ ಇದನ್ನು ಬಲವಾಗಿ ವಿರೋಧಿಸುತ್ತದೆ ಮತ್ತು ಕಾರ್ಯನೀತಿಯೋಜಕರು ಬೆಲೆಗಳ ಏರಿಕೆಯನ್ನು ಹಿಂತೆಗೆದುಕೊಳ್ಳುತ್ತಾರೆ. ಇಂತಹ ಹಲವಾರು ಘಟನೆಗಳನ್ನು ದೃಷ್ಟಾಂತರೂಪದಲ್ಲಿ ಕೊಡಬಹುದಾದರೂ, ಒಂದು ನಿರ್ಣಾಯಕವಾದ ಹೇಳಿಕೆ ನೀಡಲು ಸಾಧ್ಯವಾಗುವಷ್ಟು ಪ್ರಮಾಣದಲ್ಲಿ ಹೆಚ್ಚಿನ ಸಂಶೋಧನೆಗಳನ್ನು ನಡೆಸಲಾಗಿಲ್ಲ. ಸಂವಹನ ವಿದ್ವಾಂಸರು ಮಾಧ್ಯಮ ಮತ್ತು ಸಾರ್ವಜನಿಕ ಕಾರ್ಯಸೂಚಿಗಳಿಗೆ ನೀಡಿರುವಷ್ಟು ಪ್ರಾಮುಖ್ಯತೆಯನ್ನು ಕಾರ್ಯನೀತಿ ಸೂತ್ರದ ಕಾರ್ಯಸೂಚಿಗೆ ನೀಡಿಲ್ಲ ಎಂಬುದನ್ನು ಡಿಯರಿಂಗ್ ಮತ್ತು ರೋಜರ್ಸ್ ಗುರುತಿಸಿದ್ದಾರೆ.

## 5.4 ರೂಢಿ ಬೆಳವಣಿಗೆ ಸಿದ್ಧಾಂತ (Cultivation Theory)

ಶ್ರೋತೃಗಣದ ಹಿನ್ನೆಲೆ, ಮಾಧ್ಯಮ ಹಾಗು ವಿಷಯದಲ್ಲಿನ ಆಸಕ್ತಿ ಮತ್ತು ಪ್ರತಿಫಲ, ತಣಿಕೆಗಾಗಿ ಮಾಧ್ಯಮದ ಬಳಕೆ ಇತ್ಯಾದಿಯಾದ ಹಲವಾರು ಅಂಶಗಳನ್ನು ಅವಲಂಬಿಸಿ ಮಾಧ್ಯಮಗಳು ಶ್ರೋತೃಗಣದ ಮೇಲೆ ಸ್ವಲ್ಪ ಪ್ರಭಾವವನ್ನು ಹೊಂದಿವೆ ಎಂಬುದು ಈಗಾಗಲೇ ಸಿದ್ಧವಾಗಿದೆ. ಮಾಧ್ಯಮಗಳು, ಅದರಲ್ಲೂ ಮುಖ್ಯವಾಗಿ, ಟೆಲಿವಿಷನ್ ತನ್ನ ಶ್ರೋತೃಗಣದ ಮೇಲೆ ಯಾವುದೇ ರೀತಿಯ ಪ್ರಭಾವವನ್ನು ಹೊಂದಿದೆಯೇ? ಹೌದಾದರೆ, ಅದು ದೀರ್ಘಾವಧಿಯ ಪ್ರಭಾವವನ್ನು ಹೊಂದಬಲ್ಲದೇ ಎಂಬಿತ್ಯಾದಿಗಳನ್ನು ರೂಢಿ ಬೆಳವಣಿಗೆ ಸಿದ್ಧಾಂತವು ಹೇಗೆ ನೋಡುತ್ತದೆ ಎಂಬುದನ್ನು, ಈ ಘಟಕದ ಮೂಲಕ ಅರ್ಥಮಾಡಿಕೊಳ್ಳಲು ಸಾಧ್ಯವಾಗುತ್ತದೆ. ಮಾಧ್ಯಮಗಳು ಹೀಗೆ ಹಲವಾರು ಸಾರ್ವಜನಿಕ ಪ್ರತಿಕ್ರಿಯೆಗಳ ಅಂಗವಾಗುತ್ತವೆ ಎಂಬುದನ್ನು ನೀವು ಕಲಿಯಲಿದ್ದೀರಿ.

1960ರ ದಶಕದ ಕೊನೆಯ ಭಾಗದಲ್ಲಿ ಟೆಲಿವಿಷನ್‌ನಲ್ಲಿನ ಹಿಂಸೆಯು ಅದರ ಶ್ರೋತೃಗಣದ ಮೇಲೆ ಬೀರುವ ಪ್ರಭಾವದ ಸಾಧ್ಯತೆಗಳನ್ನು ಕುರಿತು ಅಮೇರಿಕದಲ್ಲಿ ಜಾರ್ಜ್ ಗರ್ಬ್ನರ್ ಮತ್ತು ಆತನ ಸಹೋದ್ಯೋಗಿಗಳು ವಿಸ್ತೃತವಾದ ಅಧ್ಯಯನಗಳನ್ನು ಕೈಗೊಂಡರು. ಟೆಲಿವಿಷನ್ನಿನ ಮೇಲೆ ತೋರಿಸಲಾಗುವ 'ನೈಜತೆ'ಯು ಬಹಳ ಹೆಚ್ಚಾಗಿ ವೀಕ್ಷಣೆ ಮಾಡುವವರ ಮನೋಧರ್ಮಗಳು, ನಂಬುಗೆಗಳು ಮತ್ತು ಕಾರ್ಯರೀತಿಗಳನ್ನು ರೂಪಿಸುತ್ತದೆ ಎಂದು ಈ ತಂಡವು ಸಿದ್ಧಾಂತೀಕರಿಸಿತು. ಈ ಸಿದ್ಧಾಂತವನ್ನು ಇತರ ಮಾಧ್ಯಮಗಳಿಗೂ ಅನ್ವಯಿಸಲಾಗುತ್ತದೆಯಾದರೂ, ಪುನರಾವರ್ತನೆಗೊಳ್ಳುವ ಮತ್ತು ವ್ಯಾಪಕವೂ ಆದ ಟೆಲಿವಿಷನ್ನಿನ ಸಂದೇಶಗಳ ಗುಣಲಕ್ಷಣಗಳಿಂದಾಗಿ ಅದಕ್ಕೆ ಹೆಚ್ಚಾಗಿ ಅನ್ವಯವಾಗುತ್ತದೆ.

ಯಾವ ಸಂಚಿತ ಪ್ರಕ್ರಿಯೆಯಿಂದ ಟೆಲಿವಿಷನ್ ಸಾಮಾಜಿಕ ವಾಸ್ತವ ಕುರಿತಂತಹ ನಂಬುಗೆಗಳನ್ನು ಉತ್ತೇಜಿಸುತ್ತದೋ ಅದನ್ನು ವ್ಯಕ್ತಿಯೊಬ್ಬನಲ್ಲಿ ಕೆಲವೊಂದು ರೂಢಿಗಳನ್ನು ಬೆಳೆಸುವ ಪ್ರಕ್ರಿಯೆ ಎಂದು ಕರೆಯಲಾಗುತ್ತದೆ. ಈ ಸಿದ್ಧಾಂತದ ಪ್ರಕಾರ, ಹಿಂಸಾಚಾರ ಕುರಿತಂತೆ ನಿಜವಾದ ಅಂಕಿ-ಅಂಶಗಳಿಗಿಂತ ಹೆಚ್ಚಿನದನ್ನು ತೋರಿಸಿ ಪ್ರಪಂಚವು ಹೆಚ್ಚು ಹಿಂಸಾತ್ಮಕವಾಗಿದೆ. ಅಪಾಯಕಾರಿಯಾದುದು ಎಂಬ ನೈಜವಲ್ಲದ ಅರ್ಥ ಬರುವಂತೆ ಟೆಲಿವಿಷನ್ ಬಹಳಷ್ಟು ಬಾರಿ ಪ್ರಸಾರ ಮಾಡುತ್ತದೆ. ಬಹಳ ಹೆಚ್ಚು ಕಾಲದವರೆಗೆ ಟೆಲಿವಿಷನ್ನಿನ ವೀಕ್ಷಣೆ ಮಾಡುವುದು, ವೀಕ್ಷಕರ ನಂಬುಗೆಗಳು ಮತ್ತು ಪ್ರಪಂಚವನ್ನು ಕುರಿತಂತೆ ಅವರ ದೃಷ್ಟಿಕೋನಗಳ ಮೇಲೆ ಪ್ರಭಾವ ಬೀರುತ್ತದೆ ಎಂದೂ, ತದನುವರ್ತಿಯಾಗಿ ವ್ಯಕ್ತಿಯೊಬ್ಬ ಹೆಚ್ಚು ಹೆಚ್ಚಾಗಿ ಟೆಲಿವಿಷನ್ ವೀಕ್ಷಣೆ ಮಾಡಿದಂತೆಲ್ಲಾ ಪ್ರಪಂಚವನ್ನು ಕುರಿತಂತೆ ಆತನ ದೃಷ್ಟಿಯೂ ವಿಕೃತಗೊಳ್ಳುತ್ತದೆ ಎಂದೂ ಈ ಸಿದ್ಧಾಂತಕಾರರು ನಂಬುತ್ತಾರೆ.

ಸಮೂಹ ಮಾಧ್ಯಮಕ್ಕೆ ತೆರೆದುಕೊಳ್ಳುವುದರ ಪ್ರಾಥಮಿಕ ಪ್ರಭಾವವು ಬದಲಾವಣೆಯನ್ನುಂಟು ಮಾಡುವ ಸಾಧ್ಯತೆ ಇಲ್ಲವೆಂದೂ, ಯಥಾಸ್ಥಿತಿಯನ್ನು ಕಾಯ್ದುಕೊಳ್ಳುವುದೇ ಆಗಿರುವುದೆಂದೂ ಈ ಹಿಂದೆ ಲಾಜರ್‌ಸ್‌ಫೆಲ್ಡ್‌ರವರಂತಹ ಸಂಶೋಧಕರು ನಂಬಿದ್ದರು. ಈ ದೃಷ್ಟಿಯಿಂದ ರೂಢಿ ಬೆಳವಣಿಗೆ ಸಿದ್ಧಾಂತವೂ ಅದೇ ರೀತಿಯದುದೇ. ದೀರ್ಘಕಾಲದವರೆಗೆ ಮಾಧ್ಯಮಕ್ಕೆ ತೆರೆದುಕೊಳ್ಳುವುದರ ಸಂಚಿತ ಪ್ರಭಾವ ಮಾತ್ರ ಬದಲಾವಣೆಯನ್ನು ತರುತ್ತದೆ ಎಂಬುದನ್ನು ಇದು ಸೂಚಿಸುತ್ತದೆ. ಬೇರೆ ಪದಗಳಲ್ಲಿ ಹೇಳುವುದಾದರೆ, ಇದು ನಿರಂತರತೆ, ಸ್ಥಿರೀಕರಣ ಮತ್ತು ತಕ್ಷಣದ ಬದಲಾವಣೆಗಳಿಗಿಂತ, ಕ್ರಮೇಣವಾಗಿ ಆಗುವ ಬದಲಾವಣೆಗಳನ್ನು ಕುರಿತದ್ದಾಗಿದೆ.

ರೂಢಿ ಬೆಳವಣಿಗೆ (Cultivation) ಪ್ರಕ್ರಿಯೆಯನ್ನು ವಿವರಿಸಲು ಗರ್ಬ್ನರ್ ಎರಡು ಪರಿಕಲ್ಪನೆಗಳನ್ನು ಉಪಯೋಗಿಸುತ್ತಾರೆ. ಅನುರಣನ ಮತ್ತು ಮುಖ್ಯವಾಹಿನಿಯಾಗಿಸುವಿಕೆ.

## 5.4.1 ಅನುರಣನ (Resonance)

ಬಹಳ ಸರಳವಾದ ಪದಗಳಲ್ಲಿ ಹೇಳುವುದಾದರೆ, ಅನುರಣನ ಯಾವುದೇ ವಿಷಯವು ವ್ಯಕ್ತಿಗತ ಅನುಭವಕ್ಕೆ ಯಾವ ಪ್ರಮಾಣದಲ್ಲಿ ಹೊಂದಾಣಿಕೆಯಾಗಿದೆ ಎಂಬುದರ ಮಟ್ಟ. ಉದಾಹರಣೆಗೆ ಹಿಂಸಾಚಾರಕ್ಕೆ ಬಲಿಯಾಗಿರುವ ವ್ಯಕ್ತಿಯೊಬ್ಬ ಟೆಲಿವಿಷನ್ನಿನ ಮೇಲಿನ ಹಿಂಸಾಚಾರಕ್ಕೆ ಹೆಚ್ಚು ಸಂಬಂಧ ಕಲ್ಪಿಸಬಲ್ಲ. ಈ ಪ್ರಕ್ರಿಯೆಯಲ್ಲಿ, ತನ್ನ ನೈಜ ಅನುಭವದಿಂದ ಬಲಗೊಳಿಸಿ, ವೀಕ್ಷಕನು ಸಂದೇಶದ ಪ್ರಭಾವದ ಮಟ್ಟವನ್ನು ಬಹಳ ಎತ್ತರಕ್ಕೆ ಕೊಂಡೊಯ್ಯುತ್ತಾನೆ. ಇಲ್ಲಿ ಆವನು ಮಾಡುವುದೇನೆಂದರೆ, ಈ ನಾಟಕದಲ್ಲಿ ತನ್ನ ಭಾವನೆಗಳು, ಮನೋಧರ್ಮಗಳು ಮತ್ತು ಕ್ರಿಯೆಗಳಿಂದ ತಾನೂ ಭಾಗಿಯಾಗಿಬಿಡುವುದು.

## 5.4.2 ಮುಖ್ಯವಾಹಿನಿಯಾಗಿಸುವಿಕೆ

ಸಮಾಜದಲ್ಲಿ ಆಂತರಿಕವಾಗಿ ಅಭಿಪ್ರಾಯಗಳನ್ನು ಸ್ಥಿರೀಕರಣಗೊಳಿಸುವ ಮತ್ತು ಏಕರೂಪವಾಗಿಸುವ ಟೆಲಿವಿಷನ್ನಿನ ಪ್ರಭಾವವನ್ನು ಇದು ತಿಳಿಸುತ್ತದೆ. ಟೆಲಿವಿಷನ್, ತನ್ನ ಕಾರ್ಯಕ್ರಮಗಳಲ್ಲಿ ದಿನಪೂರ್ತಿ ಹಿಂಸಾಚಾರವನ್ನೇ ತೋರಿಸಿದರೆ, ಹಿಂಸಾಚಾರವು ಸರ್ವೇಸಾಧಾರಣವಾದುದು ಎಂಬುದನ್ನು ವೀಕ್ಷಕರು ನಂಬತೊಡಗುತ್ತಾರೆ. ಕೇವಲ ಟಿವಿಯನ್ನು ಹೆಚ್ಚಾಗಿ ನೋಡುವವರು ಮಾತ್ರ ಈ ಪ್ರಭಾವಕ್ಕೆ ಒಳಗಾಗದೆ, ಈ ಮಂದಿ ಉಳಿದವರೊಂದಿಗೂ ಸಂಪರ್ಕ ಹೊಂದಿರುವುದರಿಂದ, ಕಡಿಮೆ ಪ್ರಮಾಣದಲ್ಲಿ ಟಿವಿ ನೋಡುವವರೂ ಸಹ ಪ್ರಭಾವಿತರಾಗುತ್ತಾರೆ ಎಂಬುದು ಇಲ್ಲಿ ಗಮನಾರ್ಹವಾದ ಅಂಶ.

## 5.4.1 ರೂಢಿ ಬೆಳವಣಿಗೆ ಸಿದ್ಧಾಂತದ ಮೂಲ ನಂಬುಗೆಗಳು

ಸುಮಾರು ಎರಡು ದಶಕಗಳ ಕಾಲದ ವಿಸ್ತೃತ ಸಂಶೋಧನೆಯ ನಂತರ ಗರ್ಬ್ನರ್ ಮತ್ತು ಆತನ ಸಹಭಾಗಿಗಳು ಆರು ಪ್ರಮುಖ ಮೂಲ ನಂಬುಗೆಗಳನ್ನು ಆಧರಿಸಿದ ಸಿದ್ಧಾಂತವನ್ನು ಮಂಡಿಸಿದರು. ಈ ಮೂಲ ನಂಬುಗೆಗಳೆಂದರೆ;

**ಟೆಲಿವಿಷನ್ ಅಸದೃಶವಾದುದು:** ರೂಢಿ ಬೆಳವಣಿಗೆ ಸಿದ್ಧಾಂತವು ಕೇವಲ ಟೆಲಿವಿಷನ್ನಿನ ಮೇಲೆ ಮಾತ್ರವೇ ಕೇಂದ್ರೀಕರಿಸುತ್ತದೆ. ಇತರ ಮಾಧ್ಯಮಗಳ ಮೇಲಲ್ಲ ಎಂಬ ಬಗ್ಗೆ ನೀವು ಅಚ್ಚರಿಪಡುತ್ತಿದ್ದರೆ, ಅದಕ್ಕೆ ಕಾರಣ ಅದರ ವ್ಯಾಪ್ತಿ ಮತ್ತು ವಿಶಿಷ್ಟವಾದ ಲಭ್ಯತೆ. ಅದೂ ಅಲ್ಲದೆ, ವೀಕ್ಷಕನ ಕಡೆಯಿಂದ ಹೆಚ್ಚಿನ ಕೌಶಲ್ಯತೆಯನ್ನೇನೂ ಅದು ಬಯಸುವುದಿಲ್ಲ ಮತ್ತು ಅದನ್ನು ಲಭ್ಯಮಾಡಿಕೊಳ್ಳಲು ತಗಲುವ ವೆಚ್ಚ ಸಾಕಷ್ಟು ಕಡಿಮೆಯೇ.

**ಟೆಲಿವಿಷನ್ ಸಾಂಸ್ಕೃತಿಕ ಮುಖ್ಯವಾಹಿನಿಯನ್ನು ರೂಪಿಸುತ್ತದೆ:** ಇದರ ಸುಲಭ ಲಭ್ಯತೆಯಿಂದಾಗಿ, ಸಾಂಸ್ಕೃತಿಕ ಮುಖ್ಯವಾಹಿನಿಯನ್ನು ರೂಪಿಸುವಂತಹ ಸಂದೇಶಗಳನ್ನು ಪ್ರಸಾರ ಮಾಡುವ ಸಾಮರ್ಥ್ಯವನ್ನು ಟೆಲಿವಿಷನ್ ಹೊಂದಿದೆ. ಪ್ರಪಂಚದ ವಾಸ್ತವ ಸತ್ಯಗಳು ಮತ್ತು ಟೆಲಿವಿಷನ್‌ನ ಮೇಲೆ ಬಿಂಬಿತವಾಗುವ ಸತ್ಯಗಳ ನಡುವಿನ ವ್ಯತ್ಯಾಸವನ್ನು ಇದು ಮಸುಕುಗೊಳಿಸುವುದಷ್ಟೇ ಅಲ್ಲದೆ, ಒಂದು ಏಕರೂಪದ ಮುಖ್ಯವಾಹಿನಿಯ ದೃಷ್ಟಿಯಲ್ಲಿ ವಾಸ್ತವ ಸತ್ಯಗಳನ್ನು ಸಮ್ಮಿಶ್ರಗೊಳಿಸುತ್ತದೆ. ಪ್ರಾಯೋಜಕರು (ಜಾಹೀರಾತುಗಳನ್ನು ನೀಡುವ ಮೂಲಕ ಇದಕ್ಕೆ ಆದಾಯ ನೀಡುವವರು)ಗಳ ಸಾಂಸ್ಥಿಕ ಆಶಯಗಳಿಗೆ ಹೊಂದುವಂತೆ ಇದು ಮುಖ್ಯವಾಹಿನಿಯ ದೃಷ್ಟಿಯನ್ನೇ ಬದಲಾಯಿಸುತ್ತದೆ ಎಂದು ಸಿದ್ಧಾಂತಕಾರರ ನಂಬುಗೆಯಾಗಿದೆ.

**ನಿರ್ದಿಷ್ಟ ಮನೋಧರ್ಮಗಳು ಮತ್ತು ಅಭಿಪ್ರಾಯಗಳು:** ಇವುಗಳಿಗಿಂತ ಮಿಗಿಲಾಗಿ, ಜೀವನವನ್ನು ಕುರಿತ ಮೂಲ ನಂಬುಗೆಗಳನ್ನು ಟೆಲಿವಿಷನ್ ವ್ಯಕ್ತಿಯೊಬ್ಬನಲ್ಲಿ ಬೆಳೆಸುತ್ತದೆ. ಜೀವನ ಮತ್ತು ಅದು ಹೇಗೆ ಕಾರ್ಯನಿರ್ವಹಿಸುತ್ತದೆ ಎಂಬುದರ ಬಗೆಗಿನ ವೀಕ್ಷಕರ ಆಧಾರಭೂತ ನಂಬುಗೆಗಳನ್ನು ರೂಪಿಸುವುದಕ್ಕಿಂತ ನಿರ್ದಿಷ್ಟವಾದ ನಂಬುಗೆಗಳು ಮತ್ತು ಅಭಿಪ್ರಾಯಗಳನ್ನು ಪ್ರೋತ್ಸಾಹಿಸುವಲ್ಲಿ ಟೆಲಿವಿಷನ್ ಕಡಿಮೆ ಪ್ರಭಾವಶಾಲಿ ಎಂಬುದನ್ನು ಈ ಮೂಲನಂಬುಗೆಯು ದೃಢವಾಗಿ ಹೇಳುತ್ತದೆ. ಅಂದರೆ, ಟೆಲಿವಿಷನ್ನಿನ ಮೇಲೆ ಚಿತ್ರಿತವಾಗುವ ಕೃತಕ ನೈಜತೆಯು, ನಿರ್ದಿಷ್ಟ ಜನ ಸಮುದಾಯಗಳ ಬಗ್ಗೆ, ನಿರ್ದಿಷ್ಟವಾದ ಅಭಿಪ್ರಾಯ ಧೋರಣೆಗಳಿಗೆ ದಾರಿಮಾಡಿಕೊಡಬಹುದು.

**ಸಂಪ್ರದಾಯವಾದಿ ಸಮಾಜೀಕರಣದ ಒಂದು ಮಾಧ್ಯಮ ಟೆಲಿವಿಷನ್:** ಈ ನಂಬುಗೆಯು, ಮೊದಲ ಮೂರು ನಂಬುಗೆಗಳ ತಾರ್ಕಿಕ ವಿಸ್ತರಣೆ, ಸುಧಾರಣೆ, ಬದಲಾವಣೆ ಮತ್ತು ಕಾರ್ಯವಾದಗಳಿಗೆ ಟೆಲಿವಿಷನ್‌ನಿಂದ ಪ್ರೋತ್ಸಾಹ ದೊರಕುವುದಿಲ್ಲವಾದ್ದರಿಂದ, ಇದು ಸಮಸ್ಥಿತಿಯನ್ನು ಕಾಯ್ದುಕೊಳ್ಳುವುದಕ್ಕೆ ಪ್ರೋತ್ಸಾಹ ನೀಡುತ್ತದೆ.

**ಸಂಸ್ಕೃತಿಯ ಮೇಲೆ ಕಾಣಸಿಗುವಂತಹ ಟೆಲಿವಿಷನ್‌ನ ಪ್ರಭಾವಗಳು ಸಾಕಷ್ಟು ಚಿಕ್ಕವು:** ಈ ನಂಬುಗೆಯು ಮೊದಲಿಗೆ ಆಶ್ಚರ್ಯವನ್ನು ಮೂಡಿಸುವಂತೆ ಕೇಳಿಸಬಹುದು. ಸಾಂಸ್ಕೃತಿಕ ಪ್ರಜ್ಞೆಯ ಮೇಲೆ ಟೆಲಿವಿಷನ್ನಿನ ಸಂಚಿತ ಪ್ರಭಾವವು (Cumulative effect) ಗಮನಾರ್ಹವಾದುದೆಂದೂ, ಈ ಪ್ರಭಾವದ ನಿರ್ದಿಷ್ಟ ಮಾಪನಗಳು ಸಂಪೂರ್ಣ ಪರಿಣಾಮವನ್ನು ತೋರದೆ ಹೋಗಬಹುದು ಎಂದೂ ರೂಢಿ ಬೆಳವಣಿಗೆ ಸಿದ್ಧಾಂತಕಾರರು ಹೇಳುತ್ತಾರೆ.

**ನವೀನ ತಂತ್ರಜ್ಞಾನಗಳು ಟೆಲಿವಿಷನ್ನಿನ ಪ್ರಭಾವವನ್ನು ಹಿಗ್ಗಿಸುತ್ತವೆ:** ಈ ಮೂಲ ನಂಬುಗೆಯನ್ನು ಕೇವಲ ಹತ್ತು ವರ್ಷಗಳ ಹಿಂದೆಯಷ್ಟೇ ಈ ಸಿದ್ಧಾಂತಕ್ಕೆ ಸೇರಿಸಲಾಯಿತು. ಹೊಸ ತಂತ್ರಜ್ಞಾನಗಳಾದ ವಿಡಿಯೋ ಕ್ಯಾಸೆಟ್ ರೆಕಾರ್ಡರ್ ಮತ್ತು ಟೆಲಿವಿಷನ್ನಿನ ಮೂಲಕ ಲಭ್ಯಮಾಡಿಕೊಳ್ಳಬಹುದಾದ ಇತ್ತೀಚಿಗಿನ ಅಂತರ್ಜಾಲ ಇವು ಟೆಲಿವಿಷನ್ನಿನ ಪ್ರಭಾವ ವಲಯವನ್ನು ಹಿಗ್ಗಿಸುತ್ತವೆಯೇ ಹೊರತು ಕುಗ್ಗಿಸುವುದಿಲ್ಲ.

## 5.4.2 ರೂಢಿ ಬೆಳವಣಿಗೆ ಸಿದ್ಧಾಂತದ ಬಗೆಗಿನ ಟೀಕೆಗಳು

ಬದುಕಲು ಪ್ರಪಂಚವು ಅಪಾಯಕಾರಿಯಾದ ಸ್ಥಳ ಎಂಬುದಕ್ಕೂ ಮತ್ತು ಬಹಳ ಹೆಚ್ಚಾಗಿ ಟೆಲಿವಿಷನ್ ವೀಕ್ಷಣೆ ಮಾಡುವವರ ಈ ಹೆದರಿಕೆಗೂ ಇರುವ ಸಹಸಂಬಂಧ ಬಹಳ ದುರ್ಬಲವಾದುದು ಎಂದು ರೂಢಿ ಬೆಳವಣಿಗೆ ಸಿದ್ಧಾಂತದ ಟೀಕಾಕಾರರು ಹೇಳುತ್ತಾರೆ.

ಕೇವಲ ಟೆಲಿವಿಷನ್ ಮಾತ್ರವಷ್ಟೇ ಜನರ ಮನೋಧರ್ಮಗಳನ್ನು ರೂಪಿಸುತ್ತದೆ ಎಂದು ನಂಬುವ ಕಾರಣಕ್ಕಾಗಿ ರೂಢಿ ಬೆಳವಣಿಗೆ ಸಿದ್ಧಾಂತವನ್ನು ಟೀಕೆ ಮಾಡಲಾಗುತ್ತದೆ. ಟೆಲಿವಿಷನ್ ಸಮಾಜವನ್ನು ಏಕಪ್ರಕಾರವಾಗಿಸುವ ಪ್ರವೃತ್ತಿಯನ್ನು ಹೊಂದಿದೆ ಎಂದು ಸಿದ್ಧಾಂತಕಾರರು ವಾದಿಸುತ್ತಾರಾದರೂ, ಜನರು ಇನ್ನೂ ತಮ್ಮ ಉದ್ದೇಶಗಳು ಮತ್ತು ಮನೋಧರ್ಮಗಳಲ್ಲಿ ಸಾಕಷ್ಟು ವಿಭಿನ್ನರಾಗಿಯೇ ಇದ್ದಾರೆ ಎಂದು ಸಮಾಜ ವಿಜ್ಞಾನಿಗಳು ಹೇಳುತ್ತಾರೆ. ಈ ಸಿದ್ಧಾಂತದ ವಿರುದ್ಧವಾದ ಮತ್ತೊಂದು ಟೀಕೆಯೆಂದರೆ, ಟೆಲಿವಿಷನ್ ಮತ್ತು ಹಿಂಸೆಗಳು ಒಟ್ಟಿಗೆ ಸಾಗುತ್ತಿವೆಯಾದರೂ, ಒಂದು ಮತ್ತೊಂದಕ್ಕೆ ಕಾರಣವೇನೂ ಅಲ್ಲ ಎಂಬುದು.

**ರೂಢಿ ಬೆಳವಣಿಗೆ:** ಸಿದ್ಧಾಂತಕಾರರು ತಮ್ಮ ಟೀಕಾಕಾರರ ವಿರುದ್ಧವಾಗಿ ಪ್ರತ್ಯುತ್ತರಗಳನ್ನು ನೀಡಿದ್ದಾರಾದರೂ, ಹೀಗೆ ಮಾಡುವಲ್ಲಿ ಅವರು ಬಹಳ ಯಶಸ್ವಿಯಾಗಿಲ್ಲ ಎಂದು ವಿದ್ವಾಂಸರು ಹೇಳುತ್ತಾರೆ. ಸಮಾಜದೆಡೆಗೆ ವೀಕ್ಷಕರ ಅಭಿಮುಖತೆ vs ಟೆಲಿವಿಷನ್‌ನ ಪ್ರಭಾವ, ರೂಢಿ ಬೆಳವಣಿಗೆಯಲ್ಲಿ ನವೀನ ತಂತ್ರಜ್ಞಾನಗಳ ಪ್ರಭಾವ ಇತ್ಯಾದಿಯಾದ ಹಲವಾರು ಇತರ ಅಂಶಗಳ ಬಗ್ಗೆ ಸಂವಹನ ವಿದ್ವಾಂಸರುಗಳಿಂದ ಅಡೆತಡೆಯಿಲ್ಲದಂತೆ ನಿರಂತರವಾಗಿ ಸಂಶೋಧನೆಗಳು ಕೈಗೊಳ್ಳಲ್ಪಡುತ್ತಿವೆ. ಏನೇ ಆದರೂ ರೂಢಿ ಬೆಳವಣಿಗೆ ಸಿದ್ಧಾಂತವು ಸಂವಹನ ಸಂಶೋಧನೆಯಲ್ಲಿ ಬಹಳ ಮುಖ್ಯವಾದ ಪಾತ್ರವನ್ನು ನಿರ್ವಹಿಸುವುದು ಮುಂದುವರೆಯಲಿದೆ.

## 5.5 ಸಾರಾಂಶ

ಮಾಧ್ಯಮಗಳು ಕಣ್ಗಾವಲು ಕಾಯುವಿಕೆ, ಸಹಸಂಬಂಧ, ಸಂಸ್ಕೃತಿಯ ಪ್ರಸರಣ ಮತ್ತು ಮನರಂಜನೆಯಂತಹ ಕಾರ್ಯಗಳನ್ನು ನಿರ್ವಹಿಸುತ್ತವೆ. ಮಾಧ್ಯಮಗಳು ಅದರ ಶ್ರೋತೃಗಳಿಗೆ ಏನು ಮಾಡಬಲ್ಲವು ಎಂಬುದನ್ನು ನಾವು ಈವರೆಗೂ ಚರ್ಚಿಸುತ್ತಲೇ ಬಂದಿದ್ದೇವೆ. ಹಲವು ಮಾಧ್ಯಮಗಳ ಬಳಕೆ ಮಾಡುವುದರಿಂದ ಮಾಧ್ಯಮ ಗ್ರಾಹಕರು ಯಾವ ಉಪಯೋಗಗಳನ್ನು ಪಡೆದುಕೊಂಡಿದ್ದಾರೆ ಎಂಬ ಮಾಹಿತಿಯನ್ನು ಹೊರತರಲು ಸರ್ವೇಕ್ಷಣೆಗಳನ್ನು, ಪ್ರಕರಣ ಅಧ್ಯಯನಗಳನ್ನು ನಡೆಸಲಾಗಿದೆ, ಶ್ರೋತೃಗಳ ವಿಶ್ಲೇಷಣೆಯನ್ನು ಮಾಡಲಾಗಿದೆ. ಮಾಧ್ಯಮ ಶ್ರೋತೃಗಳನ್ನು ಸಂಭಾವ್ಯ, ಹಣ ನೀಡುವ ಮತ್ತು ತಲುಪಲ್ಪಟ್ಟವರು ಎಂಬ ಮೂರು ವರ್ಗಗಳಾಗಿ ವಿಭಾಗ ಮಾಡಬಹುದಾಗಿದೆ.

ಯಾರೂ ಯಾರನ್ನು ತಲುಪಲು ಸಾಧ್ಯವೋ ಅವರೆಲ್ಲರೂ ಸಂಭಾವ್ಯ ಶ್ರೋತೃಗಳು. ಮಾಧ್ಯಮ ಉತ್ಪನ್ನಗಳಾದ ವೃತ್ತಪತ್ರಿಕೆಗಳು, ಆಡಿಯೋ / ವಿಡಿಯೋ ಕ್ಯಾಸೆಟ್‌ಗಳು, ಸಿ.ಡಿ.ಗಳು, ಚಲನಚಿತ್ರಕ್ಕೆ ಟಿಕೆಟ್‌ಗಳು ಮತ್ತು ಕೇಬಲ್ ಟೆಲಿವಿಷನ್ ಮುಂತಾದವುಗಳಿಗೆ ಹಣಕೊಟ್ಟು ಖರೀದಿ ಮಾಡುವವರೆಲ್ಲರೂ ಹಣನೀಡುವ ಶ್ರೋತೃಗಳು. ಯಾರು ಮಾಧ್ಯಮವನ್ನೇ ಉಪಯೋಗ ಮಾಡಿಕೊಳ್ಳುತ್ತಾರೋ ಅಂಥಹವರು, ಉದಾಹರಣೆಗೆ ವೃತ್ತಪತ್ರಿಕೆಗಳ ಹಲವಾರು ಓದುಗರು, ಮತ್ತಿತರರು ತಲುಪಲ್ಪಟ್ಟ ಶ್ರೋತೃಗಳು.

ಶ್ರೋತೃಗಣದ ಸದಸ್ಯರಿಗೆ ಕೆಲವೊಂದು ಅವಶ್ಯಕತೆಗಳಿದ್ದು, ಅವು ಮಾಧ್ಯಮಗಳಿಂದ ಪೂರೈಸಲ್ಪಡುತ್ತವೆ ಎಂಬುದನ್ನು, 'ಉಪಯೋಗಗಳು ಮತ್ತು ತಣಿಕೆ'ಯ ವಿಧಾನವು ತೋರಿಸುತ್ತದೆ. ಜ್ಞಾನ, ಮನಸ್ಸನ್ನು ಬೇರೆಡೆಗೆ ತಿರುಗಿಸುವುದು, ಸಾಮಾಜಿಕ ಉಪಯುಕ್ತತೆ ಮತ್ತು ಹಿಂಬರಿತಗಳಂತಹ ಮಾಧ್ಯಮಗಳಿಂದ ಪೂರೈಸಲ್ಪಡುವ ಅಗತ್ಯತೆಗಳನ್ನು ಮಾಧ್ಯಮಗಳ ತಣಿಕೆ ಎಂದು ಕರೆಯಲಾಗುತ್ತದೆ. ತನ್ನ ವಿಚಾರಾಂಶಗಳ ಪ್ರಾಶಸ್ತ್ಯೀಕರಣ ಮಾಡಿಕೊಂಡೇ ಪ್ರತಿಯೊಂದು ಸಾಮಾಜಿಕ ವ್ಯವಸ್ಥೆಯೂ ಕಾರ್ಯ ನಡೆಸುತ್ತದೆ. 'ಮಾಧ್ಯಮ ನಿರತರು, ಸಾರ್ವಜನಿಕರು ಮತ್ತು ಕಾರ್ಯನೀತಿ ರೂಪಕರ ಗಮನಸೆಳೆಯಲು ವಿವಾದಾಂಶಗಳ ನಡುವೆ ನಡೆಯುತ್ತಿರುವ ಪೈಪೋಟಿ" ಎಂದು ಕಾರ್ಯಸೂಚಿ ನಿಯೋಜನೆಯನ್ನು ಅರ್ಥೈಸಬಹುದು.

ಸಮಾಜದಲ್ಲಿ ಕೆಲವೊಂದು ವಿವಾದಾಂಶಗಳ ಮಾಹಿತಿಯು ಜನರಿಗೆ ಉಪಲಬ್ಧವಿದ್ದರೆ ಮತ್ತೆ ಕೆಲವೊಂದು ಲಭ್ಯವಾಗುವುದಿಲ್ಲ. ಸಾರ್ವಜನಿಕ ಅಭಿಪ್ರಾಯವು ಹೇಗೆ ರೂಪುಗೊಳ್ಳುತ್ತದೆ ಮತ್ತು ಕಾರ್ಯನೀತಿ ರೂಪಕರು ಕೆಲವೊಂದು ಅಂಶಗಳನ್ನು ಮಾತ್ರ ಉದ್ದೇಶಿಸಿ, ಉಳಿದವನ್ನು ಏಕೆ ಕಡೆಗಣಿಸುತ್ತಾರೆ ಎಂಬುದನ್ನು ಕಾರ್ಯಸೂಚಿ ನಿಯೋಜನೆಯು ವಿವರಿಸುತ್ತದೆ. ವಿವಾದಾಂಶಗಳ ನಡುವಿನ ಪೈಪೋಟಿಯೇ ಕಾರ್ಯಸೂಚಿಯ ನಿಯೋಜನೆಯನ್ನು ನಿರ್ಧರಿಸುವ ಅಂಶ. ವಿವಾದಾಂಶಗಳನ್ನು ಏಕಪಕ್ಷೀಯ ಅಥವಾ ದ್ವಿಪಕ್ಷೀಯ ಎಂದೂ ವಿಂಗಡಿಸಬಹುದು. ಮಾಧ್ಯಮ ಕಾರ್ಯಸೂಚಿ, ಸಾರ್ವಜನಿಕ ಕಾರ್ಯಸೂಚಿ ಮತ್ತು ಕಾರ್ಯನೀತಿಯ ಕಾರ್ಯಸೂಚಿ ಹಾಗು ಈ ಮೂರರ ನಡುವಿನ ಪಾರಸ್ಪರಿಕ ಸಂಬಂಧಗಳನ್ನು ಕಾರ್ಯಸೂಚಿ ನಿಯೋಜನೆಯ ಪ್ರಕ್ರಿಯೆಯು ಒಳಗೊಂಡಿದೆ.

ಯಾವ ವಿವಾದಾಂಶಗಳನ್ನು ಆದ್ಯತೆಯ ಆಧಾರದ ಮೇಲೆ ಯೋಚಿಸತಕ್ಕದ್ದು, ಚರ್ಚಿಸತಕ್ಕದ್ದು ಎಂಬುದನ್ನು ತನ್ನ ವೀಕ್ಷಕರು, ಓದುಗರು ಮತ್ತು ಕೇಳುಗರಿಗೆ ಮಾಧ್ಯಮ ಕಾರ್ಯಸೂಚಿಯ ಮೇಲಿರುವ 'ಪ್ರಾಧಾನ್ಯತೆ'ಯ ಅಂಶವು ಸೂಚಿಸುತ್ತದೆ. ಪ್ರಾಧಾನ್ಯತೆ, ವಿವಾದಾಂಶಕ್ಕೆ ಸಂಬಂಧಿಸಿದಂತೆ ಮಾಧ್ಯಮ ಸಂಸ್ಥೆಯಲ್ಲಿರುವ ಹಲವಾರು ದ್ವಾರಪಾಲಕರ ಪ್ರತಿಕ್ರಿಯೆಗಳು, ಮಾಧ್ಯಮ ಸಂಸ್ಥೆಯ ಕಾರ್ಯಪರಿಸರ, ಮಾಧ್ಯಮ ವ್ಯಕ್ತಿಗಳ ಗಮನಸೆಳೆಯಲು ಸುದ್ದಿ ಮತ್ತು ಮನರಂಜನೆಯ ಮೂಲಗಳು ಅವರನ್ನು ಹೇಗೆ ಆರಿಸುತ್ತವೆ ಈ ಎಲ್ಲ ಅಂಶಗಳೂ ಮಾಧ್ಯಮ ಕಾರ್ಯಸೂಚಿಯಲ್ಲಿ ವಿವಾದಾಂಶವೊಂದರ ಸ್ಥಾನವನ್ನು ನಿರ್ಧರಿಸುತ್ತದೆ. 'ವಿಷಯ ವಿಶ್ಲೇಷಣೆ' ಎಂಬ ತಂತ್ರವನ್ನು ಉಪಯೋಗಿಸಿಕೊಂಡಿರುವ ವಿವಾದಾಂಶಗಳ ಆದ್ಯತೆಯ ಪಟ್ಟಿ ಸಾರ್ವಜನಿಕ ಕಾರ್ಯಸೂಚಿ.

ಸಾರ್ವಜನಿಕ ಅಭಿಪ್ರಾಯಗಳನ್ನು ಹಿಡಿದುಕೊಂಡು, ಸಾಮಾನ್ಯವಾಗಿ ಸಾರ್ವಜನಿಕ ಕಾರ್ಯಸೂಚಿಯ ಮಾಪನ ಮಾಡಲಾಗುತ್ತದೆ. ಮಾಧ್ಯಮ ಮತ್ತು ಸಾರ್ವಜನಿಕ ಕಾರ್ಯಸೂಚಿಯ ಮೇಲೆ ಪ್ರಭಾವ ಬೀರುವಷ್ಟು ಸಮರ್ಥವಾಗಿರುವುದರಿಂದ ಕಾರ್ಯನೀತಿ ಸೂತ್ರದ ಕಾರ್ಯಸೂಚಿಯು ಮಹತ್ವವನ್ನು ಪಡೆಯುತ್ತದೆ. ಸಾರ್ವಜನಿಕ ಕಾರ್ಯಸೂಚಿಯು ಕಾರ್ಯನೀತಿ ಸೂತ್ರದ ಕಾರ್ಯಸೂಚಿಯ ಮೇಲೆ ಬಹಳ ಹೆಚ್ಚಿನ ಪ್ರಭಾವವನ್ನು ಬೀರುತ್ತದೆ ಎಂದು ನಂಬಲಾಗುತ್ತದೆ. ಮಾಧ್ಯಮ ಮತ್ತು ಸಾರ್ವಜನಿಕ ಕಾರ್ಯಸೂಚಿಯನ್ನು ಅಧ್ಯಯನ ಮಾಡುವಲ್ಲಿ ಸಾಕಷ್ಟು ಸಂಶೋಧನೆ ನಡೆದಿದೆಯಾದರೂ ಕಾರ್ಯನೀತಿ ಸೂತ್ರದ ಕಾರ್ಯಸೂಚಿಯನ್ನು ಕುರಿತು ಹೆಚ್ಚಿನ ಕೆಲಸ ನಡೆದಿಲ್ಲ.

ಟೆಲಿವಿಷನ್ನಿನ ಮೇಲೆ ತೋರಿಸಲ್ಪಡುವಂತಹ 'ನೈಜತೆ'ಯು ಬಹಳ ಹೆಚ್ಚಾಗಿ ವೀಕ್ಷಣೆ ಮಾಡುವವರ ಮನೋಧರ್ಮಗಳು, ನಂಬುಗೆಗಳು ಮತ್ತು ಕಾರ್ಯಸ್ವರೂಪಗಳನ್ನು ನಿರ್ಧರಿಸುತ್ತದೆ ಎಂದು ಗರ್ಬ್ನರ್ ಮತ್ತು ಅವರ ತಂಡವು ಸಿದ್ಧಾಂತೀಕರಿಸಿದೆ. ಯಾವ ಸಂಚಿತ ಪ್ರಕ್ರಿಯೆಯಿಂದ ಟೆಲಿವಿಷನ್ ಸಾಮಾಜಿಕ ವಾಸ್ತವ ಕುರಿತಂತಹ ನಂಬುಗೆಗಳನ್ನು ಉತ್ತೇಜಿಸುತ್ತದೆ, ಅದನ್ನು ರೂಢಿ ಬೆಳವಣಿಗೆ ಎಂದು ಗುರುತಿಸಲಾಗುತ್ತದೆ. ಈ ದೃಷ್ಟಿಯಿಂದ ರೂಢಿ ಬೆಳವಣಿಗೆ ಸಿದ್ಧಾಂತವು ಲಾಜರ್‌ಫೆಲ್ಡ್‌ರವರ ಸಿದ್ಧಾಂತಕ್ಕೆ ಸದೃಶವಾದುದು. ದಿನಪೂರ್ತಿ ಟೆಲಿವಿಷನ್ ತನ್ನ ಕಾರ್ಯಗಳಲ್ಲಿ ಹಿಂಸೆಯನ್ನೇ ಬಿಂಬಿಸುತ್ತಾ ಹೋದರೆ ಹಿಂಸೆಯು ಸರ್ವೇಸಾಮಾನ್ಯವಾದುದು ಎಂದು ನಂಬಲು ವೀಕ್ಷಕರು ಪ್ರಾರಂಭಿಸುತ್ತಾರೆ.

ರೂಢಿ ಬೆಳವಣಿಗೆ ಸಿದ್ಧಾಂತವು ಆರು ಮೂಲನಂಬುಗೆಗಳನ್ನು ಹೊಂದಿದೆ. ಅವುಗಳೆಂದರೆ:

ಅ) ಟೆಲಿವಿಷನ್ ಅಸದೃಶವಾದುದು.

ಆ) ಟೆಲಿವಿಷನ್ ಸಾಂಸ್ಕೃತಿಕ ಮುಖ್ಯವಾಹಿನಿಯನ್ನು ರೂಪಿಸುತ್ತದೆ.

ಇ) ನಿರ್ದಿಷ್ಟ ಮನೋಧರ್ಮಗಳು ಮತ್ತು ಅಭಿಪ್ರಾಯಗಳಿಗಿಂತ ಮಿಗಿಲಾಗಿ, ಜೀವನವನ್ನು ಕುರಿತ ಮೂಲ ನಂಬುಗೆಗಳನ್ನು ಟೆಲಿವಿಷನ್ ವ್ಯಕ್ತಿಯೊಬ್ಬನಲ್ಲಿ ರೂಢಿ ಮಾಡುತ್ತದೆ.

ಈ) ಸಂಪ್ರದಾಯವಾದಿ ಸಮಾಜೀಕರಣದ ಒಂದು ಮಾಧ್ಯಮ ಟೆಲಿವಿಷನ್.

ಉ) ಸಂಸ್ಕೃತಿಯ ಮೇಲೆ ಕಾಣಿಸಿಗುವಂತಹ ಟೆಲಿವಿಷನ್‌ನ ಪ್ರಭಾವಗಳು ಸಾಕಷ್ಟು ಚಿಕ್ಕವು, ಮತ್ತು

ಊ) ನವೀನ ತಂತ್ರಜ್ಞಾನಗಳು ಟೆಲಿವಿಷನ್ ಪ್ರಭಾವವನ್ನು ಹಿಗ್ಗಿಸುತ್ತವೆ.

ಕೇವಲ ಟೆಲಿವಿಷನ್ ಮಾತ್ರವಷ್ಟೇ ಜನರ ಮನೋಧರ್ಮಗಳನ್ನು ರೂಪಿಸುತ್ತವೆ ಎಂದು ನಂಬಿರುವ ಕಾರಣಕ್ಕಾಗಿ ರೂಢಿ ಬೆಳವಣಿಗೆ ಸಿದ್ಧಾಂತವನ್ನು ಟೀಕಿಸಲಾಗುತ್ತದೆ.

**ಚಟುವಟಿಕೆ -1**

1. ಇತ್ತೀಚಿನ ವೃತ್ತಪತ್ರಿಕೆಗಳನ್ನು ನೋಡಿ ಯಾವ ವಿವಾದಾಂಶಗಳು ಪ್ರಾಮುಖ್ಯತೆ ಪಡೆದುಕೊಂಡಿವೆ ಎಂಬುದನ್ನು ಕಂಡು ಹಿಡಿಯಿರಿ. ಟೆಲಿವಿಷನ್‌ಗೆ ಸಂಬಂಧಿಸಿದಂತೆ ಸಹ ಈ ಕಾರ್ಯಾಭ್ಯಾಸವನ್ನು ಮಾಡಿ.

2. ವಿವಾದಾಂಶಗಳಿಗೆ ಸಂಬಂಧಿಸಿದಂತೆ ನಿಮ್ಮ ಆದ್ಯತೆಗಳನ್ನು ಪಟ್ಟಿಮಾಡಿ ಮತ್ತು ವೃತ್ತಪತ್ರಿಕೆಗಳು ನೀಡಿರುವ ಪ್ರಾಶಸ್ತ್ಯಗಳೊಂದಿಗೆ ಇದು ತಾಳೆಹೊಂದುತ್ತದೆಯೇ ಎಂಬುದನ್ನು ಪರೀಕ್ಷಿಸಿಕೊಳ್ಳಿ.

3. ಇತ್ತೀಚಿನ ವೃತ್ತಪತ್ರಿಕೆಗಳನ್ನು ಓದಿದ ನಂತರ, ಮಾಧ್ಯಮ ಕಾರ್ಯಸೂಚಿಯು, ಕಾರ್ಯನೀತಿ ಸೂತ್ರದ ಕಾರ್ಯಸೂಚಿಯೊಂದಿಗೆ ಹೊಂದುತ್ತದೆಯೇ ಎಂಬುದನ್ನು ಗುರುತಿಸಿ. ಹೇಗೆ ಎಂಬುದನ್ನು ವಿವರಿಸಿ.

## 5.6 ನಿಮ್ಮ ಪ್ರಗತಿ ಪರಿಶೀಲನೆ

**ಸೂಚನೆ:** ನಿಮ್ಮ ಉತ್ತರಗಳನ್ನು ಈ ಘಟಕದಲ್ಲಿ ನೀಡಲಾಗಿರುವ ವಿವರದೊಂದಿಗೆ ಹೋಲಿಸಿ.

1) ಮಾಧ್ಯಮ ತಣಿಕೆಯ ಪರಿಕಲ್ಪನೆಯನ್ನು ವಿವರಿಸಿ.

2) ಮಾಧ್ಯಮ ಕಾರ್ಯಸೂಚಿಯನ್ನು ಕುರಿತು ಒಂದು ಲಘು ಟಿಪ್ಪಣಿ ಬರೆಯಿರಿ.

3) ರೂಢಿ ಬೆಳವಣಿಗೆ ಸಿದ್ಧಾಂತವನ್ನು ವಿವರಿಸಿ.

## 5.7 ಹೆಚ್ಚಿನ ಓದಿಗಾಗಿ


1. Bouma and Atkinson, A Handbook of Social Science Research, Oxford University Press - New York, 1995.

2. David Dooley, Social Research Methods, Prentice - Hall of India Pvt. Ltd.-New Delhi, 1995.



ಬರಹ: ತೇಜಸ್ವಿ ನವಿಲೂರ್ ಮತ್ತು ಬಿ. ಪಿ. ಸತ್ಯೇಂದ್ರ ರಾವ್

# ಘಟಕ 1 ಸಂವಹನ ಸಂಶೋಧನೆಯ ಸ್ವರೂಪ ಮತ್ತು ಮಹತ್ವ

ರಚನೆ


1.0 ಉದ್ದೇಶಗಳು

1.1 ಪ್ರಸ್ತಾವನೆ

1.2 ಪರಿಣಾಮಗಳ ಸಂಶೋಧನೆ

1.3 ವರ್ತನೆಯ ಪರಿವರ್ತನೆಗಳು

1.4 ಮೂಲ ನಿಯಮಗಳು

1.5 ಸಾರಾಂಶ

1.6 ನಿಮ್ಮ ಪ್ರಗತಿ ಪರಿಶೀಲನೆ

1.7 ಹೆಚ್ಚಿನ ಓದಿಗಾಗಿ

## 1.0 ಉದ್ದೇಶಗಳು

ಸಮೂಹ ಮಾಧ್ಯಮಗಳು ಶಕ್ತಿಶಾಲಿಯಾದ ಸಂಸ್ಥೆಗಳಾಗಿ ಬೆಳೆದು ನಿಂತಿದ್ದು, ಜಗತ್ತಿನ ಜನರ ದೈನಂದಿನ ಜೀವನದಲ್ಲಿ ಇವು ಹಾಸುಹೊಕ್ಕಾಗಿ ಬೆಸೆದುಕೊಂಡಿವೆ. ಸಮೂಹ ಮಾಧ್ಯಮಗಳ ಸಂವಹನ ತನ್ನ ಗ್ರಾಹಕರ ಮೇಲೆ ಬೀರುತ್ತಿರುವ ಅಗಾಧವಾದ ಪರಿಣಾಮವು ಹತ್ತು ಹಲವು ಪ್ರಶ್ನೆಗಳನ್ನು ಮೇಲೆತ್ತಿದೆ. ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿ ಸಮೂಹ ಮಾಧ್ಯಮ ಸಂಶೋಧನೆಯು ಚೆನ್ನಾಗಿ ಬೇರುಬಿಟ್ಟು ಸದೃಢವಾಗಿದ್ದರೆ, ಭಾರತದಂತಹ ರಾಷ್ಟ್ರಗಳಲ್ಲಿ ಇನ್ನೂ ಸ್ಥಿರವಾದ ನೆಲಗಟ್ಟನ್ನು ಕಾಣುವ ಪ್ರಯತ್ನವನ್ನು ನಡೆಸುತ್ತಿದೆ. 'ಸಂವಹನ' ಎನ್ನುವುದು 'ಸಮೂಹ ಸಂವಹನ'ಕ್ಕಿಂತ ವಿಶಾಲವಾದ ಅರ್ಥವನ್ನು ಹೊಂದಿರುವಂತಹ ಶಬ್ದ. ಏಕೆಂದರೆ, ವ್ಯಕ್ತಿ-ವ್ಯಕ್ತಿಗಳ, ಗುಂಪು ಹಾಗೂ ಸಾಂಸ್ಥಿಕ ಸಂವಹನದಂತಹ ಇತರ ಮಜಲುಗಳೂ ಅದರ ವ್ಯಾಪ್ತ್ಯರ್ಥದಲ್ಲಿ ಬರುತ್ತದೆ. ಪ್ರಸಕ್ತ ಘಟಕವು ಈ ಕೆಳಕಂಡ ವಿಷಯಗಳ ಬಗ್ಗೆ ವಿವರಣೆ ನೀಡಲಿದೆ.

* ಆಧುನಿಕ ಸಮಾಜದಲ್ಲಿ ಸಂವಹನ ಸಂಶೋಧನೆಯ ಮಹತ್ವ;
* ಸಂವಹನ ಸಂಶೋಧನೆಯ ಸ್ವರೂಪ ಮತ್ತು ವ್ಯಾಪ್ತಿ;
* ಸಂವಹನ ಸಂಶೋಧನೆಯ ಪ್ರಮುಖ ಕ್ಷೇತ್ರಗಳು ಮತ್ತು ಕೊನೆಯಲ್ಲಿ,
* ಸಂವಹನ ಸಂಶೋಧನೆಯಲ್ಲಿ ತೋರಿಬರುತ್ತಿರುವ ಹೊಸ ಒಲವುಗಳು.

## 1.1 ಪ್ರಸ್ತಾವನೆ

ಸಂವಹನವು ಪ್ರಮುಖವಾದ ಮತ್ತು ಆಸಕ್ತಿದಾಯಕವಾದ ಒಂದು ಶೈಕ್ಷಣಿಕ ಅಧ್ಯಯನದ ಶಾಖೆಯಾಗಿ ರೂಪುಗೊಂಡಿದೆ. ಸಮಾಜಶಾಸ್ತ್ರ, ಮನೋವಿಜ್ಞಾನ, ರಾಜ್ಯಶಾಸ್ತ್ರ ಅಲ್ಲದೆ ಕಾನೂನುಶಾಸ್ತ್ರ ಇತ್ಯಾದಿಯಾದ ಇತರ ಶಾಖೆಗಳಲ್ಲಿ ತನ್ನ ಬೇರುಗಳನ್ನು ಹೊಂದಿದ್ದರೂ, ಕಾಲಕ್ರಮದಲ್ಲಿ ಅದು ತನ್ನದೇ ಆದ ವಿಶಿಷ್ಟವಾದ ಗುಣಲಕ್ಷಣಗಳನ್ನು ಪಡೆದುಕೊಂಡಿದೆ. ಸಮೂಹ ಮಾಧ್ಯಮಗಳು ಜಾಗತೀಕರಣದ ಕಾರ್ಯಭಾರಿಯಾಗಿ, ವಿವಿಧ ಜನಸ್ತೋಮಗಳನ್ನು, ಸಂಸ್ಕೃತಿಗಳನ್ನು ಹಿಂದೆಂದಿಗಿಂತಲೂ ಅತಿ ಸನಿಹಕ್ಕೆ ತಂದಿವೆ. 19ನೆಯ ಶತಮಾನದಲ್ಲಿ ಪ್ರಾರಂಭಗೊಂಡ ತಂತ್ರಜ್ಞಾನದ ಆವಿಷ್ಕಾರಗಳು ಮತ್ತು ನಾವೀನ್ಯತೆಗಳೇ ಸಮೂಹ ಮಾಧ್ಯಮಗಳ ಉಗಮಕ್ಕೆ ಕಾರಣ. ಸಮೂಹ ಸಂಪರ್ಕ ಯುಗವು ಸಾಮಾಜಿಕ ವಹಿವಾಟುಗಳ ಸ್ವರೂಪ ಮತ್ತು ನಮೂನೆಗಳನ್ನೇ ಬದಲಾಯಿಸಿದೆ.

ಸಮೂಹ ಮಾಧ್ಯಮಗಳು ಬಹಳ ಸಂಕೀರ್ಣವಾದ ಸಂಸ್ಥೆಗಳು. ಏಕೆಂದರೆ ಅವು ಬಹಳ ಜಟಿಲವಾದ ತಂತ್ರಜ್ಞಾನಗಳನ್ನು ಆಧರಿಸಿವೆ. ಅವುಗಳ ಹೊರಚಾಚುಗಳು ಹೆಚ್ಚು ಹೆಚ್ಚು ಅನುಭವಕ್ಕೆ ಬರುತ್ತಿದೆ ಮತ್ತು ಎಲೆಕ್ಟ್ರಾನಿಕ್ ಕಕೂನ್(ಗೂಡು)ಗಳು ಜಗತ್ತಿನಾದ್ಯಂತ ಪ್ರಾರಂಭಿಸಲ್ಪಡುತ್ತಿವೆ. 'ಜಗತ್‌ಗ್ರಾಮ'ಕ್ಕೆ ತನ್ನದೇ ಆದ ಕೆಲವು ಗುಣಾವಗುಣಗಳಿವೆ. ಮೊದಲು ಮೊದಲಲ್ಲಿ, ಇತರ ಜ್ಞಾನಶಾಖೆಗಳ ಪರಿಣತರು, ವ್ಯಕ್ತಿಗಳ ಹಾಗೂ ಸಮೂಹಗಳ ಮೇಲೆ ಸಂವಹನದ ಪ್ರಭಾವಗಳ ಬಗ್ಗೆ ಆಸಕ್ತಿ ತೋರಿಸಿದರು. ನಂತರ, ಮಾಧ್ಯಮಗಳ ಗ್ರಾಹಕರು ಮತ್ತು ಪರಿಣತರು ಎತ್ತಿದ ಪ್ರಶ್ನೆಗಳಿಗೆ ವಾಕ್ ಸಂವಾಹಕರು ಮತ್ತು ಮಾಧ್ಯಮಗಳವರು ತಾವೇ ಬಹಳ ಮುತುವರ್ಜಿಯಿಂದ ಆಸಕ್ತಿ ವಹಿಸಲು ಆರಂಭಿಸಿದರು. ಸಮಾಜ ವಿಜ್ಞಾನದ ಇತರ ಶಾಖೆಗಳಲ್ಲಿ ಆದ ಬೆಳವಣಿಗೆಯೂ ಸಂವಹನ ಸಂಶೋಧನೆಯ ಅಭಿವೃದ್ಧಿಗೆ ತನ್ನದೇ ಆದ ಕಾಣಿಕೆ ಸಲ್ಲಿಸಿದೆ. ಸಮೂಹ ಸಂವಹನದಲ್ಲಿ, ಕೆಲವೊಂದು ವಿಷಯಗಳಿಗೆ ಸಂಬಂಧಿಸಿದಂತೆ ಸಾಧಾರಣೀಕರಣ ಮಾಡಬಹುದಾದರೂ, ಪ್ರತಿಯೊಂದು ಮಾಧ್ಯಮವೂ ಭಿನ್ನ ಹಾಗೂ ವಿಶಿಷ್ಟ. ಅಂತೆಯೇ ಜನರ ಮೇಲೆ ಅವು ಬೀರುವ ಪ್ರಭಾವ ಸಹ. ಪ್ರತಿಯೊಂದು ಮಾಧ್ಯಮವೂ ವಿವಾದಗಳಿಗೆ, ಚರ್ಚೆಗಳಿಗೆ ವಿಷಯವಾಯಿತು.

ಪೆನ್ನಿ ಪ್ರೆಸ್‌ನ ಆರಂಭದೊಂದಿಗೆ ಮೊದಲಿಗೆ ಇಂತಹ ಚರ್ಚೆಗಳು ಆರಂಭಗೊಂಡದ್ದು ಅಮೇರಿಕಾ ಸಂಯುಕ್ತ ಸಂಸ್ಥಾನ, ಅದರಲ್ಲೂ ಮುಖ್ಯವಾಗಿ ನ್ಯೂಯಾರ್ಕ್‌ನಲ್ಲಿ. ನಂತರ ಬಂದದ್ದು ರೇಡಿಯೋ, ಕಾಗದ ರಕ್ಷಾಪುಟದ ಹೊತ್ತಿಗೆಗಳು, ಕಾಮಿಕ್‌ಗಳು, ನಿಯತಕಾಲಿಕಗಳು, ಚಲನಚಿತ್ರಗಳು ಹಾಗೂ ಈಗಿನ ಸರದಿ ಟೆಲಿವಿಷನ್ ಮತ್ತು ಅಂತರ್ಜಾಲದ್ದು.

ಸಮೂಹ ಮಾಧ್ಯಮ ಜನಿತವಾದ ವಿವಾದಗಳನ್ನು ವೈಜ್ಞಾನಿಕ ಶೋಧನೆಗಳು ಮತ್ತು ಗಟ್ಟಿಯಾದ ಸಾಕ್ಷಿ, ಆಧಾರಗಳ ಮೇಲೆ, ಸಂವಹನ ಸಂಶೋಧನೆಯ ಪರ್ಯಾವಲೋಕನ ನಡೆಸಬೇಕೇ ಹೊರತು ಭಾವಾವೇಶ, ಊಹಾಪೋಹಗಳ ಮೇಲಲ್ಲ. ಏಕೆಂದರೆ, ಅರ್ಥಪೂರ್ಣವಾದ ಸಂಶೋಧನೆಗೆ ಇದೇ ಮೂಲಾಧಾರ. ಸಮೂಹ ಮಾಧ್ಯಮಗಳು ಕೆಡುಕುಗಳನ್ನು, ಭ್ರಷ್ಟಾಚಾರಗಳನ್ನೂ ಬಯಲಿಗೆಳೆಯುತ್ತವೆ. ವಾಕ್ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯದ ಪೋಷಕರಂತೆ ಕಾರ್ಯನಿರ್ವಹಿಸುತ್ತವೆ. ಸಂಸ್ಕೃತಿಗಳನ್ನು ಮೇಳೈಸುತ್ತವೆ. ಕಾರ್ಮಿಕ ವರ್ಗಕ್ಕೆ ಮನರಂಜನೆ ನೀಡುತ್ತವೆ. ದಿನನಿತ್ಯ ಪ್ರಪಂಚದಾದ್ಯಂತ ನಡೆಯುವ ಘಟನೆಗಳ ಮಾಹಿತಿ ನೀಡುತ್ತವೆ ಮತ್ತು ಜನರ ಜೀವನ ಮಟ್ಟವನ್ನು ಹೆಚ್ಚಿಸುತ್ತವೆ ಎಂದು ಅದರ ಸಮರ್ಥಕರು ಅಭಿಪ್ರಾಯಪಡುತ್ತಾರೆ.

ಇದಕ್ಕೆ ವ್ಯತಿರಿಕ್ತವಾಗಿ ಮಾಧ್ಯಮಗಳು ಕೀಳು ಸಂಸ್ಕೃತಿಗೂ, ಬಾಲಾಪರಾಧಗಳಿಗೂ ಮತ್ತು ನೈತಿಕತೆಯ ಅಧಃಪತನಕ್ಕೂ ಕಾರಣವೆಂದು ಟೀಕಾಕಾರರು ಗುದ್ದು ನೀಡುತ್ತಾರೆ. ನವೀನವಾದ ವಿಧಾನಗಳು, ತಂತ್ರಗಳು ಮತ್ತು ಸಂವಹನ ತಂತ್ರಜ್ಞಾನಗಳ ಆಗಮನವಾಗುತ್ತಿದ್ದರೂ ವಾದವಿವಾದಗಳು ಉಳಿದುಕೊಂಡೇ ಬರುತ್ತಿವೆ. ಮಾನವ ಸಂವಹನ ಪ್ರಕ್ರಿಯೆಯ ವಿವರಣೆಯೂ ಸಹ ಇಷ್ಟೇ ಮುಖ್ಯವಾದ ಅಂಶ. ಮನಃಶಾಸ್ತ್ರ, ಸಮಾಜಶಾಸ್ತ್ರ, ಸಾಂಸ್ಕೃತಿಕ ಮಾನವಶಾಸ್ತ್ರ, ಭಾಷಾಶಾಸ್ತ್ರ, ಹೆಚ್ಚೇನು? ಅರ್ಥಶಾಸ್ತ್ರದಂತಹ ಶಾಖೆಗಳಲ್ಲಿಯೂ ಈ ಕುರಿತು ಸುಳುಹುಗಳು ಲಭ್ಯವಿವೆ.

ವಿವಿಧ ರೀತಿಯ ಒಡೆತನ ಮತ್ತು ನಿಯಂತ್ರಣವಿರುವ ಪರಿಸರಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸಮೂಹ ಮಾಧ್ಯಮಗಳ ಪರಿಣಾಮಗಳ ಮೌಲ್ಯಮಾಪನ ಮಾಡಲು ದತ್ತಕಗಳನ್ನು ಸಂವಹನ ಸಂಶೋಧನೆಯು ನೀಡುತ್ತದೆ. ಸೈದ್ಧಾಂತಿಕ / ವೈಚಾರಿಕ ದರ್ಶನಗಳಾದ ರಾಜಕೀಯ ವ್ಯವಸ್ಥೆಗಳು, ಆರ್ಥಿಕ ಅಂತಃಸೆಳೆತಗಳು, ಚಾರಿತ್ರಿಕ ಮತ್ತು ಸಾಂಸ್ಕೃತಿಕ ಹಿನ್ನೆಲೆಗಳು ಮತ್ತಿತರ ಅಂಶಗಳು ಸಂಶೋಧನೆಗೆ ಸಾಕಷ್ಟು ಸವಾಲುಗಳನ್ನೂ, ವಿಷಯಗಳನ್ನೂ ಒದಗಿಸುತ್ತವೆ. ಸಮೂಹ ಮಾಧ್ಯಮ ಸಂಸ್ಥೆಗಳ ರಚನೆಯೇ ಸಂಶೋಧನೆಗೆ ಸಾಕಷ್ಟು ಅವಕಾಶಗಳನ್ನು ನೀಡುತ್ತದೆ. ಮಾಧ್ಯಮಗಳಲ್ಲಿ ಅಡಕವಾಗುವ ವಸ್ತು / ವಿಷಯಗಳು, ಉತ್ಪಾದನೆ, ವಿತರಣೆ ಮತ್ತು ಬಳಕೆ - ಇವುಗಳೂ ಈ ಪ್ರಶ್ನೆಗಳಿಗೆ ನೇರವಾಗಿ ಸಂಬಂಧಿಸಿವೆ.

## 1.2 ಪರಿಣಾಮಗಳ ಸಂಶೋಧನೆ

ಸಮೂಹ ಸಂವಹನದ ಸ್ವರೂಪ ಮತ್ತು ಪ್ರಭಾವಗಳ ಮೌಲ್ಯನಿರ್ಧರಣ ಮಾಡುವ ಕಾರ್ಯ ಬಹಳ ಮುಖ್ಯವಾದುದು, ಬಹಳ ಕಠಿಣವಾದುದು ಹಾಗೂ ಅದಕ್ಕೆ ಅನೇಕ ಆಯಾಮಗಳಿವೆ. ಪ್ರತಿಯೊಂದು ಮಾಧ್ಯಮಕ್ಕೂ ತನ್ನದೇ ಆದ ವ್ಯಾಪ್ತಿ ಪ್ರದೇಶದಲ್ಲಿ, ಅದರದ್ದೇ ಆದ ಪ್ರಭಾವ, ಪರಿಣಾಮಗಳಿವೆ. ಶ್ರೋತೃವರ್ಗದವರ ನಂಬುಗೆಗಳು ಮತ್ತು ಮನೋಧರ್ಮಗಳ ಮೇಲೆ ರೇಡಿಯೋ, ಟಿವಿ ವೃತ್ತಪತ್ರಿಕೆ ಹಾಗೂ ಚಲನಚಿತ್ರದ ಅಡಕ ವಸ್ತುವಿಷಯದ ಪರಿಣಾಮಗಳೇನು? ಎಂದು ನಾವು ಕೇಳಬಹುದು. ಒಂದು ನಿರ್ದಿಷ್ಟ ಸಮಾಜದ ಉದಯಕ್ಕೆ ಕಾರಣೀಭೂತವಾದ "ಚಾರಿತ್ರಿಕ ಘಟನೆಗಳಿಂದ ಹಿಡಿದು ಮೌಲ್ಯ ವ್ಯವಸ್ಥೆಯವರೆಗಿನ ಪ್ರತಿಯೊಂದು ಅಂಶ"ದ ಮೇಲಿನ ಎಲ್ಲ ಕ್ರಮಬದ್ಧವಾದ ವಿಶ್ಲೇಷಣೆಯನ್ನು ಈ ಪ್ರಶ್ನೆ ಬೇಡುತ್ತದೆ. ವ್ಯಕ್ತಿ-ವ್ಯಕ್ತಿಗಳ ನಡುವಿನ ಸಂಪರ್ಕದಿಂದ ಸಮೂಹ ಸಂವಹನದವರೆಗಿನ ಪ್ರತಿಯೊಂದು ಹಂತದ, ಮಾನವ ಸಂವಹನೆಯ ಸ್ವರೂಪ ಮತ್ತು ಪ್ರಕ್ರಿಯೆಯನ್ನು ಸಂಶೋಧನೆಯು ಪರಿಶೋಧಿಸಬಹುದು.

ಸಂಶೋಧನೆಗೆ ಫಲವತ್ತಾದ ಇತರ ವಲಯಗಳೆಂದರೆ: ಸಾಮಾಜಿಕ ಮತ್ತು ಸಾಂಸ್ಕೃತಿಕ ವಿಶ್ಲೇಷಣೆಗಳ ಮೇಲೆ ಸಮೂಹ ಸಂಪರ್ಕದ ಪ್ರಭಾವಗಳು, ಪರಸ್ಪರರ ಪಾತ್ರ ಕುರಿತಂತೆ ಸಮಾಜದ ಭಾಷೆ ಮತ್ತು ಶ್ರೋತೃವರ್ಗದ ನಿರೀಕ್ಷೆಗಳು.

ಈ ಕುರಿತಂತೆ ಮೆಲ್ವಿನ್ ಎಲ್. ಡಿಫ್ಲ್ಯಾಯರ್ ಮತ್ತು ಸಾಂಡ್ರಾ ರೋಬ್ ಅವರು ಪ್ರಮುಖವಾದ ಮೂರು ಪ್ರಶ್ನೆಗಳನ್ನು ಪಟ್ಟಿ ಮಾಡಿದ್ದಾರೆ. ಅವುಗಳೆಂದರೆ :

1. ಸಮೂಹ ಮಾಧ್ಯಮಗಳ ಮೇಲೆ ಆ ಸಮಾಜದ ಪ್ರಭಾವ ಏನು?

2. ಸಮೂಹ ಸಂಪರ್ಕ ನಡೆಯುವುದು ಹೇಗೆ?

3. ಸಮೂಹ ಸಂಪರ್ಕಕ್ಕೆ ತೆರೆದುಕೊಳ್ಳುವುದರಿಂದ ಜನರಿಗೆ ಆಗುವುದಾದರೂ ಏನು?

ಮಾನವ ಅಭಿವೃದ್ಧಿಯ ಕ್ರಮ ಮತ್ತು ಪ್ರಕ್ರಿಯೆಯ ಮೇಲೆ ಸಮೂಹ ಮಾಧ್ಯಮಗಳು ಪ್ರಭಾವ ಬೀರುತ್ತವೆ ಎನ್ನುವುದಂತೂ ನಿಜ. ಸಮೂಹ ಮಾಧ್ಯಮಗಳು ಮತ್ತು ಮಾನವ ನಡವಳಿಕೆಗಳ ನಡುವೆ ಒಂದು ಅಷ್ಟೇನೂ ದೃಢವಲ್ಲದ ಒಂದು ಸಂಬಂಧವಿದೆ. ಆದರೂ, ಪ್ರತಿಯೊಬ್ಬ ವ್ಯಕ್ತಿಗೂ ಹೊಂದುವಂತೆ ನಿಖರವಾಗಿ ಕಾರ್ಯಕಾರಣ ಸಂಬಂಧವನ್ನು ಪ್ರತಿಯೊಂದು ಸಂದರ್ಭದಲ್ಲಿಯೂ ನಿಖರವಾಗಿ ಸ್ಥಾಪಿಸುವುದು ಕಷ್ಟ, ಏಕೆಂದರೆ, ಮಾಧ್ಯಮ ಅನುಭವಗಳು ಬಹಳ ಸಂಕೀರ್ಣವಾಗಿರುತ್ತವೆ. ಬರ್ನಾರ್ಡ್ ಬೆರೆಲ್‌ಸನ್ ಅವರು ಸಂವಹನದ ಪರಿಣಾಮಗಳನ್ನು ಕುರಿತು ತಮ್ಮ ಅಭಿಪ್ರಾಯಗಳ ತಿರುಳನ್ನು ಬಹಳ ಚೆನ್ನಾಗಿ ಈ ಕೆಳಕಂಡಂತೆ ತಿಳಿಸಿದ್ದಾರೆ.

ಕೆಲವೊಂದು ರೀತಿಯ ಅಂಶಗಳ ಕೆಲವೊಂದು ತರದ ಸಂವಹನಗಳು ಕೆಲವು ಸಂದರ್ಭಗಳಲ್ಲಿ ಗಮನಕ್ಕೆ ಬಂದು, ಕೆಲವೊಂದು ರೀತಿಯ ಜನರ ಗಮನಕ್ಕೆ ತಂದು ಕೆಲವೊಂದು ರೀತಿಯ ಪರಿಣಾಮಗಳನ್ನು ಹೊಂದುತ್ತವೆ. ಮಾಧ್ಯಮಗಳಲ್ಲಿ ಅಡಕವಾದ ವಸ್ತು ವಿಷಯಗಳಿಗೆ ತೆರೆದುಕೊಳ್ಳುವುದರಿಂದ ಉಂಟಾಗುವ ಪರಿಣಾಮಗಳು ಸರಳವಾಗಿಯೂ, ನೇರವಾಗಿಯೂ ಇರುವುದು ವಿರಳ. ಆದರೂ, ಸಂವಹನ ಸಂಶೋಧನೆಯಲ್ಲಿ ಮಾಧ್ಯಮಗಳಿಗೆ 'ತೆರೆದುಕೊಳ್ಳುವಿಕೆಯು ಒಂದು ಪ್ರಮುಖ ಮೂಲಘಟಕ. ಕೆಲವೊಂದು ಮಾಧ್ಯಮ ವಿಶ್ಲೇಷಕರು ತಮ್ಮದೇ ಆದ ಸಂವಹನ ಸಂಶೋಧನೆಯ ವಲಯಗಳನ್ನು ಈ ಕೆಳಕಂಡಂತೆ ಗುರುತಿಸಿಕೊಂಡಿದ್ದಾರೆ.

1. ಅರಿಯುವಿಕೆ ಮತ್ತು ಸಂಕ್ಷೇಪಣೆಯ ಮೇಲೆ ಸಮೂಹ ಸಂವಹನದ ಪ್ರಭಾವಗಳು.
2. ವ್ಯಕ್ತಿಯ ಮನೋಧರ್ಮ ಮತ್ತು ಮೌಲ್ಯಪರಿವರ್ತನೆಯ ಮೇಲೆ ಮಾಧ್ಯಮೀಕೃತ ಸಂವಹನದ ಪ್ರಭಾವಗಳು.
3. ವ್ಯಕ್ತಿಯ ನಡವಳಿಕೆಯ ಪರಿವರ್ತನೆ(ಧನಾತ್ಮಕ, ಋಣಾತ್ಮಕ)ಯ ಮೇಲೆ ಸಮೂಹ ಸಂವಹನದ ಪ್ರಭಾವ.

**ಈಗಾಗಲೇ ಸಾಕಷ್ಟು ಸಂಶೋಧನೆಗಳು ನಡೆದಿರುವ ಮೂರು ಪ್ರಮುಖ ಕ್ಷೇತ್ರಗಳೆಂದರೆ:**

1. ಮಾಧ್ಯಮಗಳಿಂದ ಚಿತ್ರಿಸಲ್ಪಟ್ಟ ಹಿಂಸೆಯ ಪ್ರಭಾವಗಳು - ಸಮಾಜದ ಮೇಲೆ, ಒಟ್ಟಾರೆಯಾಗಿ.
2. ಮಕ್ಕಳ ಮೇಲೆ ಮಾಧ್ಯಮದಲ್ಲಿ ಅಡಕವಾದ ವಸ್ತು ವಿಷಯಗಳ ಪ್ರಭಾವಗಳು.
3. ಮಾಧ್ಯಮಗಳು ಮತ್ತು ಸಾಮಾಜಿಕ ನೈತಿಕತೆ.

ಪ್ರತಿಯೊಂದು ಸಂವಹನ ಪ್ರಕ್ರಿಯೆಯೂ 'ಗಮನ ಸೆಳೆಯುವುದರಿಂದ ಪ್ರಾರಂಭಗೊಳ್ಳುತ್ತದೆ (ಶ್ರೋತೃವರ್ಗ). ನಂತರ ಅದು ತಿಳುವಳಿಕೆಯನ್ನು ಮೂಡಿಸುವ ದಿಕ್ಕಿನಲ್ಲಿ ಚಲಿಸುತ್ತದೆ. ಇದನ್ನು 'ಅರಿವು' ಎಂದು ಗುರುತಿಸಲಾಗುತ್ತದೆ.

ಕೊನೆಯ ಹಂತವೆಂದರೆ ಗ್ರಹಿಕೆ. ಮಾಧ್ಯಮ ಮೂಲಕವಾದ ಸಂವಹನವನ್ನು, ಸಾಮಾನ್ಯ ತಿಳುವಳಿಕೆ - ಅರಿವು, ಹಲವಾರು ಅಂಶಗಳಿಂದ ಪ್ರಭಾವಿತಗೊಳ್ಳುತ್ತದೆ. ಉದಾಹರಣೆಗೆ, ಪತ್ರಿಕೆಯ ಓದುಗನೊಬ್ಬ, ಪತ್ರಿಕೆಯ ಎಲ್ಲಾ ಪುಟಗಳಲ್ಲಿ ಇರುವ ವಿಷಯ ವಿಚಾರಗಳಿಗೆ ಸ್ಪಂದಿಸದೇ ಇರಬಹುದು. ಅದೇ ರೀತಿ, ರೇಡಿಯೋದ ಶ್ರೋತೃವೊಬ್ಬ ವಾರ್ತೆಯ ಎಲ್ಲಾ ವಿವರಣೆಗಳನ್ನು ಗಮನವಿಟ್ಟು ಆಲಿಸದೆ ಇರಬಹುದು. ಮಾಧ್ಯಮ ವಸ್ತು ವಿಷಯಗಳಿಗೆ ಶ್ರೋತೃಗಳು 'ತೆರೆದುಕೊಳ್ಳುವುದು' ಆಯ್ಕೆ ಆಧಾರಿತವಾಗಿ ಆದರೆ, ಪುನಃ ಪುನಃ ಒಂದೇ ವಿಷಯಕ್ಕೆ ಶ್ರೋತೃವರ್ಗ ತೆರೆದುಕೊಳ್ಳುವಂತೆ ಮಾಡುವ ಕಾರಣದಿಂದ, ಗ್ರಾಹಕನ ಗಮನ ಸೆಳೆಯುವಲ್ಲಿ ಮಾಧ್ಯಮಗಳು ಬಹಳ ಪರಿಣಾಮಕಾರಿ. ಸಂದೇಶದ ಧಾರಣೆಯ ಅವಧಿಯನ್ನು ವೈಯಕ್ತಿಕ ಆಸಕ್ತಿಯು ನಿರ್ಧರಿಸುತ್ತದೆ.

ಮಾಧ್ಯಮ ವಸ್ತು ವಿಷಯಗಳಿಗೆ ತೆರೆದುಕೊಳ್ಳುವುದರಿಂದ ಉಂಟಾಗುವ ಫಲಿತಾಂಶವೇ ಗ್ರಹಿಕೆ. ಈ 'ತೆರೆತ' ನೇರವಾದುದು ಮತ್ತು ಶ್ರೋತೃವರ್ಗದ ಸದಸ್ಯರಿಗೆ ತಮ್ಮದೇ ಆದ ವೈಯಕ್ತಿಕ ಅನುಭವಗಳೂ ಇರುತ್ತವೆ. ಮತ್ತೆ ಮತ್ತೆ ಮಾಧ್ಯಮಗಳಿಗೆ ತೆರೆದುಕೊಳ್ಳುವುದರಿಂದ, ಮಾಧ್ಯಮದಲ್ಲಿ ಅಡಕವಾದ ವಸ್ತು / ವಿಷಯವನ್ನು ನೆನಪಿಟ್ಟುಕೊಳ್ಳಲು ವ್ಯಕ್ತಿಗೆ ಸಹಾಯವಾಗುತ್ತದೆ. ಇದನ್ನು ವ್ಯಕ್ತಿಗಳ ನಡುವಣ ಸಮಾಲೋಚನೆಗಳಿಂದಲೂ ಪರಿಪೂರ್ಣಗೊಳಿಸತಕ್ಕದ್ದು. ಕೆಲವೊಮ್ಮೆ, ವ್ಯಕ್ತಿಗಳು ಮಾಹಿತಿಯನ್ನು ತಪ್ಪಾಗಿ ಅರ್ಥೈಸಿಕೊಳ್ಳುತ್ತಾರೆ; ಆಲಿಸುವಲ್ಲಿ ಸೋಲುತ್ತಾರೆ ಮತ್ತು ವಾಸ್ತವಾಂಶಗಳನ್ನು ಒಪ್ಪಲು ಇಷ್ಟಪಡುವುದಿಲ್ಲ.

ನಿರ್ದಿಷ್ಟವಾದ ಒಂದು ಘಟನೆ ಅಥವಾ ವಿಷಯದ ಬಗೆಗಿನ ಪೂರ್ವಗ್ರಹಗಳಿಂದಾಗಿ ಅವರು ತಮ್ಮದೇ ಆದ ನಂಬುಗೆಗಳಿಗೆ ಅಂಟಿಕೊಂಡಿರುತ್ತಾರೆ. ಪುನಃ ಪುನಃ ವ್ಯತಿರಿಕ್ತವಾದ ಹೇಳಿಕೆಗಳು ಮಾಧ್ಯಮಗಳಲ್ಲಿ ಬಂದರೂ, ಮುಂಚೂಣಿ ಗುಂಪುಗಳು ಮತ್ತು ವೈಯಕ್ತಿಕ ನಂಬುಗೆಗಳು ಮಾಧ್ಯಮ ಸಂದೇಶಗಳ ಸ್ವೀಕೃತಿಯ ಮೇಲೆ ಪ್ರಭಾವ ಬೀರಬಹುದು. ಮನೋವೃತ್ತಿ ಮತ್ತು ಮೌಲ್ಯಗಳು, ಮಾನವ ಸಂಬಂಧಿಯಾದ ಯಾವುದೇ ಸಾಮಾಜಿಕ ಅಥವಾ ಸಾಂಸ್ಕೃತಿಕ ಅಧ್ಯಯನದ ಅವಿಭಾಜ್ಯ ಅಂಗಗಳು.

ಅದೇ ರೀತಿಯಾಗಿ, ವ್ಯಕ್ತಿಗಳ ಮನೋಧರ್ಮಗಳು ಮತ್ತು ಸಮಾಜದ ಮೌಲ್ಯ ವ್ಯವಸ್ಥೆಯ ಮೇಲೂ ಸಮೂಹ ಮಾಧ್ಯಮಗಳು ಪ್ರಭಾವ ಬೀರುತ್ತವೆ - ಎಂಬುದು ಒಂದು ಸಾಮಾನ್ಯ ನಂಬುಗೆ ಕೂಡ. ಆದರೆ ಈ ಪ್ರಭಾವಗಳು ಎಷ್ಟರ ಮಟ್ಟಿಗೆ, ಎಷ್ಟು ವೇಗವಾಗಿ ಮತ್ತು ಎಷ್ಟು ಕಾಲದವರೆಗೆ, ಎನ್ನುವುದು ಮಾತ್ರ ನಿಶ್ಚಿತವಲ್ಲ. ಏಕೆಂದರೆ, ಸಮೂಹ ಮಾಧ್ಯಮಗಳು ಅಭಿಪ್ರಾಯಗಳನ್ನು ರೂಪಿಸುವಷ್ಟು ಸುಲಭವಾಗಿ, ಈಗಾಗಲೇ ಇರುವ ಅಭಿಪ್ರಾಯಗಳನ್ನು ಬದಲಾಯಿಸಲಾರವು. ಆದರೆ, ಅಂತಸ್ಥಿತವಾದ ಅಭಿಪ್ರಾಯಗಳು ಮತ್ತು ನಂಬುಗೆಗಳನ್ನು ಸುದೃಢಗೊಳಿಸುವಲ್ಲಿ ಅವುಗಳು ಶಕ್ತಿಶಾಲಿಯಾಗಿ ಪ್ರಭಾವ ಬೀರುತ್ತವೆ. ಆಯ್ಕೆ ಆಧಾರಿತವಾದ ತೆರೆತ ಗ್ರಹಿಕೆ ಮತ್ತು ಧಾರಕತೆಗಳು ಇಲ್ಲಿ ಅತಿ ಮುಖ್ಯವಾದ ಅಂಶಗಳು. ತಮ್ಮ ಅಭಿಪ್ರಾಯಗಳನ್ನು ಬೆಂಬಲಿಸುವಂತಹ ಮಾಧ್ಯಮ ವಸ್ತುಗಳಿಗೆ ವ್ಯಕ್ತಿಗಳು ತಮ್ಮನ್ನು ತಾವು ತೆರೆದುಕೊಳ್ಳುತ್ತಾರೆ. ಈ ಮುಂಚೆಯೇ ಅವರು ಇಟ್ಟುಕೊಂಡಿರುವ ನಂಬುಗೆಗಳಿಗೆ ವಿರುದ್ಧಾತ್ಮಕವಾಗಿರುವ ಸಂದೇಶಗಳಿಂದ ಅವರು ದೂರವಾಗುತ್ತಾರೆ.

ಸಂದೇಶಗಳ ಗ್ರಹಿಕೆ ಮತ್ತು ಧಾರಣೆಗಳೂ ಸಹ ವ್ಯಕ್ತಿಗತವಾದ ಮನೋಭಾವಗಳಿಗೆ ಅನುಕೂಲಕರವಾದ ರೀತಿಯಲ್ಲೇ ಆಗುತ್ತವೆ. ಈ ಸಂಗತಿಯನ್ನು ಮನೋಶಾಸ್ತ್ರಜ್ಞರು 'ಗ್ರಹಿಕಾ ವೈರುಧ್ಯ (ಅಪಸ್ವರ)' ಎಂದು ಕರೆಯುತ್ತಾರೆ. ಇಲ್ಲಿ 'ವೈರುಧ್ಯ' ಎಂಬ ಪದವನ್ನು 'ಅಸಂಗತೆ'ಗೆ ಬದಲಿಯಾಗಿ ಬಳಸಲಾಗಿದೆ.

ಫೆಸ್ಟಿಂಗರ್ ಅವರ ಪ್ರಕಾರ, ವ್ಯಕ್ತಿಯ ವೈರುಧ್ಯದ ಮನೋಘಟಕವು ವೈರುಧ್ಯವನ್ನು ಕಡಿಮೆಗೊಳಿಸಲೂ, ಸುಸಾಂಗತ್ಯ / ಸಾಮರಸ್ಯವನ್ನು ಸಾಧಿಸಲೂ ಪ್ರೇರಿಸುತ್ತದೆ. ವೈರುಧ್ಯವನ್ನು ಹೆಚ್ಚಿಸಬಹುದಾದಂತಹ ಸನ್ನಿವೇಶಗಳನ್ನು ಮತ್ತು ಮಾಹಿತಿಯನ್ನು ವ್ಯಕ್ತಿಯು ದೂರ ಮಾಡುತ್ತಾನೆ. ತನ್ನ ಕ್ರಿಯೆಗಳಿಗೂ ಹಾಗು ನಿರ್ಣಯಗಳಿಗೂ ಯುಕ್ತಿಪೂರ್ವಕವಾದ ವಿವರಣೆಯನ್ನು ನೀಡುತ್ತಾ ಅವುಗಳನ್ನು ಸಮರ್ಥಿಸಿಕೊಳ್ಳುತ್ತಾನೆ.

ಪಾಲ್ ಲಾಜರ್‌ಫೆಲ್ಡ್ ಮತ್ತು ರಾಬರ್ಟ್ ಮರ್ಟನ್ ಅವರ ಪ್ರಕಾರ, ಸಮೂಹ ಮಾಧ್ಯಮಗಳು ಈಗಾಗಲೇ ಗಟ್ಟಿಗೊಂಡಿರುವ ನಂಬುಗೆಗಳನ್ನು ಸುಭದ್ರಗೊಳಿಸುವುದಲ್ಲದೆ, ಸಮಾಜದ ರೂಢಿಗತವಾದ ಮನೋವೃತ್ತಿಗಳನ್ನು ಮತ್ತು ವರ್ತನೆಯ ನಮೂನೆಗಳನ್ನು ಸೇರುತ್ತವೆ. 'ವ್ಯಕ್ತಿಗತ ಮನೋಧರ್ಮಗಳು' ಮತ್ತು 'ಸಾರ್ವತ್ರಿಕ ನೈತಿಕತೆ' ಗಳ ನಡುವಿನ ಅಂತರವನ್ನು ಪ್ರಚಾರವು ಕಡಿಮೆ ಮಾಡುತ್ತದೆ ಎಂದೂ ಅವರು ಹೇಳುತ್ತಾರೆ.

ಸಮೂಹ ಮಾಧ್ಯಮಗಳ "ಒತ್ತಾರೆ ಪ್ರಭಾವ"ದ ಬಗ್ಗೆಯೂ ಅಲ್ಪ ಪ್ರಮಾಣದಲ್ಲಿ ಸಂಶೋಧನೆ ನಡೆದಿದೆ. ಜನರು ಅಭಿಪ್ರಾಯಗಳನ್ನು ಒಪ್ಪಿಕೊಳ್ಳುವುದೂ ಮತ್ತು ಸ್ವೀಕರಿಸುವುದೂ, ಅದು 'ಬಹಳ ಹೆಚ್ಚು ಜನರಿಗೆ' ಸರಿತೋರಿದ್ದೆಂಬ ಕಾರಣಕ್ಕಾಗಿ. 'ಸಾಮಾಜಿಕ ಕ್ರಮಾನುಸರಣೆ'ಯ ಈ ಅಂಶವನ್ನು ಜಾಹೀರಾತುಗಳು ಸ್ಪಷ್ಟವಾಗಿ ಪ್ರದರ್ಶಿಸುತ್ತವೆ. ಆದರೆ ಈ ಒತ್ತಾರೆ ಪ್ರಭಾವದ ಪ್ರಭಾವವನ್ನು ನಿರೋಧಿಸುವ ಕೆಲವೊಂದು ಅಲ್ಪಸಂಖ್ಯಾತ ಗುಂಪುಗಳೂ ಇರುತ್ತವೆ. ಆದರೆ, ಬಹಳಷ್ಟು ಜನರು ಬಹುಸಂಖ್ಯಾತವಾದ ಅಭಿಪ್ರಾಯಗಳನ್ನೇ ಒಪ್ಪಿಕೊಳ್ಳುತ್ತಾರೆ.

ಕೆಲವು ಜನರಿಗೆ ಸಮೂಹ ಮಾಧ್ಯಮಗಳ ಬಳಕೆಯು ಪ್ರತಿಷ್ಠೆಯ ವಸ್ತು. ಮಾಧ್ಯಮದ ಉಕ್ತಿಯಲ್ಲಿ ಇದನ್ನು 'ಸ್ಥಾನಮಾನ ಪ್ರಧಾನ' ಎಂದು ಕರೆಯಲಾಗುತ್ತದೆ. ಸುದ್ದಿಯಲ್ಲಿರುವ ಜನ, ಅಂತೆಯೇ ಸುದ್ದಿಯನ್ನು ವರದಿ ಮಾಡುವ ಜನರೂ ತಾರೆಗಳಾಗುತ್ತಾರೆ. ಘಟನೆಗಳು ಮತ್ತು ಜನರ ಬಗ್ಗೆ ಮನೋಭಿಪ್ರಾಯಗಳನ್ನು ರೂಪಿಸುವಲ್ಲಿ ಇವರು ಪ್ರಭಾವ ಬೀರುವ ಸಾಮರ್ಥ್ಯವುಳ್ಳವರೆಂದು ತಿಳಿಯಲಾಗುತ್ತದೆ. ಕೆಲವೊಂದು ಸಂದರ್ಭಗಳಲ್ಲಿ ಅನುಚಿತವಾದಂತಹ ಪರಿಣಾಮಗಳನ್ನು ಸಹ ಸುದ್ದಿಗಳು ಮೂಡಿಸಬಹುದು. ಸಮಾಜದ ಲೋಪದೋಷಗಳನ್ನು, ಅತಿರೇಕಗಳನ್ನು ಎತ್ತಿ ತೋರಿಸಿದಾಗ ಕೆಲವೊಮ್ಮೆ ಮಾಧ್ಯಮ ಗ್ರಾಹಕರಲ್ಲಿ ಅವು ಭಯ ಮೂಡಿಸಬಹುದು. ಬಹಳ ಹೆಚ್ಚಾಗಿ ಸಮೂಹ ಮಾಧ್ಯಮಗಳ ಬಳಕೆ ಮಾಡುವವರು ತಮ್ಮ ಸುತ್ತಲಿನ ಜಗತ್ತಿನ ಬಗ್ಗೆ ಸಿನಿಕತೆಯ ಮನೋಭಾವವನ್ನು ರೂಪಿಸಿಕೊಳ್ಳುತ್ತಾರೆ ಎಂದೂ ಬಹಳಷ್ಟು ಬಾರಿ ಹೇಳಲಾಗುತ್ತದೆ.

## 1.3 ವರ್ತನೆಯ ಪರಿವರ್ತನೆಗಳು

ಶ್ರೋತೃವರ್ಗದ ಮೇಲಿನ ಮಾಧ್ಯಮ ಪ್ರಭಾವಗಳು ಮತ್ತು ವ್ಯಕ್ತಿಗಳ ವರ್ತನೆಯ ಧನಾತ್ಮಕ, ಋಣಾತ್ಮಕ ಬದಲಾವಣೆಗಳಿಗೆ ಸಂಬಂಧಿತವಾಗಿ ಸಾಕಷ್ಟು ಹೆಚ್ಚಿನ ಸಂಖ್ಯೆಯ ಅಧ್ಯಯನಗಳು ನಡೆದಿವೆ. ಖರೀದ ನಮೂನೆಗಳು, ಮತದಾನದ ವರ್ತನೆ ಮತ್ತು ಆಕ್ರಮಣಶೀಲವಾದ ನಡವಳಿಕೆಗಳನ್ನು ನಿರ್ದಿಷ್ಟವಾಗಿ ಅಧ್ಯಯನ ಮಾಡಲಾಗಿದೆ. ವಿರಾಮ ವೇಳೆಯ ಅತಿ ದೊಡ್ಡ ಭಾಗ ಸಮೂಹ ಮಾಧ್ಯಮಗಳಿಗಾಗಿ ಮೀಸಲಾಗಿದೆ. ಟೆಲಿವಿಷನ್ ಮತ್ತು ರೇಡಿಯೋಗಳಲ್ಲಿ ಜನರ ಸಹಭಾಗಿತ್ವಕ್ಕೆ ಯಾವುದೇ ರೀತಿಯ ಕೌಶಲ್ಯದ ಅವಶ್ಯಕತೆ ಇರುವುದಿಲ್ಲ. ಹೀಗಾಗಿ, ಹೆಚ್ಚು ಹೆಚ್ಚು ಜನ ಅವುಗಳಲ್ಲಿ ಆಸಕ್ತರಾಗಿರುತ್ತಾರೆ. ಸಮೂಹ ಮಾಧ್ಯಮಗಳಿಗೆ ತೆರೆದುಕೊಳ್ಳುವುದು ಅವರಿಗೆ ಆಕರ್ಷಣೀಯವಾಗುತ್ತದೆ ಹಾಗೂ ಪುರಸ್ಕೃತರಾದಂಥ ಭಾವನೆ ಅವರಿಗೆ ಬರುತ್ತದೆ. ಸಮೂಹ ಸಂವಹನದ ಅನುಭವದ ಉದ್ದೇಶದಿಂದ ವ್ಯಕ್ತಿಯೊಬ್ಬ, ಈ ನಿಟ್ಟಿನ ಇತರ ಎಲ್ಲಾ ಚಟುವಟಿಕೆಗಳನ್ನು ತ್ಯಜಿಸುತ್ತಾನೆ ಇಲ್ಲವೇ ಮಾರ್ಪಡಿಸುತ್ತಾನೆ. ಸಮೂಹ ಮಾಧ್ಯಮಗಳು ಚಟುವಟಿಕೆಯ ವರ್ತನೆಯನ್ನು ಪ್ರಚೋದಿಸುವ ಬದಲು ನಿಷ್ಕ್ರಿಯತೆಯನ್ನು ಪೋಷಿಸುತ್ತವೆ - ಎಂದೂ ಹಲವು ಬಾರಿ ಆಪಾದಿಸಲಾಗುತ್ತದೆ.

ಸಮೂಹ ಮಾಧ್ಯಮಗಳ ಪ್ರಭಾವ, ಅದರಲ್ಲೂ ವಿಶೇಷವಾಗಿ ಕೌಟುಂಬಿಕ ಜೀವನ ಶೈಲಿಗಳ ಮೇಲೆ ಟೆಲಿವಿಷನ್ ಪ್ರಭಾವ ಕುರಿತಂತೆ ಹಲವಾರು ಅಧ್ಯಯನಗಳು ನಡೆದಿವೆ. ಕುಟುಂಬದವರೆಲ್ಲರೂ ಒಟ್ಟಾಗಿರುವ ಸಮಯದ ಅತಿ ಹೆಚ್ಚಿನ ಭಾಗವನ್ನು ಟೆಲಿವಿಷನ್ನಿನ ಮುಂದೆ ಕಳೆಯುತ್ತಾರೆ. ಶಾಲಾ ಮಕ್ಕಳ ಸಾಧನೆಯ ಮೇಲೆ ಟೆಲಿವಿಷನ್ (ಪ್ರತಿಕೂಲ) ಪರಿಣಾಮ ಬೀರುತ್ತದೆ ಎಂಬುದು ಕಂಡುಬಂದಿಲ್ಲ. 'ಶ್ರೋತೃವರ್ಗದ ಮತದಾನ ವರ್ತನೆಯ ಮೇಲೆ ಸಮೂಹ ಮಾಧ್ಯಮಗಳ ಪ್ರಭಾವ'ವೂ ಸಂಶೋಧನೆಯ ಆಸಕ್ತಿಯ ಒಂದು ಕ್ಷೇತ್ರವಾಗಿದೆ. ಸಮೂಹ ಮಾಧ್ಯಮಗಳು ಮತದಾನದ ನಮೂನೆಗಳನ್ನು ಬದಲಾಯಿಸಲಾರವು ಎಂದು ಕೆಲವೊಂದು ಅಧ್ಯಯನಗಳು ತಿಳಿಸುತ್ತವೆ. ಪರಿವರ್ತನೆ ಮಾಡುವ ಬದಲಿಗೆ, ಈಗಾಗಲೇ ಇರುವಂತಹ ಅಭಿಪ್ರಾಯಗಳನ್ನೇ ಇವು ಸುಸ್ಥಿರಗೊಳಿಸುತ್ತವೆ - ಎಂದೂ ಗುರುತಿಸಲಾಗಿದೆ. ಜನರು ಬದಲಾಗುತ್ತಾರೆ, ಆದರೆ ಅವರು ಬದಲಾಗಲು ಕಾಲಾವಕಾಶ ಬೇಕು. ಸಾಮಾಜಿಕ ಮತ್ತು ಆರ್ಥಿಕ ಕಾರಣಗಳು, ಚಾಲ್ತಿಯಲ್ಲಿರುವ ಪದ್ಧತಿಗಳಿಗಿರುವ ಅಂತರ, ಸಾಮಾಜಿಕ, ಸಾಂಸ್ಕೃತಿಕ ಮೌಲ್ಯಗಳು, ಮಂಚೂಣಿ ಗುಂಪಿನ ಸ್ವೀಕಾರ ಇತ್ಯಾದಿಯಾದ ಹಲವಾರು ಅಂಶಗಳ ಮೇಲೆ ವರ್ತನೆಯ ಪರಿವರ್ತನೆಗಳು ಅವಲಂಬಿತವಾಗಿವೆ. ಬೇರೆ ರೀತಿಯಲ್ಲಿ ಹೇಳುವುದಾದರೆ, ಮಾಧ್ಯಮಗಳಿಗೆ ತೆರೆದುಕೊಳ್ಳುವುದು ಮತ್ತು ಇತರ ವೈಯಕ್ತಿಕ ಅಂಶಗಳೆರಡರ ಪ್ರಭಾವಗಳ ಫಲಿತಾಂಶವೇ ವರ್ತನೆಯ ಮಾರ್ಪಾಡುಗಳು.

1930ರ ದಶಕದಲ್ಲಿ ಸಮೂಹ ಸಂವಹನ ಸಂಶೋಧನೆಯಲ್ಲಿ, ಒಂದು ಗಮನಾರ್ಹವಾದ ಮೈಲಿಗಲ್ಲನ್ನು ಸ್ಥಾಪಿಸಲಾಯಿತು. ಅಲ್ಲಿಂದೀಚೆಗೆ, ಸಂವಹನದ ಹಲವು ವಲಯಗಳಲ್ಲಿ ವಿವಿಧ ರೀತಿಯ ಅಧ್ಯಯನಗಳು ಬೆಳಕು ಕಂಡಿವೆ. ಅಮೇರಿಕೆಯಲ್ಲಿ ನಡೆದ ಮೊದಲ ಗಮನಾರ್ಹವಾದ ಅಧ್ಯಯನಗಳೆಂದರೆ 1929 ಹಾಗೂ 1932ರ ನಡುವೆ ನಡೆಸಲಾದ ಪೇಯ್ನ್ ಫಂಡ್ ಅಧ್ಯಯನಗಳು. ಮಕ್ಕಳ ಮೇಲೆ ಚಲನಚಿತ್ರಗಳು ಬೀರುವ ಪ್ರಭಾವಗಳನ್ನು ಇವು ಪರೀಕ್ಷಿಸಿದವು. 1940ರ ಅಧ್ಯಕ್ಷೀಯ ಚುನಾವಣೆಯ ಕಾಲದಲ್ಲಿ ಮತದಾನದ ಪೂರ್ವ ನಿರ್ಧಾರಗಳನ್ನು ಕುರಿತು ನಡೆಸಲಾದ ಶೋಧನೆಗಳು, ರಾಜಕೀಯ ಪ್ರಚಾರಗಳು ಮತದಾರರ ಅಭಿಪ್ರಾಯಗಳನ್ನು ಬದಲಾವಣೆ ಮಾಡದೆ, ಅವರು ತಮ್ಮ ತಮ್ಮ ರಾಜಕೀಯ ಬದ್ಧತೆಗಳಿಗೇ ಅಂಟಿಕೊಳ್ಳುವಂತೆ ಮನವೊಲಿಕೆ ಮಾಡುತ್ತವೆ - ಎಂಬುದನ್ನು ತೋರಿಸಿಕೊಟ್ಟವೆ. ಈ ಅಧ್ಯಯನದಲ್ಲಿ ಗುರುತಿಸಲಾದ ಪ್ರಮುಖವಾದ ಚರಾಂಶಗಳೆಂದರೆ ಮತಧರ್ಮ, ಸಾಮಾಜಿಕ - ಆರ್ಥಿಕ ಸ್ಥಿತಿಗತಿ, ವಯಸ್ಸು, ಉದ್ಯೋಗ ಮತ್ತು ವಾಸಸ್ಥಳಗಳು. ಎರಡು ಹಂತದ ಸಂವಹನ ಹರಿವಿನ ಸಿದ್ಧಾಂತದ ಉಗಮಕ್ಕೂ ಈ ಅಧ್ಯಯನವೇ ಕಾರಣೀಭೂತವಾಯಿತು.

ಕಡಿಮೆ ಪ್ರಮಾಣದಲ್ಲಿ, ಮಾಹಿತಿ ಪಡೆಯುವವರ ಮೇಲೆ ಅಭಿಪ್ರಾಯ ನೇತಾರರು ಪ್ರಭಾವ ಬೀರುತ್ತಾರೆ ಮತ್ತು ಪ್ರಭಾವದ ತೀವ್ರತೆಯ ದೃಷ್ಟಿಯಿಂದ ನೋಡುವುದಾದರೆ, ಶ್ರೋತೃಗಣ ಸಮೂಹ ಮಾಧ್ಯಮಗಳಿಗೆ ತೆರೆದುಕೊಳ್ಳುವುದರಿಂದ ಆಗುವ ಪ್ರಭಾವಕ್ಕಿಂತ ವ್ಯಕ್ತಿ-ವ್ಯಕ್ತಿಗಳ ಸಂವಹನದ ಪ್ರಭಾವವೇ ಹೆಚ್ಚಿನದು ಎಂಬುದನ್ನೂ ಈ ಸಿದ್ಧಾಂತ ಅಂಗೀಕರಿಸುತ್ತದೆ. ಕಾರ್ಲ್ ಹೋವ್‌ಲ್ಯಾಂಡ್ ಮತ್ತು ಎಲಿಹು ಕಾಟ್ಜ್, ಪಾಲ್ ಲಾಜರ್‌ಫೆಲ್ಡ್‌ರೊಂದಿಗೆ, ಮೂಲದ ವಿಶ್ವಾಸಾರ್ಹತೆ, ಮಾಹಿತಿಯ ಅನುಕ್ರಮಣಿಕೆ, ಭಯದ ಭಾವನೆಗಳು ಅವುಗಳೊಂದಿಗೆ, ಸೂಚಿತವಾದ ಹಾಗೂ ಸ್ಪಷ್ಟವಾಗಿ ಪ್ರಕಟಗೊಂಡಿರುವಂತಹ ಚರಾಂಶಗಳೆರಡರ ಪ್ರಭಾವಗಳನ್ನು ಚರ್ಚಿಸಿದರು. ಮುಂದುವರೆದು, ಎರಡು ಹಂತದ ಸಿದ್ಧಾಂತದ ಹರಿವನ್ನೂ ಅವರು ವಿಶ್ಲೇಷಿಸಿದರು.

1940 ಮತ್ತು 1950ರ ದಶಕಗಳನ್ನು ನೋಡಿದ ಈ ಅಧ್ಯಯನಗಳು ಸಂವಹನ ಸಂಶೋಧನೆಯ ಅಂಶವನ್ನು ಮತ್ತೂ ಸುದೃಢಗೊಳಿಸಿದವು. 1950 ಮತ್ತು 2000ದ ನಡುವಿನ ಕಾಲದಲ್ಲಿ, ಟೆಲಿವಿಷನ್ - ಅದರಲ್ಲೂ ಮುಖ್ಯವಾಗಿ ಮಕ್ಕಳ ಮೇಲೆ ಅದರ ಪ್ರಭಾವಗಳನ್ನು ಕುರಿತಂತೆ ಸಂಶೋಧಕರು ಬಹುವಾಗಿ ತಮ್ಮ ಗಮನವನ್ನು ಕೇಂದ್ರೀಕರಿಸಿದ್ದಾರೆ. 1950ರ ಅಧ್ಯಯನಗಳ ಕೆಲವೊಂದು ಫಲಿತಾಂಶಗಳೆಂದರೆ:

[redacted] [redacted]

1. ವಯಸ್ಸು, ಲಿಂಗ, ಭಾವನಾತ್ಮಕ ಪರಿಪಕ್ವತೆ ಮತ್ತು ವೈಯಕ್ತಿಕ ಅವಶ್ಯಕತೆಗಳು 'ಅಭಿರುಚಿ'ಯನ್ನು ಪ್ರತಿಫಲಿಸುತ್ತವೆ ಮತ್ತು ಕಾರ್ಯಕ್ರಮಗಳ ಆಯ್ಕೆಯೆಡೆಗೆ ದಾರಿತೋರುತ್ತವೆ.

2. ಹೆಚ್ಚು ಚಟುವಟಿಕೆಯ ಹೆಚ್ಚು ಬುದ್ಧಿಮತ್ತೆಯುಳ್ಳ ಮತ್ತು ಸಾಮಾಜಿಕವಾಗಿ ಹೆಚ್ಚು ಆಸಕ್ತರಾದ ಮಕ್ಕಳಿಗೆ ಟೆಲಿವಿಷನ್‌ನ ಅವಶ್ಯಕತೆ ಹೆಚ್ಚು ಇರುವುದಿಲ್ಲ.

3. ಟೆಲಿವಿಷನ್ ವೀಕ್ಷಣೆಗೆ ಸಂಬಂಧಿಸಿದಂತೆ ತಂದೆ ತಾಯಿಗಳು ಮಾದರಿಯಾಗುತ್ತಾರೆ.

4. ಉದ್ಯೋಗ, ಯಶಸ್ಸು ಮತ್ತು ಸಾಮಾಜಿಕ ಪರಿಸರಗಳನ್ನು ಕುರಿತಂತೆ ಮಕ್ಕಳ ಅಭಿಪ್ರಾಯಗಳು ಟೆಲಿವಿಷನ್ ವೀಕ್ಷಣೆಯಿಂದ ಪ್ರಭಾವಿತಗೊಳ್ಳುತ್ತದೆ.

5. ಸಾಮಾನ್ಯರಾದ ಮಕ್ಕಳ ಮೇಲೆ ಟೆಲಿವಿಷನ್‌ನಲ್ಲಿ ಕಂಡುಬರುವ ಹಿಂಸಾಚಾರ ಬಹಳ ಕಡಿಮೆ ಪ್ರಭಾವವುಳ್ಳದ್ದು.

6. ಶಾಲೆಯಲ್ಲಿನ ಮಕ್ಕಳ ಸಾಧನೆಗಳನ್ನು ಕುರಿತಂತೆ ಟೆಲಿವಿಷನ್ ಯಾವ ಪ್ರಭಾವವನ್ನು ಬೀರುವುದಿಲ್ಲ.

7. ಟೆಲಿವಿಷನ್ ವೀಕ್ಷಣೆ ಭೌತಿಕವಾಗಿ ಮಕ್ಕಳಿಗೆ ಏನೂ ತೊಂದರೆಯುಂಟು ಮಾಡುವುದಿಲ್ಲ.

8. ಟೆಲಿವಿಷನ್ ಮಕ್ಕಳಿಗೆ ಮಾಹಿತಿಯನ್ನು ಒದಗಿಸುತ್ತದೆ ಮತ್ತು ಈ ಹಿಂದೆ ಮಾಹಿತಿಯ ಅಭಿವೃದ್ಧಿ ವಿಷಯಗಳನ್ನು ಕುರಿತಂತೆ ಅವರ ಆಸಕ್ತಿಗಳನ್ನು ಪ್ರಚೋದಿಸುತ್ತದೆ.

9. ಕಡಿಮೆ ಬುದ್ಧಿವಂತಿಕೆಯುಳ್ಳ ಹಾಗೂ ನಿಷ್ಕ್ರಿಯರಾದ ಮಕ್ಕಳು ಹೆಚ್ಚಾಗಿ ಟೆಲಿವಿಷನ್ ಬಳಕೆ ಮಾಡುತ್ತಾರೆ.

10. ಅತಿ ಹೆಚ್ಚಿನ ಮಕ್ಕಳಿಗೆ ಟೆಲಿವಿಷನ್ ಉಪಕಾರಿಯೂ ಅಲ್ಲ, ಅಪಕಾರಿಯೂ ಅಲ್ಲ.

ಬಹುವಾಗಿ, ಟೆಲಿವಿಷನೀಕೃತವಾದ ಹಿಂಸೆಯನ್ನು ಕುರಿತಂತೆ "ಸಮೂಹ ಸಂಪರ್ಕದ ಪರಿಣಾಮಗಳು" ಎಂಬ ಪುಸ್ತಕವನ್ನು ಜೋಸೆಫ್ ಕ್ಲಾಪ್ಪರ್ ಅವರು ಬರೆದಿದ್ದಾರೆ. ಅವರ ಪ್ರಕಾರ:

1. ಮಕ್ಕಳು ಟೆಲಿವಿಷನ್‌ಗೆ ಬೇರೆ ಬೇರೆಯಾಗಿ ಪ್ರತಿಕ್ರಿಯಿಸುತ್ತಾರೆ. ಅವರ ಪ್ರಕ್ರಿಯೆಗಳು ಅವರ ಬಳಕೆ, ಮನಸ್ಥಿತಿ ಮತ್ತು ಅವರು ಯಾವ ಗುಂಪಿನೊಂದಿಗೆ ಸೇರ್ಪಡೆಯಾಗಿದ್ದಾರೆ ಎಂಬುದರ ಮೇಲೆ ಆಧಾರವಾಗಿರುತ್ತದೆ.

2. ಮಾಧ್ಯಮಗಳಲ್ಲಿ ಅಡಕವಾದ ವಿಷಯಗಳು ಜನತೆ ನಂಬುವಷ್ಟು ಶಕ್ತಿಶಾಲಿಯಲ್ಲ.

3. ಸಮೂಹ ಮಾಧ್ಯಮಗಳು ಅಭಿಪ್ರಾಯಗಳನ್ನು ಬದಲಾಯಿಸುವುದಿಲ್ಲ, ಬದಲಿಗೆ ಅವುಗಳನ್ನು ಸುಸ್ಥಿರಗೊಳಿಸುತ್ತವೆ.

ಕೆಲವೊಮ್ಮೆ ವಿರುದ್ಧಾತ್ಮಕವಾದ ಫಲಿತಾಂಶಗಳೂ ಸಂಶೋಧನೆಯಿಂದ ಹೊರಬಂದಿದೆ. ಆದರೂ, ಸಮೂಹ ಮಾಧ್ಯಮಗಳ ಕೆಲವೊಂದು ಪರಿಣಾಮಗಳನ್ನು ಕುರಿತಂತೆ ಸರ್ವಸಮ್ಮತಿ ಇದೆ. ಇಂದು ಅತಿ ಹೆಚ್ಚಿನ ಸಂಶೋಧನೆಗಳು ಕೇಂದ್ರೀಕೃತವಾಗಿರುವುದು ಟೆಲಿವಿಷನ್ ಚಿತ್ರಿಸುವ ಹಿಂಸೆಯ ರೀತಿ ಮತ್ತು ಮಕ್ಕಳ ಮೇಲೆ ಅದು ಬೀರುವ ಪ್ರಭಾವಗಳ ಸುತ್ತಮುತ್ತ. ದೃಶ್ಯ, ಶ್ರವ್ಯ ಸ್ವರೂಪಗಳೆರಡನ್ನೂ ಹೊಂದಿರುವ ಟೆಲಿವಿಷನ್, ಸಂಶೋಧಕರಿಗೆ ಮುಖ್ಯವಾದ ಒಂದು ಮಾಧ್ಯಮವಾಗಿದೆ.

ಸಂವಹನ ಸಂಶೋಧಕರ ಗಮನವನ್ನು ಹಿಡಿದಿಟ್ಟುಕೊಂಡಿರುವ ಇನ್ನೊಂದು ಕ್ಷೇತ್ರವೆಂದರೆ, ಜಾಹೀರಾತುಗಳು ಮತ್ತು ಮಕ್ಕಳ ಮೇಲೆ ಅವುಗಳ ಪ್ರಭಾವಗಳು. ಆಸಕ್ತಿದಾಯಕವಾದ ಫಲಿತಾಂಶಗಳನ್ನು ಹೊಂದಿರುವಂತಹ ಆಸಕ್ತಿಯನ್ನು ಹುಟ್ಟಿಸುವಂತಹ ಹಲವಾರು ಸಂಶೋಧನೆಗಳಿವೆ. ಜಾಹೀರಾತುಗಳಲ್ಲಿ ಸಾರಿ ಹೇಳಲಾಗುವ ವಿಷಯಗಳಿಂದ ಮಕ್ಕಳು ಸುಲಭವಾಗಿ ವಿಚಲಿತರಾಗುವುದಿಲ್ಲ. ಆದರೆ, ಯಾವುದೇ ಉತ್ಪನ್ನವನ್ನು ಆಯ್ಕೆ ಮಾಡುವಾಗ ಮತ್ತು ಕೊಳ್ಳುವಾಗ, ಮಕ್ಕಳು ತಮ್ಮ ತಂದೆ ತಾಯಿಗಳ ಮೇಲೆ ಪ್ರಭಾವ ಬೀರುತ್ತಾರೆ.

## 1.4 ಮೂಲನಿಯಮಗಳು

ಯಾವುದೇ ಸಮಾಜ ವಿಜ್ಞಾನದ ಶಾಖೆಯಂತೆ ಸಂವಹನ ಸಂಶೋಧನೆಗೂ ಕೆಲವೊಂದು ಮೂಲ ನಿಯಮಗಳು ಅವಶ್ಯಕತೆ ಇದೆ. ವೈಜ್ಞಾನಿಕ ವಿವರಣೆ, ಕಟ್ಟುನಿಟ್ಟು ಮತ್ತು ನಿಖರತೆಗಳು ಅದರ ಮೂಲಗುಣಗಳು. ವೈಜ್ಞಾನಿಕ ರೀತಿಯ ಮೌಲ್ಯಮಾಪನ ಪದ್ಧತಿಗೆ ಪ್ರಮುಖವಾದ ನಾಲ್ಕು ಮೂಲ ಫಲಕಗಳಿವೆ. ಅವುಗಳೆಂದರೆ; ನಿಯಂತ್ರಣ, ಕಾರ್ಯಾಚರಣೆಯ ಪರಿಭಾಷೆ, ಯಥಾರ್ಥವಾದ ಪುನಃ ಸೃಷ್ಟಿ ಮತ್ತು ಪೂರ್ವಕಲ್ಪನೆಯ ಪರೀಕ್ಷಣೆ.

ನಿಯಂತ್ರಣವು ಯಾವುದೇ ವೈಜ್ಞಾನಿಕ ವಿಧಾನ ಕ್ರಮದ ಮೂಲ. ಪರಿವೀಕ್ಷಣೆಯ ಅಂಶಗಳಿಗೆ ಕಾರಣಗಳನ್ನು ಹುಡುಕುವುದು ಸಂಶೋಧಕರನಿಗೆ ಸಾಧ್ಯವಾಗುವಂತೆ ಮಾಡುವುದು ಇದೆ. ಕೇಳಲಾದ ಹಲವಾರು ಪ್ರಶ್ನೆಗಳಿಗೆ ಕಾರಣಗಳನ್ನು ಕಂಡುಹಿಡಿಯಲು ಆತ ಪ್ರಯೋಗಗಳನ್ನು ನಡೆಸುತ್ತಾನೆ. ಕೆಲವೊಂದು ಸಾಮಾನ್ಯವಾದ ಪ್ರಶ್ನೆಗಳೆಂದರೆ; ಯಾವುದೋ ವಿಷಯವೊಂದು ಏಕೆ ಆಗುತ್ತದೆ? ಈ ಸಂಗತಿ ನಡೆಯುವುದು ಏತಕ್ಕಾಗಿ? ಅಥವಾ ಘಟನೆಯು ನಡೆಯುವುದಕ್ಕೆ ಕಾರಣವಾದ ಘಟಕಗಳು ಮತ್ತು ಸ್ಥಿತಿಗಳು ಯಾವುವು? ಆಯ್ಕೆ ಮಾಡಿಕೊಳ್ಳಲಾಗಿರುವ ಚರಾಂಶಗಳ ನಡುವೆ ಇಲ್ಲದಿರುವ, ಖೋಟಾ ಸಂಬಂಧಗಳ ನಿವಾರಣೆಗೆ ನಿಯಂತ್ರಿತವಾದ ಶೋಧನೆಗಳು ಸಹಾಯ ಮಾಡುತ್ತವೆ. ಕಂಡುಬರುವ ಪರಿಣಾಮಗಳು, ಅನಿಯಂತ್ರಿತವಾದ ಯಾವುದೇ ಒಂದು ಅಥವಾ ಹಲವಾರು ಚರಾಂಶಗಳ ಒಟ್ಟಾರೆ ಫಲಿತಾಂಶವಾಗಬಹುದು. ಅವುಗಳನ್ನು ಮಾಪನ ಮಾಡಲು ಉಪಯೋಗಿಸುವ ಹಂತಗಳು ಅಥವಾ ಕಾರ್ಯರೂಪಗಳಿಂದ ಸಂಜ್ಞೆಗಳ ಪರಿಭಾಷೆಯನ್ನು ನಿರ್ದೇಶಿಸಿದರೆ ಅವುಗಳನ್ನು ಕಾರ್ಯರೂಪದ ಪರಿಭಾಷೆ ಎಂದು ಕರೆಯಲಾಗುತ್ತದೆ. ಗೊಂದಲಗಳು ಮತ್ತು ಸಂದೇಹಾರ್ಥಗಳನ್ನು ದೂರ ಮಾಡಲು ಇವು ತೀರ ಅವಶ್ಯ. ಪ್ರಯೋಗದಿಂದ ಲಭ್ಯವಾದ ದತ್ತಕಗಳು ನಂಬಲರ್ಹವಾಗಿದ್ದರೆ, ಆ ಪ್ರಯೋಗವನ್ನು ಯಥಾರ್ಥವಾಗಿ ಪುನಃ ನಕಲು ಮಾಡಬಹುದು. ಅಧ್ಯಯನವನ್ನು ಪುನರಾವರ್ತಿಸಿದರೆ, ಅದೇ ಫಲಿತಾಂಶ ಬರಬೇಕು. ಫಲಿತಾಂಶಗಳು ಬೇರೆ ಬೇರೆಯಾದರೆ ಮತ್ತು ಪರಿವೀಕ್ಷಿತವಾದ ಅಂಶಗಳು ಪುನರಾವರ್ತನೆಗೊಳ್ಳದಿದ್ದರೆ, ಆಗ ವಿವರಣೆಗಳೂ ನಂಬಲರ್ಹವಾಗುವುದಿಲ್ಲ.

ಸಂಶೋಧನೆಯ ಪ್ರಶ್ನೆಗಳು ಅಥವಾ ಪೂರ್ವಕಲ್ಪನೆಗಳು ಯಾವುದೇ ಸಂವಹನ ಸಂಶೋಧನೆಯ ಅವಿಭಾಜ್ಯ ಅಂಶಗಳು. ಪೂರ್ವಸಿದ್ಧಾಂತದ ಪರೀಕ್ಷಣೆ ಎಂದರೆ, ಚರಾಂಶಗಳ ನಡುವಿನ ಸಂಬಂಧವನ್ನು ಪರೀಕ್ಷಿಸುವುದು ಎಂದರ್ಥ. ಸಂಶೋಧನೆಯ ಕಟ್ಟುನಿಟ್ಟಿನ ನಿಯಮಗಳನ್ನು ಅನುಸರಿಸಿ ಈ ಪರೀಕ್ಷಣೆಯನ್ನು ನಡೆಸಲಾಗುತ್ತದೆ. ಎಲ್ಲಾ ಸಮಾಜ ವಿಜ್ಞಾನಗಳಂತೆ, ಸಂವಹನಕ್ಕೂ ಅದರದೇ ಆದ ಗುಣಾವಗುಣಗಳಿವೆ. ಜನರು ತಮ್ಮ ಅಭಿಪ್ರಾಯಗಳನ್ನೂ ಮತ್ತು ಆನುಷಂಗಿಕ ಮೌಲ್ಯಗಳನ್ನು ಬದಲಾಯಿಸಿಕೊಳ್ಳುತ್ತಲೇ ಇರುವುದರಿಂದ, ನಡೆಸಲಾಗುವ ವಿಚಾರಣೆಗಳು ಬಹಳಷ್ಟು ಬಾರಿ ಅಸ್ಥಿರವಾಗಿರುತ್ತವೆ. ಬೇರೆ ರೀತಿಯಲ್ಲಿ ಹೇಳುವುದಾದರೆ, ಜನರನ್ನು ಒಳಗೊಂಡಿರುವ ಯಾವುದೂ ಸ್ಥಿರವಾಗಿರುವುದಿಲ್ಲ. ಮಾಧ್ಯಮ ಸಂದೇಶಗಳಿಗೂ ಸಹ ಇದೇ ರೀತಿಯ ಕ್ಷಣಭಂಗುರತೆ ಇರುತ್ತದೆ ಮತ್ತು ಗಂಭೀರವಾಗಿ ಪರಿಶೋಧನೆ ನಡೆಸಬೇಕೆನ್ನುವ ಹಲವಾರು ಸಂಶೋಧಕರ ಮಾರ್ಗವು ಕಠಿಣವಾದ ಕಲ್ಲಿನದ್ದಾಗಿದೆ.

ವಿಶಾಲವಾದ ಸಮತಲದಲ್ಲಿ, ಸಂವಹನ ಸಂಶೋಧನೆಯನ್ನು ಗುಣಾತ್ಮಕ ಮತ್ತು ಪರಿಮಾಣಾತ್ಮಕ ಎಂಬುದಾಗಿ ಎರಡು ವಿಭಾಗ ಮಾಡಬಹುದು. ವೈಜ್ಞಾನಿಕ ಪದ್ಧತಿಯು ಪರಿಮಾಣಾತ್ಮಕತೆಯ ಕಡೆಗೆ ಹೆಚ್ಚಾಗಿ ವಾಲಿದರೆ, ಗುಣಾತ್ಮಕ ಸಂಶೋಧನೆಯು ನೈಸರ್ಗಿಕೀಯವಾದುದು. ಜ್ಞಾನವನ್ನು ಹಲವಾರು ಮಾರ್ಗಗಳಿಂದ ಪಡೆಯಬಹುದು ಮತ್ತು ಹೀಗಾಗಿ ಈ ಎರಡೂ ಸ್ತ್ರೋತ್ರಗಳೂ ಒಪ್ಪತಕ್ಕಂತಹವೇ. ಆದರೆ, ಗುಣಾತ್ಮಕ ವಿಧಾನವನ್ನು ಅನುಸರಿಸುವ ಸಂಶೋಧಕರಿಗೆ, ತಮ್ಮ ವಿಧಿ ವಿಧಾನಗಳನ್ನು ಸಾಧಿಸುವಂತೆ ಒತ್ತಾಯ ಪಡಿಸಲಾಗುತ್ತಿದೆ. ಏಕೆಂದರೆ, ಪರಿಮಾಣಾತ್ಮಕ ಶಾಲೆಯ ಸುಲಭವಾಗಿ ಒಪ್ಪಿಕೊಳ್ಳದಂತಹ ಸಂಶೋಧಕರು ತಾವು ಅನುಸರಿಸುವ ಪದ್ಧತಿಗಳು ಉಳಿದವುಗಳಿಗಿಂತ ಹೆಚ್ಚು ಸತ್ಯವುಳ್ಳದ್ದು, ಕಟ್ಟುನಿಟ್ಟಿನದ್ದು ಎಂದು ತಿಳಿದಿರುತ್ತಾರೆ. ಪರಿಮಾಣಾತ್ಮಕ ಸಂಶೋಧಕರು ಗುಣಾತ್ಮಕ ಸಂಶೋಧನೆಯಲ್ಲಿ ಸಾಕ್ಷ್ಯಾಧಾರಗಳನ್ನು ಮತ್ತು ವಿಶ್ವಾಸಾರ್ಹತೆಯನ್ನು ಸಾಧಿಸಿ ತೋರಿಸುವಂತೆ ಕೇಳುತ್ತಾರೆ.

ಗುಣಾತ್ಮಕ ಶೋಧನೆಯು ವಿಷಯದ ಪ್ರಾಮುಖ್ಯತೆ ಮತ್ತು ವ್ಯಕ್ತಿಗಳ ನಿಜಜೀವನದ ಅನುಭವಗಳ ಮೇಲೆ ಆಧಾರಿತವಾಗಿದೆ. ಜನರು ಏನು ಹೇಳುತ್ತಾರೋ ಮತ್ತು ಏನು ಮಾಡುತ್ತಾರೋ ಅದೂ ಸಹ ಸಮಾನವಾಗಿ ಪ್ರಮುಖವಾಗುತ್ತದೆ.

ಗುಣಾತ್ಮಕ ವಿಧಾನಗಳು ವ್ಯಕ್ತಿನಿಷ್ಠವಾದವು ಮತ್ತು ಅವುಗಳ ಸಾಧನ ಹಾಗೂ ವಸ್ತುವಿಷಯಗಳಲ್ಲಿ ಸಾಕ್ಷಿ, ಆಧಾರಗಳನ್ನೂ ಮತ್ತು ವಿಶ್ವಾಸಾರ್ಹತೆಯನ್ನು ಸಾಧಿಸಿ ತೋರಿಸುವುದು ಬಹಳ ಕಷ್ಟ ಎನ್ನುವುದನ್ನು ಒಪ್ಪಿಕೊಳ್ಳಲಾಗುತ್ತದೆ. ಮಾನವ ಸಂಬಂಧಿಯಾದ ಕೆಲವೊಂದು ವಿಷಯಗಳು ವೈಜ್ಞಾನಿಕ ನಿಯಮ, ನಿರ್ದೇಶನಗಳಿಗೆ ಒಗ್ಗುವುದಿಲ್ಲ ಎಂಬುದನ್ನು ಇಲ್ಲಿ ಗಮನಿಸಬೇಕು. ಗುಣಾತ್ಮಕ ಸಂಶೋಧನೆಯ ಮತ್ತೊಂದು ಮಿತಿಯೆಂದರೆ, ದತ್ತಾಂಶಗಳ ಸಂಗ್ರಹಣೆ, ವಿಶ್ಲೇಷಣೆ ಮತ್ತು ಅರ್ಥೈಸುವಿಕೆಗೆ ಬೇಕಾಗುವ ಸಮಯ. ಅನಾಮಿಕತೆ, ತಥ್ಯತೆ ಮತ್ತು ನೆಚ್ಚಿಕೆಗಳು ಸಾಧಿಸಬೇಕಾದ ಇತರ ಅಂಶಗಳು. ಗುಣಾತ್ಮಕ ಸಂಶೋಧಕನಿಗೆ ಇದೊಂದು ಕಷ್ಟದ ಸನ್ನಿವೇಶ. ದೂರಮಾಡಲು ಕ್ಲಿಷ್ಟವಾದ ಇನ್ನೊಂದು ಅಂಶವೆಂದರೆ ಪಕ್ಷಪಾತದ ಧೋರಣೆ.

ಆದರೆ, ಗುಣಾತ್ಮಕ ಸಂಶೋಧನೆಗೆ ಅದರದೇ ಆದ ವಿಶೇಷ ಶಕ್ತಿಗಳೂ ಇವೆ. ಇದು ಇದ್ದಕ್ಕಿದ್ದಂತೆ ಅನಿರೀಕ್ಷಿತವಾದ ಫಲಿತಾಂಶಗಳನ್ನು ನೀಡಬಹುದು. ಪೂರ್ವಸಿದ್ಧಾಂತದೊಂದಿಗೆ ಪರೀಕ್ಷಣೆ ಮಾಡಬೇಕೆನ್ನುವ ನಿರ್ಬಂಧದಿಂದಲೂ ನಿಕಟವರ್ತಿಯಾಗಿ ಕೆಲಸ ಮಾಡುವುದರಿಂದ, ಸಂಶೋಧಕನು ಸಂಶೋಧನಾ ಕ್ಷೇತ್ರದ ಅಂತರಂಗದ ದರ್ಶನವನ್ನು ಪಡೆಯುತ್ತಾನೆ. ಪರಿಮಾಣಾತ್ಮಕ ಸಂಶೋಧನೆಯಲ್ಲಿ ದಕ್ಕದೇ ಹೋಗಬಹುದಾದಂತಹ ಸಾಮಾಜಿಕ ಮತ್ತು ಶೈಕ್ಷಣಿಕ ಅಂತರ್ವಹನ ಅಥವಾ ಒಡನಾಟ ಗುಣಾತ್ಮಕ ಸಂಶೋಧನೆಯಲ್ಲಿ ದೊರೆಯುತ್ತದೆ. ಸಂಖ್ಯಾಶಾಸ್ತ್ರದನ್ವಯ ವಿಶ್ಲೇಷಣೆ ಮಾಡುವಿಕೆಯ ಮೇಲೆ ಅದು ಆಧಾರಿತವಾಗಿಲ್ಲದಿರುವುದರಿಂದ, ಗುಣಾತ್ಮಕ ಸಂಶೋಧನೆಯು ಹೆಚ್ಚು ವಿವರಣಾತ್ಮಕವಾಗಿರುತ್ತದೆ ಮತ್ತು ಪರಿಮಾಣಾತ್ಮಕ ವಿಧಾನಗಳಿಂದ ಹೆಚ್ಚು ನಿರೂಪಣಾತ್ಮಕವಾದ ಶೈಲಿಯಲ್ಲಿರುತ್ತದೆ. ಸಾಮಾನ್ಯ ಜನರೂ ಸಹ ಈ ಫಲಿತಾಂಶಗಳನ್ನು ಅರ್ಥಮಾಡಿಕೊಳ್ಳಬಹುದು. ಸಂವಹನದ ಸಂಕೀರ್ಣವಾದ ವಿಚಾರಾಂಶಗಳಿಗೆ ಸಿದ್ಧವಾದ ಉತ್ತರಗಳನ್ನು ಇದು ನೀಡದಿದ್ದರೂ, ಸಮರ್ಥವಾದ ಪರ್ಯಾಯ ಮಾರ್ಗಗಳನ್ನು ಇದು ಸೂಚಿಸಬಲ್ಲದು. ಸಂವಹನದ ಒಂದು ವಿಷಯಕ್ಕೆ ಸಂಬಂಧಿಸಿದಂತೆ ಪರಿಪೂರ್ಣವಾದ ಮೌಲ್ಯಮಾಪನ ಮಾಡಲು ಗುಣಾತ್ಮಕ ಮತ್ತು ಪರಿಮಾಣಾತ್ಮಕವಾದ ಎರಡೂ ಪದ್ಧತಿಗಳನ್ನು ಸಂಯೋಜಿಸುವ ಪ್ರವೃತ್ತಿ ಇಂದಿನದ್ದು. ಎಲ್ಲಾ ಸಮಾಜ ವಿಜ್ಞಾನ ಸಂಶೋಧನೆಗಳೂ ಪ್ರಯೋಗಾತ್ಮಕ ಆದರೆ, ವೈಧ್ಯಕ್ಷವಾಗಿ ತಂತ್ರಜ್ಞಾನ ಆ ರೀತಿಯದ್ದಲ್ಲ" - ಎಂದು ಬಹಳ ಚೆನ್ನಾಗಿ ಹೇಳಲಾಗಿದೆ.

ಸಂವಹನವನ್ನು ಅಳವಡಿಸಿಕೊಳ್ಳಲಾಗುವ ಮೂರು ಪ್ರಾಥಮಿಕ ಪದ್ಧತಿಗಳೆಂದರೆ:

ಅ. ಚಾರಿತ್ರಿಕ;

ಆ. ಸಮೀಕ್ಷೆ ಅಥವಾ ಸರ್ವೇಕ್ಷಣ, ಮತ್ತು

ಇ. ಪ್ರಯೋಗಾತ್ಮಕ ಸಂಶೋಧನೆಗಳು.

ಹಿಂದಿನ ಮತ್ತು ಇಂದಿನ ಮಾಧ್ಯಮ ಸಂಗತಿಗಳನ್ನು ಶೋಧನೆ ಮಾಡಿ, ಅವುಗಳ ನಡುವಣ ವ್ಯತ್ಯಾಸಗಳನ್ನು ಗುರುತಿಸುವ ಚಾರಿತ್ರಿಕ ಸಂಶೋಧನೆಯು ಬಹಳ ಹಳೆಯ ಪದ್ಧತಿಗಳಲ್ಲಿ ಒಂದು. ಅದಕ ವಸ್ತುವಿಷಯ ವಿಶ್ಲೇಷಣೆಯು ಇದರ ವ್ಯಾಪ್ತಿಯನ್ನು ವಿಸ್ತರಿಸುವಲ್ಲಿ ಸಾಕಷ್ಟು ಕಾಣಿಕೆ ಸಲ್ಲಿಸಿದೆ. ಸರ್ವೇಕ್ಷಣ ಸಂಶೋಧನೆಯು ಮಾಧ್ಯಮ ವಸ್ತು ವಿಷಯಗಳ ಕಾರ್ಯಸಾಧಕ ಗುಣವನ್ನು ಕಂಡುಕೊಳ್ಳಲು ಮಾಧ್ಯಮ ಶ್ರೋತೃಗಳ ಮಾದರಿಗಳನ್ನು ಬಳಸಿಕೊಳ್ಳುತ್ತದೆ. ಮಾಧ್ಯಮಗಳ ವಸ್ತು ವಿಷಯಗಳು ಹಾಗೂ ವರ್ತನೆ ಮತ್ತು ಮನೋವೃತ್ತಿಗಳ ಅಲ್ಪಕಾಲಿಕವಾದ ಬದಲಾವಣೆಗಳನ್ನು ಗುರುತಿಸಲು ಬಹಳ ಜಾಗರೂಕತೆಯಿಂದ ನಿಯಂತ್ರಿಸಲ್ಪಟ್ಟ ಪರಿಸರದಲ್ಲಿ ಪ್ರಯೋಗಾತ್ಮಕ ಸಂಶೋಧನೆಯು ನಡೆಯುತ್ತದೆ.

ಆದರೆ, ವಿನ್ಯಾಸ, ವಿಧಾನಗಳು ಮತ್ತು ದತ್ತಕಗಳ ನಿರ್ವಹಣೆಯಲ್ಲಿನ ವ್ಯತ್ಯಾಸಗಳು - ಸಂಶೋಧಕರ ನಡುವೆ ವ್ಯತ್ಯಾಸಗಳನ್ನು ಹುಟ್ಟು ಹಾಕಿವೆ. ಸಂವಹನ ಸಂಶೋಧನೆಯು ಎದುರಿಸುತ್ತಿರುವ ಪ್ರಮುಖವಾದ ಸಮಸ್ಯೆಗಳಲ್ಲಿ ಒಂದೆಂದರೆ, ಈವರೆಗೆ ನಡೆದಿರುವ ಅತಿ ಹೆಚ್ಚಿನ ಅಧ್ಯಯನಗಳು ಅಲ್ಪಾವಧಿಯವು, ದೀರ್ಘಕಾಲಿಕವಾದವಲ್ಲ.

ಇದಕ್ಕೆ ಕಾರಣವೆಂದರೆ, ಹಣದ ಅಭಾವ, ವಿಷಯದ ಪ್ರಾಸಂಗಿಕತೆ, ಹೆಚ್ಚು ಕಾಲ ಬೇಡುವ ಸಂಶೋಧನೆ, ಬದಲಾಗುತ್ತಿರುವ ವಿಧಾನಗಳು, ಪ್ರತಿಕ್ರಿಯೆ ನೀಡುವವರ ಜಾರಿಕೊಳ್ಳುವ ಪ್ರವೃತ್ತಿ ಮತ್ತು ಒತ್ತಡ ಗುಂಪುಗಳ ಪ್ರಭಾವ.

ದತ್ತಾಂಶಗಳನ್ನು ಕಲೆ ಹಾಕಲು, ಪರೀಕ್ಷಿಸಲು ಮತ್ತು ಸಮ್ಮತಗೊಳಿಸಲು ಅತಿ ಹೆಚ್ಚಿನ ಸಂವಹನ ಸಂಶೋಧಕರು ಇಂದು ಗಣಿತ ಹಾಗೂ ಸಂಖ್ಯಾಶಾಸ್ತ್ರದ ತಂತ್ರಗಳನ್ನೂ ಮತ್ತು ಪರೀಕ್ಷೆಗಳನ್ನು ಬಳಸುತ್ತಾರೆ. ಕ್ಲಿಷ್ಟವಾದ ವಿಶ್ಲೇಷಣೆಗೆ ಕಂಪ್ಯೂಟರ್ ತಂತ್ರಾಂಶ (ಪ್ರೋಗ್ರಾಮ್)ಗಳನ್ನು ಬಳಸಲಾಗುತ್ತದೆ. ವೃತ್ತಿಪರವಾದ ಹಾಗೂ ಶೈಕ್ಷಣಿಕ ಪರಿಸರಗಳೆರಡರಲ್ಲೂ ಸಂವಹನ ಸಂಶೋಧನೆಯನ್ನು ನಡೆಸಲಾಗುತ್ತಿದೆ.

## 1.5 ಸಾರಾಂಶ

ಸಂವಹನ ಸಂಶೋಧನೆಯು ಹೊರಹೊಮ್ಮಿದ್ದು - ಸಮಾಜಶಾಸ್ತ್ರ, ಸಾಮಾಜಿಕ ಮನೋವಿಜ್ಞಾನ, ಸಾಂಸ್ಕೃತಿಕ ಮಾನವಶಾಸ್ತ್ರ, ಹಾಗು ಅರ್ಥಶಾಸ್ತ್ರ ಇತ್ಯಾದಿಯಾದ ಇತರ ಶಾಖೆಗಳಿಂದ. ಸರಳವಾದ, ಪ್ರಚೋದನೆ ಪ್ರಕ್ರಿಯೆಯ ಮೌಲ್ಯಮಾಪನದಿಂದ, ಜಟಿಲವಾದ ಕಾರ್ಯಕಾರಣ ಸಂಬಂಧದವರೆಗಿನ ಈ ಪಯಣ ದೀರ್ಘವಾದುದು. ಪ್ರತಿಯೊಂದು ಮಾಧ್ಯಮವೂ ತನ್ನದೇ ಆದ ಸಂಶೋಧನಾ ಅಧ್ಯಯನಗಳ ಭಂಡಾರವನ್ನೇ ಹೊಂದಿದೆ. ಈ ಪ್ರಕ್ರಿಯೆಯು 1930ರ ದಶಕದಲ್ಲಿ ಆರಂಭಗೊಂಡು, 1970ರ ದಶಕದಲ್ಲಿ ತೀವ್ರತೆಯನ್ನು ಪಡೆದುಕೊಂಡಿತು. ಸಂಶೋಧನಾ ಪದ್ಧತಿಗಳ ಮೂರು ಪ್ರಮುಖ ವಿಭಾಗಗಳೆಂದರೆ, ಚಾರಿತ್ರಿಕ ಸಂಶೋಧನೆ, ಸರ್ವೇಕ್ಷಣಾ ಸಂಶೋಧನೆ ಮತ್ತು ಪ್ರಯೋಗಾತ್ಮಕ ಸಂಶೋಧನೆ.

ಸಮೂಹ ಮಾಧ್ಯಮಗಳಿಗೆ ಸಂಬಂಧಿಸಿದ ಸಂಶೋಧನೆಯ ಪ್ರಾಥಮಿಕ ಕ್ಷೇತ್ರಗಳೆಂದರೆ:

1. ತಿಳಿಯುವಿಕೆ ಮತ್ತು ಗ್ರಹಿಕೆಯ ಮೇಲೆ ಸಮೂಹ ಮಾಧ್ಯಮಗಳ ಪ್ರಭಾವಗಳು;

2. ಮನೋವೃತ್ತಿ ಮತ್ತು ಮೌಲ್ಯಪರಿವರ್ತನೆಯ ಮೇಲೆ ಸಮೂಹ ಮಾಧ್ಯಮಗಳ ಪ್ರಭಾವಗಳು, ಮತ್ತು

3. ವರ್ತನೆಯ ಪರಿವರ್ತನೆ(ಧನಾತ್ಮಕ ಹಾಗೂ ಋಣಾತ್ಮಕ)ಯ ಮೇಲೆ ಮಾಧ್ಯಮಗಳ ಪ್ರಭಾವಗಳು.

ಟೆಲಿವಿಷನ್ ಮಾಧ್ಯಮವು ಹಲವಾರು ಸಂಶೋಧಕರ ಗಮನವನ್ನು ಸೆಳೆದಿದೆ. ಮಕ್ಕಳ ಮೇಲೆ ಟೆಲಿವಿಷನೀಕೃತವಾದ ಹಿಂಸೆಯ ಪ್ರಭಾವ - ಇದು ಹಲವಾರು ವಿದ್ವಾಂಸರ ಪ್ರಾಥಮಿಕ ಕಾಳಜಿಯಾಗಿದೆ. ಟಿವಿ ಜಾಹಿರಾತುಗಳ ಪ್ರಭಾವ ಇನ್ನೊಂದು ಮುಖ್ಯವಾದ ಸಂಶೋಧನಾ ಕ್ಷೇತ್ರ. ಆಧುನಿಕ ಸಮಾಜದಲ್ಲಿ ಟೆಲಿವಿಷನ್ನಿನ ಪಾತ್ರವನ್ನು ಕುರಿತು ವಿಲ್ಬರ್ ಶ್ರಾಮ್ ಮತ್ತು ಜೋಸೆಫ್ ಕ್ಲಾಪ್ಪರ್‌ರಂತಹ ಪರಿಣಿತರು ಅಧ್ಯಯನ ಮಾಡಿದ್ದಾರೆ. ಮಾಹಿತಿಯ ಪ್ರಸರಣ ಕುರಿತು ನಡೆಸಲಾದ ಅಧ್ಯಯನಗಳ ಫಲಿತಾಂಶವೇ ಎರಡು ಹಂತದಲ್ಲಿ ಹರಿವ ಸಂವಹನ ಸಿದ್ಧಾಂತದ ಉಗಮಕ್ಕೆ ಕಾರಣ.

ಸಂವಹನ ಸಂಶೋಧನೆಯನ್ನು ಗುಣಾತ್ಮಕ ಮತ್ತು ಪರಿಮಾಣಾತ್ಮಕ ಎಂದೂ ವರ್ಗೀಕರಿಸಬಹುದು. ಆದರೆ, ಪರಿಮಾಣಾತ್ಮಕ ಸಂಶೋಧನೆಯ ವೈಜ್ಞಾನಿಕ ನಿಯಮಗಳನ್ನು ಗುಣಾತ್ಮಕ ಸಂಶೋಧನೆಯು ಪಾಲಿಸುವುದಿಲ್ಲ. ಆದರೂ ಪ್ರಕೃತಿ ಸಹಜತೆ ಮತ್ತು ಸ್ವತಂತ್ರತೆಯ ಗುಣಲಕ್ಷಣಗಳನ್ನು ಇದು ಹೊಂದಿರುತ್ತದೆ. ಪೂರ್ವಸಿದ್ಧಾಂತದೊಂದಿಗೆ ಪರೀಕ್ಷೆ ನಡೆಸಬೇಕಾದಂತಹ ಪ್ರತಿಬಂಧಕತೆ ಇದಕ್ಕಿರುವುದಿಲ್ಲ. ಹೆಚ್ಚು ಹೆಚ್ಚಾಗಿ ಗಣಿತಶಾಸ್ತ್ರ ಮತ್ತು ಸಂಖ್ಯಾಶಾಸ್ತ್ರದ ಪರೀಕ್ಷೆಗಳು ಮತ್ತು ತಂತ್ರಗಳಿಂದ ಸಂವಹನ ಸಂಶೋಧನೆಯು ಆಧುನೀಕರಣಗೊಳ್ಳುತ್ತಿದೆ. ಗಣಕಯಂತ್ರಗಳು ಇದಕ್ಕೆ ಆಧುನಿಕತೆ ಹಾಗೂ ವೇಗವನ್ನೂ ತಂದು ಸೇರಿಸಿವೆ.

**ಚಟುವಟಿಕೆ:**

**ಸೂಚನೆ: ನಿಮ್ಮ ಉತ್ತರಗಳನ್ನು ಈ ಘಟಕದಲ್ಲಿ ನೀಡಲಾಗಿರುವ ವಿವರಗಳೊಂದಿಗೆ ಹೋಲಿಸಿ.**

1. ಸಂವಹನ ಸಂಶೋಧನೆಯ ಮೂಲಪ್ರಶ್ನೆಗಳನ್ನು ಗುರುತಿಸಿ.

2. ಟೆಲಿವಿಷನ್ನಿನ ಪ್ರಭಾವಗಳ ಬಗ್ಗೆ ನಡೆದಿರುವ ಸಂಶೋಧನೆಗಳ ಮುಖ್ಯ ಫಲಿತಾಂಶಗಳು ಯಾವುವು? ವಿವರಿಸಿ.

## 1.6 ನಿಮ್ಮ ಪ್ರಗತಿ ಪರಿಶೀಲನೆ

1. ವ್ಯಕ್ತಿಯ ತಿಳುವಳಿಕೆ, ಗ್ರಹಿಕೆ, ಮನೋವೃತ್ತಿ ಮತ್ತು ಮೌಲ್ಯಪರಿವರ್ತನೆಗಳ ಮೇಲೆ ಸಮೂಹ ಸಂವಹನದ ಪ್ರಭಾವಗಳನ್ನು ಚರ್ಚಿಸಿ.

2. ಸಂವಹನದಲ್ಲಿ ವೈಜ್ಞಾನಿಕ ಶೋಧನೆಯ ಪ್ರಮುಖ ಮೂಲಘಟಕಗಳನ್ನು ಪರೀಕ್ಷಿಸಿ.

3. ಮಕ್ಕಳ ಮೇಲೆ ಟೆಲಿವಿಷನ್ನಿನ ಪ್ರಭಾವಗಳು - ಈ ಕುರಿತ ಫಲಿತಾಂಶಗಳನ್ನು ಸ್ಥೂಲವಾಗಿ ವಿವರಿಸಿ.

## 1.7 ಹೆಚ್ಚಿನ ಓದಿಗಾಗಿ


1. Agarwal, Anthropological Methods in Communication Research, Concept Publishing House - New Delhi, 1985.
2. Joshi, Media Research: Cross Sectional Analysis, Rawat Publications - New Delhi, 2002.
3. Kerlinger, Foundations of Behavioral Research, ed III, Rinehart & Winston - New York, 1986.
4. Stempel and Westly, Research Methods in Mass Communication, Prentice Hall - Englewood Cliffs - NJ, 1989.
5. Thakur, Research and Methodology in Social Sciences, Deep Publications - New Delhi, 1998.


**ಬರಹ: ತೇಜಸ್ವಿ ನವಿಲೂರ್**

# ಘಟಕ 2 ಸಂವಹನ ಸಂಶೋಧನೆಯ ಹಾದಿಗಳು

ರಚನೆ


2.0 ಉದ್ದೇಶಗಳು

2.1 ಪ್ರಸ್ತಾವನೆ

2.2 ಸಂಶೋಧನೆಯ ರೀತಿಗಳು

2.2.1 ಅನ್ವೇಷಣಾತ್ಮಕ ಅಧ್ಯಯನಗಳು

2.2.2 ವರ್ಣನಾತ್ಮಕ ಅಧ್ಯಯನಗಳು

2.2.3 ವಿವರಣಾತ್ಮಕ ಅಧ್ಯಯನಗಳು

2.3 ಸಂಶೋಧನೆಯ ವಿಧಾನಗಳು

2.4 ಚಾರಿತ್ರಿಕ

2.5 ಪರಿವೀಕ್ಷಣೆ (ಅವಲೋಕನ)

2.6 ವಿಷಯ ವಿಶ್ಲೇಷಣೆ

2.7 ಪ್ರಯೋಗಾತ್ಮಕ ವಿಧಾನ

2.7.1 ಮೆನೆಫೀಸ್ ಪ್ರಯೋಗ

2.7.2 ಕೆಲ್‌ಮನ್ ಮತ್ತು ಹೋವ್‌ಲ್ಯಾಂಡ್ ಪ್ರಯೋಗ

2.8 ಸರ್ವೇಕ್ಷಣಾ (ಸಮೀಕ್ಷಾ) ಸಂಶೋಧನೆ

2.8.1 ಮಾದರಿ (ನಮೂನೆ)

2.8.2 ಸಂದರ್ಶನ

2.9 ಪ್ರಕರಣ ಅಧ್ಯಯನ ಹಾಗು ಇತರ ಗುಣಾತ್ಮಕ ರೀತಿಗಳು

2.10 ಸಾರಾಂಶ

2.11 ಪಾರಿಭಾಷಿಕ ಕೋಶ

2.12 ನಿಮ್ಮ ಪ್ರಗತಿ ಪರಿಶೀಲನೆ

2.13 ಹೆಚ್ಚಿನ ಓದಿಗಾಗಿ

## 2.0 ಉದ್ದೇಶಗಳು

ಸಂವಹನ ಸಂಶೋಧನೆ ವಿವಿಧ ಮಾರ್ಗಗಳನ್ನೂ ಮತ್ತು ಸಂಶೋಧನಾ ವಿಧಾನಗಳನ್ನೂ ನಿಮಗೆ ಪರಿಚಯ ಮಾಡಿಸುವಂತೆ ಈ ಘಟಕವನ್ನು ವಿನ್ಯಾಸಗೊಳಿಸಲಾಗಿದೆ. ಈ ಘಟಕವನ್ನು ಅಧ್ಯಯನ ಮಾಡಿದ ನಂತರ ಕೆಳಕಂಡ ಅಂಶಗಳು ನಿಮಗೆ ಸಾಧ್ಯವಾಗಬೇಕು:

* ಸಂವಹನ ಸಂಶೋಧನೆಯಲ್ಲಿ ಬಳಸಲಾಗುವ ವಿವಿಧ ವಿಧಾನಗಳ ಚಿತ್ರಣ;
* ವಿವಿಧ ವಿಧಾನಗಳ ಕಾರ್ಯರೀತಿಯ ರೂಪುರೇಷೆಗಳ ಚಿತ್ರಣ;
* ಈ ವಿಧಾನಗಳ ಹಿರಿಮೆಗಳನ್ನೂ ಮತ್ತು ಮಿತಿಗಳನ್ನೂ ಗುರುತಿಸುವುದು, ಹಾಗು
* 'ಸಂಶೋಧನಾ ಸಮಸ್ಯೆ'ಯನ್ನು ಅಧ್ಯಯನ ಮಾಡಲು ಸೂಕ್ತ ವಿಧಾನದ ನಿರ್ಧಾರಣ.

## 2.1 ಪ್ರಸ್ತಾವನೆ

ಒಂದು ವೈಜ್ಞಾನಿಕ ಶಾಖೆಯಾಗಿ ಸಂವಹನವನ್ನು ಅಧ್ಯಯನ ಮಾಡಲು ಅದರ ಗುರಿಗಳನ್ನೂ ಮತ್ತು ಕಾರ್ಯವಿಧಾನಗಳನ್ನೂ ಅರ್ಥಮಾಡಿಕೊಳ್ಳಬೇಕು. ಎಲ್ಲಾ ವಿಜ್ಞಾನ ಶಾಖೆಗಳೂ ಸಾಮಾನ್ಯವಾದ ಕೆಲವೊಂದು ಗುರಿಗಳನ್ನು ಹೊಂದಿರುತ್ತವೆ. ಅವುಗಳೆಂದರೆ ವಸ್ತು/ವಿಷಯದ ಸ್ವರೂಪವನ್ನು ಅರ್ಥಮಾಡಿಕೊಳ್ಳುವುದು, ಭವಿತವ್ಯವನ್ನು ಊಹೆ ಮಾಡುವುದು ಮತ್ತು ನಿಯಂತ್ರಣ. ಸಂವಹನ ವಿಜ್ಞಾನದ ಯತ್ನಗಳೂ ಇದಕ್ಕೆ ಸಮಾನವಾದವೇ. ಪ್ರಕ್ರಿಯೆಯಲ್ಲಿ ಸೇರಿಕೊಂಡಿರುವ ಹಲವಾರು ಘಟಕಗಳು, ಅವುಗಳ ನಡುವೆ ಪರಸ್ಪರ ಇರುವ ಸಂವಹನಗಳು ಮತ್ತು ವ್ಯಕ್ತಿಯ ಅಂತರ್ಯದಲ್ಲಿ, ವ್ಯಕ್ತಿ- ವ್ಯಕ್ತಿಗಳ ನಡುವೆ, ಗುಂಪುಗಳ ಮಟ್ಟ ಮತ್ತು ಸಮಾಜದ ಮಟ್ಟಗಳಲ್ಲಿ ನಡೆಯುವ ಪ್ರಕ್ರಿಯೆಯ ಕಾರ್ಯಾಚರಣೆಗಳು - ಹೀಗೆ ಸಂವಹನ ಪ್ರಕ್ರಿಯೆಯ ಸ್ವರೂಪವನ್ನು ಅರ್ಥಮಾಡಿಕೊಳ್ಳುವ ಪ್ರಯತ್ನವನ್ನು ಇದು ಮಾಡುತ್ತದೆ. ಈ ರೀತಿಯಾಗಿ ಅರ್ಥಮಾಡಿಕೊಂಡ ಆಧಾರದ ಮೇಲೆ, ಕೆಲವೊಂದು ಕಾರ್ಯಗಳ ಫಲಿತಾಂಶವನ್ನು ಊಹಿಸುವ ಮತ್ತು ಅವುಗಳ ಆಗುವಿಕೆಯನ್ನು ನಿಯಂತ್ರಿಸುವ ಪ್ರಯತ್ನಗಳನ್ನು ಮಾಡಲಾಗುತ್ತದೆ.

ಈ ಗುರಿಗಳನ್ನು ಒಂದು ನಿರ್ದಿಷ್ಟವಾದ ಉದಾಹರಣೆಯ ಮೂಲಕ ಅರ್ಥಮಾಡಿಕೊಳ್ಳುವ ಪ್ರಯತ್ನ ಮಾಡೋಣ. ಹಿಂದಿನ ಘಟಕಗಳಲ್ಲಿ 'ಮೂಲದ ವಿಶ್ವಾಸಾರ್ಹತೆ' ಎಂಬ ಪರಿಕಲ್ಪನೆಯನ್ನು ನೀವು ಈಗಾಗಲೇ ಕಂಡುಕೊಂಡಿರುತ್ತೀರಿ. ಇದು ಸಂದೇಶವನ್ನು ಕಳುಹಿಸುವ ಸಂವಾಹಕನ ಲಕ್ಷಣ. ಇದು ನಿಜವಾಗಿರಬಹುದು ಅಥವಾ ಸಂದೇಶವನ್ನು ಪಡೆಯುವ ಗ್ರಾಹಕನ ಕಲ್ಪನೆಯಾಗಿರಬಹುದು. ಮೊದಲಿಗೆ ಸಂಶೋಧಕನು ಈ ಪರಿಕಲ್ಪನೆಯನ್ನು ಅರ್ಥಮಾಡಿಕೊಳ್ಳುವ ಪ್ರಯತ್ನ ಮಾಡುತ್ತಾನೆ ಮತ್ತು ಅದನ್ನು ಮೂಲದ 'ಪರಿಣತಿ', 'ವಿಶ್ವಾಸಾರ್ಹತೆ', 'ಪ್ರಾಮಾಣಿಕತೆ' ಎಂದು ಚಿತ್ರಿಸಿ ಗುರುತಿಸುತ್ತಾನೆ ಮತ್ತು ವಿಶ್ವಾಸಾರ್ಹ ಮೂಲಗಳ ಸಂವಹನ ಸಂದೇಶಗಳ ಕಾರ್ಯಸಾಫಲ್ಯವನ್ನು ಪ್ರತಿಫಲಿಸುತ್ತಾನೆ.

ವಿಶ್ವಾಸಾರ್ಹತೆಯ ಸ್ವರೂಪವನ್ನು ಒಮ್ಮೆ ಅರ್ಥ ಮಾಡಿಕೊಂಡ ನಂತರ, ನಂಬಲರ್ಹ ಮೂಲಗಳಿಂದಾದ ಸಂವಹನಗಳು, ಕಡಿಮೆ ವಿಶ್ವಾಸಾರ್ಹತೆಯ ಮೂಲದವುಗಳಿಗಿಂತ ಗ್ರಾಹಕರ ಮೇಲೆ ಹೆಚ್ಚಿನ ಮಟ್ಟದ ಪ್ರಭಾವ ಬೀರುತ್ತದೆ ಎಂಬ ಕಲ್ಪನೆ ಮಾಡಲು ಉದ್ಯುಕ್ತನಾಗುತ್ತಾನೆ. ಮುಂದೆ, ನಂಬಲರ್ಹ ಮೂಲಗಳನ್ನು ಬಳಸಿಕೊಂಡು, ಸಂವಹನದ ಪ್ರಚಾರಗಳ ವೈಫಲ್ಯವನ್ನು ನಿಯಂತ್ರಿಸಲು ಪ್ರಯತ್ನಿಸುತ್ತಾನೆ.

ಇತರ ಎಲ್ಲಾ ವಿಜ್ಞಾನಗಳಂತೆ, ಸಂವಹನವೂ ಸಂವಹನ ಪ್ರಕ್ರಿಯೆಯ ಸ್ವರೂಪವನ್ನು ಅರ್ಥಮಾಡಿಕೊಳ್ಳಲು ಮತ್ತು ಪ್ರಕ್ರಿಯೆಯ ಫಲಿತಾಂಶಗಳನ್ನು / ಭವಿಷ್ಯವನ್ನು ಊಹಿಸಲು ಮತ್ತು ನಿಯಂತ್ರಿಸಲು ಪ್ರಯತ್ನಿಸುತ್ತದೆ ಎಂಬುದನ್ನು ನೀವು ಈಗ ತಿಳಿದಿದ್ದೀರಿ. ಸಂಶೋಧನಾ ಅಧ್ಯಯನದ ರೀತಿಗಳು ಮತ್ತು ಸಂವಹನ ಸಂಶೋಧಕರಿಂದ ಬಳಸಲ್ಪಡುವ ವಿಧಾನಗಳು ಈ ಘಟಕದ ವಸ್ತುವಿಷಯಗಳು.

## 2.2 ಸಂಶೋಧನೆಯ ರೀತಿಗಳು

ಯಾವ ಉದ್ದೇಶಕ್ಕಾಗಿ ಬಳಸಲಾಗುತ್ತಿದೆ ಎಂಬುದನ್ನು ಆಧರಿಸಿ, ಸಂವಹನ ಸಂಶೋಧನೆಯನ್ನು ಒಳಗೊಂಡಂತೆ ಸಮಾಜವಿಜ್ಞಾನ ಸಂಶೋಧನೆಗಳು ವಿವಿಧ ರೂಪಗಳನ್ನು ತಳೆಯುತ್ತವೆ. ಸಾಮಾನ್ಯವಾಗಿ ಗುರುತಿಸಬಹುದಾದ ಮೂರು ಪ್ರಮುಖ ರೀತಿಗಳೆಂದರೆ, ಅನ್ವೇಷಣೆ, ವರ್ಣನೆ ಮತ್ತು ವಿವರಣೆ. ಯಾವುದೇ ಸಂವಹನಾ ಅಧ್ಯಯನವು ಈ ಯಾವುದೇ ಉದ್ದೇಶಗಳ ಮೇಲೆ ಗಮನವನ್ನು ಕೇಂದ್ರೀಕರಿಸಬಹುದು ಅಥವಾ ಒಂದೇ ಅಧ್ಯಯನವು ಇವುಗಳಲ್ಲಿ ಒಂದಕ್ಕಿಂತ ಹೆಚ್ಚಿನ ಉದ್ದೇಶಗಳನ್ನು ಹೊಂದಿರಬಹುದು.

### 2.2.1 ಅನ್ವೇಷಣಾತ್ಮಕ ಅಧ್ಯಯನಗಳು

ಸಂಶೋಧಕನಿಗೆ ಆಸಕ್ತಿಯಿರುವ, ಬೇರೆಯವುಗಳಿಗಿಂತ ಸಾಕಷ್ಟು ಹೊಸದಾದ, ಪೂರ್ಣಪ್ರಮಾಣದಲ್ಲಿ ಶೋಧನಾಕಾರ್ಯ ನಡೆಯದೆ ಇರುವಂತಹ ವಿಷಯಗಳ ಮೇಲೆ ಇಂಥಹ ಅಧ್ಯಯನಗಳನ್ನು ನಡೆಸಲಾಗುತ್ತದೆ. ಆಯಾಕಾಲದ ಸಮಾಜಕ್ಕೆ ಹಾಳಚಿ ಇರುವಂತಹ ವಿಷಯಗಳ ಮೇಲೂ ಈ ರೀತಿಯ ಅಧ್ಯಯನಗಳು ನಡೆಯುತ್ತವೆ. ಸಮಸ್ಯೆಗಳನ್ನು ಅರ್ಥಮಾಡಿಕೊಳ್ಳುವುದಕ್ಕೆ ಅನ್ವೇಷಣಾತ್ಮಕ ಅಧ್ಯಯನಗಳು ಮೂಲ. ಮುಂದೆ ಅದೇ ಸಮಸ್ಯೆಗಳ ಮೇಲೆ ಹೆಚ್ಚು ಜಾಗರೂಕತೆಯಿಂದ ಹಾಗು ಹೆಚ್ಚು ವಿಸ್ತೃತವಾಗಿ ಅಧ್ಯಯನ ಮಾಡಲು ಇವು ಪೂರ್ವಭಾವಿಯಾದವು ಮತ್ತು ಮುಂದಿನ ದೊಡ್ಡ ಪ್ರಮಾಣದ ಶೋಧನೆಗಳಲ್ಲಿ ಅನ್ವಯಿಸಬಹುದಾದ ಪರಿಕರಗಳನ್ನು ವಿಧಾನಗಳನ್ನು ಅಭಿವೃದ್ಧಿಪಡಿಸಲೂ ಇವು ಸಹಕಾರಿ. ಶೋಧನೆ ನಡೆಯುತ್ತಿರುವ ಸಮಸ್ಯೆಯ ಸಂಕೀರ್ಣತೆಗಳ ಬಗ್ಗೆ ಒಳನೋಟಗಳನ್ನು ನೀಡುವ ಕ್ರಿಯೆಯನ್ನು ಈ ಅಧ್ಯಯನಗಳು ಮಾಡುತ್ತವೆ. ಇವು ಸಮಸ್ಯೆಗಳಿಗೆ ಅಂತಿಮವಾದ ಉತ್ತರಗಳನ್ನು ನೀಡದಿರಬಹುದು. ಆದರೆ, ನಿಶ್ಚಯವಾಗಿಯೂ ಸಂಭಾವ್ಯವಾದ ಉತ್ತರಗಳ ಬಗ್ಗೆ ಸೂಚನೆಗಳನ್ನು ನೀಡಬಲ್ಲವು, ಒಳನೋಟಗಳನ್ನೂ ಮತ್ತು ಕಾರ್ಯರೀತಿಗಳನ್ನು ನೀಡಬಲ್ಲವು.

### 2.2.2 ವರ್ಣನಾತ್ಮಕ ಅಧ್ಯಯನಗಳು

ವಸ್ತುಗಳನ್ನು, ವ್ಯಕ್ತಿಗಳನ್ನು, ಘಟನೆಗಳನ್ನು ಅಥವಾ ಸಂಗತಿಗಳನ್ನು ವರ್ಣನೆ ಮಾಡುವ ಉದ್ದೇಶ ಈ ವರ್ಣನಾತ್ಮಕ ಅಧ್ಯಯನಗಳದ್ದು, ವರ್ಣನಾತ್ಮಕ ಅಧ್ಯಯನಕ್ಕೆ, 'ಜನಗಣತಿ' ಒಂದು ಉತ್ತಮ ಉದಾಹರಣೆ ಎಂದು ಹೇಳಬಹುದು. ಜನಸಂಖ್ಯೆಯೊಂದರ ಗುಣಲಕ್ಷಣಗಳನ್ನು ವಿವರಿಸುವುದು ಜನಗಣತಿಯ ಉದ್ದೇಶ. ಸಮೂಹದ ಗುಣಗಳನ್ನು ವಿವರಿಸುವ ಜನಸಂಖ್ಯಾ ಚಿತ್ರಣಗಳು, ವಿವಿಧ ನಗರಗಳ ಅಪರಾಧಗಳ ಪ್ರಮಾಣ ಇತ್ಯಾದಿಗಳು ವರ್ಣನಾತ್ಮಕ ಅಧ್ಯಯನಗಳ ಇತರ ಉದಾಹರಣೆಗಳು. ಜನಾಭಿಪ್ರಾಯ ಸಂಗ್ರಹಣೆ, ಮಾರುಕಟ್ಟೆ, ಸರ್ವೇಕ್ಷಣೆ, ಮಾಧ್ಯಮ ಹವ್ಯಾಸಗಳ ಅಧ್ಯಯನ, ಮಾಧ್ಯಮ ಕಾರ್ಯಕ್ರಮಗಳಲ್ಲಿ ಅಡಕವಾದ ವಿಷಯಗಳ ವಿಶ್ಲೇಷಣೆ ಇತ್ಯಾದಿಯಾದ ಹಲವಾರು ವರ್ಣನಾತ್ಮಕ ಸಂಶೋಧನಾಕಾರ್ಯಗಳಲ್ಲಿ ಸಂವಹನ ಸಂಶೋಧಕರು ನಿರತರಾಗಿರುತ್ತಾರೆ. ಜನರ ಗುಂಪಿನ ಗುಣಲಕ್ಷಣಗಳನ್ನು ವರ್ಣನೆ ಮಾಡುವ ಉದ್ದೇಶ, ಈ ಶೋಧನೆಗಳದ್ದಾದರೂ, ಜನಸಂಖ್ಯೆಯ ಮಾದರಿಗಳ ಮೇಲೆಯೇ ಇಂತಹ ಅಧ್ಯಯನಗಳು ಆಧಾರಿತವಾಗಿರುತ್ತವೆ. ಅಧ್ಯಯನಕ್ಕೆಂದು ಯಾವ ಮಾದರಿಯನ್ನು ತೆಗೆದುಕೊಂಡಿದ್ದಾರೋ ಅದನ್ನು ಅಂತಹ ಸಂಪೂರ್ಣ ಜನಸಂಖ್ಯೆಗೆ ಸಾರ್ವತ್ರೀಕರಣಗೊಳಿಸಬಹುದಾದರೆ ಮಾತ್ರ ಅಂತಹ ವರ್ಣನೆಗಳು ಉಪಯುಕ್ತವಾಗುತ್ತವೆ.

## 2.2.3 ವಿವರಣಾತ್ಮಕ ಅಧ್ಯಯನಗಳು

ಮೂರನೆಯ ರೀತಿಯದೆಂದರೆ, ಪರಿವೀಕ್ಷಿಸುತ್ತಿರುವಂತಹ ವಿಷಯಗಳಿಗೆ ವಿವರಣೆಗಳನ್ನು ಕಂಡುಹಿಡಿಯುವ ಉದ್ದೇಶ ಹೊಂದಿರುವ ವಿವರಣಾತ್ಮಕ ಅಧ್ಯಯನಗಳು. ಇದು ಏಕಾಗುತ್ತಿದೆ? ಇದು ಏನು? ಇತ್ಯಾದಿ ಪ್ರಶ್ನೆಗಳನ್ನು ಇವು ಉದ್ದೇಶಿಸುತ್ತವೆ. ವರ್ಣನಾತ್ಮಕ ಅಧ್ಯಯನವೊಂದು ಮಹಿಳೆಯರು ಹೆಚ್ಚು ಪ್ರಮಾಣದಲ್ಲಿ ಟಿವಿ ಕಾರ್ಯಕ್ರಮಗಳನ್ನು ನೋಡುತ್ತಾರೆ ಎಂದು ತಿಳಿಸಿದರೆ, ಇದು ಏಕೆ ಹೀಗೆ? ಎಂಬ ಪ್ರಶ್ನೆಯನ್ನು ವಿವರಣಾತ್ಮಕ ಅಧ್ಯಯನ ಪರಿಶೋಧಿಸುತ್ತದೆ. ಬಹುಶಃ ಹೆಂಗಸರು ಗಂಡಸರಿಗಿಂತ ಹೆಚ್ಚು ಗಂಟೆಗಳ ಕಾಲ ಟಿವಿಯ ಹತ್ತಿರ ಇರುವುದರಿಂದ ಅವರು ಹೆಚ್ಚಾಗಿ ಟಿವಿ ವೀಕ್ಷಣೆ ಮಾಡುತ್ತಿರಬಹುದು. ಸಂಶೋಧನೆಯ ಮೂರು ಉದ್ದೇಶಗಳನ್ನು ಪ್ರತ್ಯೇಕವಾಗಿ ಗುರುತಿಸುವುದು ಅನುಕೂಲಕರ ಎನ್ನಿಸಿದರೂ, ಅತಿ ಹೆಚ್ಚಿನ ಅಧ್ಯಯನಗಳು ಈ ಮೂರೂ ರೀತಿಯ ಅಧ್ಯಯನಗಳ ಕೆಲವೊಂದು ಅಂಶಗಳನ್ನು ಒಳಗೊಂಡಿರುತ್ತವೆ.

ಗ್ರಾಮೀಣ ಶ್ರೋತೃವರ್ಗವನ್ನು ಕುರಿತಂತೆ ವ್ಯಕ್ತಿ-ವ್ಯಕ್ತಿಗಳ ನಡುವಣ, ಜಾನಪದ ಮತ್ತು ಸಮೂಹ ಮಾಧ್ಯಮಗಳ ಪ್ರಯೋಜನೀಯತೆಯ ಮೌಲ್ಯಮಾಪನವನ್ನು ನೀವು ಮಾಡಬೇಕಿದೆ ಎಂದಿಟ್ಟುಕೊಳ್ಳೋಣ. ಈ ಬೇರೆ ಬೇರೆ ಮಾಧ್ಯಮಗಳ ಬಳಕೆಯನ್ನು ಕುರಿತು ಕೆಲವೊಂದು ಸಂಶೋಧನಾತ್ಮಕ ಕಾರ್ಯವನ್ನು ಮಾಡುತ್ತೀರಿ; ಈ ಮಾಧ್ಯಮಗಳ ಬಳಕೆಯನ್ನು ಯಾರು ಮಾಡುತ್ತಾರೆ ಎಂಬುದರ ಬಗ್ಗೆ ಸ್ವಲ್ಪ ವಿವರಣೆಯನ್ನು ನೀಡುತ್ತೀರಿ ಮತ್ತು ಕೊನೆಯಲ್ಲಿ ಕೆಲವೊಂದು ಮಾಧ್ಯಮ (ಚಾನೆಲ್)ಗಳು ಒಂದು ನಿರ್ದಿಷ್ಟ ಗುಂಪಿನಲ್ಲಿ ಜನಪ್ರಿಯವಾದರೆ, ಮತ್ತೆ ಕೆಲವು ಮತ್ತೊಂದು ಗುಂಪಿನೊಂದಿಗೆ ಜನಪ್ರಿಯ ಎನ್ನುವುದಕ್ಕೆ ವಿವರಣೆಯನ್ನು ಕಂಡುಕೊಳ್ಳಲು ಮುಂದುವರೆಯುತ್ತೀರಿ. ಹೀಗಾಗಿ, ಯಾವುದೇ ಒಂದು ಅಧ್ಯಯನವು, ಎಲ್ಲಾ ಮೂರೂ ರೀತಿಯ ಅಧ್ಯಯನಗಳ ಧಾತುಗಳನ್ನು ಒಳಗೊಂಡಿರಬಹುದು.

## 2.3 ಸಂಶೋಧನೆಯ ವಿಧಾನಗಳು

ಸಂವಹನ ವಿಜ್ಞಾನವು, ಸಾಮಾಜಿಕ, ವರ್ತನಾ ಮತ್ತು ರಾಜಕೀಯ ವಿಜ್ಞಾನಗಳಿಂದ ತನ್ನ ವಿಧಾನಗಳನ್ನು ಎರವಲು ಪಡೆದಿದೆ. ಈ ವಿಜ್ಞಾನಗಳಿಂದ ಅಭಿವೃದ್ಧಿ ಪಡಿಸಲಾದ ಮತ್ತು ಬಳಸಲ್ಪಟ್ಟ ವಿವಿಧ ವಿಧಾನಗಳು, ಸಂವಹನದ ಸ್ವರೂಪ, ಪ್ರಕ್ರಿಯೆ, ಕಾರ್ಯಗಳು ಮತ್ತು ಪ್ರಭಾವಗಳ ಅಧ್ಯಯನ ಮಾಡಲು ಸಂವಹನ ಸಂಶೋಧಕರಿಂದ ಅಳವಡಿಸಿಕೊಳ್ಳಲ್ಪಟ್ಟಿವೆ. ಸಂವಹನ ಸಂಶೋಧಕರಿಂದ ಸಾಮಾನ್ಯವಾಗಿ ಬಳಸಲ್ಪಡುತ್ತಿರುವ ಕೆಲವೊಂದು ಮುಖ್ಯವಾದ ವಿಧಾನಗಳನ್ನು ಚಿತ್ರಿಸುವ ಪ್ರಯತ್ನವನ್ನು ಮುಂದಿನ ಭಾಗಗಳಲ್ಲಿ ಮಾಡಲಾಗಿದೆ. ಅವುಗಳೆಂದರೆ ಚಾರಿತ್ರಿಕ ವಿಧಾನ, ಪರಿವೀಕ್ಷಣಾ ವಿಧಾನ, ವಿಷಯ ವಿಶ್ಲೇಷಣೆ, ಪ್ರಾಯೋಗಿಕ ವಿಧಾನ, ಸರ್ವೇಕ್ಷಣಾ ವಿಧಾನ, ಪ್ರಕರಣ ಅಧ್ಯಯನ ಮತ್ತು ಇತರ ಗುಣಾತ್ಮಕ ವಿಧಾನಗಳು. ಈ ವಿಧಾನಗಳನ್ನು, ಅವುಗಳ ಕಾರ್ಯರೀತಿಗಳು, ವಿಶೇಷ ಗುಣಲಕ್ಷಣಗಳು, ಗುಣಗಳು ಮತ್ತು ಮಿತಿಗಳನ್ನು ಇಲ್ಲಿ ಸ್ಥೂಲವಾಗಿ ವಿವರಿಸಲಾಗಿದೆ. ಈ ಲಕ್ಷಣಗಳನ್ನು ವಿದ್ಯಾರ್ಥಿಗಳು ಸ್ಪಷ್ಟವಾಗಿ ಗುರುತಿಸಿಕೊಳ್ಳಬೇಕು ಮತ್ತು ಸರಿಯಾದ ಸಮಸ್ಯೆಗೆ ಯುಕ್ತವಾದ ವಿಧಾನ ಬಳಸುವುದನ್ನು ಸಾಧಿಸಿಕೊಳ್ಳಬೇಕು.

## 2.4 ಚಾರಿತ್ರಿಕ ವಿಧಾನ

"ಹಿಂದೊಮ್ಮೆ ಚರಿತ್ರೆಯನ್ನು ವಿಜ್ಞಾನಗಳ ರಾಣಿ ಎಂದು ತಿಳಿಯಲಾಗುತ್ತಿತ್ತಾದರೂ, ಚರಿತ್ರೆಯ ವಿಧಾನವು ವಿಜ್ಞಾನದ ವಿಧಾನಗಳಿಗಿಂತ ತೀರ ಭಿನ್ನವಾದುದು. ವಿಜ್ಞಾನಿಯು ನೇರವಾಗಿ ಪರಿವೀಕ್ಷಣೆ ಮಾಡಿದರೆ, ಚರಿತ್ರೆಕಾರನು ಹಳೆಯ ಸಂಗತಿಗಳ ಮೇಲೆ ಕೇಂದ್ರೀಕರಿಸುತ್ತಾನೆ. ಆದರೆ, ಚರಿತ್ರೆ ಎನ್ನುವುದು ಘಟನೆಗಳ ಕಾಲಕ್ರಮಾನುಗತಿಯ ಪಟ್ಟಿಯಲ್ಲ, ಬದಲಾಗಿ ವ್ಯಕ್ತಿಗಳು, ಸ್ಥಳಗಳು, ಕಾಲಗಳು ಮತ್ತು ಘಟನೆ (ಸಂಗತಿ)ಗಳ ಸಂಬಂಧಗಳ ನಿಷ್ಕೃತವಾದ ಅರ್ಥೈಸುವಿಕೆ".

ಚರಿತ್ರೆಯ ಸಂಶೋಧನೆಗೆ ದತ್ತಾಂಶಗಳ ಪ್ರಾಥಮಿಕ ಆಕರಗಳು ದಸ್ತಾವೇಜುಗಳು ಮತ್ತು ದಾಖಲೆಗಳಿಂದ ದೊರೆಯುತ್ತವೆ. ಸಮೂಹ ಮಾಧ್ಯಮಗಳ ವಸ್ತುವಿಷಯಗಳು ಸ್ವಯಂ ತಾವೇ ಅಂತಹ ಉಪಯುಕ್ತವಾದ ದಾಖಲೆ, ದಸ್ತಾವೇಜುಗಳು. ಸಂಶೋಧಕನು ಇವುಗಳನ್ನು ವಿಶ್ಲೇಷಣೆ ಮತ್ತು ಅರ್ಥೈಸುವಿಕೆಗೆ ಒಳಪಡಿಸುತ್ತಾನೆ. ಈ ರೀತಿಯ ವಿಶ್ಲೇಷಣೆ ಮತ್ತು ಅರ್ಥೈಸುವಿಕೆಗಳನ್ನು ಆಧರಿಸಿ, ಘಟನೆಗಳ ಬಗ್ಗೆ ಆತ ತರ್ಕಬದ್ಧವಾದ ನಿರ್ಣಯಗಳನ್ನು ಎಳೆಯುತ್ತಾನೆ. ಆದರೆ, ಆತನ ಈ ನಿರ್ಣಯಗಳ ಬೆಲೆಯು ಪ್ರಾಥಮಿಕವಾಗಿ ಮೂಲಗಳ ಯಥಾರ್ಥತೆಯ ಮೇಲೆ ಅವಲಂಬಿತವಾಗಿರುತ್ತದೆ.

ಸಂವಹನದಲ್ಲಿ, ಚಾರಿತ್ರಿಕ ವಿಧಾನವು ವಿವಿಧ ವಸ್ತುಗಳು ಮತ್ತು ವಿವಿಧ ಸಂವಹನ ಧಾತುಗಳನ್ನು ಕುರಿತಾಗಿರುತ್ತದೆ. ಅದು ಸಂವಹನದ ಆಕರಗಳನ್ನು ಕುರಿತಾಗಿರಬಹುದು (ಉದಾಹರಣೆಗೆ, ಪತ್ರಕರ್ತರಾಗಿ ಗಾಂಧಿ, ಬಿಬಿಸಿ ಅಥವಾ ನ್ಯೂಯಾರ್ಕ್ ಟೈಮ್ಸ್ ಚರಿತ್ರೆ). ಸಂದೇಶಗಳನ್ನು ಕುರಿತಾಗಿರಬಹುದು (ಉದಾಹರಣೆಗೆ, ಗೊಬೆಲ್ಸ್‌ನ ಪ್ರಚಾರ ತಂತ್ರಗಳು) ಅಥವಾ ಕಾರ್ಯಗಳು ಮತ್ತು ಪರಿಣಾಮಗಳನ್ನು ಕುರಿತಾಗಿರಬಹುದು (ಉದಾಹರಣೆಗೆ, ಸ್ವಾತಂತ್ರ್ಯ ಸಂಗ್ರಾಮದಲ್ಲಿ ರಾಷ್ಟ್ರೀಯ ಪತ್ರಿಕೆಗಳ ಪಾತ್ರ, ಅಧ್ಯಕ್ಷೀಯ ಚುನಾವಣೆಯ ಮೇಲೆ ಅಮೆರಿಕಾದ ಟೆಲಿವಿಷನ್ ಪ್ರಭಾವ).

## 2.5 ಪರಿವೀಕ್ಷಣಾ ವಿಧಾನ (ಅವಲೋಕನ ವಿಧಾನ)

ಪರಿವೀಕ್ಷಣೆಯು ಬಹುಶಃ ವೈಜ್ಞಾನಿಕ ವಿಚಾರಣೆಯ ಅತಿ ಹಳೆಯ ವಿಧಾನ. ಇದನ್ನು ನೈಸರ್ಗಿಕ ಮತ್ತು ಸಾಮಾಜಿಕ ವಿಜ್ಞಾನಗಳೆರಡಲ್ಲೂ ಬಳಸಿಕೊಳ್ಳಲಾಗಿದೆ. ಘಟನೆಗಳು / ಸಂಗತಿಗಳು ಜರುಗುತ್ತಿರುವುದನ್ನು ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ನೋಡುತ್ತಾ, ವೈಜ್ಞಾನಿಕ ಸಲಕರಣೆಗಳ ಸಹಾಯವಿದ್ದೋ, ಇಲ್ಲದೆಯೋ, ನಿರ್ದಿಷ್ಟವಾದ ಸ್ಥಿತಿಗಳಲ್ಲಿ, ಅದೇ ಕಾಲಕ್ಕೆ ಪರಿವೀಕ್ಷಣೆ ಮಾಡುತ್ತಿರುವುದನ್ನು ಯಥಾವತ್ತಾಗಿ ವರದಿ ಮಾಡಿಕೊಳ್ಳುತ್ತಾ ಹೋಗುವುದನ್ನು ಈ ವಿಧಾನ ಒಳಗೊಂಡಿದೆ. ನಮ್ಮ ದಿನನಿತ್ಯದ ಜೀವನದಲ್ಲಿ ಸಾಮಾನ್ಯವಾಗಿ ನಾವೆಲ್ಲರೂ ಬೀರುವ 'ನೋಟ'ಕ್ಕಿಂತ ವೈಜ್ಞಾನಿಕ ಪರಿವೀಕ್ಷಣೆಯು ಭಿನ್ನವಾದುದು. ಮೊದಲನೆಯದಾಗಿ, ವೈಜ್ಞಾನಿಕ ಪರಿವೀಕ್ಷಣೆಯು ಉದ್ದೇಶಪೂರಿತವಾದುದು. ಶೋಧನೆ ನಡೆಸುತ್ತಿರುವ ಸಂಶೋಧನಾ ಸಮಸ್ಯೆಗಳ ಸ್ವರೂಪವನ್ನು ಅನ್ವೇಷಿಸಲು ಮತ್ತು ವಿವರಿಸಲು ದತ್ತಾಂಶಗಳನ್ನು ಕಲೆಹಾಕುವುದು ಇದರ ಉದ್ದೇಶ. ಎರಡನೆಯದಾಗಿ, ಇದು ಯೋಜಿತವಾದುದು ಹಾಗು ಕ್ರಮಬದ್ಧವಾದುದು. ನಿಜವಾದ ಪರಿವೀಕ್ಷಣೆಯನ್ನು ನಡೆಸುವುದಕ್ಕೆ ಪೂರ್ವಭಾವಿಯಾಗಿ ಸಂಶೋಧಕನು ಪರಿವೀಕ್ಷಣೆಯ ಸ್ಥಳಗಳ (ಎಲ್ಲಿ) ಬಗ್ಗೆ, ವರ್ತನೆಯ ರೀತಿ (ಯಾವ)ಗಳ ಬಗ್ಗೆ ಮತ್ತು ವಿಧಾನ (ಹೇಗೆ)ಗಳ ಬಗ್ಗೆ ನಿರ್ಣಯಗಳನ್ನು ತೆಗೆದುಕೊಳ್ಳುತ್ತಾನೆ. ಬೇರೆ ಮಾತುಗಳಲ್ಲಿ ಹೇಳುವುದಾದರೆ, ಪರಿವೀಕ್ಷಣೆಗೆ ಎನ್ನುವುದು ಒಂದು ಪ್ರಜ್ಞಾಕಾರ್ಯ, ವಿಷಯವೊಂದರ ಬಗ್ಗೆ ಬೇಕಾದ ದತ್ತಾಂಶಗಳನ್ನು ಸಂಗ್ರಹಿಸಲು ಬೇಕೆಂದೇ ವಿನ್ಯಾಸಗೊಳಿಸಲಾಗಿರುವಂತಹ ಕ್ರಿಯೆ.

ವೈಜ್ಞಾನಿಕ ಪರಿವೀಕ್ಷಣೆಯ ಹೆಗ್ಗುರುತು ಎಂದರೆ ವಸ್ತುನಿಷ್ಠತೆ. ವೈಯಕ್ತಿಕ ವೈಲಕ್ಷಣ್ಯಗಳು, 'ವ್ಯಕ್ತಿಗತವಾದ ಪಕ್ಷಪಾತಿಯಾದ ಧೋರಣೆಗಳು ಅಥವಾ ಸಂಶೋಧಕನ ಯಾವುದೇ ವೈಯಕ್ತಿಕ ಅಂಶಗಳು ಇಲ್ಲಿ ಸ್ಥಾನ ಗಿಟ್ಟಿಸಬಾರದು. ಸಂಶೋಧಕರು ಬಹಳಷ್ಟು ಬಾರಿ ಪಕ್ಷಪಾತಗಳನ್ನು ಕಡಿಮೆ ಮಾಡಿಕೊಂಡು, ತಮ್ಮ ಪರಿವೀಕ್ಷಣೆಯನ್ನು ನಿಷ್ಪಕ್ಷವಾಗಿ, ವಿಶ್ವಾಸಾರ್ಹವಾಗಿ, ಸಮ್ಮತವಾಗಿ ಮಾಡಿಕೊಳ್ಳಲು ಮುನ್ನೆಚ್ಚರಿಗೆ ವಹಿಸಿ ಹಲವಾರು ಕ್ರಮಗಳನ್ನು ಕೈಗೊಳ್ಳುತ್ತಾರೆ. ಬಹಳಷ್ಟು ಬಾರಿ, ತೊಂದರೆಯಾದ ರೀತಿಯಲ್ಲಿ ವೀಕ್ಷಿಸಲ್ಪಡುತ್ತಿರುವ ಜನರ ನಡುವಳಿಕೆಯ ಮೇಲೆ ಪ್ರಭಾವಬೀರದಂತೆ, ಒಂದು ಕಡೆಯಿಂದ ಮಾತ್ರ ನೋಡಬಹುದಾದ ಪರದೆಯ ಹಿಂದಿನಿಂದ ಪರಿವೀಕ್ಷಣೆ ನಡೆಸಲಾಗುತ್ತದೆ.

ತಾಂತ್ರಿಕ ಸಲಕರಣೆ, ಕ್ಯಾಮೆರಾ, ಧ್ವನಿಮುದ್ರಕ(ಟೇಪ್ ರೆಕಾರ್ಡರ್)ಗಳನ್ನು ಬಳಸಿಕೊಂಡು, ಅನುಭವಿಗಳೂ, ತರಬೇತಿ ಪಡೆದ ಪರಿವೀಕ್ಷಕರನ್ನೂ ಯೋಜಿಸಿಕೊಳ್ಳುವುದರಿಂದ, ಹಾಗೆಯೇ ಒಬ್ಬರಿಗಿಂತ ಹೆಚ್ಚು ಜನ ಪರಿವೀಕ್ಷಕರನ್ನು ಬಳಸಿಕೊಳ್ಳುವುದರಿಂದ ಪರಿವೀಕ್ಷಣೆಯಲ್ಲಿನ ದೋಷಗಳನ್ನು ಕಡಿಮೆ ಮಾಡಬಹುದು. ಕೆಲವು ಲೇಖಕರು ನಿರ್ದಿಷ್ಟವಾದ ಒಂದು ಸಂಗತಿ ಅಥವಾ ಘಟನೆಯನ್ನು ಪರಿವೀಕ್ಷಿಸಲು ಮತ್ತು ದಾಖಲಿಸಲು, ಪರೀಕ್ಷಾಪಟ್ಟಿಗಳ ಬಳಕೆಯನ್ನು ಶಿಫಾರಸ್ಸು ಮಾಡಿದ್ದಾರೆ. ಉದಾಹರಣೆಗೆ, ಜಹೋದಾ ಮತ್ತಿತರು, ಪರಿವೀಕ್ಷಣೆಯಲ್ಲಿ ಭಾಗವಹಿಸುತ್ತಿರುವವ ದಾಖಲೆಗಳು (ವಯಸ್ಸು, ಲಿಂಗ, ಉದ್ಯೋಗ, ಆದಾಯ ಇತ್ಯಾದಿ), ಪರಿಸರ (ಸಂಗತಿಯು ನಡೆಯುತ್ತಿರುವ ಸ್ಥಳ), ವರ್ತನೆಯ ರೀತಿಗಳು (ಅಂತಸ್ಸಂವಹನಗಳು, ಭೌತಿಕ ಅಥವಾ ಶಾಬ್ದಿಕ ಕ್ರಿಯೆಗಳು), ಸಂಗತಿಗಳ ಆವರ್ತನ ಕಾಲ ಮತ್ತು ಅವಧಿ ಇವುಗಳೆಲ್ಲದರ ರೂಪದಲ್ಲಿ ವಿಸ್ತೃತವಾದ ವಿವರಣೆಯನ್ನು ಗುರುತಿಸಿಕೊಳ್ಳಬೇಕು ಎಂದು ಸೂಚಿಸಿದ್ದಾರೆ.

## 2.6 ವಿಷಯ ವಿಶ್ಲೇಷಣೆ

ಸಂವಹನ ಸಂಶೋಧನೆಯ ಅಚ್ಚುಮೆಚ್ಚಿನ ತಂತ್ರವೆಂದರೆ ವಿಷಯ ವಿಶ್ಲೇಷಣಾ ವಿಧಾನ. ಇತರ ಸಮಾಜ ವಿಜ್ಞಾನಗಳಲ್ಲಿಯೂ ಸಹ ಇದು ಜನಪ್ರಿಯವೇ. ಸಮೂಹ ಮಾಧ್ಯಮ ಉತ್ಪನ್ನಗಳಾದ ವೃತ್ತಪತ್ರಿಕೆಗಳು, ನಿಯತಕಾಲಿಕಗಳು, ಚಲನಚಿತ್ರಗಳು, ರೇಡಿಯೋ ಮತ್ತು ಟೆಲಿವಿಷನ್ ಕಾರ್ಯಕ್ರಮಗಳು ಮುಂತಾದವುಗಳಲ್ಲಿ, ಅಡಕವಾದ ವಸ್ತುವಿಷಯಗಳ ವರ್ಣನೆ ಮತ್ತು ವರ್ಗೀಕರಣಕ್ಕೆ ಈ ವಿಧಾನವು ಸೂಕ್ತವಾಗಿದೆ. ಸಂವಹನ ಸಂಶೋಧನೆಯ ಕ್ಷೇತ್ರದಲ್ಲಿ ಈ ವಿಧಾನವನ್ನು ಹಲವಾರು ರೀತಿಯಲ್ಲಿ ಬಳಸಿಕೊಳ್ಳಲಾಗುತ್ತದೆ. ಮೂಲಗಳ ಮತ್ತು ಸಂದೇಶಗಳ ಸ್ವರೂಪವನ್ನೂ, ಅಂತಹ ಸಂದೇಶಗಳ ಮೂಲ ಕಾರಣಗಳನ್ನೂ, ಪೂರ್ವಚರಿತ್ರೆಗಳನ್ನೂ ಮತ್ತು ವಿಶೇಷವಾಗಿ ಸಂವಹನ ಸಂದೇಶಗಳ ಪರಿಣಾಮಗಳನ್ನು ಅಧ್ಯಯನ ಮಾಡಲು ಈ ವಿಧಾನವನ್ನು ಬಳಸಿಕೊಳ್ಳಲಾಗುತ್ತದೆ. ಸಂವಹನದ ಗುಣಸ್ವರೂಪವನ್ನು ಮಾಪನ ಮಾಡುವ ಉದ್ದೇಶದಿಂದ, ದಾಖಲಾದ ದಸ್ತಾವೇಜನ್ನು ವಸ್ತುನಿಷ್ಠವಾಗಿ, ಕ್ರಮಬದ್ಧವಾಗಿ, ಪರಿಮಾಣಾತ್ಮಕವಾದ ರೀತಿಯಲ್ಲಿ ಅಧ್ಯಯನ ಮಾಡುವ ಮತ್ತು ವಿಶ್ಲೇಷಣೆ ಮಾಡುವ ವಿಧಾನ ಇದು ಎಂದು ಬಹಳಷ್ಟು ಪಂಡಿತರು ಅಭಿಪ್ರಾಯಪಡುತ್ತಾರೆ.

ವಿಮ್ಮರ್ ಮತ್ತು ಡಾಮಿನಿಕ್ (1991) ಅವರು ವಿಷಯ ವಿಶ್ಲೇಷಣೆಯ ವಿಧಾನದಲ್ಲಿ ಕೆಳಗೆ ತೋರಿಸಿರುವ ಹಂತಗಳನ್ನು ಗುರುತಿಸಿದ್ದಾರೆ:

1. ಸಂಶೋಧನಾ ಪ್ರಶ್ನೆ ಅಥವಾ ಪೂರ್ವಕಲ್ಪನೆಯನ್ನು (ಪ್ರಾಕ್ ಕಲ್ಪನೆ) ರೂಪುಗೊಳಿಸುವುದು.
2. ಗಣನೆಗೆ ತೆಗೆದುಕೊಳ್ಳಬೇಕಾದ ಜನಸಮೂಹವನ್ನು ನಿರ್ದಿಷ್ಟಪಡಿಸಿಕೊಳ್ಳುವುದು.
3. ಗುರುತಿಸಿದ ಜನಸಮೂಹದಿಂದ ಸೂಕ್ತವಾದ ನಮೂನೆಗಳನ್ನು ಆಯ್ಕೆ ಮಾಡಿಕೊಳ್ಳುವುದು.
4. ವಿಶ್ಲೇಷಣೆಯ ಘಟಕವೊಂದನ್ನು ಆಯ್ಕೆ ಮಾಡಿಕೊಳ್ಳುವುದು ಮತ್ತು ಅದರ ಪರಿಭಾಷೆಯ ನಿರ್ಧಾರಣೆ.
5. ವಿಷಯ ವಿಶ್ಲೇಷಣೆ ಮಾಡಬೇಕಾದ ವರ್ಗಗಳ ರಚನೆ.
6. ಪರಿಮಾಣ ಮಾಪನ ಮಾಡುವ ವ್ಯವಸ್ಥೆಯ ಸ್ಥಾಪನೆ ಮಾಡಿಕೊಳ್ಳುವುದು.
7. ಪ್ರಾಯೋಗಿಕ ಅಧ್ಯಯನ ನಡೆಸಲು ಸಂಕೇತ ಕರ್ತೃಗಳಿಗೆ ತರಬೇತಿ.
8. ಸಿದ್ಧವಾದ ಪರಿಭಾಷೆಗಳಿಗೆ ಅನ್ವಯವಾಗಿ ವಿಷಯಗಳ ಸಾಂಕೇತೀಕರಣ.
9. ಸಂಗ್ರಹಿಸಲಾದ ದತ್ತಾಂಶಗಳ ವಿಶ್ಲೇಷಣೆ.
10. ತೀರ್ಮಾನಗಳನ್ನು ತೆಗೆದುಕೊಳ್ಳುವುದು ಮತ್ತು ಸೂಚಿಗಳಿಗಾಗಿ ಪರಿಶೋಧನೆ

ಇಲ್ಲಿ ಗುರುತಿಸಲಾಗಿರುವ ಸಂಶೋಧನಾ ಸಮಸ್ಯೆಯನ್ನು ರೂಪಗೊಳಿಸುವುದು, ಜನಸಮೂಹವನ್ನು ನಿರ್ದಿಷ್ಟಪಡಿಸಿಕೊಳ್ಳುವುದು, ನಮೂನೆಗಳ ಆಯ್ಕೆ, ದತ್ತಾಂಶಗಳ ವಿಶ್ಲೇಷಣೆ ಮತ್ತು ತೀರ್ಮಾನಗಳನ್ನು ತೆಗೆದುಕೊಳ್ಳುವುದು. ಈ ಹಂತಗಳು ಇತರ ವಿಧಾನಗಳಾದ ಸರ್ವೇಕ್ಷಣಾ ಸಂಶೋಧನೆ ಇತ್ಯಾದಿಗಳಿಗೂ ಸಾದೃಶ್ಯವಾದವುಗಳೇ ಆಗಿವೆ. ಆದರೆ, ವಿಷಯ ವಿಶ್ಲೇಷಣೆಯಲ್ಲಿ ಬಹಳ ಮುಖ್ಯವಾದ ಹಾಗು ವಿಭಿನ್ನವಾದ ಹಂತಗಳೆಂದರೆ ವಿಶ್ಲೇಷಣೆಯ ಘಟಕದ ಆಯ್ಕೆ ಮತ್ತು ಅದರ ಪರಿಭಾಷೆಯ ನಿರ್ಧಾರಣ, ವಿಷಯ ವಿಶ್ಲೇಷಣೆಯ ವರ್ಗಗಳ ರಚನೆ ಮತ್ತು ವಿಶ್ಲೇಷಣೆಯ ರೂಪುರೇಷೆಗಳನ್ನು ಆಧರಿಸಿ ವಸ್ತುವನ್ನು ಸಾಂಕೇತಿಕೀಕರಣಗೊಳಿಸುವುದಾಗಿದೆ. ವಿಶ್ಲೇಷಣೆಯ ಘಟಕಗಳು ಪದ ಅಥವಾ ಚಿಹ್ನೆ, ಒಂದು ವಾಕ್ಯ, ಒಂದು ಸೂತ್ರ, ಒಂದು ಅಕ್ಷರ ಅಥವಾ ಪಾತ್ರ, ಇಲ್ಲವೇ ಸಂಪೂರ್ಣವಾದ ವಸ್ತು ಅಥವಾ ಸಂಗತಿಯಾಗಿರಬಹುದು. ವಿಷಯ ವಿಶ್ಲೇಷಣೆಯ ತಿರುಳು ಇರುವುದು ಮಾಧ್ಯಮ ವಿಷಯಗಳನ್ನು ವಿಂಗಡನೆ ಮಾಡುವ ಉದ್ದೇಶಕ್ಕೆ ಬೇಕಾದಂತಹ ವರ್ಗೀಕರಣದ ವ್ಯವಸ್ಥೆಯನ್ನು ರೂಪಿಸಿಕೊಳ್ಳುವುದರಲ್ಲಿ ಸುದ್ದಿಯನ್ನು ಬೇರೆ ಬೇರೆ ರೀತಿಯಾಗಿ, ಅಂದರೆ ಸ್ಥಳದ ಆಧಾರದ ಮೇಲೆ (ಅಂತರರಾಷ್ಟ್ರೀಯ, ರಾಷ್ಟ್ರೀಯ, ರಾಜ್ಯ, ಸ್ಥಾನಿಕ) ಅಥವಾ ವಿಷಯದ ಆಧಾರದ ಮೇಲೆ (ರಾಜಕೀಯ, ಕ್ರೀಡೆ, ಅಪರಾಧ, ಆರ್ಥಿಕ ಇತ್ಯಾದಿ) ಅಥವಾ ಇತರ ಆಯಾಮಗಳ ಆಧಾರದ ಮೇಲೆ ಸಂಶೋಧಕ ವಿಶ್ಲೇಷಿಸಬಹುದು. ಈ ಎಲ್ಲ ವರ್ಗೀಕೃತ ವ್ಯವಸ್ಥೆಗಳ ಮೂಲಭೂತ ಅವಶ್ಯಕತೆಯೆಂದರೆ ಅವು ಪರಸ್ಪರ ವ್ಯಾವರ್ತಕವಾಗಿರಬೇಕು, ಪರಿಪೂರ್ಣವಾಗಿರಬೇಕು ಮತ್ತು ನಂಬಲರ್ಹವಾಗಿರಬೇಕು. ಈ ವರ್ಗಗಳ ಪರಿಮಾಣವು ವರ್ಗವನ್ನು ಬಿಂಬಿಸುತ್ತಿರುವ ಗುಣಗಳಾದ ಉಪಸ್ಥಿತಿ ಅಥವಾ ಅನುಪಸ್ಥಿತಿ, ಕಂಡುಬರುವ ಆವರ್ತನೀಯತೆ ಮತ್ತು ಮೊತ್ತ, ಶಕ್ತಿ, ಗಾಢತೆ (ತೀಕ್ಷ್ಣತೆ) ಮುಂತಾದವುಗಳ ಆಧಾರದ ಮೇಲೆ ಇರಬಹುದು.

## 2.7 ಪ್ರಯೋಗಾತ್ಮಕ ವಿಧಾನ

ಎಲ್ಲಾ ವಿಜ್ಞಾನಗಳಲ್ಲಿಯೂ ಪ್ರಯೋಗಾತ್ಮಕತೆಯೇ ಬಹಳಷ್ಟು ಅಚ್ಚುಮೆಚ್ಚಿನ ವಿಧಾನ. ಅತಿ ಉತ್ಕೃಷ್ಟವಾದ ವೈಜ್ಞಾನಿಕ ವಿಧಾನವೆಂದು ಇದನ್ನು ಪರಿಗಣಿಸಲಾಗುತ್ತದೆ. ಸ್ವಯಂ ತಿದ್ದುಪಡಿ ಮತ್ತು ವಸ್ತುನಿಷ್ಠತೆಯನ್ನು ಸಾಧ್ಯವಾಗಿಸುವಂತಹ ಕಾರ್ಯರೀತಿಗಳನ್ನು ಈ ವಿಧಾನವು ಯೋಚಿಸಿಕೊಳ್ಳುತ್ತವೆ. ಈ ವಿಧಾನದ ಶಕ್ತಿ ಇರುವುದು, ಪರ್ಯಾಯವಾದ ವಿವರಣೆಗಳನ್ನು ತಳ್ಳಿಹಾಕಲು ಸಾಧ್ಯವಾಗುವಂತೆ ಮಾಡುವ, ಅದು ಬಳಸುವ ಪ್ರಯೋಗದ ನಿಯಂತ್ರಣದಲ್ಲಿ.

ಒಂದು ಪೂರ್ವಕಲ್ಪನೆಯನ್ನು ಪರೀಕ್ಷಿಸಲು ಪ್ರಯೋಗಗಳನ್ನು ವಿನ್ಯಾಸಗೊಳಿಸಲಾಗುತ್ತದೆ. ಸಾಮಾನ್ಯವಾಗಿ ಹೇಳುವುದಾದರೆ, ಪೂರ್ವಸಿದ್ಧಾಂತವನ್ನು ಒಂದು ಕಲ್ಪನೆ, ಊಹೆ ಅಥವಾ ಬುದ್ಧಿವಂತಿಕೆಯ ಅಂದಾಜು ಎಂದು ಪರಿಗಣಿಸಬಹುದು. ಹೆಚ್ಚು ಔಪಚಾರಿಕವಾಗಿ ಗುರುತಿಸುವುದಾದರೆ, ಪೂರ್ವಕಲ್ಪನೆ(ಪ್ರಾಕ್ ಕಲ್ಪನೆ - Hypothesis)ಗಳನ್ನು ಎರಡು ಅಥವಾ ಹೆಚ್ಚು ಚರಾಂಶಗಳ ನಡುವಿನ ಸಂಬಂಧ ಕುರಿತಾದ ಸಾಧ್ಯತೆಯ ಪ್ರಸ್ತಾಪ ಎಂಬುದಾಗಿ ತಿಳಿಯಬಹುದು. ಆದರೆ ಈ ಚರಾಂಶಗಳು ಯಾವುವು ಬೇರೆ ಬೇರೆ ಮೌಲ್ಯಾಂಕಗಳನ್ನು ತೆಗೆದುಕೊಳ್ಳುವ ವಸ್ತು ವಿಷಯಗಳನ್ನು ಚರಾಂಶಗಳೆಂದು ಕರೆಯಲಾಗುತ್ತದೆ. 'ಲಿಂಗ' ಎನ್ನುವುದು ಒಂದು ಚರಾಂಕ (Variable), ಬುದ್ಧಿವಂತಿಕೆ ಎನ್ನುವುದು ಇನ್ನೊಂದು. ಒಂದು ಅವಧಿಯಲ್ಲಿ ವ್ಯಕ್ತಿಯೊಬ್ಬ ನೋಡುವ ಚಲನಚಿತ್ರಗಳ ಸಂಖ್ಯೆ, ವೃತ್ತಪತ್ರಿಕೆಗಳನ್ನು ಓದಲು ವ್ಯಯ ಮಾಡುವ ಕಾಲ, ಭಾಷಣವೊಂದನ್ನು ಕೇಳಿದ ನಂತರ ವ್ಯಕ್ತಿಯೊಬ್ಬ ತನ್ನ ಅಭಿಪ್ರಾಯವನ್ನು ಬದಲಾಯಿಸಿಕೊಳ್ಳುವ ಮಟ್ಟ ಇತ್ಯಾದಿಗಳೆಲ್ಲವೂ ಚರಾಂಶಗಳಿಗೆ ಉದಾಹರಣೆಗಳು. ಸಾಮಾನ್ಯವಾಗಿ, ಪೂರ್ವಕಲ್ಪನೆಯೊಂದು ಎರಡು ಅಥವಾ ಹೆಚ್ಚಿನ ಚರಾಂಶಗಳ ಜೋಡಣೆ ಮಾಡುತ್ತದೆ ಮತ್ತು ಆ ಚರಾಕ್ಷರಗಳ ನಡುವಣ ಸಂಬಂಧದ ಬಗ್ಗೆ ಪ್ರತಿಪಾದನೆ ಮಾಡುತ್ತದೆ.

ಬುದ್ಧಿವಂತ ಮಕ್ಕಳು ಕಡಿಮೆ ಪ್ರಮಾಣದಲ್ಲಿ ಟೆಲಿವಿಷನ್ ವೀಕ್ಷಿಸುತ್ತಾರೆ ಎನ್ನುವ ಪೂರ್ವಕಲ್ಪನೆಯಲ್ಲಿ ಬುದ್ಧಿವಂತಿಕೆಯ ಮಟ್ಟಕ್ಕೂ ಮತ್ತು ಟಿವಿ ವೀಕ್ಷಣೆಯ ಅವಧಿಗೂ ನಡುವೆ ಸಂಬಂಧ ಕಲ್ಪನೆ ಮಾಡಲಾಗಿದೆ. ವಿಶ್ವಾಸಾರ್ಹವಾದ ಸಂವಹನದ ಆಕರಗಳು ತಮ್ಮ ಶ್ರೋತೃವರ್ಗದ ಮೇಲೆ ಪ್ರಭಾವ ಬೀರುವಲ್ಲಿ ಹೆಚ್ಚು ಸಕ್ಷಮವಾದವು ಎಂಬ ಮತ್ತೊಂದು ಪೂರ್ವಕಲ್ಪನೆಯು, ಮೂಲದ ವಿಶ್ವಾಸಾರ್ಹತೆ ಮತ್ತು ಸಂದೇಶಗಳನ್ನು ಪಡೆಯುವವರ ಮನದಲ್ಲಿ ಸಂದೇಶವು ಮೂಡಿಸುವ ಮನಃಪರಿವರ್ತನೆಗಳನ್ನು ಜೋಡಿಸುವ ಪ್ರಯತ್ನ ಮಾಡುತ್ತದೆ.

ಪ್ರಯೋಗದ ಆದೇಶ ಸೂತ್ರವೆಂದರೆ, ಶೋಧನೆಗೆ ಒಳಪಟ್ಟಿರುವ ಚರಾಂಶವನ್ನು ಬದಲಾಯಿಸಿ, ಆಸಕ್ತಿಯ ಅಂಗವಾಗಿ ಮತ್ತೊಂದು ಚರಾಂಕದ ಮೇಲೆ ಈ ಬದಲಾವಣೆಯ ಪ್ರಭಾವಗಳನ್ನು ಪರಿವೀಕ್ಷಿಸುವುದು. ಹೀಗೆ ಮಾಡುವಾಗ ಬೇರೆಲ್ಲಾ ಚರಾಂಶಗಳನ್ನು ನಿಯಂತ್ರಿಸಿ ಅವುಗಳನ್ನು ಸ್ಥಿರವಾಗಿಟ್ಟುಕೊಳ್ಳುವುದು. ಬದಲಾವಣೆಯನ್ನು ಉಂಟುಮಾಡುವಂತಹ ಚರಾಂಶ ಸ್ವತಂತ್ರ ಚಲಕ ಮತ್ತು ಈ ಬದಲಾವಣೆಯ ಪರಿಣಾಮ ತೋರುವ ಚರಾಂಶ ಅವಲಂಬಿತ ಚರಾಂಶ. ತಾನು ವ್ಯತ್ಯಾಸ ಮಾಡುತ್ತಿರುವ ಚರಾಂಶವೊಂದನ್ನು ಬಿಟ್ಟು, ಉಳಿದಂತೆ ಪ್ರಭಾವ ಬೀರಬಹುದಾದಂಥ ಎಲ್ಲಾ ಮೂಲಗಳನ್ನೂ ಹತೋಟಿಯಲ್ಲಿಟ್ಟುಕೊಳ್ಳುವ ಮೂಲಕ ಮಿಕ್ಕ ಎಲ್ಲ ಚರಾಂಶಗಳನ್ನು ಸಂಶೋಧಕ ಸ್ಥಿರವಾಗಿಟ್ಟುಕೊಳ್ಳುತ್ತಾನೆ. ಅವಲಂಬಿತ ಚರಾಂಶದಲ್ಲಿ ಕಂಡುಬರುವ ವ್ಯತ್ಯಾಸಗಳನ್ನು ಪ್ರಯೋಗದ ಬದಲಾವಣೆಗಳಿಗೆ ಆರೋಪಿಸುವುದನ್ನು ಈ ಕಾರ್ಯರೀತಿಯು ಸಾಧ್ಯವಾಗಿಸುತ್ತದೆ. ಹಾಗು, ಒಂದಲ್ಲ ಒಂದು ರೀತಿಯಿಂದ ಬೇರೆ ಎಲ್ಲವುಗಳನ್ನು ನಿಯಂತ್ರಿಸಿಬಿಟ್ಟಿರುವ ಕಾರಣದಿಂದ ಉಳಿದ ಚರಾಂಶಗಳ ಪ್ರಭಾವವನ್ನು ಪರಿಗಣನೆ ಮಾಡಬೇಕಾಗುವುದಿಲ್ಲ. ಚರಾಂಶಗಳ ನಡುವಿನ ಕಾರ್ಯಕಾರಣ ಸಂಬಂಧದ ಬಗ್ಗೆಯೂ ಹೇಳಿಕೆ ನೀಡುವುದನ್ನು ಸಾಧ್ಯಮಾಡುವುದು ಪ್ರಾಯೋಗಿಕ ವಿಧಾನದ ವಿಶೇಷತೆ.

ಪ್ರಯೋಗವೊಂದನ್ನು ನಡೆಸುವಲ್ಲಿ ಅಳವಡಿತವಾಗಿರುವ ಹಂತಗಳನ್ನು ಕೆಳಗೆ ಪಟ್ಟಿ ಮಾಡಲಾಗಿದೆ.

i) ಒಂದು ಗುಂಪಿನ ಮಂದಿಗೆ (ಪ್ರಾಯೋಗಿಕ ಗುಂಪು ಎಂದು ಕರೆಯಲಾಗುವ ಸಮೂಹ) ಸ್ವತಂತ್ರ ಚಲಕವನ್ನು (Independent Variable) ಹಚ್ಚಿ, ಬೇರೆ ಬೇರೆ ಪ್ರಮಾಣದಲ್ಲಿ ಸ್ವತಂತ್ರ ಚಲಕದ ಗುಣಧರ್ಮಗಳನ್ನು ಹೊಂದಿರುವ, ಒಂದಕ್ಕಿಂತ ಹೆಚ್ಚು ಸಂಖ್ಯೆಯ ಪ್ರಾಯೋಗಿಕ ಗುಂಪುಗಳು ಇರುವುದೂ ಸಾಧ್ಯ. (ಉದಾಹರಣೆಗೆ, ಬೇರೆ ಬೇರೆ ಪ್ರಮಾಣದಲ್ಲಿ ನೀಡಲಾದ ಔಷಧಿಗಳು, ಬೇರೆ ಬೇರೆ ಮಟ್ಟದಲ್ಲಿ ನಿರ್ವಹಿಸಲಾದ ಮೂಲದ ವಿಶ್ವಾಸಾರ್ಹತೆ ಇತ್ಯಾದಿ).

ii) ಇನ್ನೊಂದು ಗುಂಪಿಗೆ (ನಿಯಂತ್ರಿತ ಸಮೂಹಕ್ಕೆ) ಸ್ವತಂತ್ರ ಚಲಕವನ್ನು ಹಚ್ಚದೆ ತಡೆಯಿರಿ.

iii) ಅವಲಂಬಿತ ಚರಾಂಶದ ಮೇಲೆ ಸ್ವತಂತ್ರ ಚಲಕದ ಬದಲಾವಣೆಯ ಪ್ರಭಾವವನ್ನು ಪರಿಶೀಲಿಸಿ ಎರಡೂ ಗುಂಪಿನ ಅವಲಂಬಿತ ಚರಾಂಶದ ಮಾಪನಗಳಲ್ಲಿರುವ ವ್ಯತ್ಯಾಸಗಳನ್ನು ಗುರುತು ಹಾಕಿಕೊಳ್ಳಿ.

ಉದಾಹರಣೆಗಳ ಮೂಲಕ ಪ್ರಾಯೋಗಿಕ ವಿಧಾನದ ಕಾರ್ಯರೀತಿಗಳನ್ನು ಅರ್ಥಮಾಡಿಕೊಳ್ಳೋಣ.

## 2.7.1 ಮೆನೆಫೀಸ್ ಪ್ರಯೋಗ

ಅಮೆರಿಕೆಯ ಸಮಾಜ ವಿಜ್ಞಾನಿಗಳಾದ ಶೆಲ್ಟನ್ ಮತ್ತು ಆಡ್ರೆ ಮೆನೆಫೀಸ್, ಕುತೂಹಲಕರವಾದ ಒಂದು ಸಾಮಾಜಿಕ ಪ್ರಯೋಗದ ಮೂಲಕ, 'ಮಾಹಿತಿಯ ಪ್ರಸರಣದಲ್ಲಿ ಸ್ಥಾನಿಕ ಪತ್ರಿಕೆಗಳ ಪಾತ್ರ'ವನ್ನು ನಿರೂಪಿಸಿದರು. ಅವರು ಕರ್ನಾಟಕ ರಾಜ್ಯದ ನಾಲ್ಕು ಗ್ರಾಮಗಳನ್ನು ಆಯ್ಕೆ ಮಾಡಿಕೊಂಡು , ಮೈಮಿಯೋಗ್ರಾಫ್ (ಪಡಿಯಚ್ಚು) ಮಾಡಲಾದ ಕನ್ನಡ ಪತ್ರಿಕೆ 'ಗ್ರಾಮವಾರ್ತೆ'ಯನ್ನು ಈ ನಾಲ್ಕು ಗ್ರಾಮಗಳಲ್ಲಿ ಮೂರಕ್ಕೆ ವಿತರಿಸಿದರು.

ಇದನ್ನು ನಾಲ್ಕನೆಯ ಹಳ್ಳಿಗೆ ವಿತರಿಸಲಿಲ್ಲ. ಪ್ರಯೋಗ ವಿಧಾನದ ಪರಿಭಾಷೆಯಲ್ಲಿ, ಗ್ರಾಮವಾರ್ತೆಯನ್ನು ಪಡೆಯುತ್ತಿರುವ ಮೂರು ಹಳ್ಳಿಗಳು 'ಪ್ರಾಯೋಗಿಕ ಗ್ರಾಮಗಳು' ಮತ್ತು ಅದನ್ನು ಪಡೆಯದೇ ಇದ್ದ ನಾಲ್ಕನೆಯ ಹಳ್ಳಿ 'ನಿಯಂತ್ರಿತ ಗ್ರಾಮ'. ಕ್ಷೇತ್ರಾಭಿವೃದ್ಧಿ ಕಛೇರಿಯಲ್ಲಿ ಅಚ್ಚು ಮಾಡಲಾಗುತ್ತಿದ್ದ ಗ್ರಾಮವಾರ್ತೆಯಲ್ಲಿ ಮುಖ್ಯವಾದ ಸ್ಥಾನೀಯ ಸುದ್ದಿಗಳ ಬಗೆಗಿನ ವರದಿಗಳ ಮತ್ತು ವಿಶ್ವ, ರಾಷ್ಟ್ರದ ಮತ್ತು ರಾಜ್ಯದ ಒಂದು ಸಾಲಿನ ಸಂಕ್ಷಿಪ್ತ ವರದಿಗಳೂ ಇರುತ್ತಿದ್ದವು. ಗ್ರಾಮವಾರ್ತೆಯ 13 ಸಂಚಿಕೆಗಳನ್ನು ಈ ಜನ ಪಡೆದುಕೊಂಡ ನಂತರ, ಪತ್ರಿಕೆಯ ತೆರೆಕಕ್ಕೆ ಮೊದಲ ಹಾಗು ನಂತರ ಮಾಹಿತಿ ಜಾಗೃತಿಯನ್ನು ಕುರಿತಂತೆ, 10ಅಂಕಗಳ ಪಟ್ಟಿಯ ಗಣನೆಯಲ್ಲಿ, ಹಳ್ಳಿಗರ ಒಂದು ಮಾದರಿಯನ್ನು ಪರೀಕ್ಷಿಸಲಾಯಿತು. ಈ ವಿನ್ಯಾಸವನ್ನು ಚಿತ್ರರೂಪದಲ್ಲಿ ಈ ಕೆಳಕಂಡಂತೆ ಬಿಂಬಿಸಬಹುದು.

| ಗ್ರಾಮಗಳು | ಪ್ರಾಯೋಗಿಕ ಉಪಚಾರಕ್ಕೆ ಮೊದಲು | ಪ್ರಾಯೋಗಿಕ ಉಪಚಾರ | ಪ್ರಾಯೋಗಿಕ ಉಪಚಾರ ನಂತರ | ಪ್ರಾಯೋಗಿಕ ಗ್ರಾಮಗಳು ಮತ್ತು ನಿಯಂತ್ರಿತ ಗ್ರಾಮಗಳ ಮಾಹಿತಿ ಜ್ಞಾನದ ಹೋಲಿಕೆ |
|---|---|---|---|---|
| ಪ್ರಾಯೋಗಿಕ ಗ್ರಾಮಗಳು | ಮಾಹಿತಿ ಪರೀಕ್ಷೆ | 'ಗ್ರಾಮವಾರ್ತೆ'ಗಳಿಗೆ ತೆರೆದುಕೊಂಡ ಜನರು | ಮಾಹಿತಿ ಪರೀಕ್ಷೆ | |
| ನಿಯಂತ್ರಿತ ಗ್ರಾಮಗಳು | ಮಾಹಿತಿ ಪರೀಕ್ಷೆ | 'ಗ್ರಾಮವಾರ್ತೆ'ಗಳಿಗೆ ತೆರೆದುಕೊಳ್ಳದ ಮಂದಿ | ಮಾಹಿತಿ ಪರೀಕ್ಷೆ | |

**ಪಟ್ಟಿ - 1: ಮೆನೆಫೀಸ್ ಪ್ರಯೋಗ**

ನಿಯಂತ್ರಿತ ಗ್ರಾಮಕ್ಕೆ ಹೋಲಿಕೆ ಮಾಡಿದರೆ ಪ್ರಾಯೋಗಿಕ ಗ್ರಾಮಗಳು ಬಹಳಷ್ಟು ಹೆಚ್ಚಿನ ಮಾಹಿತಿಯ ಗಳಿಕೆಯನ್ನು ಮೆನೆಫೀಸ್ ಕಂಡುಕೊಂಡರು. ಮಾಹಿತಿಯ ಪ್ರಸರಣದಲ್ಲಿ ಸ್ಥಾನೀಯ ಪತ್ರಿಕೆಗಳಿಗೆ ವಿಶೇಷವಾದ ಪಾತ್ರ ಇದೆ ಎಂಬುದನ್ನು ಈ ವಿವರಗಳು ತೋರಿಸುತ್ತವೆ.

## 2.7.2 ಕೆಲ್‌ಮನ್ ಮತ್ತು ಹೊವ್‌ಲ್ಯಾಂಡ್ ಪ್ರಯೋಗ

ಪ್ರಾಯೋಗಿಕ ವಿಧಾನದ ಬಗ್ಗೆ ಇನ್ನೂ ಹೆಚ್ಚಿನ ಅನುಭವಗಳಿಸಲು ಮತ್ತೊಂದು ಪ್ರಯೋಗವನ್ನು ನೋಡೋಣ. ಸಂದೇಶಗಳ ಅಂಗೀಕರಣದ ಮೇಲೆ ಸಂವಾಹಕನ ಗುಣಗಳ ಪ್ರಭಾವಗಳನ್ನು ಪರೀಕ್ಷಿಸಲು ಕೆಲ್‌ಮನ್ ಮತ್ತು ಹೊವ್‌ಲ್ಯಾಂಡ್ ಅವರಿಂದ ಈ ಪ್ರಯೋಗವು ನಡೆಸಲ್ಪಟ್ಟಿತು. ಈ ಪ್ರಯೋಗದಲ್ಲಿ, ಬಾಲಾಪರಾಧಿಗಳನ್ನು ಕುರಿತಂತೆ ತುಂಬಾ ಸಹನಾತ್ಮಕವಾದ ಸಡಿಲವಾದ ಕಾರ್ಯಚರಣೆಯನ್ನು ಪ್ರೇರೇಪಿಸುವಂತಹ ಧ್ವನಿಮುದ್ರಿತವಾದ ಭಾಷಣವನ್ನು ಪ್ರೌಢಶಾಲೆಯ ವಿದ್ಯಾರ್ಥಿಗಳು ಕೇಳುತ್ತಾರೆ. ವಿದ್ಯಾರ್ಥಿಗಳನ್ನು ಮೂರು ಪಂಗಡಗಳನ್ನಾಗಿ ವಿಭಾಗಿಸಿ, ಪ್ರತಿಯೊಂದು ಗುಂಪೂ ಅದೇ ಧ್ವನಿಮುದ್ರಿಕೆಯನ್ನು ಕೇಳುವಂತೆ ಮಾಡಲಾಗುತ್ತದೆ. ವ್ಯತ್ಯಾಸವೆಂದರೆ, ಮೂರು ವಿಭಿನ್ನ ರೀತಿಯ ವಿಶ್ವಾಸಾರ್ಹತೆಯ ಹಣೆಪಟ್ಟಿಯನ್ನು ಈ ಮೂಲಗಳಿಗೆ ಹಚ್ಚಲಾಗುತ್ತದೆ. ಮೊದಲನೆಯ ಗುಂಪು ಧನಾತ್ಮಕ ರೀತಿಯನ್ನು ಕೇಳುತ್ತದೆ. ಅಧಿಕಾರಯುಕ್ತ, ನ್ಯಾಯಪರ ಹಾಗು ಹೃದಯದಲ್ಲಿ ಜನತೆಯ ಆಸಕ್ತಿಯನ್ನು ಇಟ್ಟುಕೊಂಡ ಒಬ್ಬ ನ್ಯಾಯಾಧೀಶ ಈ ಸಂದೇಶದ ಮೂಲ ಎಂದು ಬಿಂಬಿಸಲಾಯಿತು. ಎರಡನೆಯ ಗುಂಪು ತಟಸ್ಥ ರೀತಿಗೆ ತೆರೆದುಕೊಳ್ಳುತ್ತದೆ.

ಅಂದರೆ, ಭಾಷಣಕಾರನನ್ನು ಸ್ಟುಡಿಯೋದ ಶ್ರೋತೃವರ್ಗದ ಸದಸ್ಯರಲ್ಲಿ ಯಾದೃಚ್ಛಿಕವಾಗಿ ಆಯ್ಕೆ (Random selection) ಮಾಡಲಾದ ಒಬ್ಬನೆಂದು ಹೇಳಿ, ಆತನ ಪೂರ್ವಾಪರದ ಬಗ್ಗೆ ಯಾವ ಮಾಹಿತಿಯನ್ನು ನೀಡಲಿಲ್ಲ. ಮೂರನೆಯ ಗುಂಪು ಋಣಾತ್ಮಕ ರೀತಿಯ ಭಾಷಣವನ್ನು ಕೇಳುತ್ತದೆ. ಇಲ್ಲಿ ಭಾಷಣಕಾರನು, ಶ್ರೋತೃವರ್ಗದಲ್ಲಿ ಒಬ್ಬನೆಂದೂ, ಒಮ್ಮೆ ತಾನೇ ಬಾಲಾಪರಾಧಿಯಾಗಿದ್ದವನೆಂದೂ, ವರ್ತಮಾನದಲ್ಲಿಯೂ ಗುಪ್ತವಾಗಿ ಕೆಲವೊಂದು ಕಾನೂನುಬಾಹಿರವಾದ ಕ್ರಿಯೆಗಳಲ್ಲಿ ತೊಡಗಿಕೊಂಡಿರುವವನೆಂದೂ, ಮಾದಕವಸ್ತುಗಳಿಗೆ ಸಂಬಂಧಿಸಿದ ಆರೋಪಗಳಿಗಾಗಿ ಜಾಮೀನು ಪಡೆದಿರುವಂತಹ ವ್ಯಕ್ತಿಯೆಂದೂ ವಿವರಿಸಲಾಯಿತು.

ಸಂದೇಶವನ್ನು ಕೇಳಿದ ನಂತರ, ಒಂದು ಪ್ರಶ್ನಾವಳಿಯ ಸಹಾಯದಿಂದ ಅಪರಾಧಿಗಳನ್ನು ಕುರಿತ ಕಾರ್ಯಾಚರಣೆಯ ವಿಧಾನದ ಬಗ್ಗೆ ಮೂರೂ ಗುಂಪುಗಳ ವಿದ್ಯಾರ್ಥಿಗಳ ಮನೋಭಿಪ್ರಾಯವನ್ನು ಪರೀಕ್ಷಿಸಲಾಯಿತು. ಪ್ರಯೋಗದ ಮುಂಚೆ (ಧ್ವನಿಮುದ್ರಣದ ಪ್ರಭಾವಕ್ಕೆ ಒಳಗಾಗುವ ಮುನ್ನ) ಮನೋಭಿಪ್ರಾಯದ ಮಾಪನ ಮಾಡಿರಲಿಲ್ಲ. ಮೂರೂ ಗುಂಪಿನ ಸದಸ್ಯರುಗಳ ಮನೋಭಿಪ್ರಾಯದ ಮಟ್ಟವು ಏಕಪ್ರಕಾರವಾಗಿತ್ತೆಂದು ಪರಿಗಣಿಸಲಾಗುತ್ತದೆ. ಏಕೆಂದರೆ, ಈ ಗುಂಪುಗಳಿಗೆ ಅವರನ್ನು ಯಾದೃಚ್ಛಿಕವಾಗಿ ಆರಿಸಿ ಸೇರಿಸಲಾಗಿತ್ತು. ಪ್ರಯೋಗದ ವಿನ್ಯಾಸವು ಚಿತ್ರರೂಪದಲ್ಲಿ ಈ ಮುಂದಿನಂತೆ ಆಗುತ್ತದೆ.

| ಸ್ವತಂತ್ರ ಚರಾಂಶದ ಬದಲಾವಣೆ | ಪ್ರಾಯೋಗಿಕ ಉಪಚಾರ | ಅವಲಂಬಿತ ಚರಾಂಶದ ಅಳತೆ | [illegible] |
|---|---|---|---|
| ಧನಾತ್ಮಕ ರೀತಿ (ವಿಶ್ವಾಸಾರ್ಹ ಮೂಲ) | ಧ್ವನಿಮುದ್ರಿತ ಸಂದೇಶದ ಪ್ರಭಾವಕ್ಕೆ ಒಳಗಾಗುವುದು | ಮನೋಭಿಪ್ರಾಯದ ಮಾಪನ | |
| ತಟಸ್ಥ ರೀತಿ ( ತಟಸ್ಥವಾದ ಮೂಲ) | ಧ್ವನಿಮುದ್ರಿತ ಸಂದೇಶದ ಪ್ರಭಾವಕ್ಕೆ ಒಳಗಾಗುವುದು | ಮನೋಭಿಪ್ರಾಯದ ಮಾಪನ | |
| ಋಣಾತ್ಮಕ ರೀತಿ (ವಿಶ್ವಾಸಾರ್ಹವಲ್ಲದ ಮೂಲ) | ಧ್ವನಿಮುದ್ರಿತ ಸಂದೇಶದ ಪ್ರಭಾವಕ್ಕೆ ಒಳಗಾಗುವುದು | ಮನೋಭಿಪ್ರಾಯದ ಮಾಪನ | |

**ಪಟ್ಟಿ -2: ಕೆಲ್‌ಮನ್ ಮತ್ತು ಹೊವ್‌ಲ್ಯಾಂಡ್ ಪ್ರಯೋಗ**

ಮೂಲಗಳ ಮೌಲ್ಯಮಾಪನವು ನಿರೀಕ್ಷಿತವಾದ ದಿಕ್ಕಿನಲ್ಲಿಯೇ ಇತ್ತು. ಧನಾತ್ಮಕ ಮೂಲಕ್ಕೆ ಹೋಲಿಕೆ ಮಾಡಿದರೆ ಋಣಾತ್ಮಕ ಮೂಲವು ಅಷ್ಟೇನೂ ಸರಿಯಾದುದಲ್ಲವೆಂದೂ, ನಂಬಲು ಅಷ್ಟೇನೂ ಯೋಗ್ಯವಲ್ಲವೆಂದೂ, ತಟಸ್ಥ ಮೂಲವು ಇವೆರಡರ ಮಧ್ಯಕ್ಕೆ ಇರುವುದು ಅದರ ತೀರ್ಮಾನವಾಗಿತ್ತು. ಮನೋಧರ್ಮಗಳ ಮೇಲಿನ ಪ್ರಭಾವವನ್ನು ನೋಡುವುದಾದರೆ, ಧನಾತ್ಮಕ ಮೂಲದಿಂದ ಸಂದೇಶವನ್ನು ಪಡೆದ ಗುಂಪು, ಋಣಾತ್ಮಕ ಮೂಲದಿಂದ ಕೇಳಿದ ಗುಂಪಿಗಿಂತ ಬಾಲಾಪರಾಧಿಗಳನ್ನು ಕುರಿತಂತೆ ಹೆಚ್ಚು ಸಹನಾತ್ಮಕವಾದ, ಸಡಿಲವಾದ ಕಾರ್ಯರೀತಿಯನ್ನು ಪ್ರೋತ್ಸಾಹಿಸಿದರೆ, ತಟಸ್ಥ ಗುಂಪು, ಸಂದೇಶ ಸ್ವೀಕಾರದ ಮಟ್ಟದಲ್ಲಿ ಈ ಎರಡೂ ಗುಂಪಿನ ನಡುವೆ ಇರುವುದು ಕಂಡುಬಂದಿತು.

ಈಗ ನೀವು ಎರಡೂ ಅಧ್ಯಯನಗಳ ತುಲನೆ ಮಾಡಿ. ಎರಡೂ ಅಧ್ಯಯನಗಳ ಉದ್ದೇಶವೆಂದರೆ ಸ್ವತಂತ್ರ ಚರಾಂಶ (Independent Variable - IV) ಮತ್ತು ಅವಲಂಬಿತ ಚರಾಂಶ (Dependent Variable - DV)ಗಳ ನಡುವೆ ಸಂಬಂಧ ಗುರುತಿಸುವುದು.

ಸ್ಥಳೀಯ ವೃತ್ತಪತ್ರಿಕೆಗೆ ತೆರೆದುಕೊಳ್ಳುವುದು, (IV) ಮತ್ತು ಮಾಹಿತಿಯ ಮಟ್ಟ (DV) ಗಳ ನಡುವಣ ಸಂಬಂಧವೇ ಮೆನೆಫೀಸ್ ಅಧ್ಯಯನದ ಕೇಂದ್ರಬಿಂದುವಾದರೆ, ಕೆಲ್‌ಮನ್ ಮತ್ತು ಹೊವ್‌ಲ್ಯಾಂಡ್ ಅಧ್ಯಯನದಲ್ಲಿ, ಮೂಲದ ವಿಶ್ವಾಸಾರ್ಹತೆ (IV) ಯನ್ನು ಸಂದೇಶ ಸ್ವೀಕಾರದ ಮಟ್ಟ (DV) ಗಳ ನಡುವೆ ಸಂಬಂಧ ಗುರುತಿಸುವುದು ಮೂಲೋದ್ದೇಶ. ಎರಡೂ ಅಧ್ಯಯನದಲ್ಲಿ ಸ್ವತಂತ್ರ ಚರಾಂಶವನ್ನು ಅವಶ್ಯಕತೆಗೆ ತಕ್ಕಂತೆ ಬದಲಾಯಿಸಲಾಗಿದೆ. ಪ್ರಾಯೋಗಿಕ ಗ್ರಾಮಗಳಿಗೆ 'ಗ್ರಾಮವಾರ್ತೆ'ಯನ್ನು ಹಂಚಿ, ನಿಯಂತ್ರಿತ ಗ್ರಾಮಗಳಿಗೆ ಅದನ್ನು ಹಂಚದಂತೆ ತಡೆಹಿಡಿಯುವ ಮೂಲಕ ಮೊದಲ ಅಧ್ಯಯನದಲ್ಲಿ ಇದನ್ನು ನಿರ್ವಹಿಸಲಾಗಿದೆ. ಎರಡನೆಯ ಅಧ್ಯಯನದಲ್ಲಿ, ಮೂಲದ ಗುಣಲಕ್ಷಣಗಳಿಗೆ ಬೇರೆ ಬೇರೆ ರೀತಿಯ ವಿವರಣೆಗಳನ್ನು ನೀಡುವ ಮೂಲಕ, ವಿಶ್ವಾಸಾರ್ಹತೆ (IV) ಯನ್ನು ನಿಯಂತ್ರಿಸಲಾಗಿದೆ. ನಂತರ, ಎರಡೂ ಅಧ್ಯಯನಗಳಲ್ಲಿ ಅವಲಂಬಿತ ಚರಾಂಶ ಅಂದರೆ, ಮೊದಲ ಅಧ್ಯಯನದಲ್ಲಿ ಮಾಹಿತಿಯ ಮಟ್ಟ ಮತ್ತು ಎರಡನೆಯ ಅಧ್ಯಯನದಲ್ಲಿ ಸಂದೇಶ ಸ್ವೀಕಾರದ ಮಟ್ಟವನ್ನು ಮಾಪನ ಮಾಡಲಾಗಿದೆ.

ಮೇಲಿನ ಎರಡೂ ಅಧ್ಯಯನಗಳಲ್ಲಿ ಸಾಕಷ್ಟು ಸಾದೃಶ್ಯ ಕಂಡುಬಂದರೂ, ಅವೆರಡರ ನಡುವೆ ಬಹಳಷ್ಟು ಮುಖ್ಯವಾದ ವೈದೃಶ್ಯಗಳೂ ಇವೆ. ಮೆನೆಫೀಸ್ ಅಧ್ಯಯನ ನಡೆಸಿರುವುದು ಸಮಾಜದ ಯಥಾವತ್ತಾದ ಸ್ಥಿತಿಯಲ್ಲಿ ಇದನ್ನು "ಕ್ಷೇತ್ರ ಪ್ರಯೋಗ"ಎಂದು ಕರೆಯಲಾಗುತ್ತದೆ. ಆದರೆ, ಕೆಲ್‌ಮನ್ ಮತ್ತು ಹೊವ್‌ಲ್ಯಾಂಡ್ ಅಧ್ಯಯನ ನಡೆದಿರುವುದು ಪ್ರಯೋಗಶಾಲೆಯ ನಾಲ್ಕುಗೋಡೆಗಳ ನಡುವೆ, ನಿಯಂತ್ರಿತವಾದ ಸ್ಥಿತಿಗಳಲ್ಲಿ. ಆದ್ದರಿಂದ ಇದೊಂದು "ಪ್ರಯೋಗಶಾಲಾ ಪರೀಕ್ಷೆ".

☛ ಎರಡೂ ವಿನ್ಯಾಸಗಳಲ್ಲಿ ಯಾವುದಾದರೂ ವ್ಯತ್ಯಾಸವನ್ನು ನೀವು ಕಾಣಬಲ್ಲಿರಾ? ಎರಡೂ ಅಧ್ಯಯನಗಳಲ್ಲಿ ಅವಲಂಬಿತ ಚರಾಂಶವನ್ನು ಎಷ್ಟುಬಾರಿ ಮಾಪನ ಮಾಡಿದ್ದಾರೆಂಬುದನ್ನು ನೋಡಿ. ಮೆನೆಫೀಸ್ ಅಧ್ಯಯನದಲ್ಲಿ ಮಾಹಿತಿಯ ಮಟ್ಟವನ್ನು ಎರಡು ಬಾರಿ ಮಾಪನ ಮಾಡಲಾಗಿದೆ. ಒಮ್ಮೆ 'ಗ್ರಾಮವಾರ್ತೆ'ಗೆ ತೆರೆದುಕೊಳ್ಳುವ ಪೂರ್ವದಲ್ಲಿ ಇನ್ನೊಮ್ಮೆ ನಂತರದಲ್ಲಿ. ಇಂತಹ ವಿನ್ಯಾಸವನ್ನು, 'ಪೂರ್ವೋತ್ತರ ವಿನ್ಯಾಸ' ಎಂದು ಕರೆಯಲಾಗುತ್ತದೆ. ಕೆಲ್‌ಮನ್ ಮತ್ತು ಹೊವ್‌ಲ್ಯಾಂಡ್ ಅಧ್ಯಯನದಲ್ಲಿ, ಮನೋಭಿಪ್ರಾಯದ ಮಾಪನ ಮಾಡಿರುವುದು ಒಂದೇ ಬಾರಿ ಅಂದರೆ ಧ್ವನಿಮುದ್ರಿತವಾದ ಭಾಷಣ ಕೇಳಿದ ನಂತರ ಮಾತ್ರ. ಇದು ನಂತರ ಮಾತ್ರದ ವಿನ್ಯಾಸ.

ಪ್ರಯೋಗಶಾಲೆಯ ಮತ್ತು ಕ್ಷೇತ್ರ ಪ್ರಯೋಗಗಳೆರಡಕ್ಕೂ ತಮ್ಮದೇ ಆದ ವಿಶೇಷತೆಗಳೂ ಹಾಗು ಮಿತಿಗಳೂ ಇವೆ. ಪ್ರಯೋಗಶಾಲೆಯ ಭೂಮಿಕೆಯಲ್ಲಿ ಬಹಳ ತೀವ್ರವಾಗಿ ನಿಯಂತ್ರಣಗಳನ್ನು ಜಾರಿ ಮಾಡುವುದು ಸಾಧ್ಯ. ಆದರೂ, ಪ್ರಯೋಗಶಾಲೆಯಿಂದ ನಿಜಜೀವನದ ಸಂದರ್ಭಗಳಿಗೆ ಸಾಧಾರಣೀಕರಣ ಮಾಡುವ ಸಾಧ್ಯತೆಗಳು ಕಡಿಮೆ. ಇದರಿಂದ ಭಿನ್ನವಾಗಿ, ಕ್ಷೇತ್ರ ಪರೀಕ್ಷೆಗಳಲ್ಲಿ ಪ್ರಯೋಗಶಾಲೆಯಂತೆ ನಿಯಂತ್ರಣಗಳನ್ನು ಜಾರಿ ಮಾಡುವುದು ಕಠಿಣವಾದರೂ, ನಿಯಂತ್ರಿತವಾದ ಪ್ರಯೋಗಶಾಲಾ ಪರೀಕ್ಷೆಗಳಿಗಿಂತ, ಕ್ಷೇತ್ರ ಪ್ರಯೋಗಗಳ ಫಲಿತಾಂಶಗಳನ್ನು ಸಾಧಾರಣೀಕರಣಗೊಳಿಸುವ ಸಾಧ್ಯತೆಗಳು ಬಹಳ ಹೆಚ್ಚು.

**ಚಟುವಟಿಕೆ: ನಿಮ್ಮ ಉತ್ತರಗಳನ್ನು ಪಠ್ಯದೊಂದಿಗೆ ಹೋಲಿಸಿಕೊಳ್ಳಿ.**

1. ಸಂವಹನ ಅಧ್ಯಯನಗಳಲ್ಲಿ ಸಾಮಾನ್ಯವಾಗಿ ಕಂಡುಬರುವ ಚರಾಂಶಗಳನ್ನು ಪಟ್ಟಿಮಾಡಿ.
2. 'ಪೂರ್ವಕಲ್ಪನೆ' ಎಂದರೇನು? ಕೆಳಗಿನ ಚರಾಂಶಗಳನ್ನು ಉಪಯೋಗಿಸಿ ಪೂರ್ವಕಲ್ಪನೆಯನ್ನು ವಿವರಿಸಿ.

    ಅ. ವಾರ್ತಾಪತ್ರಿಕೆಯ ಓದುಗರ ಲಿಂಗ ಹಾಗು ಪತ್ರಿಕಾ ಸಂಪಾದಕೀಯಗಳ ಓದುವಿಕೆ, ಮತ್ತು

    ಆ. ವಯಸ್ಸು ಮತ್ತು ಚಲನಚಿತ್ರಗಳಿಗೆ ಹೋಗುವ ಹವ್ಯಾಸ.

3. ಹೊಂದಿಸಿ ಬರೆಯಿರಿ.

| | | |
|---|---|---|
| ಬದಲಾಯಿಸಲಾಗುವ ಚರಾಂಶ | --- | ನಿಯಂತ್ರಿತ ಗುಂಪು |
| ಪ್ರಯೋಗದ ಉಪಚಾರ ನೀಡದ ಗುಂಪು | --- | ಅವಲಂಬಿತ ಚರಾಂಶ |
| ಅವಲಂಬಿತ ಚರಾಂಶದ ಎರಡು ಬಾರಿ ಮಾಪನ | --- | ಪೂರ್ವೋತ್ತರ ವಿನ್ಯಾಸ |
| ಪ್ರಾಯೋಗಿಕ ಉಪಚಾರ ನೀಡಲಾಗಿರುವುದು | --- | ಸ್ವತಂತ್ರ ಚರಾಂಶ |
| ಅಳೆಯಲಾದ ಚರಾಂಶ | --- | ಪ್ರಾಯೋಗಿಕ ಗುಂಪು |

## 2.8 ಸರ್ವೇಕ್ಷಣಾ (ಸಮೀಕ್ಷಾ) ಸಂಶೋಧನೆ

ಸಮಾಜ ವಿಜ್ಞಾನಗಳಲ್ಲಿ ಸರ್ವೇಕ್ಷಣಾ ಸಂಶೋಧನೆಗೆ ಬಹಳ ಹಳೆಯ ಸಂಪ್ರದಾಯವಿದೆ ಮತ್ತು ನಮ್ಮ ದೈನಂದಿನ ಜೀವನದಲ್ಲಿ ಸರ್ವೇಕ್ಷಣೆಯ ಫಲಿತಾಂಶಗಳಿಗೆ ಸಾಕಷ್ಟು ಉಪಯೋಗಗಳಿವೆ. ಸಂವಹನ ಸಂಶೋಧನೆಯ ಕ್ಷೇತ್ರದಲ್ಲಿಯೂ ಸಹ ಈ ವಿಧಾನವನ್ನು ಸಾಕಷ್ಟು ಬಳಸಲಾಗುತ್ತದೆ. ಜನಾಭಿಪ್ರಾಯ ಗಣನೆ, ಮಾರುಕಟ್ಟೆ ಸಂಶೋಧನೆ, ಶ್ರೋತೃವರ್ಗದ ವಿಶ್ಲೇಷಣೆ, ಓದುಗರ ಸಮೀಕ್ಷೆ, ಕಾರ್ಯಕ್ರಮಗಳ ಶ್ರೇಣೀಕರಣ ಇವು ಸಂವಹನ ಕ್ಷೇತ್ರದಲ್ಲಿ ಸರ್ವೇಕ್ಷಣಾ ಸಂಶೋಧನೆಯ ವಿಧಾನವನ್ನು ಬಳಕೆ ಮಾಡುವಂತಹ ಸಂದರ್ಭಗಳಿಗೆ ಉದಾಹರಣೆಗಳು.

ವರ್ಣನಾತ್ಮಕ ರೀತಿಯ ಸಂಶೋಧನೆಗಳಲ್ಲಿ ಸರ್ವೇಕ್ಷಣೆಯ ವಿಶೇಷವಾದ ಬಳಕೆ ಕಂಡುಬರುತ್ತದೆ. ಸೂಕ್ತವಾದ ಪ್ರಶ್ನೆಗಳನ್ನು ಕೇಳುವ ಮೂಲಕ ಜನರ ಮನೋವೃತ್ತಿಗಳು, ಅಭಿಪ್ರಾಯಗಳು, ನಂಬುಗೆಗಳು, ಹವ್ಯಾಸಗಳು, ಗುಣಧರ್ಮ ಇತ್ಯಾದಿಗಳ ಬಗ್ಗೆ ವಿವರಗಳನ್ನು ಪಡೆಯಲು ಸರ್ವೇಕ್ಷಣೆಗಳನ್ನು ಕೈಗೆತ್ತಿಕೊಳ್ಳಲಾಗುತ್ತದೆ. ಸಾಮಾನ್ಯವಾಗಿ ಮಾಹಿತಿಯ ಈ ಅಂಶಗಳನ್ನು ಪ್ರಶ್ನಾವಳಿ ಅಥವಾ ಸಂದರ್ಶನಗಳ ಮೂಲಕ ಪಡೆಯಲಾಗುತ್ತದೆ. ಪ್ರಶ್ನಾವಳಿಗಳನ್ನು ವ್ಯಕ್ತಿಗಳಿಗೆ ಅಥವಾ ಗುಂಪುಗಳಿಗೆ ನೀಡಲಾಗುತ್ತದೆ. ಪ್ರಶ್ನಾವಳಿಗಳನ್ನು ಅಂಚೆಯ ಮೂಲಕ ಕಳುಹಿಸಿ, ದತ್ತಾಂಶ ಸಂಗ್ರಹಣೆ ಮಾಡುವುದು ಸಾಮಾನ್ಯವೇ. ದೂರವಾಣಿ ಅಥವಾ ಮುಖತಃ ನಡೆಸಲಾಗುವ ವೈಯಕ್ತಿಕ ಸಂದರ್ಶನಗಳು ದತ್ತಾಂಶ ಸಂಗ್ರಹಣೆಗಾಗಿ ಸರ್ವೇಕ್ಷಣ ಸಂಶೋಧಕರು ಬಳಸುವ ಇತರ ವಿಧಾನಗಳು ಸರ್ವೇಕ್ಷಣೆಯ ಯಶಸ್ಸು ಹಲವಾರು ಅಂಶಗಳ ಮೇಲೆ ಅವಲಂಬಿತವಾಗಿದೆ. ಈ ಕುರಿತು ಮುಖ್ಯವಾಗಿ ಪರಿಗಣಿಸಬೇಕಾದ ಕೆಲವು ಅಂಶಗಳು ಕೆಳಕಂಡಂತಿವೆ.

ಅ. ಉದ್ದೇಶಿತ ಜನಸಮೂಹದಿಂದ ಜನರ ಸೂಕ್ತವಾದ ಆಯ್ಕೆ (ಅರ್ಥಾತ್, ಸರಿಯಾದ ನಮೂನೆಯ ಆಯ್ಕೆ).

ಆ. ಸರಿಯಾದ ರೀತಿಯ ಪ್ರಶ್ನೆಗಳನ್ನು ಕೇಳುವುದು, ಮತ್ತು

ಇ. ಸರಿಯಾದ ಸಂದರ್ಶನಾ ಕಾರ್ಯವಿಧಾನವನ್ನು ಬಳಸುವುದು.

ಇದೇ ಕಾರಣದಿಂದ, ಸರ್ವೇಕ್ಷಣ ಸಂಶೋಧನೆಯ ರೂಪಲಕ್ಷಣ ಮತ್ತು ಕಾರ್ಯಾಚರಣೆಯ ವಿಧಾನಗಳನ್ನು ಅರ್ಥಮಾಡಿಕೊಳ್ಳಲು ಮಾದರಿಯ ರಚನೆ, ಪ್ರಶ್ನಾವಳಿಗಳು ಮತ್ತು ಸಂದರ್ಶನಗಳನ್ನು ಕುರಿತಂತೆ ಚರ್ಚಿಸುವುದೂ ಇಲ್ಲಿ ಸೂಕ್ತವಾಗುತ್ತದೆ.

## 2.8.1 ನಮೂನೆ (ಮಾದರಿ) ವಿಧಾನ

ಈ ಮುನ್ನವೇ ತಿಳಿಸಿರುವಂತೆ ಸಂಶೋಧಕನಿಗೆ ಆಸಕ್ತಿ ಇರುವಂತಹ ಯಾವುದಾದರೂ ಗುಣಧರ್ಮದ ವಿತರಣೆಯ ಅನ್ವಯ ನಿರ್ದಿಷ್ಟ ಜನಸಮೂಹದ ವರ್ಣನೆ ಮಾಡುವುದು ಸರ್ವೇಕ್ಷಣೆಯ ಉದ್ದೇಶ. ಸರ್ವೇಕ್ಷಣೆಗೆ 'ಜನಗಣತಿ' ಒಂದು ಒಳ್ಳೆಯ ಉದಾಹರಣೆ. ನಿರ್ದಿಷ್ಟವಾದ ಭೌಗೋಳಿಕ ಕ್ಷೇತ್ರವೊಂದರ (ಗ್ರಾಮ, ಪಟ್ಟಣ, ರಾಜ್ಯ ಅಥವಾ ರಾಷ್ಟ್ರ) ಜನಸಮೂಹ ಗುಣಲಕ್ಷಣಗಳನ್ನು ಅಧ್ಯಯನಮಾಡಲು ನಿಯತವಾಗಿ ಕಾಲಕಾಲಕ್ಕೆ ಜನಗಣತಿಯನ್ನು ನಡೆಸಲಾಗುತ್ತದೆ. ಸಾಮಾಜಿಕ ಸರ್ವೇಕ್ಷಣೆಗಳ ಉದ್ದೇಶವೂ ಇದೇ ರೀತಿಯದೇ. ನಿರ್ದಿಷ್ಟವಾದ ಜನಸಮೂಹದ ಕೆಲವೊಂದು ಗುಣಲಕ್ಷಣಗಳ ವಿತರಣೆಯನ್ನು ಅಧ್ಯಯನ ಮಾಡುವ ಉದ್ದೇಶದಿಂದ ಈ ಸರ್ವೇಕ್ಷಣೆಯನ್ನು ನಡೆಸಲಾಗುತ್ತದೆ. ಉದಾಹರಣೆಗೆ, ಪಟ್ಟಣವೊಂದರಲ್ಲಿ ಹದಿಹರೆಯದ ಹುಡುಗಿಯರು ಚಲನಚಿತ್ರಮಂದಿರಗಳಿಗೆ ಹೋಗುವ ಹವ್ಯಾಸದ ಬಗ್ಗೆ ಅಥವಾ ತಂದೆ ತಾಯಂದಿರಿಂದ ದೂರ ಇರುವ ಕಾಲೇಜು ಹುಡುಗರು ಅಂತರ್ಜಾಲದಲ್ಲಿ ಅಶ್ಲೀಲ ತಾಣಗಳನ್ನು ಜಾಲಾಡುವ ಬಗ್ಗೆ ಕೆಲವರಿಗೆ ಆಸಕ್ತಿ ಇರಬಹುದು.

ಈ ಅಧ್ಯಯನಗಳನ್ನು ಮತ್ತು ಅದರಲ್ಲಿ ಅಡಕವಾಗುವ ಜನಸಮೂಹಗಳನ್ನು ಗಮನಿಸಿ, ಕೆಲವೊಂದು ಗುಣಲಕ್ಷಣಗಳನ್ನು ನಿಗದಿಪಡಿಸುವ ಮೂಲಕ ಜನಸಮೂಹವನ್ನು ನಿಶ್ಚಿತಗೊಳಿಸಲಾಗಿದೆ. ಮೊದಲನೆಯ ಪ್ರಕರಣದಲ್ಲಿ ಅ) ಹದಿಹರಯದವರು ಆ) ಹೆಣ್ಣುಮಕ್ಕಳು ಮತ್ತು ಇ) ಪಟ್ಟಣದಲ್ಲಿ ವಾಸವಾಗಿರುವವರು, ಇವರಿಂದ ಸಮೂಹವು ರೂಪಿತವಾಗಿದೆ.

ಎರಡನೆಯ ಅಧ್ಯಯನದಲ್ಲಿ, ಸಮೂಹವು ಒಳಗೊಳ್ಳುವುದು. ಅ) ಹುಡುಗರು ಆ) ಕಾಲೇಜಿಗೆ ಹೋಗುತ್ತಿರುವವರು ಮತ್ತು ಇ) ತಂದೆ ತಾಯಂದಿರಿಂದ ದೂರ ಇರುವವರು. ಈ ಎಲ್ಲ ಅಂಶಗಳ ಪರಿಗಣನೆಯಿಂದ, ನಿರ್ದಿಷ್ಟವಾದ ಕೆಲವೊಂದು ಮಾನಕಗಳಿಗೆ ಬದ್ಧವಾದ ಎಲ್ಲಾ ಪ್ರಕರಣಗಳ ಕ್ರೋಢೀಕೃತ ರೂಪವೇ 'ಸಮೂಹ' ಎಂದು ಹೇಳಬಹುದು.

ಜನಗಣತಿಯು ಸಂಪೂರ್ಣವಾಗಿ ಇಡೀ ಜನಸಂಖ್ಯೆಯ ಗಣನೆಯನ್ನು ಒಳಗೊಳ್ಳುತ್ತದೆ. ಆದರೆ, ಅಧ್ಯಯನ ಮಾಡಬೇಕೆಂದು ನೀವು ಬಯಸುವ ಅತಿ ಹೆಚ್ಚಿನ ಜನಸಮೂಹಗಳು ಗಾತ್ರದಲ್ಲಿ ಬಹಳ ದೊಡ್ಡವು. ಅಂತಹ ಜನಸಮೂಹದಲ್ಲಿ ಅದರ ಪೂರ್ಣತೆಯಲ್ಲಿ ಅಧ್ಯಯನ ಮಾಡುವುದು ಅಸಾಧ್ಯವಲ್ಲವಾದರೂ, ಬಹಳಷ್ಟು ಬಾರಿ ತೀರ ತ್ರಾಸದಾಯಕವೂ, ಕಾಲವ್ಯಯ ಮಾಡುವಂತಹುದೂ ಹಾಗು ದುಬಾರಿಯೂ ಹೌದು. ಆದ್ದರಿಂದ ಸಮಾಜ ವೈಜ್ಞಾನಿಕ ಸರ್ವೇಕ್ಷಣೆಗಳು, ಜನ ಸಮೂಹಗಳ ಸ್ವರೂಪ, ಗುಣಗಳ ಅಧ್ಯಯನ ಮಾಡಲು ಸಮೂಹದಿಂದ ಮಾದರಿಗಳನ್ನು ಆಯ್ಕೆ ಮಾಡುವಂತಹ ಕಾರ್ಯರೀತಿಗಳನ್ನು ಬಳಸುತ್ತವೆ. ಆದ್ದರಿಂದ ಜನಸಮೂಹಗಳ ಬಗ್ಗೆ ತರ್ಕಬದ್ಧವಾದ ನಿರ್ಣಯಗಳನ್ನು ತೆಗೆದುಕೊಳ್ಳಲಾಗುತ್ತದೆ. ಜನಸಮೂಹಗಳ ಸಮರ್ಪಕ (ಮಾದರಿಯ ಅಂಕಿ ಅಂಶ ಎಂದೂ ಕರೆಯಲಾಗುತ್ತದೆ)ಗಳ ನಡುವಣ ತಾಳಮೇಳವು ಮಾದರಿಯ ಗುಣಮಟ್ಟದ ಮೇಲೆ ಅವಲಂಬಿಸಿರುತ್ತದೆ. ಬೇರೆ ರೀತಿಯಲ್ಲಿ ಹೇಳುವುದಾದರೆ, ಯಾವ ಜನ ಸಮೂಹಕ್ಕೆ ಅಧ್ಯಯನ ಸಮರ್ಪಕಗಳನ್ನು ಸಾಧಾರಣೀಕರಣಗೊಳಿಸಬೇಕೋ, ಆ ಜನಸಮೂಹಗಳನ್ನು ಮಾದರಿಗಳು ಯಥೋಚಿತವಾಗಿ ಪ್ರತಿನಿಧಿಸುವಂತಿರಬೇಕು. ಯಾವುದೇ ರೀತಿಯ ಪಕ್ಷಪಾತ ಮತ್ತು ಅನಿಯಮಿತತೆಗಳಿಂದ ಮಾದರಿಗಳು ಮುಕ್ತವಾಗಿರಬೇಕು.

ಮಾದರಿಗಳನ್ನು ರೂಪಿಸುವ ಹಲವಾರು ಕಾರ್ಯರೀತಿಗಳು ಲಭ್ಯವಿದ್ದು, ಅವುಗಳು ವಿಶಾಲವಾದ ಈ ಎರಡು ವರ್ಗಗಳಲ್ಲಿ ಒಂದಕ್ಕೆ ಸೇರುತ್ತವೆ. ಸಂಭಾವನೀಯತೆ(ಸಂಭಾವ್ಯತೆಯ)ಯನ್ನು ಆಧರಿಸಿದ ಮಾದರಿ ಅಥವಾ ಸಂಭವನೀಯತೆಯನ್ನು ಆಧರಿಸಿದ (ಅಸಂಭಾವ್ಯತೆಯ) ಮಾದರಿ.

ಸಂಭವನೀಯತೆಯ ಮಾದರಿಯ ಪ್ರಮುಖ ಲಕ್ಷಣವೆಂದರೆ, ಆಯ್ಕೆ ಮಾಡಿದ ಮಾದರಿಯಲ್ಲಿ ಪ್ರತಿಯೊಂದು ಘಟಕ ಅಥವಾ ಘಟಕ ಸಂಯೋಜನೆಗಳಿಗೂ ಒಂದು ನಿರ್ದಿಷ್ಟವಾದ ಸಾಧ್ಯತೆ ಅಥವಾ ಸಂಭವನೀಯತೆಯನ್ನು ನಿರ್ದೇಶಿಸುವುದು ಸಾಧ್ಯವಾಗುವುದು. ಆದರೆ, ಸಂಭವನೀಯತೆಯನ್ನು ಆಧರಿಸಿದ ವಿಧಾನಗಳಲ್ಲಿ ಇಂತಹ ನಿರ್ದಿಷ್ಟತೆಯನ್ನು ನಿರ್ದೇಶಿಸುವುದು ಸಾಧ್ಯವಿಲ್ಲ ಹಾಗು ಪ್ರತಿಯೊಂದು ಘಟಕಕ್ಕೂ ಮಾದರಿಯಲ್ಲಿ ಸೇರ್ಪಡೆಯಾಗುವ ಸಮಾನ ಅವಕಾಶದ ಸಾಧ್ಯತೆಯ ಖಾತ್ರಿಯೂ ಇರುವುದಿಲ್ಲ.

ಸಂಭವನೀಯತೆಯ ಮತ್ತು ಸಂಭವನೀಯತೆಯನ್ನು ಆಧರಿಸಿದ ಹಲವಾರು ಕಾರ್ಯರೀತಿ, ವಿಧಾನಗಳನ್ನನುಸರಿಸುವ ಮಾದರಿಗಳಿವೆ. ಸರಳ ಯಾದೃಚ್ಛಿಕ ಮಾದರಿ, ಸ್ತರೀಕೃತ ಯಾದೃಚ್ಛಿಕ ಮಾದರಿ ಮತ್ತು ಸಮುದಾಯ ಪುಂಜ (ಕ್ಲಸ್ಟರ್) ಮಾದರಿ ಇವುಗಳು ಸಾಮಾನ್ಯವಾಗಿ ಉಪಯೋಗಿಸಲ್ಪಡುವ ಸಂಭವನೀಯತೆಯನ್ನಾಧರಿಸಿದ ಕಾರ್ಯರೀತಿ ಮಾದರಿಗಳಾದರೆ, ಪ್ರಾಸಂಗಿಕ / ಆಕಸ್ಮಿಕ (Accidental) ಮಾದರಿ, ಹಿಸ್ಸೆ ಅಂಶಿಕ (Quota) ಮಾದರಿ ಮತ್ತು ಉದ್ದೇಶಿತ (ಉದ್ದೇಶ ಪೂರ್ವಕ) (Purposive) ಮಾದರಿಗಳು ಸಂಭವನೀಯತೆಯನ್ನು ಆಧರಿಸಿದ ಮಾದರಿಗಳಿಗೆ ಉದಾಹರಣೆಯಾಗುತ್ತವೆ. ಈ ವಿಧಾನಗಳ ವಿಸ್ತೃತವಾದ ಚರ್ಚೆಯು ಈ ಘಟಕದ ವ್ಯಾಪ್ತಿಯನ್ನು ಮೀರಿದ್ದು, ಆದರೂ, ಸ್ಥೂಲವಾದ ಪರಿಚಯವನ್ನು ಈ ಕೆಳಗೆ ನೀಡಲಾಗಿದೆ.

ಸರಳ ಯಾದೃಚ್ಛಿಕ ಮಾದರಿಗೆ ಮೊದಲು ಬೇಕಾದದ್ದು, ಸಮೂಹದಲ್ಲಿರುವ ಎಲ್ಲಾ ಘಟಕಗಳ ಪಟ್ಟಿ. 'ಮಾದರಿ ರಚನೆ' ಎಂದು ಕರೆಯಲಾಗುವ ಈ ಪಟ್ಟಿಯಿಂದ, ಬೇಕಾದಷ್ಟು ಸಂಖ್ಯೆಯ ಪ್ರಕರಣಗಳನ್ನು ಅರ್ಥಾತ್ ಮಾದರಿಯನ್ನು ಲಾಟರಿ ಎತ್ತುವ ಮೂಲಕ ಆಯ್ಕೆ ಮಾಡಲಾಗುವುದು. ಲಾಟರಿ ವಿಧಾನದ ಈ ತತ್ವ ಚೆನ್ನಾಗಿ ಕೆಲಸ ಮಾಡುವುದಾದರೂ, ಬೃಹತ್ತಾದ ಸಮೂಹವಿದ್ದಾಗ ನಿರ್ವಹಿಸಲಾರದಂತಾಗುತ್ತದೆ. ಲಾಟರಿಯ ವಿಧಾನದಂತಹುದೇ ಫಲಿತಾಂಶಗಳನ್ನು ನೀಡುವ ಯಾದೃಚ್ಛಿಕ ಸಂಖ್ಯಾಪಟ್ಟಿಯನ್ನು ಸಮಾಜವಿಜ್ಞಾನಿಗಳು ಪರ್ಯಾಯವಾಗಿ ಬಳಕೆಮಾಡುತ್ತಾರೆ. ಯಾದೃಚ್ಛಿಕ ಸಂಖ್ಯಾಪಟ್ಟಿಯಲ್ಲಿ, ಪಟ್ಟಿಯ ಯಾವುದೇ ಒಂದು ಯಾದೃಚ್ಛಿಕ ಸಂಖ್ಯೆಯಿಂದ ಪ್ರಾರಂಭಿಸಿ, ಆ ಬಿಂದುವಿನಿಂದ ಯಾವುದೇ ಒಂದು ದಿಕ್ಕಿನಲ್ಲಿ ಚಲಿಸುತ್ತಾ, ಅವಶ್ಯವಾದಷ್ಟು ಸಂಖ್ಯೆಯ ಎಣಿಕೆಗಳು ಸಿಗುವವರೆಗೂ ಪಟ್ಟಿಯಲ್ಲಿ ಬರುವ ಎಲ್ಲಾ ಅಂಕಗಳನ್ನು ಆಯ್ಕೆ ಮಾಡಿಕೊಳ್ಳುತ್ತಾ ಹೋಗಬೇಕು.

ಸ್ತರೀಕೃತ (ಶ್ರೇಣೀಕೃತ) ಯಾದೃಚ್ಛಿಕ ಮಾದರಿಯಲ್ಲಿ ಜನಸಮೂಹವನ್ನು ವಿವಿಧ ಶ್ರೇಣಿ (ಸ್ತರ)ಗಳಾಗಿ (ಉದಾಹರಣೆ, ಲಿಂಗ, ನಗರ vs ಗ್ರಾಮೀಣ) ಭಾಗ ಮಾಡಲಾಗುತ್ತದೆ. ಸರಳ ಯಾದೃಚ್ಛಿಕ ವಿಧಾನದ ಕಾರ್ಯರೀತಿಗಳನ್ನು ಅನುಸರಿಸಿ ಜನಸಮೂಹದ ಪ್ರತಿಯೊಂದು ಸ್ತರದಿಂದಲೂ ಒಂದೊಂದು ಮಾದರಿಯನ್ನು (ಸ್ಯಾಂಪಲ್) ಆಯ್ಕೆ ಮಾಡಲಾಗುತ್ತದೆ.

ಹೀಗೆ ಸ್ತರೀಕರಣ ಮಾಡುವುದರಿಂದ ಪ್ರತಿಯೊಂದು ಸ್ತರಕ್ಕೂ ಪ್ರಾತಿನಿಧ್ಯತೆಯ ಸಮಾನ ಅವಕಾಶ ಸಾಕಷ್ಟು ಪ್ರಮಾಣದಲ್ಲಿ ದೊರೆಯುತ್ತದೆ. ಬಹಳ ದೊಡ್ಡ ಪ್ರಮಾಣದ ಸರ್ವೇಕ್ಷಣೆಗಳನ್ನು ನಡೆಸುವಾಗ ಸಮುದಾಯ (ಕ್ಲಸ್ಟರ್) ಮಾದರಿಯನ್ನು ಶಿಫಾರಸ್ಸು ಮಾಡಲಾಗುತ್ತದೆ. ಇದರಲ್ಲಿ, ಯಾದೃಚ್ಛಿಕ ಮಾದರಿಯ ಕಾರ್ಯರೀತಿಗಳನ್ನು ಅನುಸರಿಸುವ ಆಯ್ಕೆಯ ವಿಧಾನವು ಮೊದಲು ದೊಡ್ಡದಾದ ಗುಂಪು (ಸಮುದಾಯ, ಗುಂಪು(Cluster)ಗಳಿಂದ ಪ್ರಾರಂಭಗೊಂಡು, ಚಿಕ್ಕ ಚಿಕ್ಕ ಘಟಕಗಳೆಡೆಗೆ ಸಾಗುತ್ತದೆ. ರಾಜ್ಯವ್ಯಾಪಿಯಾಗಿ, ಶಾಲಾ ಮಕ್ಕಳ ಮಾದರಿಯನ್ನು ಆಯ್ಕೆ ಮಾಡುವಾಗ, ಮೊದಲಿಗೆ ರಾಜ್ಯದಲ್ಲಿರುವ ಕೆಲವು ಜಿಲ್ಲೆಗಳನ್ನು ಆರಿಸಿಕೊಂಡು, ನಂತರ ಪ್ರತಿಯೊಂದು ಜಿಲ್ಲೆಯಲ್ಲಿನ ಕೆಲವೊಂದು ಶಾಲೆಗಳನ್ನೂ ಮತ್ತು ಪ್ರತಿಯೊಂದು ಶಾಲೆಯ ಕೆಲವೊಂದು ಮಕ್ಕಳನ್ನೂ ಆಯ್ಕೆ ಮಾಡಲಾಗುವುದು, ಪ್ರತಿಯೊಂದು ಹಂತದಲ್ಲಿಯೂ ಆಯ್ಕೆಯು ಯಾದೃಚ್ಛಿಕವಾಗಿರುತ್ತದೆ. ಇದನ್ನು ಹಲವು ಹಂತದ ಮಾದರಿ ಎಂದೂ ಗುರುತಿಸಲಾಗುತ್ತದೆ.

ಸಂಭವನೀಯತೆಯನ್ನು ಆಧರಿಸಿದ ತಂತ್ರಗಳು ಅನುಕೂಲ ಸಿಂಧು ಕಾರ್ಯರೂಪಗಳು. ಅವು ಕ್ರಮಬದ್ಧವಾದವಲ್ಲ ಮತ್ತು ಮಾದರಿಯಿಂದ ಜನಸಮೂಹಕ್ಕೆ ವಿಸ್ತರಿಸಬಹುದಾದ ಸಂಖ್ಯಾಶಾಸ್ತ್ರೀಕವಾದ ಅಂದಾಜುಗಳಿಗಾಗಲೀ, ಸಾಧಾರಣೀಕರಣಗಳಿಗಾಗಲೀ ಅವಕಾಶ ನೀಡುವುದಿಲ್ಲ. ಸಂಶೋಧಕನಿಗೆ ಇರುವ ಲಭ್ಯತೆಯನ್ನು ಆಧರಿಸಿ ಎಷ್ಟು ಬೇಕೋ ಅಷ್ಟು ಸಂಖ್ಯೆಯಷ್ಟು ಪ್ರಕರಣಗಳನ್ನು ಹೇಗೆಂದರೆ ಹಾಗೇ ಎತ್ತಿಕೊಳ್ಳುವ ಕಾರ್ಯರೀತಿ ಪ್ರಾಸಂಗಿಕ ಮಾದರಿಯದು. ಹಿಸ್ಸೆ ಅಥವಾ Quota ಮಾದರಿಯು ಪ್ರತಿಯೊಂದು ಸ್ತರಕ್ಕೂ ಪ್ರಾತಿನಿಧ್ಯತೆ ಕೊಡುತ್ತದೆ. ಆದರೆ ಸ್ತರದಲ್ಲಿನ ಆಯ್ಕೆಯು ಪ್ರಾಸಂಗಿಕವಾಗಿರುತ್ತದೆ. ಉದ್ದೇಶಪೂರಿತವಾದ ಮಾದರಿಗಳು ಜನಸಮೂಹಗಳಲ್ಲಿ 'ಸಾಂಕೇತಿಕ'ವೆಂದು ನಿರ್ಣಯಿಸಲಾದಂತಹ ಪ್ರಕರಣಗಳನ್ನು ಒಳಗೊಳ್ಳುತ್ತವೆ.

ಮಾದರಿಗಳನ್ನು ಆಯ್ಕೆ ಮಾಡುವ ಉತ್ತಮ ವೈಜ್ಞಾನಿಕ ವಿಧಾನಗಳೆಂದರೆ, ಸಂಭವನೀಯತೆಯ ಕಾರ್ಯರೀತಿಗಳನ್ನು ಆಧರಿಸಿದಂತಹವೇ. ಏಕೆಂದರೆ, ಜನಸಮೂಹದ ಅತಿ ಉತ್ತಮವಾದ ಪ್ರಾತಿನಿಧಿಕವಾದ ಆಯ್ಕೆಯನ್ನು ಅವು ನೀಡುತ್ತವೆ. ಆದರೆ, ಸಂಭವನೀಯತೆಯನ್ನು ಆಧರಿಸಿದ ತಂತ್ರಗಳು ಅಷ್ಟೇನೂ ಉತ್ತಮವಲ್ಲದ ಅಂದಾಜುಗಳನ್ನು ನೀಡುತ್ತವೆ. ಈ ತಂತ್ರಗಳನ್ನು ಕೇವಲ ಪೂರ್ವಭಾವಿ ಅಧ್ಯಯನಗಳಲ್ಲಿ ಅಥವಾ ಅನ್ವೇಷಣಾತ್ಮಕ ಶೋಧನೆಗಳಲ್ಲಿ ಬಳಸಲಾಗುತ್ತದೆ.

## 2.8.1.1 ಪ್ರಶ್ನಾವಳಿಗಳು (ಪ್ರಶ್ನೆ ಮಾಲಿಕೆಗಳು)

ಜನಗಳ ಖಾಸಗಿ ಎನ್ನುವಂತಹ ಮಾಹಿತಿಗಳಾದ ಅವರ ನಂಬುಗೆಗಳು, ಮನೋವೃತ್ತಿಗಳು, ಅಭಿಪ್ರಾಯಗಳು, ಮೌಲ್ಯಗಳು, ಚಿತ್ತವೃತ್ತಿಗಳು ಮತ್ತು ಗುಪ್ತವಾದ ನಡವಳಿಕೆಗಳು ಇತ್ಯಾದಿಗಳಿಗಾಗಿ, ಆ ಜನಗಳ ಶಾಬ್ದಿಕ ಪ್ರತಿಕ್ರಿಯೆಗಳನ್ನು ಪಡೆಯುವುದಕ್ಕಾಗಿ, ಪ್ರಶ್ನಾವಳಿಗಳು ಮತ್ತು ಸಂದರ್ಶನಗಳನ್ನು ಆಶ್ರಯಿಸುವುದು ಅನಿವಾರ್ಯ. ಇವುಗಳ ಮೂಲಕದ ಹೊರತಾಗಿ ವ್ಯಕ್ತಿಯೊಬ್ಬನ ಖಾಸಗಿ ಪ್ರಪಂಚದೊಳಗೆ ಪ್ರವೇಶ ಗಿಟ್ಟಿಸುವುದು ಅಸಾಧ್ಯ.

ಆದ್ದರಿಂದ, ಸಮಾಜ ವಿಜ್ಞಾನ ಸಂಶೋಧನೆಯ ಪರಿಕರಗಳಲ್ಲಿ ಪ್ರಶ್ನಾವಳಿಗಳು ಮತ್ತು ಸಂದರ್ಶನಗಳು ಬಹಳ ಮುಖ್ಯವಾದ ಸ್ಥಾನವನ್ನು ಅಲಂಕರಿಸಿವೆ. ಆದರೂ, ಈ ಪರಿಕರಗಳ ಉಪಯುಕ್ತತೆ ಆಧಾರಿತವಾಗಿರುವುದು ಪ್ರತಿಕ್ರಿಯೆಗಳ ವಿಶ್ವಾಸಾರ್ಹತೆ ಮತ್ತು ಸಮಂಜಸತೆಗಳ ಮೇಲೆ "ಯಾವ ಸರ್ವೇಕ್ಷಣೆಯೂ ಅದರ ಪ್ರಶ್ನಾವಳಿಗಿಂತ ಉತ್ತಮವಾಗಿರುವುದಿಲ್ಲ" ಎಂದು ಬಹಳಷ್ಟು ಬಾರಿ ಹೇಳಲಾಗುತ್ತದೆ. ತಪ್ಪಾದ ಪದ ಪ್ರಯೋಗಗಳು ಖಚಿತತೆ ಇಲ್ಲದ, ವಿಶ್ವಾಸಾರ್ಹವಲ್ಲದ ಪ್ರತಿಕ್ರಿಯೆಗಳಿಗೆ ಕಾರಣವಾಗಬಲ್ಲವು. ಪ್ರಶ್ನೆಗಳನ್ನು ತಯಾರು ಮಾಡಲು ಹಲವಾರು ನಿರ್ದೇಶಕ ಸೂತ್ರಗಳಿವೆ. ಸರಳವಾದ ಭಾಷೆಯನ್ನು ಬಳಸಿ. ಅಸ್ಪಷ್ಟವಾದ, ಅನಿರ್ದಿಷ್ಟವಾದ ಪ್ರಶ್ನೆಗಳನ್ನು ಕೇಳಬೇಡಿ; ದ್ವಂದ್ವಾರ್ಥದ ಮತ್ತು ಜವಾಬನ್ನು ನಿರ್ದೇಶಿಸುವಂತಹ ಪ್ರಶ್ನೆಗಳಿಂದ ರಕ್ಷಿಸಿಕೊಳ್ಳಿ. ಅತ್ಯಂತ ಆವಶ್ಯಕ ಎನಿಸುವ ಮಟ್ಟಕ್ಕಿಂತ ಪ್ರಶ್ನಾವಳಿಯು ಉದ್ದ ಇರಬಾರದು. ಉದ್ದವಾದ ಅಸಂಬದ್ಧವಾಗಿ ಅಲೆದಾಡುವ ಪ್ರಶ್ನಾವಳಿಗಳು ಯುಕ್ತವಾದುವುಗಳಲ್ಲ.

ಪ್ರಶ್ನೆಗಳನ್ನು ಬೇರೆ ಬೇರೆ ರೀತಿಯಾಗಿ ಹೊಂದಿಸಬಹುದು. ಪ್ರಶ್ನೆಯೊಂದನ್ನು ಕೇಳಿ, ಉತ್ತರ ನೀಡುವವರು ತಮಗೆ ಇಷ್ಟಬಂದಂತೆ ಉತ್ತರಿಸಲು ಅವಕಾಶ ನೀಡಬಹುದು(ಮುಕ್ತಾಂತ್ಯದ ಪ್ರಶ್ನೆಗಳು). ಇಲ್ಲಿ, ಉತ್ತರಿಸುವವನಿಗೆ ಪೂರ್ವನಿರ್ಧಾರಿತವಾದ ಉತ್ತರಗಳ ಪಟ್ಟಿಯನ್ನು ನೀಡಲಾಗುವುದಿಲ್ಲ. ಅಂದರೆ, ತನ್ನದೇ ಆದ ಉತ್ತರಗಳನ್ನು ಬರೆಯಲು ಆತನಿಗೆ ಅವಕಾಶ ನೀಡಲಾಗುವುದು.

ಇದಕ್ಕೆ ಬದಲಿಯಾದ ರೀತಿಯೆಂದರೆ, ಪ್ರಶ್ನೆಯೊಂದನ್ನು ಕೇಳಿ ಅದಕ್ಕೆ ಸಾಧ್ಯವಾದಷ್ಟು ಪ್ರಮಾಣದಲ್ಲಿ ನಿರ್ದಿಷ್ಟ ಸಂಖ್ಯೆಯ ಪರ್ಯಾಯ ಉತ್ತರಗಳನ್ನು ನೀಡಿ, ಉತ್ತರ ನೀಡುವವನು ತಾನಿರುವ ಸ್ಥಿತಿಯಲ್ಲಿ ತನಗೆ ಅತ್ಯಂತ ಸಮರ್ಪಕವೆನಿಸುವ ಒಂದು ಉತ್ತರವನ್ನು ಆಯ್ಕೆ ಮಾಡುವ ಅವಕಾಶ ನೀಡುವುದು (ನಿರ್ಧರಿತ ಪರ್ಯಾಯ ಅಥವಾ ಪರಿಮಿತ ಅಂತ್ಯದ ಪ್ರಶ್ನೆಗಳು). ಹೌದು ಅಥವಾ ಇಲ್ಲ, ಒಪ್ಪಿಗೆ ಅಥವಾ ಒಪ್ಪಿಗೆ ಇಲ್ಲ, ಸ್ವೀಕಾರ ಮತ್ತು ತಿರಸ್ಕಾರದ ವಿವಿಧ ದರ್ಜೆಗಳು ಅಥವಾ ಪ್ರತಿಕ್ರಿಯೆ ನೀಡಲು ಹಲವು ಆಯ್ಕೆಗಳನ್ನು ನೀಡುವ ಪ್ರಶ್ನೆಗಳೆಲ್ಲವೂ ಪರಿಮಿತ ರೀತಿಯ ಪ್ರಶ್ನೆಗಳಿಗೆ ಉದಾಹರಣೆಗಳು.

ಎರಡೂ ರೀತಿಯ ಪ್ರಶ್ನೆಗಳಿಗೂ ತಮ್ಮದೇ ಆದ ಗುಣಾವಗುಣಗಳಿವೆ. ಪರಿಮಿತ ರೀತಿಯ ಪ್ರಶ್ನೆಗಳಿಗೆ ಉತ್ತರಿಸುವುದು ಸುಲಭ. ಸಾಂಕೇತಿಕೀಕರಣ ಮತ್ತು ವಿಶ್ಲೇಷಣೆಯೂ ಸರಾಗ. ಉತ್ತರ ನೀಡುವ ಎಲ್ಲರಿಗೂ ಸಾಮಾನ್ಯವಾದ ಒಂದೇ ಪರಾಮರ್ಶೆಯ ಚೌಕಟ್ಟನ್ನು ಇದು ಒದಗಿಸುತ್ತದೆ. ಆದರೆ ಕೊಟ್ಟಿರುವ ಪರ್ಯಾಯ ಪ್ರತಿಕ್ರಿಯೆ / ಉತ್ತರಗಳು ಅಸಂಗತವೂ, ಅಯುಕ್ತವೂ ಆಗಿರುವ ಸಾಧ್ಯತೆಗಳು ಇಲ್ಲದಿಲ್ಲ. ಪ್ರಶ್ನಾವಳಿಯು ಸಾಧ್ಯವಿರುವ ಎಲ್ಲ ಉತ್ತರಗಳನ್ನು ಗುರುತಿಸದೇ ಹೋಗಿರಬಹುದು. ಹೀಗಾಗಿ ಉತ್ತರ ನೀಡುವವನು, ಅವನ ನಿಜವಾದ ಗ್ರಹಿಕೆಯನ್ನು ಉತ್ತರವು ಸಂಪೂರ್ಣವಾಗಿ ಪ್ರತಿನಿಧಿಸುವಂತೆ ಇರದಿದ್ದರೂ, ಬಲವಂತವಾಗಿ, ಪಟ್ಟಿಯಲ್ಲಿ ಕೊಟ್ಟಿರುವ ಯಾವುದೋ ಒಂದನ್ನು ಆಯ್ಕೆ ಮಾಡುವಂತೆ ಆಗಬಹುದು. ಬದಲಿಗೆ, ಮುಕ್ತಾಂತ್ಯದ ಪ್ರಶ್ನೆಗಳು ಉತ್ತರ ನೀಡುವವನು ಏನನ್ನು ಹೇಳಬೇಕೆಂದುಕೊಂಡಿದ್ದಾನೋ ಅದನ್ನ ಹೇಳುವ ಅವಕಾಶವನ್ನು ನೀಡುತ್ತದೆ. ಆದರೆ ಮುಕ್ತಾಂತ್ಯವಾದ ಪ್ರಶ್ನೆಗಳಿಗೆ ಸಂಬಂಧಿಸಿದ ಪ್ರಶ್ನೆಗಳು ಹಲವಾರು: ಉತ್ತರ ನೀಡುವವರು ಮನಸೋ ಇಚ್ಛೆ, ಬಹಳ ಹೆಚ್ಚು ಅಥವಾ ಬಹಳ ಕಡಿಮೆ ಪ್ರಮಾಣದಲ್ಲಿ ಹೇಳಿಕೆ ನೀಡಬಹುದು. ಪರಾಮರ್ಶೆಯ ಸಾಮಾನ್ಯವಾದ ಚೌಕಟ್ಟು ಇಲ್ಲದೇ ಇರುವುದರಿಂದ ಪ್ರತಿಯೊಬ್ಬನೂ ಪ್ರಶ್ನೆಯನ್ನು ತನ್ನದೇ ಆದ ರೀತಿಯಲ್ಲಿ ಅರ್ಥೈಸಿಕೊಳ್ಳಬಹುದು ಮತ್ತು ಸಾಂಕೇತಿಕೀಕರಣ (ಕೋಡ್) ಮಾಡುವವರು ಪ್ರತಿಕ್ರಿಯೆಗಳನ್ನು ವ್ಯಕ್ತಿಗತವಾದ ರೀತಿಯಲ್ಲಿ ಸಾಂಕೇತಿಕೀಕರಣಗೊಳಿಸಬಹುದು. ಸಂದರ್ಶನಗಳಲ್ಲಿ ಮುಕ್ತಾಂತ್ಯವಾದ ಪ್ರಶ್ನೆಗಳಿಗೆ ನೀಡುವಂತಹ ಮೌಖಿಕವಾದ ಉತ್ತರಗಳನ್ನು ದಾಖಲಿಸುವುದು ಕಷ್ಟ.

## 2.8.2 ಸಂದರ್ಶನಗಳು

ಒಂದು ಸರ್ವೇಕ್ಷಣ ಸಂದರ್ಶನವೆಂದರೆ, ಅಧ್ಯಯನ ನಡೆಯುತ್ತಿರುವ ವಿಷಯಕ್ಕೆ ಸಂಬಂಧಿಸಿದಂತೆ ಉತ್ತರ ಹೇಳುವವನಿಂದ ಮಾಹಿತಿ ಪಡೆಯಲು, ಆತನೊಡನೆ ಸಂದರ್ಶಕ ನಡೆಸುವ ಸಂಭಾಷಣೆ. ಹಲವಾರು ಸ್ವರೂಪದ ಸಂದರ್ಶನಗಳಿವೆ. ಅವು ಕೆಲವೊಮ್ಮೆ ಬಹಳ ಕ್ರಮಬದ್ಧವಾದ ರಚನೆಯುಳ್ಳದ್ದೂ, ವಿಧಿಬದ್ಧವೂ ಆಗಿದ್ದರೆ, ಮಗದೊಮ್ಮೆ ಅಷ್ಟೇನೂ ಕ್ರಮಬದ್ಧವಾಗಿಲ್ಲದೆಯೂ ಹೆಚ್ಚು ಅನೌಪಚಾರಿಕವೂ ಆಗಿರಬಹುದು. ಸಂದರ್ಶನದ ಅವಧಿಯೂ ಸಹ ಬಹಳ ಅಲ್ಪಾವಧಿಯಿಂದ ಹಿಡಿದು ಒಂದು ಗಂಟೆ ಅಥವಾ ಅದಕ್ಕೂ ದೀರ್ಘಕಾಲದವರೆಗೆ ವ್ಯಾಪಿಸಬಹುದು. ಸಂದರ್ಶನದ ಯಶಸ್ಸು ಮುಖ್ಯವಾಗಿ ಎರಡು ಅಂಶಗಳ ಮೇಲೆ ಅವಲಂಬಿತವಾಗಿರುತ್ತದೆ.

ಅ. ಸಂದರ್ಶಕನ ಪರಿಣತಿ / ಕೌಶಲ್ಯ, ಮತ್ತು

ಆ. ಪ್ರಶ್ನೆಗಳನ್ನು ಅರ್ಥಮಾಡಿಕೊಳ್ಳುವ ಪ್ರತಿಕ್ರಿಯೆಯನ್ನು ಶಾಬ್ದಿಕ ರೂಪದಲ್ಲಿ ಹೊರತರುವ ಉತ್ತರ ನೀಡುವವರ ಸಾಮರ್ಥ್ಯ ಮತ್ತು ಪ್ರತಿಕ್ರಿಯಿಸುವ ಅವರ ಉದ್ದೇಶ.

ಸಂದರ್ಶನ ನಡೆಸುವುದು ಒಂದು ಕಲೆ. ಆದ್ದರಿಂದ ಸಂದರ್ಶಕನಿಗೆ ಸರಿಯಾದ ತರಬೇತಿ ಮತ್ತು ಕೌಶಲ್ಯ ಅವಶ್ಯಕ. ಪ್ರತಿಕ್ರಿಯೆ ನೀಡುತ್ತಿರುವವರು ನೇರವಾಗಿ, ಯಾವ ಮುಚ್ಚುಮರೆಯಿಲ್ಲದಂತೆ ಯಥಾವತ್ತಾಗಿ ಉತ್ತರ ಹೇಳಲು ಅನುವಾಗುವಂತಹ ಪರಿಸ್ಥಿತಿಯನ್ನು ನಿರ್ಮಾಣ ಮಾಡಬೇಕು.

ಸ್ನೇಹಪರವಾದ ವಾತಾವರಣವನ್ನು ಸೃಷ್ಟಿಸಿ, ಪ್ರತಿಕ್ರಿಯೆ ನೀಡುವವರನ್ನು ಆರಾಮವಾಗಿಟ್ಟು, ಅವರಲ್ಲಿ ಗೌಪ್ಯತೆಯ, ಆಪ್ತತೆಯ, ಭರವಸೆಯ ಭಾವವನ್ನು ಮೂಡಿಸಿಕೊಂಡು ಉತ್ತಮವಾದ ಬಾಂಧವ್ಯವನ್ನು ಬೆಳೆಸಿಕೊಳ್ಳಬೇಕು. ಸಂದರ್ಶಕ ಕೆಲಸವೂ ವರದಿಗಾರನ ಕೆಲಸದಂತೆಯೇ ತನ್ನ ಒಲವುಗಳನ್ನು ಬಹಿರಂಗಗೊಳಿಸದೆ ಬೇರೆಯವರಿಂದ ಬರುವ ಅಭಿಪ್ರಾಯಗಳನ್ನು ಯಥಾವತ್ತಾಗಿ ಸ್ವೀಕರಿಸುವುದು. ಪ್ರತಿಕ್ರಿಯೆಗಳನ್ನು ಆತ ನಿಷ್ಕೃಷ್ಟವಾಗಿ, ಸಾಧ್ಯವಾದಷ್ಟು ಮಟ್ಟಿಗೆ ಪದಶಃ (ಅಕ್ಷರಶಃ) ಗುರುತು ಹಾಕಿಕೊಳ್ಳಬೇಕು.

ಪ್ರಶ್ನಾವಳಿಗಿಂತ ಸಂದರ್ಶನಗಳಿಗೆ ಕೆಳಕಂಡ ವಿಶೇಷತೆಗಳಿವೆ ಎಂದು ಹೇಳಲಾಗುತ್ತದೆ.

* ಅನಕ್ಷರಸ್ಥರೊಂದಿಗೂ, ಚಿಕ್ಕಮಕ್ಕಳೊಂದಿಗೂ ಈ ವಿಧಾನವನ್ನು ಬಳಕೆ ಮಾಡಬಹುದು.
* ಅಂಚೆಯ ಮೂಲಕವಾದ ಪ್ರಶ್ನಾವಳಿಗಳಿಗಿಂತ ಉತ್ತಮವಾದ ಜನಸಮೂಹದ ಮಾದರಿಯನ್ನು ಇದು ಒದಗಿಸುತ್ತದೆ.
* ಹೆಚ್ಚಿನ ನಮ್ಯತೆಯನ್ನು ಇದು ಹೊಂದಿದೆ
* ಸಂದರ್ಶಕನು
    i. ಸಂದೇಹಗಳನ್ನು ನಿವಾರಿಸಿಕೊಳ್ಳುವುದು ಸಾಧ್ಯ;
    ii. ಮುಕ್ತಾಂತ್ಯವಾದ ಪ್ರಶ್ನೆಗಳನ್ನು ಕೇಳಿ ಅನ್ವೇಷಣೆ ನಡೆಸಬಹುದು, ಮತ್ತು
    iii. ಪ್ರತಿಕ್ರಿಯೆ ನೀಡುವವರ ನಿಜವಾದ ವರ್ತನೆಯನ್ನು ಪರಿವೀಕ್ಷಿಸಬಹುದು ಮತ್ತು ಇದೇ ಕಾರಣದಿಂದ ಆತನ ಬಗ್ಗೆ ಹೆಚ್ಚುವರಿ ಮಾಹಿತಿಯನ್ನು ಸಂಗ್ರಹಿಸಬಹುದು.

## 2.9 ಪ್ರಕರಣ ಅಧ್ಯಯನ ಮತ್ತು ಇತರ ಗುಣಾತ್ಮಕ ವಿಧಾನಗಳು

### 2.9.1 ಪ್ರಕರಣ ಅಧ್ಯಯನ

ಸಾಮಾಜಿಕ ಮತ್ತು ವರ್ತನಾ ವಿಜ್ಞಾನಗಳಲ್ಲಿ ಪ್ರಕರಣ ಅಧ್ಯಯನ ವಿಧಾನವು ಬಹಳ ಜನಪ್ರಿಯವಾದುದು. ಸಂವಹನ ಸಂಶೋಧನೆಯಲ್ಲಿ ಇದರ ಬಳಕೆಯೂ ಸಾಮಾನ್ಯವಾದುದೇ. ಹೆಸರೇ ಸೂಚಿಸುವಂತೆ, ಒಂದು ಪ್ರಕರಣವನ್ನು ಅದರ ಎಲ್ಲಾ ವಿವರಗಳೊಂದಿಗೆ ಅಧ್ಯಯನ ಮಾಡುವುದೇ ಈ ವಿಧಾನ. ಶೋಧನೆ ನಡೆಯುತ್ತಿರುವ ಒಂದು ನಿರ್ದಿಷ್ಟವಾದ ಪ್ರಕರಣವನ್ನು ಕುರಿತಂತೆ 'ಎಲ್ಲ'ವನ್ನೂ ಅರ್ಥಮಾಡಿಕೊಳ್ಳುವ ಪ್ರಯತ್ನ ಮಾಡಲಾಗುತ್ತದೆ. ಬಹಳ ಹೆಚ್ಚಿನ ಸಂಖ್ಯೆಯಲ್ಲಿ ವಸ್ತುಗಳನ್ನು ಆಯ್ದು, ಅವುಗಳ ಕೆಲವೊಂದು ಗುಣಧರ್ಮಗಳನ್ನು ಮಾತ್ರ ಅಧ್ಯಯನ ಮಾಡುವ ಸರ್ವೇಕ್ಷಣಾ ವಿಧಾನಗಳಿಗಿಂತ ಇದು ವಿಭಿನ್ನವಾದುದು. ಒಂದೇ ಪ್ರಕರಣ ಎಂದರೆ, ಅದು ಕೇವಲ ಒಬ್ಬ ವ್ಯಕ್ತಿ ಅಥವಾ ಒಂದು ಘಟನೆಯನ್ನು ಕುರಿತಾಗಿಯೂ ಇರಬಹುದು.

ಪ್ರಕರಣ ಅಧ್ಯಯನಕ್ಕೆ ಸಂಬಂಧಿಸಿದಂತೆ ವಿಷಯಸಂಗ್ರಹಣೆ ಮಾಡಲು ದತ್ತಾಂಶ ಸಂಗ್ರಹಣೆಯ ಹಲವಾರು ವಿಧಾನಗಳನ್ನು ಬಳಸಬಹುದು. ಚಾರಿತ್ರಿಕ ವಿಶ್ಲೇಷಣೆ, ಗಾಢವಾದ (ತಳಸ್ಪರ್ಶಿ) ಸಂದರ್ಶನಗಳು, ಸಹಭಾಗಿ ಪರಿವೀಕ್ಷಣೆಯ ಕಾರ್ಯರೀತಿಗಳು ಮತ್ತು ಇತರ ಗುಣಾತ್ಮಕ ವಿಧಾನಗಳು ಪ್ರಕರಣ ಅಧ್ಯಯನದ ದಾರಿಗೆ ಉಪಯೋಗಿ ಸೂತ್ರಗಳಾಗುತ್ತವೆ.

ಪ್ರಕರಣ ಅಧ್ಯಯನಗಳು ಸಾಮಾನ್ಯವಾಗಿ, ಯಾವುದೇ ವಿಷಯವನ್ನು ರುಜುವಾತುಗೊಳಿಸುವುದಿಲ್ಲ, ಸದೃಶವಾದ ಪ್ರಕರಣಗಳಲ್ಲಿ ಸಾಧಾರಣೀಕರಣಗೊಳಿಸುವುದಕ್ಕೂ ಅವು ಹೆಚ್ಚಿನ ಅವಕಾಶವನ್ನು ನೀಡುವುದಿಲ್ಲ. ಆದರೆ, ಈ ವಿಧಾನದ ಮಹತ್ವ ಇರುವುದು, ಬಹಳ ಹೆಚ್ಚು ಸಂಖ್ಯೆಯ ಪರಿವೀಕ್ಷಣೆಗಳನ್ನೂ, ಹೊಸ ಹೊಳಹುಗಳು ಮತ್ತು ಅಂತರ್ದೃಷ್ಟಿಗಳನ್ನು ನೀಡುವ, ಅದರ ಮುಖಾಂತರ ದೊಡ್ಡ ಮಾದರಿಗಳನ್ನು ಕುರಿತಂತೆ ಮತ್ತು ಹೆಚ್ಚಿನ ಶೋಧನೆಗಳನ್ನು ಪ್ರಚೋದಿಸುವಲ್ಲಿ, ಸಾಧಾರಣೀಕರಣಕ್ಕೆ ಅಸ್ಪದವೀಯುದಂತಹ ಸನ್ನಿವೇಶಗಳಲ್ಲಿ, ಸಾಧಾರಣೀಕರಣದ ಸಾಧ್ಯತೆಯೆಡೆಗೆ ದಿಕ್ಕು ತೋರುವಲ್ಲಿ, ಸಾಮಾನ್ಯವಾದುದನ್ನು ಬಿಟ್ಟು ತೀರಾ ಸಮಸ್ಯೆ ಇರುವ ಪ್ರಕರಣಗಳನ್ನೋ ಅಥವಾ ಬಹಳ ಯಶಸ್ವಿಯಾದ ಪ್ರಕರಣಗಳನ್ನೋ ತೆಗೆದುಕೊಂಡು ಅದರ ಮೇಲೆ ಕೇಂದ್ರೀಕರಿಸುವ ವಿಧಾನ ಮತ್ತು ಅಧ್ಯಯನಕ್ಕೆ ತಗಲುವ ಅತಿಹೆಚ್ಚು ಕಾಲ ಇವು ಈ ಅಧ್ಯಯನ ಮಿತಿಗಳು.

## 2.9.2 ಇತರ ಗುಣಾತ್ಮಕ ವಿಧಾನಗಳು

ಮೇಲೆ ಚರ್ಚೆ ಮಾಡಲಾಗಿರುವ ಒಂದೊಂದು ಪ್ರಕರಣ ಅಧ್ಯಯನಕ್ಕೆ ಹೆಚ್ಚುವರಿಯಾಗಿ, ಕ್ಷೇತ್ರ ಪರಿವೀಕ್ಷಣೆಗಳು, ಕೇಂದ್ರ ಗುಂಪುಗಳು ಮತ್ತು ಗಾಢವಾದ ಸಂದರ್ಶನಗಳು ಇತ್ಯಾದಿಯಾದ ಹಲವು ಗುಣಾತ್ಮಕ ವಿಧಾನಗಳಿವೆ. ಕ್ಷೇತ್ರ ಪರಿವೀಕ್ಷಣೆಗಳು ವ್ಯಕ್ತ (ಪ್ರತ್ಯಕ್ಷ) ಅಥವಾ ಅವ್ಯಕ್ತ(ಪರೋಕ್ಷ)ವಾಗಿರಬಹುದು ಮತ್ತು ಪರಿವೀಕ್ಷಣೆಗೆ ನಡೆಸುತ್ತಿರುವವನು ಸಹಭಾಗಿಯಾಗಿರಬಹುದು ಅಥವಾ ಕೇವಲ ವೀಕ್ಷಕನಾಗಿರಬಹುದು. ಇವುಗಳನ್ನು ನೈಸರ್ಗಿಕವಾದ ಸ್ಥಿತಿಗಳಲ್ಲೇ ನಡೆಸಲಾಗುವುದು. ಇವಕ್ಕೆ ಹಲವಾರು ಉಪಯೋಗಗಳಿವೆ. 'ಕೇಂದ್ರ ಗುಂಪು' ವಿಧಾನವು ಗುಂಪುಗಳನ್ನು ಸಂದರ್ಶಿಸುವ ಒಂದು ತಂತ್ರ. ಒಂದು ಸಂಶೋಧನಾ ಸಮಸ್ಯೆಗೆ ಅಧ್ಯಯನದ ಪ್ರಾರಂಭಿಕ ಹಂತಗಳಲ್ಲಿ ಮಾಹಿತಿಯನ್ನು ಕಲೆ ಹಾಕಲು ಮತ್ತು ವಿಷಯವೊಂದಕ್ಕೆ ವಿಸ್ತೃತವಾದ ಶೋಧನೆಯನ್ನು ಕೈಗೆತ್ತಿಕೊಳ್ಳಬಹುದು.

## 2.9.3 ಮಾನವ ವಿಜ್ಞಾನದ ದೃಷ್ಟಿ

ಗುಣಾತ್ಮಕ ವಿಧಾನಗಳನ್ನು ಬಳಕೆ ಮಾಡುವವರಲ್ಲಿ ಪ್ರಮುಖರಾದವರೆಂದರೆ, ಮಾನವ ಶಾಸ್ತ್ರಜ್ಞರು. ಅವರಿಗೆ ವಿಶಿಷ್ಟವಾದ ಒಂದು ಸಂಶೋಧನಾ ದೃಷ್ಟಿಯಿದೆ. ಅವರ ಸಂಶೋಧನಾ ರೀತಿಯು ಕೆಲವೊಂದು ವಿಶಿಷ್ಟ, ವಿಭಿನ್ನ ಗುಣಲಕ್ಷಣಗಳನ್ನು ಹೊಂದಿದೆ. ಈ ಕೆಲವೊಂದು ಗುಣಲಕ್ಷಣಗಳನ್ನು ಅಗರ್‌ವಾಲ್ (1985) ಈ ಕೆಳಕಂಡಂತೆ ಪಟ್ಟಿ ಮಾಡಿದ್ದಾರೆ.

ಅ) ಸಮಗ್ರ ನೋಟ

ಆ) ಪ್ರಕ್ರಿಯೆಯ ವಿಶ್ಲೇಷಣೆ

ಇ) ಸ್ಫುರಣ ಮಾರ್ಗ

ಈ) ತುಲನಾತ್ಮಕ ದೃಷ್ಟಿ, ಮತ್ತು

ಉ) ಸಹಭಾಗಿ ಅವಲೋಕನ.

ಮಾನವ ವಿಜ್ಞಾನದ ದೃಷ್ಟಿಯಿಂದ ಮೇಲಿನ ಗುಣಲಕ್ಷಣಗಳನ್ನು ಸ್ಥೂಲವಾಗಿ ವಿವರಿಸೋಣ. 'ಸಮಗ್ರ ನೋಟ'ಕ್ಕೆ ಸಂಪೂರ್ಣತೆಯ ಪರಿಗಣನೆ ಅವಶ್ಯಕ. ವಿಷಯವನ್ನು "ಇಡಿಯಾಗಿ ಒಗ್ಗೂಡಿದ ರೀತಿಯಲ್ಲಿ ಗ್ರಹಿಸಿ" ಅದರ ವಿವಿಧ ರೂಪಬೇಧಗಳನ್ನು ಅರ್ಥಮಾಡಿಕೊಳ್ಳಬೇಕಾಗುತ್ತದೆ. "ಮಾನವ ಶಾಸ್ತ್ರದ ಮೂಲಭೂತವಾದ ಪ್ರಮೇಯ ಎಂದರೆ, ಸಂಪೂರ್ಣವನ್ನು ಬಿಟ್ಟು ಯಾವುದೇ ಕ್ಷೇತ್ರವನ್ನೂ, ಪೂರ್ಣವಾಗಿ ಹಾಗು ನಿಶ್ಚಿತವಾಗಿ ಅರ್ಥಮಾಡಿಕೊಳ್ಳುವುದು ಸಾಧ್ಯವೇ ಇಲ್ಲ" ಎಂದು ಬಹಳ ಚೆನ್ನಾಗಿ ಹೆಬಲ್ ಹೇಳಿದ್ದಾನೆ.

ಪ್ರಕ್ರಿಯೆಯ ವಿಶ್ಲೇಷಣೆಗೆ ಬೇರೆ ಬೇರೆ ಪರಿಕರ್ಮ(ಘಟಕ)ಗಳ ವಿಶ್ಲೇಷಣೆಯಾಗಿರದೆ ಚಲನಶೀಲ ಪ್ರಕ್ರಿಯೆಯ ಭಾಗವಾಗಿ, ಅವುಗಳ ನಡುವಿನ ಪರಸ್ಪರ ಪ್ರಭಾವಗಳು ಮತ್ತು ಸಂವಹನಗಳ ವಿಶ್ಲೇಷಣೆಯಾಗಿರಬೇಕು.

ಸಂಗತಿಯು ನಡೆಯುವ ನಿರ್ದಿಷ್ಟ ಸಂಸ್ಕೃತಿಯ ಭೂಮಿಕೆಯಲ್ಲಿ ಅದನ್ನು ವಿಶ್ಲೇಷಿಸುವ ಪರಿಯೇ ಸ್ಮರಣ ಮಾರ್ಗ. ಸಾರ್ವತ್ರಿಕವಾಗಿ ಅಂಗೀಕರಿಸಲ್ಪಟ್ಟಿರುವ ವರ್ಗಗಳ ಆಧಾರದ ಮೇಲೆ ವಿಶ್ಲೇಷಣೆ ನಡೆಸುವ 'ಸಮಗ್ರ ನೋಟ'ದ ಮಾರ್ಗಕ್ಕಿಂತ ಇದು ಭಿನ್ನವಾದುದು.  ಮಾನವ ವಿಜ್ಞಾನದ ರೀತಿಯು ವಿಶೇಷವಾಗಿ ಸಹಭಾಗಿ ಅವಲೋಕನವನ್ನು ಬಳಸುತ್ತದೆ. ಈ ವಿಧಾನದಲ್ಲಿ ಸಂಶೋಧಕನು ಅವರ ದೈನಂದಿನ ಜೀವನದಲ್ಲಿ ಸಹಭಾಗಿಯಾಗಿ, ಒಂದು ಕಾಲದ ಅವಧಿಯವರೆಗೂ ಅವರ ಪರಿವೀಕ್ಷಣೆ ನಡೆಸುತ್ತಾ, ಅದೇ ಗುಂಪಿನ ಭಾಗವಾಗುತ್ತಾನೆ.

## 2.10. ಸಾರಾಂಶ

ಎಲ್ಲಾ ವಿಜ್ಞಾನಗಳಿಗೂ ಮುಖ್ಯವಾಗಿ ಮೂರು ಗುರಿಗಳಿರುತ್ತವೆ. ವಿವರಿಸುವುದು, ಭವಿತವ್ಯವನ್ನು ಪ್ರವಾದಿಸುವುದು ಮತ್ತು ನಿಯಂತ್ರಿಸುವುದು. ಸಂವಹನ ವಿಜ್ಞಾನವೂ ಇವೇ ಉದ್ದೇಶಗಳನ್ನು ಹೊಂದಿದೆ. ಈ ಗುರಿಗಳನ್ನು ತಲುಪಲು, ಸಂವಹನ ಸಂಶೋಧಕರು ಸಂವಹನ ಪ್ರಕ್ರಿಯೆ ಮತ್ತು ಪರಿಣಾಮಗಳನ್ನು ಕುರಿತಂತೆ ಹಲವಾರು ಅಧ್ಯಯನಗಳನ್ನು ಕೈಗೊಳ್ಳುತ್ತಾರೆ. ಈ ಅಧ್ಯಯನಗಳು ಅನ್ವೇಷಣಾತ್ಮಕ, ವರ್ಣನಾತ್ಮಕ ಅಥವಾ ವಿವರಣಾತ್ಮಕ ಸ್ವರೂಪದ್ದಾಗಿರಬಹುದು.

ಸಂವಹನ ಸಂಶೋಧಕರು ಸಮಾಜ ವಿಜ್ಞಾನ, ವರ್ತನಾ ವಿಜ್ಞಾನ ಹಾಗೂ ರಾಜಕೀಯ ವಿಜ್ಞಾನಗಳಲ್ಲಿ ಬಳಕೆಯಲ್ಲಿರುವ ಹಲವಾರು ವಿಧಾನಗಳನ್ನು ಉಪಯೋಗಿಸುತ್ತಾರೆ. ಮುಖ್ಯವಾದ ಈ ವಿಧಾನಗಳಲ್ಲಿ ಚಾರಿತ್ರಿಕ ವಿಧಾನ, ವಿಷಯ ವಿಶ್ಲೇಷಣೆ, ಪ್ರಯೋಗಾತ್ಮಕ ವಿಧಾನ, ಸರ್ವೇಕ್ಷಣಾ ಸಂಶೋಧನೆ, ಪ್ರಕರಣ ಅಧ್ಯಯನ ಮತ್ತು ಇತರ ಗುಣಾತ್ಮಕ ಅಧ್ಯಯನಗಳೂ ಸೇರಿವೆ. ಪ್ರತಿಯೊಂದು ವಿಧಾನಕ್ಕೂ ತನ್ನದೇ ಆದ ವಿಶೇಷ ಗುಣಗಳೂ, ಮಿತಿಗಳೂ ಇದ್ದು, ನಿರ್ದಿಷ್ಟ ರೀತಿಯ ಶೋಧನೆಗಳಿಗೆ ಅವು ಚೆನ್ನಾಗಿ ಒಗ್ಗಿಕೊಳ್ಳುತ್ತವೆ.

ದಸ್ತಾವೇಜುಗಳನ್ನು, ದಾಖಲೆಗಳನ್ನು, ವಿಶ್ಲೇಷಿಸುವುದನ್ನು ಚಾರಿತ್ರಿಕ ಚರಿತ್ರೆ ಒಳಗೊಳ್ಳುತ್ತದೆ. ಈ ವಿಶ್ಲೇಷಣೆಯ ಆಧಾರದ ಮೇಲೆ ತೀರ್ಮಾನಗಳನ್ನು ತೆಗೆದುಕೊಳ್ಳಲಾಗುತ್ತದೆ. ಮಾಧ್ಯಮ ಉತ್ಪನ್ನಗಳಲ್ಲಿ ಅಡಕವಾದ ವಸ್ತು, ವಿಷಯಗಳನ್ನು ವಸ್ತುನಿಷ್ಠವಾಗಿ, ಕ್ರಮಬದ್ಧವಾಗಿ, ಪರಿಮಾಣಾತ್ಮಕವಾಗಿ ವಿವರಿಸಲು ಪ್ರಾಯೋಗಿಕ ವಿಧಾನವು ಸ್ವತಂತ್ರವು ಚರಾಂಶಗಳನ್ನು ಬದಲಾವಣೆ ಮಾಡಿ, ಈ ವ್ಯತ್ಯಾಸವು ಅವಲಂಬಿ ಚರಾಂಶದ ಮೇಲೆ ಬೀರುವ ಪರಿಣಾಮವನ್ನು ಮಾಪನ ಮಾಡುತ್ತದೆ. (ಉಳಿದೆಲ್ಲ ಚರಾಂಶಗಳನ್ನೂ ಸ್ಥಿರವಾಗಿಟ್ಟು) ಚರಾಂಶಗಳ ನಡುವಣ ಸಂಬಂಧಗಳ ಸ್ವರೂಪವನ್ನು ಅನ್ವೇಷಿಸಲು ಜನಸಮೂಹವನ್ನು ವರ್ಣಿಸಲು ಮತ್ತು ಕೆಲವೊಮ್ಮೆ, ಪೂರ್ವಕಲ್ಪನೆಯನ್ನು ಪರೀಕ್ಷಿಸಲು, ಹೆಚ್ಚು ಪ್ರಮಾಣದಲ್ಲಿ ದತ್ತಾಂಶಗಳ ಸಂಗ್ರಹಣೆ ಮಾಡಲು ಸರ್ವೇಕ್ಷಣ ಸಂಶೋಧನೆಯು ಬಹಳ ಯುಕ್ತವಾದುದು. ಸರ್ವೇಕ್ಷಣೆಯ ಯಶಸ್ಸು ನಿರ್ಧಾರವಾಗುವುದು, ಪ್ರಾತಿನಿಧಿತ ಮಾದರಿಗಳು, ವಿಶ್ವಾಸಾರ್ಹ ಹಾಗು ಸಮಂಜಸವಾದ ದತ್ತಾಂಶ ಸಂಗ್ರಹಣೆಯ ಪರಿಕರಗಳು ಮತ್ತು ವಿಧಾನಗಳ ಮೇಲೆ.

## 2.11 ಪಾರಿಭಾಷಿಕ ಕೋಶ

After-only design --- ಪ್ರಯೋಗದ ಉಪಚಾರವನ್ನು ಅನ್ವಯಿಸಿದ ನಂತರ ಮಾತ್ರ ಅವಲಂಬಿತ ಚರಾಂಶವನ್ನು (ನಂತರ ಮಾತ್ರದ ವಿನ್ಯಾಸ) ಮಾಪನಮಾಡುವ ಪ್ರಯೋಗ ವಿನ್ಯಾಸ.

Before - after design --- ಪ್ರಯೋಗದ ಉಪಚಾರವನ್ನು ಅನ್ವಯಿಸುವ ಪೂರ್ವದಲ್ಲಿ ಒಮ್ಮೆ ಮತ್ತು ಅನ್ವಯ ಮಾಡಿದ (ಪೂರ್ವೋತ್ತರ ವಿನ್ಯಾಸ) ನಂತರ ಮತ್ತೊಮ್ಮೆ, ಒಟ್ಟು ಎರಡು ಬಾರಿ ಅವಲಂಬಿ ಚರಾಂಶವನ್ನು ಮಾಪನ ಮಾಡುವ ಪ್ರಯೋಗ ವಿನ್ಯಾಸ.

ವಿಷಯ ವಿಶ್ಲೇಷಣೆ --- ಸಂವಹನದ ವಸ್ತು ವಿಷಯಗಳನ್ನು ವಸ್ತುನಿಷ್ಠವಾಗಿ, ಕ್ರಮಬದ್ಧವಾಗಿ ಮತ್ತು ಪರಿಮಾಣಾತ್ಮಕವಾಗಿ ವಿವರಿಸುವ ಅಥವಾ ವರ್ಗೀಕರಿಸುವ ಕಾರ್ಯರೀತಿ.

ಪರಿಮಿತಿ ಅಂತ್ಯದ ಪ್ರಶ್ನೆ --- ನೀಡಲಾಗಿರುವಂತಹ ಪರ್ಯಾಯವಾದ ಪ್ರತಿಕ್ರಿಯೆಗಳ ಗುಂಪಿನಿಂದ ಆಯ್ಕೆ ಮಾಡಿಕೊಂಡು ಉತ್ತರಿಸುವಂತಹ ಪ್ರಶ್ನೆ.

ನಿಯಂತ್ರಿತ ಗುಂಪು --- ಪ್ರಯೋಗದ ಉಪಚಾರವನ್ನು ಅನ್ವಯ ಮಾಡದೆ ಇರುವಂತಹ ಗುಂಪು ಪ್ರಯೋಗದ ಉಪಚಾರವನ್ನು ಅನ್ವಯಿಸಿರುವ ಗುಂಪಿನೊಂದಿಗೆ ಹೋಲಿಕೆ ಮಾಡಲು ಇದನ್ನು ಆಧಾರವಾಗಿ ಬಳಸಲಾಗುತ್ತದೆ.

ಅವಲಂಬಿ(ತ) ಚರಾಂಶ --- ಪ್ರಾಯೋಗಿಕ ಉಪಚಾರದ ಪ್ರಭಾವದಿಂದ (ಸ್ವತಂತ್ರ ಚರಾಂಶದ ಬದಲಾವಣೆಯಿಂದ ವ್ಯತ್ಯಾಸಗೊಳ್ಳುತ್ತದೆ ಎಂದು ಪರಿಗಣಿಸಲಾಗುವ, ಪರಿವೀಕ್ಷಣೆಯಲ್ಲಿ ಇರುವ ಒಂದು ವಿಷಯ(ಚರಾಂಶ).

ಪ್ರಾಯೋಗಿಕ ಗುಂಪು --- ಪ್ರಾಯೋಗಿಕ ಉಪಚಾರವನ್ನು ಅಥವಾ ಉಪಚಾರದ ಮಟ್ಟವನ್ನು ಅನ್ವಯ ಮಾಡಲಾಗಿರುವ ಸಮೂಹ.

ಪೂರ್ವಕಲ್ಪನೆ --- ಎರಡು ಅಥವಾ ಹೆಚ್ಚು ಚರಾಂಶಗಳ ನಡುವಿನ ಸಂಬಂಧದ ಸಾಧ್ಯತೆ ಕುರಿತಾದ ಪ್ರಸ್ತಾಪ ಅಥವಾ ಹೇಳಿಕೆ.

ಸ್ವತಂತ್ರ ಚರಾಂಶ --- ಇದರ ಪ್ರಭಾವವನ್ನು ಮತ್ತೊಂದು ಚರಾಂಶ (ಅವಲಂಬಿತ)ದ ಮೇಲೆ ಅಧ್ಯಯನ ಮಾಡುವ ಉದ್ದೇಶದಿಂದ, ಪ್ರಯೋಗಕಾರನಿಂದ ಬದಲಾವಣೆ ಮಾಡಲ್ಪಡುವ ವಿಷಯ (ಚರಾಂಶ) ಪರಿವೀಕ್ಷಣೆಯ ಕೇಂದ್ರಬಿಂದು.

ಮುಕ್ತಾಂತ್ಯದ ಪ್ರಶ್ನೆ --- ಪ್ರತಿಕ್ರಿಯೆ/ಉತ್ತರ ನೀಡುವವನು ತನ್ನದೇ ಆದ ರೀತಿಯಲ್ಲಿ ಸ್ವತಂತ್ರವಾಗಿ ಉತ್ತರಗಳನ್ನು ಹೇಳುವುದಕ್ಕೆ ಆಸ್ಪದ ನೀಡುವ ಪ್ರಶ್ನೆ ಆಯ್ಕೆ ಮಾಡಲು ಪರ್ಯಾಯವಾದ ಪ್ರತಿಕ್ರಿಯೆಗಳನ್ನು ನೀಡಿರುವುದಿಲ್ಲ.

ಜನ ಸಮೂಹ --- ಚೆನ್ನಾಗಿ ನಿರ್ದೇಶಿಸಲ್ಪಟ್ಟ ಕೆಲವೊಂದು ಗುಣಧರ್ಮಗಳನ್ನೋ/ಮಾನಕಗಳ ಮಟ್ಟವನ್ನೋ ಹೊಂದಿರುವಂತಹ ಘಟಕಗಳ ಸಮಷ್ಟಿ.

ಮಾದರಿ --- ಕೆಲವೊಂದು ನಿರ್ದಿಷ್ಟ ಕಾರ್ಯಸೂಚಿಗಳನ್ನು ಅನುಸರಿಸಿ, ಅಧ್ಯಯನಕ್ಕೆಂದು ಆಯ್ಕೆ ಮಾಡಲಾದ ಜನಸಮೂಹದ ಘಟಕಗಳ ಉಪವರ್ಗ.

## 2.12 ನಿಮ್ಮ ಪ್ರಗತಿ ಪರಿಶೀಲನೆ

ಸೂಚನೆ: ನಿಮ್ಮ ಉತ್ತರಗಳನ್ನು ಈ ಘಟಕದಲ್ಲಿ ನೀಡಲಾಗಿರುವ ವಿವರಗಳೊಂದಿಗೆ ಹೋಲಿಸಿ.

1. ಸಂಭವನೀಯತೆಯನ್ನು ಆಧರಿಸಿದ ಮತ್ತು ಸಂಭವನೀಯತೆಯನ್ನು ಆಧರಿಸಿದ ಮಾದರಿಗಳ ಕಾರ್ಯರೀತಿಗಳ ನಡುವಣ ವ್ಯತ್ಯಾಸಗಳನ್ನು ಗುರುತಿಸಿ.

2. ನಿಮ್ಮ ಪಟ್ಟಣದ ಶಾಲಾ ವಿದ್ಯಾರ್ಥಿಗಳ ಸರಳ ಯಾದೃಚ್ಛಿಕ ಮಾದರಿಯನ್ನು ಆಯ್ಕೆ ಮಾಡುವುದಕ್ಕೆ ಬೇಕಾಗುವ ಕಾರ್ಯರೀತಿಗಳನ್ನು ಗುರುತಿಸಿ.

3. ಪಟ್ಟಣವೊಂದರ ಗೃಹಿಣಿಯರ ಟಿವಿ ವೀಕ್ಷಣೆಯ ಹವ್ಯಾಸವನ್ನು ಅಧ್ಯಯನ ಮಾಡಲು ಪ್ರಶ್ನಾವಳಿಯೊಂದನ್ನು ತಯಾರಿಸಿ.

## 2.13 ಹೆಚ್ಚಿನ ಓದಿಗಾಗಿ


1. Agarwal, Anthropological Methods in Communication Research, Concept Publishing House, New Delhi, 1985.

2. Joshi, Media Research: Cross Sectional Analysis, Rawat Publications - New Delhi, 2002.

3. Kerlinger, Foundations of Behavioral Research, ed III, Rinehart and Winston - New York, 1986.

4. Stempes and Westely, Research Methods in Mass Communication, Prentice Hall - Englewood Cliffs, NJ, 1989.

5. Thakur, Research Methodology in Social Sciences, Deep Publications - New Delhi, 1998.


ಬರಹ: ತೇಜಸ್ವಿ ನವಿಲೂರ್

# ಘಟಕ 3 ದತ್ತಾಂಶ ವಿಶ್ಲೇಷಣೆಯ ಕಾರ್ಯವಿಧಾನಗಳು

ರಚನೆ


3.0 ಉದ್ದೇಶಗಳು

3.1 ಪ್ರಸ್ತಾವನೆ

3.2 ಆವರ್ತನ ಸಂಖ್ಯೆ ಮತ್ತು ಶೇಕಡ

3.3 ದತ್ತಾಂಶಗಳನ್ನು ನಕ್ಷೆಯ ರೂಪದಲ್ಲಿ ತೋರಿಸುವುದು

3.3.1 ಆವರ್ತನ ಬಹುಭುಜಾಕೃತಿ

3.3.2 ಆಯತಚಿತ್ರ/ಸ್ತಂಭಾಲೇಖ

3.3.3 ಪೈ-ನಕ್ಷೆಗಳು

3.4 ಕೇಂದ್ರೀಯ ಸ್ಥಾನದ ಅಳತೆಗಳು

3.5 ಹರವಿನ ಅಳತೆಗಳು

3.5.1 ವ್ಯಾಪ್ತಿ

3.5.2 ಮಧ್ಯಕ ವಿಚಲನೆ

3.5.3 ಮಾನಕ ವಿಚಲನೆ

3.6 ಸಹವರ್ತನೆಯ ಅಳತೆಗಳು

3.6.1 ಕಂಟಿನ್‌ಜೆನ್ಸಿ ಪಟ್ಟಿಗಳು ಮತ್ತು ಕೈ-ವರ್ಗ

3.6.2 ಸಹಸಂಬಂಧ

3.7 ಅನುಗಮನ ಸಂಖ್ಯಾಶಾಸ್ತ್ರ ಮತ್ತು ಮಹತ್ವಸೂಚಿ ಪರೀಕ್ಷೆಗಳು

3.8 ಇತರ ಉನ್ನತ ಪ್ರೌಢತಂತ್ರಗಳು

3.9 ಸಾರಾಂಶ

3.10 ಪಾರಿಭಾಷಿಕ ಕೋಶ

3.11 ನಿಮ್ಮ ಪ್ರಗತಿ ಪರಿಶೀಲನೆ

3.12 ಹೆಚ್ಚಿನ ಓದಿಗಾಗಿ

## 3.0 ಉದ್ದೇಶಗಳು

ಯಾವುದೇ ಸಂಶೋಧನೆಯಲ್ಲಿ, ದತ್ತಾಂಶಗಳನ್ನು ಕಲೆಹಾಕುವಂತಹ ಮೊದಲಿನ ಹಂತಗಳು ಮುಗಿದ ನಂತರ, ತರ್ಕಬದ್ಧವಾದ ಒಂದು ತೀರ್ಮಾನಕ್ಕೆ ಬರಲು ಅವುಗಳನ್ನು ಸೂಕ್ತವಾಗಿ ವಿಶ್ಲೇಷಣೆ ಮಾಡುವುದು ಅವಶ್ಯಕ. ಆದ್ದರಿಂದ, ಸೂಕ್ತವಾದ ದತ್ತಾಂಶ ವಿಶ್ಲೇಷಣೆಯ ವಿಧಾನಗಳನ್ನು ಬಳಸುವುದು ಬಹುಮುಖ್ಯವಾದ ಪಾತ್ರವನ್ನು ವಹಿಸುತ್ತದೆ. ಈ ಘಟಕವು ದತ್ತಕಗಳ ವಿಶ್ಲೇಷಣೆಯ ವಿಧಾನಗಳ ಚಿತ್ರಣವನ್ನು ನೀಡಲಿದೆ. ಈ ಘಟಕವನ್ನು ಅಧ್ಯಯನ ಮಾಡಿದ ನಂತರ ಕೆಳಗಿನ ಅಂಶಗಳು ನಿಮಗೆ ಸಾಧ್ಯವಾಗುತ್ತವೆ.

* ಸಂಶೋಧನೆಯ ದತ್ತಕಗಳ ವಿಶ್ಲೇಷಣೆ ಮಾಡುವ ರೀತಿಗಳ ಅರಿಯುವಿಕೆ;
* ದತ್ತಾಂಶಗಳನ್ನು ವಿವರಿಸುವ ಸಂಖ್ಯಾಶಾಸ್ತ್ರ ವಿಧಾನಗಳ ಕಲಿಕೆ;
* ಚರಾಂಶಗಳ ನಡುವಣ ಸಂಬಂಧವನ್ನು ಅಧ್ಯಯನ ಮಾಡುವ ಕೆಲವೊಂದು ತಂತ್ರಗಳ ಬಳಕೆ, ಮತ್ತು
* ದತ್ತಾಂಶಗಳಿಗೆ ಸೂಕ್ತವಾದ ವಿಶ್ಲೇಷಣಾ ವಿಧಾನವನ್ನು ನಿರ್ಧರಿಸುವುದು.

## 3.1 ಪ್ರಸ್ತಾವನೆ

ಈ ಹಿಂದಿನ ಅಧ್ಯಯನ ಘಟಕದಲ್ಲಿ, ಸಂವಹನ ಸಂಶೋಧನೆಯ ವಿವಿಧ ವಿಧಾನಗಳ ಬಗ್ಗೆ ನೀವು ಕಲಿತಿರಿ. ತನ್ನ ಸಂಶೋಧನಾ ಸಮಸ್ಯೆಗೆ ಉತ್ತರ ಕಂಡುಕೊಳ್ಳಲು ಶೋಧಕ ತಾನು ಯಾವುದೇ ವಿಧಾನದ ಆಯ್ಕೆ ಮಾಡಿಕೊಂಡರೂ, ಶೋಧನಾ ವಿಷಯಕ್ಕೆ ಸಂಬಂಧಿಸಿದಂತೆ ದತ್ತಾಂಶಗಳನ್ನು ಕಲೆ ಹಾಕುತ್ತಾನೆ. ಅದು, ದೈನಿಕ ವಾರ್ತಾ ಪತ್ರಿಕೆಗಳಲ್ಲಿ ಅಂತರರಾಷ್ಟ್ರೀಯ ಸುದ್ದಿಗಳಿಗೆ ಮೀಸಲಾಗಿಟ್ಟಿರುವ ಕಾಲಂಗಳ ಉದ್ದ ಇರಬಹುದು; ಶಾಲಾ ಮಕ್ಕಳು ಟೆಲಿವಿಷನ್ ನೋಡುತ್ತಾ ಕಳೆಯುವ ಕಾಲದ ಅವಧಿ ಇರಬಹುದು; ಮನವೊಲಿಕೆ ಮಾಡಲು ಬರೆದ ಸಂದೇಶಗಳ ಪರಿಣಾಮವಾಗಿ ಆದ ಮಾರ್ಪಾಟಿನ ಮಟ್ಟ ಇರಬಹುದು; ತೀವ್ರವಾದ ಜಾಹೀರಾತು ಪ್ರಚಾರಕಾರ್ಯದ ನಂತರ ಒಂದು ಬ್ರಾಂಡ್‌ನ ಉತ್ಪನ್ನದ ಮಾರಾಟದ ಮಟ್ಟ, ಉತ್ಪಾದನಾ ಶ್ರೇಷ್ಠತೆಯ ಗಣನೆಯಂತೆ ಚಲನಚಿತ್ರಗಳ ದರ್ಜಾವಾರು ವಿಂಗಡಣೆ, ಮಾಧ್ಯಮಗಳ ಆಡಕ ವಸ್ತು ವಿಷಯಗಳ ವರ್ಗೀಕರಣ, ಮತ್ತಿತರ ವಿಷಯಗಳೂ ಆಗಿರಬಹುದು.

ದತ್ತಾಂಶಗಳು ಹಲವಾರು ರೂಪಗಳನ್ನು ತಳೆಯುತ್ತವೆ. ಅದು ಸರಳವಾದ ವರ್ಗೀಕರಣ, ಶ್ರೇಣೀಕರಣ, ದರ್ಜಾವಾರು ವಿಂಗಡಣೆ, ಅಂಕಗಳು ಅಥವಾ ಇನ್ನು ಯಾವುದೇ ರೀತಿಯ ಮಾಪನವಾಗಿರಬಹುದು. ಕೆಲವೊಮ್ಮೆ ದತ್ತಕಗಳು ಸರಳವಾದ ವರ್ಗಗಳ ರೂಪದಲ್ಲಿ ಇರುತ್ತವೆ. ವೃತ್ತಪತ್ರಿಕೆಯ ಓದುಗರನ್ನು ನೀವು ಪುರುಷ ಅಥವಾ ಮಹಿಳೆ, ಎಂದು ವರ್ಗೀಕರಿಸಬಹುದು. ಪತ್ರಿಕೆಯ ವಿಷಯಗಳನ್ನು ರಾಜಕೀಯ ಸುದ್ದಿಗಳು, ವ್ಯಾವಹಾರಿಕ ಸುದ್ದಿಗಳು, ಕ್ರೀಡಾ ವಾರ್ತೆಗಳು ಇತ್ಯಾದಿಯಾಗಿ ವಿಭಾಗ ಮಾಡಬಹುದು. ಕೆಲವೊಂದು ದತ್ತಾಂಶಗಳು ಶ್ರೇಣಿಗಳ ರೂಪದಲ್ಲಿರಬಹುದು. ಉದಾಹರಣೆಗಳಾದರೋ ಅಸಂಖ್ಯಾತವಾಗಿ ದೊರೆಯುತ್ತವೆ. ಸಾಧನೆಯ ಗಣನೆಯಿಂದ ತರಗತಿಯ ವಿದ್ಯಾರ್ಥಿಗಳನ್ನು ಪ್ರಥಮ, ದ್ವಿತೀಯ ಎಂಬುದಾಗಿಯೂ, ಜನಪ್ರಿಯತೆಯನ್ನು ಆಧರಿಸಿ ಟಿವಿ ಕಾರ್ಯಕ್ರಮ (ಧಾರಾವಾಹಿ)ಗಳನ್ನು ಶ್ರೇಣೀಕರಣ ಮಾಡಲಾಗುತ್ತದೆ.

ದತ್ತಾಂಶಗಳ ಇನ್ನೊಂದು ರೂಪವೆಂದರೆ ದರ್ಜಾವಾರು ವಿಂಗಡಣೆ. ಸ್ವೀಕೃತಿ ಅಥವಾ ತಿರಸ್ಕೃತಿಯ "ದೃಢವಾದ ಸ್ವೀಕಾರ, ಸ್ವೀಕಾರ, ಸ್ವೀಕಾರವಾಗಲೀ ತಿರಸ್ಕಾರವಾಗಲೀ ಇಲ್ಲ, ತಿರಸ್ಕಾರ ಅಥವಾ ಬಲವಾದ ತಿರಸ್ಕಾರ"ಎಂಬ ಸೂಚನೆಗಳು, ಅಥವಾ "ಅತ್ಯುತ್ತಮ, ಉತ್ತಮ, ಸಾಮಾನ್ಯ, ಕಳಪೆ, ಇತ್ಯಾದಿಯಾಗಿ ಮೌಲ್ಯಮಾಪನ ಮಾಡುವ ಮಾಪನಗಳು, ಆವರ್ತನೆಯ ನಿರ್ಣಯಗಳಾದ "ಯಾವಾಗಲೂ, ಅತಿ ಹೆಚ್ಚಿನಂತೆ, ಕೆಲವೊಮ್ಮೆ, ಯಾವಾಗಲೂ ಇಲ್ಲ" ಎನ್ನುವ ಅಳತೆಗಳು ಈ ಎಲ್ಲವೂ ಯಾವುದಾದರೂ ಒಂದು ಅಳತೆಯ ಮೇಲೆ ದರ್ಜೆವಾರು ವಿಂಗಡಣೆ ಮಾಡುವುದಕ್ಕೆ ಉದಾಹರಣೆಗಳು.

ಬೇರೆ ರೀತಿಯ ದತ್ತಾಂಶಗಳೂ ಕೂಡ ಇರುತ್ತವೆ. ಗುಣಲಕ್ಷಣ (ಉದಾಹರಣೆಗೆ - ಬುದ್ಧಿವಂತಿಕೆ, ಮನೋವೃತ್ತಿ, ಆಸಕ್ತಿ ಇತ್ಯಾದಿ)ಗಳನ್ನು ಮಾಪನ ಮಾಡಲು ವಿಶೇಷವಾಗಿ ವಿನ್ಯಾಸಗೊಳಿಸಲಾದ ಪರೀಕ್ಷೆಗಳ ಅಂಕಗಳ ರೂಪದಲ್ಲಿಯೂ ಅವು ಇರಬಹುದು. ಅಲ್ಲದೆ, ಸಂಗತಿ ಎಷ್ಟು ಬಾರಿ ಆಗುತ್ತದೆ ಎಂಬ ಆವರ್ತನ ಎಣಿಕೆ, ಕಾಲ ಸ್ಥಳಗಳ ಮಾಪನಗಳೂ ಇರುತ್ತವೆ. ಒಂದು ಕಾಲದ ಅವಧಿಯಲ್ಲಿ ನೋಡಿರುವ ಚಿತ್ರಗಳ ಸಂಖ್ಯೆ, ಟಿವಿ ಧಾರಾವಾಹಿಗಳಲ್ಲಿ ಲೈಂಗಿಕ ವಿಷಯಗಳನ್ನು ಎಷ್ಟು ಬಾರಿ ತೋರಿಸಿದ್ದಾರೆಂಬುದರ ಗಣತಿ, ವೃತ್ತಪತ್ರಿಕೆಯ ಸಂಪಾದಕೀಯಗಳನ್ನು ಓದಲು ಬಳಸುವ ಕಾಲ, ಪ್ರಾದೇಶಿಕ ಭಾಷಾ ಪತ್ರಿಕೆಗಳಲ್ಲಿ ಅಭಿವೃದ್ಧಿಯ ಸುದ್ದಿಗಳಿಗೆಂದು ಮೀಸಲಾಗಿಟ್ಟಿರುವ ಕಾಲಂಗಳ ಉದ್ದ ಇವು ಆವರ್ತನ, ಕಾಲ ಮತ್ತು ಸ್ಥಳದ ಮಾಪನಗಳಿಗೆ ಉದಾಹರಣೆಗಳು. ಈ ಮೇಲೆ ಸೂಚಿಸಿರುವ ದತ್ತಾಂಶಗಳೆಲ್ಲವೂ ಯಾವುದೋ ಒಂದು ರೀತಿಯ ಮಾಪನ ಕಾರ್ಯದ ಫಲಿತಾಂಶಗಳೇ, ಮಾಪನ ಕಾರ್ಯದ ರೀತಿಗಳು ಮತ್ತು ಮಟ್ಟಗಳನ್ನು ಈ ಕೆಳಕಂಡಂತೆ ಸಂಕ್ಷೇಪಿಸಬಹುದು.

"ಮೂಲ ಮಟ್ಟದಲ್ಲಿ ಮಾಪನವು ವರ್ಗೀಕರಣ ಅಥವಾ ವಿಂಗಡಣೆಯನ್ನು ಒಳಗೊಂಡಿರುತ್ತದೆ. ಕಾರ್ಯಕ್ರಮಗಳನ್ನು 'ಒಳ್ಳೆಯ' ಅಥವಾ 'ಕೆಟ್ಟ'ದ್ದು ಎಂದೋ, ಪತ್ರಿಕೆಯ ಸಂಪಾದಕರನ್ನು 'ಸಂಪ್ರದಾಯಬದ್ಧ' ಅಥವಾ 'ಉದಾರ' ಎಂದೋ, ವಿವಾದಾಂಶವೊಂದನ್ನು ಕುರಿತು 'ಪರ', 'ವಿರೋಧ', 'ತಟಸ್ಥ' ಎಂಬ ಅಭಿಪ್ರಾಯಗಳನ್ನೋ ವಿಂಗಡಣೆ ಮಾಡುವುದು ವರ್ಗೀಕರಣಕ್ಕೆ ಉದಾಹರಣೆಗಳು. ಈ ವರ್ಗೀಕರಣವು ಒಂದು ವರ್ಗ, ಇನ್ನೊಂದಕ್ಕಿಂತ ಭಿನ್ನ ಎಂಬ ಅರ್ಥವನ್ನು ಮಾತ್ರ ಧ್ವನಿಸುತ್ತದೆಯೇ ಹೊರತು, ಒಂದು ಮತ್ತೊಂದಕ್ಕಿಂತ ಉತ್ತಮ ಎಂಬುದನ್ನೇನೂ ಇದು ಹೇಳುವುದಿಲ್ಲ. ಮಾಪನ ಮಾಡುತ್ತಿರುವ ಗುಣಲಕ್ಷಣಗಳ ಪರಿಮಾಣಗಳನ್ನು ಕುರಿತಂತೆ ಯಾವುದೇ ಪ್ರಭಾವವೂ ಇರುವುದಿಲ್ಲ. ಮುಂದಿನ ಹಂತದಲ್ಲಿ, ವಸ್ತುಗಳು ಹೊಂದಿರುವ ಗುಣಧರ್ಮಗಳ ಪ್ರಮಾಣದ ಆಧಾರದ ಮೇಲೆ ಅವುಗಳ ಶ್ರೇಣೀಕರಣ ಮಾಡಬಹುದು. ಉದಾಹರಣೆಗೆ, ಹೆಣ್ಣುಮಕ್ಕಳಿಗಿಂತ ಗಂಡು ಮಕ್ಕಳು ವೃತ್ತಪತ್ರಿಕೆಗಳೊಂದಿಗೆ ಹೆಚ್ಚು ಸಮಯ ಕಳೆಯುತ್ತಾರೆ; X- ಎಂಬ ಪತ್ರಿಕೆ Y -ಪತ್ರಿಕೆಗಿಂತ ಹೆಚ್ಚು ಪ್ರಸರಣವನ್ನು ಹೊಂದಿದೆ ಎಂಬುದಾಗಿ ಅತಿ ಉನ್ನತ ಮಟ್ಟದಲ್ಲಿ, ಮಾಪನಗಳು ವರ್ಗಗಳು ಮತ್ತು ಅನುಪಾತಗಳಾಗಿ ಇರುತ್ತವೆ. ಹುಡುಗರು ವೃತ್ತಪತ್ರಿಕೆಗಳೊಂದಿಗೆ 30 ನಿಮಿಷ ಕಳೆದರೆ, ಹುಡುಗಿಯರು 20 ನಿಮಿಷ ಕಳೆಯುತ್ತಾರೆ; ವಯಸ್ಕರಿಗಿಂತ ಎರಡು ಪಟ್ಟು ಹೆಚ್ಚು ಪ್ರಮಾಣದಲ್ಲಿ ಯುವಕರು ಚಲನಚಿತ್ರಗಳನ್ನು ನೋಡುತ್ತಾರೆ ಎಂಬ ಹೇಳಿಕೆಗಳು ವರ್ಗರೂಪದಲ್ಲಿ ಮತ್ತು ಅನುಪಾತ ಮಟ್ಟದ ದತ್ತಾಂಶಗಳನ್ನು ಪ್ರತಿನಿಧಿಸುತ್ತವೆ".

ಮೇಲೆ ತಿಳಿಸಿರುವಂತಹ ಹಲವಾರು ಸೂಚಿಗಳು ಮತ್ತು ಅಳತೆಯ ಸಂಖ್ಯೆಯ ರೂಪದಲ್ಲಿರುತ್ತವೆ ಹಾಗು ಅವುಗಳು ಸಂಖ್ಯಾರೂಪದ ಗುಣಗಳನ್ನು ಹೊಂದಿರದಿದ್ದರೆ, ಅವುಗಳನ್ನು ಸಂಖ್ಯೆಗಳಾಗಿ ಪರಿವರ್ತಿಸಲಾಗುವುದು. ಅಂತಹ ಸಂಖ್ಯೆಗಳಿಗೆ ಸೂಕ್ತವಾದ ಅರ್ಥ ಬರುವಂತೆ ವಿಶ್ಲೇಷಿಸದಿದ್ದರೆ, ಆ ಸಂಖ್ಯೆಗಳು ಅರ್ಥಹೀನವಾಗುತ್ತವೆ. ಪ್ರಸಕ್ತ ಘಟಕದಲ್ಲಿ ದತ್ತಾಂಶ ವಿಶ್ಲೇಷಣೆಗೆ ಬೇಕಾದ ಕೆಲವೊಂದು ಸರಳವಾದ ಮೂಲ ತಂತ್ರಗಳನ್ನು ಸೂಕ್ತವಾದ ಉದಾಹರಣೆಗಳೊಂದಿಗೆ ವಿವರಿಸಲಾಗಿದೆ. ಅಂತಹ ತಂತ್ರಗಳ ಅನ್ವಯಿಕೆಯನ್ನು ಅವುಗಳ ಗುಣಾವಗುಣಗಳೊಂದಿಗೆ, ಮಿತಿಗಳೊಂದಿಗೆ ಈ ಮುಂದೆ ಚರ್ಚಿಸಲಾಗುವುದು.

## 3.2 ಆವರ್ತನ ಸಂಖ್ಯೆ ಮತ್ತು ಶೇಕಡ

ದತ್ತಾಂಶ ವಿಶ್ಲೇಷಣೆಯ ಅತಿ ಸರಳ ವಿಧಾನವೆಂದರೆ ಆವರ್ತನ ಸಂಖ್ಯೆಯ ಗಣನೆ. ಕೊಟ್ಟಿರುವ ದತ್ತಾಂಶದ ಗಣದಲ್ಲಿ, ಪ್ರತಿಯೊಂದು ವೀಕ್ಷಣೆಯು ಎಷ್ಟು ಬಾರಿ ಆಗಿದೆ ಎಂಬುದನ್ನು ಇದು ತೋರಿಸುತ್ತದೆ. ತನ್ನ ಮಾದರಿಯಲ್ಲಿ ಸಂಶೋಧಕನು ಗಂಡಸರ ಮತ್ತು ಹೆಂಗಸರ ಸಂಖ್ಯೆಯನ್ನು ಪಟ್ಟಿ ಮಾಡಬಹುದು. ಅವರಲ್ಲಿ ಎಷ್ಟು ಮಂದಿ ಹೇಳಿಕೆಯ ಅಭಿಪ್ರಾಯವನ್ನು ಒಪ್ಪಿಕೊಳ್ಳುತ್ತಾರೆ; ವೃತ್ತಪತ್ರಿಕೆಯ ಸಂಪಾದಕೀಯವನ್ನು ನಿಯತವಾಗಿ ಓದುವ ಮಂದಿ ಎಷ್ಟು ಇತ್ಯಾದಿ ಅರ್ಥಹೀನವಾದ ಅಂಕಿಗಳ ಗಣವಾಗಿಬಿಡಬಹುದಾಗಿದ್ದ ಈ ಸಂಖ್ಯೆಗಳಿಗೆ ಆವರ್ತನ ಸಂಖ್ಯೆಯ ಸೂಚಿಯು ಒಂದು ಕ್ರಮವಾದ ನೆಲೆಗಟ್ಟನ್ನು ಒದಗಿಸಿಕೊಡುತ್ತದೆ.

ಆವರ್ತನ ವಿಶ್ಲೇಷಣೆಯ ವಿಧಾನವನ್ನು ಒಂದು ಕಲ್ಪಿತವಾದ ಉದಾಹರಣೆಯೊಂದಿಗೆ ವಿವರಿಸಬಹುದು. ಪ್ರತಿದಿನ, ಶಾಲಾಮಕ್ಕಳು ಟಿವಿ ವೀಕ್ಷಣೆಗೆ ವ್ಯಯ ಮಾಡುವ ಸಮಯ ಎಷ್ಟು ಎಂಬ ಪ್ರಶ್ನೆಯಲ್ಲಿ ಒಬ್ಬ ಸಂಶೋಧಕ ಆಸಕ್ತಿವಹಿಸಿದ್ದ ಎಂದಿಟ್ಟುಕೊಳ್ಳೋಣ. ಶಾಲೆಯ ಒಟ್ಟು ಮಕ್ಕಳಲ್ಲಿ ಮಾದರಿಗಳನ್ನು ಆತ ತೆಗೆದುಕೊಂಡಿದ್ದಾನೆ, ಮತ್ತು ಆ ಮಾದರಿಯಲ್ಲಿನ ಒಟ್ಟು ಪರೀಕ್ಷೆಗೊಳಪಡುತ್ತಿರುವವರ ಸಂಖ್ಯೆ 500. ಪ್ರತಿದಿನ ಬೇರೆ ಬೇರೆ ಕಾಲಪ್ರಮಾಣದಲ್ಲಿ ಮಕ್ಕಳು ಟಿವಿಯನ್ನು ನೋಡುತ್ತಾರೆ ಮತ್ತು ಪ್ರತಿಯೊಂದು ಮಗುವೂ ತಾನು 'ಟಿವಿ ಯೊಂದಿಗೆ ಕಳೆಯುವ ಸಮಯ'ದ ಅಂದಾಜನ್ನು ನೀಡುತ್ತದೆ. ಈ ಅಂದಾಜಿನ ಹರಹು '0 ' ನಿಮಿಷದಿಂದ 180 ನಿಮಿಷಗಳವರೆಗೂ ಇರಬಹುದು.

ಒಂದು ಮಗು ತಾನು ಟಿವಿ ನೋಡುವುದೇ ಇಲ್ಲ ಎಂದು ಹೇಳಿದರೆ, ಮತ್ತೊಂದು 30 ನಿಮಿಷ ಎಂದೂ, ಮೂರನೆಯದು 75 ನಿಮಿಷ ಎಂದೂ ಅಂದಾಜು ಮಾಡಿರಬಹುದು. ಮಾದರಿಯಲ್ಲಿರುವ 500 ಮಕ್ಕಳಲ್ಲಿ ಪ್ರತಿಯೊಂದೂ ಸಹ ತನ್ನದೇ ಆದ ಅಂದಾಜನ್ನು ಹೊಂದಿರುವುದರಿಂದ ಅಲ್ಲಿ 500 'ಅಂದಾಜು ಸಮಯ' ಇರುತ್ತದೆ. ಇದೊಂದು ಗೊಂದಲಮಯವಾದ ಸ್ಥಿತಿ. ಆದ್ದರಿಂದ ನಿರ್ವಹಣೆ ಮಾಡಲು ಸುಲಭವಾದ ಯಾವುದಾದರೂ ಒಂದು ರೂಪಕ್ಕೆ ಈ ದತ್ತಾಂಶಗಳನ್ನು ತರುವ ಪ್ರಯತ್ನವನ್ನು ಸಂಶೋಧಕ ಮಾಡುತ್ತಾನೆ. ಈಗಾಗಲೇ ತಿಳಿಸಿರುವಂತೆ, ಅಂದಾಜಿನ ಹರಹು ಪ್ರತಿದಿನಕ್ಕೆ '0 'ಯಿಂದ 180 ನಿಮಿಷಗಳಷ್ಟಿದೆ.

ಕೆಲವೊಂದು ಅಂದಾಜು ಅವಧಿಗಳು ಪುನರಾವರ್ತಿತವಾಗಿರುತ್ತವೆ. ತಾವು ಟಿವಿಯನ್ನು ನೋಡುವುದೇ ಇಲ್ಲ ಎಂಬುದಾಗಿ ಹೇಳುವ ಹತ್ತು ಮಂದಿ ಮಕ್ಕಳು ಇರಬಹುದು. ಅವರಲ್ಲಿ ಪ್ರತಿಯೊಬ್ಬರ ಸಮಯದ ಎಣಿಕೆ '0' ನಿಮಿಷಗಳು. ಮತ್ತಿಬ್ಬರು ತಾವು 15 ನಿಮಿಷ ಕಾಲ ಟಿವಿ ನೋಡುತ್ತೇವೆಂದು ಹೇಳಿರಬಹುದು. ಆದ್ದರಿಂದ ದತ್ತಾಂಶಗಳನ್ನು ಕಡಿಮೆ ಮಾಡಿಕೊಳ್ಳುವ ಮೊದಲ ಹಂತವಾಗಿ, ಸಂಶೋಧಕನು ಪ್ರತಿಯೊಂದು ಸಮಯದ (ಎಣಿಕೆಯ) ತೋಲನೆ ಅಂದರೆ, ದತ್ತಾಂಶಗಳ ಗಣದಲ್ಲಿ ಪ್ರತಿಯೊಂದು ವೀಕ್ಷಣೆಯು ಎಷ್ಟು ಬಾರಿ ಪುನರಾವರ್ತಿತವಾಗಿದೆ ಎಂಬುದರ ಗಣನೆ ಮಾಡುತ್ತಾನೆ. ಎರಡು ಲಂಬಸಾಲುಗಳಿರುವ ಒಂದು ಪಟ್ಟಿಯನ್ನು ಮಾಡಿಕೊಂಡು, ಒಂದು ಲಂಬಸಾಲಿನಲ್ಲಿ ಎಣಿಕೆ (X) ಗಳನ್ನೂ, ಮತ್ತೊಂದರಲ್ಲಿ ಅನುಕ್ರಮವಾಗಿ ಅವುಗಳ ಆವರ್ತನ ಸಂಖ್ಯೆ (f) ಯನ್ನೂ ಪಟ್ಟಿ ಮಾಡುತ್ತಾನೆ. ಈ ಪಟ್ಟಿಯು ಕೆಳಕಂಡಂತಾಗುತ್ತದೆ.

ಪಟ್ಟಿ -1: ಟಿವಿ ವೀಕ್ಷಣೆಗೆ ಬಳಸಲಾಗುವ ಕಾಲದ ಆವರ್ತನ ವಿತರಣೆ

| ಟೆಲಿವಿಷನ್ ವೀಕ್ಷಣೆಗೆ ಬಳಸಲಾಗುವ ಕಾಲ ನಿಮಿಷಗಳಲ್ಲಿ ಎಣಿಕೆ (x) | ಆವರ್ತನ ಸಂಖ್ಯೆ (f) |
|---|---|
| 0 | 10 |
| 1 | 0 |
| 2 | 0 |
| - | - |
| - | - |
| 15 | 19 |
| - | - |
| - | - |
| 30 | 53 |
| - | - |
| - | - |
| 180 | 26 |
| | ಒಟ್ಟು, N = 500 |

500 ಮಕ್ಕಳಿಗೆ ಸಂಬಂಧಿಸಿದಂತಹ ದತ್ತಾಂಶಗಳು, ಎಷ್ಟು ಮಕ್ಕಳು ಪ್ರತಿದಿನ ಟಿವಿ ವೀಕ್ಷಣೆಗೆ 10 ನಿಮಿಷ ಅಥವಾ 30 ನಿಮಿಷ, ಇಲ್ಲವೇ ಒಂದು ಗಂಟೆ ವ್ಯಯ ಮಾಡುತ್ತಾರೆ ಎಂಬುದನ್ನು ತಿಳಿಯಲು ಅನುಕೂಲವಾಗುವಂತಹ ಒಂದು ಸುಲಭರೂಪಕ್ಕೆ ಈಗ ಬಂದಿದೆ. ದತ್ತಾಂಶಗಳ ಸ್ವರೂಪವನ್ನು ತಿಳಿಯಲು ಇದು ಸ್ವಲ್ಪ ಸಹಕಾರಿಯಾದರೂ ಇನ್ನೂ ಸಾಕಷ್ಟು ಎಣಿಕೆಗಳು ಇದ್ದು (0 ಯಿಂದ 180ರವರೆಗಿನ ವ್ಯಾಪ್ತಿಯಲ್ಲಿ) ಸುಲಭವಾದ ಗ್ರಹಿಕೆಗೆ ಅಥವಾ ಒಟ್ಟಾರೆಯಾದ ವಿವರಣೆಗೆ ಅನುವು ಮಾಡಿಕೊಡುವುದಿಲ್ಲ, ಇನ್ನೂ ಹೆಚ್ಚಾಗಿ ಅರ್ಥಮಾಡಿಕೊಳ್ಳಲು ವಿಸ್ತೃತವಾದ ದತ್ತಾಂಶಗಳನ್ನು ಒಗ್ಗೂಡಿಸಿ ವರ್ಗಗಳಾಗಿ ಮಾಡಬಹುದು. ಪ್ರತಿಯೊಂದು ಎಣಿಕೆಯನ್ನೂ ಪ್ರತ್ಯೇಕವಾಗಿ ಪರಿಗಣಿಸುವ ಬದಲು, ಎಣಿಕೆಗಳ ಗುಂಪೊಂದನ್ನು ಒಗ್ಗೂಡಿಸಿ, ವರ್ಗೀಕರಣ ಮಾಡಬಹುದು.

ಉದಾಹರಣೆಗೆ 0ಯಿಂದ 09 ನಿಮಿಷಗಳವರೆಗಿನ ಎಲ್ಲಾ ಎಣಿಕೆಗಳನ್ನು ಒಂದು ವರ್ಗವಾಗಿ, 10ರಿಂದ 19 ನಿಮಿಷಗಳ ಎಣಿಕೆಗಳನ್ನು ಎರಡನೆಯ ವರ್ಗ ಇತ್ಯಾದಿಯಾಗಿಯೂ ಮತ್ತು ವರ್ಗದಲ್ಲಿ ಕಂಡುಬರುವ ಎಣಿಕೆಗಳ ಆವರ್ತನವನ್ನು ಗಣನೆ ಮಾಡಲಾಗುವುದು. ಈ ಗುಂಪುಗಳನ್ನು ವರ್ಗಾಂತರ (Class intervals)ಗಳೆಂದು ಕರೆಯಲಾಗುತ್ತದೆ. ಪ್ರತಿಯೊಂದು ವರ್ಗವ್ಯಾಪ್ತಿಗೂ ಅದರ ಆವರ್ತನವನ್ನು ಗುರುತು ಹಾಕಲಾಗುತ್ತದೆ. ಆವರ್ತನ ವಿತರಣೆ ಮತ್ತು ವರ್ಗವ್ಯಾಪ್ತಿಗಳನ್ನೂ ಕೆಳಗಿನ ಪಟ್ಟಿಯಲ್ಲಿ ತೋರಿಸಲಾಗಿದೆ.

**ಪಟ್ಟಿ - 2: ಟಿವಿ ವೀಕ್ಷಣೆಗೆ ಬಳಸಲಾದ ಕಾಲದ ಆವರ್ತನ ವಿತರಣೆ ವರ್ಗವ್ಯಾಪ್ತಿಯೊಂದಿಗೆ**

| ಟೆಲಿವಿಷನ್ ವೀಕ್ಷಣೆಗೆ ಬಳಸಲಾಗುವ ಕಾಲ, ನಿಮಿಷಗಳಲ್ಲಿ (ವರ್ಗ / ವ್ಯಾಪ್ತಿ) / ವರ್ಗಾಂತರ | ಆವರ್ತನ ಸಂಖ್ಯೆ |
|---|---|
| 00-09 | 10 |
| 10-19 | 22 |
| 20-29 | 09 |
| 30-39 | 73 |
| - | - |
| - | - |
| 90-99 | 23 |
| 100-109 | 14 |
| - | 53 |
| - | - |
| 180-189 | - |
| | ಒಟ್ಟು N = 500 |

ಈಗ, ಎಣಿಕೆಗಳು ಪ್ರತಿ ವರ್ಗದೊಳಗಿನ ಎಣಿಕೆಗಳ ಆವರ್ತನಗಳೊಂದಿಗೆ ಕಡಿಮೆ ಸಂಖ್ಯೆಯ ವರ್ಗಗಳಾಗಿ ಪರಿವರ್ತಿತವಾದವು. 500ರಲ್ಲಿ 10 ಮಕ್ಕಳು ಟೆಲಿವಿಷನ್ ನೋಡಲು '0' ಯಿಂದ '9' ನಿಮಿಷ ವ್ಯಯಮಾಡುತ್ತಾರೆ. 500ರಲ್ಲಿ 22 ಮಕ್ಕಳು 10ರಿಂದ 19 ನಿಮಿಷಗಳ ಕಾಲ ಟಿವಿ ನೋಡುತ್ತಾರೆ. ಇತ್ಯಾದಿಯಾಗಿ ನೀವು ಅರ್ಥ ಮಾಡಿಕೊಳ್ಳಬಹುದು.

ಸಾಂದ್ರತೆ(ದಟ್ಟಣೆ)ಯ ಬಿಂದುಗಳನ್ನೂ ಮತ್ತು ಎಣಿಕೆಗಳ ಹರವನ್ನೂ ಕಾಣುವುದರೊಂದಿಗೆ ವಿತರಣೆಯ ನಮೂನೆಯನ್ನೂ ಗುರುತಿಸಬಹುದು. ಈ ದತ್ತಾಂಶ ವಿಶ್ಲೇಷಣೆಯಲ್ಲಿ ನೀವು ಇನ್ನೂ ಒಂದು ಹೆಜ್ಜೆ ಮುಂದೆ ಹೋಗಬಹುದು. ಮಾದರಿಯಗಾತ್ರ(ವರ್ಗದ ಗಾತ್ರ)ದಲ್ಲಿ ವ್ಯತ್ಯಾಸವಿರುವ ಗುಂಪುಗಳನ್ನು ಹೋಲಿಕೆ ಮಾಡಲು ಅನುಕೂಲವಾಗುವಂತೆ ಪ್ರತಿಯೊಂದು ಎಣಿಕೆ ಅಥವಾ ವರ್ಗದ ಆವರ್ತನವನ್ನು ಶೇಕಡಾವಾರು ಪ್ರಮಾಣವಾಗಿ ಪರಿವರ್ತಿಸಬಹುದು. ಶೇಕಡಾವಾರು ಲೆಕ್ಕಾಚಾರ ಮಾಡುವುದು ಸಾಕಷ್ಟು ಸುಲಭವಾದ ಕ್ರಿಯೆ. ಒಂದು ಎಣಿಕೆ ಅಥವಾ ವರ್ಗದ ಆವರ್ತನವನ್ನು 100ರಿಂದ ಗುಣಿಸಿ, ಬಂದ ಗುಣಲಬ್ಧವನ್ನು ಒಟ್ಟಾರೆ ಪ್ರಕರಣಗಳ ಸಂಖ್ಯೆ (N) ಯಿಂದ ಭಾಗಿಸಬೇಕು. ಉದಾಹರಣೆಗೆ ಮೇಲಿನ ಪಟ್ಟಿಯಲ್ಲಿ '0'ಯಿಂದ '9'ನಿಮಿಷಗಳ ಅವಧಿಯ 10 ಪ್ರಕರಣಗಳು ಇವೆ. ಇದನ್ನು ಶೇಕಡಾವಾರು ಪ್ರಮಾಣಕ್ಕೆ ಬದಲಾಯಿಸಿದದರೆ 10 x100 / 500 = 2. ಆಗ ಒಟ್ಟು ಸಂಖ್ಯೆಯಲ್ಲಿ ಶೇ. 2 ರಷ್ಟು ಮಕ್ಕಳು ಈ ವರ್ಗದಲ್ಲಿದ್ದಾರೆ ಎಂದು ಕಂಡುಬರುತ್ತಿದೆ. ಹೀಗಾಗಿ ಮಾದರಿಯಲ್ಲಿ ಶೇ. 2ರಷ್ಟು ಮಕ್ಕಳು ದಿನಕ್ಕೆ 10 ನಿಮಿಷಕ್ಕಿಂತಲೂ ಕಡಿಮೆಕಾಲ ಟೆಲಿವಿಷನ್ ನೋಡುತ್ತಾರೆ ಎಂಬ ದೃಢವಾದ ಹೇಳಿಕೆಯನ್ನು ನೀಡಬಹುದು. ಶೇಕಡಾವಾರು ಪ್ರಮಾಣ ಸೂಚಿಸಿರುವ ಆವರ್ತನ ಪಟ್ಟಿಯನ್ನು ಈ ಕೆಳಗೆ ನೀಡಲಾಗಿದೆ.

**ಪಟ್ಟಿ - 3: ಟಿವಿ ವೀಕ್ಷಣೆಗೆ ಬಳಸಲಾಗುವ ಕಾಲದ ದತ್ತಾಂಶಗಳ ಆವರ್ತನ ವಿತರಣೆ ಮತ್ತು ಶೇಕಡಾವಾರು ಪ್ರಮಾಣ.**

| ಟೆಲಿವಿಷನ್ ವೀಕ್ಷಣೆಗೆ ಬಳಸಲಾಗುವ ಕಾಲ, ನಿಮಿಷಗಳಲ್ಲಿ ವರ್ಗ ವ್ಯಾಪ್ತಿ | ಆವರ್ತನ ಸಂಖ್ಯೆ | ಶೇಕಡ |
|---|---|---|
| 00-09 | 10 | 2.0 |
| 10-19 | 22 | 4.4 |
| 20-29 | 09 | 1.8 |
| 30-39 | 73 | 14.6 |
| - | - | - |
| | | |
| 90-99 | 23 | 4.6 |
| 100-109 | 14 | 2.8 |
| - | - | - |
| - | - | - |
| 180-189 | 26 | 5.2 |
| | N = 500 | ಒಟ್ಟು 100.0 |

ಆವರ್ತನ ವಿತರಣೆ ಮತ್ತು ಶೇಕಡವಾರಿನ ಲೆಕ್ಕಾಚಾರದಂತಹ ಸರಳವಾದ ದತ್ತಾಂಶ ವಿಶ್ಲೇಷಣೆಗಳು ಸಾಕಷ್ಟು ಹೆಚ್ಚಿನ ಮಾಹಿತಿಯನ್ನು ತೋರುತ್ತದೆ ಎಂಬುದು ನಿಮಗೆ ಈಗಾಗಲೇ ಸ್ಪಷ್ಟವಾಗಿರಬಹುದು. ಅವು ದತ್ತಾಂಶಗಳ ಸ್ವರೂಪದ ಬಗ್ಗೆ ತಿಳಿ ಹೇಳುತ್ತವೆ. ಕೆಲವೊಂದು ಬಿಂದುಗಳಲ್ಲಿ ಎಣಿಕೆಗಳು ಹೇಗೆ ದಟ್ಟೈಸಿಕೊಂಡು ಸಾಂದ್ರೀಕೃತವಾಗಿವೆ (ಉದಾಹರಣೆಗೆ, 30-39 ನಿಮಿಷಗಳ ವೀಕ್ಷಣೆಯ ಕಾಲದಲ್ಲಿ ಸುಮಾರು ಶೇ. 15ರಷ್ಟು ಮಕ್ಕಳು ಇರುವುದು) ಮತ್ತು ಸಂಪೂರ್ಣವಾದ ವಿತರಣೆಯಲ್ಲಿ ಎಣಿಕೆಗಳು ಹೇಗೆ ಹರಡಿಕೊಂಡಿವೆ ಇತ್ಯಾದಿಯಾಗಿ ಅಲ್ಲದೆ, ಈ ವಿತರಣೆಗಳು ಸಂಖ್ಯಾಶಾಸ್ತ್ರದ ಇತರ ಕೆಲವು ಮಾಪನಗಳನ್ನು ಲೆಕ್ಕಹಾಕಲೂ ಅನುವು ಮಾಡಿಕೊಡುತ್ತದೆ.

## 3.3 ದತ್ತಾಂಶಗಳನ್ನು ನಕ್ಷೆಯ ರೂಪದಲ್ಲಿ ತೋರಿಸುವುದು

ದತ್ತಾಂಶಗಳನ್ನು ನಕ್ಷೆ, ರೇಖಾಪಟ ಮತ್ತು ಚಿತ್ರಗಳ ರೂಪದಲ್ಲಿ ತೋರಿಸುವುದು ಸಾಧ್ಯ. ಈ ನಕ್ಷಾ ರೂಪಗಳು ದತ್ತಾಂಶಗಳ ವಿತರಣೆಯನ್ನು ಸ್ಪಷ್ಟವಾಗಿ ತಿಳಿಯುವುದಕ್ಕೆ ಸಹಾಯಕಾರಿ. ಅಲ್ಲದೆ, ವಿವಿಧ ವಿತರಣೆಗಳನ್ನು ತುಲನೆ ಮಾಡಲೂ ಇವು ಸಹಕಾರಿ. ನಕ್ಷೆಗಳು, ದತ್ತಾಂಶಗಳ ನಮೂನೆಗಳನ್ನು ಎದ್ದು ತೋರುವಂತೆ ಮಾಡುತ್ತವೆ ಮತ್ತು ದತ್ತಾಂಶ ಘಟಕಗಳ ನಡುವಣ ಸಾದೃಶ್ಯ, ವೈದೃಶ್ಯಗಳನ್ನೂ ತಿಳಿಸುತ್ತವೆ. ದತ್ತಾಂಶ ವಿಶ್ಲೇಷಣೆಯ ಸರಳೀಕರಣಕ್ಕೂ ಹಾಗು ಸ್ಪಷ್ಟವಾದ ಗ್ರಹಿಕೆಗೂ ಇವು ಸಹಾಯ ಮಾಡುತ್ತವೆ. ದತ್ತಾಂಶಗಳನ್ನು ನಕ್ಷಾರೂಪದಲ್ಲಿ ಬಿಂಬಿಸಲು ಹಲವಾರು ರೀತಿಗಳಿವೆ. ಸಂಶೋಧನಾ ವರದಿಗಳಲ್ಲಿ ಸಾಮಾನ್ಯವಾಗಿ ಬಳಸಲ್ಪಡುವ ನಕ್ಷಾರೂಪಗಳೆಂದರೆ:

ಅ) ಆವರ್ತನ ಬಹುಭುಜಾಕೃತಿಗಳು

ಆ) ಸ್ತಂಭಲೇಖಾಕೃತಿಗಳು, ಆಯತ ಚಿತ್ರಗಳು ಮತ್ತು

ಇ) ಪೈ-ನಕ್ಷೆಗಳು

### 3.3.1 ಆವರ್ತನ ಬಹುಭುಜಾಕೃತಿಗಳು


ಆವರ್ತನ ವಿತರಣಾ ಪಟ್ಟಿಗಳ ನಕ್ಷಾರೂಪವೇ ಆವರ್ತನ ಬಹುಭುಜಾಕೃತಿಗಳು ಒಂದು ನಕ್ಷಾಹಾಳೆಯ ಮೇಲೆ ಪರಸ್ಪರ ಲಂಬಕೋನದಲ್ಲಿರುವಂತೆ ಒಂದು ಲಂಬರೇಖೆ ಮತ್ತು ಅಡ್ಡರೇಖೆಗಳನ್ನು ಎಳೆಯುವುದರ ಮೂಲಕ ಆವರ್ತನ ಬಹುಭುಜಾಕೃತಿಯ ನಕ್ಷೆಯನ್ನು ಪ್ರಾರಂಭ ಮಾಡಬಹುದು. ಅಡ್ಡಗೆರೆಯು, ಎಣಿಕೆಗಳು ಅಥವಾ ವರ್ಗಗಳನ್ನೂ ಪ್ರತಿನಿಧಿಸಿದರೆ, ಲಂಬರೇಖೆಯು ಆವರ್ತನ ಸಂಖ್ಯೆಯನ್ನು ತೋರ್ಪಡಿಸುತ್ತದೆ. ಎಣಿಕೆಗಳು ಅಥವಾ ವರ್ಗದ ಮಧ್ಯಬಿಂದುವಿಗೆ ಸರಿಯಾಗಿ ಅದರ ಮೇಲೆ ಆ ಎಣಿಕೆ ಅಥವಾ ವರ್ಗಕ್ಕೆ ಸಂವಾದಿಯಾದ ಆವರ್ತನ ಸಂಖ್ಯೆ ಬರುವಂತೆ ಬಿಂದುಗಳನ್ನು ಗುರುತುಹಾಕಲಾಗುವುದು. ಈ ಎಲ್ಲಾ ಬಿಂದುಗಳನ್ನು ಅನುಕ್ರಮವಾಗಿ ಸರಳರೇಖೆಗಳಿಂದ ಸೇರಿಸಿದಾಗ ಮೂಡಿಬರುವ ನಕ್ಷೆಯೇ ಆವರ್ತನ ಬಹುಭುಜಾಕೃತಿ.

ಒಂದು ಸಾಮಾನ್ಯ ಆವರ್ತನ ಬಹುಭುಜಾಕೃತಿಯನ್ನು ಕಲ್ಪಿತವಾದ ದತ್ತಾಂಶಗಳದ ಸಹಾಯದಿಂದ ವಿವರಿಸಬಹುದು. ಶಾಲಾ ಮಕ್ಕಳ ಗುಂಪೊಂದನ್ನು (ಮಾದರಿಯ ಗಾತ್ರ, N= 22) ಒಂದು ಶೈಕ್ಷಣಿಕ ವರ್ಷದಲ್ಲಿ ಅವರು ಗ್ರಂಥಾಲಯದಿಂದ ಎರವಲು ಪಡೆದ ಪುಸ್ತಕಗಳ ಸಂಖ್ಯೆ ಎಷ್ಟು ಎಂದು ಕೇಳಿದ್ದೀರಿ ಎಂದಿಟ್ಟುಕೊಳ್ಳೋಣ. ಪ್ರತಿಯೊಂದು ಮಗುವೂ ಆ ಪ್ರಶ್ನೆಗೆ ಉತ್ತರ ನೀಡಿ, ತಾವು ಎರವಲು ಪಡೆದ ಪುಸ್ತಕಗಳ ಸಂಖ್ಯೆಯನ್ನು ತಿಳಿಸಿದ್ದಾರೆಂದೂ, ಆ ಸಂಖ್ಯೆಯು ಕನಿಷ್ಠ 3 ಪುಸ್ತಕಗಳಿಂದ ಹಿಡಿದು ಗರಿಷ್ಠ 36 ಪುಸ್ತಕಗಳವರೆಗೂ ಇದೆ ಎಂದು ಇಟ್ಟುಕೊಳ್ಳೋಣ. ಕೆಳಕಂಡಂತೆ ವರ್ಗವ್ಯಾಪ್ತಿ 5 ಇರುವಂತೆ ಒಂದು ಆವರ್ತನ ವಿತರಣಾ ಪಟ್ಟಿಯನ್ನು ರಚನೆ ಮಾಡಿ.

ಪಟ್ಟಿ - 4: ಮಕ್ಕಳು ಗ್ರಂಥಾಲಯದಿಂದ ಎರವಲು ಪಡೆದ ಪುಸ್ತಕಗಳ ಆವರ್ತನಾ ವಿತರಣೆ

| ಎರವಲು ಪಡೆದ ಪುಸ್ತಕಗಳು (x) ವರ್ಗ ವ್ಯಾಪ್ತಿ | ಆವರ್ತನ ಸಂಖ್ಯೆ |
|---|---|
| 36-40 | 04 |
| 31-35 | 13 |
| 26-30 | 18 |
| 21-25 | 70 |
| 16-20 | 58 |
| 11-15 | 33 |
| 06-10 | 15 |
| 01-05 | 09 |
| | ಒಟ್ಟು N = 500 |


ಮೇಲಿನ ಪಟ್ಟಿಯಲ್ಲಿ ಇರುವ ದತ್ತಾಂಶಗಳನ್ನು ಈಗಾಗಲೇ ವಿವರಿಸುವ ರೀತಿಯಲ್ಲಿ ಬರೆದು ನಕ್ಷೆಯ ರೂಪದಲ್ಲಿ ಆವರ್ತನ ಬಹುಭುಜಾಕೃತಿಯನ್ನು ಬಿಂಬಿಸಬಹುದು. ಎರವಲು ಪಡೆದ ಪುಸ್ತಕಗಳ ಎಣಿಕೆಯನ್ನು ಅಡ್ಡರೇಖೆಯ ಮೇಲೂ, ಆವರ್ತನಗಳನ್ನು ಲಂಬರೇಖೆಯ ಮೇಲೂ ಗುರುತು ಹಾಕಲಾಗುತ್ತದೆ. ಪ್ರತಿಯೊಂದು ವರ್ಗದ ಮಧ್ಯಬಿಂದುವಿನ ನೇರಕ್ಕೆ, ಆ ವರ್ಗಕ್ಕೆ ಸಂವಾದಿಯಾದ ಆವರ್ತನ ಸಂಖ್ಯೆಯು ಬರುವಂತೆ ಬಿಂದುಗಳನ್ನು ಇಡತಕ್ಕದ್ದು. ಈ ಎಲ್ಲ ಬಿಂದುಗಳನ್ನೂ ಅನುಕ್ರಮವಾಗಿ ಸರಳರೇಖೆಯ ಮೂಲಕ ಸೇರಿಸಿದರೆ, ಆವರ್ತನ ಬಹುಭುಜಾಕೃತಿ ದೊರೆಯುತ್ತದೆ.



## 3.3.2 ಆಯತ ಚಿತ್ರಗಳು (ಸ್ತಂಭ ಲೇಖಾಕೃತಿಗಳು)

ಸಾಮಾನ್ಯವಾಗಿ ಬಳಸಲ್ಪಡುವ ಮತ್ತೊಂದು ನಕ್ಷಾರೂಪವೆಂದರೆ ಆಯತ ಚಿತ್ರಗಳು. ಆವರ್ತನ ಬಹುಭುಜಾಕೃತಿಗಳಂತೆಯೇ ಆಯತ ಚಿತ್ರಗಳ ಉದ್ದೇಶವೂ ಆವರ್ತನ ವಿತರಣೆಯನ್ನು ಬಿಂಬಿಸುವುದೇ ಆಗಿದೆ. ಆಯತ ಚಿತ್ರಗಳಲ್ಲೂ X ಮತ್ತು Y ಅಕ್ಷಗಳು ಅನುಕ್ರಮವಾಗಿ ಎಣಿಕೆಗಳ ವರ್ಗಗಳನ್ನು ಮತ್ತು ಆವರ್ತನ ಸಂಖ್ಯೆಯನ್ನೂ ತೋರಿಸುತ್ತವೆ. ಪ್ರತಿಯೊಂದು ವರ್ಗದ ಉದ್ದಕ್ಕೂ, ಅದಕ್ಕೆ ಸಂವಾದಿಯಾದ ಆವರ್ತನ ಸಂಖ್ಯೆಯ ಮಟ್ಟಕ್ಕೆ ಗೆರೆಗಳನ್ನು ಎಳೆಯಲಾಗುವುದು. ಲಂಬರೇಖೆಗಳನ್ನು ಎಳೆಯುವುದರ ಮೂಲಕ ಈ ಗೆರೆಗಳ ತುದಿಗಳನ್ನು X- ಅಕ್ಷಕ್ಕೆ ಸೇರಿಸಲಾಗುವುದು. ಹೀಗೆ ಬರುವ ರೇಖಾಪಟವು ಹಲವು ಆಯತಗಳನ್ನು ಹೊಂದಿರುತ್ತದೆ. ಇದರಲ್ಲಿನ ಪ್ರತಿಯೊಂದು ಆಯತದ ವಿಸ್ತೀರ್ಣವೂ ವರ್ಗವ್ಯಾಪ್ತಿ ಮತ್ತು ಆವರ್ತನ ಸಂಖ್ಯೆಗಳ ಗುಣಲಬ್ಧಕ್ಕೆ ಸಮವಾಗಿರುತ್ತದೆ.

ಪಟ್ಟಿ 4ರಲ್ಲಿರುವ ಕಲ್ಪಿತವಾದ ದತ್ತಾಂಶಗಳನ್ನು ತೋರಿಸುವ ಆಯತಚಿತ್ರ ಈ ಕೆಳಕಂಡಂತಿದೆ.




ಚಿತ್ರ -2: ಆಯತ ಚಿತ್ರ ಸ್ತಂಭಲೇಖಾಕೃತಿ

ಎರವಲು ಪಡೆದ ಪುಸ್ತಕಗಳ ಸಂಖ್ಯೆ


## 3.3.3 ಪೈ-ನಕ್ಷೆಗಳು

ಪೈ-ನಕ್ಷೆಯಲ್ಲಿ, ವೃತ್ತದ ಒಳವಿಸ್ತೀರ್ಣವು ವಿವಿಧ ವರ್ಗಗಳ ಎಣಿಕೆಗಳ ಪ್ರಮಾಣವನ್ನು ಸೂಚಿಸುತ್ತದೆ. ಸಂಪೂರ್ಣ ವೃತ್ತ, ಅರ್ಥಾತ್ 360 ಡಿಗ್ರಿಯು ಒಟ್ಟಾರೆ ಪ್ರಮಾಣ ಅಥವಾ ಒಟ್ಟು ಗಣತಿ (N) ಯನ್ನು ಬಿಂಬಿಸುತ್ತದೆ. ಎಣಿಕೆಗಳ ಆಧಾರದ ಮೇಲೆ, ಪ್ರತಿಯೊಂದು ವರ್ಗದ ವಿಸ್ತೀರ್ಣವನ್ನು, ಕೋನ ಅಥವಾ ಡಿಗ್ರಿಗಳ ರೂಪದಲ್ಲಿ ನೀಡಲಾಗುತ್ತದೆ. ದತ್ತಕಗಳನ್ನು ಈ ಬಗೆಯಲ್ಲಿ ಬಿಂಬಿಸುವ ನಕ್ಷಾರೂಪವನ್ನು ಪೈ-ನಕ್ಷೆಗಳೆಂದು ಕರೆಯಲಾಗುತ್ತದೆ.

220 ಮಕ್ಕಳನ್ನು ಹೊಂದಿರುವ ಮಾದರಿಯೊಂದು 90 ಹುಡುಗಿಯರು ಮತ್ತು 130 ಹುಡುಗರಿಂದ ಕೂಡಿದೆ. 360 ಡಿಗ್ರಿಯ ವೃತ್ತವೊಂದು ಈ 220 ಸಂಖ್ಯೆಯ ಮಾದರಿಯನ್ನು ಸೂಚಿಸುತ್ತದೆ. ಹುಡುಗಿಯರು ಮತ್ತು ಹುಡುಗರ ಸಂಖ್ಯೆಯ ಆಧಾರದ ಮೇಲೆ ಈಗ ವೃತ್ತದ ವಿಸ್ತೀರ್ಣವನ್ನು 90:130ರ ಅನುಪಾತದಲ್ಲಿ ಎರಡು ವೃತ್ತಪಿಂಡಗಳಾಗಿ ಭಾಗಮಾಡಬೇಕು. ಡಿಗ್ರಿಗಳ ಗಣನೆಯು, ಸರಳ ಲೆಕ್ಕಾಚಾರದಿಂದ, ಹುಡುಗಿಯರ ಪಾಲು 90 / 220 x 360 = 147 ಡಿಗ್ರಿಗಳು; ಹುಡುಗರ ಪಾಲು 130 / 220 x 360 = 213 ಡಿಗ್ರಿಗಳು. ಪೂರ್ಣವೃತ್ತವನ್ನು ಎರಡುಭಾಗಗಳಾಗಿ ಗುರುತಿಸಲಾಗುವುದು. ಹುಡುಗಿಯರ ಸಂಖ್ಯೆಯನ್ನು 147 ಡಿಗ್ರಿಯ ಭಾಗ ಸೂಚಿಸುತ್ತದೆ ಮತ್ತು 213 ಡಿಗ್ರಿಯ ಭಾಗ, ಹುಡುಗರ ಸಂಖ್ಯೆಯನ್ನು ಸೂಚಿಸುತ್ತದೆ.

ಪೈ-ನಕ್ಷೆಯನ್ನು ಈ ಕೆಳಗೆ ತೋರಿಸಲಾಗಿದೆ.

**ಚಿತ್ರ - 3: ಪೈ-ನಕ್ಷೆ**




ನಕ್ಷೆಗಳು ಮತ್ತು ರೇಖಾಚಿತ್ರಗಳನ್ನು ಉಪಯೋಗಿಸಿಕೊಂಡು ಬಹಳ ಚೆನ್ನಾಗಿ ಕಣ್ಣಿಗೆ ಕಾಣುವಂತೆ ದತ್ತಾಂಶಗಳನ್ನು ಬಿಂಬಿಸಬಹುದು. ಚೆನ್ನಾಗಿ ಪ್ರತಿನಿಧಿಸುವ ಪೂರಕ ಪರಿಪೂರಕ ವಿಧಾನಗಳೆಂದು ಇವುಗಳನ್ನು ಗುರುತಿಸಲಾಗುತ್ತದೆ.

**ಚಟುವಟಿಕೆ 1:**

ವಸತಿ ನಿಲಯವೊಂದರಲ್ಲಿ ಇರುವ 45 ವೃತ್ತಿನಿರತ ಮಹಿಳೆಯರು ಒಂದು ತಿಂಗಳ ಅವಧಿಯಲ್ಲಿ ಮಾಡಿರುವ ದೂರವಾಣಿ ಕರೆಗಳ ಸಂಖ್ಯೆಯನ್ನು ಕೆಳಗೆ ಕೊಡಲಾಗಿದೆ:

| | | | | | | | | |
|---|---|---|---|---|---|---|---|---|
| 20 | 03 | 22 | 14 | 15 | 22 | 45 | 28 | 28 |
| 11 | 33 | 29 | 32 | 41 | 56 | 26 | 34 | 09 |
| 14 | 31 | 07 | 31 | 29 | 20 | 26 | 18 | 07 |
| 19 | 39 | 22 | 25 | 26 | 40 | 14 | 28 | 07 |
| 23 | 22 | 18 | 14 | 26 | 26 | 21 | 26 | 10 |

ಅ) ಸೂಕ್ತವಾದ ವರ್ಗಾಂತರಗಳನ್ನು ಬಳಸಿಕೊಂಡು ಮೇಲಿನ ಎಣಿಕೆಗಳಿಗೆ ಒಂದು ಆವರ್ತನ ವಿತರಣಾ ಪಟ್ಟಿಯನ್ನು ತಯಾರು ಮಾಡಿ.

ಆ) ಮೇಲ್ಕಂಡ ದತ್ತಾಂಶಗಳನ್ನು ಬಳಸಿಕೊಂಡು ಆವರ್ತನ ಬಹುಭುಜಾಕೃತಿ ಮತ್ತು ಆಯತ ಚಿತ್ರಗಳನ್ನು ರಚಿಸಿ.

## 3.4 ಕೇಂದ್ರೀಯ ಸ್ಥಾನದ ಅಳತೆಗಳು

ಈಗಾಗಲೇ ತಿಳಿಸಿರುವಂತೆ, ನಮ್ಮ 'ವೀಕ್ಷಿಸಿದ ಅಂಶಗಳು ಯಾವುದಾದರೂ ಒಂದು ರೀತಿಯ ಮಾಪನವನ್ನು ಹೊಂದಿರುತ್ತವೆ. ದತ್ತಾಂಶಗಳ ಸ್ವರೂಪ ವಿವರಣೆಗೆ ಈ ಮಾಪನಗಳನ್ನು ಸೂಕ್ತವಾದ ಸಂಖ್ಯಾಶಾಸ್ತ್ರದ ತಂತ್ರಗಳಿಂದ ವಿಶ್ಲೇಷಿಸಬೇಕಾಗುವುದು. ಯಾವುದೇ ದತ್ತಾಂಶಗಣದ ಸ್ವರೂಪ ವಿವರಣೆಗೆ ಮುಖ್ಯವಾದ ಮೂಲವಾದ ಎರಡು ಅಂಶಗಳೆಂದರೆ, ಅದರ ಕೇಂದ್ರೀಯ ಪ್ರವೃತ್ತಿ ಮತ್ತು ಹರವು. ಈ ಎರಡೂ ಅಂಶಗಳು ವೀಕ್ಷಿಸಿದ ಅಂಶವಾದ ದತ್ತಾಂಶಗಳ ದಟ್ಟಣೆ ಮತ್ತು ಹರವಿನ ಬಗ್ಗೆ ಉಪಯುಕ್ತವಾದ ಸಾರಾಂಶವನ್ನು ನೀಡುತ್ತವೆ.

ಮಧ್ಯಸ್ಥ ಪರಿಮಾಣಗಳು ಕೇಂದ್ರೀಯ ಸ್ಥಾನದ ಅಳತೆಗಳು. ಇವು ಸಂಪೂರ್ಣ ಗಣವನ್ನು ಪ್ರತಿನಿಧಿಸುತ್ತವೆ. ಗಣದಲ್ಲಿರುವ ಎಣಿಕೆ(ಮೌಲ್ಯ)ಗಳು ಮಧ್ಯಸ್ಥ ಪರಿಮಾಣಗಳಿಗಿಂತ ಎಷ್ಟು ಮೇಲೆ ಅಥವಾ ಕೆಳಗೆ ಇವೆ ಎಂಬುದನ್ನು ಗುರುತಿಸಬಹುದು. ಭಿನ್ನಭಿನ್ನವಾಗಿರುವಂತಹ ವೀಕ್ಷಿಸಿದ ಅಂಶಗಳನ್ನು ಸಂಕ್ಷೇಪಣಾ ಪ್ರಕ್ರಿಯೆಯ ಆಧಾರದ ಮೇಲೆ ಒಂದೇ ಒಂದು ಮೌಲ್ಯಾಂಕವಾಗಿ ಗುರುತಿಸಬಹುದು. ಸಾಮಾನ್ಯವಾಗಿ ಬಳಸಲ್ಪಡುವ ಮಧ್ಯಸ್ಥ ಸಂಖ್ಯೆಗಳೆಂದರೆ.

ಅ. ಸರಾಸರಿ

ಆ. ಮಧ್ಯಮ ಬೆಲೆ ಅಥವಾ ಮಧ್ಯಾಂಕ ಮತ್ತು

ಇ. ರೂಢಿಬೆಲೆ(ಬಹುಲಕ)

ವೀಕ್ಷಿಸಿದ ಅಂಶಗಳ ಎಲ್ಲಾ ಮೌಲ್ಯಗಳನ್ನೂ ಕೂಡಿ, ಮೊತ್ತವನ್ನು ಗುಂಪಿನಲ್ಲಿರುವ ಒಟ್ಟಾರೆ ಮಾಪನಗಳ ಸಂಖ್ಯೆಯಿಂದ ಭಾಗಿಸಿದಾಗ ದೊರೆಯುವುದೇ ಸರಾಸರಿ. ಪ್ರತಿದಿನವೂ ವೃತ್ತಪತ್ರಿಕೆಗಳನ್ನು ಓದಲು ವ್ಯಯಿಸುವ ಕಾಲ ಎಷ್ಟು ಎಂಬ ಅಂದಾಜನ್ನು 5 ಜನರಿಂದ ಕೇಳಿದ್ದೀರಿ ಎಂದೂ, ಅವರು ವ್ಯಯಿಸುವ ಕಾಲ ಅನುಕ್ರಮವಾಗಿ 30, 60, 90, 15 ಮತ್ತು 45 ನಿಮಿಷಗಳು ಎಂದು ತಿಳಿಸಿದ್ದಾರೆ ಎಂದಿಟ್ಟುಕೊಳ್ಳೋಣ. ಸರಾಸರಿಯನ್ನು ಕಂಡುಹಿಡಿಯಲು ನೀವು ಈ ಎಲ್ಲ ಸಂಖ್ಯೆಗಳನ್ನೂ ಕೂಡಿ, ಅದರ ಮೊತ್ತವನ್ನು ನಂತರ 5ರಿಂದ ಭಾಗಿಸುತ್ತೀರಿ. ಈ ಸಂದರ್ಭದಲ್ಲಿ, ಸರಾಸರಿ 240 / 5 = 48 ನಿಮಿಷಗಳು ಇದನ್ನೇ ಸಾಂಕೇತಿಕವಾಗಿ ತೋರಿಸುವುದಾದರೆ ಸರಾಸರಿ = $\Sigma x$ / N. ಇಲ್ಲಿ $\Sigma x$ ಎನ್ನುವುದು ಗುಂಪಿನಲ್ಲಿರುವ ಎಲ್ಲಾ ವೀಕ್ಷಿಸಿದ ಅಂಶಗಳ ಮೊತ್ತ ಮತ್ತು N ಎನ್ನುವುದು ಮಾಪನಗಳ ಒಟ್ಟು ಸಂಖ್ಯೆ. ನಮ್ಮ ಈ ನಮೂನೆಯಲ್ಲಿ ಜನರು ಪ್ರತಿದಿನವೂ ಸರಾಸರಿ 48 ನಿಮಿಷಗಳಷ್ಟು ಕಾಲ ವೃತ್ತಪತ್ರಿಕೆಗಳನ್ನು ಓದಲು ವ್ಯಯಿಸುತ್ತಾರೆ ಎಂಬುದನ್ನು ತಿಳಿಸುತ್ತದೆ. ಇದು ಪರಾಮರ್ಶೆಗೆ ಒಂದು ಚೌಕಟ್ಟನ್ನು ಒದಗಿಸುತ್ತದೆ. ಇದರ ಆಧಾರದ ಮೇಲೆ ವೀಕ್ಷಿಸಿದ ಎಲ್ಲಾ ಅಂಶಗಳನ್ನೂ ತುಲನೆ ಮಾಡಬಹುದು. ಕೆಲವರು ಸರಾಸರಿಗಿಂತ ಬಹಳ ಹೆಚ್ಚು ಸಮಯವನ್ನು ವ್ಯಯಮಾಡಿದರೆ, ಮತ್ತೆ ಕೆಲವರು ಕಡಿಮೆ ಕಾಲವನ್ನೂ, ಇನ್ನು ಕೆಲವರು ಸರಾಸರಿಯ ಸರಿಸುಮಾರಿನಷ್ಟು ಕಾಲವನ್ನು ವ್ಯಯಮಾಡುತ್ತಾರೆ.

ಕೇಂದ್ರೀಯ ಸ್ಥಾನದ ಇನ್ನೊಂದು ಅಳತೆಯೆಂದರೆ, ಮಧ್ಯಾಂಕ. ಗುಂಪಿನಲ್ಲಿರುವ ವೀಕ್ಷಿಸಿದ ಅಂಶಗಳನ್ನು ಗರಿಷ್ಠ ಮಟ್ಟದಿಂದ ಕನಿಷ್ಠ ಮಟ್ಟದವರೆಗೆ, ಅಂದರೆ ಅತಿ ಹೆಚ್ಚಿನ ಮಾಪನದಿಂದ ಅತಿ ಕಡಿಮೆ ಮಾಪನದವರೆಗೆ ಕ್ರಮಾನುಸಾರವಾಗಿ ಜೋಡಿಸಿದರೆ, ಮಧ್ಯಾಂತರವು ಇತರ ಮಧ್ಯದ ಬೆಲೆ ಆಗಿರುತ್ತದೆ. ಅರ್ಧಭಾಗದಷ್ಟು ಎಣಿಕೆಗಳು ಇದರ ಮೇಲೆಯೂ, ಉಳಿದರ್ಧಭಾಗ ಇದಕ್ಕೆ ಕಡಿಮೆಯಾಗಿಯೂ ಇರುತ್ತದೆ. ಹಿಂದಿನ ಉದಾಹರಣೆಯಲ್ಲಿ, ಪ್ರತಿಕ್ರಿಯೆ ನೀಡಿರುವವರು ತಿಳಿಸಿರುವಂತಹ ಕಾಲದ ಪ್ರಮಾಣವನ್ನು ಏರಿಕೆಯ ಕ್ರಮದಲ್ಲಿ ಜೋಡಿಸಿದರೆ, 15, 30, 45, 60, 90 ಎಂದೂ ಮಧ್ಯದ ಸಂಖ್ಯೆ 45 ಎಂದೂ ಆಗುತ್ತದೆ. ಇದೇ ಮಧ್ಯಾಂಕದ ಮೌಲ್ಯ. ಗುಂಪಿನಲ್ಲಿ ಇನ್ನೂ ಒಂದು ಸಂಖ್ಯೆ, ಉದಾಹರಣೆಗೆ 75 ಎನ್ನುವುದು, ಹೆಚ್ಚುವರಿಯಾಗಿದ್ದರೆ ಗುಂಪಿನ ಎಣಿಕೆಗಳ ಕ್ರಮವು 15, 30, 45, 60, 75, 90 ಎಂದಾಗಿಯೂ, ಮಧ್ಯಾಂಕದ ಬೆಲೆಯು ಮಧ್ಯದ ಎರಡು ಸಂಖ್ಯೆಗಳ ಸರಾಸರಿಗೂ ಸಮಯವಾಗಿರುತ್ತದೆ.

ರೂಢಿಬೆಲೆ ಅಥವಾ ಬಹುಲಕ (Mode) ಎನ್ನುವುದು ಬಹುಬೇಗನೆ ಕಂಡುಹಿಡಿಯಬಹುದಾದ ಕೇಂದ್ರೀಯ ಸ್ಥಾನದ ಮತ್ತೊಂದು ಅಳತೆ. ಕೊಟ್ಟಿರುವಂತಹ ದತ್ತಾಂಶದಲ್ಲಿ ಯಾವ ಮೌಲ್ಯವು ಬಹಳ ಹೆಚ್ಚುಬಾರಿ ಪುನರಾವರ್ತಿಸುವುದೋ ಅದನ್ನು ರೂಢಿಬೆಲೆ ಎಂದು ಕರೆಯಲಾಗುತ್ತದೆ.

ಕೇಂದ್ರೀಯ ಸ್ಥಾನದ ಮೂರು ಅಳತೆಗಳನ್ನು ಕಂಡುಹಿಡಿಯುವ ಕ್ರಮವನ್ನು ಕಲ್ಪಿತವಾದ ಒಂದು ದತ್ತಾಂಶಗಳ ಗುಂಪಿನ ಸಹಾಯದಿಂದ ವಿವರಿಸಬಹುದು. ಮಧ್ಯವಾರ್ಷಿಕ ರಜಾದಿನಗಳಲ್ಲಿ ಹತ್ತನೆಯ ತರಗತಿಯ 33 ಮಕ್ಕಳು ನೋಡಿದ ಚಿತ್ರಗಳ ಸಂಖ್ಯೆಯನ್ನು ಕೆಳಗಿನ ಪಟ್ಟಿಯಲ್ಲಿ ನೀಡಲಾಗಿದೆ.

| ನೋಡಿದ ಚಿತ್ರಗಳ ಸಂಖ್ಯೆ | ಆವರ್ತನಗಳು(Frequencies) |
|---|---|
| 5 | • • • • |
| 6 | • • • • • |
| 7 | • • • • • • • • |
| 8 | • • • • • • • • • • |
| 9 | • • • |
| 10 | • • |
| 11 | • |
| N = 33 | |

ಸರಾಸರಿ, ಮಧ್ಯಾಂಕ ಮತ್ತು ರೂಢಿಬೆಲೆ (Mean, Median and Mode)ಯನ್ನು ಕಂಡುಹಿಡಿಯುವ ಕ್ರಮ ಈ ಮುಂದಿನಂತಿದೆ.

ಸರಾಸರಿ

| X | | f | | f * x |
|---|---|---|---|---|
| 5 | x | 4 | = | 20 |
| 6 | x | 5 | = | 30 |
| 7 | x | 8 | = | 56 |
| 8 | x | 10 | = | 80 |
| 9 | x | 3 | = | 27 |
| 10 | x | 1 | = | 11 |
| | | $\sum fx$ | = | 224 |

x = ಸರಾಸರಿ, = $\sum fx / N = 224 / 33 = 7.4$

**ಮಧ್ಯಾಂಕ :** ಮಧ್ಯಬಿಂದುವೇ ಮಧ್ಯಾಂಕ. 33 ಎಣಿಕೆಗಳ ಕ್ರಮಪಟ್ಟಿಯಲ್ಲಿ ಮಧ್ಯದ ಸಂಖ್ಯೆ ಹದಿನೇಳನೆಯದು. 17ನೆಯ ಸಂಖ್ಯೆಯ ಮೌಲ್ಯ 7. ಆದ್ದರಿಂದ ಮಧ್ಯಾಂಕ = 7

**ರೂಢಿಬೆಲೆ:** ಬಹಳ ಹೆಚ್ಚು ಸಾರಿ ಪುನರಾವರ್ತಿತವಾಗುವ ಮೌಲ್ಯವೇ ರೂಢಿಬೆಲೆ. ಕೊಟ್ಟಿರುವ ಗುಂಪಿನಲ್ಲಿ 8 ಎಂಬುದೇ ರೂಢಿಬೆಲೆ. ಏಕೆಂದರೆ, ಈ ಮೌಲ್ಯವೇ ಬೇರೆಯವುಗಳಿಗಿಂತ ಅತಿ ಹೆಚ್ಚುಬಾರಿ ಅಂದರೆ, 10 ಸಾರಿ ಪುನಾವರ್ತಿತವಾಗಿರುವುದು.

ಅತಿ ಹೆಚ್ಚಿನ ಸನ್ನಿವೇಶಗಳಲ್ಲಿ, ಕೇಂದ್ರೀಯ ಸ್ಥಾನದ ಅಳತೆಯು ಅವಶ್ಯವಿದ್ದಾಗ, ಮಧ್ಯಾಂಕ ಮತ್ತು ರೂಢಿಬೆಲೆ ಅಳತೆಗಳಿಗಿಂತ ಸರಾಸರಿಯ ಅಳತೆಯೇ ಮೊದಲ ಆಯ್ಕೆಯಾಗತಕ್ಕದ್ದು. ಏಕೆಂದರೆ, ಸರಾಸರಿಯ ಪರಿಭಾಷೆಯು ಚೆನ್ನಾಗಿ ವಿಶ್ಲೇಷಿಸಲಾಗಿರುವುದಷ್ಟೇ ಅಲ್ಲದೆ, ಅದನ್ನು ಕಂಡುಹಿಡಿಯುವುದೂ ಸುಲಭ. ಜನಸಮೂಹದ ಮೌಲ್ಯಗಳ ಒಟ್ಟಾರೆಯಾದ ಒಂದು ಉತ್ತಮ ಅಂದಾಜನ್ನು ಇದು ಒದಗಿಸುತ್ತದೆ. ಆದರೆ, ಕೆಲವೊಂದು ಸನ್ನಿವೇಶಗಳಲ್ಲಿ ಮಧ್ಯಾಂಕ ಮುಖ್ಯವಾಗುತ್ತದೆ. ದತ್ತಾಂಶಗಳಲ್ಲಿ ಒಂದು ನಮೂನೆಯ ವಿಕ್ಷಿಸಿದ ಅಂಶಗಳು ಇರುವಾಗ (ಉದಾಹರಣೆಗೆ ಕೆಲವೊಂದು ವಿಪರೀತದ ಅಂಶಗಳಿದ್ದಾಗ), ಮಧ್ಯಾಂಕವು ಸೂಕ್ತವಾದ ಅಳತೆ ಎಂದು ಕಂಡುಬರುತ್ತದೆ. ಬಹಳ ಬೇಗನೆ, ಕೇಂದ್ರೀಯ ಸ್ಥಾನದ ಮಾಪನ ಬೇಕಾದಾಗ, ಅಥವಾ ಬಹಳ ಹೆಚ್ಚು ಬಾರಿ ಪುನರಾವರ್ತಿತವಾಗುವ ಮೌಲ್ಯದ ಅವಶ್ಯಕತೆ ಕಂಡುಬಂದಾಗ, ರೂಢಿಬೆಲೆಯ ಬಳಕೆ ಮಾಡಲಾಗುತ್ತದೆ. ಆದರೆ, ಸಂಶೋಧನಾ ವರದಿಗಳಲ್ಲಿ ಇದರ ಬಳಕೆ ವಿರಳ.

## 3.5 ಹರವಿನ ಅಳತೆಗಳು

ಹಿಂದಿನ ಭಾಗದಲ್ಲಿ, ದತ್ತಾಂಶಗಳ ಒಂದು ಗುಂಪಿನಲ್ಲಿ, ದತ್ತಾಂಶದ ಕೇಂದ್ರೀಯ ಬಿಂದುಗಳಾದ ಸರಾಸರಿಗಳ ಬಗ್ಗೆ ನೀವು ಕಲಿತಿರಿ. ದತ್ತಾಂಶ ವಿಶ್ಲೇಷಣೆಯಲ್ಲಿ ಇದರಷ್ಟೇ ಮುಖ್ಯವಾದ ಇನ್ನೊಂದು ಅಂಶವೆಂದರೆ, ವೀಕ್ಷಿಸಿದ ಅಂಶಗಳಲ್ಲಿರುವ ಏರಿಳಿತ, ವ್ಯತ್ಯಾಸ ವಿಸ್ತೃತತೆ ಅವುಗಳ ಹರವು. ವೀಕ್ಷಿಸಿದ ಅಂಶಗಳ ಒಂದು ಗುಂಪಿನಲ್ಲಿ ಏರಿಳಿತಗಳು ಎಷ್ಟು ಸರ್ವೇಸಾಧಾರಣವೆಂದರೆ, ಸಂಖ್ಯಾಶಾಸ್ತ್ರವನ್ನು ಬಹಳಷ್ಟು ಬಾರಿ ವ್ಯತ್ಯಾಸಗಳ ಅಧ್ಯಯನ ಎಂದೂ ವಿವರಿಸಲಾಗುತ್ತದೆ. ಯಾವುದೇ ವೀಕ್ಷಿಸಿದ ಅಂಶಗಳ ಸಮೂಹವೊಂದನ್ನು ತೆಗೆದುಕೊಳ್ಳಿ, ಎತ್ತರ, ತೂಕ, ಬುದ್ಧಿಮತ್ತೆ, ನೋಡಿರುವ ಚಲನಚಿತ್ರಗಳ ಸಂಖ್ಯೆ, ವೃತ್ತ ಪತ್ರಿಕೆಗಳನ್ನು ಓದಲು ಅಥವಾ ಟೆಲಿವಿಷನ್ ನೋಡಲು ವ್ಯಯ ಮಾಡುವ ಸಮಯ ಅಥವಾ ಬೇರಾವುದೇ ವಿಷಯವಿರಲಿ. ಈ ಅಂಶಗಳಿಗೆ ಸಂಬಂಧಿಸಿದಂತೆ ವ್ಯಕ್ತಿ-ವ್ಯಕ್ತಿಗಳ ನಡುವೆ ವ್ಯತ್ಯಾಸಗಳನ್ನು ನೀವು ಗುರುತಿಸುತ್ತೀರಿ. ಈ ಏರಿಳಿತಗಳನ್ನು ವಿವರಿಸುವುದೂ ಮತ್ತು ಅವನ್ನು ಅಳತೆ ಮಾಡುವುದೂ ಬಹಳ ಮುಖ್ಯ. ಏಕೆಂದರೆ, ಎರಡು ಗುಂಪುಗಳು ಸಮ ಪ್ರಮಾಣದ ಸರಾಸರಿಯನ್ನು ಹೊಂದಿದ್ದರೂ ಬೇರೆ ಬೇರೆ ರೀತಿಯ (ಪ್ರಮಾಣದ) ಭಿನ್ನತೆಗಳಿರಬಹುದು. ಈ ಏರಿಳಿತಗಳನ್ನು ಅಳತೆ ಮಾಡಲು ಸಂಶೋಧಕರಿಗೆ ಹಲವಾರು ಅಳತೆಗಳಿವೆ. ಇವುಗಳಲ್ಲಿ ಬಹಳ ಸಾಮಾನ್ಯವಾಗಿ ಬಳಕೆಯಾಗುವುದೆಂದರೆ, 'ವ್ಯಾಪ್ತಿ', 'ಸರಾಸರಿ ವಿಚಲನೆ' ಮತ್ತು 'ಮಾನಕ ವಿಚಲನೆ'ಗಳು (Range, Mean deviation and Standard deviation). ಇಲ್ಲಿ ಗಮನಿಸಬೇಕಾದ ಮುಖ್ಯ ಅಂಶ ಹಾಗು ಈ ಅಳತೆಗಳಲ್ಲಿ ಬಹಳ ಮುಖ್ಯವಾದುದೆಂದರೆ, ಮಾನಕ ವಿಚಲನೆ. ಈ ಅಳತೆಗಳ ಸ್ಥೂಲ ಪರಿಚಯವನ್ನು ಕೆಳಗೆ ಕೊಡಲಾಗಿದೆ.

### 3.5.1 ವ್ಯಾಪ್ತಿ

ವಿಸ್ತೃತತೆಯ ಅತಿಸರಳ ಅಳತೆಯೆಂದರೆ, ವ್ಯಾಪ್ತಿ. ಕೊಟ್ಟಿರುವ ಗುಂಪಿನಲ್ಲಿರುವ ಗರಿಷ್ಠ ಮತ್ತು ಕನಿಷ್ಠವಾದ ಮೌಲ್ಯಗಳ ನಡುವಿನ ವ್ಯತ್ಯಾಸವೇ ವ್ಯಾಪ್ತಿ. ಮುಂದೆ ನೀಡಿರುವಂತೆ ವೀಕ್ಷಿತ ಅಂಶಗಳ ಒಂದು ಪಟ್ಟಿ ಇದೆ ಎಂದಿಟ್ಟುಕೊಳ್ಳಿ, 8, 12, 13, 16 ಮತ್ತು 27 ಈ ಗುಂಪಿನಲ್ಲಿ ಗರಿಷ್ಠವಾದ ಎಣಿಕೆ -21 ಮತ್ತು ಕನಿಷ್ಠತಮವಾದ ಎಣಿಕೆ - 8. ಇವುಗಳ ನಡುವಿನ ವ್ಯತ್ಯಾಸ 21-8 = 13 ಎಂಬುದೇ ಮೌಲ್ಯಾಂಕಗಳ ವ್ಯಾಪ್ತಿ. ಬಹಳ ವೇಗವಾಗಿ ಕಂಡುಹಿಡಿಯಬಹುದಾದ ಹರವಿನ ಅಳತೆ, ವ್ಯಾಪ್ತಿ. ಇದು ಸಣ್ಣದಾದ ನಮೂನೆಗಳಿಗೆ ವಿಶೇಷವಾಗಿ ಅನ್ವಯವಾಗತಕ್ಕದ್ದು.

### 3.5.2 ಸರಾಸರಿ ವಿಚಲನೆ

ಹೆಸರೇ ತಿಳಿಸುವಂತೆ, ಈ ಅಳತೆಯ ಮೌಲ್ಯಾಂಕಗಳ ಸರಾಸರಿಯಿಂದ ಪ್ರತಿಯೊಂದು ಎಣಿಕೆಯ ಏರಿಳಿತಗಳನ್ನು ಲೆಕ್ಕಕ್ಕೆ ತೆಗೆದುಕೊಳ್ಳುತ್ತದೆ. ಈ ಏರಿಳಿತಗಳೆಲ್ಲದರ ಸರಾಸರಿ ಮೌಲ್ಯವನ್ನು ಸರಾಸರಿ ವಿಚಲನೆಯ ತೋರಿಸುತ್ತದೆ. ಬೇರೆ ರೀತಿಯಾಗಿ ಹೇಳುವುದಾದರೆ, ಚಿಹ್ನೆಗಳನ್ನು ಧನಾತ್ಮಕ, ಋಣಾತ್ಮಕ ಎಂದು ಎಣಿಕೆ ಮಾಡದೆ ಪಡೆದ ಏರಿಳಿತಗಳ ಮೊತ್ತವನ್ನು ಒಟ್ಟಾರೆ ವೀಕ್ಷಿಸಿದ ಅಂಶಗಳಿಂದ ಭಾಗಿಸಿದರೆ ಬರುವ ಅಳತೆಯೇ ಸರಾಸರಿ ವಿಚಲನೆ. ಹಿಂದಿನ ಉದಾಹರಣೆಯಲ್ಲಿ ಕೊಟ್ಟಿರುವ ಎಣಿಕೆಗಳಾದ 8,12,13 16 ಮತ್ತು 21ರ ಸರಾಸರಿ = 14. ಈ ಸರಾಸರಿಯಿಂದ ಪ್ರತಿಯೊಂದು ಎಣಿಕೆಯ ವ್ಯತ್ಯಾಸವು ಕ್ರಮವಾಗಿ -6, -2, -1, 2 ಮತ್ತು 7. ಈ ಸಂಖ್ಯೆಗಳ ಚಿಹ್ನೆಗಳನ್ನು ಗಮನಕ್ಕೆ ತೆಗೆದುಕೊಳ್ಳದೆ ಕೂಡಿದರೆ ಬರುವ ಮೊತ್ತ 18 ಇದನ್ನು ಗುಂಪಿನಲ್ಲಿರುವ ಒಟ್ಟು ಸಂಖ್ಯೆಯಿಂದ ಭಾಗಿಸಿದರೆ ಬರುವ ಗುಣಲಬ್ಧ 18 / 5 = 3.6 ಇದೇ ಸರಾಸರಿ ವಿಚಲನೆಯ ಮೌಲ್ಯ. ಆದರೆ, ಹರವಿನ ಅಳತೆಯಾಗಿ ಸರಾಸರಿ ವಿಚಲನೆಯನ್ನು ಸಂಶೋಧನಾ ಕಾರ್ಯಗಳಲ್ಲಿ ಬಳಕೆ ಮಾಡುವುದು ವಿರಳ.

## 3.5.3 ಮಾನಕ ವಿಚಲನೆ

ವಿಸ್ತೃತತೆಯನ್ನು ಮಾಪನ ಮಾಡಲು ಅತಿಯಾಗಿ ಬಳಸಲ್ಪಡುವ ಜನಪ್ರಿಯ ಹಾಗು ಮುಖ್ಯವಾದ ಅಳತೆಯೆಂದರೆ, ಮಾನಕ ವಿಚಲನೆ. ಸರಾಸರಿ ವಿಚಲನೆಯನ್ನು ಲೆಕ್ಕಹಾಕುವಾಗ, ಸರಾಸರಿಯಿಂದ ಇರುವ ವ್ಯತ್ಯಾಸವನ್ನು ಚಿಹ್ನೆಯನ್ನು ಗಣನೆಗೆ ತಾರದಂತೆ ತೆಗೆದುಕೊಳ್ಳುತ್ತೇವೆ. ಆದರೆ, ಮಾನಕ ವಿಚಲನೆಯ ಇದಕ್ಕೆ ಪರ್ಯಾಯವಾದ ವಿಧಾನವನ್ನು ಅನುಸರಿಸುತ್ತದೆ. ಮಾನಕ ವಿಚಲನೆಯನ್ನು ಕಂಡುಹಿಡಿಯುವ ಕ್ರಮ.

1. ಸರಾಸರಿಯಿಂದ ವ್ಯತ್ಯಾಸಗಳನ್ನು ತೆಗೆದುಕೊಳ್ಳುವುದು

2. ಈ ವ್ಯತ್ಯಾಸಗಳನ್ನು ವರ್ಗಮಾಡುವುದು

3. ವರ್ಗಮಾಡಿದ ವ್ಯತ್ಯಾಸಗಳನ್ನು ಕೂಡಿ

4. ಬರುವ ಮೊತ್ತವನ್ನು 'N' ನಿಂದ ಭಾಗಮಾಡುವುದು, ಮತ್ತು

5. ಅದರ ವರ್ಗಮೂಲ ಕಂಡುಹಿಡಿಯುವುದು.

ಸೂತ್ರದ ರೂಪದಲ್ಲಿ ಬರೆಯುವುದಾದರೆ, ಮಾನಕವಿಚಲನೆ (SD$\sigma$) = $\sqrt{\Sigma(X-\bar{X})^2 / N}$ ಮೇಲೆ ಕೊಟ್ಟಿರುವ ಮೌಲ್ಯಾಂಕ ಗಣಕ್ಕೆ ಮಾನಕ ವಿಚಲನೆಯನ್ನು ಲೆಕ್ಕ ಹಾಕುವುದರ ಮೂಲಕ ಈ ಕ್ರಮವನ್ನು ವಿವರಿಸಬಹುದು.

ಮೌಲ್ಯಾಂಕಗಳು, X: 8,12,13,16,21 N = 5

ಸರಾಸರಿ, $\bar{X}$: 70/5 =14

ವ್ಯತ್ಯಾಸಗಳು, $(X - \bar{X})$ : -6, -2, -1, 2, 7

ವ್ಯತ್ಯಾಸಗಳ ವರ್ಗ, $(X - \bar{X})^2$ = 36, 4, 1, 4, 49

ವ್ಯತ್ಯಾಸಗಳ ಮೊತ್ತ / N, $[(X - \bar{X})^2 / N]$ 94 / 5 = 18.8

ಇದರ ಮೂಲವರ್ಗ = $\sqrt{18.8}$ = 4.34, ಇದೇ ಮಾನಕ ವಿಚಲನೆ.

ಹರಹನ್ನು ಅಳತೆ ಮಾಡಲು ಸಾಮಾನ್ಯವಾಗಿ ಬಳಸಲ್ಪಡುವ, ಬಹು ಮುಖ್ಯವಾದ ಮಾಪನವೆಂದರೆ, ಮಾನಕ ವಿಚಲನೆ. ಇದಕ್ಕೆ ಬಹಳಷ್ಟು ಉಪಯೋಗಗಳಿವೆ. ವಿವಿಧ ಗುಂಪುಗಳ ನಡುವೆ ಇರುವ ವ್ಯತ್ಯಾಸದ ಮೌಲ್ಯಮಾಪನ ಮಾಡಲು ಇದನ್ನು ಬಳಸಲಾಗುತ್ತದೆ. ಇದನ್ನು ಸಾಮಾನ್ಯವಾಗಿ ದೋಷದ (errorನ) ಅಳತೆಯಾಗಿಯೂ ಬಳಸಲಾಗುತ್ತದೆ. ಬೇರೆ ಬೇರೆ ರೀತಿಯ ಅಂಕಿ ಅಂಶಗಳನ್ನು ಕಲನ ಮಾಡುವಾಗ, ಹಲವಾರು ಸೂತ್ರಗಳ ಭಾಗವಾಗಿ ಮಾನಕ ವಿಚಲನೆಯು ಸೇರಿಕೊಂಡಿರುತ್ತದೆ.

## 3.6 ಸಹಸಂಬಂಧದ ಅಳತೆಗಳು

ಘಟಕದ ಹಿಂದಿನ ಭಾಗಗಳಲ್ಲಿ ವಿವರಿಸಲಾಗಿರುವ ದತ್ತಾಂಶಗಳ ವಿಶ್ಲೇಷಣಾ ತಂತ್ರಗಳು, ವೀಕ್ಷಿಸಿದ ಅಂಶಗಳ ಮೌಲ್ಯಾಂಕಗಳ ಗುಂಪನ್ನು ಅದರ ಕೇಂದ್ರೀಯ ಸ್ಥಾನದ ಅಳತೆಗಳು ಮತ್ತು ಹರಿವಿನ ಅಳತೆಗಳಾಗಿ ಸಂಕ್ಷೇಪಿಸುವುದನ್ನು ಕುರಿತಾಗಿದ್ದು. ಈ ತಂತ್ರಗಳೆಲ್ಲವೂ, ಒಂದು ಸಲಕ್ಕೆ ಕೇವಲ ಒಂದು ಚರಾಂಶವನ್ನು ಮಾತ್ರ ಪರಿಗಣಿಸುತ್ತವೆ. ಬುದ್ಧಿಮತ್ತೆಯ ಪರೀಕ್ಷೆಯಲ್ಲಿ ವಿದ್ಯಾರ್ಥಿಗಳ ಗುಂಪೊಂದು ಪಡೆದಿರುವ ಅಂಕಗಳಾಗಿರಬಹುದು, ಟಿವಿ ವೀಕ್ಷಣೆಯಲ್ಲಿ ಮಕ್ಕಳು ಕಳೆಯುವ ಕಾಲ ಆಗಿರಬಹುದು ಅಥವಾ ಸಂಶೋಧಕನ ಆಸಕ್ತಿಯ ಯಾವುದೇ ಚರಾಂಶ ಇರಬಹುದು. ಸಂಶೋಧಕನು ಬುದ್ಧಿಮತ್ತೆಯ ಮೌಲ್ಯಗಳ ಸರಾಸರಿಯನ್ನೋ, ಟಿವಿ ವೀಕ್ಷಣೆಯ ಸರಾಸರಿ ಕಾಲವನ್ನೋ ಮತ್ತು ಆ ಮೌಲ್ಯಗಳ ಹರವನ್ನೋ ಲೆಕ್ಕ ಹಾಕುತ್ತಾನೆ. ಆದರೆ, ಅತಿ ಹೆಚ್ಚಿನ ಸಂದರ್ಭಗಳಲ್ಲಿ, ಎರಡು ಅಥವಾ ಹೆಚ್ಚಿನ ಚರಾಂಶಗಳ ನಡುವಿನ ಸಂಬಂಧ ಕುರಿತಾದ ಪ್ರಶ್ನೆಗಳ ಬಗ್ಗೆಯೇ ಸಂಶೋಧಕರ ಕಾಳಜಿ ಇರುತ್ತದೆಯೇ ಹೊರತು ಕೇವಲ ಸರಾಸರಿಗಳನ್ನೋ, ಮಾರ್ಪುಗಳನ್ನೋ ಕಂಡು ಹಿಡಿಯುವುದರ ಮೇಲಲ್ಲ. ಬೇರೆ ಬೇರೆ ಮಟ್ಟದ ಬುದ್ಧಿಮತ್ತೆಯುಳ್ಳ ಮಕ್ಕಳು ಬೇರೆ ಬೇರೆ ಪ್ರಮಾಣದಲ್ಲಿ ಟಿವಿನೋಡುತ್ತಾರೆಯೇ? ತರಗತಿಯಲ್ಲಿ ಪಡೆದ ಅಂಕಗಳಿಗೂ ಮಗುವಿನ ಲಿಂಗಕ್ಕೂ ಯಾವುದಾದರೂ ಸಂಬಂಧವಿದೆಯೇ? ಚಲನಚಿತ್ರಗಳಿಗೆ ಎಷ್ಟು ಬಾರಿ ಹೋಗುವರೆಂಬುದಕ್ಕೂ ವಯೋಮಾನಕ್ಕೂ ಸಂಬಂಧವುಂಟೇ? ಈ ರೀತಿಯಾದ, ಸಂಬಂಧ, ಸಹವರ್ತನೆಗಳನ್ನು ಕುರಿತಾದ ಪ್ರಶ್ನೆಗಳಂತೂ ಅನಂತ. ದತ್ತಾಂಶಗಳ ವಿವಿಧ ಗುಂಪುಗಳ ನಡುವೆ ಇಂಥಹ ಸಂಬಂಧ, ಸಹವರ್ತನೆಯನ್ನು ಅಳತೆ ಮಾಡಲು ಸಹವರ್ತನೆಯ ಹಲವಾರು ಅಳತೆಗಳು ಲಭ್ಯವಿದೆ. ಸಹವರ್ತನೆಯ ಸೂಚಿಯನ್ನು ನೀಡಲು ಸಾಮಾನ್ಯವಾಗಿ ಬಳಸಲ್ಪಡುವ ಕೆಲವೊಂದು ತಂತ್ರಗಳ ಸ್ಥೂಲ ವಿವರಣೆಯನ್ನು ಇಲ್ಲಿ ನೀಡಲಾಗಿದೆ.

### 3.6.1 ಕಂಟಿನ್‌ಜೆನ್ಸಿ ಪಟ್ಟಿ ಮತ್ತು ಕೈ - ವರ್ಗ

ಸಹವರ್ತನೆಯ ವಿಶ್ಲೇಷಣೆಯ ಅತಿಸುಲಭ ವಿಧಾನವೆಂದರೆ ಎರಡು ಚರಾಂಶಗಳ ಪಟ್ಟಿ ತಯಾರಿಸುವುದು. ಪಟ್ಟಿಯ ಅಡ್ಡಸಾಲುಗಳು ಒಂದು ಚರಾಂಶವನ್ನು ಪ್ರತಿನಿಧಿಸಿದರೆ, ಲಂಬಸಾಲುಗಳು ಮತ್ತೊಂದು ಚರಾಂಶವನ್ನು ಪ್ರತಿನಿಧಿಸುವಂತೆಯೂ ಈ ಪಟ್ಟಿ ಇರುತ್ತದೆ. ಓದುಗರ ಲಿಂಗ ಮತ್ತು ವೃತ್ತಪತ್ರಿಕೆಯ ಸಂಪಾದಕೀಯವನ್ನು ಓದುವ ಗುಣ-ಈ ಎರಡರ ನಡುವಿನ ಸಂಬಂಧವನ್ನು ಅಧ್ಯಯನ ಮಾಡಲು ನೀವು ಆಸಕ್ತಿ ಹೊಂದಿದ್ದೀರಿ ಎಂದಿಟ್ಟುಕೊಳ್ಳೋಣ. ಸುಮಾರು 600 ಪುರುಷರು ಮತ್ತು 400 ಮಹಿಳೆಯರಿಂದ ವೃತ್ತಪತ್ರಿಕೆಗಳ ಸಂಪಾದಕೀಯನ್ನು ಓದುವುದನ್ನು ಕುರಿತು - ಓದುತ್ತಾರೆ ಅಥವಾ ಓದುವುದಿಲ್ಲ, ಎಂದಾದ ದತ್ತಾಂಶಗಳನ್ನು ನೀವು ಸಂಗ್ರಹಿಸಿದ್ದೀರಿ. ದತ್ತಾಂಶಗಳನ್ನು ಕೆಳಕಂಡಂತೆ 2 x 2ರ ಪಟ್ಟಿಯಾಗಿ ಮಾಡಬಹುದು.

ಪಟ್ಟಿ - 5: ಸಂಪಾದಕೀಯವನ್ನು ಓದುವ ಪುರುಷರ ಮತ್ತು ಮಹಿಳೆಯರ ಅಭ್ಯಾಸ

| ನೀವು ನಿಯತವಾಗಿ ಸಂಪಾದಕೀಯಗಳನ್ನು ಓದುವಿರಾ? | ಲಿಂಗ | | ಒಟ್ಟು |
|---|---|---|---|
| | ಪುರುಷ | ಮಹಿಳೆ | |
| ಹೌದು | 380 | 110 | 490 |
| ಇಲ್ಲ | 220 | 290 | 510 |
| ಒಟ್ಟು | 600 | 400 | 1000 |

ಎಷ್ಟು ಜನ ಪುರುಷರು ಸಂಪಾದಕೀಯವನ್ನು ಓದುತ್ತಾರೆ ಅಥವಾ ಓದುವುದಿಲ್ಲ, ಇಲ್ಲವೆ ಎಷ್ಟು ಮಹಿಳೆಯರು ಈ ವರ್ಗಗಳಲ್ಲಿದ್ದಾರೆ ಎಂಬುದನ್ನು ಕಾಣುವುದು ಈ ಪಟ್ಟಿಯಿಂದ ಸಾಧ್ಯವಾಗುತ್ತದೆ. ಸಂಪಾದಕೀಯವನ್ನು ಓದುವ ಅಭ್ಯಾಸದಲ್ಲಿ ಪುರುಷರು ಮತ್ತು ಮಹಿಳೆಯರಲ್ಲಿ ಇರುವ ವ್ಯತ್ಯಾಸಗಳನ್ನು ಗುರುತಿಸುವುದರಿಂದ, ಸಂಬಂಧವನ್ನು ಕಾಣಬಹುದಾಗಿದೆ. ಅಧ್ಯಯನದಲ್ಲಿ ಪುರುಷರು ಮತ್ತು ಮಹಿಳೆಯರ ಸಂಖ್ಯೆ ಸಮ-ಸಮವಾಗಿ ಇಲ್ಲದೇ ಇರುವುದರಿಂದ, ಈ ಸಂಖ್ಯೆಗಳನ್ನು ಯಥಾವತ್ತಾಗಿ ಹೋಲಿಸುವುದು ಸಾಧ್ಯವಿಲ್ಲ. ಹೋಲಿಕೆಗಳನ್ನು ಸಾಧ್ಯಮಾಡಲು ಈ ಸಂಖ್ಯೆಗಳನ್ನು ಶೇಕಡಾವಾರು ಪ್ರಮಾಣಕ್ಕೆ ಪರಿವರ್ತಿಸಬಹುದು. ಹೀಗೆ ಶೇಕಡಾವಾರು ಪ್ರಮಾಣಕ್ಕೆ ಪರಿವರ್ತಿಸುವುದೂ ಒಂದು ಸುಲಭ ಕ್ರಮವೇ. ಉದಾಹರಣೆಗೆ ಪುರುಷರು-ಹೌದು ಎನ್ನುವುದರ ಆವರ್ತನ 600ರಲ್ಲಿ 380. ಈ ಮೌಲ್ಯದ ಶೇಕಡವಾರು ಪ್ರಮಾಣ 380 x 100 / 600 = 63.33 %. ಮೇಲಿನ ಆವರ್ತನ ವಿತರಣೆಯ ಎರಡು ಚರಾಂಶಗಳನ್ನು ಶೇಕಡಾವಾರು ವಿತರಣೆಯ ರೂಪದಲ್ಲಿ ಕೆಳಕಂಡಂತೆ ತೋರಿಸಬಹುದು.

**ಪಟ್ಟಿ - 6: ಸಂಪಾದಕೀಯವನ್ನು ಓದುವ ಪುರುಷ ಮತ್ತು ಮಹಿಳೆಯರ ಅಭ್ಯಾಸ (ಶೇಕಡಾವಾರು %).**

| ನೀವು ನಿಯತವಾಗಿ ಸಂಪಾದಕೀಯಗಳನ್ನು ಓದುವಿರಾ? | ಲಿಂಗ | | ಒಟ್ಟು |
|---|---|---|---|
| | ಪುರುಷ | ಮಹಿಳೆ | |
| ಹೌದು | 63.33 | 27.5 | 490 |
| ಇಲ್ಲ | 36.66 | 72.5 | 510 |
| ಒಟ್ಟು | 100 | 100 | 100 |

ಪಟ್ಟಿಯನ್ನು ಓದಿಕೊಂಡು, ಓದುಗರ ಲಿಂಗ ಮತ್ತು ಸಂಪಾದಕೀಯ ಓದುವ ಅಭ್ಯಾಸದ ನಡುವೆ ನೇರವಾಗಿ ಹೋಲಿಕೆ ಮಾಡಿ ಸಂಬಂಧಗಳನ್ನು ಕಾಣುವುದು ಈಗ ಸಾಧ್ಯವಾಗುತ್ತದೆ. ಶೇ. 63ರಷ್ಟು ಪುರುಷರು ನಿಯತವಾಗಿ ವೃತ್ತಪತ್ರಿಕೆಗಳ ಸಂಪಾದಕೀಯವನ್ನು ಓದಿದರೆ, ಕೇವಲ ಶೇ. 27.5 ರಷ್ಟು ಮಹಿಳೆಯರು ಮಾತ್ರ ಸಂಪಾದಕೀಯಗಳನ್ನು ಓದುವ ಅಭ್ಯಾಸ ಇಟ್ಟುಕೊಂಡಿದ್ದಾರೆ ಎಂಬುದು ತಿಳಿಯುತ್ತದೆ. ಚರಾಂಶಗಳ ನಡುವಿನ ಸಂಬಂಧಗಳನ್ನು ಅಧ್ಯಯನ ಮಾಡಲು ಸಮಾಜ ವಿಜ್ಞಾನಗಳಲ್ಲಿ ಹಾಗೂ ಸಂವಹನ ಸಂಶೋಧನೆಯಲ್ಲಿ ಸಾಮಾನ್ಯವಾಗಿ ಬಳಸಲ್ಪಡುವ ಮತ್ತೊಂದು ಸೂಚಿಯೆಂದರೆ ಕೈ-ವರ್ಗ.

ದತ್ತಾಂಶ, ಅಂದರೆ ವರ್ಗೀಕರಣವನ್ನು ಆಧರಿಸಿದ ಕಂಟೆಂಜೆನ್ಸಿ ಪಟ್ಟಿಗಳನ್ನು ವಿಶ್ಲೇಷಿಸುವಲ್ಲಿ ಈ ತಂತ್ರವು ವಿಶೇಷವಾಗಿ ಪ್ರಯೋಜನಕಾರಿ. ಕೈ-ವರ್ಗ ವಿಶ್ಲೇಷಣೆಯ ತರ್ಕ ಮತ್ತು ಕ್ರಮಗಳನ್ನು ಅರಿಯಲು, ಸಂಖ್ಯಾಶಾಸ್ತ್ರದ ಯಾವುದೇ ಪ್ರಾಥಮಿಕ ಹಂತದ ಪಠ್ಯವನ್ನು ವಿದ್ಯಾರ್ಥಿಗಳು ಓದಿಕೊಳ್ಳಬೇಕು.

## 3.6.2 ಸಹಸಂಬಂಧ (Correlation)

ಚರಾಂಶಗಳ ನಡುವಿನ ಸಂಬಂಧವನ್ನು ಅಳೆಯಲು ಬಹಳಷ್ಟು ಬಾರಿ ಉಪಯೋಗಿಸುವ ಸೂಚಿ. ವಿವಿಧ ರೀತಿಯ ವಿಷಯ ವಸ್ತುಗಳ ನಡುವಿನ ಸಂಬಂಧಗಳನ್ನು ಅಧ್ಯಯನ ಮಾಡುವ ಆಸಕ್ತಿಯು ನಿಮಗಿರಬಹುದು. ಚಿತ್ರಮಂದಿರಗಳಿಗೆ ಭೇಟಿ ನೀಡುವುದು ಮತ್ತು ವಯೋಮಾನ, ಲಿಂಗ ಮತ್ತು ಟಿವಿ ವೀಕ್ಷಣೆ, ಬುದ್ಧಿವಂತಿಕೆ ಮತ್ತು ಸಂಪಾದಕೀಯವನ್ನು ಓದುವುದು, ಇತ್ಯಾದಿಯಾಗಿ ಒಂದು ಚರಾಂಶದ ಮೌಲ್ಯಗಳು ಮತ್ತೊಂದು ಚರಾಂಶದ ಮೌಲ್ಯಗಳೊಂದಿಗೆ ಚಲಿಸುತ್ತವೆ (ಮಾರ್ಪಾಟಾಗುತ್ತದೆ) ಎನ್ನುವುದು ನಿಮ್ಮ ಅಧ್ಯಯನ ಕೇಂದ್ರಬಿಂದು. ವಯಸ್ಸು ಹೆಚ್ಚಿದಂತೆಲ್ಲ ಜನರು ಚಿತ್ರಮಂದಿರಗಳಿಗೆ ಭೇಟಿ ನೀಡುವುದು ಹೆಚ್ಚು / ಕಡಿಮೆ ಆಗುವುದೇ? ಹೆಂಗಸರು ಗಂಡಸರಿಗಿಂತ ಹೆಚ್ಚು / ಕಡಿಮೆ ಪ್ರಮಾಣದಲ್ಲಿ ಟಿವಿ ನೋಡುತ್ತಾರೆಯೇ? ಹೆಚ್ಚು ಬುದ್ಧಿವಂತರಾದ ಮಕ್ಕಳು ಕಡಿಮೆ ಬುದ್ಧಿಮತ್ತೆಯ ಮಕ್ಕಳಿಗಿಂತ ಹೆಚ್ಚು ನಿಯತವಾಗಿ ವೃತ್ತಪತ್ರಿಕೆಯ ಸಂಪಾದಕೀಯಗಳನ್ನು ಓದುತ್ತಾರೆಯೇ? ಇಂತಹ ಪ್ರಶ್ನೆಗಳಿಗೆ ಉತ್ತರ ನೀಡಲು ಸಹ ಸಂಬಂಧ ಸಹಾಯಮಾಡುತ್ತದೆ.

ಎರಡು ಚರಾಂಶಗಳ ನಡುವಿನ ದಿಕ್ಕು ಮತ್ತು ಪ್ರಮಾಣವನ್ನು ಸಹಸಂಬಂಧ ವಿವರಿಸುತ್ತದೆ. 'ಪ್ರಮಾಣ' ಎಂದರೆ ಸಂಬಂಧದ ಮಟ್ಟ ಈ ಸಂಬಂಧ ಗಾಢವಾದುದೋ ಅಥವಾ  ಶಕ್ತಿಹೀನವಾದುದೋ? ಗಾಢವಾಗಿದ್ದರೆ ಎಷ್ಟರಮಟ್ಟಿಗೆ ಎಂದು ಎರಡು ಚರಾಂಶಗಳ ನಡುವಣ ಸಂಬಂಧದ ಪ್ರಮಾಣವು 'ಯಾವುದೇ ಸಂಬಂಧವಿಲ್ಲ' ಎನ್ನುವ ಹಂತದಿಂದ 'ಅನ್ಯೋನ್ಯ, ಸಮಗ್ರ ಸಂಬಂಧ'ದವರೆಗೂ ವ್ಯಾಪಿಸಬಹುದು. ಸಂಬಂಧದ ದಿಕ್ಕು, ಸಂಬಂಧದ ಸ್ವರೂಪವನ್ನು ತೋರಿಸುತ್ತದೆ. ಒಂದು ಚರಾಂಶದ ಮೌಲ್ಯಗಳಲ್ಲಿ ವ್ಯತ್ಯಾಸವಾದರೆ, ಸದೃಶವಾಗಿ ಇನ್ನೊಂದು ಚರಾಂಶದ ಮೌಲ್ಯಗಳಲ್ಲಿಯೂ ವೃದ್ಧಿಯಾಗುತ್ತದೆಯೇ (ಧನಾತ್ಮಕ ಸಂಬಂಧ) ಅಥವಾ ಒಂದು ಚರಾಂಶದ ವೃದ್ಧಿಯು ವೈದೃಶ್ಯವಾಗಿ ಮತ್ತೊಂದು ಚರಾಂಶ ಮೌಲ್ಯಗಳ ಇಳಿಕೆ (ಋಣಾತ್ಮಕ ಸಂಬಂಧ)ಯಾಗಿ ತೋರಿಬರುವುದೇ? ಸಂಬಂಧದ ಈ ಪ್ರಮಾಣ ಮತ್ತು ದಿಕ್ಕನ್ನು ಸಹಸಂಬಂಧ ಗುಣಾಂಕವಾಗಿ ವ್ಯಕ್ತಪಡಿಸಲಾಗುತ್ತದೆ.  ಸಹಸಂಬಂಧ ಗುಣಾಂಕವು + 1.00 ಯಿಂದ 0.00ಯ ಮೂಲಕ - 1.00ವರೆಗಿನ ವ್ಯಾಪ್ತಿಯಲ್ಲಿನ ಮೌಲ್ಯಗಳನ್ನು ಪಡೆದುಕೊಳ್ಳಬಹುದು. ಈ ಮೌಲ್ಯಗಳನ್ನು ಕೆಳಕಂಡಂತೆ ಅರ್ಥೈಸಬಹುದು.

+ 1.00 (ಸಂಪೂರ್ಣ ಧನಾತ್ಮಕ ಸಹಸಂಬಂಧ)

0.00 (ಸಹಸಂಬಂಧ ಇಲ್ಲ)

- 1.00 (ಸಂಪೂರ್ಣ ಋಣಾತ್ಮಕ ಸಹ ಸಂಬಂಧ)

ಸಂಖ್ಯೆಯು ಸಂಬಂಧದ ಪ್ರಮಾಣವನ್ನು ಮತ್ತು ಚಿಹ್ನೆಯು ಸಂಬಂಧದ ದಿಕ್ಕನ್ನೂ, ಸೂಚಿಸುತ್ತವೆ. ಹೀಗಾಗಿ +0.25 ಎನ್ನುವ ಗುಣಾಂಕವು ಅಲ್ಪಪ್ರಮಾಣದ ಧನಾತ್ಮಕ ಸಹಸಂಬಂಧ ಎಂದು, - 0.80ಅನ್ನು ಹೆಚ್ಚಿನ ಪ್ರಮಾಣದ ಋಣಾತ್ಮಕ ಸಹಸಂಬಂಧ ಎಂದೂ ಅರ್ಥೈಸಬಹುದು.  ಸಹಸಂಬಂಧ ಗುಣಾಂಕವನ್ನು ಕಂಡುಹಿಡಿಯಲು ಹಲವಾರು ಕ್ರಮಗಳಿವೆ. ಚರಾಂಶಗಳನ್ನು ಅಳೆಯಲು ಯಾವ ರೀತಿಯ ಸೂಕ್ತವೆನಿಸುವ ಕ್ರಮವನ್ನು ಅನುಸರಿಸಲಾಗುವುದು. ದತ್ತಾಂಶಗಳು ವಿಂಗಡಿತ / ವರ್ಗೀಕೃತ ರೀತಿಯವಾಗಿದ್ದರೆ, ಕೈ-ವರ್ಗ ವಿಶ್ಲೇಷಣೆ ಅಥವಾ ಕಂಟಿನ್‌ಜೆನ್ಸಿ ಗುಣಾಂಕಗಳು ಸೂಕ್ತವಾದ ವಿಧಾನಗಳಾಗುತ್ತವೆ. ಕ್ರಮಸೂಚಕವಾದ ದತ್ತಾಂಶಗಳಿರುವ ಸಂದರ್ಭದಲ್ಲಿ, ಸ್ಪಿಯರ್‌ಮನ್ ಅವರ ಶ್ರೇಣಿ-ಕ್ರಮದ  ಸಹಸಂಬಂಧ ವಿಧಾನ ಸೂಕ್ತವಾಗುತ್ತದೆ. ಇನ್ನೂ ಉನ್ನತಮಟ್ಟಗಳಲ್ಲಿ ವರ್ಗ ಅಥವಾ ಅನುಪಾತದ ಮಾಪನಗಳಿದ್ದಾಗ ಉತ್ಪನ್ನ ಕಾಲದ ಸಹಸಂಬಂಧ ತಂತ್ರವನ್ನು ಬಳಸಬೇಕಾಗುತ್ತದೆ.

## 3.7 ಅನುಗಮನ ಸಂಖ್ಯಾಶಾಸ್ತ್ರ ಮತ್ತು ಮಹತ್ವ ಸೂಚಿ ಪರೀಕ್ಷೆಗಳು

ಕೊಟ್ಟಿರುವ ದತ್ತಾಂಶಗಳ ಗುಂಪನ್ನು ಅದರ ಸರಾಸರಿಗಳು, ಹರವುಗಳು ಮತ್ತು ಸಂಬಂಧಗಳ ರೂಪದಲ್ಲಿ ವಿಶ್ಲೇಷಣೆ ಮಾಡುವ ಕ್ರಮವನ್ನು ಇಲ್ಲಿಯವರೆಗೆ ನೀವು ಕಲಿತಿರಿ. ಆದರೆ, ಸಂಶೋಧಕ ನಡೆಸಿರುವ ಅವಲೋಕನದಿಂದ ದೊರಕಿರುವ ದೀಕ್ಷಿಸಿದ ಅಂಶಗಳ ಗಣದಿಂದ ಸಮಗ್ರವಾದ ಜನಸಮೂಹಗಳ ಬಗ್ಗೆ ತೀರ್ಮಾನಗಳನ್ನು ತೆಗೆದುಕೊಳ್ಳುವುದು ಸಂಶೋಧನೆಯ ಬಹುಮುಖ್ಯವಾದ ಹಂತ. ನಮೂನೆ ವಿಧಾನವನ್ನು ಕುರಿತಂತೆ, ಈ ಹಿಂದಿನ ಘಟಕ (2.8.1)ದಲ್ಲಿಯೇ ಕಲಿತಿರುವಂತೆ ಶೋಧಕನು ತನ್ನ ಆಸಕ್ತಿಯ ಕ್ಷೇತ್ರದ ಇಡೀ ಜನಸಮೂಹವನ್ನು ಅಧ್ಯಯನ ಮಾಡುವುದು ತೀರಾ ವಿರಳ. ಬದಲಿಗೆ, ಜನಸಮೂಹವನ್ನು ಪ್ರತಿನಿಧಿಸುವಂತಹ ನಮೂನೆಯೊಂದನ್ನು ಆತ ತೆಗೆದುಕೊಳ್ಳುತ್ತಾನೆ. ಇದೇ ಅವರ ಆಸಕ್ತಿಯ ಕೇಂದ್ರ ಬಿಂದು. ಮಾದರಿಯ ಅವಲೋಕನದ ಆಧಾರದ ಮೇಲೆ ಆತ ಜನಸಮೂಹದ ಮೌಲ್ಯಗಳ ಅಂದಾಜು ಮಾಡುತ್ತಾನೆ. ಕಾಲೇಜು ವಿದ್ಯಾರ್ಥಿಗಳ ನಮೂನೆಯೊಂದನ್ನು ತೆಗೆಯುತ್ತಾನೆ. (2.8.1ರಲ್ಲಿ ವಿವರಿಸಲಾಗಿರುವ ಕ್ರಮದಂತೆ) ಮತ್ತು ಇದರಿಂದ ಆ ಕಾಲೇಜು ವಿದ್ಯಾರ್ಥಿಗಳ ರಾಜಕೀಯದ ಒಲವುಗಳ ಬಗ್ಗೆ ತಿಳಿದುಕೊಳ್ಳುತ್ತಾನೆ. ಆದರೆ, ಇಡೀ ಸಮೂಹವನ್ನು ವರ್ಣಿಸುವುದು ಸಂಶೋಧಕನ ಉದ್ದೇಶವೇ ಹೊರತು ಕೇವಲ ಅಧ್ಯಯನದ ನಮೂನೆಯನ್ನಷ್ಟೇ ಅಲ್ಲ. ಸರಾಸರಿ ಮತ್ತು ಹರಿವಿನ ಯಾವುದಾದರೂ ಅಳತೆಯನ್ನು ಕಂಡುಹಿಡಿದು ನಮೂನೆಯನ್ನು ಆತ ವರ್ಣಿಸುತ್ತಾನೆ. ನಮೂನೆಯ ಮೌಲ್ಯಗಳನ್ನು ಅಂಕಿ ಅಂಶಗಳೆಂದು ಕರೆಯಲಾಗುತ್ತದೆ. ಜನಸಮೂಹವನ್ನು ಆಧರಿಸಿದ ಮೌಲ್ಯಗಳನ್ನು ಜನಸಮೂಹದ ಪರಾಮಿತಿಗಳು (Population parameters) ಎಂದು ಕರೆಯಲಾಗುತ್ತದೆ.

ನಮೂನೆಯ ಅವಲೋಕನಗಳನ್ನು ಆಧರಿಸಿದ ಅಂಕಿಅಂಶಗಳು ಜನಸಮೂಹ ಪರಾಮಿತಿಗಳನ್ನು ಅಂದಾಜು ಮಾಡಲು ನೆಲೆಯನ್ನೊದಗಿಸುತ್ತವೆ. ಅಂಕಿ ಅಂಶಗಳಿಂದ ಪರಾಮಿತಿಗಳನ್ನು ಅಂದಾಜು ಮಾಡುವ ಪ್ರಕ್ರಿಯೆಯನ್ನು ಅನುಗಮನದ ತೀರ್ಮಾನಗಳೆಂದು ಕರೆಯಲಾಗುತ್ತದೆ.

ಜನಸಮೂಹ ಪರಾಮಿತಿಯ ಎಷ್ಟು ಒಳ್ಳೆಯ ಅಂಕಿ ಅಂಶಗಳು ನಮೂನೆಯದ್ದಾಗಿವೆ ಎಂಬುದು ಅನುಗಮನ ಸಂಖ್ಯಾಶಾಸ್ತ್ರದ ಮೂಲಭೂತವಾದ ಪ್ರಶ್ನೆ. ಈ ಉದ್ದೇಶಕ್ಕಾಗಿಯೇ ಸಮಾಜಶಾಸ್ತ್ರಜ್ಞರು ದೋಷ(ತಪ್ಪು)ಗಳನ್ನು ಅಂದಾಜು ಮಾಡುವ ಮತ್ತು ಮಹತ್ವವನ್ನು ಪರೀಕ್ಷಿಸುವ ಹಲವಾರು ವಿಧಿ ವಿಧಾನಗಳನ್ನೂ, ಮಾದರಿಗಳನ್ನೂ ಅಭಿವೃದ್ಧಿಪಡಿಸಿರುತ್ತಾರೆ. ಅನುಗಮನ ಸಂಖ್ಯಾಶಾಸ್ತ್ರದ ತರ್ಕಗಳು ಮತ್ತು ಕ್ರಮಗಳನ್ನು ಅರಿಯಲು, ಈ ಘಟಕದ ಕೊನೆಯಲ್ಲಿ ಸೂಚಿಸಿರುವ ಆಕರಗಳನ್ನು ಪರಾಮರ್ಶಿಸತಕ್ಕದ್ದು.

## 3.8 ಇತರ ಉನ್ನತ ಪ್ರೌಢ ತಂತ್ರಗಳು

ಈ ಹಿಂದಿನ ವಿಭಾಗಗಳಲ್ಲಿ ದತ್ತಾಂಶ ವಿಶ್ಲೇಷಣೆಯ ಕೆಲವೊಂದು ಪ್ರಾಥಮಿಕ ಕ್ರಮಗಳನ್ನು ಪರಿಚಯ ಮಾಡಿಸುವ ಪ್ರಯತ್ನವನ್ನೂ ಮಾಡಲಾಗಿದೆ. ಆದರೆ ಈ ಪರಿಚಯವು ಹೆಚ್ಚು ಸಂಕೀರ್ಣವಾದ ತಂತ್ರಗಳ ಸ್ಥೂಲವಾದ ಮತ್ತು ಸರಳೀಕೃತವಾದ ವಿವರಣೆಯಷ್ಟೇ. ಹಲವಾರು ಚರಾಂಶಗಳ ನಡುವಣ ಸಂಬಂಧವನ್ನು ಕುರಿತಾದ ಬಹ್ವಂಶ ಸಹ ಸಂಬಂಧ ಮತ್ತು ಸಮಾಶ್ರಯಣ, ಪ್ರತಿಯೊಂದು ಚರಾಂಶವೂ ಏಕೈಕವಾಗಿ ಮತ್ತು ಉಳಿದ ಚರಾಂಶಗಳೊಡನೆ ಸಹಭಾಗಿಯಾಗಿ ನೀಡುವ ಫಲಿತಾಂಶಗಳ ವಿಶ್ಲೇಷಣೆ (ANOVA) ಮತ್ತು ಚರಾಂಶಗಳನ್ನು ಗುಚ್ಛಗಳಾಗುವಂತೆ ಒಗ್ಗೂಡಿಸುವ ಅಂಶದ ವಿಶ್ಲೇಷಣೆ ಇವೇ ಮುಂತಾದ ದತ್ತಾಂಶ ವಿಶ್ಲೇಷಣೆಯ ಮತ್ತು ಸಂಖ್ಯಾಶಾಸ್ತ್ರದ ಹಲವಾರು ಪ್ರೌಢತಂತ್ರಗಳೂ ಇವೆ. ಆದರೆ ಸಂಖ್ಯಾಶಾಸ್ತ್ರದ ಕ್ರಮಗಳ ಬಗ್ಗೆ ಕುರಿತಾದ ಚರ್ಚೆಯು ಈ ಘಟಕದ ವ್ಯಾಪ್ತಿಗೆ ಹೊರತಾದುದು. ಸಂವಹನ ಸಂಶೋಧನೆಯನ್ನು ಕೈಗೊಳ್ಳಬೇಕೆಂದಿರುವವರು ಇಂತಹ ಉನ್ನತ ತಂತ್ರಗಳನ್ನು ಸಂಪೂರ್ಣವಾಗಿ ಅರ್ಥಮಾಡಿಕೊಳ್ಳಬೇಕಾಗುತ್ತದೆ.

**ಚಟುವಟಿಕೆ 2:**

1. ವಾರ್ತೆಗಳನ್ನು ಮತ್ತು ಪ್ರಚಲಿತ ವಿದ್ಯಮಾನಗಳನ್ನು ಅರಿಯಲು ಮೂರು ಮಾಧ್ಯಮಗಳಾದ ವೃತ್ತಪತ್ರಿಕೆ, ರೇಡಿಯೋ, ಟಿವಿಗಳಲ್ಲಿ ವಿಶ್ವಾಸ ತೋರುವಂತಹ ಮಾಧ್ಯಮ ಯಾವುದೆಂಬುದನ್ನು ಸೂಚಿಸುವಂತೆ 33 ಹುಡುಗರು ಮತ್ತು ಹುಡುಗಿಯರನ್ನು ಪ್ರಶ್ನಿಸಲಾಯಿತು.

ಅವರ ಆಯ್ಕೆ ಮತ್ತು ಅದರ ಸಂಕೇತಗಳೊಂದಿಗೆ ಅವುಗಳನ್ನು ಸೂಚಿಸಿರುವ ವಿವರಗಳನ್ನು ಕೆಳಗೆ ಕೊಡಲಾಗಿದೆ.

**B = ಹುಡುಗ, G = ಹುಡುಗಿ, 1= ವೃತ್ತಪತ್ರಿಕೆ ಪರ, 2 = ರೇಡಿಯೋ ಪರ, ಮತ್ತು 3 = ಟಿವಿ ಪರ.**

B-1, B-3, G-2, G-3, G-3, B-1, B-1, B-2, G-3, G-1, B-2, G-2, G-3, G-3

G-1, B-1, B-1, B-2, B-3, B-3, B-1, G-2, G-3, G-1, G-3, B-2, B-1, B-1,

B-2, B-1, B-3, G-2, G-3.

ಈ ದತ್ತಾಂಶಗಳನ್ನು ಉಪಯೋಗಿಸಿಕೊಂಡು

i) ಲಿಂಗ ಮತ್ತು ವಾರ್ತಾ ಮಾಧ್ಯಮದ ಆಯ್ಕೆಯನ್ನು ತೋರಿಸುವಂತೆ ಒಂದು 2x2 ಪಟ್ಟಿ ತಯಾರಿಸಿ.

ii) ಸೆಲ್‌ನ ಆವರ್ತನಗಳನ್ನು ಶೇಕಡವಾರು ಪ್ರಮಾಣಕ್ಕೆ ಪರಿವರ್ತಿಸಿ.

iii) ಫಲಿತಾಂಶಗಳನ್ನು ಅರ್ಥೈಸಿ.

2. ಸಹಸಂಬಂಧದ ಅರ್ಥವನ್ನು ವಿವರಿಸಿ. ಸಹಸಂಬಂಧದ ಗುಣಾಂಕಗಳನ್ನು ನೀವು ಹೇಗೆ ಅರ್ಥೈಸುತ್ತೀರಿ?

## 3.9 ಸಾರಾಂಶ

ಅವಲೋಕನಗಳ ರೂಪದಲ್ಲಿ ದತ್ತಾಂಶಗಳನ್ನು ಕಲೆಹಾಕಲು ಸಂಶೋಧಕ ಪ್ರಾರಂಭಿಸುತ್ತಾನೆ. ವೀಕ್ಷಿಸಿದ ಈ ಅಂಶಗಳನ್ನು ವಿಶ್ಲೇಷಿಸಿ ವಿಶ್ವಾಸಾರ್ಹವಾದ/ಯಥಾರ್ಥವಾದ ವ್ಯಾಖ್ಯಾನಗಳ ಆಧಾರದ ಮೇಲೆ ಅರ್ಥಪೂರ್ಣವಾದ ನಿರ್ಣಯಗಳಿಗೆ ಬರಬೇಕಾದಲ್ಲಿ, ದತ್ತಾಂಶಗಳನ್ನು ಸರಿಯಾಗಿ ವಿವರಿಸಿ ಸಂಬಂಧಗಳ ಪರಿಶೋಧನೆ ಮಾಡಬೇಕು. ದತ್ತಾಂಶ ವಿಶ್ಲೇಷಣೆಯ ಮೊದಲ ಹಂತವೆಂದರೆ, ವೀಕ್ಷಿಸಿದ ಅಂಶಗಳ ವಿತರಣೆಯ ಅಧ್ಯಯನ. ಆವರ್ತನಾ ವಿತರಣೆಗಳು, ಶೇಕಡವಾರು ಮತ್ತು ನಕ್ಷಾ ರೂಪದಲ್ಲಿ ಪ್ರತಿನಿಧಿಸುವಿಕೆ ಇವುಗಳೊಂದಿಗೆ ಇದನ್ನು ಪ್ರಾರಂಭಿಸಬಹುದು.

ದತ್ತಾಂಶಗಳನ್ನು ಕೇಂದ್ರೀಯ ಸ್ಥಾನದ ಮತ್ತು ಹರವಿನ ಬಿಂದುಗಳ ರೂಪದಲ್ಲಿ ವಿವರಿಸಲಾಗುತ್ತದೆ. ಕೇಂದ್ರೀಯ ಸ್ಥಾನದ (ಸರಾಸರಿಗಳ) ಹಲವಾರು ಮಾಪನಗಳು ಲಭ್ಯವಿದೆ. ಅವುಗಳೆಂದರೆ ಅಂಕಗಣಿತ ಸರಾಸರಿ (ಎಲ್ಲಾ ಮೌಲ್ಯಾಂಕಗಳ ಸರಾಸರಿ), ಮಾಧ್ಯಾಂಕ (ಕ್ರಮಾನುಗತವಾದ ಮೌಲ್ಯಾಂಕಗಳ ಮಧ್ಯಬಿಂದು) ಮತ್ತು ರೂಢಿಬೆಲೆ (ಅತಿ ಹೆಚ್ಚು ಬಾರಿ ಪುನರಾವರ್ತಿತವಾಗುವ ಮೌಲ್ಯಾಂಕ). ಒಂದು ಗುಂಪಿನ ವಿಸ್ತೃತ ಅಥವಾ ಹರವಿನ ಅಳತೆಗಳೂ ಇದೇ ರೀತಿಯಲ್ಲಿ ಮುಖ್ಯವೂ, ಸ್ವಾರಸ್ಯಕರವೂ ಆಗಿವೆ. ವ್ಯಾಪ್ತಿ, ಮಧ್ಯಕ ವಿಚಲನೆ ಮತ್ತು ಮಾನಕ ವಿಚಲನೆಗಳ ಮೂಲಕವಾಗಿ ಹರವನ್ನು ಸೂಚಿಸಲಾಗುತ್ತದೆ.

ಎರಡು ಅಥವಾ ಹೆಚ್ಚಿನ ಚರಾಂಶಗಳ ನಡುವಿನ ಸಂಬಂಧವನ್ನು ಪರಿಶೋಧಿಸುವುದು, ಕೆಲವೊಂದು ಬಾರಿ, ಸಂಶೋಧನೆಯ ಉದ್ದೇಶವಾಗಿರುತ್ತದೆ. ಇಂತಹ ಸಂಬಂಧಗಳನ್ನು ಅಧ್ಯಯನ ಮಾಡಲು ಕಂಟಿನ್‌ಜೆನ್ಸಿ ಪಟ್ಟಿಗಳು, ಕೈ-ವರ್ಗ ವಿಶ್ಲೇಷಣೆ ಮತ್ತು ಸಹ ಸಂಬಂಧ ವಿಧಾನಗಳು ಸಹಕಾರಿ ಈ ಮೂಲತಂತ್ರಗಳ ಹೆಚ್ಚುವರಿಯಾಗಿ, ಸಂವಹನ ಸಂಶೋಧಕನು ಸಂಖ್ಯಾಶಾಸ್ತ್ರದ ಇನ್ನೂ ಹಲವಾರು ತಂತ್ರಗಳನ್ನು ಕಲಿಯಬೇಕು. ಈ ತಂತ್ರಗಳ ಅಧ್ಯಯನವು ಈ ಘಟಕದ ವ್ಯಾಪ್ತಿಗೆ ಮೀರಿದ್ದು.

## 3.10 ಪಾರಿಭಾಷಿಕ ಕೋಶ

**ಕೈ-ವರ್ಗ** (Chi-square) - ಸಾಮಾನ್ಯವಾಗಿ ವರ್ಗೀಕೃತ ದತ್ತಾಂಶಗಳ ರೂಪದಲ್ಲಿರುವ ಚರಾಂಶಗಳ ನಡುವಣ ಸಹವರ್ತನೆ/ಸಂಬಂಧದ ಒಂದು ಮಾಪನ

**ಸಹಸಂಬಂಧ** (Correlation) - ಒಂದು ಚರಾಂಶ ಇನ್ನೊಂದು ಚರಾಂಶಕ್ಕೆ ಸಂವಾದಿಯಾಗಿ ಮಾಡುವ ಪ್ರಮಾಣ ಮತ್ತು ದಿಕ್ಕು. ಎರಡು ಚರಾಂಶಗಳನ್ನು ಪ್ರತಿನಿಧಿಸುವ ಮೌಲ್ಯಾಂಕಗಳ

**ಸಹಸಂಬಂಧ ಗುಣಾಂಕ** (Correlation Coefficient) - ಸಹಸಂಬಂಧದ ಪ್ರಮಾಣ ಮತ್ತು ದಿಕ್ಕಿನ ಸಂಖ್ಯಾತ್ಮಕ ಮಾಪನ

**ಆವರ್ತನ ವಿತರಣೆ** (Frequency distribution) - ವೀಕ್ಷಿಸಿದ ಅಂಶಗಳ ಗಣವೊಂದರಲ್ಲಿ ಒಂದು ಮೌಲ್ಯಾಂಕ ಎಷ್ಟು ಬಾರಿ ಬಂದಿದೆ ಎನ್ನುವುದರ ವಿವರಣೆ.

**ಆವರ್ತನ ಬಹುಭುಜಾಕೃತಿ** (Frequency Polygon) - ಆವರ್ತ ವಿತರಣೆಯ ನಕ್ಷಾರೂಪ. ಮೌಲ್ಯಾಂಕಗಳ ಎಣಿಕೆಯನ್ನು X- ಅಕ್ಷದ ಮೇಲೂ, ಆವರ್ತನ ಸಂಖ್ಯೆಯನ್ನು Y-ಅಕ್ಷದ ಮೇಲೂ ಗುರುತು ಹಾಕಿ, ಆ ಬಿಂದುಗಳನ್ನು ಅನುಕ್ರಮವಾಗಿ ಸರಳರೇಖೆಗಳಿಂದ ಸೇರಿಸಿದಾಗ ಬರುವ ನಕ್ಷೆ.

**ಸ್ತಂಭ ಲೇಖಾಕೃತಿ** (Histogram) - ಆಯತಗಳಾಗಿ ಬಿಂಬಿಸಲಾಗುವ ಆವರ್ತನ ವಿತರಣೆಯ ನಕ್ಷಾರೂಪ.

**ಅನುಗಮನ ಸಂಖ್ಯಾಶಾಸ್ತ್ರ** (Inferential Statistics) - ಮಾದರಿಯಿಂದ ಬರುವ ಅಂಕಿಅಂಶಗಳಿಂದ ಜನಸಮೂಹದ ಮೌಲ್ಯಗಳನ್ನು ಅಂದಾಜು ಮಾಡುವ ಕ್ರಮ.

**ಸರಾಸರಿ** (Mean) - ಕೇಂದ್ರೀಯ ಸ್ಥಾನದ ಒಂದು ಅಳತೆ: ವೀಕ್ಷಿಸಿದ ಅಂಶಗಳ ಮೌಲ್ಯಗಳ ಸರಾಸರಿ.

**ಮಧ್ಯಕ ವಿಚಲನೆ** (Mean Deviation) - ಹರವಿನ ಒಂದು ಅಳತೆ: ವೀಕ್ಷಿಸಿದ ಒಟ್ಟು ಅಂಶಗಳ ಸರಾಸರಿಯಿಂದ ಪ್ರತಿಯೊಂದು ಮೌಲ್ಯದ ಮಾರ್ಪು(ಚಿಹ್ನೆಗಳನ್ನು ಪರಿಗಣಿಸದಂತೆ)ಗಳ ಸರಾಸರಿ.

**ಮಧ್ಯಾಂಕ** (Meridian) - ಕೇಂದ್ರೀಯ ಸ್ಥಾನದ ಮತ್ತೊಂದು ಅಳತೆ: ಕ್ರಮಾನುಗತವಾಗಿ ಜೋಡಿಸಲ್ಪಟ್ಟ ವೀಕ್ಷಿಸಿದ ಅಂಶಗಳ ಗುಂಪಿನ ಮಧ್ಯಬಿಂದು..

**ರೂಢಿಬೆಲೆ (ಬಹುಲಕ)** (Mode) - ಕೇಂದ್ರೀಯ ಸ್ಥಾನದ ಮತ್ತೊಂದು ಅಳತೆ: ವೀಕ್ಷಿಸಿದ ಅಂಶಗಳ ಗಣದಲ್ಲಿ ಅತಿ ಹೆಚ್ಚು ಬಾರಿ ಪುನರಾವರ್ತಿತವಾಗುವ ಮೌಲ್ಯ.

**ವ್ಯಾಪ್ತಿ**(Range) - ಹರವಿನ ಒಂದು ಅಳತೆ: ದತ್ತಾಂಶ ಗಣದ ಗರಿಷ್ಠ ಮತ್ತು ಕನಿಷ್ಠತಮ ಮೌಲ್ಯಗಳ ನಡುವಣ ವ್ಯತ್ಯಾಸ

**ಮಾನಕ ವಿಚಲನೆ** (Standard deviation) - ಬಹು ಜನಪ್ರಿಯವಾದ ಮತ್ತು ಮುಖ್ಯವಾದ ಹರವಿನ / ಮಾರ್ಪಿನ ಸೂಚಿ.

## 3.11 ನಿಮ್ಮ ಪ್ರಗತಿ ಪರಿಶೀಲನೆ

**ಸೂಚನೆ: ನಿಮ್ಮ ಉತ್ತರಗಳನ್ನು ಈ ಘಟಕದಲ್ಲಿ ನೀಡಲಾಗಿರುವ ವಿವರಗಳೊಂದಿಗೆ ಹೋಲಿಸಿ.**

1. ಕೇಂದ್ರೀಯ ಸ್ಥಾನದ ಅಳತೆಗಳು ಮತ್ತು ಹರವಿನ ಅಳತೆಗಳ ನಡುವಿನ ವ್ಯತ್ಯಾಸಗಳನ್ನು ಗುರುತಿಸಿ.
2. ಶಬ್ದಗಳ ಪರಿಭಾಷೆಯನ್ನು ನೀಡಿ.

   ಅ) ಸರಾಸರಿ

   ಆ) ಮಧ್ಯಾಂಕ

   ಇ) ರೂಢಿಬೆಲೆ

   ಈ) ವ್ಯಾಪ್ತಿ

   ಉ) ಮಧ್ಯಕ ವಿಚಲನೆ ಮತ್ತು

   ಊ) ಮಾನಕ ವಿಚಲನೆ
3. ಚಟುವಟಿಕೆ 1ರಲ್ಲಿ ಕೊಟ್ಟಿರುವ ದತ್ತಾಂಶಗಳನ್ನು ಉಪಯೋಗಿಸಿಕೊಂಡು ಅದರ ಸರಾಸರಿ, ಮಧ್ಯಾಂಕ, ರೂಢಿಬೆಲೆ ಮತ್ತು ಮಾನಕ ವಿಚಲನೆಗಳನ್ನು ಕಂಡುಹಿಡಿಯಿರಿ.

## 3.12 ಹೆಚ್ಚಿನ ಓದಿಗಾಗಿ


1. Fink, How to Anlyze Survey Data, Sage Publications, New Delhi, 1995.
2. IGNOU, Introduction to Communications, Indira Gandhi National Open Univesity, New Delhi,1995.
3. Thakur, Research Methodology in Social Sciences, Deep Publications, New Delhi, 1998.


**ಬರಹ: ತೇಜಸ್ವಿ ನವಿಲೂರ್**

# ಘಟಕ 4 ಶ್ರೋತೃಗಣ ಸಂಶೋಧನೆ

ರಚನೆ


4.0 ಉದ್ದೇಶಗಳು

4.1 ಪ್ರಸ್ತಾವನೆ

4.2 ಮಾಧ್ಯಮ ಶ್ರೋತೃಗಣ

4.3 ಶ್ರೋತೃಗಣದ ಸಂಶೋಧನೆ (Audience research)

4.3.1 ಸಂಚಿತ ಶ್ರೋತೃವರ್ಗ (Cume)

4.3.2 ಟೆಲಿವಿಷನ್ ಬಳಸುವ ಮನೆಗಳು (HUT)

4.3.3 ದರ್ಜೆ (ಶ್ರೇಣಿ)

4.3.4 ಪಾಲು

4.3.5 ಪ್ರತಿಸಾವಿರಕ್ಕೆ ತಗಲುವ ಖರ್ಚು

4.4 ಸಾರಾಂಶ

4.5 ಪ್ರಗತಿ ಪರಿಶೀಲನೆ

4.6 ಹೆಚ್ಚಿನ ಓದಿಗಾಗಿ

## 4.0 ಉದ್ದೇಶಗಳು

ಸಂವಹನ ಸಂಶೋಧನೆಯು ಬಹಳ ವಿಸ್ತಾರವಾದ ಕ್ಷೇತ್ರ. ಪ್ರತಿಯೊಂದು ಮಾಧ್ಯಮವೂ ತನ್ನದೇ ಆದ ಸ್ಥಾನವನ್ನು ಹೊಂದಿದ್ದು, ಒಂದು ಮಾಧ್ಯಮದಿಂದ ಮತ್ತೊಂದು ಮಾಧ್ಯಮಕ್ಕೆ ಸಂಶೋಧನಾ ತಂತ್ರಗಳು ಬದಲಾಗಬಹುದು. ಅಥವಾ, ಎಲ್ಲಾ ಮಾಧ್ಯಮಗಳಿಗೂ ಸಾಮಾನ್ಯವಾದ ಕೆಲವೊಂದು ಕಾರ್ಯವಿಧಾನಗಳೂ ಇರಬಹುದು. ಸಂಶೋಧನೆಯ ಸೂಕ್ಷ್ಮತೆಯನ್ನು ಅರಿಯುವಲ್ಲಿ ಸಂಪೂರ್ಣವಾಗಿ ತೊಡಗಿಕೊಂಡರೆ, ಅದೊಂದು ಮನೋಹರವಾದ ಕ್ಷೇತ್ರ ಎಂಬುದನ್ನು ಬಹುತೇಕರು ಒಪ್ಪಿಕೊಳ್ಳುತ್ತಾರೆ. ಈ ಘಟಕದಲ್ಲಿ ನೀವು ಕೆಳಗಿನ ಅಂಶಗಳ ಬಗ್ಗೆ ತಿಳಿಯಲಿದ್ದೀರಿ:

* ಮಾಧ್ಯಮ ಶ್ರೋತೃಗಳ ಸ್ವರೂಪ ಮತ್ತು ರೀತಿಗಳು;
* ಮಾಧ್ಯಮ ಶ್ರೋತೃಗಣವನ್ನು ರೂಪಿಸುವಲ್ಲಿ ಪ್ರಭಾವ ಬೀರುವ ಅಂಶಗಳು;
* ಶ್ರೋತೃಗಣ ಸಂಶೋಧನೆಯ ಪ್ರಾಮುಖ್ಯತೆ, ಮತ್ತು
* ಶ್ರೋತೃಗಣ ಸಂಶೋಧನೆಯ ವಿಧಾನಗಳು.

## 4.1 ಪ್ರಸ್ತಾವನೆ

ಮಾಧ್ಯಮಗಳು ಮತ್ತು ಅದರ ಶ್ರೋತೃವರ್ಗದ ನಡುವೆ ಇರುವ ಸಂಬಂಧ ಹೆಚ್ಚು ಆಸಕ್ತಿದಾಯಕವಾದುದು. ಇಲ್ಲಿ ಯಾರು ಯಾರ ಮೇಲೆ ಪ್ರಭಾವ ಬೀರುತ್ತಾರೆ ಎನ್ನುವ ತಾರ್ಕಿಕ ಪ್ರಶ್ನೆಯ ಬಗ್ಗೆ ದಶಕಗಳಿಂದಲೂ ಸಂಶೋಧನೆಗಳು ನಡೆಯುತ್ತಲೇ ಇವೆ. ಆದರೆ ಇದಕ್ಕೆ ಉತ್ತರ ಇನ್ನೂ ಸಿಕ್ಕಿಲ್ಲ. 'ಮಾಧ್ಯಮ ಶ್ರೋತೃಗಣ' ಎಂಬ ಪದ ಪುಂಜವೇ ದ್ವಿತ್ವವನ್ನು ಸೂಚಿಸುತ್ತದೆ. 'ಶ್ರೋತೃಗಣ'ದ ಒಂದು ಸರಳ ಪರಿಭಾಷೆ ಎಂದರೆ, "ಬೇರೆ ಬೇರೆ ಮಾಧ್ಯಮಗಳ ಅಥವಾ ಅವುಗಳಲ್ಲಿ ಅಡಕವಾದ ವಿಷಯಗಳ ಅಂಗಗಳ ಓದುಗರು, ಶ್ರೋತೃಗಳು, ಪ್ರೇಕ್ಷಕರೆಲ್ಲರನ್ನು ಒಳಗೊಂಡ ಸಮಷ್ಟಿ". ಮಾಧ್ಯಮಗಳು ಅಥವಾ ಸಾಮಾಜಿಕ ಗುಂಪುಗಳು ಅಥವಾ ಅವುಗಳ ಚಟುವಟಿಕೆಗಳ ಮೂಲಕವಾಗಿ ತಮ್ಮದೇ ಆದ ಸಂವಹನ ಮಾಧ್ಯಮಗಳಿಗೆ ಪ್ರತಿಕ್ರಿಯಾತ್ಮಕವಾಗಿ ರೂಪುಗೊಂಡ ಜನರಗುಂಪೇ ಇದು ಎನ್ನುವುದರಲ್ಲಿ ಸಂದೇಹವೇ ಇಲ್ಲ. ಇಲ್ಲಿ 'ಮಾಧ್ಯಮ' ಎನ್ನುವುದು ಮಾಧ್ಯಮಗಳು ಮತ್ತು ವಿಷಯ ವಸ್ತುಗಳೆರಡನ್ನೂ ನಿರ್ದೇಶಿಸುತ್ತದೆ.

ಪ್ರತಿಯೊಬ್ಬ ಶ್ರೋತೃವಿಗೂ ತನ್ನದೇ ಆದ ವ್ಯಕ್ತಿತ್ವ ಇರುತ್ತದೆ. ಉದಾಹರಣೆಗೆ, ನಿರ್ದಿಷ್ಟವಾದ ಟಿವಿ ಧಾರಾವಾಹಿ ಅಥವಾ ನಾಟಕ ತಂಡಕ್ಕೆ ಅದರದೇ ಆದ ಶ್ರೋತೃವರ್ಗ ಇರುತ್ತದೆ. ಮೂಲತಃ 'ಶ್ರೋತೃಗಣ' ಎಂಬ ಪದವು ನಾಟಕ, ಕ್ರೀಡೆ ಮತ್ತು ಎಲ್ಲ ರೀತಿಯ ಪ್ರದರ್ಶನಗಳ ಪ್ರೇಕ್ಷಕರ ಸಮೂಹವನ್ನು ನಿರ್ದೇಶಿಸುತ್ತಿತ್ತು. ಮಾಧ್ಯಮಗಳು ಪ್ರಚಾರಕ್ಕೆ ಬರುವ ಮುನ್ನ ಈ ಶ್ರೋತೃವರ್ಗಕ್ಕೆ ಕೆಲವೊಂದು ಸಾಮಾನ್ಯ ಗುಣಲಕ್ಷಣಗಳಿದ್ದವು. ಅವುಗಳು ಇಂದಿಗೂ ಪ್ರಸಕ್ತವಾಗಿಯೇ ಇವೆ. ಅವುಗಳೆಂದರೆ :

ಅ. ಶ್ರೋತೃಗಣ ಒಂದು ವ್ಯವಸ್ಥಿತವಾದ ಸಮೂಹ

ಆ. ದೇಶ, ಕಾಲಗಳ ದೃಷ್ಟಿಯಿಂದ ವಿಕಸ್ರಗೊಂಡಿರುವುದು

ಇ. ಅವರ ಆಸನಗಳ ವ್ಯವಸ್ಥೆಯು ಅವರ ಸ್ಥಾನಮಾನದ ದ್ಯೋತಕ

ಈ. ಅದು ಮುಕ್ತವಾದ, ಸಾರ್ವಜನಿಕ ಕೂಟ

ಉ. ಮನರಂಜನೆ ಅಥವಾ ವಿಷಣ್ಣತೆಯ ಅನುಭವ, ಶೋಕ, ಮೆಚ್ಚುಗೆ, ಕರುಣೆ, ಭೀತಿ ಮತ್ತಿತರ ಭಾವನೆಗಳು ಪ್ರೇಕ್ಷಕರ ಮುಖ್ಯವಾದ ಆಶಯವಾಗಿತ್ತು.

ಇದು ಒಟ್ಟಾರೆಯಾದ ಸಾಮಾಜಿಕ ವರ್ತನೆಯ ಒಂದು ಸಂಸ್ಕಾರರೂಪವಾಗಿತ್ತು. ನಿಜ, ಸಮೂಹ ಮಾಧ್ಯಮಗಳು ಮತ್ತು ನವೀನ ಸಂಪರ್ಕ ತಂತ್ರಜ್ಞಾನಗಳು ಶ್ರೋತೃವರ್ಗ ಮತ್ತು ಸಮಾಜದ ಸ್ವರೂಪವನ್ನು ಬದಲಾಯಿಸಿಬಿಟ್ಟಿವೆ.

ಮುದ್ರಣಯಂತ್ರದ ಆವಿಷ್ಕಾರವು ಓದುವ ಜನಗಳ ಗುಂಪನ್ನು ಸೃಷ್ಟಿಸಿತು. ಈ ಜನತೆಯ ಆಸಕ್ತಿ, ಅಭಿರುಚಿ, ವಿದ್ಯಾಭ್ಯಾಸ, ಧಾರ್ಮಿಕ ಹಾಗು ಆರ್ಥಿಕ ಸ್ಥಾನಮಾನಗಳು ಮತ್ತು ರಾಜಕೀಯ ಈ ಗುಣಲಕ್ಷಣಗಳನ್ನು ಆ ಗುಂಪು ಒಳಗೊಂಡಿತ್ತು. ಮುಂದಿನ ಪ್ರಮುಖ ಪ್ರಭಾವ ಎಂದರೆ, ಈ ಸಾರ್ವಜನಿಕರ ಕಾರ್ಯಕ್ರಮಗಳ ಮತ್ತು ಸಂವಹನದ ವಾಣಿಜ್ಯೀಕರಣ. ಮೊದಲಿಗೆ ಆಗಮಿಸಿದ ಮುದ್ರಣ ಮಾಧ್ಯಮವು ಬಹಳ ಶೀಘ್ರವಾಗಿ ವಾಣಿಜ್ಯೋದ್ಯಮವಾಯಿತು. ಇದಕ್ಕೆ ಹೆಚ್ಚುವರಿಯಾಗಿ, ವಿದ್ಯುನ್ಮಾನ ಮಾಧ್ಯಮವು ಶ್ರೋತೃವರ್ಗವನ್ನು ಸ್ಥಳೀಯತೆಯ ಅಂಶದಿಂದ ದೂರ ಮಾಡಿತು ಮತ್ತು ಸಾಮಾಜಿಕವಾಗಿ ವಿಘಟನೆ ಮಾಡಿತು.

## 4.2 ಮಾಧ್ಯಮ ಶ್ರೋತೃಗಣ

ತಂತ್ರಜ್ಞಾನ ಮತ್ತು ಸಾಮಾಜಿಕ ಪರಿವರ್ತನೆಗಳ ಕಾರಣದಿಂದಾಗಿ ಶ್ರೋತೃಗಣದ ಮೂಲಸ್ವರೂಪವೂ ಕೆಲವೊಂದು ಬದಲಾವಣೆಗಳನ್ನು ಕಂಡಿದೆ. ಮಾಧ್ಯಮ ಮೂಲಗಳಿಗೆ ಗಮನ ನೀಡಿರುವ ಸಮಷ್ಟಿಗಳು, ಮೂಲದ ಯೋಜನೆ ಮತ್ತು ಭವಿಷ್ಯವಾಣಿಗಳಿಗೆ ಕಟ್ಟುಬದ್ಧವಿಲ್ಲ. ನೇರವಾಗಿ ಸಂಬೋಧನೆ ಮಾಡುವಂತಹ ವಿಧಾನ ಈಗೇನೂ ಪ್ರಬಲವಾಗಿಲ್ಲ. ಮಾಧ್ಯಮಗಳಲ್ಲಿ ಸಾರ್ವಜನಿಕರ ಸಹಭಾಗಿತ್ವ ಮತ್ತು ಅಧಿಕಾರಯುತವಾದ ನಿಯಂತ್ರಣ ಎರಡೂ ಕಡಿಮೆಯೇ. ಬಹಳ ಹೆಚ್ಚಿನ ಮಾಧ್ಯಮ ಸಂಶೋಧಕರು ಶ್ರೋತೃಗಣವನ್ನು ಪ್ರೇಕ್ಷಕ, ಓದುಗ, ಕೇಳುಗರ ಸಮಷ್ಟಿ ಎಂದೇ ಗುರುತಿಸುತ್ತಾರೆ. ಮಾಧ್ಯಮ ಜಾತ್ರೆಯಲ್ಲಿ ನಿರ್ದಿಷ್ಟ ಘಟಕವು ಎಷ್ಟು ಜನರನ್ನು ತಲುಪಿತು ಎಂಬುದೇ ಇಲ್ಲಿನ ಕೇಂದ್ರ ಬಿಂದು ನಿಜ, ಇಂತಹ ಒಂದು ವಿವರಣೆಯು ಅಷ್ಟೇನೂ ಸರಳವಾದುದಲ್ಲ. ಶ್ರೋತೃಗಣ ಸಹಭಾಗಿತ್ವ ಮತ್ತು ಅವರ ಪಾಲ್ಗೊಳ್ಳುವಿಕೆಯ ಪ್ರಮಾಣವೂ ಬೇರೆ ಬೇರೆ ಮಟ್ಟದಲ್ಲಿರುತ್ತದೆ. ಒಂದು ನಿರ್ದಿಷ್ಟ ಪಟ್ಟಣದಲ್ಲಿ ಇರುವ ಟಿವಿ ಸೆಟ್ಟುಗಳ ಸಂಖ್ಯೆಯು ಟಿವಿ ವೀಕ್ಷಿಸುವವರ ಸಂಖ್ಯೆಯ ಸೂಚಿಯಾಗಬಹುದು. ಆದರೆ ವಾಸ್ತವದಲ್ಲಿ ಈ ಲೆಕ್ಕಾಚಾರ ಹೆಚ್ಚಾಗಬಹುದು ಅಥವಾ ಕಡಿಮೆಯೂ ಆಗಬಹುದು. ಈ ಮಂದಿಯಲ್ಲಿ ವಿಷಯವನ್ನು ಮೈಗೂಡಿಸಿಕೊಳ್ಳುವವರು ಮತ್ತೂ ಕಡಿಮೆ ಇರಬಹುದು. "ಸಂಪೂರ್ಣ ಸಮಾಜದ ಜನಸಂಖ್ಯೆಯಿಂದ, ಸಂದೇಶವೊಂದರ ಸಂಭವನೀಯ ಸಾರ್ವಜನಿಕರಿಗೆ, ಅವರಿಂದ ನಿಜವಾಗಿ ಗಮನಕೊಡುವ ಪ್ರಯೋಜನೀಯ ಸಾರ್ವಜನಿಕರ ಪ್ರಮಾಣಕ್ಕೆ ಅದ್ದರಿಂದ ನಿರ್ದಿಷ್ಟ ಸಂದೇಶದ ಜನತೆಗೆ ಮತ್ತು ಕೊನೆಯಲ್ಲಿ, ಸಂವಹನದಿಂದ ನಿಜವಾಗಿಯೂ ಪ್ರಭಾವಿತರಾಗುವ ಜನತೆಯ ಹಂತಕ್ಕೆ" ಎಂಬುದಾಗಿ ಕ್ಷೀಣತೆಯ ಸರಣಿಯನ್ನು ಗುರುತಿಸಬಹುದು.

ಯಾವಾಗ ಶ್ರೋತೃಗಣವನ್ನು ಸಮೂಹ, ಸಮಷ್ಟಿ ಎಂದು ಕರೆಯಲಾಗುವುದೋ ಆಗ ಅದರ ಗಾತ್ರ (ಸಾಮಾನ್ಯವಾಗಿ ಬೃಹತ್) ಅದರ ಏಕರೂಪತೆ, ಭೌಗೋಳಿಕ ವಲಯದ ವಿಸ್ತೃತತೆ, ಸುಸಂಬದ್ಧವಾದ ಸಾಮಾಜಿಕ ರಚನೆಯ ಅಭಾವ, ಅನಾಮಿಕತೆ, ಅಸಂಗತ ಸಂಯೋಜನೆಗಳೂ ನಿರ್ದೇಶಿತವಾಗುತ್ತವೆ. 'ಸಮೂಹ' ಎಂಬುದು ಇಲ್ಲವೇ ಇಲ್ಲ, ಅದು ನಮ್ಮ ಕಲ್ಪನೆ ಅಷ್ಟೇ ಎಂದು ಕೆಲವು ಪರಿಣತರು ಅಭಿಪ್ರಾಯಪಡುತ್ತಾರೆ. ಆಗ ಶ್ರೋತೃಗಣವು ಒಂದು ಸಮೂಹ ಎಂಬ ಪ್ರಶ್ನೆ ಇರುವುದು ಎಲ್ಲಿ?

ಕೆಲವೊಂದು ಪರಿಣತರು ಮಾಧ್ಯಮ ಶ್ರೋತೃವರ್ಗವನ್ನು ಸಾರ್ವಜನಿಕರ ಅಥವಾ ಸಾಮಾಜಿಕ ಗುಂಪು ಎಂದು ಪರಿಗಣಿಸುತ್ತಾರೆ. ಈ ಗುಂಪುಗಳು ತಮ್ಮ ಅಸ್ತಿತ್ವಕ್ಕಾಗಿ ಮಾಧ್ಯಮಗಳ ಮೇಲೆ ಅವಲಂಬಿತವಾಗಿರುವುದಿಲ್ಲ. ಆದರೆ, ತಮ್ಮಲ್ಲಿ ನಿರಂತರತೆ ಕಾಯ್ದುಕೊಳ್ಳಲು ಮತ್ತು ಹೆಚ್ಚಿನ ಅಭಿವೃದ್ಧಿಗೆ ಮಾಧ್ಯಮಗಳನ್ನು ಬಳಸಬಹುದು. ಒಂದು ವಿವಾದಾಂಶ ಅಥವಾ ಆಸಕ್ತಿ ಅಥವಾ ವೃತ್ತಿ ಇವುಗಳ ಆಧಾರದ ಮೇಲೂ ಶ್ರೋತೃವರ್ಗಗಳು ರೂಪುಗೊಳ್ಳುತ್ತವೆ.

ಕೆಲವೊಂದು ವೃತ್ತಿನಿರತರಾದ ಮಾಧ್ಯಮದವರು ಶ್ರೋತೃವರ್ಗವನ್ನು ಒಂದು ಮಾರುಕಟ್ಟೆ ಎಂದು ಪರಿಗಣಿಸುತ್ತಾರೆ. ಮಾಧ್ಯಮದ ವಿಷಯಗಳನ್ನು ಒಂದು ವ್ಯಾಪಾರೀ ವಸ್ತುವಾಗಿ, ಸೇವೆಯಿಂದೂ ಸಂಭಾವ್ಯ ಗ್ರಾಹಕರಿಗೆ ಮಾಡಲಾಗುತ್ತದೆ. ಬೇರೆಲ್ಲಾ ಮಾಧ್ಯಮಗಳ ಉತ್ಪನ್ನಗಳೂ ಗ್ರಾಹಕರ ಗಮನ ಥೈಲಿಗಾಗಿ ಸ್ಪರ್ಧೆ ನೀಡುತ್ತಿವೆ ಎಂಬುದನ್ನು ನಾವು ಇಲ್ಲಿ ಮರೆಯಬಾರದು.

ಇಂತಹ ಒಂದು ಕಾರ್ಯಸ್ವರೂಪದ ಗುಣಲಕ್ಷಣಗಳೆಂದರೆ:

ಅ. ಗ್ರಾಹಕ ಮತ್ತು ಉತ್ಪನ್ನ, ಇವುಗಳ ನಡುವಿನ ಸಂಬಂಧದಂತೆ, ಮಾಧ್ಯಮ ಶ್ರೋತೃವರ್ಗ ಮತ್ತು ಮಾಧ್ಯಮಗಳ ನಡುವಿನ ಸಂಬಂಧವನ್ನು ಈ ವಿಧಾನ ವರ್ಣಿಸುತ್ತದೆ.

ಆ. ಶ್ರೋತೃವರ್ಗದ ಆಂತರಿಕ ಸಾಮಾಜಿಕ ಸಂಬಂಧಗಳಿಗೆ ಹೆಚ್ಚಿನ ಮಹತ್ವವನ್ನೇನೂ ನೀಡುವುದಿಲ್ಲ.

ಇ. ಆದಾಯ ಮತ್ತು ಬಳಕೆಗಳ ಪ್ರಮಾಣದ ಅನ್ವಯ ಶ್ರೋತೃಗಳನ್ನು ಶ್ರೇಣೀಕರಿಸಲಾಗುತ್ತದೆ.

ಈ. ಅಡಕವಾದ ವಿಷಯಗಳ ಗುಣಮಟ್ಟಕ್ಕಿಂತ, ಓದುವ, ಕೇಳುವ ಅಥವಾ ನೋಡುವವರ ಅವಶ್ಯಕತೆ, ಆಯ್ಕೆಗಳು ಮುಖ್ಯವಾಗುತ್ತವೆ.

ಉ. ಮಾರುಕಟ್ಟೆ ಮಾದರಿಯು ದೃಷ್ಟಿಯಿಂದ ನೋಡುವ ವಿಧಾನವಾಗಿದ್ದು, ಶ್ರೋತೃಗಣದ ಇತರ ಘಟಕಗಳನ್ನು ನಿರ್ಲಕ್ಷಿತವಾಗುತ್ತವೆ.

ಶ್ರೋತೃಗಳ ಸಮೂಹದ ಲಕ್ಷಣ, ಗುಣಗಳೆಂದು ಗುರುತಿಸಲಾಗುವ ಅಂಶಗಳೆಂದರೆ, ಸದಸ್ಯತ್ವದ ಅರ್ಹತೆ, ಗಾತ್ರ, ಸ್ಥಳ, ಸ್ಥಿರತೆ, ಹೊಂದಾಣಿಕೆಯ ಮಟ್ಟ ಇತ್ಯಾದಿ ಜನಸಮೂಹದ ಲಕ್ಷಣಗಳು. ಉದಾಹರಣೆಗೆ ವಯೋಮಾನ ಕೂಡ ಶ್ರೋತೃಗಣದ ರೂಪುಗೊಳ್ಳುವಿಕೆಯಲ್ಲಿ ಪಾತ್ರವಹಿಸಬಹುದು. ಹಾಗೆಯೇ, ಅದರ ಆಸಕ್ತಿಗಳು, ಗಮನ, ಗ್ರಹಿಕೆ ಮತ್ತು ಸಾಮಾಜಿಕ ವಿಭೇದೀಕರಣದ ಪರಿಣಾಮವಾಗಿ ಶ್ರೋತೃಗಣದ ಸಾಮಾಜಿಕ ಸ್ವರೂಪದಲ್ಲಿಯೂ ವ್ಯತ್ಯಾಸಗಳಿರುತ್ತವೆ ಎಂಬುದನ್ನು ನಾವು ತಿಳಿಯಬೇಕು. ಸಮೂಹ ಮಾಧ್ಯಮಗಳ ಬಳಕೆದಾರರು ಈ ಮಾಧ್ಯಮಗಳ ಸಾಮಾಜಿಕ ಉಪಯೋಗವನ್ನು ಹೊಂದಿರುತ್ತಾರೆ. ಸಾಮಾಜಿಕ ಬಳಕೆಯ ರೀತಿಗಳಲ್ಲಿ ಐದು ವಿಧಗಳಿವೆ. ಅವುಗಳೆಂದರೆ, ರಚನೆಯ ಬಾಂಧವ್ಯದ, ಸಂಯೋಜನೆ, ನಿವಾರಣೆ, ಸಾಮಾಜಿಕ ಕಲಿಕೆಯ, ಕ್ಷಮತೆ ಅಥವಾ ಪ್ರಾಬಲ್ಯದ ರೀತಿಗಳು.

ಸಾಮಾಜೀಕರಣದ ದೃಷ್ಟಿಯಿಂದ ಸಮೂಹ ಮಾಧ್ಯಮಗಳನ್ನು ನೋಡುವುದಾದರೆ, ಮಾಧ್ಯಮಗಳು ಮಕ್ಕಳು ಮತ್ತು ಯುವಜನರ ಮೇಲೆ ಒಂಟಿತನದ, ವಿಕ್ಷಿಪ್ತತೆಯ ಪರಿಣಾಮಗಳನ್ನು ಉಂಟು ಮಾಡುತ್ತವೆ ಎಂದು ಹೇಳಲಾಗುತ್ತದೆ. ಬಹಳ ಹೆಚ್ಚಿನ ಪ್ರಮಾಣದಲ್ಲಿ ಟಿವಿ ಅಥವಾ ಚಲನಚಿತ್ರಗಳನ್ನು ನೋಡುವುದು ಅಸಾಧಾರಣವಾದ ನಡವಳಿಕೆಗೆ ದಾರಿ ಮಾಡಬಹುದು ಸಮೂಹ ಮಾಧ್ಯಮಗಳನ್ನು ಕುರಿತಾದ ಶ್ರೋತೃವರ್ಗದ ಮನೋಧರ್ಮವೂ ಬಹಳ ಹಿಂದಿನಿಂದಲೂ ಸಂಶೋಧನೆಯ ಆಸಕ್ತಿಯ ವಿಷಯವಾಗಿದೆ. ಜನರು ಮಾಧ್ಯಮಗಳ ಗುಣಗಳನ್ನು ಹೊಗಳುತ್ತಾರೆ, ಅವಗುಣಗಳನ್ನು ತೆಗಳುತ್ತಾರೆ. ಸಮೂಹ ಮಾಧ್ಯಮಗಳ ಕಾರ್ಯನಿರ್ವಹಣೆ.

ಸಾರ್ವಜನಿಕರಲ್ಲಿ ಚರ್ಚೆ ಮತ್ತು ಅಭಿಪ್ರಾಯಗಳ ವಸ್ತು, ಮಾಹಿತಿ ಮತ್ತು ಮನರಂಜನೆಯನ್ನು ಮಾಧ್ಯಮಗಳ ಶ್ರೋತೃವರ್ಗ ಬಯಸುತ್ತದೆ. ಉತ್ತಮವಾದ ಅಭಿರುಚಿ, ನೈತಿಕತೆ, ದೇಶಪ್ರೇಮ ಮತ್ತು ಧನಾತ್ಮಕವಾದ ಇತರ ಮೌಲ್ಯಗಳಿಗೆ ಮಾಧ್ಯಮಗಳು ಬದ್ಧವಾಗಿರಬೇಕೆಂದೂ ಶ್ರೋತೃಗಣ ಆಶಿಸುತ್ತದೆ.

ಶ್ರೋತೃಗಣದ ಸಂರಚನೆಯು, ಶ್ರೋತೃಗಣದ ಸಂಶೋಧನೆ ಮತ್ತು ಮಾರುಕಟ್ಟೆ ಸಂಶೋಧನೆ, ಇವೆರಡರ ಆಸಕ್ತಿಯ ವಸ್ತು ವಿಷಯವಾಗಿದೆ. ಮಾಧ್ಯಮಗಳ ಬಳಕೆ ಮತ್ತು ಪರಿಣಾಮಗಳ ಅಧ್ಯಯನದ ಉಪ ಉತ್ಪನ್ನ ಇದು ಎಂದು ಪರಿಗಣಿಸಬಹುದಾಗಿದೆ. ಇದರಲ್ಲಿ ಸಾಮಾನ್ಯವಾಗಿ ಬಳಸಲ್ಪಡುವ ಎರಡು ಅಂಶಗಳೆಂದರೆ ವಯೋಮಾನ ಮತ್ತು ಸಮಾಜವರ್ಗ. ಆದಾಯ ಮತ್ತು ಶಿಕ್ಷಣವನ್ನು ಇದರಲ್ಲಿ ಸೇರಿಸಬಹುದು. ಮಾಧ್ಯಮಗಳ ಬಳಕೆ ಮಾಡಲು ಬೇಕಾಗುವ ವಿರಾಮವೇಳೆ ಮತ್ತು ಹಣದ ಅವಶ್ಯಕತೆಗಳನ್ನು ಈ ಅಂಶಗಳು ನಿರ್ಧರಿಸುತ್ತವೆ. ತಂದೆ ತಾಯಿಯರಿಂದ ನಿರ್ಧರಿಸಲ್ಪಟ್ಟಂತೆ ವಸ್ತು ವಿಷಯಗಳನ್ನು ಚಿಕ್ಕ ಮಕ್ಕಳು ಬಳಸುತ್ತಾರೆ. ಅವರು ಬೆಳೆದಂತೆಲ್ಲ, ಅವರಿಗೆ ದೊರೆಯುವ ಸ್ವಾತಂತ್ರ್ಯವು ಅವರದೇ ಆದ ಆಯ್ಕೆ, ಸಾಮಾಜೀಕರಣ ಮತ್ತು ಚಿತ್ರಮಂದಿರಗಳಿಗೆ ಭೇಟಿ ನೀಡುವುದನ್ನು ಸಾಧ್ಯವಾಗಿಸುತ್ತದೆ. ಅದೇ ರೀತಿಯಾಗಿ, ವಿದ್ಯಾಭ್ಯಾಸವೂ ಸಹ ವಿಷಯದ ರೀತಿಗಳ ಬಗ್ಗೆಯೂ ಅವರ ಒಲವನ್ನು ನಿರ್ಧರಿಸುತ್ತದೆ. ಉಚ್ಚ ವಿದ್ಯಾಭ್ಯಾಸವು ಗಂಭೀರವಾದ ವಿಷಯಗಳನ್ನು ಮೆಚ್ಚಬಹುದು. ಮಾಧ್ಯಮಗಳ ಸರಬರಾಜು ನಿರ್ಣಾಯಕ ಎನ್ನುವಂತಹ ಮತ್ತು ಶ್ರೋತೃಗಳ ಬೇಡಿಕೆ ಎನ್ನುವಂತಹ ಉಲ್ಲೇಖಗಳು ಬಹಳಷ್ಟಿವೆ.

ಶ್ರೋತೃಗಣದ ಸದಸ್ಯರಿಂದ ಮಾಧ್ಯಮ ವಿಷಯಗಳ ಸಂಕೇತಗಳು ಒಡೆಯಲ್ಪಡಬೇಕು, ಸಂವಹನ ಪ್ರಕ್ರಿಯೆಯಲ್ಲಿ ಶ್ರೋತೃಗಣದ ಪಾತ್ರ ಇದೇ ಎಲ್ಲ ಪರಿಣಾಮ ಸಂಶೋಧನಾ ಅಧ್ಯಯನಗಳ ಆಧಾರವಾಗಿದೆ. ಈ ರೀತಿಯ ಸಂಶೋಧನೆಯ ಒಂದು ತಾತ್ವಿಕ ಚೌಕಟ್ಟನ್ನು 'ಉಪಯೋಗ ಮತ್ತು ತಣಿಕೆ/ತುಷ್ಟಿ'ಯ ರೀತಿ ಎಂದೂ ಕರೆಯಲಾಗುತ್ತದೆ. ಆಶಯಗಳು ಅಥವಾ ಮಾಧ್ಯಮಗಳ ಬಳಕೆಯಿಂದ ಪಡೆಯುವ ಸಂತೃಪ್ತಿ ಈ ಕುರಿತಂತೆ ಇಂದು ವಿಚಾರ ಮಾಡುತ್ತದೆ. ಸೈದ್ಧಾಂತಿಕ ವಿಧಾನವನ್ನು ಯಜಮಾನಿಕೆ ವಾದ (Hegemonic Theory) ಎಂದು ಕರೆಯಲಾಗುತ್ತದೆ. ಮೂರನೆಯ ವಿಧಾನವನ್ನು ಅಂಗೀಕಾರದ ವಿಶ್ಲೇಷಣೆ ಎಂದು ಕರೆಯಲಾಗುತ್ತದೆ. ಪ್ರತಿಕ್ರಿಯೆಗಳನ್ನು ಸಂಗ್ರಹಿಸುವುದಕ್ಕಾಗಿ ಶ್ರೋತೃಗಣ ಸಂಶೋಧನೆಯನ್ನು ನಡೆಸಲಾಗುತ್ತದೆ. ತಕ್ಷಣದ ಅನ್ವಯಕ್ಕಾಗಿ ಪರಿಮಾಣಾತ್ಮಕ ಸಂಶೋಧನಾ ವಿಧಾನವನ್ನು ಬಳಸಲಾಗುತ್ತದೆ. ಸಮೂಹ ಮಾಧ್ಯಮಗಳು ಬದಲಾಗುತ್ತಿವೆ. ಹೊಸ ಹೊಸ ಮಾಧ್ಯಮ ವಾಹಿನಿಗಳು ಮೂಡಿಬರುತ್ತಿವೆ. ಈ ಬದಲಾವಣೆಗಳಲ್ಲಿ ಶ್ರೋತೃಗಣದ ನೇರವಾದ ಪ್ರಭಾವ ಇಲ್ಲ. ಬದಲಾಗುತ್ತಿರುವ ತಂತ್ರಜ್ಞಾನಗಳು ಮತ್ತು ರಾಜಕೀಯ ಸ್ಥಿತ್ಯಂತರಗಳಿಂದಾಗಿ, ಮಾಧ್ಯಮ ಉದ್ಯಮದಲ್ಲಿಯೂ ಆಂತರಿಕವಾಗಿ ಬದಲಾವಣೆಗಳು ನಡೆಯುತ್ತಿವೆ.

ಹೇರಳವಾಗಿ ಮಾಧ್ಯಮಗಳು ದೊರೆಯುತ್ತಿರುವ ಈ ಸಂದರ್ಭದಲ್ಲಿ, ಶ್ರೋತೃಗಣ ಸಂಶೋಧನೆ ಮಾಡುವುದಕ್ಕೂ ಮತ್ತು ಅದರೊಂದಿಗೆ ಶ್ರೋತೃಗಳಿಗೂ ಅವು ಸಮಸ್ಯೆಗಳನ್ನು ತಂದೊಡ್ಡಿವೆ. ಮಾಧ್ಯಮಗಳ ಶ್ರೋತೃವರ್ಗವು ಬಹಳವಾಗಿ ಒಡೆದುಹೋಗುತ್ತಿದೆ ಎಂದು ಕಂಡು ಬಂದಿದೆ. ಹೀಗಾಗಿ, ಮಾಧ್ಯಮ ವಿಷಯಗಳ ವಿತರಣೆಯು ಉತ್ಪಾದನೆಯಿಂದ ಬೇರೆಯಾಗುತ್ತದೆ. ದೃಶ್ಯ-ಶ್ರವ್ಯ ಮಾಧ್ಯಮದಲ್ಲಿ ಇದು ಬಹಳಷ್ಟು ನಿಜವಾಗಿದೆ.

ಶ್ರೋತೃಗಣದ ಪ್ರತಿಕ್ರಿಯೆ, ಅದರಲ್ಲೂ, ವಿದ್ಯುನ್ಮಾನ ಮಾಧ್ಯಮಗಳಲ್ಲಿ ಬಹಳ ಮುಖ್ಯ ಎಂದು ಪರಿಗಣಿಸಲಾಗುತ್ತದೆ. ಕಾರ್ಯಕ್ರಮಗಳ ಜನಪ್ರಿಯತೆ ಅಥವಾ ಅದರ ಅಭಾವವು ತಿಳಿದುಬರುವುದು ಶ್ರೋತೃಗಳ ಪ್ರತಿಕ್ರಿಯೆಯಿಂದ. ವಾಣಿಜ್ಯ ಚಿತ್ರಗಳು ಮತ್ತು ಧ್ವನಿಸುರುಳಿಗಳಿಗೆ, ಗಲ್ಲಾ ಪೆಟ್ಟಿಗೆಯಲ್ಲಿ ಆಗುವ ಸಂಗ್ರಹಣೆ ಮತ್ತು ಮಾರಾಟ ಇವು ಜನಪ್ರಿಯತೆಯನ್ನು ಕುರಿತಾಗಿ, ಪ್ರತಿಕ್ರಿಯೆಯ ಮಾಪನಕ್ಕೆ ಅವಶ್ಯಕವಾದ ಸೂಚಿಯಾಗುತ್ತವೆ. ವಾರವಾರಕ್ಕೆ ಆಗುವ ಸಂಪಾದನೆಯು ಚಲನಚಿತ್ರಗಳ ಜನಪ್ರಿಯತೆಯ ನಿಕ್ಕಿಯ ಸೂಚಿಗಳಾಗುತ್ತವೆ.

ಜನಪ್ರಿಯತೆಯ ಪಟ್ಟಿಯಲ್ಲಿ ಸ್ಥಾನಪಲ್ಲಟ ಆಗುವುದು ಜನಪ್ರಿಯತೆಯನ್ನು ಪ್ರತಿಫಲಿಸುತ್ತದೆ. ಈ ಪ್ರತಿಕ್ರಿಯೆಯು ಮುಂದಿನ ಉತ್ಪಾದನೆಗಳ ಮತ್ತು ವಿತರಣೆಗಳ ಪ್ರವೃತ್ತಿಗಳನ್ನು ನಿರ್ಧರಿಸುತ್ತವೆ. ನಿಜವೆಂದರೆ, ಒಂದೇ ರೀತಿಯ ಕಥಾ ಹಂದರ ಮತ್ತು ವಸ್ತುವಿಷಯಗಳನ್ನೊಳಗೊಂಡ ಸೂತ್ರಬದ್ಧ (ಫಾರ್ಮುಲಾ) ಚಿತ್ರಗಳ ಉಗಮಕ್ಕೆ ಇದು ಕಾರಣವಾಗಲೂಬಹುದು. ಹೊಸ ಹೊಳಹುಗಳಲ್ಲಿ ಸಂಭಾವ್ಯ ಅಪಾಯಗಳಿರುವುದರಿಂದ, ಅವುಗಳನ್ನು ಸುಲಭವಾಗಿ ಒಪ್ಪಿಕೊಳ್ಳುವುದೂ ಕಷ್ಟ.

## 4.3 ಶ್ರೋತೃಗಣ ಸಂಶೋಧನೆ

ಶ್ರೋತೃಗಣ ಸಂಶೋಧನೆಯು ನಿಜವಾಗಿ ಪ್ರಾರಂಭವಾದುದು ರೇಡಿಯೋ ಮಾಧ್ಯಮದೊಂದಿಗೆ. ರೇಡಿಯೋ ಕೇಂದ್ರಗಳ ಸಂಖ್ಯೆ ಹೆಚ್ಚಾದಂತೆ, ಕೇಳುಗರನ್ನು ತಮ್ಮತ್ತ ಆಕರ್ಷಿಸುವಲ್ಲಿ ಸ್ಪರ್ಧೆಯೂ ತೀವ್ರವಾದ ಪರಿಣಾಮವಾಗಿ, ವಸ್ತುವಿಷಯಗಳ ಜನಪ್ರಿಯತೆಯನ್ನು ಕಂಡುಕೊಳ್ಳುವುದು ಅವಶ್ಯಕವಾಯಿತು. ರೇಡಿಯೋ ಶ್ರೋತೃಗಳ ಮತ್ತು ಅವರ ಇಷ್ಟವಾದ ಆಯ್ಕೆಗಳ ಸ್ವರೂಪಗಳನ್ನೂ ತಯಾರುಮಾಡುವುದು ಬಹಳ ಮುಖ್ಯವಾಯಿತು. ಅತಿ ಹೆಚ್ಚು ಸಂಖ್ಯೆಯಲ್ಲಿರುವ ತಟಸ್ಥವಾದ ಕೇಳುಗರ ಸಮೂಹವು ಶ್ರೋತೃಗಣ ಸಂಶೋಧನೆಯ ಕೇಂದ್ರವಾಯಿತು.

ಶ್ರೋತೃಗಣ ಸಂಶೋಧನೆಯ ಒಂದು ವಿಧಾನವೆಂದರೆ ದೂರವಾಣಿಯ ಕರೆ ಮೂಲಕ ವಿಷಯ ಸಂಗ್ರಹಣೆ. ದೂರವಾಣಿಯ ಮೂಲಕವಾಗಿ ಸಂಗೀತದ ಸಣ್ಣ ತುಣುಕುಗಳನ್ನು ಕೇಳಿಸಿ, ಪ್ರತಿಕ್ರಿಯೆ ನೀಡುವವನಿಗೆ ತತ್ಸಂಬಂಧಿಯಾದ ಹಲವಾರು ಪ್ರಶ್ನೆಗಳನ್ನು ಕೇಳಲಾಗುತ್ತಿತ್ತು. ಹಾಡುಗಳು ಕಾರ್ಯಕ್ರಮಗಳು ಮತ್ತು ಕಲಾವಿದರು ಎಷ್ಟರಮಟ್ಟಿಗೆ ಜನರ ಮೇಲೆ ಪ್ರಭಾವ ಬೀರಬಲ್ಲರು ಎಂಬುದನ್ನು ತಿಳಿದುಕೊಳ್ಳಲು ಪಾಶ್ಚಿಮಾತ್ಯದೇಶಗಳಲ್ಲಿ ಈ ವಿಧಾನವನ್ನು ಬಳಸಿಕೊಳ್ಳಲಾಗುತ್ತಿತ್ತು. ಇದರೊಂದಿಗೆ, ಕೆಲವೊಂದು ರೇಡಿಯೋ ಕೇಂದ್ರಗಳು, ಕೇಳುಗರ ಜೀವನಶೈಲಿಯನ್ನು ಕುರಿತಾಗಿ ಅವರು ಎಷ್ಟು ಸಂಪಾದಿಸುತ್ತಾರೆ, ಅವರು ಎಲ್ಲಿ ಮತ್ತು ಏನನ್ನು ತಿನ್ನುತ್ತಾರೆ, ಅವರ ಒಡೆತನದಲ್ಲಿರುವ ವಾಹನಗಳು ಯಾವುವು, ಕಾರ್ಯಕ್ರಮಗಳನ್ನು ಕುರಿತಂತೆ ಅವರ ಒಲವು, ಆಯ್ಕೆಗಳೇನು ಎಂಬಿತ್ಯಾದಿ ವಿವರಗಳನ್ನು ತಿಳಿಯುವ ವಿಧಾನವನ್ನು ಬಳಸುತ್ತವೆ.

ಇನ್ನೊಂದು ವಿಧಾನವೆಂದರೆ, ಶ್ರೋತೃಮಂದಿರದ ಪರೀಕ್ಷೆ. ಇಲ್ಲಿ, ಸಂಗೀತದ ಘಟಕಗಳ ಅಥವಾ ಇತರ ಕಾರ್ಯಕ್ರಮಗಳ ಶ್ರೇಣೀಕರಣ (ರೇಟಿಂಗ್) ಮಾಡುವಂತೆ ಹೆಚ್ಚು ಸಂಖ್ಯೆಯ ಶ್ರೋತೃಗಳನ್ನು ಕೇಳಲಾಗುತ್ತದೆ. ಸಾಮಾನ್ಯವಾಗಿ ಬಳಸಲ್ಪಡುವ ಇನ್ನೊಂದು ವಿಧಾನವೆಂದರೆ ವೈಯಕ್ತಿಕ ಸಂದರ್ಶನ. ದೃಶ್ಯ-ಶ್ರವ್ಯ ಮಾಧ್ಯಮದ ಮೇಲೆ ವಿಮರ್ಶಕರ ಅಭಿಪ್ರಾಯ ಪ್ರಭಾವ ಕಡಿಮೆಯೇ. ರೇಡಿಯೋ ಮತ್ತು ಟಿವಿ ಸೆಟ್‌ಗಳ ಮಾರಾಟ ಅಥವಾ ಕೇಬಲ್ ಟಿವಿ ಚಂದಾದಾರರ ಸಂಖ್ಯೆಯು ರೇಡಿಯೋ ಕೇಂದ್ರಗಳ ಅಥವಾ ಟಿವಿ ವಾಹಿನಿಗಳ ಜನಪ್ರಿಯತೆಯ ಸೂಚಿಗಳೇನಲ್ಲ. ಏಕೆಂದರೆ, ಪ್ರಸಾರವಾಗುವ ಕಾರ್ಯಕ್ರಮ ಸಂಬಂಧಿ ವಿಷಯಗಳನ್ನು ಕುರಿತ ಪ್ರತಿಕ್ರಿಯೆಯನ್ನೂ ಇವು ಪ್ರತಿಫಲಿಸುವುದಿಲ್ಲ. ಬಹಳ ಹೆಚ್ಚೆಂದರೆ, ನಿರ್ದಿಷ್ಟ ಮಾಧ್ಯಮವು ಎಷ್ಟು ಜನಪ್ರಿಯವಾಗಿದೆ ಎಂಬುದನ್ನು ಮಾತ್ರ ಇವು ತಿಳಿಸಬಲ್ಲವು. ವಿಶ್ವಕಪ್ ಕ್ರಿಕೆಟ್ ಪಂದ್ಯದಂತಹ ವಿಶೇಷ ಸಂದರ್ಭಗಳಲ್ಲಿ ರೇಡಿಯೋ ಅಥವಾ ಟಿವಿ ಸೆಟ್‌ಗಳ ಮಾರಾಟ ಹೆಚ್ಚಾಗಬಹುದು. ಆದರೆ, ಇದಕ್ಕೆ ಅದರದೇ ಆದ ನ್ಯೂನತೆಗಳಿವೆ.

ರೇಡಿಯೋ ಮತ್ತು ಟೆಲಿವಿಷನ್‌ಗೆ ಸಂಬಂಧಪಟ್ಟಂತೆ, ಹೀಬರ್ಟ್, ಬಾನ್ ಮತ್ತು ಅಂಗುರ್ಸ್ ಅವರು ಪ್ರತಿಕ್ರಿಯೆ ಅಥವಾ ಶ್ರೋತೃಗಣ ಸಂಶೋಧನೆಯನ್ನು ಕುರಿತಂತೆ ಐದು ಪ್ರಮುಖ ವಿಷಯ(ಅಂಶ)ಗಳನ್ನು ಪಟ್ಟಿ ಮಾಡಿದ್ದಾರೆ. ಅವುಗಳೆಂದರೆ:

ಅ. ಸಂಚಿತ ಶ್ರೋತೃವರ್ಗ (Cume-Cumulative audience)

ಆ. ಟೆಲಿವಿಷನ್ ಹೊಂದಿರುವ ಮನೆಗಳು (HUT-Home Using Telivision)

ಇ. ದರ್ಜೆ(ಶ್ರೇಣಿ)

ಈ. ಪಾಲು (Share)

ಉ. ಪ್ರತಿಸಾವಿರಕ್ಕೆ ತಗಲುವ ಖರ್ಚು (CPM-Cost per Thousand)

ಸಂಚಿತ ಶ್ರೋತೃವರ್ಗ ನಿರ್ದಿಷ್ಟವಾಗಿ ರೇಡಿಯೋಗೆ, HUT ಟೆಲಿವಿಷನ್‌ಗೆ ಸಂಬಂಧಿಸಿದ ಪ್ರತಿಕ್ರಿಯೆಗಳಿಂದ ಶ್ರೇಣೀಕರಣ  ಮಾಡುವುದಕ್ಕಾಗಿದೆ.

## 4.3.1 ಸಂಚಿತ ಶ್ರೋತೃಗಣ

ರೇಡಿಯೋದ ಶ್ರೋತೃಗಣದ ಸಂಶೋಧನೆಗೆ ಬರುವುದಾದರೆ, ಆರ್ಬಿಟ್ರಾನ್‌ನಂತಹ ಪ್ರಬಲವಾದ ಸಂಸ್ಥೆಯು ಅಮೆರಿಕೆಯಲ್ಲಿದೆ. 2500ಕ್ಕೂ ಹೆಚ್ಚು ಸಂಖ್ಯೆ ರೇಡಿಯೋ ಗ್ರಾಹಕ(ಕೇಂದ್ರ)ರನ್ನೂ ಮತ್ತು 3000ಕ್ಕೂ ಹೆಚ್ಚು ಸಂದರ್ಶಕರನ್ನೂ ಅದು ಹೊಂದಿದೆ. ದೇಶದಾದ್ಯಂತ ಅವರು ಮಿಲಿಯಾಂತರ ಮನೆಗಳಿಂದ ಕೇಳುವಿಕೆಯನ್ನು ಕುರಿತ ಮಾಹಿತಿಯನ್ನು ಸಂಗ್ರಹಿಸುತ್ತಾರೆ. ಅತಿ ಹೆಚ್ಚಿನ ಮಾರುಕಟ್ಟೆಗಳು ಪ್ರತಿವರ್ಷವೂ ಮಾಪನಗೊಂಡರೆ, ಬಹಳ ದೊಡ್ಡದಾದ ಮಾರುಕಟ್ಟೆಗಳು ನಾಲ್ಕು ವರ್ಷಗಳಿಗೊಮ್ಮೆ ಮಾಪನಗೊಳ್ಳುತ್ತವೆ.

ರೇಡಿಯೋ ಶ್ರೋತೃಗಣದ ಸಂಶೋಧನೆಯು ಈ ವರ್ಷದಲ್ಲಿ ಒಂದು ಪರಿಣತ ಆದರೆ ಜಟಿಲವಾದ ಕಲೆಯಾಗಿ ಅಭಿವೃದ್ಧಿಗೊಂಡಿದೆ. ಜನಸಂಖ್ಯಾ ಘಟಕಗಳ ಲಕ್ಷಣಗಳಾದ ವಯೋಮಾನ ಮತ್ತು ಲಿಂಗ ಇವು ಜಾಹೀರಾತುದಾರರಿಗಾಗಲೀ ಅಥವಾ ಜಾಹೀರಾತು ಏಜೆನ್ಸಿಗಳಿಗಾಗಲೀ, ಅಲ್ಪ ಪ್ರಮಾಣದ ಮಾಹಿತಿಯನ್ನು ಮಾತ್ರ ನೀಡಬಲ್ಲವು. ಆದಾಯ, ಮದುವೆಯಾಗಿದೆಯೇ ಇಲ್ಲವೇ ಎನ್ನುವುದು, ಕುಟುಂಬಗಾತ್ರ, ಮನೆಯ ಒಡೆತನ, ಶಿಕ್ಷಣ, ಜನಾಂಗೀಯ ಹಿನ್ನೆಲೆ ಮತ್ತು ಇತರ ಜನಸಂಖ್ಯಾ ಲಕ್ಷಣಗಳನ್ನು ಕುರಿತ ಅಂಕಿ ಅಂಶಗಳು ಹೆಚ್ಚು ಮುಖ್ಯವಾಗುತ್ತವೆ. ಆರ್ಬಿಟ್ರಾನ್ ಹೊಸ ರೇಟಿಂಗ್‌ಗಳು, ಹಿಂದೆಂದಿಗಿಂತಲೂ ಹೆಚ್ಚಿನ ಪ್ರಮಾಣದಲ್ಲಿ ಶ್ರೋತೃವರ್ಗದ ಮಾಹಿತಿಯನ್ನು ನೀಡುತ್ತಿವೆ. ಅವು ನೀಡುವ ವಿವರಗಳೆಂದರೆ.

1. ಶ್ರೋತೃವರ್ಗದ ಪ್ರವೃತ್ತಿಗಳು (Audience trends)

2. ಜನಪಂಗಡಗಳ ಪೃಥಕ್ಕರಣ (Discrete demographics)

3. ಶ್ರೋತೃವರ್ಗದ ಸಂಯೋಜನೆ (Audience composition)

4. ಜನಪಂಗಡಗಳ ಕೊಳ್ಳುಗ (Demographic buyer)

5. ಗಂಟೆ ಗಂಟೆಗೆ ಕ್ಯೂಮ್‌ಗಳ ಸರಾಸರಿ (Hour by hour average Cumes)

6. ಕೇಳುವಿಕೆಯ ತಾಣಗಳು (Listening locations)

7. ನಿಷ್ಠಾವಂತರಾದ ಮತ್ತು ವಿಶೇಷವಾಗಿ ಒಂದನ್ನೇ ಆರಿಸುವ, ಬದ್ಧರಾದ ಕ್ಲೂಮ್ ಶ್ರೋತೃಗಣ

8. ರಾತ್ರಿಪೂರ್ತಿ ಕೇಳುವಿಕೆ, ಮತ್ತು (Over night listening)

9. ಜನಾಂಗೀಯ ಸಂಯೋಜನೆಗಳು (Ethnic compositions)

ಕೆಲವೊಂದು ಸಂಶೋಧನಾ ಸಂಸ್ಥೆಗಳು ಭವಿಷ್ಯದ ಗ್ರಾಹಕರ ಗುಚ್ಛಗಳ ಸಾಮಾಜಿಕ ಆರ್ಥಿಕ ಚಿತ್ರಣಗಳನ್ನು ನೀಡುತ್ತವೆ.

## 4.3.2 ಟೆಲಿವಿಷನ್ ಹೊಂದಿರುವ ಮನೆಗಳು (HUT)

ಒಂದು ನಿರ್ದಿಷ್ಟ ಸಮಯದಲ್ಲಿ ಟೆಲಿವಿಷನ್ ಅನ್ನು ಉಪಯೋಗ ಮಾಡುವ ಮನೆಗಳ ಸಂಖ್ಯೆಯನ್ನು ಕಂಡುಕೊಳ್ಳುವ ಒಂದು ವಿಧಾನ. ಟೆಲಿವಿಷನ್ ವೀಕ್ಷಕರಿಂದ ಪ್ರತಿಕ್ರಿಯೆ ಪಡೆಯುವ ಒಂದು ಪ್ರಾಥಮಿಕ ವಿಧಾನ ಇದೆಂದು ಪರಿಗಣಿಸಲಾಗುತ್ತದೆ.

## 4.3.3 ಶ್ರೇಣೀಕರಣ (ರೇಟಿಂಗ್‌ಗಳು)

ಪ್ರಸಾರದ ಪ್ರತಿಕ್ರಿಯೆಗಳಿಂದ ಕಾರ್ಯಕ್ರಮಗಳ ಶ್ರೇಣಿಯನ್ನು ಪಡೆಯುವ ಮತ್ತು ಹೆಚ್ಚಾಗಿ ಉತ್ತಮಗೊಂಡಿರುವ ವಿಧಾನವೆಂದರೆ ರೇಟಿಂಗ್‌ಗಳು. ಒಂದು ನಿರ್ದಿಷ್ಟ ಕಾರ್ಯಕ್ರಮವನ್ನು ನೋಡುವ ವ್ಯಕ್ತಿಗಳು ಅಥವಾ ಮನೆಗಳ ಶೇಕಡಾವಾರು ಪ್ರಮಾಣದಲ್ಲಿ ಇದನ್ನು ತಿಳಿಸಲಾಗುತ್ತದೆ. ಅಮೆರಿಕೆಯ ಎ.ಸಿ. ನೀಲ್‌ಸನ್ ಕಂಪನಿಯು ರೇಟಿಂಗ್ ಪ್ರಮಾಣದಲ್ಲಿ ಪರಿಣತಿಯನ್ನು ಹೊಂದಿದೆ. ಕಂಪನಿಯು ತನ್ನ ಗಿರಾಕಿಗಳ ಉಪಯೋಗಕ್ಕಾಗಿ ನಾಲ್ಕು ರೀತಿಯ ರೇಟಿಂಗ್‌ಗಳನ್ನು ನೀಡುತ್ತದೆ. ಇವುಗಳಲ್ಲಿ ಬಹಳ ಜನಪ್ರಿಯವಾದ ರೇಟಿಂಗ್ ಎಂದರೆ, ನೆಟ್‌ವರ್ಕ್ ಮತ್ತು ಟೆಲಿವಿಷನ್ ಕಾರ್ಯಕ್ರಮದ ರೇಟಿಂಗ್. ಒಂದು ನಿರ್ದಿಷ್ಟ ಕಾಲದಲ್ಲಿ ನಿರ್ದಿಷ್ಟವಾದ ಟಿವಿ ಕಾರ್ಯಕ್ರಮಗಳನ್ನು ನೋಡುವ ಅಮೆರಿಕಾದ ಮನೆಗಳ ಶೇಕಡಾವಾರು ರೂಪವನ್ನು ನೀಲ್‌ಸನ್ ಅವರ ರಾಷ್ಟ್ರೀಯ ಟಿವಿ ರೇಟಿಂಗ್‌ಗಳು ಪ್ರತಿಫಲಿಸುತ್ತವೆ.

ಕಾರ್ಯಕ್ರಮದ ರೇಟಿಂಗ್ 30 ಎನ್ನುವುದಾದರೆ, ಟಿವಿ ಸೆಟ್‌ಗಳನ್ನು ಹೊಂದಿರುವ ಒಟ್ಟು ಮನೆಗಳ ಶೇಕಡ 30ರಲ್ಲಿ ನಿರ್ದಿಷ್ಟವಾದ ಆ ಕಾರ್ಯಕ್ರಮವನ್ನು ನೋಡುತ್ತಾರೆ ಎಂದರ್ಥ. 120 ಮಿಲಿಯನ್ ಟಿವಿ ಮನೆಗಳಿದ್ದು, ರೇಟಿಂಗ್ 25 ಆಗಿದ್ದರೆ, ಇದರರ್ಥ 30 ಮಿಲಿಯನ್ ಮನೆಗಳಲ್ಲಿ ಆ ಕಾರ್ಯಕ್ರಮಗಳನ್ನು ನೋಡುತ್ತಾರೆ ಎಂದು. ರೇಟಿಂಗ್ ಅನ್ನು ಎರಡು ಸಂಖ್ಯೆಗಳ ಆಧಾರದ ಮೇಲೆ ಲೆಕ್ಕಾಚಾರ ಹಾಕಲಾಗುವುದು.

ಅ. ಟೆಲಿವಿಷನ್ ಸೆಟ್‌ಗಳನ್ನು ಹೊಂದಿರುವ ಮನೆಗಳ ಒಟ್ಟು ಸಂಖ್ಯೆ, ಮತ್ತು

ಆ. ಒಂದು ನಿರ್ದಿಷ್ಟವಾದ ಕಾರ್ಯಕ್ರಮವನ್ನು ನೋಡುವ ಟಿವಿ ಮನೆಗಳ ಸಂಖ್ಯೆ.

ರೇಟಿಂಗ್ ಮಾಪನವನ್ನು ಪಡೆಯಲು, ನಿರ್ದಿಷ್ಟವಾದ ಕಾರ್ಯಕ್ರಮವನ್ನು ವೀಕ್ಷಿಸುವ ಟಿವಿ ಮನೆಗಳ ಸಂಖ್ಯೆಯನ್ನು ಟಿವಿಯನ್ನು ಹೊಂದಿರುವ ಮನೆಗಳ ಒಟ್ಟಾರೆ ಸಂಖ್ಯೆಯಿಂದ ಭಾಗಿಸಲಾಗುವುದು. ಆದರೆ, ರೇಟಿಂಗ್‌ಗಳು ಟಿವಿ ಹೊಂದಿರುವ ಮನೆಗಳ ಲೆಕ್ಕಾಚಾರದಲ್ಲಿ ಮಾಹಿತಿ ನೀಡುತ್ತವೆಯೇ ಹೊರತು ವ್ಯಕ್ತಿಗಳ ಆಧಾರದ ಮೇಲಲ್ಲ.

1960ರ ದಶಕದ ಮಧ್ಯಭಾಗದಲ್ಲಿ, ಉತ್ಪನ್ನದ ಬಳಕೆಯನ್ನು ಆಧರಿಸಿದಂತಹ ಒಂದು ವಿಶೇಷವಾದ ರೇಟಿಂಗ್ ಅನ್ನು ನೀಲ್‌ಸನ್ ಕಂಪನಿ ಅಭಿವೃದ್ಧಿಪಡಿಸಿತು. ಇದನ್ನು ಬ್ರಾಂಡ್ ರೇಟಿಂಗ್ ಸೂಚಿ (Brand Rating Index - BRI) ಎಂದು ಕರೆಯಲಾಯಿತು. ಟಿವಿ ಕಾರ್ಯಕ್ರಮಗಳ ವೀಕ್ಷಕರನ್ನು ಉತ್ಪನ್ನಗಳ ಬಳಕೆಯ ಒಂದು ನಿರ್ದಿಷ್ಟ ವಿಭಾಗ/ವಿಂಗಡನೆಯ ಶೇಕಡಾವಾರು ರೂಪದಲ್ಲಿ ಗುರುತಿಸಲಾಯಿತು. ಇಂಥಹ ಒಂದು ವಿಧಾನಕ್ಕೆ ಕಾರಣವೇನೆಂದರೆ, ಟೆಲಿವಿಷನ್‌ನಲ್ಲಿ ಜಾಹೀರಾತು ನೀಡುವ ಆ ಉತ್ಪನ್ನದ ಬಳಕೆಯನ್ನು ಸೂಚಿಸುವಂತಹ ಶ್ರೋತೃಗಣದ ಪ್ರತಿಕ್ರಿಯೆಯನ್ನು ತಿಳಿಯಬಯಸುತ್ತಾನೆಯೇ ಹೊರತು, ಜನಸಮೂಹದ ಮತ್ತು ಶ್ರೋತೃಗಣದ ಗುಣಲಕ್ಷಣಗಳನ್ನು ಕುರಿತು ಹೇಳುವಂತಹ ಸೂಚಿಗಳನ್ನಲ್ಲ. ಶ್ರೋತೃಗಳ ಪ್ರತಿಕ್ರಿಯೆಯನ್ನು ಪಡೆಯಲು ಟೆಲಿಫೋನ್ ಸಹಾನುಗತ (Co-incidental)ವಿಧಾನವನ್ನು ಬಳಸಲಾಗುತ್ತದೆ. ವೈಯಕ್ತಿಕ ಸಂದರ್ಶನ, (Aided recall) ಪುನಃಸ್ಮರಣೆಗೆ ಒತ್ತಾಸೆ ನೀಡುವ ಮತ್ತು ದಿನಚರಿ ಪುಸ್ತಕದ ವಿಧಾನಗಳೂ ಸಹ, ಸಂಶೋಧನಾ ಸಂಸ್ಥೆಗಳಲ್ಲಿ ಸಾಕಷ್ಟು ಜನಪ್ರಿಯವಾದವೇ.

## 4.3 ಪಾಲು (Share)

ಪ್ರಸಾರ ಶ್ರೋತೃಗಣ ಪ್ರತಿಕ್ರಿಯೆಯ ಮಾಪನದ ಇನ್ನೊಂದು ವಿಧಾನವೆಂದರೆ, 'ಪಾಲು'. ಒಂದು ನಿರ್ದಿಷ್ಟವಾದ ಸಮಯದಲ್ಲಿ, ನಿರ್ದಿಷ್ಟವಾದ ಟಿವಿ ಕಾರ್ಯಕ್ರಮಗಳನ್ನು ನೋಡುವ ಟಿವಿ ಹೊಂದಿರುವ ಮನೆಗಳ (HUT) ಆಧಾರದ ಮೇಲೆ ಮಾಪನ ಮಾಡುವ ವಿಧಾನ ಇದು. ಟಿವಿ ವೀಕ್ಷಕರ ಪಾಲನ್ನು ಶೇಕಡಾವಾರು ಪ್ರಮಾಣದಲ್ಲಿ ನೀಡುವುದು ಒಂದು ಕರಾರುವಕ್ಕಾದ ಮಾಪನ. ಏಕೆಂದರೆ, ಅದೇ ಸಮಯದಲ್ಲಿ ಮೂಡಿಬರುತ್ತಿರುವ ಇತರ ಕಾರ್ಯಕ್ರಮಗಳ ನಡುವಿನ ಸ್ಪರ್ಧೆಯಲ್ಲಿ, ಒಂದು ನಿರ್ದಿಷ್ಟ ಕಾರ್ಯಕ್ರಮವನ್ನು ವೀಕ್ಷಿಸುವ ಮನೆಗಳ ಸಂಖ್ಯೆಯನ್ನು ಟಿವಿ ಬಳಕೆ ಮಾಡುವ ಮನೆಗಳ ಒಟ್ಟಾರೆ ಸಂಖ್ಯೆಯಿಂದ ಭಾಗಿಸಿ, 'ಪಾಲ'ನ್ನು ಲೆಕ್ಕಾಚಾರ ಹಾಕಲಾಗುತ್ತದೆ. 'ಪಾಲು' ಟೆಲಿವಿಷನ್ ಸೆಟ್ಟುಗಳ ಬದಲಿಗೆ ವೀಕ್ಷಕರನ್ನು ಆಧರಿಸಿರುವುದರಿಂದ ಇದನ್ನು ಉತ್ತಮವಾದ ಅಳತೆ ಎಂದು ಪರಿಭಾವಿಸಲಾಗುತ್ತದೆ.

## 4.3.5 ಪ್ರತಿ ಸಾವಿರಕ್ಕೆ ತಗಲುವ ಖರ್ಚು (CPM)

ಇಲ್ಲಿಯವರೆಗೆ ಗುರುತಿಸಲಾದ ಎಲ್ಲ ವಿಧಾನಗಳೂ ಅಂದರೆ ಕ್ಯೂಮ್‌ಗಳು, HUT, ರೇಟಿಂಗ್‌ಗಳು ಮತ್ತು ಪಾಲು, ಇವೆಲ್ಲವೂ ಶ್ರೋತೃಗಣ ಸಂಶೋಧನೆಯ ಅತಿ ಪ್ರಮುಖವಾದ ಅಂಗವನ್ನು ಬೇಡುತ್ತದೆ. ಅದೆಂದರೆ, ಜನಪ್ರಿಯವಾಗಿ ಪ್ರತಿಸಾವಿರಕ್ಕೆ ತಗಲುವ ಖರ್ಚು(CPM) ಎಂದು ಗುರುತಿಸಲಾಗುವ ಖರ್ಚು ವೆಚ್ಚ. ಇದರ ಸರಳ ಅರ್ಥವೆಂದರೆ, ಒಂದು ನಿರ್ದಿಷ್ಟ ಮಾಧ್ಯಮ ಅಥವಾ ಮಾಧ್ಯಮ ಸಂಯೋಜನೆಗಳ ಮೂಲಕವಾಗಿ, 1000ದಷ್ಟು ನಿರ್ದೇಶಿತ ಶ್ರೋತೃಗಣವನ್ನು ಮುಟ್ಟಬೇಕಾದರೆ, ಜಾಹೀರಾತುದಾರನಿಗೆ ತಗಲುವ ಖರ್ಚು ಎಷ್ಟು ಎಂಬುದು. CPM ಅನ್ನು ಹೀಗೆ ಲೆಕ್ಕಾಚಾರ ಹಾಕಲಾಗುತ್ತದೆ.

CPM = ಖರ್ಚು

ಶ್ರೋತೃಗಣ /1000

ಪ್ರಸಾರ ಮಾಧ್ಯಮಗಳ ಈ ರೀತಿಯ ಶ್ರೋತೃಗಣ ಸಂಶೋಧನೆಗೆ ತಮ್ಮದೇ ಆದ ಮಿತಿಗಳಿವೆ. ಅವುಗಳು ಶ್ರೋತೃಗಣದ 'ಚಾಚ'ನ ಅಥವಾ ವಿಸ್ತಾರದ ಬಗ್ಗೆ ಕೇಂದ್ರೀಕರಿಸುತ್ತವೆಯೇ ಹೊರತು ಶ್ರೋತೃಗಣದ ಗುಣವನ್ನಲ್ಲ. ಆದರೆ, ಜಾಹೀರಾತುದಾರರ ಪ್ರಮುಖ ಉದ್ದೇಶ ಪಸರಿಸುವಿಕೆ ಅಥವಾ ಚಾಚು ಮಾತ್ರ. ನೀಲ್‌ಸನ್ ಮಾಧ್ಯಮ ಸಂಶೋಧನೆಯು ಆಡಿಮೀಟರ್ ಮತ್ತು ದಿನಚರಿ ಪುಸ್ತಕ, ಡೈರಿ ಎಂದು ಕರೆಯಲಾಗುವ ರೇಟಿಂಗ್‌ನ ಎರಡು ಮುಖ್ಯವಾದ ವ್ಯವಸ್ಥೆಗಳನ್ನು ಅಭಿವೃದ್ಧಿಪಡಿಸಿದೆ. 1987ರಲ್ಲಿ ಈ ಜನತಾ ಮಾಪಕಗಳು ಮಾರುಕಟ್ಟೆಯನ್ನು ಪ್ರವೇಶಿಸಿದವು.

ಸ್ಟೋರೇಜ್ ಇನ್‌ಸ್ಟಾಂಟೇನಿಯಸ್ ಆಡಿಮೀಟರ್ ಎಂದು ಕರೆಯಲ್ಪಡುವ ಈ ಮಾಪಕಗಳು ಟ್ಯೂನಿಂಗ್ ಮಾಪಕಗಳಾಗಿದ್ದು, ಆಯ್ಕೆ ಮಾಡಲಾದ ಮನೆಗಳ ನಮೂನೆಗಳಿಗೆ ಸಂಬಂಧಿಸಿದಂತಹ ವಿಷಯಗಳನ್ನು ದಾಖಲಿಸುವ ಸರ್ಕ್ಯೂಟ್‌ಗಳನ್ನು ಹೊಂದಿದ್ದವು. ಇದು ಟಿವಿ ಬಳಕೆಯ ಎಲ್ಲಾ ರೀತಿಗಳನ್ನೂ ಅಂದರೆ, ಯಾವಾಗ ಟಿವಿ ಸೆಟ್ಟನ್ನು ಟ್ಯೂನ್ ಮಾಡಲಾಯಿತು. ಒಂದೇ ವಾಹಿನಿಯಲ್ಲಿ ಎಷ್ಟು ಕಾಲ ನಿಂತಿತು ಮತ್ತು ವಾಹಿನಿಗಳನ್ನು ಬದಲಾಯಿಸಲಾಯಿತು ಇತ್ಯಾದಿಗಳೆಲ್ಲವನ್ನೂ ಮಾಪನ ಮಾಡಿ ದಾಖಲಿಸುತ್ತಿತ್ತು, ವಿಶೇಷವಾದ ಟೆಲಿಫೋನ್ ಲೈನುಗಳ ಮೂಲಕವಾಗಿ ಗಣಕಯಂತ್ರಗಳೊಂದಿಗೆ ಸಂಪರ್ಕಹೊಂದಿ, ಸಂಶೋಧನಾ ಕಛೇರಿಗೆ ದಿನಕ್ಕೆ ಎರಡು ಬಾರಿ ಮಾಹಿತಿಯನ್ನು ರವಾನಿಸಲಾಗುತ್ತಿತ್ತು.

ಮತ್ತೊಂದು ವಿಧಾನವೆಂದರೆ, ದಿನಚರಿ ಪುಸ್ತಕದ ಬಳಕೆ ಆಯ್ಕೆ ಮಾಡಲ್ಪಟ್ಟ ಮನೆಗಳು ನಿಯತವಾಗಿ ದಿನಚರಿ ಪುಸ್ತಕದಲ್ಲಿ ಗುರುತು ಹಾಕುತ್ತಿದ್ದವು. 'ಜನತಾಮೀಟರ್' ಸಂಸಾರದ ಪ್ರತಿಯೊಬ್ಬ ವ್ಯಕ್ತಿಯ ವೀಕ್ಷಣಾವರ್ತನೆಯನ್ನು ವಿದ್ಯುನ್ಮಾನ ರೀತಿಯಲ್ಲಿ ದಾಖಲಿಸಿಕೊಂಡು, ಕ್ಷಣಕ್ಷಣದ ಅನುವರ್ತನೆಯನ್ನು ಜನಸಂಖ್ಯೆಯ ಗುಣಲಕ್ಷಣಗಳಾದ ವಯೋಮಾನ, ಲಿಂಗ, ಆದಾಯ, ವಿದ್ಯಾಭ್ಯಾಸ ಮತ್ತು ಇತರ ವಿವರಗಳೊಂದಿಗೆ ಸಹಸಂಬಂಧ ಗುರುತಿಸುತ್ತಿತ್ತು. AGB ಟೆಲಿವಿಷನ್ ರಿಸರ್ಚ್ ಎಂಬ ಬ್ರಿಟನ್ನಿನ ಕಂಪನಿ ಈ 'ಜನತಾ ಮೀಟರ್'ಅನ್ನು ವಿನ್ಯಾಸಗೊಳಿಸಿತ್ತು. ತಾವು ಟಿವಿ ವೀಕ್ಷಣೆಯನ್ನು ಪ್ರಾರಂಭಿಸಿದ ಕೂಡಲೇ, ಎಲ್ಲಾ ವೀಕ್ಷಕರೂ ತಮ್ಮ ಸಂಕೇತ ಸಂಖ್ಯೆಗಳನ್ನು ಒತ್ತುವ ಮೂಲಕ ದಾಖಲಿಸಬೇಕಿತ್ತು. ಪಂಚ್-ಇನ್ ಮತ್ತು ವೀಕ್ಷಣೆ ಮುಗಿದ ತಕ್ಷಣ ಪಂಚ್-ಔಟ್ ಮಾಡಬೇಕಿತ್ತು. ವೀಕ್ಷಕರನ್ನು ಗುರುತಿಸುವುದಕ್ಕಾಗಿ ವ್ಯವಸ್ಥೆಯನ್ನು AC ನೀಲ್‌ಸನ್ ಮಾಧ್ಯಮ ಸಂಶೋಧನಾ ಸಂಸ್ಥೆಯು ಅಭಿವೃದ್ಧಿಪಡಿಸುತ್ತಲಿದೆ.

ಶ್ರೋತೃಗಣ ಸಂಶೋಧನೆಯು ಭಾರತದಲ್ಲಿ ಇನ್ನೂ ಅಭಿವೃದ್ಧಿ ಹೊಂದುತ್ತಿರುವ ಕ್ಷೇತ್ರ. ಆಕಾಶವಾಣಿ ಮತ್ತು ದೂರದರ್ಶನಗಳೆರಡೂ ಕೇಂದ್ರ ಸರ್ಕಾರದ ನಿಯಂತ್ರಣದಲ್ಲೇ ಇದ್ದುದರಿಂದ, ಬಹಳ ಸಣ್ಣ ಪ್ರಮಾಣದಲ್ಲಿ ಮಾತ್ರ ಇದನ್ನು ಕೈಗೆತ್ತಿಕೊಳ್ಳಲಾಗಿತ್ತು. ಭಾರತದಲ್ಲಿ ತತ್ವಶಃ ಕೇಳುಗರ ಸಂಶೋಧನೆಯು ರೇಡಿಯೋದೊಂದಿಗೆ ಪ್ರಾರಂಭಗೊಂಡಿತು.

ಆಕಾಶವಾಣಿಯ ಕೇಳುಗರ ಸಂಶೋಧನೆಯು ಆರಂಭಗೊಂಡದ್ದು 1946ರಲ್ಲಿ. ಶ್ರೋತೃಗಳ ಕೇಳುವಿಕೆಯ ಹವ್ಯಾಸ, ಅಭಿಪ್ರಾಯಗಳು ಮತ್ತು ಅಭಿರುಚಿಗಳನ್ನು ಅಧ್ಯಯನ ಮಾಡಲು ಹಲವಾರು ರೇಡಿಯೋ ಕೇಂದ್ರಗಳಲ್ಲಿ ಹಲವೊಂದು ಶ್ರೋತೃ ಸಂಶೋಧನಾ ಅಧಿಕಾರಿಗಳನ್ನು ನೇಮಕ ಮಾಡಲಾಯಿತು. ಮಾಹಿತಿಯ ಸಂಗ್ರಹಣಾ ವಿಧಾನವನ್ನು ನಿರ್ಧರಿಸಲಾಯಿತು ಮತ್ತು ಅದನ್ನು ದೇಶದಾದ್ಯಂತ ಸಮಾನವಾಗಿ ಅನ್ವಯ ಮಾಡಲಾಯಿತು. ಕೇಳುಗರ ಗುಂಪುಗಳ ಸಂಯೋಜನೆ, ಅವರುಗಳ ವಿದ್ಯಾಭ್ಯಾಸ ಮಟ್ಟ, ಕುಟುಂಬದ ಗಾತ್ರ, ವಾರ್ತೆಗಳು, ಭಾಷಣಗಳು ಸಂಗೀತ ಮತ್ತಿತರ ಕಾರ್ಯಕ್ರಮಗಳನ್ನು ಕುರಿತ ಪ್ರತಿಕ್ರಿಯೆಗಳು ಇವುಗಳೆಲ್ಲವನ್ನೂ ಕಂಡುಹಿಡಿಯಲು ಸಮೀಕ್ಷೆಗಳನ್ನು ನಡೆಸಲಾಯಿತು.

ಆದರೆ, ಅಸಾಮಾನ್ಯವಾದ ಕೆಲವು ಕಾರಣಗಳಿಗಾಗಿ, 1952ರಲ್ಲಿ ಈ ಸಂಶೋಧನಾ ಘಟಕಗಳನ್ನು ಮುಚ್ಚಲಾಯಿತು. 1960ರ ದಶಕದ ಮಧ್ಯಭಾಗದಲ್ಲಿ ಶ್ರೋತೃಗಣ ಸಂಶೋಧನಾ ಘಟಕವು ಅಸ್ತಿತ್ವಕ್ಕೆ ಬಂದರೂ, ಸಿಬ್ಬಂದಿ ಮತ್ತು ಹಣಕಾಸಿನ ಕೊರತೆ ಅದಕ್ಕಿತ್ತು. ಈಗ, ಪ್ರಸಾರ ಭಾರತೀಯು ರೇಡಿಯೋ ಮತ್ತು ದೂರದರ್ಶನ ಕುರಿತಂತೆ ಶ್ರೋತೃಗಣ ಸಂಶೋಧನೆಯ ಮಹತ್ವವನ್ನು ಅರಿತಿರುವುದರಿಂದ ನಿರ್ದೇಶಕರ ದರ್ಜೆಯ ಅಧಿಕಾರಿಯ ನೇತೃತ್ವದೊಂದಿಗೆ ಅದೊಂದು ಸುವ್ಯವಸ್ಥಿತವಾದ ಘಟಕವಾಗಿ ರೂಪುಗೊಂಡಿದೆ.

ಶ್ರೋತೃಗಳ ಸಂಶೋಧನೆಯನ್ನು ಕುರಿತು ಪ್ರಶ್ನೆಗಳನ್ನು ಕುರಿತಂತೆ ಅಧ್ಯಯನ ನಡೆಸಿದ ವರ್ಗೀಸ್ ಕಾರ್ಯಕಾರಿ ಸಮಿತಿಯು (1977-78)ರಲ್ಲಿ ವಾಸ್ತವದಲ್ಲಿ ಇರತಕ್ಕ ಸೌಲಭ್ಯಗಳು ಸಾಕಷ್ಟು ಪ್ರಮಾಣದಲ್ಲಿ ಇಲ್ಲ ಎಂದು ಅಭಿಪ್ರಾಯಪಟ್ಟಿತು.

ಸಮಿತಿಯು ತನ್ನ ವರದಿಗಳನ್ನು ನೀಡಿ "ಆಕಾಶವಾಣಿ ಮತ್ತು ದೂರದರ್ಶನಗಳೆರಡೂ ಆಕಾಶವಾಣಿಯ ಶ್ರೋತೃಗಳ ಸಂಶೋಧನಾ ಸಂಸ್ಥೆಯಿಂದ ಸೇವೆ ಪಡೆಯುತ್ತಿದ್ದು, 16 ರೇಡಿಯೋ ಸೆಲ್‌ಗಳನ್ನು ಹೊಂದಿರುವ ಇದರಲ್ಲಿ 1977ರ ಹೊತ್ತಿಗೆ 3 ಸ್ಥಾನಗಳು ಖಾಲಿ ಇರುತ್ತವೆ, ಆರು ಟೆಲಿವಿಷನ್ ಘಟಕಗಳಲ್ಲಿ ಎರಡು ಸ್ಥಾನಗಳು ಖಾಲಿ ಇರುತ್ತವೆ. 1972ರವರೆಗೂ ಕಾರ್ಯಕ್ರಮಗಳ ಸಾಮಾನ್ಯ ಸಿಬ್ಬಂದಿಯು ಶ್ರೋತೃಗಳ ಸಂಶೋಧನಾ ಘಟಕದ ಮುಖ್ಯಸ್ಥಿಕೆಯನ್ನು ವಹಿಸಿದ್ದರೆ, ನಂತರ ಮೊತ್ತಮೊದಲ ಬಾರಿಗೆ ಕಛೇರಿಗೆ ಒಬ್ಬ ಮನೋವರ್ತನಾ ವಿಜ್ಞಾನಿಯನ್ನು ನಿಯುಕ್ತಗೊಳಿಸಲಾಗಿದೆ. ಹಲವಾರು ರೇಡಿಯೋ ಕೇಂದ್ರಗಳು ಶ್ರೋತೃ ಸಂಶೋಧನೆಯ ವ್ಯಾಪ್ತಿಯೊಳಗೆ ಬಂದೇ ಇಲ್ಲ" ಎಂದಿತು.

ಆಕಾಶವಾಣಿಯ ಶ್ರೋತೃ ಸಂಶೋಧನೆಯ ಒಂದೇ ಒಂದು ಘಟಕವೂ ಬಿಹಾರದಲ್ಲಿ ಇಲ್ಲ. ಇಡೀ ನೈಋತ್ಯ ಪ್ರಾಂತ್ಯಕ್ಕೆ ಕೇವಲ ಒಬ್ಬ ಶ್ರೋತೃ ಸಂಶೋಧನೆಯ ಅಧಿಕಾರಿಯನ್ನು ಗೌಹಾಟಿಯಲ್ಲಿ ನಿಯೋಜಿಸಲಾಗಿದೆ. ಶ್ರೋತೃ ಸಂಶೋಧನಾ ಘಟಕಕ್ಕೆ ಬಹಳ ಕಡಿಮೆ ಸಿಬ್ಬಂದಿ ಮತ್ತು ಆರ್ಥಿಕ ಯೋಜನೆ ಇರುತ್ತದೆ. (ರೂ. 25 ಲಕ್ಷ, 1977-78ಕ್ಕೆ, ಹೆಚ್ಚುವರಿಯಾಗಿ ರೂ. 50,000/-ಕೇಂದ್ರೀಯ ಮಾರಾಟ ಘಟಕಕ್ಕೆ, ಮಾರುಕಟ್ಟೆ ಸಮೀಕ್ಷೆಗಾಗಿ).

ಆಕಾಶವಾಣಿ ಮತ್ತು ದೂರದರ್ಶನಗಳೆರಡರ ತೀರ್ಮಾನದ ಪ್ರಕ್ರಿಯೆಯಲ್ಲಿ ಶ್ರೋತೃಗಳ ಸಂಶೋಧನಾ ಘಟಕವು ಸೇರಿಕೊಂಡೇ ಇಲ್ಲ ಎಂಬುದನ್ನು ಈ ಸಮಿತಿಯು ಗುರುತಿಸಿತು. ಸಶಕ್ತವಾದ ಒಂದು ಶ್ರೋತೃಗಳ ಸಂಶೋಧನಾ ವಿಭಾಗದ ಸ್ಥಾಪನೆಯನ್ನು ಈ ಸಮಿತಿಯು ಶಿಫಾರಸ್ಸು ಮಾಡಿತು. ಹೊರಸೇವೆಗಳು, ವಿವಿಧ್ ಭಾರತಿ ಮತ್ತು ಫೋನ್-ಇನ್ ಕಾರ್ಯಕ್ರಮಗಳು ಮಹತ್ವವಾದ ಪ್ರತಿಕ್ರಿಯೆಗಳನ್ನು ಆಕಾಶವಾಣಿಗೆ ನೀಡಿವೆ. ದೂರದರ್ಶನದ ಕಾರ್ಯಕ್ರಮಗಳೂ ಶ್ರೋತೃಗಳಲ್ಲಿ ಸಾಕಷ್ಟು ಆಸಕ್ತಿಯನ್ನೂ, ಪ್ರತಿಕ್ರಿಯೆಗಳನ್ನೂ, ಸೃಷ್ಟಿಸಿವೆ. ಖಾಸಗಿ ಸಂಶೋಧನಾ ಸಂಸ್ಥೆಗಳಾದ MARG ಮತ್ತು ORGಗಳು ಟೆಲಿವಿಷನ್ ವಾಹಿನಿಗಳಿಗಾಗಿ ಸಂಶೋಧನಾ ಕೆಲಸವನ್ನು ನಡೆಸುತ್ತಿವೆ ಮತ್ತು ಕಾರ್ಯಕ್ರಮಗಳ TRP ಯನ್ನು ಒದಗಿಸಿವೆ.

ಸಮೂಹ ಸಂಪರ್ಕದಲ್ಲಿ, ಮಾಧ್ಯಮ ವಿಷಯಗಳನ್ನು ಒಪ್ಪಿಕೊಳ್ಳುವುದು ಅಥವಾ ತಿರಸ್ಕರಿಸುವುದರ ಕೊನೆಯ ತೀರ್ಮಾನ ಇರುವುದು ಶ್ರೋತೃಗಳ ಕೈಯಲ್ಲಿ. ಪಾಶ್ಚಿಮಾತ್ಯ ದೇಶಗಳಲ್ಲಿ ವೃತ್ತಪತ್ರಿಕೆಗಳು ಬಹಳ ಹಿಂದಿನಿಂದಲೂ ಓದುಗರ ಸಮೀಕ್ಷೆಯನ್ನು ನಡೆಸಿವೆ, ನಡೆಸುತ್ತಾ ಬಂದಿವೆ ಹಾಗೂ ಓದುಗರ ವಿಷಯದ ಆಯ್ಕೆ ಮತ್ತು ಜನಸಮೂಹದ ಲಕ್ಷಣ ಹಾಗು ವೈಯಕ್ತಿಕ ಅಂಶಗಳ ನಡುವಿನ ಸಂಬಂಧವನ್ನು ಗುರುತಿಸಿವೆ.

ಸಮೂಹ ಮಾಧ್ಯಮಗಳು, ಅದರಲ್ಲೂ ಮುಖ್ಯವಾಗಿ ವಿದ್ಯುನ್ಮಾನ ಮಾಧ್ಯಮಗಳು ವಿಶಾಲಗೊಳ್ಳುತ್ತಿವೆ ಮತ್ತು ಶ್ರೋತೃಗಳಿಗಾಗಿ ಬಹಳ ಹೆಚ್ಚಿನ ಸ್ಪರ್ಧೆಯೂ ನಡೆಯುತ್ತಲಿದೆ. ಇಂತಹ ಸಂದರ್ಭದಲ್ಲಿ, ಶ್ರೋತೃಗಳ ಸಂಶೋಧನೆಯು ಬಹಳ ಹೆಚ್ಚಿನ ಪ್ರಾಮುಖ್ಯತೆಯನ್ನು ಹೊಂದಿದೆ. ಇದಕ್ಕಾಗಿ ಬಳಸಲಾಗುವ ಮೂಲಭೂತ ಪರಿಕರಗಳು ಒಂದೇ ಆದರೂ, ಕೆಲವೊಂದು ಅಂಶಗಳು ಪ್ರತಿಯೊಂದು ಮಾಧ್ಯಮಕ್ಕೂ ವಿಭಿನ್ನವಾಗಿರುತ್ತವೆ. ಈಗ ಸದ್ಯಕ್ಕೆ, ಭಾರತವು ಮಾಧ್ಯಮಗಳ ಒಂದು ಸ್ಫೋಟವನ್ನೇ ಕಾಣುತ್ತಿದ್ದು, ಇಲ್ಲಿ ಇರುವ ಬೃಹತ್ ಶ್ರೋತೃ ಸಂಶೋಧನೆಯು ಸಂವಹನದ ಒಂದು ಪ್ರತ್ಯೇಕ ಕ್ಷೇತ್ರವಾಗಿ ಹೊರಹೊಮ್ಮುವ ಎಲ್ಲಾ ಸಾಧ್ಯತೆಗಳೂ ಇವೆ. ಜಾಹೀರಾತು ಮತ್ತು ಸಾರ್ವಜನಿಕ ಸಂಪರ್ಕ ಕಂಪನಿಗಳೂ ತಮ್ಮದೇ ಆದ ಸಂಶೋಧನಾ ಘಟಕಗಳನ್ನು ಹೊಂದಿದ್ದು, ಅವುಗಳ ಉಪಯೋಗ ಬಹಳ ಸೀಮಿತ ಮಟ್ಟದ್ದಾಗಿದೆ.

## 4.4 ಸಾರಾಂಶ

ಶ್ರೋತೃಗಣವೇ ಇಲ್ಲದೆ ಸಮೂಹ ಮಾಧ್ಯಮಗಳು ಉಳಿಯಲಾರವು. ಪ್ರತಿಯೊಂದು ಮಾಧ್ಯಮವೂ ತನ್ನದೇ ಆದ ಶ್ರೋತೃಗಣ ಮತ್ತು ವಿಷಯಗಳನ್ನು ಹೊಂದಿದೆ. ಮೂಲದಲ್ಲಿ 'ಶ್ರೋತೃಗಣ' ಎಂಬ ಶಬ್ದವು ನಾಟಕ, ಕ್ರೀಡೆ ಅಥವಾ ಇತರ ಯಾವುದಾದರೂ ಪ್ರದರ್ಶನಗಳ ವೀಕ್ಷಕವರ್ಗವನ್ನು ನಿರ್ದೇಶಿಸುತ್ತಿತ್ತು, ಮಾಧ್ಯಮ ಶ್ರೋತೃಗಣ ಎನ್ನುವುದು ಭಿನ್ನತ್ವವನ್ನು ಸೂಚಿಸುತ್ತದೆ. ವಿವಿಧ ಮಾಧ್ಯಮಗಳ ಓದುಗರು, ಕೇಳುಗರು, ವೀಕ್ಷಕರ ಸಮಷ್ಟಿ ಅಥವಾ ಅವುಗಳ ಅಂಗಗಳು ಎಂಬುದಾಗಿ ಇದನ್ನು ವರ್ಣಿಸಲಾಗುತ್ತದೆ. ಸಾಮಾಜಿಕ ಮತ್ತು ತಂತ್ರಜ್ಞಾನದ ಅಭಿವೃದ್ಧಿಯ ಪರಿಣಾಮವಾಗಿ, ಶ್ರೋತೃಗಣದ ಮೂಲಸ್ವರೂಪಗಳೂ ಕೆಲವೊಂದು ಬದಲಾವಣೆಗಳನ್ನು ಹೊಂದಿವೆ.

ಕೆಲವೊಂದು ಮಾಧ್ಯಮ ವೃತ್ತಿನಿರತರು ಶ್ರೋತೃಗಣವನ್ನು ಒಂದು ಮಾರುಕಟ್ಟೆಯೆಂದೂ, ಮಾಧ್ಯಮ ವಿಷಯಗಳನ್ನು ಮಾರಾಟದ ಸರಕೆಂದೂ ಪರಿಗಣಿಸುತ್ತಾರೆ. ಬಹಳಷ್ಟು ಮಾಧ್ಯಮ ವೃತ್ತಿ ನಿರತರಿಗೆ ಓದುವ, ಕೇಳುವ ಅಥವಾ ವೀಕ್ಷಿಸುವಿಕೆಯ ಆಯ್ಕೆಗಳು ಮುಖ್ಯವೇ ಹೊರತು, ತತ್ಸಂಬಂಧಿಯಾದ ವಿಷಯಗಳ ಗುಣಮಟ್ಟವಲ್ಲ. ಮಾರುಕಟ್ಟೆ ವಿಧಾನವು ಉಳಿದ ಎಲ್ಲಾ ಅಂಶಗಳನ್ನೂ ನಿರ್ಲಕ್ಷಿಸುತ್ತದೆ. ತಕ್ಷಣ ಅನ್ವಯಕ್ಕಾಗಿ ಪರಿಮಾಣಾತ್ಮಕವಾದ ಶ್ರೋತೃಗಣ ಸಂಶೋಧನೆಯನ್ನು ನಡೆಸಲಾಗುತ್ತದೆ.

ಕೇಳುಗರ ಚಿತ್ರಣ, ದೂರವಾಣಿಯ ಮೂಲಕ ಕರೆವುದು ಮತ್ತು ಸಭಾಂಗಣ ಪರೀಕ್ಷೆ ಇವು ಧ್ವನಿಸುರಳಿ,ರೇಡಿಯೋ ಸಂಗೀತ ಮತ್ತು ಚಲನಚಿತ್ರಗಳಿಗಾಗಿ ಬಳಸಲ್ಪಡುವ ಕೆಲವೊಂದು ವಿಧಾನಗಳು ವಿದ್ಯುನ್ಮಾನ ಸಂವಹನದ ಸಂದರ್ಭದಲ್ಲಿ ಕ್ಯೂಮ್, HUT, ರೇಟಿಂಗ್‌ಗಳು ಮತ್ತು ಪ್ರತಿಸಾವಿರಕ್ಕೆ ತಗಲುವ ವೆಚ್ಚ(CPM). ಇವು ಪ್ರತಿಕ್ರಿಯೆಯ ವಿಶ್ಲೇಷಣೆಯ ಪ್ರಮುಖ ರೂಪಗಳು. ಭಾರತದಲ್ಲಿ ಶ್ರೋತೃಗಣ ಸಂಶೋಧನೆಯು ಇನ್ನೂ ವಿಶೇಷವಾಗಿ ಮೇಲೆದ್ದು ನಿಲ್ಲಬೇಕಿದೆ, ಶ್ರೇಷ್ಠವಾದ ವೃತ್ತಿಪರತೆಯ ಪ್ರಮುಖ ಕ್ಷೇತ್ರವಾಗಿ ಹೊರಹೊಮ್ಮಬೇಕಿದೆ. ಕೇಳುವಿಕೆ ಮತ್ತು ವೀಕ್ಷಣೆಯ ವಿಶ್ಲೇಷಣೆಗೆ ಪ್ರಸಾರ ಭಾರತಿಯು ಪ್ರಾಮುಖ್ಯತೆಯನ್ನು ನೀಡಲು ಪ್ರಾರಂಭಿಸಿದೆ. ಹೆಚ್ಚುತ್ತಿರುವ ಮಾಧ್ಯಮ ಶ್ರೋತೃಗಳು ಮತ್ತು ಮಾಧ್ಯಮ ಚಾನೆಲ್‌ಗಳಿಂದಾಗಿ, ಶ್ರೋತೃಗಣ ಸಂಶೋಧನೆಯಲ್ಲಿ ವೃತ್ತಿಪರತೆಯು ಅತ್ಯಂತ ಅವಶ್ಯವಾಗಿ ಬೇಕಾಗಿದೆ. ಬಹುಶಃ ಭಾರತದಲ್ಲಿ ಶ್ರೋತೃಗಣ ಸಂಶೋಧನೆಗೆ ಅತ್ಯಂತ ವಿಪುಲವಾದ, ವಿಸ್ತಾರವಾದ ಅವಕಾಶಗಳಿವೆ.

## 4.5 ನಿಮ್ಮ ಪ್ರಗತಿ ಪರಿಶೀಲನೆ

**ಸೂಚನೆ: ನಿಮ್ಮ ಉತ್ತರಗಳನ್ನು ಈ ಘಟಕದಲ್ಲಿ ನೀಡಲಾಗಿರುವ ವಿವರಗಳೊಂದಿಗೆ ಹೋಲಿಸಿ.**

1. ಶ್ರೋತೃಗಣ ಸಂಶೋಧನೆಯ ಮಹತ್ವವನ್ನು ವಿವರಿಸಿ.
2. ಶ್ರೋತೃಗಣದ ಗುಣಲಕ್ಷಣಗಳನ್ನು ಪಟ್ಟಿಮಾಡಿ.
3. ರೇಡಿಯೋ ಮತ್ತು ಟೆಲಿವಿಷನ್‌ಗೆ ಸಂಬಂಧಿಸಿದಂತೆ, ಪ್ರತಿಕ್ರಿಯೆ ವಿಶ್ಲೇಷಣೆಯ ವಿವಿಧ ರೂಪಗಳನ್ನು ವಿವರಿಸಿ.
4. ಭಾರತದಲ್ಲಿನ ಶ್ರೋತೃಗಣ ಸಂಶೋಧನೆಯ ಸ್ಥಾನಮಾನಗಳನ್ನು ಕುರಿತು ಚರ್ಚಿಸಿ.

## 4.6 ಹೆಚ್ಚಿನ ಓದಿಗಾಗಿ


1. Inglis, Media Theory: An Introduction, Basil Blackwell - Oxford, 1990.
2. Jan Hakemulder, Radio and TV Journalism, Anmol Publications - New Delhi, 1998.
3. Jan Hakemulder, Broadcast Journalism, Anmol Publications - New Delhi, 1998.
4. Joseph, Mass Media and Challenge of Change, Anmol Publications - New Delhi, 2000.


**ಬರಹ: ತೇಜಸ್ವಿ ನವಿಲೂರ್**

# ಘಟಕ 5 ಸಂಶೋಧನಾ ವರದಿಯ ಬರವಣಿಗೆ

ರಚನೆ


5.0 ಉದ್ದೇಶಗಳು

5.1 ಪ್ರಸ್ತಾವನೆ

5.1.1 ವರದಿಯ ಶ್ರೋತೃಗಳು

5.2 ಸಂಶೋಧನಾ ವರದಿಯ ಲೇಖನದ ಮುನ್ನದ ಅತ್ಯವಶ್ಯ ಪ್ರಶ್ನೆಗಳು

5..3 ವಿಷಯ vs ರೀತಿ

5.3.1 ವಿಷಯ

5.3.2 ರೀತಿ

5.4 ವರದಿ ಬರೆಯುವಲ್ಲಿನ ಏಳು ಹಂತಗಳು

5.4.1 ಪರಿಚಯ, ಹಿನ್ನೆಲೆ ಮತ್ತು ಚರಿತ್ರೆ

5.4.2 ಅಧ್ಯಯನ ಉದ್ದೇಶ

5.4.3 ಸಮಸ್ಯೆಯ ನಿರೂಪಣೆ

5.4.4 ಸಾಹಿತ್ಯ ಸಮೀಕ್ಷೆ, ವ್ಯಾಪ್ತಿ, ಮಹತ್ವ ಮತ್ತು ಪ್ರಸಕ್ತತೆ

5.5 ಕಾರ್ಯವಿಧಾನ

5.5.1 ಪೂರ್ವಕಲ್ಪನೆ

5.5.2 ಅಧ್ಯಯನದ ವಿಧಾನ

5.5.3 ಸಮಂಜಸತೆ ಮತ್ತು ವಿಶ್ವಾಸಾರ್ಹತೆ

5.6 ನಿರ್ಣಯಗಳು ಮತ್ತು ಶಿಫಾರಸ್ಸುಗಳು

5.7 ದಾಖಲೀಕರಣ

5.8 ಸಾರಾಂಶ

5.9 ಪ್ರಗತಿ ಪರಿಶೀಲನೆ

5.10 ಹೆಚ್ಚಿನ ಓದಿಗಾಗಿ

## 5.0 ಉದ್ದೇಶಗಳು

ಇಲ್ಲಿಯವರೆಗೂ, ಸಂವಹನ ಸಂಶೋಧನೆಯ ವಿವಿಧ ವಿಷಯಗಳ ಬಗ್ಗೆ ನೀವು ಅಧ್ಯಯನ ಮಾಡಿದ್ದೀರಿ. ಸಂಶೋಧನೆಯ ಪ್ರಕ್ರಿಯೆಯಷ್ಟೇ ಮುಖ್ಯವಾದುದು ಸಂಶೋಧನಾ ವರದಿಯ ಬರವಣಿಗೆ. ಆದುದರಿಂದ ಕೆಳಕಂಡ ವಿಷಯಗಳನ್ನು ನಿರ್ದಿಷ್ಟವಾಗಿ ನಿಮಗೆ ತಿಳಿಸಲು ಈ ಘಟಕವನ್ನು ವಿನ್ಯಾಸಗೊಳಿಸಲಾಗಿದೆ.

* ಸಂಶೋಧನಾ ವರದಿಗಳನ್ನು ಬರೆಯಬೇಕಾದ ಮೂಲಭೂತ ಅವಶ್ಯಕತೆ;
* ವಿಷಯ ಮತ್ತು ರೀತಿ ಇವುಗಳ ಪ್ರಾಮುಖ್ಯತೆ;
* ಸಂಶೋಧನಾ ವರದಿಯ ಲೇಖನದಲ್ಲಿನ ಏಳು ಹಂತಗಳು, ಮತ್ತು
* ದಾಖಲೀಕರಣದ ಶೈಲಿ

  i) ಗ್ರಂಥ ವಿವರಣಾ ಪಟ್ಟಿ

  ii) ಜರ್ನಲ್; ಲೇಖನಗಳು

  iii) ಪಠ್ಯದ ಪರಾಮರ್ಶೆಗಳು

## 5.1 ಪ್ರಸ್ತಾವನೆ

ಸಂಶೋಧನಾ ವರದಿ ಎಂದರೇನು? ಇದು ವೃತ್ತಪತ್ರಿಕೆಯ ವರದಿಗಿಂತ ಹೇಗೆ ಭಿನ್ನ? ಎನ್ನುವುದನ್ನು ಮೊದಲು ತಿಳಿದುಕೊಳ್ಳೋಣ. ಸಂಶೋಧನಾ ವರದಿ ಎನ್ನುವುದು, ಸಂಶೋಧಕನೊಬ್ಬ, ತನ್ನ ಸಂಶೋಧನಾ ಕಾರ್ಯದ ಸಾರಾಂಶವನ್ನು ನೀಡುವ ಒಂದು ಬರಹರೂಪದ ದಾಖಲೆ. ಈ ವರದಿಯು ಸಂಶೋಧನಾ ಕಾರ್ಯದ ಎಲ್ಲಾ ಪ್ರಮುಖ ಅಂಶಗಳನ್ನು ಎತ್ತಿತೋರಿಸಬೇಕು. ಕೈಗೊಂಡಿರುವ ಕೆಲಸಕ್ಕೆ ಕಾರಣಗಳನ್ನು ಸಂಶೋಧನೆಯ ಅವಧಿಯನ್ನು, ಧ್ಯೇಯ - ಉದ್ದೇಶಗಳನ್ನು, ಬಳಸಿರುವ ಕಾರ್ಯವಿಧಾನ ಮತ್ತು ಫಲಿತಾಂಶಗಳನ್ನು ವರದಿಯು ಒಳಗೊಂಡಿರುತ್ತದೆ. ತತ್ಪರಿಣಾಮವಾಗಿ ಸಂಶೋಧಕ ತೆಗೆದುಕೊಳ್ಳುವ ನಿರ್ಣಯಗಳೊಂದಿಗೆ ವರದಿಯು ಮುಕ್ತಾಯವಾಗುತ್ತದೆ. ಈಗಾಗಲೇ ಈ ಕ್ಷೇತ್ರದಲ್ಲಿ ನಡೆದಿರುವ ಸಂಶೋಧನಾ ಕಾರ್ಯಕ್ಕೆ ಸಂಬಂಧಿಸಿದಂತೆ ಭವಿಷ್ಯದಲ್ಲಿ ನಡೆಯಬೇಕಾದ ಸಂಶೋಧನೆ ಮತ್ತು ಅದರ ಅವಶ್ಯಕತೆಗಳ ಸೂಚನೆಯನ್ನೂ, ಪ್ರಸಕ್ತ ಸಂಶೋಧನಾ ಕಾರ್ಯದ ಆಧಾರದ ಮೇಲೆ ಶಿಫಾರಸ್ಸುಗಳನ್ನು ಮತ್ತು ವರದಿಯ ಲೇಖನಕ್ಕೆಂದು ಪರಾಮರ್ಶನಕ್ಕಾಗಿ ಬಳಸಿದ ಪುಸ್ತಕಗಳು ಮತ್ತು ಇತರ ಲೇಖನಗಳ ಪಟ್ಟಿಯನ್ನು ವರದಿಯಲ್ಲಿ ನೀಡಬೇಕಾಗುತ್ತದೆ.

ಬಹಳ ಉದ್ದವಾದ ಹಾಗು ಉದ್ದೇಶ, ವಿಧಾನ, ಫಲಿತಾಂಶಗಳು, ತೀರ್ಮಾನಗಳು ಮತ್ತು ಶಿಫಾರಸ್ಸುಗಳನ್ನು ಪೂರ್ಣಗೊಳಿಸದೆ ಸುವ್ಯವಸ್ಥಿತವಾಗಿಲ್ಲದ, ಅವ್ಯವಸ್ಥಿತವಾದ ವರದಿಯನ್ನು ನೀಡಿದರೆ ಅದು ಓದುಗನನ್ನು ಕೇವಲ ಗೊಂದಲಕ್ಕೀಡು ಮಾಡುತ್ತದೆ. ಒಂದು ಗೊಂದಲಮಯವಾದ ವರದಿಯು ಸೂಚಿಸುವುದು ಸಂಶೋಧನೆಯ ಸಂಪೂರ್ಣ ಕೆಲಸವು ಗೊತ್ತುಗುರಿಯಿಲ್ಲದಂತೆ ಯದ್ವಾತದ್ವಾ ನಡೆದಿದೆ ಎಂಬುದನ್ನು. ಹೀಗಿದ್ದಾಗ, ಶೈಕ್ಷಣಿಕ ಮೌಲ್ಯಮಾಪಕ ಮತ್ತು ಸಾಮಾನ್ಯ ಓದುಗ, ಇಬ್ಬರೂ ಸಂಶೋಧಕ ಹಾಗು ವರದಿಯನ್ನು ಕುರಿತಂತೆ ಎರಡೂ ಕೀಳುಮಟ್ಟದ್ದೆಂಬ ಅಭಿಪ್ರಾಯವನ್ನು ಪಡೆಯುತ್ತಾರೆ. ಇದೆಲ್ಲಕ್ಕೂ ಮಿಗಿಲಾಗಿ, ಸಂಶೋಧನಾ ಯೋಜನೆಗಾಗಿ ವ್ಯಯ ಮಾಡಲ್ಪಟ್ಟ ಕಾಲ, ಹಣ, ಶಕ್ತಿ, ಪರಿಶ್ರಮಗಳೆಲ್ಲವೂ ಸಂಪೂರ್ಣವಾಗಿ ವ್ಯರ್ಥವಾದಂತಾಗುತ್ತದೆ.

ಸಂಶೋಧಕ ಗಮನಿಸಬೇಕಾದ ಅತಿ ಮುಖ್ಯವಾದ ಅಂಶವೆಂದರೆ, ಬರಹ ಓದಲು ಯೋಗ್ಯವೇ ಅಲ್ಲವೇ ಎಂಬುದನ್ನು ಅದರ ಓದಿಸಿಕೊಳ್ಳುವ ಗುಣ. ಇದು ಕೇವಲ ಬರಹಕ್ಕೆ ಬಳಸಿದ ಭಾಷೆಗಷ್ಟೇ ಸೀಮಿತವಾಗಿರದೆ, ಕ್ರಮಬದ್ಧವಾಗಿ ವಿಭಾಗಗಳನ್ನು ಪ್ರಸ್ತುತಪಡಿಸುವುದನ್ನು ಒಳಗೊಳ್ಳುತ್ತದೆ.

ವಿಷಯಗಳನ್ನು ನಿರ್ದಿಷ್ಟವಾದ, ಒಂದು ಕ್ರಮಬದ್ಧವಾದ ರೀತಿಯಲ್ಲಿ, ಓದುಗರಿಗೆ ಅರ್ಥವಾಗುವ ಭಾಷೆಯಲ್ಲಿ ಪ್ರಸ್ತುತಪಡಿಸಿದಾಗ ಮಾತ್ರ ಅದು ಚೇತೋಹಾರಿಯಾದ ಮತ್ತು ಓದಲು ಯೋಗ್ಯವಾದಂತಹ ಒಂದು ದಾಖಲೆಯಾಗುತ್ತದೆ. ಹೀಗೆಂದ ಮಾತ್ರಕ್ಕೆ ಬರಹವು ಎಲ್ಲರಿಗೂ, ಸಾರ್ವಜನಿಕರೆಲ್ಲರಿಗೂ ಅರ್ಥವಾಗುವಂತಿರಬೇಕು ಎಂದೇನಲ್ಲ.

## 5.1.1 ವರದಿಯ ಶ್ರೋತೃಗಳು

ಸಂವಹನದ ಸಾಮಾನ್ಯ ಮೂಲತತ್ವಗಳು ಇಲ್ಲಿಯೂ ಅನ್ವಯವಾಗುತ್ತವೆ. ಸಂಶೋಧಕನೇ ಸಂವಹಕ. ಶ್ರೋತೃಗಳು ಅಥವಾ ಸಂವಹಿತರೆಂದರೆ, ಸಂಶೋಧನಾ ದಾಖಲೆಯನ್ನು ಮೌಲ್ಯಮಾಪನ ಮಾಡುವವರು ಹಾಗು ಸಹಸಂಶೋಧಕರು. ಅಷ್ಟೇ ಅಲ್ಲದೆ, ವರದಿಯ ವಿಷಯಾಂಶಗಳ ಬಗ್ಗೆ ಆಸಕ್ತಿ ಹೊಂದಿರುವ ಪ್ರತಿಯೊಬ್ಬರೂ ಸರ್ಕಾರ ಮತ್ತು ಖಾಸಗಿ ಸಂಸ್ಥೆಗಳಲ್ಲಿ ತೀರ್ಮಾನಗಳನ್ನು ತೆಗೆದುಕೊಳ್ಳುವವರೂ, ಸಹಸಂಶೋಧಕರೂ, ಶಿಕ್ಷಕರು ಮತ್ತು ಶೈಕ್ಷಣಿಕ ಕ್ಷೇತ್ರದ ಸದಸ್ಯರೆಲ್ಲರೂ ಈ ಶ್ರೋತೃಗಣಕ್ಕೆ ಸೇರುತ್ತಾರೆ.

ನೀವು ಯಾರಿಗಾಗಿ ಬರೆಯುತ್ತಿದ್ದೀರಿ? ಈ ಪ್ರಶ್ನೆಯು, ನೀವು ಏನನ್ನು ಬರೆಯುತ್ತಿದ್ದೀರಿ ಎಂಬುದರಷ್ಟೇ ಮುಖ್ಯವಾದುದು. ವಿಷಯವೇ ಸಾಧಾರಣ ಮಟ್ಟದ ಸಾರ್ವಜನಿಕರ ನಿಲುವನ್ನು ಮೀರಿದ್ದಾಗಿರಬಹುದು. ಹಾಗಿದ್ದರೆ, ಸಾಮಾನ್ಯ ಜನರಿಗೆ ಅರ್ಥವಾಗುವ ಮಟ್ಟಕ್ಕೆ ಭಾಷೆಯನ್ನು ನೀವು ಹೊಂದಿಸಿಕೊಳ್ಳಬೇಕಾಗಬಹುದು. ಹಾಗೆ ಮಾಡದಿದ್ದರೂ, ನಿಮ್ಮ ಸಹಸಂಶೋಧಕರು ಮತ್ತು ಶೈಕ್ಷಣಿಕ ಮೌಲ್ಯಮಾಪಕರು, ನೀವು ಬರೆದಿರುವುದನ್ನು ಬಹಳ ಚೆನ್ನಾಗಿ ಅರ್ಥಮಾಡಿಕೊಳ್ಳಬಹುದು.

ನಿಮ್ಮ ಸಂಶೋಧನೆಯ ತಾತ್ಪರ್ಯವನ್ನು ಸಾರ್ವಜನಿಕರಿಗೆ ವಿವರಿಸಲು ನೀವು ಬಯಸುವುದಾದರೆ, ಪತ್ರಿಕಾ ಸಮ್ಮೇಳನವನ್ನು ಕರೆದು, ತುಂಬಾ ಪಾರಿಭಾಷಿಕ ಪದಗಳ ಪ್ರಯೋಗ ಮಾಡದೆ, ಬಹಳ ತಾಂತ್ರಿಕವಲ್ಲದ ಭಾಷೆಯಲ್ಲಿ, ಪತ್ರಕರ್ತರಿಗೆ ಅರ್ಥವಾಗುವಂತೆ ನೀವು ಮಾತನಾಡಬಹುದು.

## 5.2 ಸಂಶೋಧನಾ ವರದಿಯ ಬರಹದ ಮುನ್ನದ ಅತ್ಯವಶ್ಯ ಪ್ರಶ್ನೆಗಳು

**ಅ. ವರದಿಯ ಉದ್ದೇಶವೇನು?**

ಒಂದು ಕಾಲೇಜು ಅಥವಾ ವಿಶ್ವವಿದ್ಯಾನಿಲಯವು ಒಂದು ಡಿಗ್ರಿ ಅಥವಾ ಡಿಪ್ಲೊಮಾ ಪ್ರದಾನ ಮಾಡುವುದರ ಆಂಶಿಕ ಆವಶ್ಯಕತೆಯ ಪೂರಣಕ್ಕಾಗಿ ಮಂಡಿಸಬೇಕೆಂದು ನಿಶ್ಚಯಿಸಿರುವ ಆವಶ್ಯಕತೆಯನ್ನು ಪೂರೈಸುವ ಉದ್ದೇಶ ಲೇಖನದ್ದಾಗಿರಬಹುದು. ಇದಲ್ಲದೆ, ಬೇರೆ ಹಲವಾರು ಉದ್ದೇಶಗಳೂ ಇರಬಹುದು. ಉದಾಹರಣೆಗೆ, ಶೈಕ್ಷಣಿಕ ಪ್ರಪಂಚಕ್ಕಷ್ಟೇ ಅಲ್ಲದೆ, ನಿಮ್ಮ ಪರಿಶೋಧನಾ ಕಾರ್ಯದ ಕೆಲವೊಂದು ಆರ್ಥಿಕ, ರಾಜಕೀಯ ಅಥವಾ ಸಾಂಸ್ಕೃತಿಕ ಮಜಲುಗಳ ಬಗ್ಗೆ ಸಾಮಾನ್ಯ ಜನರಿಗೆ, ಸರ್ಕಾರಕ್ಕೆ ಮತ್ತು ಪೌರರಿಗೆ ನೀವು ತಿಳಿಸಿಹೇಳುವ ಆವಶ್ಯಕತೆಯೂ ಇರಬಹುದು. ಆದ್ದರಿಂದ ನಿಮ್ಮ ಸಂಶೋಧನಾ ಕಾರ್ಯದಿಂದ ಅನುಕೂಲಗಳನ್ನು ಪಡೆಯುವ ಸಾಮಾಜಿಕ ಅಂಗಗಳ ಬಗ್ಗೆ ಸಾಧಾರಣವಾಗಿಯೂ ಮತ್ತು ಕಾರ್ಯದ ಪರಿಣಾಮಗಳನ್ನು ಕುರಿತಂತೆ ಬಹಳ ನಿರ್ದಿಷ್ಟವಾಗಿಯೂ ನೀವು ಯೋಚಿಸಬೇಕಾಗುತ್ತದೆ.

**ಆ. ನಿಮ್ಮ ವರದಿಯನ್ನು ಓದುವವರು ಯಾರು?**

ಈಗಾಗಲೇ ತಿಳಿಸಿರುವಂತೆ, ನೀವು ಯಾರಿಗಾಗಿ ವರದಿಯನ್ನು ಬರೆಯುತ್ತಿದ್ದೀರಿ ಎಂಬುದರ ಸ್ಪಷ್ಟವಾದ ತಿಳುವಳಿಕೆ ನಿಮಗೆ ಇರತಕ್ಕದ್ದು. ವಿದ್ಯಾವಂತರಾದ (ಸುಶಿಕ್ಷಿತರಾದ) ಜನರಿಗಾಗಿಯೇ ಅಥವಾ ತಾಂತ್ರಿಕ ಶಿಕ್ಷಣವನ್ನು ಪಡೆದಿರುವವರಿಗೆಂದೇ? ಅಥವಾ ಸಾಮಾನ್ಯಮಟ್ಟದ, ಅದಕ್ಕಿಂತ ಕೆಳಮಟ್ಟದ ವಿದ್ಯಾಭ್ಯಾಸ ಪಡೆದಿರುವ ಜನರಿಗೆಂದೇ? ಅವರು ನಿಮ್ಮ ಭಾಷೆಯನ್ನು, ಅದರಲ್ಲೂ ಮುಖ್ಯವಾಗಿ ತಾಂತ್ರಿಕ ಪಾರಿಭಾಷಿಕ ಪದಗಳನ್ನು ಅರ್ಥಮಾಡಿಕೊಳ್ಳಬಲ್ಲರೇ? ನಿಮ್ಮ ವರದಿಯನ್ನು ಓದಬಹುದಾದ, ತಾಂತ್ರಿಕ ಪರಿಣತಿಯಿಲ್ಲದ ಜನರ ಸಹಾಯಕ್ಕೆಂದು, ಪರಿಚಯ ವಿಭಾಗದಲ್ಲಿ ಮೂಲಕಲ್ಪನೆಗಳ ಸರಳೀಕರಣವನ್ನು ನೀವು ಹೇಗೆ ಮಾಡುತ್ತೀರಿ? ಅಥವಾ ನಿಮ್ಮ ವರದಿಯ ಕೇವಲ ಶೈಕ್ಷಣಿಕ ಸಮುದಾಯದ ವಿದ್ವಾಂಸರಿಗೆ ಮತ್ತು ಪದವೀಧರರಿಗೆ ಮಾತ್ರ ಸೀಮಿತವೇ? ನಿಮ್ಮ ವರದಿಯನ್ನು ಆಧರಿಸಿ ಓದುಗರು ನಿರ್ಣಯಗಳನ್ನು ತೆಗೆದುಕೊಳ್ಳುತ್ತಾರೆಯೇ?.

**ಇ. ನಿರ್ಣಯಗಳು ಮತ್ತು ಶಿಫಾರಸ್ಸುಗಳ ಎಡೆಗೆ ವರದಿಯ ವಿಭಾಗಗಳು ತರ್ಕಬದ್ಧವಾಗಿ ಸಾಗುತ್ತಿವೆಯೇ?**

ವಿವಿಧ ಭಾಗಗಳನ್ನು ಒಂದು ತರ್ಕಬದ್ಧವಾದ ರೀತಿಯಲ್ಲಿ ಹೊಂದಿಸುವುದು ಬಹಳ ಮುಖ್ಯ. ಓದುಗರು ಗೊಂದಲಕ್ಕೀಡಾಗುವುದನ್ನು ಇದು ತಪ್ಪಿಸುತ್ತದೆ.

**ಈ. ವರದಿಯನ್ನು ತಯಾರಿಸುವುದಕ್ಕೆ ತಗಲುವ ಖರ್ಚು ಎಷ್ಟು?**

ವರದಿಯನ್ನು ಸಿಂಗರಿಸುವುದಕ್ಕೆ ಬಹಳ ಹಣ ವ್ಯಯ ಮಾಡುವುದರಲ್ಲಿ ಅರ್ಥವಿಲ್ಲ. ಬೇಕಾಗಿರುವುದು ಸರಳವಾದ, ಸ್ಫುಟವಾದ ಚೆನ್ನಾಗಿ ತಯಾರಿಸಲ್ಪಟ್ಟ ವರದಿ (ಉತ್ತಮ ಗುಣಮಟ್ಟದ ಕಾಗದ, ಅಂದವಾಗಿ ಬೆರಳಚ್ಚು ಮಾಡಿದ ಅಥವಾ ಗಣಕಯಂತ್ರದಿಂದ ಪಡೆದ ಮುದ್ರಣ, ಸೂಕ್ತವಾದ ನಕ್ಷೆಗಳು, ಚಿತ್ರಗಳು ಮತ್ತು ಇತರ ಚಿತ್ರಗಳು, ಸರಿಯಾದ ಹೊದಿಕೆ ಇತ್ಯಾದಿ).

**ಉ. ನಿಮಗೆ ಬೇಕಾದ ಎಲ್ಲಾ ಪಠ್ಯಗಳ ಉದ್ಧರಣಗಳೂ ಮತ್ತು ಓದುಗರಿಗೆ ಬೇಕಾದ ಪರಾಮರ್ಶನ ಗ್ರಂಥಗಳ ಪಟ್ಟಿ ಕೊನೆಯಲ್ಲಿ ಇದೆಯೇ?**

**ಊ. ಸೇರಿಸಬೇಕಾದ ಅನುಬಂಧಗಳು ಸಂಗತವೇ, ತಯಾರಿವೆಯೇ?**

ಹೀಗೆ ನೀವು ಮಾಡಿಕೊಳ್ಳುವ ಸ್ವಯಂ ಪರೀಕ್ಷೆಯು ಬರೆಯುತ್ತಿರುವ ವರದಿಯು ಸ್ಫುಟವಾಗಿಯೂ ವ್ಯಾಪಕವಾಗಿಯೂ, ಸರಳವಾಗಿಯೂ, ಸಮರ್ಥವಾಗಿಯೂ, ಸಂಗತವಾಗಿಯೂ, ನಿಮ್ಮ ಉದ್ದೇಶಿತ ಶ್ರೋತೃವೃಂದಕ್ಕೆ ಉಪಯುಕ್ತವಾಗಿಯೂ ಇರುವುದನ್ನು ಸಾಧ್ಯಮಾಡುತ್ತದೆ.

## 5.3 ವಿಷಯ v/s ರೀತಿ

ಎಲ್ಲಾ ರೀತಿಯ ಲೇಖನಗಳು, ಅಂದರೆ ಅದು ಸಂಶೋಧನಾ ವರದಿಯ ಲೇಖನವಾಗಲೀ, ವಿಶೇಷ ಲೇಖನಗಳಾಗಲೀ ಅಥವಾ ಯಾವುದೇ ರೀತಿಯ ಬರಹವಾಗಲೀ, ಅದು ಹೊಂದಿರುವಂತಹ ಕಾಳಜಿಗಳೆಂದರೆ:

ಅ. ವಿಷಯ (ಅಡಕವಾದ ವಸ್ತು) ಮತ್ತು

ಆ. ರೀತಿ (ರೂಪ ಮತ್ತು ಶೈಲಿ)

ಯಥೋಚಿತವಾಗಿಲ್ಲದ ಬರವಣಿಗೆಯು ವಸ್ತು ಸಾಕಷ್ಟು ಇಲ್ಲ ಎಂಬುದನ್ನು ಮತ್ತು ರೀತಿಯ ಅಯುಕ್ತತೆಯನ್ನು ಬಿಂಬಿಸುತ್ತದೆ.

## 5.3.1.1 ಸ್ಥೂಲ ವಿವರಣೆಯನ್ನು (ಚಿತ್ರಣವನ್ನು) ತಯಾರಿಸುವುದು

ಸಿದ್ಧಪಡಿಸಲು, ಅಧ್ಯಯನ ನಡೆಸುತ್ತಿರುವ ಸಮಸ್ಯೆಯ ಪೂರ್ವ ವಿಶ್ಲೇಷಣೆ ಅವಶ್ಯಕ. ಹೀಗಾಗಿ ಮತ್ತೊಮ್ಮೆ ಈ ಕೆಳಗಿನ ಪ್ರಶ್ನೆಗಳನ್ನು ಕೇಳಿಕೊಳ್ಳಿ:

* ನೀವು ಹೇಳ ಬಯಸುವುದೇನು? ಯಾವ ಕಾರಣಕ್ಕಾಗಿ ನೀವು ಹೇಳಬಯಸುತ್ತೀರಿ?

* ನಿಮ್ಮ ಸಂಶೋಧನೆ ಉದ್ದೇಶಿಸಿರುವ ಪ್ರಧಾನ ಸಮಸ್ಯೆ ಯಾವುದು? ಅಷ್ಟೊಂದು ಪ್ರಧಾನವಲ್ಲದ ಇತರ ಪ್ರಶ್ನೆಗಳು ಯಾವುವು?

* ಸಮಸ್ಯೆಯನ್ನು ಅಧ್ಯಯನ ಮಾಡಲು ಮತ್ತು ಫಲಿತಾಂಶಗಳನ್ನು ಪಡೆಯಲು ನೀವು ಬಳಸಿರುವ ವಿಧಾನಗಳು ಯಾವುವು?

* ಸಂಬಂಧಿತವಾದ ಸಾಹಿತ್ಯದ ಪರಾಮರ್ಶನ ಮಾಡಿದಾಗ ನೀವು ಕಂಡುಕೊಂಡದ್ದೇನು? ಇತರ ಅಧ್ಯಯನಗಳಿಂದ ನಿಮ್ಮ ಅಧ್ಯಯನ ಹೇಗೆ ಭಿನ್ನ?

* ಮಾಹಿತಿಯ ನಿಮ್ಮ ಪ್ರಾಥಮಿಕ ಆಕರಗಳು ಯಾವುವು? ಮೂಲದಸ್ತಾವೇಜುಗಳು ಯಾವುವು? ಅವು ಲಭ್ಯವಿವೆಯೇ?

* ನಿಮ್ಮ ಮಾಧ್ಯಮಿಕ ಆಕರಗಳು ಯಾವುವು? ಗ್ರಂಥಾಲಯದ ಪುಸ್ತಕಗಳೇ? ಜರ್ನಲ್‌ಗಳೇ? ಸಮಸ್ಯೆಯ ಉತ್ತರದೊಂದಿಗೆ ಸಂಬಂಧ ಹೊಂದಿರುವಂತಹ ಇತರ ದಸ್ತಾವೇಜುಗಳೇ?

* ನಿಮ್ಮ ಅಧ್ಯಯನದ ಅತಿ ನಿರ್ದಿಷ್ಟವಾದ ಧ್ಯೇಯೋದ್ದೇಶಗಳು ಯಾವುವು? ಈ ಹಿಂದೆಯೇ ನಡೆಸಲಾಗಿರುವ ಇದೇ ರೀತಿಯ ಅಧ್ಯಯನಗಳಿಗಿಂತ ಇವು ಯಾವ ರೀತಿಯಲ್ಲಿ ಭಿನ್ನ?

* ನಿಮ್ಮ ಅಧ್ಯಯನದ ಅತ್ಯವಶ್ಯವಾದ ವಿಧಾನ ಯಾವುದು? ಚಾರಿತ್ರಿಕವೇ, ವರ್ಣನಾತ್ಮಕವೇ ಅಥವಾ ಪ್ರಾಯೋಗಿಕ ವಿಧಾನವೇ? ಈ ವಿಧಾನಗಳ ಸಂಯೋಜನೆಯನ್ನು ಬಳಸುವ ಉದ್ದೇಶ ನಿಮಗಿದೆಯೇ?

* ನಿಮ್ಮ ಪ್ರಧಾನ ಮೂಲ ಕಲ್ಪನೆಗಳು ಯಾವುವು? ಅಪ್ರಧಾನವಾದ ಇತರ ಮೂಲಕಲ್ಪನೆಗಳಾವುವು?

* ಪ್ರಧಾನವಾದ ನಿಮ್ಮ ಫಲಿತಾಂಶಗಳು ಯಾವುವು? ಅವುಗಳನ್ನು ನೀವು ಹೇಗೆ ಪ್ರಸ್ತುತಪಡಿಸುತ್ತೀರಿ? ಪಟ್ಟಿ, ರೇಖಾಚಿತ್ರ ಅಥವಾ ನಕ್ಷೆಗಳ ರೂಪದಲ್ಲಿಯೇ? ಈ ಕೆಲವೊಂದು ಫಲಿತಾಂಶಗಳನ್ನು ಆಯತ ಚಿತ್ರಗಳು ಅಥವಾ ಪೈ-ನಕ್ಷೆಗಳ ರೂಪದಲ್ಲಿ ಬಿಂಬಿಸಬಹುದೇ?

* ನಿಮ್ಮ ಫಲಿತಾಂಶಗಳನ್ನು ಕುರಿತು ಚಿಂತನೆ ಮಾಡುವಾಗ, ಚರ್ಚಿಸುವಾಗ ಅವುಗಳನ್ನು ಇತರರ ಅಧ್ಯಯನಗಳೊಂದಿಗೆ ತುಲನೆ ಮಾಡುವುದು ಸಾಧ್ಯವೇ? ನಿಮ್ಮ ಅಧ್ಯಯನದಿಂದ ಹೊರಹೊಮ್ಮುರುವ ಪಾಠವೇನು?

* ಯಾವ ರೀತಿಯ ತೀರ್ಮಾನಗಳನ್ನು ನೀವು ತೆಗೆದುಕೊಳ್ಳಬಹುದು? ಪ್ರಧಾನ, ಅಪ್ರಧಾನ ತೀರ್ಮಾನಗಳೆಂದು ಅವುಗಳನ್ನು ನೀವು ವರ್ಗೀಕರಿಸುವುದು ಸಾಧ್ಯವೇ?

* ನಿಮ್ಮ ಅಧ್ಯಯನದ ಫಲಿತಾಂಶಗಳು ಮತ್ತು ತೀರ್ಮಾನಗಳನ್ನು ಆಧರಿಸಿ ನೀವು ನಿಮ್ಮ ಅಧ್ಯಯನದ ವ್ಯಾಪ್ತಿಯಲ್ಲಿ ಸೇರಿಸಲಾಗದೇ ಉಳಿಸಿರುವಂತಹ ಅಂಶಗಳ ಅಧ್ಯಯನಕ್ಕೆ ನೀವು ಶಿಫಾರಸ್ಸು ಮಾಡುವುದು ಸಾಧ್ಯವೇ? ನೀವು ಕಂಡುಕೊಂಡ, ಆದರೆ ಅಧ್ಯಯನದ ವ್ಯಾಪ್ತಿಯಲ್ಲಿ ನೀವು ತರಲಾಗದಂತಹ ಪ್ರಮುಖ ಕ್ಷೇತ್ರಗಳು ಯಾವುದೆಂಬುದನ್ನು ಗುರುತಿಸಿ, ಬೇರೆಯವರು ಅಧ್ಯಯನ ಮಾಡಲು ಯೋಗ್ಯವಾದ ವಿಷಯಗಳನ್ನು ಶಿಫಾರಸ್ಸು ಮಾಡಬಲ್ಲಿರಾ?

* ನೀವು ಬಳಸಿಕೊಂಡಂತಹ ಪುಸ್ತಕಗಳು ಮತ್ತು ಜರ್ನಲ್‌ಗಳು ಪತ್ರಾಗಾರಗಳಿಂದ ಪಡೆದಂತಹ ಸರ್ಕಾರೀ, ಚಾರಿತ್ರಿಕ ದಾಖಲೆಗಳು, ಸಮಿತಿಗಳ ವರದಿಗಳು ಯಾವುವು? ವಿವಿಧ ವಿಭಾಗಗಳಿಗೆ ಸಂಬಂಧಿಸಿದಂತೆ ಇವುಗಳನ್ನು ಅಕ್ಷರಾನುಕ್ರಮಣಿಕೆಯಲ್ಲಿ ಪ್ರಸ್ತುತಪಡಿಸಬಲ್ಲಿರಾ?

* ನಿಮ್ಮ ವರದಿಯ ಕೊನೆಯಲ್ಲಿ ಪ್ರಮುಖವಾದ ಹೆಸರುಗಳು ಮತ್ತು ವಿಷಯಕ್ಷೇತ್ರಗಳು ಮತ್ತು ಪ್ರಸರಣಗಳ ಸೂಚಿಯನ್ನು ನೀಡಬಲ್ಲಿರಾ?

## 5.3.2 ರೀತಿ

ಇಲ್ಲಿಯೂ ಸಹ ನೀವು ನಿಮ್ಮನ್ನು ಕುರಿತಂತೆ ಕೆಳಕಂಡ ಕೆಲವೊಂದು ಮೂಲಭೂತ ಪ್ರಶ್ನೆಗಳನ್ನು ಕೇಳಿಕೊಳ್ಳುವುದು ಒಳಿತು.

* ನೀವು ಏನು ಹೇಳಬೇಕೆಂದುಕೊಂಡಿದ್ದೀರೋ ಅದನ್ನು ಹೇಗೆ  ಹೇಳಬಯಸುತ್ತೀರಿ? ಸರಳವಾದ ರೀತಿಯಲ್ಲೇ? ಅಥವಾ ತಾಂತ್ರಿಕವಾದ ಭಾಷೆಯಲ್ಲೇ?

* ನಿಮ್ಮ ವೈಜ್ಞಾನಿಕ ಮತ್ತು ತಂತ್ರಜ್ಞಾನದ ಹೊಳಹುಗಳನ್ನು ಅಭಿವ್ಯಕ್ತಿಗೊಳಿಸಲು ಸರಿಯಾದ ರೀತಿಯ ಪಾರಿಭಾಷಿಕ ಶಬ್ದಭಂಡಾರ ನಿಮ್ಮಲ್ಲಿದೆಯೇ?

* ನಿಮ್ಮಲ್ಲಿ ಒಂದು ಅರ್ಥಕೋಶ ಹಾಗು ವಿಶ್ವಕೋಶ ಇದೆಯೇ? ನಿಮ್ಮ ಅಧ್ಯಯನ ಕ್ಷೇತ್ರಕ್ಕೆ ಸಂಬಂಧಿಸಿದ ಶಬ್ದಕೋಶ ಲಭ್ಯವಿದೆಯೇ?

* ಯಥೋಚಿತವಲ್ಲದ ಬರವಣಿಗೆಯು ಕೇವಲ ಯೋಗ್ಯವಲ್ಲದ ಚಿಂತನೆಯನ್ನಷ್ಟೇ ಅಲ್ಲ, ಕಳಪೆ ಮಟ್ಟದ ಶಬ್ದಭಂಡಾರವನ್ನೂ ಸೂಚಿಸುತ್ತದೆ. ಇದು ಕಳಪೆ ಅಭಿವ್ಯಕ್ತಿಯ ಪರಿಣಾಮ ಕೂಡ ಎಂಬುದು ನಿಮಗೆ ತಿಳಿದಿದೆಯೇ?

* ಭಾಷಾಶಾಸ್ತ್ರ ಮತ್ತು ವಾಕ್ಯರಚನಾಶಾಸ್ತ್ರಗಳ ಪ್ರಾಮುಖ್ಯತೆ ನಿಮಗೆ ತಿಳಿದಿದೆಯೇ?

* ಅನಾಕರ್ಷಕವಾದ ಬರಹ ಜನರಿಗೆ ತಲೆಚಿಟ್ಟು ಹಿಡಿಸುತ್ತದೆ. ಅಷ್ಟೇ ಅಲ್ಲ, ಅವರುಗಳಲ್ಲಿ ಉದಾಸೀನತೆಯನ್ನೂ ಹುಟ್ಟಿಸುತ್ತದೆ ಎಂಬುದು ನಿಮ್ಮ ಗಮನಕ್ಕೆ ಬಂದಿದೆಯೇ?

* ವರದಿಯ ರೀತಿಯು ಬಹಳಮಟ್ಟಿಗೆ ವರದಿಯ ಸ್ವರೂಪ ಲಕ್ಷಣ ಮತ್ತು ವಿಷಯಾಂಶಗಳನ್ನು ಅವಲಂಬಿಸಿದೆ. ಇದು ನಿಮಗೆ ತಿಳಿದಿದೆಯೇ?

* ನಿಮ್ಮ ವರದಿಯನ್ನು ಓದುವ ಶ್ರೋತೃಗಳಾವು ನಿಮ್ಮ ವರದಿಯ ರೀತಿಯನ್ನು ನಿರ್ಧರಿಸುವ ಪ್ರಮುಖ ಅಂಶ ಎಂಬುದು ನಿಮಗೆ ಗೊತ್ತಿದೆಯೇ?

* ನಿಮ್ಮ ವರದಿಯನ್ನು ನೀವು ಪ್ರಥಮ ಪುರುಷದಲ್ಲಿ ಬರೆಯಬೇಕೆಂಬುದು ನಿಮಗೆ ತಿಳಿದಿದೆಯೇ?

* ಉತ್ತಮವಾಗಿ ತಯಾರಿಸಲಾದ ಸಾರಾಂಶವಿಲ್ಲದ ವರದಿಯನ್ನು ಯಾವಾಗಲೂ ಪ್ರಸ್ತುತ ಪಡಿಸಬೇಡಿ. ತಾತ್ಪರ್ಯ ಅಥವಾ ಸಾರಾಂಶವನ್ನು ಕೃತಜ್ಞತೆ, ವಿಷಯ ಸೂಚಿ ಮತ್ತು ಮುನ್ನುಡಿಗಳ ನಂತರ ವರದಿಯ ಮೊದಲಲ್ಲಿಯೇ ನೀಡಬೇಕು.

## 5.4 ವರದಿ ಬರೆಯುವಲ್ಲಿನ ಏಳು ಹಂತಗಳು

ಸಂಶೋಧನಾ ಕಾರ್ಯವು ಇನ್ನು ಚಾಲ್ತಿಯಲ್ಲಿರುವಾಗಲೇ ವರದಿ ಬರೆಯುವುದಕ್ಕೆ ಅಣಿ ಮಾಡಿಕೊಳ್ಳಬೇಕು. ಆದ್ದರಿಂದ ಮೊದಲ ಹಂತವೆಂದರೆ ಒಂದು ಸ್ಥೂಲ ಚಿತ್ರಣ ಅಂದರೆ, ಪ್ರತಿಯೊಂದು ಹಂತದ ಪರಾಮರ್ಶೆಗೆ ನೀವು ಬಳಸಬಹುದಾದ ನೀಲಿನಕ್ಷೆಯನ್ನು ತಯಾರಿಸಿಕೊಳ್ಳುವುದು. ದೂರದ ಪ್ರಯಾಣ ಕೈಗೊಳ್ಳುವಾಗ ನೀವು ಹಾಕಿಕೊಳ್ಳುವಂತಹ ಒಂದು ರಸ್ತೆಯ ನಕ್ಷೆಯಂತೆ ಈ ಸ್ಥೂಲ ಚಿತ್ರಣ ಸಹಾಯ ಮಾಡುತ್ತದೆ.

ಸ್ಥೂಲಚಿತ್ರಣವು, ಕೆಳಕೆ ಕೊಟ್ಟಿರುವ ಎಲ್ಲಾ ಏಳು ಹಂತಗಳನ್ನೂ ಇದೇ ಕ್ರಮದಲ್ಲಿ ಹೊಂದಿರುತ್ತದೆ.

1. ಪರಿಚಯ, ಹಿನ್ನೆಲೆ ಮತ್ತು ಚರಿತ್ರೆ

2. ಅಧ್ಯಯನದ ಉದ್ದೇಶ

3. ಸಮಸ್ಯೆಯನ್ನು ಕುರಿತ ಸ್ಪಷ್ಟವಾದ ಹೇಳಿಕೆ

4. ನಿಮ್ಮ ವಿಷಯಕ್ಕೆ ಸಂಬಂಧಿಸಿದ ಸಾಹಿತ್ಯ ಸಮೀಕ್ಷೆ, ವಿಷಯದ ವ್ಯಾಪ್ತಿ, ಮಹತ್ವ ಮತ್ತು ಸಾಮಾಜಿಕ ಪ್ರಸಕ್ತತೆ.

5. ಕಾರ್ಯವಿಧಾನ

   ಅ. ಪೂರ್ವಕಲ್ಪನೆ / ಪೂರ್ವಕಲ್ಪನೆಗಳು

   ಆ. ವಿಧಾನ (ಸರ್ವೇಕ್ಷಣಾ, ಪ್ರಯೋಗಾತ್ಮಕ, ಗ್ರಂಥಾನ್ವೇಷಣೆ)

   ಇ. ದತ್ತಾಂಶಗಳ ಕ್ರೋಢೀಕರಣ

6. ಫಲಿತಾಂಶಗಳು:

   ಅ. ಪ್ರಧಾನ ಫಲಿತಾಂಶಗಳು

   ಆ. ಅಪ್ರಧಾನ ಫಲಿತಾಂಶಗಳು

   ಇ. ಅವಶ್ಯವಾದ ದತ್ತಾಂಶಗಳನ್ನು ಪಟ್ಟಿ ಮಾಡುವುದು

ಈ. ಚರ್ಚೆ ಮತ್ತು ಸಂಖ್ಯಾಶಾಸ್ತ್ರದ ಪರೀಕ್ಷಣೆ

ಉ. ಚಿತ್ರರೂಪಗಳು (ರೇಖಾಚಿತ್ರಗಳು, ನಕ್ಷೆಗಳು, ಚಿತ್ರಣಗಳು ಇತ್ಯಾದಿ)

7. ತೀರ್ಮಾನಗಳು: ಶಿಫಾರಸ್ಸುಗಳು, ಗ್ರಂಥವಿವರಣಾಪಟ್ಟಿ ಮತ್ತು ಸೂಚಿಗಳು

ಈ ಏಳೂ ಹಂತಗಳನ್ನು ಕುರಿತಂತೆ ವಿವರವಾಗಿ ದೃಷ್ಟಿ ಹಾಯಿಸೋಣ.

## 5.4.1 ಪರಿಚಯ, ಹಿನ್ನೆಲೆ ಮತ್ತು ಚರಿತ್ರೆ

ಪರಿಚಯ ವಿಭಾಗವನ್ನು ಬರೆಯಬೇಕಾದರೆ, ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಲು ನಿಮಗೆ ಸಾಧ್ಯವಾಗಬೇಕು.

1. ಯಾವ ಕಾರಣದಿಂದ, ಅಧ್ಯಯನಕ್ಕಾಗಿ ಇದೇ ವಿಷಯವನ್ನು ನಿರ್ದಿಷ್ಟವಾಗಿ ನೀವು ಆಯ್ಕೆ ಮಾಡಿಕೊಂಡಿರುವಿರಿ?

2. ಅಧ್ಯಯನಕ್ಕೆಂದು ನೀವು ತೆಗೆದುಕೊಂಡಿರುವುದು ನಿಜವಾಗಿ ಕೇವಲ ಒಂದು ಪ್ರಕರಣವೇ ಅಥವಾ ವಿಜ್ಞಾನ, ಸಮಾಜ ವಿಜ್ಞಾನ ಅಥವಾ ಮಾನವಿಕಶಾಸ್ತ್ರದ ಶಾಖೆಯೊಂದರ ವಿಸ್ತಾರವಾದ ಕ್ಷೇತ್ರವೇ?

3. ಬಹಳ ವಿಸ್ತಾರವಾದ ಕ್ಷೇತ್ರವನ್ನು ತುಂಡರಿಸಿ ನಿರ್ವಹಿಸಲು ಯೋಗ್ಯವಾದ ಪ್ರಮಾಣಕ್ಕೆ ತಂದಿರುವಿರಾ?

4. ನಿಮ್ಮ ಅಧ್ಯಯನದ ಹಿನ್ನೆಲೆ ಏನು? ಈ ಅಧ್ಯಯನ ನಡೆಸುವುದರ ಅವಶ್ಯಕತೆ ಇದೆಯೇ? ಈ ವಿಷಯದ ಹೊಳಹಿಗೆ ಪ್ರಚೋದನೆ ನೀಡಿದ ಅಂಶ ಯಾವುದು? ಈ ಸಂಶೋಧನಾ ಪ್ರಕರಣದ ಆಯ್ಕೆಗೆ ಸಂಬಂಧಿಸಿದಂತೆ, ವೈಯಕ್ತಿಕ ಅಥವಾ ಸಾಮಾಜಿಕ ಕಾರಣಗಳನ್ನು ನೀವು ನೀಡಬಲ್ಲಿರಾ?

5. ನಿಮ್ಮ ಅಧ್ಯಯನದೊಂದಿಗೆ ಸಾದೃಶ್ಯ ಹೊಂದಿರುವ ಪ್ರಧಾನ ಅಧ್ಯಯನಗಳಾವುವು?

6. ಪ್ರಕರಣದ ಚರಿತ್ರೆ ಏನು?

7. ನಿಮ್ಮ ಆಯ್ಕೆಯ ಪ್ರಕರಣದ ಸಾಮಾಜಿಕ, ಆರ್ಥಿಕ, ರಾಜಕೀಯ ಮತ್ತು ಸಾಂಸ್ಕೃತಿಕ ಮಹತ್ವ ಹಾಗೂ ಪ್ರಸಕ್ತತೆ ಏನು?

8. ಇದೇ ರೀತಿಯ ಅಧ್ಯಯನವನ್ನು ಈ ಹಿಂದೆ ಯಾರಾದರೂ ಕೈಗೊಂಡಿದ್ದಾರೆಯೇ? ನಿಮ್ಮ ಅಧ್ಯಯನಕ್ಕೂ ಅವುಗಳಿಗೂ ಇರುವ ಸಾದೃಶ್ಯಗಳೇನು? ನಿಮ್ಮ ಅಧ್ಯಯನ ಅವುಗಳಿಗಿಂತ ಹೇಗೆ ಭಿನ್ನ?

## 5.4.2 ಅಧ್ಯಯನದ ಉದ್ದೇಶ

ನಿಮ್ಮ ಅಧ್ಯಯನದ ಉದ್ದೇಶವನ್ನು ಸುಸ್ಪಷ್ಟವಾಗಿ ವಿವರಿಸುವುದು ಅತ್ಯವಶ್ಯ. ಈ ವಿಭಾಗದಲ್ಲಿ ಉದ್ದೇಶಗಳು ಮತ್ತು ಗುರಿಗಳ ಸ್ಪಷ್ಟವಾದ ಪಟ್ಟಿಯೊಂದನ್ನು ನೀಡಿ, ಈ ಅಧ್ಯಯನವನ್ನು ಯಾವ ಕಾರಣಕ್ಕಾಗಿ ಕೈಗೊಳ್ಳಲಾಗಿದೆ ಎಂಬುದನ್ನು ವಿವರಿಸಲಾಗುತ್ತದೆ. ಕಾರಣಗಳನ್ನು ನೀಡಿ ಪ್ರಧಾನವಾದ ಹಾಗು ಅಪ್ರಧಾನವಾದ ಧ್ಯೇಯೋದ್ದೇಶಗಳನ್ನು ಪಟ್ಟಿ ಮಾಡಬಹುದು.

ಉದ್ದೇಶಗಳನ್ನು ಸ್ಫುಟವಾಗಿ ಹೇಳತಕ್ಕದ್ದು. ಅವಶ್ಯಕತೆ ಕಂಡುಬಂದಲ್ಲಿ, ಉದ್ದೇಶವನ್ನು ನೀವು ಸಾಧಾರಣ ಮತ್ತು ವಿಶೇಷ (ನಿರ್ದಿಷ್ಟ) ಎಂದು ಎರಡು ಭಾಗಗಳಾಗಿ ವರ್ಗೀಕರಿಸಬಹುದು. ನೀವು ಬಿಡಿಸಲು ಪ್ರಯತ್ನಿಸುತ್ತಿರುವ ನಿರ್ದಿಷ್ಟವಾದ ಸಮಸ್ಯೆಗಳನ್ನು ಅ) ಆ) ಇ) ಎಂಬುದಾಗಿ ಸಂಖ್ಯೆಗಳನ್ನು ನಮೂದಿಸಿ ಅಥವಾ ಪಟ್ಟಿ ಮಾಡಿ ಈ ಸಮಸ್ಯೆಗಳಿಗೆ ಉತ್ತರಗಳನ್ನು ಕಂಡು ಹಿಡಿಯಬೇಕಾದುದರ ಪ್ರಾಮುಖ್ಯತೆಯನ್ನು ವಿವರಿಸಿ. ಇಲ್ಲಿ ನೀವು ನಿಮ್ಮ ಅಧ್ಯಯನದ ತಕ್ಷಣದ ಪ್ರಾಮುಖ್ಯತೆಯನ್ನು ವಿವರಿಸಿ. ಯಾರು ಅಥವಾ ಸಮಾಜದ ಯಾವ ವರ್ಗಗಳು ಹೇಗೆ ಮತ್ತು ಯಾವ ಕಾರಣಕ್ಕಾಗಿ ನಿಮ್ಮ ಅಧ್ಯಯನದಿಂದ ಅನುಕೂಲ ಪಡೆಯುತ್ತವೆ ಎಂಬುದನ್ನು ನೀವು ನಮೂದಿಸಬಹುದು.

ನಿಮ್ಮ ಅಧ್ಯಯನದ ಉದ್ದೇಶಗಳನ್ನು ನಿಮ್ಮದೇ ಆದ ಶಬ್ದಗಳಲ್ಲಿ ಬರೆದಿಡಿ. ಸಂಶೋಧಕರು ತನ್ನದೇ ಆದ ಶಬ್ದಗಳಲ್ಲಿ ಉದ್ದೇಶವನ್ನು ಬರೆಯುವುದು ಬಹಳ ಮುಖ್ಯ ಏಕೆಂದರೆ, ಉದ್ದೇಶಿತವಾದ ಸಂಶೋಧನೆಯ ಗುರಿಗಳನ್ನು ಅರ್ಥ ಮಾಡಿಕೊಳ್ಳುವುದರಲ್ಲಿ ಅದು ಅವರಿಗೆ ವಿಶೇಷವಾಗಿ ಸಹಾಯ ಮಾಡುತ್ತದೆ.

ಮಾರ್ಗದರ್ಶಕರು ಹಾಗು ಸಹ ಸಂಶೋಧಕರೊಂದಿಗೆ ಸಮಾಲೋಚನೆ ನಡೆಸುವುದು, ಉದ್ದೇಶವನ್ನೂ, ಗುರಿಗಳನ್ನೂ, ಸುಸ್ಪಷ್ಟವಾಗಿ ನೀಡುವುದಕ್ಕೆ ಬಹಳ ಸಹಾಯ ಮಾಡುತ್ತದೆ. ದ್ವಂದ್ವಗಳನ್ನು, ಸಂದಿಗ್ಧತೆಗಳನ್ನೂ, ಪುನರಾವರ್ತನೆಗಳನ್ನೂ ಹೀಗೆ ದೂರ ಮಾಡಬಹುದು.

ಅಧ್ಯಯನದ ಉದ್ದೇಶಗಳು ಹಾಗು ಸಮಸ್ಯೆಯನ್ನು ಕುರಿತ ಸ್ಪಷ್ಟವಾದ ಹೇಳಿಕೆಗಳ ನಡುವೆ, ಉದ್ದೇಶ ಮತ್ತು ಪೂರ್ವಕಲ್ಪನೆಗಳ ನಡುವೆ, ಉದ್ದೇಶ ಹಾಗು ಕಾರ್ಯವಿಧಾನಗಳು ಮತ್ತು ಫಲಿತಾಂಶಗಳನ್ನು ತೋರ್ಪಡಿಸುವ ಅಂಶಗಳ ನಡುವೆ, ಸ್ಪಷ್ಟವಾಗಿ ಹೇಳದಿದ್ದರೂ ಸಹ ಒಂದು ನೇರವಾದ ಕೊಂಡಿಯಿದೆ. ತೀರ್ಮಾನಗಳು ಮತ್ತು ಶಿಫಾರಸ್ಸುಗಳೊಂದಿಗೆ ಫಲಿತಾಂಶಗಳು ಅತ್ಯವಶ್ಯವಾಗಿ ಸಂಬಂಧ ಹೊಂದಿರುತ್ತದೆ. ಉದ್ದೇಶವನ್ನು ಸ್ಪಷ್ಟವಾಗಿ ರೂಪಿಸಿದೊಡನೆ, ಅರ್ಥಮಾಡಿಕೊಂಡ ಕೂಡಲೇ ಉಳಿದ ವಿಷಯಗಳು ತಾವೇ ತಾವಾಗಿ ಹಿಂಬಾಲಿಸುತ್ತವೆ.

## 5.4.4 ಸಾಹಿತ್ಯ ಸಮೀಕ್ಷೆ, ಅಧ್ಯಯನ ವ್ಯಾಪ್ತಿ, ಮಹತ್ವ ಮತ್ತು ಸಾಮಾಜಿಕ ಪ್ರಸಕ್ತತೆ

### 5.4.4.1 ಸಾಹಿತ್ಯ ಸಮೀಕ್ಷೆ

ಸಂಶೋಧನಾ ಕ್ಷೇತ್ರಕ್ಕೆ ಹೊಸದಾಗಿ ಕಾಲಿಡುತ್ತಿರುವವರು, ಪ್ರಸಕ್ತದಲ್ಲಿ, ಅವರು ಕೈಗೊಂಡಿರುವುದು ಸಂಪೂರ್ಣವಾಗಿ ಹೊಸದೆಂದೂ ಮತ್ತು ಆ ರೀತಿಯಾದ ಕೆಲಸವನ್ನು ಈ ಹಿಂದೆ ಯಾರೂ ಮಾಡಿರುವುದಿಲ್ಲ. ಸದೃಶವಾದುದನ್ನು ಮುಂದೆಯೂ ಯಾರೂ ಮಾಡುವುದಿಲ್ಲ ಎಂದು ಕೆಲವೊಮ್ಮೆ ತಪ್ಪಾಗಿ ಕಲ್ಪಿಸಿಕೊಂಡಿರುವುದನ್ನು ನಾವು ಕಾಣಬಹುದು.

ನಾವು ಇಂದು ಅಧ್ಯಯನ ಮಾಡುತ್ತಿರುವ ಹಲವಾರು ಸಮಸ್ಯೆಗಳು, ತತ್ವಶಾಸ್ತ್ರಜ್ಞರಿಂದ ಮತ್ತು ಆಲೋಚಕರಿಂದ ಈ ಹಿಂದೆಯೇ ಅಧ್ಯಯನ ಮಾಡಲ್ಪಟ್ಟಿರಬಹುದೆಂದೂ, ಮತ್ತೆ ಕೆಲವು ಸಂದರ್ಭಗಳಲ್ಲಿ ಶೈಕ್ಷಣಿಕ ಕ್ಷೇತ್ರದ ಸಂಶೋಧಕರಿಂದ ಈ ಶತಮಾನದಲ್ಲಿ ಅಥವಾ ಇದಕ್ಕೂ ಹಿಂದಿನ ಶತಮಾನಗಳಲ್ಲೇ ಈ ಅಧ್ಯಯನ ನಡೆದಿರಬಹುದೆಂಬುದನ್ನು ಗಮನದಲ್ಲಿಟ್ಟುಕೊಳ್ಳಬೇಕು. ಉದಾಹರಣೆಗೆ, ಜನಸಂಖ್ಯೆಯನ್ನು ಕುರಿತ ಸಮಸ್ಯೆಯು 'ಪ್ಲೇಟೋ'ವಿನಿಂದ 2000 ವರ್ಷಗಳ ಹಿಂದೆಯೇ ಪರೀಕ್ಷಿಸಲ್ಪಟ್ಟಿತು. ಅಲ್ಲದೆ 300ವರ್ಷಗಳ ಹಿಂದೆಯೇ ರಾಬರ್ಟ್ ಮಾಲ್ತೂಸ್ ಈ ಬಗ್ಗೆ ಸಮಗ್ರ ಸಂಶೋಧನೆಯನ್ನು ಕೈಗೊಂಡಿದ್ದನು. ಜ್ಞಾನ ಎನ್ನುವುದು ಒಂದು ಸಾಗರದಂತೆ. ಅಟಿಕೆಯ ಚಮಚವನ್ನಿಟ್ಟುಕೊಂಡು ಸಾಗರದ ನೀರನ್ನು ಖಾಲಿಮಾಡುವ ಹವಣಿಕೆಯಲ್ಲಿ ಇರುವ ಮಗುವಿನಂತೆ ನೀವು.

ನಿಮ್ಮಂತೆಯೇ ಹಲವರು ನಿಮ್ಮ ಸಂಶೋಧನಾ ಸಮಸ್ಯೆಯನ್ನು ಅಧ್ಯಯನ ಮಾಡಿರುತ್ತಾರೆ. (ಪ್ರಕರಣದ ಅದೇ ನಿರ್ದಿಷ್ಟ ಭಾಗವನ್ನಲ್ಲದಿದ್ದರೂ, ಕೊನೆಯ ಪಕ್ಷ ಸಮಸ್ಯೆಯ ಸಾಮಾನ್ಯ ಅಂಶಗಳನ್ನು ಕುರಿತು). ಹಾಗೆಯೇ ಈ ನಿಮ್ಮ ಸಮಸ್ಯೆಯನ್ನೇ ಅಥವಾ ಅದರ ಇತರ ಭೇದಗಳನ್ನು ಕುರಿತು ಭವಿಷ್ಯದಲ್ಲಿ ಇತರರು ಅಧ್ಯಯನ ನಡೆಸುತ್ತಾರೆ.

ತನ್ನ ಸಂಶೋಧನಾ ಕ್ಷೇತ್ರದ ನಕ್ಷೆಯನ್ನು ರೂಪಿಸಿಕೊಳ್ಳುವುದು ಮತ್ತು ಸಂಶೋಧನಾ ವಿಷಯದ ಬಗ್ಗೆ ಯಥಾರ್ಥವಾದ ದೃಷ್ಟಿ ಇರಿಸಿಕೊಳ್ಳುವುದು, ವರ್ತಮಾನ ಹಾಗು ಭವಿಷ್ಯದ ತಲೆಮಾರಿಗೆ ಬಹಳ ಮುಖ್ಯವಾಗುತ್ತದೆ. ನಿಮ್ಮ ಅಧ್ಯಯನ ವಿಷಯಕ್ಕೆ ಸಂಬಂಧಿಸಿದಂತೆ ಲಭ್ಯವಿರುವ ಸಾಹಿತ್ಯವನ್ನು (ಸಾಧ್ಯವಾದರೆ, ಎಲ್ಲವನ್ನು) ಸಮರ್ಥವಾಗಿ ಪರಿಶೋಧಿಸುವುದರ ಮೂಲಕ ಇದು ಸಾಧ್ಯವಾಗುತ್ತದೆ.

ನಿಮ್ಮ ಅಧ್ಯಯನ ಪ್ರಕರಣವನ್ನು ಈಗಾಗಲೇ ಅಭ್ಯಾಸ ಮಾಡಲಾಗಿದೆಯೇ ಅಥವಾ ಇದೇ ರೀತಿಯಾದಂತಹ ವಿಷಯಗಳ ಅಧ್ಯಯನ ಈ ಹಿಂದೆಯೇ ನಡೆದಿದೆಯೇ ಎನ್ನುವುದನ್ನು ಪರೀಕ್ಷೆ ಮಾಡಿಕೊಳ್ಳಲು ಅತ್ಯಂತ ಉಪಯೋಗಿ ಎಂದರೆ ಗ್ರಂಥಾಲಯ ಅನ್ವೇಷಣೆ. ಅದರಲ್ಲೂ ಕಂಪ್ಯೂಟರೀಕೃತ ಅಂತರ್ಜಾಲ ವ್ಯವಸ್ಥೆ.

ಅಧ್ಯಯನದ ಪ್ರಕರಣವು ಈ ಹಿಂದೆಯೇ ಬೇರೆ ಯಾರಿಂದಲೂ (ಅಂದರೆ ಅದೇ ವಿಷಯದ ಭಾಗ, ಅಧ್ಯಯನದ ಒಟ್ಟಾರೆ ಕ್ಷೇತ್ರ ಅಲ್ಲ) ಅಭ್ಯಾಸ ಮಾಡಲ್ಪಟ್ಟಿಲ್ಲ ಎಂಬುದರ ಸ್ಪಷ್ಟೀಕರಣವನ್ನು ನಿಮ್ಮ ವರದಿಯಲ್ಲಿ ನೀಡುವುದು ಬಹಳ ಮುಖ್ಯ.

### 5.4.4.2 ಅಧ್ಯಯನದ ವ್ಯಾಪ್ತಿ ಮತ್ತು ಮಹತ್ವ

ಇದು, ಅಧ್ಯಯನದ ಉದ್ದೇಶದೊಂದಿಗೆ ನೇರವಾಗಿ ಜೋಡಣೆ ಹೊಂದಿದ್ದರೂ, ವ್ಯಾಪ್ತಿಯನ್ನು ಉದ್ದೇಶದೊಂದಿಗೆ ತಪ್ಪಾಗಿ ಅರ್ಥೈಸಿಕೊಳ್ಳಬಾರದು. ಉದ್ದೇಶವು ಸಾಧಿಸಬೇಕಾದ ಗುರಿಯನ್ನು ನಿರ್ದಿಷ್ಟಗೊಳಿಸುತ್ತದೆ. ವ್ಯಾಪ್ತಿಯು ಅಧ್ಯಯನದ ಹರವಿನ ಎಲ್ಲೆಗಳನ್ನು ಗುರುತಿಸುತ್ತದೆ ಮತ್ತು ವಿವರಗಳು ಅಥವಾ ಪ್ರಮಾಣಗಳನ್ನು ನಿರ್ಧರಿಸುತ್ತದೆ. ಹೀಗಾಗಿ ವ್ಯಾಪ್ತಿಯು ವರದಿಯ ಗಾತ್ರವನ್ನು ನಿರ್ದೇಶಿಸುತ್ತದೆ.

ಅಧ್ಯಯನದ ಮುಖ್ಯ ಕೇಂದ್ರ ಯಾವುದು/ಅಧ್ಯಯನದ ಕ್ಷೇತ್ರವು ಸ್ಪಷ್ಟವಾಗಿ ನಿರೂಪಿತವಾಗಿದೆಯೇ? ಎಲ್ಲೆಗಳನ್ನು ಸ್ಫುಟವಾಗಿ ನಿರ್ಧರಿಸಲಾಗಿದೆಯೇ? ಇವುಗಳೆಲ್ಲವನ್ನೂ ವರದಿಯಲ್ಲಿ ವಿಮರ್ಶೆ ಮಾಡಬೇಕು.

ಈಗಾಗಲೇ ತಿಳಿದಿರುವಂತೆ, ಈ ಹಿಂದೆ ನಡೆದಿರುವ ಇದೇ ರೀತಿಯ ಅಧ್ಯಯನಗಳ ಸಾಹಿತ್ಯ ಸಮೀಕ್ಷೆ ನಡೆಸುವುದರಿಂದ, ನಿಮ್ಮ ಅಧ್ಯಯನವು ಇತರ ಅಧ್ಯಯನಗಳಿಗಿಂತ ಹೇಗೆ ವಿಭಿನ್ನವಾದುದು ಎಂಬುದನ್ನು ನಿರ್ಧರಿಸುವುದು ಸಾಧ್ಯವಾಗುತ್ತದೆ. ನಿಮ್ಮ ಅಧ್ಯಯನದ ವಿಶಿಷ್ಟ ಸ್ವರೂಪಗಳನ್ನು ವರದಿಯಲ್ಲಿ ಎತ್ತಿ ತೋರಿಸತಕ್ಕದ್ದು.

### 5.4.4.3 ಅಧ್ಯಯನದ ಸಾಮಾಜಿಕ ಪ್ರಸಕ್ತತೆ

ಪ್ರತಿಯೊಂದು ಸಂಶೋಧನಾ ಸಮಸ್ಯೆಗೂ ಒಂದು ಸಾಮಾಜಿಕ ಆಯಾಮ ಇರುತ್ತದೆ. ಅಧ್ಯಯನವು ಸಮಾಜಕ್ಕೆ ಹೇಗೆ ಉಪಕಾರಿಯಾಗುತ್ತದೆ ಎಂಬುದನ್ನು ವರದಿಯಲ್ಲಿ ವಿವರಿಸಬಹುದು. ಯಾವ ಸಂಶೋಧಕನೂ ಕೇವಲ ತನಗಾಗಿ ಅಥವಾ ಮಾರ್ಗದರ್ಶಕನಿಗಾಗಿ, ಅಧ್ಯಯನವನ್ನು ಕೈಗೊಳ್ಳುವುದಿಲ್ಲ. ಎಲ್ಲಾ ಸಂಶೋಧನೆಗಳೂ ಸಮಾಜದ ಒಳಿತಿಗಾಗಿಯೇ ಅಧ್ಯಯನ ಪ್ರಕರಣಗಳ ಸಾಮಾಜಿಕ, ಆರ್ಥಿಕ, ರಾಜಕೀಯ ಮತ್ತು ಸಾಂಸ್ಕೃತಿಕ ಮಹತ್ವಗಳು ಮತ್ತು ಪ್ರಧಾನ ಫಲಿತಾಂಶಗಳನ್ನು ವರದಿಯಲ್ಲಿ ವಿವರಿಸತಕ್ಕದ್ದು.

## 5.5 ಕಾರ್ಯ ವಿಧಾನ

### 5.5.1 ಪೂರ್ವಕಲ್ಪನೆ

ಅಧ್ಯಯನವನ್ನು ಹೇಗೆ ನಡೆಸಲಾಯಿತು, ಯಾವ ಕಾರಣಕ್ಕಾಗಿ, ಯಾವ ಯಾವ ವಿಧಾನಗಳನ್ನು ಅನುಸರಿಸಲಾಯಿತು ಎಂಬುದನ್ನು ವರ್ಣಿಸಿದ ನಂತರ, ಸಂಶೋಧಕನು ತನ್ನ ಅಧ್ಯಯನವನ್ನು ಪ್ರಸ್ತುತಪಡಿಸಬೇಕು. "ಕಾರ್ಖಾನೆಯಿಂದ ಹೊರಸೂಸುತ್ತಿರುವ ಉಚ್ಛಿಷ್ಟ ಪದಾರ್ಥಗಳು ಗಂಗಾ ನದಿಯ ನೀರನ್ನು ತೀವ್ರವಾಗಿ ಕಲುಷಿತಗೊಳಿಸುತ್ತಿವೆ. ಅಥವಾ, ಮಣ್ಣಿನೊಳಗೆ ಸೇರುತ್ತಿರುವ ರಾಸಾಯನಿಕಗಳು ಈ ವರ್ಷ ಭತ್ತದ ಇಳುವರಿಯನ್ನು ಕುಂಠಿತಗೊಳಿಸಿವೆ. ಅಥವಾ ಹಳಿಗಳಲ್ಲಿ ಉಂಟಾಗಿರುವ ಬಿರುಕುಗಳಿಂದ ರೈಲು ಅಪಘಾತ ಸಂಭವಿಸಿತು" ಇತ್ಯಾದಿಯಾದ ಹೇಳಿಕೆಗಳನ್ನು ನಾವು ಹಲವಾರು ಬಾರಿ ಕೇಳುತ್ತೇವೆ. ಈ ಹೇಳಿಕೆಗಳು ನಿಜವಾಗಿರಬಹುದು. ಇಲ್ಲದೆಯೂ ಇರಬಹುದು. ಈ ಹೇಳಿಕೆಗಳನ್ನು ನೀಡುತ್ತಿರುವ ವ್ಯಕ್ತಿಯು ನಿಜವಾಗಿ ಅಧ್ಯಯನ ಮಾಡದೆ ಈ ಮಾತುಗಳನ್ನು ಹೇಳುತ್ತಿರಬಹುದು. ಬಹುಶಃ ಅವು ಕೇವಲ ತಿಳುವಳಿಕೆಯನ್ನು ಆಧರಿಸಿದ ಊಹೆಗಳಾಗಿರಲಿಕ್ಕೂ ಶಕ್ಯ. ಹೀಗಾಗಿ, ಸನ್ನಿವೇಶಗಳೆಲ್ಲವನ್ನು ಯಥಾರ್ಥವಾಗಿ ಅಧ್ಯಯನ ಮಾಡಿದ ನಂತರವೇ ಈ ಹೇಳಿಕೆಗಳಲ್ಲಿ ಹುರುಳಿದೆಯೋ ಇಲ್ಲವೋ ಎನ್ನುವ ಸತ್ಯಾಂಶ ನಿರ್ಧರಿಸಲ್ಪಡುತ್ತದೆ. ಸಾಮಾನ್ಯೀಕರಣಗೊಳಿಸುವುದಕ್ಕೆ ಮುನ್ನ, ಈ ಎಲ್ಲ ಅಂಶಗಳ ಸಂಪೂರ್ಣ ಪರೀಕ್ಷೆಗೆ ಅತ್ಯವಶ್ಯ. ಸಂಶೋಧಕನೊಬ್ಬ ಸಾರಾಸಗಟಾಗಿ ಹೇಳಿಕೆಗಳನ್ನು ನೀಡಬಾರದು. ಯಥಾರ್ಥವಾದ ಅಧ್ಯಯನ ಮತ್ತು ಅವಲೋಕನಗಳ ಬೆಳಕಿನಲ್ಲಿ ಪೂರ್ವಕಲ್ಪನೆಗಳನ್ನು ಪುಷ್ಟೀಕರಿಸಬೇಕು ಅಥವಾ ತಿರಸ್ಕರಿಸಬೇಕು.

ಹೆಚ್ಚಿನ ಸಂದರ್ಭಗಳಲ್ಲಿ, ವೈಜ್ಞಾನಿಕ ಪರೀಕ್ಷಣೆಗೆ ಒಳಪಡಬಲ್ಲ ಹೇಳಿಕೆಯಾಗಿ ಪೂರ್ವಕಲ್ಪನೆಯನ್ನು ರೂಪಿಸಲಾಗುತ್ತದೆಯೇ ಹೊರತು ಕೇವಲ ಒಂದು ಸಾಧಾರಣವಾದ ಹೇಳಿಕೆಯಾಗಿ ಅಲ್ಲ. ಈ ಹೇಳಿಕೆಗೆ ಕಾರಣಗಳನ್ನು 'ಪೂರ್ವಕಲ್ಪನೆ'ಯ ಭಾಗವಾಗಿ ಅಥವಾ ಅನುಸಿದ್ಧಾಂತವಾಗಿ ನೀಡಬಹುದು.

### 5.5.2 ಅಧ್ಯಯನದ ವಿಧಾನ

ಸಮಸ್ಯೆ, ಉದ್ದೇಶ ಮತ್ತು ಪೂರ್ವಕಲ್ಪನೆಗಳು ಅಧ್ಯಯನ ಹಾಗು ದತ್ತಾಂಶ ಸಂಗ್ರಹಣೆಯ ವಿಧಾನ ಮತ್ತು ರೀತಿಗಳನ್ನು ನಿರ್ಧರಿಸುತ್ತವೆ. ಪ್ರಶ್ನಾವಳಿಯ ರೀತಿಯ ಸಮೀಕ್ಷೆಯು ಬಳಸುವ ವಿಧಾನವಾಗಿದ್ದರೆ, 'ವಿಧಾನ'ಗಳನ್ನು ಕುರಿತ ಪಠ್ಯವಿಭಾಗದ ಕೊನೆಯಲ್ಲಿ ಅಥವಾ ವರದಿಯ ಕೊನೆಯಲ್ಲಿ ಒಂದು ಅನುಬಂಧವಾಗಿ ಪ್ರಶ್ನಾವಳಿಯ ಮಾದರಿಯೊಂದನ್ನು ನೀಡಿ. 'ವಿಷಯ ವಿಶ್ಲೇಷಣೆ' ನಿಮ್ಮ ವಿಧಾನವಾಗಿದ್ದರೆ, ವಿಷಯ ವಿಶ್ಲೇಷಣೆಗೆ ಬಳಸಲಾಗಿರುವ ಮಾದರಿಯನ್ನು ನೀಡಿ.

ಅಧ್ಯಯನದ ಸಾಮಾನ್ಯ ವಿಧಾನಗಳು ಚಾರಿತ್ರಿಕವಾಗಿದ್ದರೆ (ಚಾರಿತ್ರಿಕ ದಸ್ತಾವೇಜುಗಳು ಮತ್ತು ಸಮಸ್ಯೆಯನ್ನು ಕುರಿತಂತೆ ಪ್ರಾಥಮಿಕ ಜ್ಞಾನ/ಮಾಹಿತಿಯನ್ನು ನೀಡಬಲ್ಲಂತಹ ತಲೆಮಾರಿನ ಜನರೊಂದಿಗೆ ನಡೆಸಲಾದ ಸಂದರ್ಶನಗಳ ಆಧಾರದ ಮೇಲೆ) ನೋಡಲಾದ ಸ್ಥಳಗಳು ಮತ್ತು ಜನರ ಪಟ್ಟಿಯನ್ನು ಮತ್ತು ಸಮಂಜಸವಾದ ದಸ್ತಾವೇಜುಗಳನ್ನೂ ನೀಡಿ.

ಅಧ್ಯಯನವು ನಿರ್ಣಯಾತ್ಮಕವಾಗಿಲ್ಲದಿದ್ದರೆ ಸಮೀಕ್ಷೆಯ ವಿವರಗಳನ್ನೂ, ನಮೂನೆಯ ವಿಧಾನಗಳನ್ನೂ, ಮಾದರಿ ಪ್ರಶ್ನಾವಳಿಯನ್ನೂ, ನೀಡಲಾದ ಉತ್ತರಗಳ ಮಾದರಿಯನ್ನೂ, ಪರೀಕ್ಷಾ ಪೂರ್ವದ ಮತ್ತು ನಂತರ ವಿವರಗಳನ್ನೂ ನೀಡಿ. ಪ್ರಶ್ನಾವಳಿಯಲ್ಲಿ ಯಾವುದೇ ಕಷ್ಟವಾದ ಪಾರಿಭಾಷಿಕ ಪದಗಳನ್ನು ಬಳಸಿದ್ದರೆ, ಆ ಪದಗಳನ್ನು ವಿವರಿಸಿ. ಅದೇ ರೀತಿಯಾಗಿ ಕಾರ್ಯಾತ್ಮಕ ಪರಿಭಾಷೆಗಳನ್ನು (ಅಧ್ಯಯನದ ಸಂಬಂಧದಲ್ಲಿ ಬಳಸಿರುವ) ಯುಕ್ತವಾದ ಅರ್ಥಗಳೊಂದಿಗೆ ವರದಿಯಲ್ಲಿ ನೀಡಬಹುದು.

## 5.5.3 ಸಮಂಜಸತೆ ಮತ್ತು ವಿಶ್ವಾಸಾರ್ಹತೆ

ಅಧ್ಯಯನದ ಸಮಂಜಸತೆ ಮತ್ತು ವಿಶ್ವಾಸಾರ್ಹತೆಗಳನ್ನು ಯಾವ ವಿಧಾನದಲ್ಲಿ ಪರೀಕ್ಷಿಸಲಾಗಿದೆ ಎಂಬುದರ ವಿವರಗಳನ್ನು ನೀಡಿ. ಪ್ರಾರಂಭದಲ್ಲಿ ಏನನ್ನು ಅಧ್ಯಯನ ಮಾಡಬೇಕೆಂದು ನಿರ್ಧರಿಸಲಾಗಿತ್ತೋ ಅದನ್ನು ನಿಜವಾಗಿಯೂ ಅಭ್ಯಾಸ ಮಾಡಲಾಗಿದೆಯೇ ಇಲ್ಲವೇ ಎಂಬುದನ್ನು ನಿರ್ಧರಿಸುವ ಪರೀಕ್ಷೆಯೇ ಸಮಂಜಸತೆ. ವಿಶ್ವಾಸಾರ್ಹತೆ ಎಂದರೆ ಪುನರಾವರ್ತಿತವಾಗುವ ಅದರ ಗುಣ. ಅಂದರೆ, ಒಂದೇ ರೀತಿಯ ನಿರ್ದಿಷ್ಟ ಸಂದರ್ಭಗಳಲ್ಲಿ, ಒಂದೇ ವಿಧಾನವನ್ನು ಅನುಸರಿಸಿ, ಬೇರೆ ಸಂಶೋಧಕರು ಅದೇ ಅಧ್ಯಯನವನ್ನು ನಡೆಸಿದರೆ, ಅದೇ ಫಲಿತಾಂಶಗಳು ಬರುತ್ತವೆಯೇ ಇಲ್ಲವೇ ಎಂಬುದನ್ನು ನೋಡುವುದು. ಸಂಶೋಧಕನು ನಡೆಸಿರುವ ಮಾಪನಗಳು ನಂಬಲು ಯೋಗ್ಯವೇ ಎಂಬುದರ ವಿಶ್ವಾಸಾರ್ಹತೆಯನ್ನು ಅಳೆಯಲು ಕೆಲವೊಂದು ಪರೀಕ್ಷೆಗಳಿವೆ. ಬಳಸಲ್ಪಟ್ಟಿರುವ ಸಂಖ್ಯಾಶಾಸ್ತ್ರಾತ್ಮಕವಾದ 'ಮಹತ್ವದ ಪರೀಕ್ಷೆ'ಗಳ ವಿವರಗಳನ್ನು ಸಂಶೋಧಕ ನೀಡಬೇಕು. ಉದಾಹರಣೆಗೆ, ಸ್ಟೂಡೆಂಟ್ 'ಟಿ' ಪರೀಕ್ಷೆ, ಮಾರ್ಪಿನ ವಿಶ್ಲೇಷಣೆ (ANOVA) ಇತ್ಯಾದಿ ಫಲಿತಾಂಶಗಳು ಸುಲಭವಾದ ಗ್ರಹಿಕೆಗೆ ಮತ್ತು ಸಂಕ್ಷೇಪಣೆಗೆ, ದತ್ತಾಂಶಗಳ ಪಟ್ಟಿ ಲೇಖಾಚಿತ್ರಗಳು, ನಕ್ಷೆಗಳು ಇತ್ಯಾದಿಗಳ ರೂಪದಲ್ಲಿ ಬಿಂಬಿಸಬೇಕು.

ಮುಂದಿನ ವಿಭಾಗಕ್ಕೆ ಹೋಗುವ ಮುನ್ನ, ಈ ಕೆಲವೊಂದು ಪ್ರಶ್ನೆಗಳನ್ನು ಕೇಳಿಕೊಳ್ಳಿ.

* ಫಲಿತಾಂಶಗಳನ್ನು ಸರಿಯಾಗಿ ಗುರುತಿಸಲಾಗಿದೆಯೇ?
* ಸರಿಯಾಗಿ ನಿರೂಪಿಸಲ್ಪಟ್ಟಿರುವ ಪಟ್ಟಿಗಳು, ನಕ್ಷೆಗಳು ಮತ್ತು ಚಿತ್ರಗಳ ಸಹಾಯದಿಂದ ಫಲಿತಾಂಶಗಳನ್ನು ಚೆನ್ನಾಗಿ ದಾಖಲಿಸಲಾಗಿದೆಯೇ? ನಕ್ಷಾರೂಪದ ಬಿಂಬಗಳು ಪುನರಾವರ್ತನೆಯನ್ನು ದೂರಮಾಡಿವೆಯೇ ಮತ್ತು ಪ್ರಧಾನವಾಗಿ ಎದ್ದು ತೋರುವಂತಿವೆಯೇ?
* ಫಲಿತಾಂಶಗಳು ಅಧ್ಯಯನದ ಅಡಿಯಲ್ಲಿರುವ ಸಮಸ್ಯೆಗೆ ನೇರವಾಗಿ ಸಂಬಂಧಿಸಿವೆಯೇ? ಅಥವಾ ಗೊಂದಲಗೊಳಿಸುವಂತಿವೆಯೇ?
* ಫಲಿತಾಂಶಗಳು ಪೂರ್ವಕಲ್ಪನೆಗಳನ್ನು ಪುಷ್ಟೀಕರಿಸುತ್ತಿವೆಯೇ? ಇಲ್ಲವೆ?
* ಅಧ್ಯಯನ ಸಮಸ್ಯೆಯನ್ನು ಪರಿಹರಿಸುವಲ್ಲಿ ಫಲಿತಾಂಶಗಳು ಸಹಾಯ ಮಾಡಿವೆಯೇ? ಇಲ್ಲವಾದರೆ, ಏಕೆ?
* ಗೊಂದಲವುಂಟು ಮಾಡುವಷ್ಟು ಹೆಚ್ಚಿನ ಸಂಖ್ಯೆಯಲ್ಲಿ ಪಟ್ಟಿಗಳು ವರದಿಯಲ್ಲಿ ಇವೆಯೇ?
* ಫಲಿತಾಂಶಗಳ ಮಹತ್ವವನ್ನು ಸ್ಪಷ್ಟಗೊಳಿಸಲು, ಯುಕ್ತವಾದ ಸಂಖ್ಯಾಶಾಸ್ತ್ರಾತ್ಮಕ ಮತ್ತು ಅನ್ವಯಿಕ ಪರಿಕರ ಹಾಗು ತಂತ್ರಗಳನ್ನು ಬಳಸಲಾಗಿದೆಯೇ? ಸುಲಭವಾಗಿ ಅರ್ಥವಾಗುವ ತೆರದಲ್ಲಿ ಅವುಗಳನ್ನು ನಿರೂಪಿಸಲಾಗಿದೆಯೇ?

* ಅಧ್ಯಯನದ ಪ್ರಾರಂಭಕ್ಕೆ ಕಾರಣವಾದ ಉದ್ದೇಶ ಮತ್ತು ಪೂರ್ವಕಲ್ಪನೆಗಳ ಬೆಳಕಿನಲ್ಲಿ ಪ್ರಧಾನ ಮತ್ತು ಅಪ್ರಧಾನ ಫಲಿತಾಂಶಗಳನ್ನು ಚರ್ಚಿಸಲಾಗಿದೆಯೇ?

* ಕಾಳಿನಿಂದ ಜೊಳ್ಳನ್ನೂ, ಸಂಗತತೆಯಿಂದ ಅಸಂಗತವನ್ನು, ಉಪಯುಕ್ತವಾದುದರಿಂದ ಅನುಪಯುಕ್ತವಾದುದನ್ನೂ, ಪ್ರಮುಖವಾದದ್ದರಿಂದ ಪ್ರಮುಖವಲ್ಲದ್ದನ್ನೂ ಜತನದಿಂದ ಬೇರ್ಪಡಿಸಿ ದತ್ತಾಂಶಗಳನ್ನು ವಿಶ್ಲೇಷಣೆ ಮಾಡಲಾಗಿದೆಯೇ?

## 5.6 ತೀರ್ಮಾನಗಳು ಮತ್ತು ಶಿಫಾರಸ್ಸುಗಳು

ಅನ್ವೇಷಿಸಲಾದ ತಥ್ಯಾಂಶಗಳು - ಫಲಿತಾಂಶಗಳು; ಸತ್ಯವನ್ನು ಆಧರಿಸಿದ ಅಭಿಮತಗಳು - ತೀರ್ಮಾನಗಳು ಕಾರ್ಯವಾಹಿನಿ ನೀಡುವ ಸೂಚನೆಗಳು ಶಿಫಾರಸ್ಸುಗಳಾಗಿರುತ್ತವೆ.

ಪ್ರತಿಯೊಂದು ಸಂಶೋಧನಾ ಅಧ್ಯಯನವೂ ತನ್ನ ತೀರ್ಮಾನಗಳನ್ನು ಪ್ರಸ್ತುತಪಡಿಸಬೇಕು. ಈ ವಿಭಾಗವನ್ನು ಅಂತಿಮಗೊಳಿಸುವ ಮುನ್ನ ಕೆಳಕಂಡ ಪ್ರಶ್ನೆಗಳನ್ನು ಕೇಳಿಕೊಳ್ಳಿ:

* ತೀರ್ಮಾನಗಳನ್ನು ತರ್ಕಬದ್ಧವಾಗಿ ತೆಗೆದುಕೊಳ್ಳಲಾಗಿದೆಯೇ? ಅವುಗಳನ್ನು ಸರಿಯಾಗಿ ತಿಳಿಸಲಾಗಿದೆಯೇ?

* ಫಲಿತಾಂಶಗಳ ಸಮಂಜಸತೆಯನ್ನು ಗಂಭೀರವಾಗಿ ಪರಿಗಣಿಸಲಾಗಿದೆಯೇ? ಆರಂಭದಲ್ಲಿ ಗೊತ್ತುಪಡಿಸಿಕೊಂಡಿದ್ದ ಮಹತ್ವವನ್ನೂ ಮಾಪನವನ್ನೂ ಅಧ್ಯಯನ ಮಾಡಿದೆಯೇ?

* ಫಲಿತಾಂಶಗಳ ಮಹತ್ವವನ್ನು 'ತೀರ್ಮಾನ'ಗಳಲ್ಲಿ ಸ್ಪಷ್ಟವಾಗಿ ವಿವರಿಸಲಾಗಿದೆಯೇ ಅಥವಾ ಕೆಲವೊಂದು ತೀರ್ಮಾನಗಳು ಸ್ವಂತದ /ಸಂಶೋಧಕನ ವೈಯಕ್ತಿಕ ಅಭಿಪ್ರಾಯಗಳ ಮೇಲೆ ಮಾತ್ರ ಆಧಾರಿತವಾಗಿವೆಯೇ?

* ಈ ತೀರ್ಮಾನಗಳಿಗೆ ಹೇಗೆ ಬರಲಾಯಿತೆಂಬ ಪ್ರಕ್ರಿಯೆಯನ್ನು ಸೂಚಿಸಲಾಗಿದೆಯೇ?

* ಫಲಿತಾಂಶಗಳ ಪರಿಣಾಮಗಳನ್ನು ಚರ್ಚಿಸಲಾಗಿದೆಯೇ?

* ಭವಿಷ್ಯದ ಕಾರ್ಯವಾಹಿಗೆಂದು ಸೂಕ್ತವಾದ ಶಿಫಾರಸ್ಸುಗಳನ್ನು ಮಾಡಲಾಗಿದೆಯೇ?

* ಎಲ್ಲಾ ಶಿಫಾರಸ್ಸುಗಳು, ಸಂಪೂರ್ಣವಾಗಿ ಫಲಿತಾಂಶಗಳಿಗೆ ಸಂಬಂಧಿಸದೆ, ಕೇವಲ ಸಂಶೋಧಕನ ಸ್ವಂತ, ವೈಯಕ್ತಿಕ ಅಭಿಪ್ರಾಯ ಮತ್ತು ಆಸಕ್ತಿಗಳನ್ನು ಆಧರಿಸಿವೆಯೇ?

* ಸಂಶೋಧಕರು ಭವಿಷ್ಯದಲ್ಲಿ ಕೈಗೊಳ್ಳಬಹುದಾದಂತಹ ಅಂಶಗಳನ್ನು ಶಿಫಾರಸ್ಸುಗಳನ್ನು ಸೂಚಿಸಲಾಗಿದೆಯೇ?

ಸಾಧ್ಯವಾದರೆ ಚಿಕ್ಕದಾದ ಪರಿಚ್ಛೇದ/ವಾಕ್ಯಗಳಲ್ಲಿ, ಪ್ರತಿಯೊಂದು ಪರಿಚ್ಛೇದ/ವಾಕ್ಯವೂ ಒಂದೊಂದು ತೀರ್ಮಾನವನ್ನು ಒಳಗೊಳ್ಳುವಂತೆ, ತೀರ್ಮಾನಗಳನ್ನು ಮತ್ತು ಶಿಫಾರಸ್ಸುಗಳನ್ನು ಪಟ್ಟಿ ಮಾಡಿ.

ಸಮಸ್ಯೆಯ ನಿರೂಪಣೆ, ಧ್ಯೇಯೋದ್ದೇಶಗಳ ವಿಭಾಗಗಳಲ್ಲಿ ಎತ್ತಲಾದ ಪ್ರಶ್ನೆಗಳಿಗೆ 'ತೀರ್ಮಾನ'ಗಳು ಉತ್ತರಗಳನ್ನು ನೀಡಬೇಕು. ಅವುಗಳನ್ನು ಪೂರ್ವಕಲ್ಪನೆಗಳೊಂದಿಗೆ ಸಂಬಂಧಿಸಬೇಕು. ಈಗಾಗಲೇ ತಿಳಿಸಿರುವಂತೆ, ಎಲ್ಲಾ ಪೂರ್ವಕಲ್ಪನೆಗಳೂ ಪುಷ್ಟೀಕರಣಗೊಳ್ಳಲೇ ಬೇಕೆಂದೇನೂ ಇಲ್ಲ. ಕೆಲವೊಂದು ತಿರಸ್ಕೃತಗೊಳ್ಳಬಹುದು. ಆದರೆ 'ತೀರ್ಮಾನ'ಗಳ ಪೂರ್ವಭಾವಿಯಾದ ನಿಷ್ಕರ್ಷೆಯಲ್ಲಿ, ಊಹಿಸಲಾದ ಮತ್ತು ತಥ್ಯವಾದ ಫಲಿತಾಂಶಗಳಿಗೆ ಇರುವ ವ್ಯತ್ಯಾಸಗಳನ್ನು ಕಾರಣ ಸಹಿತವಾಗಿ ಚರ್ಚೆ ಮಾಡಬೇಕು.

## 5.7 ದಾಖಲೀಕರಣ

ಪ್ರತಿಯೊಂದು ಅಧ್ಯಯನದಲ್ಲಿ ಅಥವಾ ಅಧ್ಯಯನದ ಕೊನೆಯಲ್ಲಿ ನೀಡುವ ಪರಾಮರ್ಶನಗಳು ಮತ್ತು ಸಂಶೋಧನಾ ವರದಿ ಅಥವಾ ವಿದ್ವತ್ ಪ್ರಬಂಧದ ಕೊನೆಯಲ್ಲಿ ನೀಡಲಾಗುವ ಗ್ರಂಥವಿವರಣೆಯನ್ನು ದಾಖಲೀಕರಣ ಸೂಚಿಸುತ್ತದೆ.

ಪರಾಮರ್ಶನಗಳನ್ನು ಪ್ರತಿಯೊಂದು ಅಧ್ಯಯನದ ಅಂತ್ಯದಲ್ಲಿ ಕೊಡಬಹುದು ಅಥವಾ ಅಂತಿಮ ಅಧ್ಯಾಯದ ಕೊನೆಯಲ್ಲಿ ನೀಡಬಹುದು. ಕೊನೆಯಲ್ಲಿ ಕೊಡುವುದಾದರೆ, ಅಧ್ಯಾಯಗಳ ಶೀರ್ಷಿಕೆಯೊಡನೆ ಕೊಡತಕ್ಕದ್ದು.

1. ಪರಾಮರ್ಶನ ನಮೂದನೆಗೆ ಕೆಳಗೆ ಕೊಟ್ಟಿರುವ ಶೈಲಿನ್ನು ಅನುಸರಿಸಬಹುದು. ಲೇಖಕನ ಹೆಸರು, ಪೂರ್ತಿಯಾಗಿ ಪ್ರಾಕೃತಿಕ ಕ್ರಮದ ಅನ್ವಯ, ಅಂದರೆ ಸಾಮಾನ್ಯವಾಗಿ ಬರೆಯುವ ರೀತಿಯಲ್ಲಿ. ಸೂಚಿಸಿದ ಪುಸ್ತಕವು ಬೀಕನ್ ಪ್ರೆಸ್, ಬಾಸ್ಟನ್‌ನಿಂದ 1980ರಲ್ಲಿ ಪ್ರಕಾಶಿತವಾದ ವಿಲ್ಬರ್ ಶ್ರಾಮ್ ಅವರು ಬರೆದ 'Story of Communication' ಆಗಿದ್ದರೆ, ಪರಾಮರ್ಶನ ಶೈಲಿಯು ಹೀಗಿರಬಹುದು.

Wilbur Schramm, The Story of Communication, Boston, Beacon Press, 1980, P.25

ಇಲ್ಲಿ ಬಳಸಲಾಗಿರುವ ವಿರಾಮ ಚಿಹ್ನೆಗಳನ್ನೂ ಮತ್ತು ಶೀರ್ಷಿಕೆಯ ಕೆಳಗೆ ಗೆರೆಯನ್ನು ಹಾಕಿದ್ದು ಎದ್ದು ತೋರುವಂತೆ ಮಾಡಿರುವುದನ್ನು ಗಮನಿಸಿ.

2. ಪರಾಮರ್ಶನೆಗೆ ಬಳಸಿರುವುದು ಜರ್ನಲ್ ಒಂದರ ಲೇಖನವಾಗಿದ್ದರೆ, ನಮೂದಿಸುವ ಶೈಲಿಯು ಸ್ವಲ್ಪ ಬದಲಾಗುತ್ತದೆ.

ಲೇಖಕನ ಹೆಸರು, ಪೂರ್ತಿಯಾಗಿ ಪ್ರಾಕೃತಿಕ ಕ್ರಮದಂತೆ, ಉದ್ಧರಣ ಚಿಹ್ನೆಗಳಲ್ಲಿ ಲೇಖನದ ಶೀರ್ಷಿಕೆ, ಓರೆ ಅಕ್ಷರಗಳಲ್ಲಿ ಅಥವಾ ಕೆಳಗೆ ಗೆರೆಹಾಕಿರುವ ರೀತಿಯಲ್ಲಿ ಜರ್ನಲ್‌ನ ಹೆಸರು; ಸಂಪುಟದ ಸಂಖ್ಯೆ, ಸಂಚಿಕೆಯ ಸಂಖ್ಯೆ, ಪ್ರಕಾಶನಗೊಂಡ ವರ್ಷ ಮತ್ತು ಪುಟಸಂಖ್ಯೆ/ಗಳು. ಉದಾಹರಣೆಗೆ:

Ray H. Elling, "Industrialization and Occupational Health in Underdeveloped Countries", *International Journal of Health Sciences*, Vol.7, No. 1977, PP. 209-233 (P:ಪುಟವನ್ನು ಸೂಚಿಸಿದರೆ, PP ಪುಟಗಳನ್ನು ಸೂಚಿಸುತ್ತದೆ) ಗ್ರಂಥಸೂಚಿಯ ನಮೂದನೆಗಳಲ್ಲಿ, ಲೇಖಕನ ಹೆಸರನ್ನು ತಿರುವು ಮಾಡಲಾಗುತ್ತದೆ. ಉದಾಹರಣೆಗೆ, ಈ ಹಿಂದೆ ನೀಡಲಾದ ಉದಾಹರಣೆಯ ಕೆಳಗೆ ಕಾಣಿಸಿದಂತಾಗುತ್ತದೆ.

Schramm, Wilbur, The Story of Communication, Boston; Beacon Press, 1980. ಗ್ರಂಥಸೂಚಿಯಲ್ಲಿ ಪುಟಸಂಖ್ಯೆಗಳು ಇರುವುದಿಲ್ಲ ಎಂಬುದನ್ನು ಗಮನಿಸಿ.

ಮೊದಲಭಾಗ 'ಗ್ರಂಥಗಳು' ಎಂಬುದರ ಅಡಿಯಲ್ಲಿ ಪುಸ್ತಕಗಳೆಲ್ಲವನ್ನೂ ಪಟ್ಟಿ ಮಾಡಿದ ನಂತರ, ಪರಾಮರ್ಶನೆಗೆ ಬಳಸಲಾದ ಎಲ್ಲಾ ಜರ್ನಲ್ ಲೇಖನಗಳನ್ನೂ 'ಲೇಖನಗಳು' ಎಂಬ ಶೀರ್ಷಿಕೆಯ ಅಡಿಯಲ್ಲಿ ನಮೂದಿಸಬಹುದು. ಗ್ರಂಥಸೂಚಿಯಲ್ಲಿನ, ಜರ್ನಲ್ ನಮೂದುಗಳಲ್ಲಿ ಪುಟಸಂಖ್ಯೆ ಇರುತ್ತವೆ.

ಉದಾಹರಣೆ Elling, R.H., "Occupational Health in Underdeveloped Countries", International Journal of Health Sciences, Vol. 7, No.2, 1977. PP.209-233.

ನಮೂದನೆಯ ಇನ್ನೊಂದು ಶೈಲಿಯು ಕೆಳಕಂಡಂತಿದೆ.

Schramm,W (1980). The Story of Communication, Boston Beacon Press, Elling, R.H. (1977), " Industrialization and Developing Countries", IHS, Vol,7. No.2, PP.209- 223.

ಯಾವುದೇ ಶೈಲಿಯನ್ನು ಬಳಸಿದರೂ ಅದು ಒಂದೇ ರೀತಿಯಲ್ಲಿರತಕ್ಕದ್ದು, ಎಲ್ಲೆಡೆ ಒಂದೇ ರೀತಿಯ ಶೈಲಿಯನ್ನು ಬಳಸಿ.

ಗ್ರಂಥಸೂಚಿಯಲ್ಲಿನ ನಮೂದನೆಗಳನ್ನು ಅಕ್ಷರಾನುಕ್ರಮಣಿಕೆಯಲ್ಲಿ ಮಾಡಿ, ಅಂತ್ಯದಲ್ಲಿನ ಸೂಚನೆಗಳಲ್ಲಿ (ಅಧ್ಯಾಯದ ಕೊನೆಯಲ್ಲಿ) ಅಥವಾ ಪುಸ್ತಕದ ಕೊನೆಯಲ್ಲಿನ ಸೂಚನೆಗಳಲ್ಲಿ, ನಮೂದನೆಯ ಸಂಖ್ಯೆಗೆ ಅನುಸಾರವಾಗಿ ವಿವರಗಳನ್ನು ಪಟ್ಟಿಮಾಡಿ, ಈ ಹಿಂದೆ ನಮೂದನೆಯ ಸಂಖ್ಯೆಗಳನ್ನು ಮೇಲಕ್ಷರಗಳಾಗಿ ನೀಡಲಾಗುತ್ತಿತ್ತು, ಆದರೆ ಈಗ ಬರಹದ ಗೆರೆಯಲ್ಲೇ ಆವರಣ ಚಿಹ್ನೆಗಳ ಒಳಗೆ ನೀಡಲಾಗುತ್ತದೆ.

ಪಠ್ಯದ ಪರಾಮರ್ಶೆಗಳು ಎರಡು ಶೈಲಿಗಳನ್ನು ಅನುಸರಿಸುತ್ತವೆ. ಲೇಖಕ/ರ ಹೆಸರುಗಳ ಕೊನೆಯ ನಾಮವನ್ನು ಮತ್ತು ನಮೂದಿಸಲಾದ ಅಧ್ಯಯನದ ವರ್ಷವನ್ನೂ ಗುರುತಿಸುವುದು (ಅಧ್ಯಯನದ ಶೀರ್ಷಿಕೆಯನ್ನಲ್ಲ).

ಉದಾಹರಣೆಗೆ, ಮೇಲೆ ಕೊಟ್ಟಿರುವ ಉದಾರಹಣೆಗಳು ಕೆಳಕಂಡಂತಾಗುತ್ತವೆ,

(Schramm, 1980) ಅಥವಾ (Elling, 1977).

ಇನ್ನೊಂದು ಶೈಲಿಯೆಂದರೆ, ಕೇವಲ ಪ್ರಕಟಣೆಯ ವರ್ಷವನ್ನು ನೀಡುವುದು, ಈ ಸಂದರ್ಭದಲ್ಲಿ ಲೇಖಕನ ಹೆಸರು ಪರಿಚ್ಛೇದದಲ್ಲಿ ಅಥವಾ ವಾಕ್ಯದಲ್ಲಿ ಆವರಣದೊಳಗೆ, ವರ್ಷಕ್ಕೆ ಮುನ್ನ ಕಾಣಿಸಿಕೊಳ್ಳುತ್ತದೆ.

## 5.8 ಸಾರಾಂಶ

ಸಂಶೋಧನಾ ವರದಿ ಎಂದರೆ ಸಂಶೋಧನಾ ಕಾರ್ಯದ ತಾತ್ಪರ್ಯವನ್ನು ನೀಡುವ ದಸ್ತಾವೇಜು. ಓದುಗನಿಗೆ ಸುಲಭವಾಗಿ ಅರ್ಥವಾಗುವಂತಹ ರೀತಿಯಲ್ಲಿ ಅಧ್ಯಯನದ ಧ್ಯೇಯೋದ್ದೇಶಗಳು, ವಿಧಾನಗಳು, ಫಲಿತಾಂಶಗಳು, ತೀರ್ಮಾನಗಳು ಮತ್ತು ಶಿಫಾರಸ್ಸುಗಳನ್ನು ಸ್ಪಷ್ಟವಾಗಿ ತೋರಿಸುವಂತೆ ಕ್ರಮಬದ್ಧವಾದ ರೀತಿಯಲ್ಲಿ ವರದಿಯನ್ನು ಬರೆಯುವುದು ಅವಶ್ಯಕ. ಸಂಶೋಧನಾ ವರದಿಯು ಓದಿಸಿಕೊಳ್ಳುವಂತೆ ಇರಬೇಕು ಮತ್ತು ಬರೆಯುತ್ತಿರುವುದು ಯಾರಿಗಾಗಿ ಎಂಬುದನ್ನು ಲೇಖಕ ಸ್ಪಷ್ಟವಾಗಿ ಅರಿತಿರಬೇಕು. ಕಳಪೆಯಾದ ಬರಹವು ಔಚಿತ್ಯಪೂರ್ಣವಲ್ಲದ ವಿಷಯವನ್ನು ಮತ್ತು ಯಥೋಚಿತವಲ್ಲದ ರೀತಿಗಳನ್ನೂ ಪ್ರತಿಫಲಿಸುತ್ತದೆ. ಕಳಪೆ ಲೇಖನಕ್ಕೆ ಕಾರಣ ಸ್ಪಷ್ಟವಾಗಿಲ್ಲದ ಆಲೋಚನಾ ಸರಣಿ. ಸರಿಯಾಗಿ ಸ್ಥೂಲ ಚಿತ್ರಣವನ್ನು ರೂಪಿಸಿಕೊಳ್ಳದಿದ್ದರೆ, ಅದು ಪ್ರಾಥಮಿಕ ವಿಶ್ಲೇಷಣೆಯ ಮೇಲೆ ಕೆಟ್ಟ ಪರಿಣಾಮ ಬೀರುತ್ತದೆ. ಸಂಶೋಧನಾ ಕಾರ್ಯವು ಇನ್ನೂ ಪ್ರಗತಿಯಲ್ಲಿ ಇರುವಾಗಲೇ ಸಂಶೋಧನಾ ವರದಿಯ ಲೇಖನಕ್ಕೆ ಅಣಿಮಾಡಿಕೊಳ್ಳುವುದು ಆರಂಭಗೊಳ್ಳುತ್ತದೆ.

ಸಂಶೋಧನಾ ವರದಿಯನ್ನು ಬರೆಯುವಾಗ ಹಿನ್ನೆಲೆಯ ಮಾಹಿತಿ, ಧ್ಯೇಯೋದ್ದೇಶಗಳು, ಸಮಸ್ಯೆಯ ಸ್ಪಷ್ಟ ನಿರೂಪಣೆ, ಸಾಹಿತ್ಯ ಸಮೀಕ್ಷೆ, ವ್ಯಾಪ್ತಿ, ಮಹತ್ವ ಮತ್ತು ಸಾಮಾಜಿಕ ಪ್ರಸಕ್ತತೆಗಳೆಲ್ಲವನ್ನೂ ಸ್ಪಷ್ಟವಾಗಿ ಹೇಳಬೇಕು. ಅಧ್ಯಯನದ ಕಾರ್ಯ ವಿಧಾನಗಳು ಮತ್ತು ಪೂರ್ವಕಲ್ಪನೆಗಳು ಪ್ರಮುಖವಾದ ಘಟಕಗಳೇ. ಅನ್ವೇಷಿಸಿದ ತಥ್ಯಾಂಶಗಳಾದ, ಫಲಿತಾಂಶಗಳು, ಸತ್ಯವನ್ನು ಆಧರಿಸಿದ ಅಭಿಮತಗಳಾದ ತೀರ್ಮಾನಗಳು ಮತ್ತು ಕಾರ್ಯವಾಹಿಯ ಸೂಚಿಗಳಾದ ಶಿಫಾರಸ್ಸುಗಳನ್ನೂ ವರದಿಯಲ್ಲಿ ಪ್ರಸ್ತುತ ಪಡಿಸಲಾಗುತ್ತದೆ.

ಅಧ್ಯಾಯದ ಅಥವಾ ಪ್ರಬಂಧದ ಕೊನೆಯಲ್ಲಿ ನೀಡಲಾಗುವ ಪರಾಮರ್ಶನವೇ ದಾಖಲೀಕರಣ. ಸುಲಭವಾಗಿ ಓದಲು ಸಾಧ್ಯವಾಗುವಂತೆ ಪ್ರಸ್ತುತಪಡಿಸುವ ಒಂದು ನಿರ್ದಿಷ್ಟವಾದ ಶೈಲಿಯನ್ನು ಇಲ್ಲಿ ಅನುಸರಿಸಲಾಗುತ್ತದೆ.

## 5.9 ನಿಮ್ಮ ಪ್ರಗತಿ ಪರಿಶೀಲನೆ

**ಸೂಚನೆ: ನಿಮ್ಮ ಉತ್ತರಗಳನ್ನು ಈ ಘಟಕದಲ್ಲಿ ನೀಡಲಾಗಿರುವ ವಿವರಗಳೊಂದಿಗೆ ಹೋಲಿಸಿ.**

1. ಸಂಶೋಧನಾ ವರದಿಯೊಂದನ್ನು ಬರೆಯುವಾಗ ಗಮನಿಸಬೇಕಾದ ಬಹಳ ಮುಖ್ಯವಾದ ಅಂಶಗಳು ಯಾವುವು? ವಿವರಿಸಿ.
2. ಸಂಶೋಧನಾ ವರದಿಯನ್ನು ಬರೆಯುವ ಮುನ್ನ ಯಾವ ಅಂಶಗಳನ್ನು ನೀವು ಪರಿಗಣಿಸುತ್ತೀರಿ? ವಿವರಿಸಿ.
3. ಸಂಶೋಧನೆಯಲ್ಲಿ ವಿಷಯವು ರೀತಿಗಿಂತ ಮುಖ್ಯವೇ? ಚರ್ಚಿಸಿ.
4. ಸಂಶೋಧನಾ ವರದಿಯನ್ನು ಬರೆಯುವಲ್ಲಿನ ಏಳು ಹಂತಗಳನ್ನು ಸಂಕ್ಷಿಪ್ತವಾಗಿ ವಿವರಿಸಿ.
5. ಪೂರ್ವಕಲ್ಪನೆ ಎಂದರೇನು? ಸಂಶೋಧನಾ ಯೋಜನೆಯೊಂದರಲ್ಲಿ ಅದಕ್ಕಿರುವ ಪ್ರಾಮುಖ್ಯತೆಯನ್ನು ಚರ್ಚಿಸಿ.
6. ಸಮಂಜಸತೆ ಮತ್ತು ವಿಶ್ವಾಸಾರ್ಹತೆ, ಎಂದರೇನು?
7. ಸಂಶೋಧನೆಯಲ್ಲಿ ಬಳಸಲಾಗುವ ಸಂಖ್ಯಾಶಾಸ್ತ್ರೀಯವಾದ 'ಪ್ರಾಮುಖ್ಯತೆಯ ಪರೀಕ್ಷೆ'ಗಳನ್ನು ಕುರಿತು ಟಿಪ್ಪಣಿ ಬರೆಯಿರಿ.

## 5.10 ಹೆಚ್ಚಿನ ಓದಿಗಾಗಿ


1. Honp and Pearsal, Reporting Technical Information, The Glencoe Press - Beverley Hills, Calif, 1968.
2. Ostorm, Better Paragraphs, Harper & Row London, 1978.
3. Strunk and White, The Elements of Style, Mc Millan London, 1979.
4. Vila Nilam, More Effective Communication. A manual for Professionals, Sage Publications, New Delhi, 2000.


ಬರಹ: ತೇಜಸ್ವಿ ನವಿಲೂರ್

# ಘಟಕ 1 ಮಾಧ್ಯಮ ಮತ್ತು ಮಹಿಳೆ

ರಚನೆ

1.0 ಉದ್ದೇಶಗಳು

1.1 ಪ್ರಸ್ತಾವನೆ

1.2 ಭಾರತದಲ್ಲಿ ಮಹಿಳೆಯರ ಆರ್ಥಿಕ ಹಾಗು ಸಾಂಸ್ಕೃತಿಕ ಹಿನ್ನೆಲೆ

1.3 ಮಾಧ್ಯಮ ಹಾಗೂ ಮಹಿಳೆಯ ನಡುವಿನ ಸಂಬಂಧಗಳು

1.4 ಮಾಧ್ಯಮದಲ್ಲಿ ಮಹಿಳೆಯರ ಚಿತ್ರಣ

1.5 ಮಾಧ್ಯಮದಲ್ಲಿ ಮಹಿಳೆಯರಿಗೆ ಉದ್ಯೋಗಾವಕಾಶಗಳು

1.6 ಮಹಿಳೆಯ ಸಬಲೀಕರಣಕ್ಕಾಗಿ ಮಾಧ್ಯಮ ತಂತ್ರಗಳು

1.7 ಸಾರಾಂಶ

1.8 ನಿಮ್ಮ ಪ್ರಗತಿ ಪರಿಶೀಲನೆ

1.9 ಹೆಚ್ಚಿನ ಓದಿಗಾಗಿ

## 1.0 ಉದ್ದೇಶಗಳು

ಮಾಧ್ಯಮ ಗ್ರಾಹಕರಲ್ಲಿ ಒಂದು ಗಮನಾರ್ಹ ಪಾಲನ್ನು ಮಹಿಳಾ ಶ್ರೋತೃಗಣ ಆಕ್ರಮಿಸಿಕೊಳ್ಳುತ್ತದೆ. ಕೇವಲ ಲಾಭಗಳಿಕೆಯನ್ನೇ ಧ್ಯೇಯವಾಗಿಟ್ಟುಕೊಂಡ ಮಾಧ್ಯಮ ಸಂಸ್ಥೆಗಳು ತಮ್ಮ ಮಾಧ್ಯಮ ವಸ್ತು ವಿಷಯ ಸಮರ್ಪಣೆಯನ್ನು ಮಹಿಳೆಯರನ್ನು ಗಮನದಲ್ಲಿಟ್ಟುಕೊಂಡೇ ಮಾಡುತ್ತವೆ ಹಾಗು ತೀರ್ಮಾನಗಳನ್ನು ತೆಗೆದುಕೊಳ್ಳುತ್ತವೆ. ಮಹಿಳಾ ಸಮುದಾಯಕ್ಕೆ ಸಂಬಂಧಿಸಿದ ಹಲವಾರು ವಿಷಯ, ವಿಚಾರಗಳನ್ನು ಮಾಧ್ಯಮವೂ ಸೇರಿದಂತೆ, ಇಡೀ ಸಮಾಜ ತುರ್ತು, ಅತ್ಯಗತ್ಯ ಎಂದು ಭಾವಿಸುವುದೇ ಇಲ್ಲ. ಪ್ರಸ್ತುತ ಘಟಕವನ್ನು ಮಹಿಳಾ ವಿಚಾರಗಳ ಸ್ವರೂಪ ಹಾಗು ಮಹಿಳಾ ಸಬಲೀಕರಣವನ್ನು ಸಾಧಿಸಲು ಸಮೂಹ ಮಾಧ್ಯಮಗಳ ಪಾತ್ರವನ್ನು ಪರಿಚಯಿಸಲು ಅನುವಾಗುವಂತೆ ಯೋಜಿಸಲಾಗಿದೆ. ಈ ಘಟಕದ ಅಧ್ಯಯನದ ನಂತರ ನಿಮಗೆ ಈ ಕೆಳಕಂಡ ಅಂಶಗಳು ತಿಳಿಯುತ್ತವೆ.

* ಭಾರತದಲ್ಲಿ ಮಹಿಳೆಯರ ಆರ್ಥಿಕ ಹಾಗು ಸಾಮಾಜಿಕ ಸ್ಥಿತಿಗತಿ
* ಮಾಧ್ಯಮ ಹಾಗು ಮಹಿಳೆಯರ ನಡುವಿನ ಸಂಬಂಧ
* ಮಾಧ್ಯಮಗಳಲ್ಲಿ ಮಹಿಳೆಯರ ಚಿತ್ರಣ, ಮತ್ತು
* ಮಹಿಳಾ ಅಭಿವೃದ್ಧಿಯಲ್ಲಿ ಮಾಧ್ಯಮ ತಂತ್ರಗಾರಿಕೆ.

## 1.1 ಪ್ರಸ್ತಾವನೆ

ಈ ಘಟಕದಲ್ಲಿ ನಾವು ಮಹಿಳಾ ಏಳಿಗೆಯಲ್ಲಿ ಮಾಧ್ಯಮಗಳ ಪಾತ್ರವನ್ನು ಅರ್ಥ ಮಾಡಿಕೊಳ್ಳಲು ಮಹಿಳೆ ಹಾಗು ಮಾಧ್ಯಮ ವಿಷಯಗಳೆರಡನ್ನೂ ಪ್ರತ್ಯೇಕವಾಗಿ ಬೇರೆ ಬೇರೆ ಸ್ತರಗಳಲ್ಲಿ ಅರ್ಥ ಮಾಡಿಕೊಳ್ಳುವ ಪ್ರಯತ್ನ ಮಾಡಬೇಕಾಗುತ್ತದೆ. ಮೊದಲಿಗೆ ಮಹಿಳೆಯ ಸಾಮಾಜಿಕ ಹಾಗು ಆರ್ಥಿಕ ಸ್ಥಿತಿಗತಿಗಳ ಬಗ್ಗೆ ಗಮನಹರಿಸಿ, ಸಮಾಜದಲ್ಲಿ ಈ ಅಂಶಗಳು ಹೇಗೆ ಮಹಿಳೆಯ ಶ್ರೇಯೋಭಿವೃದ್ಧಿಗೆ ಮಾರಕವಾಗುತ್ತಿವೆ ಎಂಬುದನ್ನು ಅರಿತುಕೊಳ್ಳುವ ಪ್ರಯತ್ನ ಮಾಡೋಣ. ಆ ನಂತರ ಸಮಾಜವೊಂದರಲ್ಲಿ ಮಹಿಳೆ. ಸ್ಥಾನಮಾನಗಳನ್ನು ಪ್ರತಿಬಿಂಬಿಸುವ ಮಾಧ್ಯಮಗಳಲ್ಲಿನ ಮಹಿಳಾ ಚಿತ್ರಣವನ್ನು ವಿಶ್ಲೇಷಿಸುವ ಪ್ರಯತ್ನವನ್ನೂ ಕೂಡ ಮಾಡೋಣ. ನಂತರದ ಸ್ತರದ ಅಧ್ಯಯನವೆಂದರೆ ಮಾಧ್ಯಮಗಳಲ್ಲಿ ಮಹಿಳೆಯರ ಕಾರ್ಯಚಟುವಟಿಕೆಗಳು ಹಾಗು ಪಾಲ್ಗೊಳ್ಳುವಿಕೆಗೆ ಇರುವ ಅವಕಾಶಗಳನ್ನು ಗುರುತಿಸಿ, ಮಾಧ್ಯಮ ತಂತ್ರಗಾರಿಕೆಗಳ ಮುಖಾಂತರ ಮಹಿಳಾ ಅಭಿವೃದ್ಧಿಗೆ ಪೂರಕವಾಗುವ ಅಂಶಗಳತ್ತ ಗಮನ ಹರಿಸೋಣ.

## 1.4 ಮಹಿಳೆಯರ ಆರ್ಥಿಕ ಹಾಗು ಸಾಂಸ್ಕೃತಿಕ ಹಿನ್ನೆಲೆ

ಪ್ರಸಕ್ತ ಸಾಮಾಜಿಕ ಪರಿಸ್ಥಿತಿಗಳಲ್ಲಿ ಮಹಿಳೆಯ ಸ್ಥಾನಮಾನವನ್ನು ಅವಲೋಕಿಸಿದಾಗ ಅನೇಕ ಸಾಮಾಜಿಕ ನಿರುಪೇರುಗಳಿರುವುದನ್ನು ನಾವು ಗುರುತಿಸಬಹುದು. ದೇಶದುದ್ದಗಲಕ್ಕೂ ನೆಲೆಗೊಂಡಿರುವ ವಿಭಿನ್ನ ಸಾಂಸ್ಕೃತಿಕ ಪರಿಸರಗಳೂ ಕೂಡ ಮಹಿಳೆಯನ್ನು ಬೌದ್ಧಿಕವಾಗಿ ಹಾಗು ದೈಹಿಕವಾಗಿ ಕೃಶಳೆಂಬ ಭಾವನೆಯನ್ನು ಸ್ಥಿರಗೊಳಿಸಿವೆ. ಈ ಹಿನ್ನಲೆಯಲ್ಲಿ ಮಹಿಳೆ ಕೈಗೊಳ್ಳುವ ಪ್ರತಿಯೊಂದು ಕಾರ್ಯಚಟುವಟಿಕೆಯೂ ಕುಟುಂಬದ ಒಳಿತಿಗಾಗಿಯೇ ಹೊರತು ವೈಯಕ್ತಿಕ ಸಾಧನೆ ಸಮಾಧಾನಕ್ಕಲ್ಲ ಮತ್ತು ಈ ನಿಟ್ಟಿನಲ್ಲಿ ಕುಟುಂಬಕ್ಕೆ ಯಾವುದೇ ರೀತಿಯ ಹೊರೆಯಾಗುವುದು ಸಾಧ್ಯವಾಗದು ಎಂಬಂತಹ ದಬ್ಬಾಳಿಕೆ, ಶೋಷಣಾ ಮನೋಭಾವದ ಸಾಮಾಜಿಕ ಅನಿಸಿಕೆಗಳು ಸಮಾಜದಲ್ಲಿ ಭದ್ರವಾಗಿ ಬೇರೂರಿವೆ.

ಆದರೆ ನಿಧಾನವಾಗಿಯಾದರೂ ಪರಿಸ್ಥಿತಿ ಬದಲಾಗುತ್ತಿದೆ. ಇತಿಹಾಸದ ಪುಟಗಳಲ್ಲಿ ಹಿಂದೆಂದೂ ಕಾಣದಂತಹ ಅನೇಕ ಬದಲಾವಣೆಗಳು ಕಂಡುಬರುತ್ತವೆ. ಶೈಕ್ಷಣಿಕವಾಗಿ, ಸಾಮಾಜಿಕವಾಗಿ ಹಾಗು ತನ್ನ ಮುಂದೆ ಬರುತ್ತಿರುವ ಕೆಲವೇ ಅವಕಾಶಗಳನ್ನು ಸಮರ್ಥವಾಗಿ ಬಳಸಿಕೊಂಡು ಮಹಿಳೆ ಜೀವನದ ಎಲ್ಲ ಕಾರ್ಯಕ್ಷೇತ್ರಗಳಲ್ಲಿ ತನ್ನನ್ನು ತಾನು ಗುರುತಿಸಿಕೊಳ್ಳುತ್ತಿದ್ದಾಳೆ, ಅಂತೆಯೇ ಸುಭದ್ರ ನೆಲೆ ಕಂಡುಕೊಳ್ಳುತ್ತಿದ್ದಾಳೆ.

ಬದಲಾದ ಪರಿಸ್ಥಿತಿಗಳಲ್ಲಿ ಮಹಿಳೆ ಪುರುಷ ದೃಷ್ಟಿಕೋನದ ಜ್ಞಾನ ಮತ್ತು ವಿಜ್ಞಾನಗಳಿಗೆ ಸವಾಲು ಒಡ್ಡುತ್ತಿದ್ದಾಳೆ, ಧರ್ಮವನ್ನು ಅರ್ಥೈಸುತ್ತಿದ್ದಾಳೆ, ದೌರ್ಜನ್ಯ ದಬ್ಬಾಳಿಕೆಗಳನ್ನು ಖಂಡಿಸುತ್ತಿದ್ದಾಳೆ, ಅಸಮಾನತೆ ಹಾಗು ಲಿಂಗಭೇಧಗಳನ್ನು ಹಿಂದೆಂದೂ ಕಾಣದ ರೀತಿಯಲ್ಲಿ ಒಕ್ಕೊರಲಿನಿಂದ ಪ್ರತಿಭಟಿಸುತ್ತಿದ್ದಾಳೆ.

ಜಾಗತಿಕ ಮಟ್ಟದಲ್ಲಿ ಈ ರೀತಿಯಾದ ತಿಳುವಳಿಕೆ, ಬೆಳವಣಿಗೆಗಳು ಹೆಚ್ಚುತ್ತಿದ್ದರೂ, ಭಾರತದಂತಹ ಸಂಕೀರ್ಣ ಸಂಸ್ಕೃತಿಯ ದೇಶದಲ್ಲಿ ಶತಮಾನಗಳ ಸಾಂಪ್ರದಾಯಿಕ ನಂಬುಗೆಗಳು, ಪುರುಷ ಪ್ರಧಾನ ಜೀವನ ಶೈಲಿಯೂ ಇನ್ನೂ ಹಾಸುಹೊಕ್ಕಾಗಿವೆ. ಇದಕ್ಕಿರುವ ಪ್ರಮುಖ ಕಾರಣವೆಂದರೆ ಮಹಿಳೆಯ ಕೈಗೆಟುಕದ ಪ್ರಾಥಮಿಕ ಶಿಕ್ಷಣ. ಕಳೆದ ಒಂದು ದಶಕದ ಅವಧಿಯನ್ನು ಅವಲೋಕಿಸಿದರೆ ದೇಶದಲ್ಲಿ ಅನೇಕ ಮಹಿಳಾ ಹಕ್ಕುಗಳು ತುಳಿತಕ್ಕೊಳಗಾಗಿರುವುದು ಕಂಡುಬರುತ್ತದೆ. ಅದೇ ರೀತಿ ಮಹಿಳಾ ಶೋಷಣೆ ಅನೇಕ ಸ್ತರಗಳಲ್ಲಿ ನಿರಂತರವಾಗಿ ಸಾಗುತ್ತಿರುವುದರಿಂದ ಒಟ್ಟಾರೆ ಜೀವನ ಮಟ್ಟದಲ್ಲಿಯೂ ಭಾರಿ ಕುಸಿತ ಕಂಡು ಬಂದಿದೆ. ಇದರಲ್ಲಿ ಕೇವಲ ಸಾಮಾಜಿಕ ಮತ್ತು ಆರ್ಥಿಕ ಹಕ್ಕುಗಳಲ್ಲದೆ ನಾಗರೀಕ ಹಾಗು ರಾಜಕೀಯ ಹಕ್ಕುಗಳನ್ನು ಸಹ ಉಲ್ಲಂಘಿಸಲಾಗುತ್ತಿದೆ.

ಈ ರೀತಿಯಾದ ಮಹಿಳಾ ಹಕ್ಕು ಉಲ್ಲಂಘನೆ ಕೇವಲ ಭಾರತದಲ್ಲಷ್ಟೇ ಅಲ್ಲ ಪ್ರಪಂಚದ ಎಲ್ಲ ರಾಷ್ಟ್ರಗಳಲ್ಲಿ, ಎಲ್ಲ ಸಂಸ್ಕೃತಿಗಳಲ್ಲಿ ನೆಲೆಯೂರಿರುವುದನ್ನು ಕಾಣಬಹುದು. ಬಹುತೇಕ ಎಲ್ಲ ಕ್ಷೇತ್ರಗಳಲ್ಲಿ ಅವಕಾಶ ವಂಚಿತಳಾಗುತ್ತಿರುವ ಮಹಿಳೆ, ಆರೋಗ್ಯ ಸೇವೆ, ವೃತ್ತಿ ಶಿಕ್ಷಣ, ಹೊಸ ತಂತ್ರಜ್ಞಾನ, ಆಸ್ತಿಪಾಸ್ತಿ ಹಾಗು ನೆಲೆಗಳನ್ನು ಕಂಡುಕೊಳ್ಳಲು ಹೋರಾಡಬೇಕಾದ ಪರಿಸ್ಥಿತಿಯಲ್ಲಿ ಜೀವನ ಕಳೆಯುತ್ತಿದ್ದಾಳೆ.

ಭಾರತೀಯ ಮಹಿಳೆ ಪ್ರಗತಿಯತ್ತ ದಾಪುಗಾಲಿಡಲು, ಸಮಾನತೆಯ ಫಲಶೃತಿಗಳನ್ನು ಕಂಡುಕೊಳ್ಳಲು ಸಾಧ್ಯವಾಗದಂತಹ ಸ್ಥಿತಿಗತಿಗೆ ಕಾರಣವಾದಂತಹ ಅಂಶಗಳು ಅನೇಕ ಹಾಗು ಸಂಕೀರ್ಣತೆಯಿಂದ ಕೂಡಿವೆ. ಅವುಗಳಲ್ಲಿ ಮುಖ್ಯವಾದಂತಹ ಕೆಲವನ್ನು ಈ ಘಟಕದಲ್ಲಿ ಅರಿಯುವ ಪ್ರಯತ್ನ ಮಾಡೋಣ. ನಮ್ಮ ದೇಶದಲ್ಲಿ ಹಿಂದೆ ಇದ್ದ ಹಾಗು ಈಗಿರುವ ಪರಿಸ್ಥಿತಿಗಳನ್ನು ಈ ಕೆಳಕಂಡ ಅಂಕಿ ಅಂಶಗಳು ಸಮರ್ಥವಾಗಿ ಪ್ರತಿಬಿಂಬಿಸುತ್ತವೆ.

ಶಿಕ್ಷಣ: ಸ್ವಾತಂತ್ರ್ಯಗಳಿಕೆಯೊಂದಿಗೆ ಸ್ವಶಕ್ತಿಯ ಮೇಲೆ ನೆಲೆಗೊಳ್ಳುವ ಅಗತ್ಯತೆಯಿಂದಾಗಿ ಶಿಕ್ಷಣಕ್ಕೆ ಭಾರಿ ಪ್ರಾಮುಖ್ಯತೆ ದೊರೆತು, 1951ರಲ್ಲಿ ಕೇವಲ ಶೇಕಡಾ 18.3ರಷ್ಟಿದ್ದ ಸಾಕ್ಷರತೆಯ ಪ್ರಮಾಣ 1991ರ ಹೊತ್ತಿಗೆ ಶೇಕಡಾ 52.2ರಷ್ಟಾಯಿತು. ಆದರೆ ಪುರುಷ ಹಾಗು ಮಹಿಳಾ ಸಾಕ್ಷರತೆಯ ಪ್ರಮಾಣದಲ್ಲಿ ಭಾರಿ ಪ್ರಮಾಣದ ವ್ಯತ್ಯಾಸಗಳಿರುವುದನ್ನು ಗುರುತಿಸಬಹುದು. ಈ ಅವಧಿಯಲ್ಲಿ ಪುರುಷರ ಅಕ್ಷರತೆಯಲ್ಲಿ ನಿರಂತರವಾಗಿ ಏರಿಕೆ ಕಂಡುಬಂದಿದ್ದು ಈ ಪ್ರಮಾಣ ಶೇಕಡಾ 64.1 ಇದ್ದರೆ ಮಹಿಳಾ ಸಾಕ್ಷರತೆಯ ಪ್ರಮಾಣ ಕೇವಲ ಶೇಕಡಾ 39.3ರಷ್ಟಿದೆ. ಪ್ರಾರಂಭದಿಂದಲೂ ಶೇಕಡಾ 25ರಷ್ಟು ಭಾರಿ ಪ್ರಮಾಣದ ವ್ಯತ್ಯಾಸ ಉಳಿದುಕೊಂಡು ಬಂದಿದೆ. ಪಂಚವಾರ್ಷಿಕ ಯೋಜನೆಗಳು ಅನುಷ್ಠಾನಗೊಳಿಸಲ್ಪಡುತ್ತಿದ್ದರೂ ಸಾರ್ವಜನಿಕ ಶಿಕ್ಷಣಕ್ಕೆ ವ್ಯಯಿಸಲಾಗುತ್ತಿರುವ ಹಣದ ಪ್ರಮಾಣದಲ್ಲಿ ಇಳಿಕೆ ಕಂಡುಬರುತ್ತಿದೆ. ಸರ್ಕಾರಗಳು ಸಾರ್ವತ್ರಿಕ ಪ್ರಾಥಮಿಕ ಶಿಕ್ಷಣಕ್ಕೆ ಒತ್ತು ನೀಡಿ ತಮ್ಮ ಜವಾಬ್ದಾರಿಗಳನ್ನು ಮೆರೆಯುತ್ತಿದ್ದರೂ, ನಕಾರಾತ್ಮಕ ಸಾಂಸ್ಕೃತಿಕ ನಂಬುಗೆಗಳನ್ನು ಹೋಗಲಾಡಿಸುವ ನಿಟ್ಟಿನಲ್ಲಿ ದಯನೀಯ ಸೋಲನ್ನು ಅನುಭವಿಸಿದ್ದರಿಂದ ಅಥವಾ ಪ್ರಯತ್ನಗಳನ್ನು ಮಾಡದ್ದರಿಂದ ಉದ್ದೇಶಿತ ಗುರಿ ತಲುಪಲು ಅವುಗಳಿಗೆ ಸಾಧ್ಯವಾಗಿಲ್ಲ.

ಮಹಿಳಾ ಶಿಕ್ಷಣದ ಬಗ್ಗೆ ತಡವಾಗಿಯಾದರೂ ಸಾಮಾಜಿಕ ದೃಷ್ಟಿಕೋನ ಬದಲಾಗುತ್ತಿರುವ ಹಿನ್ನೆಲೆಯಲ್ಲಿ ಹೆಚ್ಚು ಹೆಚ್ಚು ಹೆಣ್ಣು ಮಕ್ಕಳನ್ನು ಶಿಕ್ಷಣದ ಪರಿಧಿಗೆ ಅನೇಕ ಸಾಮಾಜಿಕ ಅಭಿವೃದ್ಧಿ ಹಾಗೂ ಕಲ್ಯಾಣ ಕಾರ್ಯಕ್ರಮಗಳ ಮುಖಾಂತರ ಸೇರಿಸಿಕೊಳ್ಳಲಾಗುತ್ತಿದೆ. ಆದರೆ ನಾವು ಗಮನಿಸಲೇಬೇಕಾದ ಅಂಶವೆಂದರೆ ಹೆಚ್ಚು ಹೆಚ್ಚು ಜನರನ್ನು ಸಾಕ್ಷರರನ್ನಾಗಿಸುವುದಲ್ಲ. ಬದಲಾಗಿ ಅವರನ್ನು ಶಿಕ್ಷಿತರನ್ನಾಗಿಸುವುದು, ವಿದ್ಯಾವಂತರನ್ನಾಗಿಸುವುದು. ಕೇವಲ "ಸಹಿ ಮಾಡಲು ಕಲಿಯುವ ಪ್ರತಿಯೊಬ್ಬರೂ ಸಾಕ್ಷರರು" ಎನ್ನುವ ಘೋಷಣೆ ಸತ್ಯವಿಲ್ಲದ್ದು. ಹಾಗೆಯೇ, ಮಹಿಳಾ ಶಿಕ್ಷಣ ಪರಿಣಾಮಕಾರಿಯಾಗಿರಬೇಕಾದರೆ, ಪ್ರಸಕ್ತ ಶಿಕ್ಷಣ ವ್ಯವಸ್ಥೆಯಲ್ಲಿ ಹಾಗೂ ಕಾರ್ಯಶೈಲಿಯಲ್ಲಿ ಕ್ರಾಂತಿಕಾರಕ ಬದಲಾವಣೆಗಳನ್ನು ತರಬೇಕಾಗುತ್ತದೆ.

ಕೇವಲ ಕೆಲ ಸಾವಿರ ರೂಪಾಯಿಗಳ ಧನಸಹಾಯದಿಂದ ಮಹಿಳಾ ಶಿಕ್ಷಣದಲ್ಲಿ ಪ್ರಗತಿ ಸಾಧಿಸಬಹುದೆಂಬ ಸರ್ಕಾರಿ ನಂಬುಗೆಗಳನ್ನು ಬದಿಮೇಲು ಮಾಡಿ ಹೊಸ ಪ್ರಾಯೋಗಿಕ ಮಾರ್ಗಗಳು, ಯೋಜನೆಗಳನ್ನು ಯೋಜಿಸಿ ಅನುಷ್ಠಾನಗೊಳಿಸಬೇಕಾಗುತ್ತದೆ. ಹೊಸ ಶಾಲೆಗಳನ್ನು ತೆರೆಯುವ ಅವಶ್ಯಕತೆ ಇರುವಂತೆ, ಇತರ ಪೂರಕ ಅಂಶಗಳಾದ ಶಾಲಾ ಸಾರಿಗೆ ವ್ಯವಸ್ಥೆ, ವಿದ್ಯಾರ್ಥಿ ನಿಲಯಗಳು, ಶಾಲಾ ಶೌಚಾಲಯಗಳು, ಸಮುದಾಯಗಳಲ್ಲಿ ಮಕ್ಕಳ ಪಾಲನಾ ಕೇಂದ್ರಗಳು, ಮಧ್ಯಾಹ್ನದ ಊಟದ ವ್ಯವಸ್ಥೆ, ಉಚಿತ ಪಠ್ಯಪುಸ್ತಕಗಳು, ಸಮವಸ್ತ್ರ ಇತ್ಯಾದಿಗಳನ್ನು ಸಮರ್ಪಕವಾಗಿ ಯೋಜಿಸಿ, ಕಾರ್ಯಗತಗೊಳಿಸಬೇಕಾಗುತ್ತದೆ. ಇವುಗಳಲ್ಲಿ ಕೆಲವೊಂದನ್ನು ಸರ್ಕಾರ ಅನುಷ್ಠಾನಗೊಳಿಸಿದ್ದರೂ, ಅಸಮರ್ಪಕ ಆಡಳಿತ ಹಾಗೂ ನಿರ್ವಹಣೆಯ ಕೊರತೆಯಿಂದಾಗಿ ಉದ್ದೇಶಿತ ಫಲಿತಾಂಶಗಳು ಮೂಡಿಬರುತ್ತಿಲ್ಲ. ಪ್ರಾಥಮಿಕ ಹಂತದ ಈ ಅಗತ್ಯದ ಜೊತೆಗೆ ಉನ್ನತ ಶಿಕ್ಷಣವನ್ನು ಹೆಣ್ಣು ಮಕ್ಕಳಿಗೆ ಕೈಗೆಟುಕುವಂತೆ ಮಾಡುವಲ್ಲಿ ಪ್ರಯತ್ನಗಳು ಆಗಬೇಕಾಗಿದೆ. ಅನೌಪಚಾರಿಕ ಹಾಗೂ ದೂರಶಿಕ್ಷಣ ವ್ಯವಸ್ಥೆಗಳು ಇನ್ನು ಮುಂದೆ ಭಾರಿ ಪ್ರಮಾಣದಲ್ಲಿ ಶೈಕ್ಷಣಿಕ ಅವಕಾಶಗಳನ್ನು ಜನರ ಮುಂದೆ ತೆರೆದಿಡಲಿದ್ದು ಹೆಣ್ಣು ಮಕ್ಕಳು ಅವಕಾಶಗಳನ್ನು ಸಮರ್ಥವಾಗಿ ಬಳಸಿಕೊಳ್ಳಲು ಮುಂದಾಗಬೇಕು.

ಉದ್ಯೋಗಾವಕಾಶಗಳು

ಚಿಂತನೆ ಬಯಸುವ ಇನ್ನೊಂದು ಪ್ರಮುಖ ಅಂಶವೆಂದರೆ ಮಹಿಳಾ ನಿರುದ್ಯೋಗ. ಉದ್ಯೋಗಾವಕಾಶಗಳ ಪ್ರಮಾಣ ನಗರ ಪ್ರದೇಶದ ಮಹಿಳೆಯರಲ್ಲಿ ಶೇಕಡಾ 4.7ರಷ್ಟಿದ್ದರೆ, ಗ್ರಾಮೀಣ ಪ್ರದೇಶಗಳಲ್ಲಿ ಈ ಪ್ರಮಾಣ ಕೇವಲ ಶೇಕಡಾ 0.3ರಷ್ಟಿದೆ. 20 ವರ್ಷಗಳ ಹಿಂದೆ ಶೇಕಡಾ 8ರಷ್ಟಿದ್ದ ಒಟ್ಟಾರೆ ಮಹಿಳಾ ಉದ್ಯೋಗಿಗಳ ಸಂಖ್ಯೆ ಈಗ ಶೇಕಡಾ 4ಕ್ಕಿಂತ ಕಡಿಮೆಯಾಗಿದೆ. ಈ ಅಂಕಿ ಅಂಶಗಳು ಬಹಳಷ್ಟು ಸಾರಿ ವಸ್ತುಸ್ಥಿತಿಯನ್ನು ಪ್ರತಿಬಿಂಬಿಸಿದರೂ ಅದು ಅಯ್ದ ಕೆಲವು ವೃತ್ತಿಕ್ಷೇತ್ರಗಳನ್ನು ಮಾತ್ರ ಪರಿಗಣಿಸುವ, ಆ ಮೂಲಕ ವಾಸ್ತವಾಂಶದ ಬಹಳಷ್ಟು ಭಾಗ ಹೊರಬಿದ್ದಿರುವ ಸಾಧ್ಯತೆಗಳೇ ಹೆಚ್ಚು. ಸರ್ಕಾರಗಳು ಸ್ವಯಂ ಉದ್ಯೋಗಕ್ಕೆ ಅವಕಾಶವೀಯುವಂತೆ ಮಹಿಳಾ ಕೇಂದ್ರೀಕೃತ ಪರಿಣಾಮಕಾರಿ ಯೋಜನೆಗಳನ್ನು ಆಯೋಜಿಸಲು ಈಗಿರುವ ಬಹುಸಂಖ್ಯೆಯ ಯೋಜನೆಗಳನ್ನು ಸರಿಯಾಗಿ ಅನುಷ್ಠಾನಗೊಳ್ಳುವಂತೆ ಮಾಡುವ ಅಗತ್ಯ ಹಿಂದೆಂದಿಗಿಂತಲೂ ಹೆಚ್ಚಾಗಿದೆ.

ಆರೋಗ್ಯ

ಮಹಿಳೆಯೊಬ್ಬಳ ಜೀವನ ಮಟ್ಟವನ್ನು ಬಹುಮಟ್ಟಿಗೆ ಅವಳ ಆರೋಗ್ಯದ ಸ್ಥಿತಿಗತಿಯ ಮೇಲೆಯೇ ಅಳೆಯಬಹುದು. ಭಾರತೀಯ ಮಹಿಳೆಯ ಆರೋಗ್ಯ ಸ್ಥಿತಿ ಕೇವಲ ಅವಳಿರುವ ಕುಟುಂಬದ ಸಾಮಾಜಿಕ ಮತ್ತು ಆರ್ಥಿಕ ಪರಿಸ್ಥಿತಿಯನ್ನಲ್ಲದೆ, ಸರ್ಕಾರ ಒದಗಿಸುವ ಆರೋಗ್ಯ ಸೇವೆಗಳ ಮೇಲೂ ಸಾಕಷ್ಟು ಅವಲಂಬಿತವಾಗಿರುತ್ತದೆ. ಮಹಿಳೆಯರಿಗೆ ಆರೋಗ್ಯದ ಸೇವೆಗಳನ್ನೊದಗಿಸುವ ವಿಷಯಗಳಲ್ಲಿಯೂ ಸರ್ಕಾರಗಳು ವಿಫಲವಾಗಿವೆ ಎನ್ನಬಹುದು. ಯೋಜನೆ ಅನುಷ್ಠಾನಗೊಂಡರೂ ವಿಫಲತೆಗೆ ಇರುವ ಕಾರಣಗಳು ಅನೇಕ.

1995ರಲ್ಲಿ ಸಂಯುಕ್ತ ರಾಷ್ಟ್ರಗಳ ಅಭಿವೃದ್ಧಿ ಕಾರ್ಯಕ್ರಮ (UNDP) ವರದಿಯ ಪ್ರಕಾರ ಭಾರತದ ಮಾನವ ಅಭಿವೃದ್ಧಿ ಸೂಚ್ಯಂಕ ಅತ್ಯಲ್ಪ ಪ್ರಮಾಣದ್ದಾಗಿತ್ತು, ಹಾಗೆಯೇ ತಾಯಿ ಮಕ್ಕಳ ಆರೋಗ್ಯ, ಶಿಶುಪಾಲನೆ, ವೃದ್ಧಾಪ್ಯ ಕಾಳಜಿಯಂತಹ ಪೂರಕ ವಿಷಯಗಳ, ಸೇವೆಗಳ ಗುಣಮಟ್ಟ ಹಾಗೂ ಅನುಷ್ಠಾನಗಳೂ ತೀರಾ ಹಿಂದಿರುವುದನ್ನು ಗುರುತಿಸಲಾಗಿದೆ. ನಿರಂತರವಾಗಿ ವಿರುದ್ಧ ದಿಕ್ಕಿನಲ್ಲಿ ಸಾಗುತ್ತಿರುವ ಗಂಡು ಹೆಣ್ಣುಗಳ ಅನುಪಾತ ಕೂಡ 1990 ರಲ್ಲಿ 1000/927 ರಷ್ಟಿದ್ದದ್ದು ಈಗ 1000/914 ಕ್ಕೆ ಇಳಿದಿದೆ.

ಸಾರ್ವತ್ರಿಕ ಲಸಿಕಾ ಕಾರ್ಯಕ್ರಮ ಹಾಗೂ ಸುರಕ್ಷಿತ ತಾಯ್ತನಗಳಂತಹ ಕೆಲ ಕಾರ್ಯಕ್ರಮಗಳು ಯಶಕಂಡಿದ್ದರೂ ಪ್ರಾಥಮಿಕ ಆರೋಗ್ಯ ಹಾಗೂ ಪೌಷ್ಟಿಕತೆಗಳ ನಿಟ್ಟಿನಲ್ಲಿ ನೀಡಲಾಗುತ್ತಿರುವ ಸೇವೆಗಳು ಸಮರ್ಪಕವಾಗಿಲ್ಲ. ಈ ಎಲ್ಲ ಅಂಶಗಳೂ ಮಹಿಳಾ ಅಭಿವೃದ್ಧಿಯಲ್ಲಿ ಬಹುಮುಖ್ಯ ಪಾತ್ರವಹಿಸುತ್ತವೆ ಎಂಬುದನ್ನು ಮಾಧ್ಯಮ ವಿದ್ಯಾರ್ಥಿಗಳಾದ ನೀವು ಗಮನದಲ್ಲಿಡಬೇಕು.

ಮಹಿಳಾ ಆರೋಗ್ಯದ ವಿಷಯಗಳು ಬಂದಾಗ ಕೂಡ ಸರ್ಕಾರಿ ಕಾರ್ಯಕ್ರಮಗಳಲ್ಲಿ, ಕೌಟುಂಬಿಕ ತೀರ್ಮಾನಗಳಲ್ಲಿ ಸಂಸ್ಕೃತಿಯ ಋಣಾತ್ಮಕ ಛಾಪು ಅಚ್ಚೊತ್ತಿರುವುದನ್ನು ನಾವು ಕಾಣಬಹುದು. ಬಹುಮಟ್ಟಿಗೆ ನಿಜವಾದರೂ ಮಹಿಳಾ ಆರೋಗ್ಯ ಕೇವಲ ಸುರಕ್ಷಿತ ಗರ್ಭನಿರೋಧಕಗಳನ್ನು ಹಂಚುವುದಲ್ಲ ಅಥವಾ ಮಾಹಿತಿ ಪ್ರಸರಣೆಯಲ್ಲ, ಕೇವಲ ಮಕ್ಕಳನ್ನು ಹೆರುವ ಪ್ರಕ್ರಿಯೆಯೇ ಸಂಪೂರ್ಣ ಮಹಿಳಾ ಆರೋಗ್ಯದ ವಿಷಯವನ್ನು ಪ್ರತಿಬಿಂಬಿಸುವುದಿಲ್ಲ ಎಂಬುದನ್ನು ಸರ್ಕಾರ, ಸಮಾಜ ಅರಿಯಬೇಕು.

ಗಂಡು ಮತ್ತು ಹೆಣ್ಣು ಮಕ್ಕಳ ನಡುವೆ ಕಾಣಸಿಗುವ ಪೌಷ್ಟಿಕಾಂಶಗಳ ಕೊರತೆಯಂತಹ ಅನಿಷ್ಟ ವಿಷಯಗಳನ್ನು ತೊಡೆದುಹಾಕಲು ಕುಟುಂಬ ಮಟ್ಟದಿಂದ ಹಿಡಿದು ಸಮುದಾಯ ಮಟ್ಟದಲ್ಲಿ ಪ್ರಯತ್ನಗಳಾಗಬೇಕಾಗುತ್ತದೆ. ಹಾಗೆಯೇ ಆರೋಗ್ಯ ಸೇವೆಗಳ, ಸೌಲಭ್ಯಗಳ ಪ್ರಯೋಜನ ಯಾವುದೇ ತಾರತಮ್ಯಗಳಿಲ್ಲದೆ ಮಹಿಳೆಯರಿಗೂ ಸಿಗುವಂತಾಗಬೇಕು. ಭಾರಿ ಅಂತರವಿರುವ ಪುರುಷ ಹಾಗೂ ಮಹಿಳೆಯರ ಜೀವಿತಾವಧಿ ಪ್ರಮಾಣದಲ್ಲಿಯೂ ಪ್ರಗತಿ ಕಾಣಬೇಕು. ಆಗ ಮಾತ್ರ ನಿಜವಾದ ಕಾಳಜಿ, ಫಲಿತಾಂಶಗಳು ಪ್ರತಿಬಿಂಬಿತವಾಗುತ್ತವೆ.

**ಹೆಚ್ಚುತ್ತಿರುವ ದೌರ್ಜನ್ಯ**

ಗ್ರಾಹಕ ಉಪಭೋಗತೆಯ ಆಧಾರದ ಮೇಲೆ ಬೆಳೆದು ನಿಂತಿರುವ ಆಧುನಿಕ ಜೀವನ ಶೈಲಿಯಿಂದಾಗಿ, ಮಹಿಳೆಯರು ಹಿಂದೆಂದಿಗಿಂತಲೂ ಮೃದುವಾದ ಹಾಗೂ ಸುಲಭವಾಗಿ ಬಲಿ ಬೀಳುವ ಅಂಶವಾಗಿ ಕಾಣಿಸುತ್ತಿದ್ದಾರೆ. ಮಹಿಳೆಯರ ಮೇಲಿನ ಹಿಂಸೆ ಅಥವಾ ದೌರ್ಜನ್ಯ ಮನೆಯ ನಾಲ್ಕು ಗೋಡೆಗಳನ್ನು ದಾಟಿ ಇದು ಎಲ್ಲ ಸಾರ್ವಜನಿಕ ಕ್ಷೇತ್ರಗಳಿಗೂ, ಯಾವುದೇ ಅಡೆತಡೆಯಿಲ್ಲದೆ ಕಾಲಿಟ್ಟಿದೆ. ಬಲಿಪಶುವಾಗುವ ಮಹಿಳೆಯರು ಯಾವುದೇ ವಯಸ್ಸಿನ ನಿರ್ಬಂಧಗಳಿಲ್ಲದೆ, ದಿನೇ ದಿನೇ ಕ್ರೌರ್ಯ ಹಾಗೂ ಮನೋವಿಕೃತಿಗಳಂತಹ ನಡವಳಿಕೆಗಳಿಗೆ ಬಲಿ ಬೀಳುತ್ತಿದ್ದಾರೆ. ಮಕ್ಕಳ ಮೇಲಿನ ಅತ್ಯಾಚಾರ, ವೇಶ್ಯಾವಾಟಿಕೆ, ಹೆಣ್ಣು ಮಕ್ಕಳ ಅಪಹರಣ ಹಾಗೂ ಮಾರಾಟ, ಅತ್ಯಾಚಾರ, ಲೈಂಗಿಕ ಕಿರುಕುಳ, ಭ್ರೂಣ ಹತ್ಯೆ, ಶಿಶುಮರಣ, ಹಲ್ಲೆ, ವರದಕ್ಷಿಣೆ ಹತ್ಯೆ, ಅವಮಾನಕರ ನಡವಳಿಕೆಗಳಂತಹವು ನಿರಂತರವಾಗಿ ಏರುತ್ತಿವೆ. ಮಾಧ್ಯಮಗಳ ಮುಖಾಂತರ ಸಮರ್ಪಿಸಲ್ಪಡುವ ಇಂತಹ ವಿಷಯಗಳು ತಪ್ಪು ಮಾಡುವವರಿಗೆ, ಅಪರಾಧಿಗಳಿಗೆ ಎಚ್ಚರಿಕೆಯ ಘಂಟೆಯನ್ನು ಬಾರಿಸದೆ ಅದಕ್ಕೆ ತದ್ವಿರುದ್ಧವಾಗಿ ಅಪರಾಧ ಮನೋವೃತ್ತಿ ಸಮಾಜದಲ್ಲಿ ಬೇರೂರುತ್ತಿರುವುದು ಅತ್ಯಂತ ಕಳವಳಕಾರಿ ವಿಷಯ. ಕೇವಲ ಕ್ಷುಲ್ಲಕ ಕಾರಣಗಳಿಗೆ ಮಹಿಳೆಯ ಮೇಲೆ ಮುಗಿಬೀಳುವ ಪ್ರವೃತ್ತಿ ಆಧುನಿಕ ಸಮಾಜದಲ್ಲಿ ತ್ವರಿತಗತಿಯಲ್ಲಿ ಬೇರೂರುತ್ತಿದೆ.

**ಕಾಯ್ದೆ ಹಾಗೂ ನಿರ್ಬಂಧಗಳು**

ಮಹಿಳಾ ಪ್ರಗತಿಯ ಬಗ್ಗೆ ಬೆಳೆದ ತಿಳುವಳಿಕೆ ಹಾಗೂ ಕಳಕಳಿಯಿಂದಾಗಿ ಸಮಗ್ರ ಮಹಿಳಾ ಅಭಿವೃದ್ಧಿಗೆ ಅನುವಾಗುವಂತೆ ಅನೇಕ ಕಾಯ್ದೆ ಕಾನೂನುಗಳು, ನೀತಿ ನಿಯಮಾವಳಿಗಳನ್ನು ತರಲಾಯಿತು. ಆದರೆ ಅವುಗಳ ಅನುಷ್ಠಾನ ಪ್ರಕ್ರಿಯೆಯನ್ನು ಗಮನಿಸಿದಾಗ, ಮಹಿಳೆಯರು ಅತ್ಯಂತ ನೋವಿನ ಅನುಭವವನ್ನು ದಾಟಬೇಕಾದ ಅನಿವಾರ್ಯತೆಯಿರುವುದು ಕಂಡು ಬರುತ್ತದೆ. ಎಲ್ಲ ರೀತಿಯ ದೌರ್ಜನ್ಯಗಳಿಗೆ ಒಳಗಾಗುವ ಮಹಿಳೆಗೆ ಕಾಯ್ದೆ ಕಾನೂನುಗಳಿಂದ ರಕ್ಷಣೆ ದೊರೆಯದಾಗಿ ಒಂದು ರೀತಿಯ ಉದಾಸೀನತೆ ಮಿಶ್ರಿತವಾದ ತಿರಸ್ಕಾರ ಭಾವ ಮಾಡುವುದು ಅತ್ಯಂತ ಸಹಜ. ನ್ಯಾಯಾಂಗ ಪಕ್ಷಪಾತ, ಅಶಕ್ತ ಕಾನೂನುಗಳು, ಶಿಕ್ಷೆ ವಿಧಿಸುವಲ್ಲಿ ಸಫಲವಾಗದ ಕಾನೂನು ಕ್ರಮಗಳು, ಮಹಿಳೆಯ ಮೇಲಿನ ಎಲ್ಲ ರೀತಿಯ ದೌರ್ಜನ್ಯಗಳನ್ನು ಹೆಚ್ಚುವಂತೆ ಮಾಡಿದೆ. ಭಾರತದಲ್ಲಿ ಮಹಿಳೆಯರನ್ನು ಮಾರಕ ಹಿತಾಸಕ್ತಿಗಳಿಂದ ರಕ್ಷಿಸುವ ಸಲುವಾಗಿ ಅನೇಕ ಕಾಯ್ದೆ ಕಾನೂನುಗಳನ್ನು ತಂದಿದ್ದರೂ, ಅವುಗಳಲ್ಲಿ ಬಹುತೇಕ ನಿಯಮಾವಳಿಗಳು ಪರಿಪೂರ್ಣವಾಗಿಲ್ಲದೆ, ಲೋಪದೋಷಗಳಿಂದ ಕೂಡಿವೆ. ಇವುಗಳನ್ನು ಸರಿಪಡಿಸುವ ನಿಟ್ಟಿನಲ್ಲಿ ಅನೇಕ ಮಹಿಳಾ ಪರ ಸಂಘಟನೆಗಳು ಹೋರಾಟ ನಡೆಸಿ, ಅತ್ಯಾಚಾರದಂತಹ ಅಪರಾಧಿ ಕೃತ್ಯಗಳಿಗೆ ಸಂಬಂಧಿಸಿದ ಕಾನೂನು, ಅಪರಾಧ ನೀತಿಸಂಹಿತೆ, ಭಾರತೀಯ ಸಾಕ್ಷ್ಯ ಕಾಯ್ದೆ, ವೇಶ್ಯಾವಾಟಿಕೆ ಮುಂತಾದವುಗಳಿಗೆ ಸಂಬಂಧಿಸಿದ ಕಾನೂನುಗಳಿಗೆ ಬದಲಾವಣೆ ತರುವ, ಬಿಗಿಗೊಳಿಸುವ ಪ್ರಯತ್ನಗಳನ್ನು ಇತ್ತೀಚಿಗೆ ಮಾಡಿವೆ. ಈ ನಿಟ್ಟಿನಲ್ಲಿ ಇನ್ನೂ ಆಗಬೇಕಾಗಿರುವುದು ಬೇಕಾದಷ್ಟಿದ್ದು, ಈ ಸಂಘಟನೆಗಳು ಬಯಸುವಂತಹ ಬದಲಾವಣೆಗಳನ್ನು ಸಂಪೂರ್ಣವಾಗಿ ತರಲು ಸಾಧ್ಯವಾಗಿಲ್ಲ.

ಅದೇ ರೀತಿ ವೈಯಕ್ತಿಕ ಕಾನೂನು ಹಾಗೂ ಪುನರ್‌ರಚನೆಯಂತಹ ವಿಷಯಗಳು ತೀವ್ರ ಚರ್ಚೆಗೆ ಗ್ರಾಸವಾಗಿದ್ದು, ಈ ಸೂಕ್ಷ್ಮ ವಿಷಯಗಳನ್ನು ಪರಿಪಕ್ವತೆಯಿಂದ ಎದುರಿಸುವ ಅಗತ್ಯತೆ ಕಂಡುಬರುತ್ತಿದೆ. ಉದ್ಯೋಗಸ್ಥ ಮಹಿಳೆಯರ ಕಾನೂನು ಬದ್ಧಹಕ್ಕುಗಳನ್ನು ಸಂರಕ್ಷಿಸುವಾದ ಉದ್ಯೋಗಿ ಹಾಗೂ ಮಹಿಳೆ ಈ ಎರಡೂ ನಿಟ್ಟಿನಲ್ಲಿ ರಕ್ಷಣೆ ಒದಗಿಸುವುದು ಅನಿವಾರ್ಯವಾಗುತ್ತದೆ. ಅಲ್ಲದೆ, ಪ್ರಸ್ತುತ ಪರಿಸ್ಥಿತಿಯಲ್ಲಿ ಅತ್ಯಗತ್ಯವಾಗಿರುವ ಅಂಶವೆಂದರೆ, ಈ ಎಲ್ಲ ಕಾಯ್ದೆ ಕಾನೂನು, ನೀತಿ ನಿಯಮಾವಳಿಗಳ ಪರಿಣಾಮಕಾರಿ ಅನುಷ್ಠಾನ.

ಭಾರತದಲ್ಲಿ ಕಳೆದೊಂದು ದಶಕದ ಅವಧಿಯಲ್ಲಿ ಮಹಿಳಾ ಸಮುದಾಯದ ಮುಂದೆ ಅನೇಕ ಸವಾಲುಗಳು ಎದುರಾಗಿರುವುದನ್ನು ಗುರುತಿಸಬಹುದು. ಭಾರತದಲ್ಲಿರುವ ಅನಕ್ಷರಸ್ಥರ, ಅವಿದ್ಯಾವಂತರ, ಜ್ಞಾನ-ಕುಶಲತೆಗಳಿಲ್ಲದ ಹಾಗೂ ಬಡ ಜನರಲ್ಲಿ ಮಹಿಳೆಯರೇ ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ರಾಷ್ಟ್ರೀಯ ಅಭಿವೃದ್ಧಿಗೆ ಬೆನ್ನೆಲುಬಾಗಿರಬೇಕಾದ ಮಹಿಳೆ ಎಲ್ಲ ರೀತಿಯಿಂದಲೂ ನಲುಗಿಹೋಗುತ್ತಿದ್ದಾಳೆ. ಶಿಕ್ಷಣ, ಆರೋಗ್ಯ, ಪೌಷ್ಟಿಕತೆ, ಸಮುದಾಯ ಹಾಗೂ ಕುಟುಂಬ ಕಲ್ಯಾಣ ಮುಂತಾದ ಕ್ಷೇತ್ರಗಳಲ್ಲಿ ಮಹಿಳೆಯ ಸಕ್ರಿಯ ಸಹಯೋಗವಿಲ್ಲದೆ ಯಾವುದೇ ಅಭಿವೃದ್ಧಿ ಕಾರ್ಯಗಳು ಯಶಕಾಣಲಾರವು ಎಂಬ ಪ್ರಾಥಮಿಕ ಜ್ಞಾನ ನಮ್ಮ ಧೋರಣೆ ನಿರೂಪಕರಿಗೆ ಇಲ್ಲದಿರುವುದು ಅತ್ಯಂತ ನೋವಿನ ಸಂಗತಿ. ಸರ್ವಾಂಗೀಣ ಮಾನವ ಸಂಪನ್ಮೂಲ ಅಭಿವೃದ್ಧಿಗೆ ಹೆಣ್ಣು ಮಕ್ಕಳು ಹಾಗೂ ಮಹಿಳೆಯರಿಗೆ ಮಾಹಿತಿ ಜ್ಞಾನ ಹಾಗು ಕುಶಲತೆಗಳನ್ನು ಪರಿಣಾಮಕಾರಿಯಾಗಿ ನೀಡದಿದ್ದಲ್ಲಿ, ಅವರ ಪಾಲ್ಗೊಳ್ಳುವಿಕೆ ಸಾಧ್ಯವಾಗುವುದಿಲ್ಲ ಎಂಬ ಅರಿವು ಮುಖ್ಯ. ಆದುದರಿಂದ ನಾವೆಲ್ಲರೂ ಗಮನಿಸಲೇಬೇಕಾದ ಅಂಶವೆಂದರೆ ಯಾವುದೇ ರಾಷ್ಟ್ರ ಅಭಿವೃದ್ಧಿ ಪಥದಲ್ಲಿ ಸಾಗಬೇಕಾದರೆ ತನ್ನ ಜನಸಂಖ್ಯೆಯ ಅರ್ಧದಷ್ಟಿರುವ ಮಹಿಳೆಯರನ್ನು "ಕೆಲಸಕ್ಕೆ ಬಾರದ ಆಸ್ತಿ ಪಾಸ್ತಿಗಳನ್ನಾಗಿ" ಪರಿಗಣಿಸಿ ಕಡೆಗಣಿಸುವುದು ಸಾಧ್ಯವಿಲ್ಲ.

## 1.3 ಮಾಧ್ಯಮ ಮತ್ತು ಮಹಿಳೆಯರ ನಡುವಿನ ಸಂಬಂಧ

ಘಟಕದ ಈ ವಿಭಾಗದ ಪೂರ್ವಾನಿಸಿಕೆಯೆಂದರೆ ಮುದ್ರಣ ಹಾಗೂ ದೃಶ್ಯಶ್ರಾವ್ಯ ಮಾಧ್ಯಮದಲ್ಲಿ ಕಂಡುಬರುವ ಚಿತ್ರಣಗಳು ಈಗ ಚಾಲ್ತಿಯಲ್ಲಿರುವ ನಡುವಳಿಕೆಗಳ ಆಧುನೀಕರಣ ಎನ್ನುವುದು. ಪ್ರಸಕ್ತದಲ್ಲಿ ಯಾವುದೇ ಸಾಮಾಜಿಕ ವ್ಯವಸ್ಥೆಯೊಳಗೆ ಸಾಮಾಜಿಕವಾಗಿ, ಸಾಂಸ್ಕೃತಿಕವಾಗಿ ಮಹಿಳೆಯನ್ನು ಉಪ ವಿಭಾಗವನ್ನಾಗಿ ನೋಡುವ ನಡವಳಿಕೆ ಹಾಗೂ ಮೌಲ್ಯಗಳು ಈ ಆಧುನೀಕರಣದ ನೇರ ಫಲಿತಾಂಶ ಎನ್ನಲಾಗುತ್ತದೆ. ಸಂವಹನ ಪ್ರಕ್ರಿಯೆಯಲ್ಲಿನ ವಸ್ತುವಿಷಯಗಳು ಪ್ರಸಕ್ತ ಸಾಮಾಜಿಕ ಮೌಲ್ಯಗಳನ್ನು ಪ್ರತಿಬಿಂಬಿಸುತ್ತವೆ. ಇವು ಮುಂದೆ ಸಮೂಹ ಮಾಧ್ಯಮಗಳಲ್ಲಿ ಪೋಷಿಸಲ್ಪಟ್ಟು ನಡವಳಿಕೆಗಳಾಗಿ ಬದಲಾಗುತ್ತವೆ. ಕಳೆದೆರಡು ದಶಕಗಳ ಅವಧಿಯಲ್ಲಿ ಭಾರತದಲ್ಲಿನ ಸಮೂಹ ಮಾಧ್ಯಮಗಳು ಮಹಿಳಾ ಅಭಿವೃದ್ಧಿ ಹಾಗೂ ಕಲ್ಯಾಣ ಕಾರ್ಯಕ್ರಮಗಳು ಹಾಗೂ ವಿಷಯಗಳನ್ನು ಗುರುತಿಸುವ, ಚರ್ಚಿಸುವ ಹಾಗೂ ಬೆಂಬಲಿಸುವ ನಿಟ್ಟಿನಲ್ಲಿ ಅತ್ಯದ್ಭುತ ಸಾಧನೆಯನ್ನು ಮಾಡಿವೆಯೆಂದೇ ಹೇಳಬೇಕು. ಮಾಧ್ಯಮ ಬೆಂಬಲ ಸ್ವಯಂಪ್ರೇರಿತ ಹಾಗೂ ಅತ್ಯಂತ ಅರ್ಥಪೂರ್ಣ.

ನಿಜವಾಗಿಯೂ ಮಹಿಳೆಯೊಬ್ಬಳಿಗೆ ಬೇಕಾಗಿರುವುದು ಏನು? 1975ನ್ನು ವಿಶ್ವಸಂಸ್ಥೆ ಅಂತರರಾಷ್ಟ್ರೀಯ ಮಹಿಳಾ ವರ್ಷವನ್ನಾಗಿ ಘೋಷಿಸಿತು. 1975 ರಿಂದ 85ರವರೆಗಿನ ನಂತರದ ಒಂದು ದಶಕವನ್ನು ಮಹಿಳಾ ದಶಕವನ್ನಾಗಿ ಗುರುತಿಸಲಾಯಿತು. ಅಂದಿನಿಂದೀಚೆಗೆ ಹಲವಾರು ಮಹಿಳಾಪರ ಸಂಘಟನೆಗಳು ಹುಟ್ಟಿಕೊಂಡು ಮಹಿಳಾ ಸಬಲೀಕರಣ ಪ್ರಬಲ ಅಂಶವಾಗಿ ಮಾರ್ಪಟ್ಟಿದೆ. ಅನೇಕ ಅಂತರರಾಷ್ಟ್ರೀಯ ಪ್ರಯತ್ನಗಳ ನಡುವೆಯೂ ಮಹಿಳೆಯ ಸ್ಥಿತಿಗತಿಯನ್ನು, ಸ್ಥಾನಮಾನವನ್ನು ಮೇಲಕ್ಕೇರಿಸುವುದು ನಮಗೆ ಸಾಧ್ಯವಾಗಿಲ್ಲ. ಫಲಿತಾಂಶಗಳೂ ಸಹ ನಿರೀಕ್ಷಿತ ಕನಿಷ್ಠ ಮಟ್ಟವನ್ನು ಮುಟ್ಟಲು ಅಸಫಲವಾದವು. ಮಹಿಳೆಯರ ಆರ್ಥಿಕ, ಸಾಮಾಜಿಕ ಹಾಗೂ ರಾಜಕೀಯ ಪಾತ್ರಗಳು ಅತ್ಯಂತ ಕಿರಿದಾದ ದೃಷ್ಟಿಕೋನದಿಂದ ವ್ಯಾಖ್ಯಾನಿಸಲ್ಪಟ್ಟ ಈ ಪ್ರಪಂಚದಲ್ಲಿ, ಮಾಧ್ಯಮಗಳು ಬದಲಾವಣೆಯ ಗಾಳಿ ಬೀಸುವ ಪ್ರಬಲ ಸಾಮಾಜಿಕ ವರ್ತಕಗಳಾಗಿ ಹೊರಹೊಮ್ಮಬೇಕಾಗುತ್ತದೆ. ಮಾಧ್ಯಮಗಳು ಮಹಿಳಾ ಸಂಬಂಧಿ ವಿಷಯಗಳನ್ನು ಕೈಗೆತ್ತಿಕೊಂಡು ಅವುಗಳನ್ನು ವಿಸ್ತರಿಸುವ ಸ್ಥಿರಗೊಳಿಸುವ ಪ್ರಯತ್ನಗಳನ್ನು ಕ್ರಿಯಾಶೀಲವಾಗಿ ಮಾಡಿ, ಇಲ್ಲವೆ ಅದನ್ನು ಮಾಹಿತಿ ನೀಡುವಿಕೆ, ಧೋರಣಾತ್ಮಕ ನಿಲುವುಗಳಿಂದ ವಿಚಾರಗಳನ್ನು ಪ್ರತಿಫಲಿಸುವ ಮೂಲಕ ಮಹಿಳೆಯರ ಸ್ಥಾನಮಾನದಲ್ಲಿ ಅವಶ್ಯಕ ಮಾರ್ಪಾಡುಗಳನ್ನಾದರೂ ತರುವ ಪ್ರಯತ್ನಗಳನ್ನು ಮಾಡಬಹುದು.

ಆದರೆ, ಅತ್ಯಂತ ವಿಷಾದದ ಅಂಶವೆಂದರೆ, ಇಷ್ಟೆಲ್ಲಾ ಮಾಧ್ಯಮ ಬೆಂಬಲ ನಡುವೆಯೂ ಮಹಿಳಾ ಸುಧಾರಣೆಗೆ ಸಂಬಂಧಪಟ್ಟ ವಿಚಾರಗಳಲ್ಲಿ ಯಾವುದೇ ರೀತಿಯ ಪ್ರಗತಿ ಕಾಣದಿರಲು ಕಾರಣಗಳೇನು? ವಿಷಯಗಳು, ಘಟನೆಗಳು ಪದೇ ಪದೇ ಜರುಗಲು ಕಾರಣೀಭೂತವಾದ ಮಹತ್ವದ ಅಂಶಗಳಾವುವು? ಅಂತೆಯೇ ನಮ್ಮ ದೇಶದಲ್ಲಿ ಮಹಿಳೆಯ ಸ್ಥಿತಿಗತಿಯಲ್ಲಿ ಗಮನಾರ್ಹ ಬದಲಾವಣೆಗಳೇನೂ ಆಗಿಲ್ಲವೇಕೆ? ಉತ್ತರ ಅತ್ಯಂತ ಸರಳವಾದುದು. ಮಹಿಳಾ ಅಭಿವೃದ್ಧಿಯೆಂದರೆ ಕೇವಲ ಬೆರಳೆಣಿಕೆ"ಸಂಖ್ಯೆಯ ಮಹಿಳೆಯರಿಗೆ ಅವಕಾಶ ಕಲ್ಪಿಸುವುದಿಲ್ಲ, ಸಬಲೀಕರಣವೆಂದರೆ ಗಂಡನನ್ನು ಹದ್ದುಬಸ್ತಿನಲ್ಲಿಡುವುದೆಂದಲ್ಲ, ಸಮಾನಾವಕಾಶವೆಂದರೆ ಗಂಡ ಸಂಬಳವನ್ನು ಹೆಂಡತಿಯ ಕೈಗಿಡುವುದು ಎಂದರ್ಥವಲ್ಲ. ಮಹಿಳಾ ಹೋರಾಟಕ್ಕೆ ಅನೇಕ ಮಹಿಳಾಪರ ಸಂಘಟನೆಗಳೂ ಕೂಡ ಇಂತಹ ಬಾಲಿಶ, ಅಪ್ರಬುದ್ಧ ಅರ್ಥವಿವರಣೆಗಳನ್ನು ನೀಡುವ ಮೂಲಕ ಅಧೋಗತಿಗೆ ಕಾರಣವಾದವೆನ್ನಬಹುದು.

ಇಂತಹ ಒಂದು ಹಿನ್ನೆಲೆಯಲ್ಲಿ ಮಾಧ್ಯಮಗಳು ಶಿಕ್ಷಣವನ್ನು ನೀಡುವ ಅಭಿವೃದ್ಧಿ ಪಥದಲ್ಲಿ ಮಹಿಳೆಯನ್ನು ಮುನ್ನಡೆಸುವ ತನ್ಮೂಲಕ ರಾಷ್ಟ್ರೀಯ ಅಭಿವೃದ್ಧಿಯೆಡೆಗೆ ಅಡಿಯಿಡುವ ಕಾಯಕಕ್ಕೆ ಮುಂದಾಗಬೇಕಾಗುತ್ತದೆ.

"ಮಹಿಳೆ ಮತ್ತು ಮಾಧ್ಯಮ" ಕುರಿತಾದ ಯುನೆಸ್ಕೊ ವರದಿ ಅತ್ಯಂತ ನೋವಿನಿಂದ ಈ ಕೆಳಕಂಡಂತೆ ಹೇಳಿದೆ.

"ಮಾಧ್ಯಮಗಳಲ್ಲಿ ಬಿಂಬಿಸಲ್ಪಡುವ ಎಲ್ಲಾ ಮಹಿಳಾ ಸಂಬಂಧಿ ವಿಚಾರಗಳು ವಸ್ತುವಿಷಯಗಳು ಕೇವಲ ಮಹಿಳೆಯರ ಬಗೆಗಿನ ಪುರುಷ ದೃಷ್ಟಿಕೋನವನ್ನಷ್ಟೇ ಪ್ರತಿಬಿಂಬಿಸುತ್ತವೆ. ವಾಣಿಜ್ಯ ಹಿತಾಸಕ್ತಿಗಳನ್ನು ಪ್ರಮುಖವಾಗಿ ಉಳ್ಳ ಮಾಧ್ಯಮಗಳು ಪ್ರಸ್ತುತ ಸಾಮಾಜಿಕ ವಾಸ್ತವತೆಯನ್ನು ಆಧಾರವಾಗುಳ್ಳ, ಸಂವಹನಾತ್ಮಕ ಸಂದೇಶಗಳು ಹಾಗೂ ಸಂಕೇತಗಳನ್ನು ಮಾತ್ರ ಪರಿಗಣಿಸಿ ಮಹಿಳೆಯರನ್ನು ಗೃಹಿಣಿಯರನ್ನಾಗಿ, ಗ್ರಾಹಕರಾಗಿ ಇಲ್ಲವೆ ಕಾಮದ, ಮಾದಕತೆಯ ಸಂಕೇತವನ್ನಾಗಿ ಬಿಂಬಿಸುತ್ತವೆ. ಜಾಹೀರಾತಿನಲ್ಲಿ ಮಹಿಳೆ ಯಾವಾಗಲೂ ಆಕರ್ಷಕ ಹಾಗು ಯೌವನದಿಂದ ಕೂಡಿದಂತವಳಾಗಿದ್ದು, ಭೋಗದ ವಸ್ತುವನ್ನಾಗಿ ಚಿತ್ರಿಸಲಾಗುತ್ತದೆ. ಅಲ್ಲದೆ ಮನೆಯಲ್ಲಿಯೇ ಇರುವವಳಂತೆ, ಬುದ್ಧಿಹೀನಳಂತೆ ಚಿತ್ರಿಸುವುದು ಅತ್ಯಂತ ಸಾಮಾನ್ಯ. ಹಾಗಾಗಿ, ಪ್ರಸ್ತುತದಲ್ಲಿ ಮಾಧ್ಯಮದ ಪುರುಷರು, ಪುರುಷರಿಗಾಗಿಯೇ ರಚಿಸಿದ ಅರ್ಥವಿವರಣೆಗಳು ಹಾಗು ಗುರುತಿಸುವಿಕೆಯ ಚೌಕಟ್ಟಿನೊಳಗೆ ಭಾವನೆಗಳನ್ನು ಸ್ಥಿರಗೊಳಿಸುವುದಾಗಿದೆ."

ಇದರಿಂದ ತಿಳಿದುಬರುವ ಪ್ರಮುಖ ಅಂಶವೆಂದರೆ, ಪುರುಷರೇ ನಡೆಸುವ ಸಮೂಹ ಮಾಧ್ಯಮಗಳು ಬಹುಪಾಲು ಓದುಗರು ಹಾಗು ಶ್ರೋತೃಗಳನ್ನು ಒಳಗೊಂಡ ಪುರುಷರಿಂದಲೇ ನಿರ್ದೇಶಿಸಲ್ಪಡುತ್ತವೆ ಎನ್ನುವುದು. ಉದಾಹರಣೆಗೆ, ಸತಿ ಸಹಗಮನದ ಒಂದು ಘಟನೆ ಮಾಧ್ಯಮದ ಗಮನ ಸೆಳೆದು ಅತ್ಯಂತ ಹೆಚ್ಚಿನ ರೀತಿಯಲ್ಲಿ ಚರ್ಚೆಯಾಗುವಂತಾಗುತ್ತದೆ. ಆದರೆ ದಿನನಿತ್ಯವೂ ಮನೆಯ ಒಳಗೂ ಹೊರಗೂ ಗೋಳಿನಲ್ಲಿ ನರಳುವ ಲಕ್ಷಾಂತರ ಹೆಂಗಳೆಯರ, ವಿಧವೆಯರ, ತಿರಸ್ಕಾರಕ್ಕೊಳಗಾದವರ, ತಂದೆಯರಿಂದಲೇ ಮಾರಲ್ಪಟ್ಟ ಹೆಣ್ಣುಮಕ್ಕಳ, ಬಡತನ ಹಸಿವೆಯಿಂದ ಕಂಗಾಲಾದ ಹೆಣ್ಣುಮಕ್ಕಳು ಮಾಧ್ಯಮದ ಕಣ್ಣಿಗೆ "ಆಕರ್ಷಕ"ವಾಗಿ ಕಾಣದಾಗುತ್ತಾರೆ. ಇದು ದುರಂತವೇ ಸರಿ.

ಮಹಿಳಾ ವಿಷಯ ಸಂಬಂಧಿ ಮಾಧ್ಯಮ ವಸ್ತುವಿಷಯಗಳನ್ನು ವಿಶ್ಲೇಷಿಸಿದಾಗ, 60ರ ದಶಕದ ನಂತರವಷ್ಟೇ ಇವು ಮುದ್ರಣ ಮಾಧ್ಯಮದಲ್ಲಿ ಮುಂಚೂಣಿಗೆ ಬಂದಿರುವುದನ್ನು ನಾವು ಗುರುತಿಸಬಹುದು. ಇದಕ್ಕೂ ಮೊದಲು ಸ್ಥಿರಗೊಂಡ ಸಿನಿಮಾಗಳಲ್ಲಿ ಮಹಿಳೆ ಗ್ಲಾಮರ್ ಅಂಶಕ್ಕಾಗಿ ಮಾತ್ರ ಬಳಕೆಯಾಗಿರುವುದನ್ನು ಸುಲಭವಾಗಿ ಗುರುತಿಸಬಹುದು. ಈ ಎರಡೂ ಮಾಧ್ಯಮಗಳು ಬಿಂಬಿಸುವ ವಸ್ತುವಿಷಯಗಳು ಅತ್ಯಂತ ಸಂಪ್ರದಾಯಬದ್ಧ ಎನ್ನಬಹುದು. 1970ರ ನಂತರವಷ್ಟೇ ಕೆಲ ಎಡಪಂಥೀಯ ಧೋರಣೆಗಳ ಸಿನಿಮಾಗಳು ವಿಚಾರವಂತಿಕೆಯಿಂದ ಕೂಡಿದ್ದವು ಎನ್ನಬಹುದು.

ಅನೇಕ ವ್ಯವಸ್ಥಿತ ಅಧ್ಯಯನಗಳು ಮಾಧ್ಯಮ ಪರಿಣಾಮಕತೆಯನ್ನು ವಿಶ್ಲೇಷಿಸಲು ನಡೆದಿದ್ದು, ಮಾಧ್ಯಮಗಳ ವಿಸ್ತಾರತೆಯ ಕೊರತೆಯೂ ನಿರೀಕ್ಷಿತ ಫಲಿತಾಂಶ ಪಡೆದುಕೊಳ್ಳುವಲ್ಲಿನ ಬಹುದೊಡ್ಡ ಅಡಚಣೆ ಎಂಬುದನ್ನು ಗುರುತಿಸಿವೆ. ಗ್ರಾಮಾಂತರ ಪ್ರದೇಶಗಳಲ್ಲಂತೂ ಇದು ಅಕ್ಷರಶಃ ನಿಜ. ಮಾಧ್ಯಮ ತೆರೆತ ಇರುವೆಡೆಯಲ್ಲಿಯೂ ಕೇವಲ ಮನರಂಜನೆಗಾಗಿ ಎಂಬಂತಾಗಿ ಗಂಭೀರ ವಿಚಾರಧಾರೆಗಳಿಗೆ ಅವಕಾಶಗಳಿಲ್ಲದಂತಾಗಿದೆ. ಸಿನಿಮಾ ಮಾಧ್ಯಮದಿಂದ ಶಿಕ್ಷಣ ಅಥವಾ ವಿಚಾರವಂತಿಕೆ ಬಲು ದೂರ ಎಂಬಂತೆ ಆ ಮಾಧ್ಯಮ ನಡೆದುಕೊಳ್ಳುತ್ತಿವೆ. ಭಾರತದಂತಹ ಸನ್ನಿವೇಶದಲ್ಲಿ ಮಾಧ್ಯಮ ವಿಸ್ತರಣೆ ಮಹಿಳೆ ಹಾಗೂ ಹೆಣ್ಣುಮಕ್ಕಳ ದೃಷ್ಟಿಯಲ್ಲಿ ಅವಕಾಶಹಾಗೂ ಅಡೆತಡೆ ಎನ್ನುವಂತಾಗಿದೆ.

ಏನೇ ಆದರೂ ಇಂದು ಮಾಧ್ಯಮ ಕೇವಲ ಪೂರ್ವಾಗ್ರಹದ ಅನಿಸಿಕೆಗಳನ್ನು ಮಾತ್ರ ನೀಡುತ್ತಿದೆ ಎನ್ನುವುದು ಸರ್ವವಿಧಿತ. ಹಾಗೆಯೇ ಪ್ರಪಂಚದ ಅರ್ಧದಷ್ಟು ಜನರನ್ನು ಕಡೆಗಣಿಸುವುದು ಸಾಧ್ಯವಾಗಲೂಬಾರದು.

## 1.4 ಮಾಧ್ಯಮದಲ್ಲಿ ಮಹಿಳೆಯರ ಚಿತ್ರಣ

ಮನಸ್ಸು ಮತ್ತು ಮಾಧ್ಯಮಗಳಿಗೆ ಒಂದಕ್ಕೊಂದು ಗಾಢಾ ಸಂಬಂಧವಿದ್ದು ಪರಸ್ಪರ ಪ್ರಭಾವ ಬೀರುತ್ತವೆ. ಮಾಧ್ಯಮಗಳಲ್ಲಿ ಮಹಿಳೆಯ ಚಿತ್ರಣ ವಿಕಾಹಾನತೆಯಿಂದ ಕೂಡಿದ್ದು, ಅವಾಸ್ತವಿಕತೆಯ ಪರಮಾವಧಿ ಎನ್ನಬಹುದು. ಭಾರತೀಯ ಮಾಧ್ಯಮಗಳಲ್ಲಿ ಮಹಿಳೆಯನ್ನು ಚಿತ್ರಿಸುವ ಕೆಲ ಉದಾಹರಣೆಗಳನ್ನು ನೋಡಿದರೆ ಅವಳ ಸ್ಥಾನಮಾನ ಸುಲಭವಾಗಿ ಅರ್ಥವಾಗುತ್ತದೆ.

ಅ. ಉದ್ಯೋಗಸ್ಥ ಮಹಿಳೆ:

ತನ್ನ ವೃತ್ತಿ ಹಾಗು ಮನೆಗೆಲಸವನ್ನು ಯಾಂತ್ರಿಕವಾಗಿ ನಿಭಾಯಿಸುವ ವ್ಯಕ್ತಿ, ಖಾಸಗಿ ಸಮಯಕ್ಕೆ ಅವಕಾಶ ಅಥವಾ ಅಗತ್ಯತೆ ಇಲ್ಲ. ತನ್ನ ಮೂಲಭೂತ ಅಗತ್ಯಗಳಿಗಿಂತಲೂ ಗಂಡ ಹಾಗೂ ಮಕ್ಕಳ ಅವಶ್ಯಕತೆಗಳಿಗೆ ಹೆಚ್ಚು ಗಮನಹರಿಸುತ್ತಾಳೆ. ಒಬ್ಬೊಂಟಿ ಹೆಂಗಸನ್ನು ಬಹುತೇಕ ಸಾರಿ ಋಣಾತ್ಮಕವಾಗಿ ಚಿತ್ರಿಸಲಾಗುತ್ತದೆ.

ಆ. ಗೃಹಿಣಿಯರು:

ಪ್ರತಿಯೊಂದು ಅಗತ್ಯತೆಗಳಿಗೂ ಗಂಡನನ್ನು ಆಶ್ರಯಿಸುವವರು, ಮನೆಯ ಅಲಂಕಾರದಲ್ಲೇ ಸಮಯ ಕಳೆಯುವ ವಿವೇಚನಾ ರಹಿತ, ಪೆದ್ದು ಅಥವಾ ಹಠಮಾರಿ ಎಂಬಂತೆ ಚಿತ್ರಣ.

ದೃಶ್ಯಶ್ರಾವ್ಯ ಮಾಧ್ಯಮಗಳಲ್ಲಿ ಬಹುತೇಕ ಸಾರಿ ವಿದ್ಯಾವಂತ ಮಹಿಳೆಯನ್ನು ಸಂವೇದನಾ ರಹಿತ, ಸ್ವಹಿತಾಸಕ್ತಿಯ, ಒಳಿತನ್ನು ಬಯಸದ ವ್ಯಕ್ತಿಯನ್ನಾಗಿ ಚಿತ್ರಿಸಲಾಗುತ್ತದೆ. ಹಾಗೆಯೇ, ಆರ್ಥಿಕವಾಗಿ ಸ್ವತಂತ್ರವಾಗಿರುವ ಮಹಿಳೆಯನ್ನು ಇತರರನ್ನು ತುಚ್ಛವಾಗಿ ಕಾಣುವ, ಯಾವುದಕ್ಕೂ ಹೆದರದ ಗಡಸು ವ್ಯಕ್ತಿತ್ವದವಳನ್ನಾಗಿ ಚಿತ್ರಿಸಲಾಗುತ್ತದೆ.

ಹೆಣ್ಣನ್ನು ಕೇವಲ ಪೋಷಕ ಪಾತ್ರಗಳಲ್ಲಿದ್ದಾಗ ಅಥವಾ ಗಂಡಸರಿಗೆ ಸಹಾಯಕ ಪಾತ್ರಗಳಲ್ಲಿದ್ದಾಗ ಮಾತ್ರ ಅವಳನ್ನು ಒಂದು ಮಾದರಿ ಹೆಣ್ಣನ್ನಾಗಿ ಚಿತ್ರಿಸಲಾಗುತ್ತದೆ. ಟಿವಿ ಹಾಗು ರೇಡಿಯೋಗಳಲ್ಲಿನ ಮಹಿಳಾ ಕಾರ್ಯಕ್ರಮಗಳೂ ಕೂಡ ಹೆಣ್ಣನ್ನು ಕೇವಲ ಭೋಗದ ವಸ್ತುವಿನಂತೆ ಚಿತ್ರಿಸುತ್ತವೆಯೇ ಹೊರತು, ಗೃಹಿಣಿಯರು, ತಾಯಂದಿರು ಒಟ್ಟಾರೆ ಅಭಿವೃದ್ಧಿ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳುವಂತೆ ಅನುವಾಗುವ ಜ್ಞಾನ ಪ್ರಸರಣೆಗಾಗಲೀ, ವೃತ್ತಿ ಕುಶಲತೆಗಳಿಗಾಗಲೀ ಅವಕಾಶ ನೀಡುವ ವಸ್ತು ವಿಷಯಗಳನ್ನು ಅಡಕಗೊಳಿಸುವುದಿಲ್ಲ.

ಟಿವಿ ಹಾಗು ಸಿನಿಮಾಗಳಲ್ಲಿ ಈ ಪರಿಯಾದರೆ, ಇನ್ನು ಮುದ್ರಣ ಮಾಧ್ಯಮದಲ್ಲಿ ಮಹಿಳೆಯ ಚಿತ್ರಣ ಇನ್ನೊಂದು ಮಜಲನ್ನು ದಾಟುತ್ತದೆ. ಬಹುತೇಕ ಎಲ್ಲ ಪತ್ರಿಕೆಗಳು ಹಾಗು ನಿಯತಕಾಲಿಕಗಳು ಮಹಿಳಾ ವಸ್ತುವಿಷಯಗಳ ಮೇಲೆ ವಿಶೇಷ ಅಂಕಣಗಳು ಹಾಗು ವಿಶೇಷ ಸಂಚಿಕೆಗಳನ್ನು ಪ್ರಕಟಿಸುತ್ತವೆ. ಇದರ ಜೊತೆಗೆ ಬಹುತೇಕ ಎಲ್ಲಾ ಭಾರತೀಯ ಭಾಷೆಗಳಲ್ಲಿ ಮಹಿಳಾ ನಿಯತಕಾಲಿಕಗಳು ಪ್ರಕಟವಾಗುತ್ತವೆ. ಇವುಗಳೆಲ್ಲದರಲ್ಲಿಯೂ ಪ್ರಕಟವಾಗುವ ಕಥಾ ವಿಷಯಗಳಲ್ಲಿ ಪುರುಷ ಪ್ರಧಾನ ವ್ಯವಸ್ಥೆಯನ್ನು ವೈಭವೀಕರಿಸುವ, ಮಹಿಳೆಯನ್ನು ಹೆಂಡತಿ, ತಾಯಿ ಹಾಗೂ ಆಶ್ರಿತಳಂತೆ ಚಿತ್ರಿಸುವುದನ್ನು ಬಿಟ್ಟರೆ, ಅವಳನ್ನು ಸಾಮಾಜಿಕ ವ್ಯವಸ್ಥೆಯ ಬಹುಮುಖ್ಯ ಅಂಗವೆಂಬ ಚಿತ್ರಣ ಇಲ್ಲವೇ ಇಲ್ಲ ಎನ್ನಬಹುದು.

ಕಸೂತಿ, ಅಡುಗೆ ಹಾಗು ಮನೆಯ ಒಪ್ಪ ಓರಣ ಚಟುವಟಿಕೆಗಳಿಗೆ ಸಂಬಂಧಿಸಿದ್ದನ್ನು ಬಿಟ್ಟರೆ, ಮಹಿಳೆಯನ್ನು ವೈಯಕ್ತಿಕ ಅಗತ್ಯತೆಯಿರುವ, ಗುರಿಗಳನ್ನು ಸಾಧಿಸುವ ವ್ಯಕ್ತಿಯನ್ನಾಗಿ ಚಿತ್ರಿಸುವ ಪ್ರಯತ್ನಗಳು ಇಲ್ಲವೇ ಇಲ್ಲ ಎನ್ನಬಹುದು. ಹಾಗೆಯೇ ಸಿನಿಮಾ ಹಾಗೂ ಟಿವಿ ಮಾಧ್ಯಮಗಳಲ್ಲಿ ಬಿಂಬಿಸಲಾಗುವ ಸ್ತ್ರೀ ಪಾತ್ರಗಳು ಮಹಿಳೆಯನ್ನು ಚಟುವಟಿಕೆ ರಹಿತ ವ್ಯಕ್ತಿಯನ್ನಾಗಿ ಗುರುತಿಸುವುದು ಚಿಂತನೆ ಬಯಸುವ ಇನ್ನೊಂದು ಮಹತ್ವ ಅಂಶ.

ಕೆಲ ಪ್ರೈಂ ಟೈಂ ಧಾರಾವಾಹಿಗಳನ್ನು ಹೊರತುಪಡಿಸಿ, ಉಳಿದವುಗಳಲ್ಲಿ, ಮಹಿಳೆ ಸಮಸ್ಯೆಗಳಿಗೆ ಪರಿಹಾರಕಂಡುಕೊಳ್ಳುವ, ದಬ್ಬಾಳಿಕೆ ವಿರುದ್ಧ ಸಿಡಿದೇಳುವ, ಸವಾಲುಗಳನ್ನು ಸಮರ್ಥವಾಗಿ ಎದುರಿಸುವ ಹಾಗೂ ನ್ಯಾಯೋಚಿತ ತೀರ್ಮಾನಗಳನ್ನು ತೆಗೆದುಕೊಳ್ಳುವ ದಿಟ್ಟ ಹೆಣ್ಣನ್ನಾಗಿ ಚಿತ್ರಿಸುವುದು ಅತ್ಯಂತ ವಿರಳ. ಇತ್ತೀಚಿನ ದಿನಗಳಲ್ಲಿ ಭಾರಿ ಜನಪ್ರಿಯತೆ ಗಳಿಸಿರುವ ದೈನಿಕ ಧಾರಾವಾಹಿಗಳಲ್ಲಂತೂ, ಪ್ರತಿಯೊಂದು ಕಂತಿನಲ್ಲಿಯೂ ಮಹಿಳೆಯರನ್ನು ಎಲ್ಲ  ಸಮಸ್ಯೆಗಳನ್ನು ಎದುರಿಸುವ ಅಥವಾ ಸೃಷ್ಟಿಮಾಡುವ, ಆಗಾಗ ಗೋಳಾಡುವ ಅಥವಾ ಗೋಳು ಹುಯ್ದುಕೊಳ್ಳುವ ಪಾತ್ರಗಳಲ್ಲಿಯೇ ಚಿತ್ರಿಸಲಾಗುತ್ತಿದೆ. ಪ್ರಾರಂಭದಲ್ಲಿ ಸಮರ್ಥ, ಸ್ವಾಭಿಮಾನ ಬುದ್ಧಿವಂತ ಮಹಿಳೆಯನ್ನಾಗಿ ಚಿತ್ರಿಸಿ ಕೊನೆಗೆ ದಬ್ಬಾಳಿಕೆಯೇ ಮೈವೆತ್ತಂತಿರುವ, ಕುಡುಕ, ವಿವೇಚನಾ ರಹಿತ, ವಿಷಯ ಲೋಲುಪ್ತತೆಯ ಗಂಡನಿಗೆ ಶರಣಾಗಿಸುವುದು ಅತ್ಯಂತ ಹೇಯ ಚಿತ್ರಣವೇ ಸರಿ. ಈ ರೀತಿಯಾದ ಚಿತ್ರಣ ಮಹಿಳಾ ಸಮುದಾಯದ ಮೇಲೆ ಎಸಗುವ ಅಕ್ಷಮ್ಯ ಅಪರಾಧ.

ಮಹಿಳೆಯನ್ನು ಕೇವಲ ಕಾಮದ ಬೊಂಬೆಯನ್ನಾಗಿ ಚಿತ್ರಿಸುವ ಜಾಹೀರಾತು ಮಾಧ್ಯಮವನ್ನಂತೂ ನೇರವಾಗಿ ಮಹಿಳಾ ವಿರೋಧಿ ಎನ್ನಬಹುದು. ಪುರುಷ ಅಗತ್ಯತೆ ವಸ್ತುಗಳಲ್ಲಿ ಮಹಿಳೆಯನ್ನು ಬಿಂಬಿಸುವ ಪರಿಯನ್ನು ಗಮನಿಸಿದರೆ ಈ ಅಂಶ ಸುಲಭವಾಗಿ ಅರ್ಥವಾಗುತ್ತದೆ. ಬಹುತೇಕ ಜಾಹೀರಾತುಗಳಲ್ಲಿ ಮಹಿಳೆಯನ್ನು ತನ್ನ ಅತ್ತೆ ಒಪ್ಪುವ ಅಡುಗೆ ತಯಾರಿಸುತ್ತಿರುವಂತೆ, ಅತ್ಯಂತ ನಗುಮೊಗದಿಂದ ಬಕೆಟ್ ತುಂಬ ಇರುವ ಬಟ್ಟೆಗಳನ್ನು ಒಗೆಯುವಂತೆ, ಮಕ್ಕಳ ಗಾಯ-ಪೆಟ್ಟುಗಳಿಗೆ ಔಷಧಿ ಹಚ್ಚುವಂತೆ ಗಂಡ ಮಕ್ಕಳಿಗೆ ಊಣಬಡಿಸುವಂತೆ ಚಿತ್ರಿಸಲಾಗುತ್ತದೆ. ಹಾಗೆಯೇ ಅನೇಕ ಜಾಹೀರಾತುಗಳು ಮಹಿಳೆಯನ್ನು ಕೆಲಸದಾಳಿನಂತೆ ಚಿತ್ರಿಸುವುದೂ ಸಾಮಾನ್ಯವಾಗಿದೆ.

ಸಮಸ್ಯೆಗಳನ್ನು, ಅನಾರೋಗ್ಯವನ್ನು ಚಿತ್ರಿಸುವಾಗಲೂ ಮಹಿಳೆಯನ್ನೇ ಬಲಿಪಶುವನ್ನಾಗಿಸುವುದು ಕಂಡು ಬರುತ್ತದೆ. ಸುಸ್ತು, ಹದಗೆಡುತ್ತಿರುವ ಆರೋಗ್ಯ, ಕೌಟುಂಬಿಕ ನಿರಾಸಕ್ತಿ ಸಮಯದ ಅಭಾವಗಳನ್ನು ಚಿತ್ರಿಸಲು ಮಹಿಳೆಯನ್ನೇ ಬಳಸಲಾಗುತ್ತದೆ. ಆದರೆ ಮಹಿಳೆಯರಿಗೆ ನೇರವಾಗಿ ಸಂಬಂಧಿಸಿರುವ ವಿಷಯಗಳಾದ ಆರೋಗ್ಯ ರಕ್ಷಣೆ, ಹೆರಿಗೆ ರಜೆ, ಮಕ್ಕಳಪಾಲನೆಯಲ್ಲಿ ಗಂಡಸರ ಪಾತ್ರ ಕುರಿತಾದ ವಸ್ತು ವಿಷಯಗಳನ್ನು ಜಾಹೀರಾತುಗಳು ಬೆಳಕಿಗೆ ತರುವುದೇ ಇಲ್ಲ. ಹೀಗಾಗಿ ಮಾಧ್ಯಮಗಳಲ್ಲಿ ಕಾಣುವ ಮಹಿಳೆಯ ಸಾಮಾನ್ಯ ಚಿತ್ರಣಗಳೆಂದರೆ:

1. ಮಹಿಳೆ ಕಡಿಮೆ ಸಾಮರ್ಥ್ಯದ ವ್ಯಕ್ತಿ

2. ಪುರುಷರಿಂದ ದಬ್ಬಾಳಿಕೆಗೊಳಗಾಗುವ ಹಾಗು ಶೋಷಣೆಗೊಳಗಾಗಲು ಇರುವ ಭೋಗದ ವಸ್ತು.

3. ಸಂಪೂರ್ಣ ವಾಣಿಜ್ಯೀಕರಣದ ಪರಿಸರದಲ್ಲಿ ಮಹಿಳೆ ಜಾಹೀರಾತಿನ ಅಗತ್ಯ ಪರಿಕರ.

ಇಂತಹ ಒಂದು ಋಣಾತ್ಮಕ ಚಿತ್ರಣವನ್ನು ತೊಡೆದುಹಾಕಲು ಹಾಗು ಶೋಷಣೆಯ ವಿಷವರ್ತುಲವನ್ನು ಒಡೆದುಹಾಕಲು, ಸಮೂಹ ಸಂವಹನ ಮಾಧ್ಯಮಗಳಲ್ಲಿನ ವಸ್ತುವಿಷಯಗಳ ಸಂಪೂರ್ಣ ಪರಾಮರ್ಶನೆ ಅತ್ಯಗತ್ಯ. ಇದು ಸುಲಭ ಸಾಧ್ಯವಿಲ್ಲದಿದ್ದರೂ, ಸರಿಯಾಗಿ ಆಯೋಜಿಸಲ್ಪಟ್ಟ ಮಹಿಳಾ ವಿಷಯಗಳ ಮೇಲಿನ ರಾಷ್ಟ್ರೀಯ ಸಂವಹನ ಧೋರಣೆಯೊಂದನ್ನು ಅನುಷ್ಠಾನಕ್ಕೆ ತರುವ ಮೂಲಕ ಸಾಧ್ಯವಾಗಿಸಬಹುದು.

## 1.5 ಮಾಧ್ಯಮದಲ್ಲಿ ಮಹಿಳೆಯರಿಗೆ ಉದ್ಯೋಗಾವಕಾಶಗಳು

ಬದಲಾದ ಪರಿಸ್ಥಿತಿಗಳಲ್ಲಿ ಸಂವಹನ ಕ್ರಾಂತಿ ಅನೇಕ ಮಾಧ್ಯಮ ಸಂಬಂಧಿ ವೃತ್ತಿ ಅವಕಾಶಗಳನ್ನು ತೆರೆದಿಟ್ಟಿರುವುದು ನಿಜವಾದರೂ, ಮಹಿಳೆಯರಿಗೆ ಈ ಹೊಸ ಅವಕಾಶಗಳು ಅತ್ಯಂತ ಸೀಮಿತ ಸಂಖ್ಯೆಯಲ್ಲಿ ತಳೆದುಕೊಂಡಿವೆಯೆಂದೇ ಹೇಳಬಹುದು. ಇದಕ್ಕಿರುವ ಎರಡು ಪ್ರಮುಖ ಕಾರಣಗಳೆಂದರೆ, ಸಾಮಾಜಿಕ ಹಾಗೂ ಸಾಂಸ್ಕೃತಿಕ ನಂಬುಗೆ, ಹಿನ್ನೆಲೆಗಳು ಹಾಗು ಉದ್ಯೋಗಿ ಸಂಸ್ಥೆಗಳಲ್ಲಿನ ವಾಸ್ತವಾಂಶಗಳು.

ಮಾಧ್ಯಮ ವೃತ್ತಿಯಲ್ಲಿ ಉನ್ನತೀಕರಣ ಹಾಗು ಪ್ರಗತಿಯನ್ನು ಬಯಸುವ ಮಹಿಳೆಯೊಬ್ಬಳಿಗೆ ಎದುರಾಗುವ ಅತಿ ದೊಡ್ಡ ತೊಡಕೆಂದರೆ ಆಳವಾಗಿ ಬೇರುಬಿಟ್ಟಿರುವ ಸಾಮಾಜಿಕ ಹಾಗು ಸಾಂಸ್ಕೃತಿಕ ನಂಬುಗೆಗಳು. ಇವುಗಳನ್ನು ಅತ್ಯಂತ ಸಮಂಜಸ ಹಾಗು ಕಠಿಣ ವಾಸ್ತವಾಂಶಗಳೆಂದು ಸುಲಭವಾಗಿ ಒಪ್ಪಿಕೊಳ್ಳಬಹುದು. ಮದುವೆ ಮತ್ತು ಮಕ್ಕಳನ್ನು ಹಡೆಯುವುದು ಮಹಿಳೆಯನ್ನು ವೃತ್ತಿಕ್ಷೇತ್ರದಲ್ಲಿ ಖಂಡಿತವಾಗಿಯೂ ಅವಕಾಶ ವಂಚಿತಳನ್ನಾಗಿ ಮಾಡುತ್ತದೆ. ಮಹಿಳೆ ಎಷ್ಟೇ ಸಕ್ಷಮಗಳಾಗಿದ್ದರೂ ಕೆಲ ವರ್ಷಗಳವರೆಗೆ ವೃತ್ತಿಯಿಂದ ಹೊರಗಿದ್ದರೆ ಮತ್ತೆ ಅವಕಾಶಗಳಿಗಾಗಿ ಹುಡುಕಾಡಬೇಕಾದ ಪರಿಸ್ಥಿತಿ ಎದುರಾಗುತ್ತದೆ. ವಿಷಯದ ಬಗೆಗಿನ ಅವಳ ಜ್ಞಾನವನ್ನು ಅಪೂರ್ಣವೆಂದು ಭಾವಿಸಲಾಗುತ್ತದೆ. ಭಾವನಾತ್ಮಕವಾಗಿ, ದೈಹಿಕವಾಗಿ ತೀವ್ರವಾಗಿ ಬದಲಾದ ಪರಿಸ್ಥಿತಿಗಳಲ್ಲಿ ಅವಳ ಸ್ವಾಭಿಮಾನ ಹಾಗು ಛಲಗಳು ಮೃದುವಾಗಿರುತ್ತವೆ. ಅವಳ ಒಟ್ಟಾರೆ ಸಂವಹನ ಕಲೆ ತೀಕ್ಷ್ಣತೆ ಕಳೆದುಕೊಳ್ಳುತ್ತದೆ. ಹೆಚ್ಚಿನ ಸ್ಪರ್ಧಾತ್ಮಕತೆಯ ಪರಿಸರದಲ್ಲಿ ಯಾವುದೇ ಸಮಾನಾವಕಾಶಗಳಿಗೆ ತಿರಸ್ಕೃತಗಳಾಗಿ, ವಾಸ್ತವವನ್ನು ಎದುರಿಸಲಾರದೆ ಇತರೆ ವೃತ್ತಿಗಳತ್ತ ಮುಖಮಾಡುವಂತಾಗುತ್ತದೆ. ಅಭಿವೃದ್ಧಿ ಹೊಂದಿದ ರಾಷ್ಟ್ರಗಳಲ್ಲಿಯೂ ಕೂಡ ವೃತ್ತಿ ಸಂಬಂಧಿ ಅಡೆತಡೆಗಳು ಮಹಿಳೆಯರು ಶಿಕ್ಷಕರಾಗುವಂತೆ ಪ್ರೇರೇಪಿಸಿರುವುದನ್ನು ಕಾಣಬಹುದು. ಈ ಕ್ಷೇತ್ರ, ಹೆಚ್ಚು ನಮ್ಯ, ಸಮಯತೆ, ಕೆಲವೇ ವೃತ್ತಿಪರ ಬೇಡಿಕೆಗಳು/ಅಗತ್ಯತೆಗಳು, ಹೆಚ್ಚು ರಜ, ಉತ್ತಮ ಸಂಬಳ ಹಾಗು ಕಡಿಮೆ ವೃತ್ತಿ ಸಂಬಂಧಿ ಒತ್ತಡಗಳಿಂದಾಗಿ ಹೆಚ್ಚು ಮಹಿಳೆಯರನ್ನು ಆಕರ್ಷಿಸುತ್ತದೆ.

ಆಶ್ಚರ್ಯದ ವಿಷಯವೆಂದರೆ ಇದುವರೆವಿಗೂ ಮಹಿಳೆಯರ ಮೇಲೆ ಮಾಧ್ಯಮಗಳಿಂದಾಗುವ ಪ್ರಭಾವ ಪರಿಣಾಮಗಳನ್ನು ಒಂದು ವ್ಯವಸ್ಥಿತ ರೀತಿಯಲ್ಲಿ ದಾಖಲಿಸಲು ಸಾಧ್ಯವಾಗದಿರುವುದು. ಅದೇ ರೀತಿ ಮಾಧ್ಯಮಗಳಲ್ಲಿ ಮಹಿಳೆಯರ ಸ್ಥಿತಿಗತಿಯ ಬಗ್ಗೆಯೂ ಯಾವುದೇ ರೀತಿಯ ಗುರುತರವಾದ ಸಂಶೋಧನೆಗಳು ಸಾಧ್ಯವಾಗದಿರುವುದು ಖೇದಕರ. ಪ್ರಭಾವಗಳು ಇವೆಯೋ, ಇಲ್ಲವೇ ಅಥವಾ ಮಾಧ್ಯಮಗಳಲ್ಲಿ ಕಾರ್ಯನಿರ್ವಹಿಸುವ ಮಹಿಳೆಗೆ ಶಕ್ತಿಯಿದೆಯೋ ಅಥವಾ ಇಲ್ಲವೇ, ಎಲ್ಲಿಯವರೆಗೆ ಅವರ ಕಾರ್ಯನಿರ್ವಹಣೆಗೆ ಅವಕಾಶ ಕಲ್ಪಿಸಲಾಗಿದೆ ಎಂಬಿತ್ಯಾದಿ ಅಂಶಗಳು ಅಧ್ಯಯನಕ್ಕೊಳಪಟ್ಟೇ ಇಲ್ಲ. ಪತ್ರಿಕಾ ಮಾಧ್ಯಮದಲ್ಲಿ ಕೇವಲ ಮಹಿಳಾ ಸಂಬಂಧಿ ವಿಷಯಗಳನ್ನು ವರದಿ ಮಾಡಲು ಮಹಿಳೆಯರನ್ನು ಸೀಮಿತಗೊಳಿಸಲಾಗುವುದನ್ನು ಬಹಳಷ್ಟು ಸಾರಿ ಕಾಣಬಹುದು. ಆದರೆ ಟಿವಿ ಮಾಧ್ಯಮ ಹೆಚ್ಚು ಮಹಿಳೆಯರನ್ನು ಸೇರಿಸಿಕೊಳ್ಳಲು ಕಾರಣವೆಂದರೆ ಕೇವಲ 'ಗ್ಲಾಮರ್'ಗಾಗಿ ಮಾತ್ರ. ಬಹುತೇಕ ಟಿವಿ ಕಾರ್ಯಕ್ರಮಗಳು ಮಹಿಳೆಯರಿಂದಲೇ ನಿರೂಪಿಸಲ್ಪಡುತ್ತವೆ. ಆದರೆ ಬಾನುಲಿಯಲ್ಲಿ ಇದರತನ್ನು ಕೊಂಚ ಮಟ್ಟಿಗೆ ಕಡಿಮೆ ಎನ್ನಬಹುದು. ಪತ್ರಿಕಾಲಯಗಳ ಸುದ್ದಿ ವಿಭಾಗಗಳಲ್ಲಿ ಸಾಕಷ್ಟು ಮಹಿಳಾ ವೃತ್ತಿನಿರತ ಕಾರ್ಯನಿರ್ವಹಿಸುವುದನ್ನು ಕಾಣಬಹುದು. ಆದರೆ ಆ ವಿಭಾಗದ ಮುಖ್ಯಸ್ಥರಾಗಿ ಅಥವಾ ಸುದ್ದಿ ಬ್ಯೂರೋದ ಮುಖ್ಯಸ್ಥರಾಗಿ ಕಾಣಸಿಗುವುದು ವಿರಳ. 1980ರಲ್ಲಿಯೇ ಮ್ಯಾಕ್‌ಬ್ರೈಡ್ ಸಮಿತಿ ಈ ಬಗ್ಗೆ ಗಮನ ಸೆಳೆಯಿತು.

ಪ್ರಪಂಚದ ಅನಕ್ಷರಸ್ಥರಲ್ಲಿ ಶೇ. 70ರಷ್ಟು ಮಂದಿ ಮಹಿಳೆಯರು ಎಂಬುದು ಗಮನಾರ್ಹ. ಇದಕ್ಕಿರುವ ಪ್ರಮುಖ ಕಾರಣಗಳೆಂದರೆ ಶಿಕ್ಷಣ ಸಾಮಾಜಿಕ ಚಟುವಟಿಕೆ, ಸಂವಹನ ಇತ್ಯಾದಿಗಳಲ್ಲಿ ಅವರಿಗೆ ಸಮಾನಾವಕಾಶಗಳು ಇಲ್ಲದಿರುವುದು. ಶಿಕ್ಷಿತರಿಗೂ ಕೂಡ ಹೆಚ್ಚಿನ ಸಂಬಳ, ಸೌಕರ್ಯವಿರುವ ವೃತ್ತಿಗಳು, ಉನ್ನತ ಹುದ್ದೆಗಳು ಹಾಗು ಅಧಿಕಾರಯುತ ಸ್ಥಾನಗಳಿಗೆ ಸಮಾನ ಅವಕಾಶಗಳಿಲ್ಲ.

ಇತರ ಎಲ್ಲಾ ಕ್ಷೇತ್ರಗಳಲ್ಲಿರುವಂತೆ ಮಾಧ್ಯಮಗಳಲ್ಲಿಯೂ ಈ ರೀತಿಯಾದ ತಾರತಮ್ಯ ಹೆಚ್ಚು ಎನ್ನಬಹುದು. ಪ್ರಪಂಚದ ಯಾವುದೇ ರಾಷ್ಟ್ರದಲ್ಲಿ ಮಾಧ್ಯಮಗಳ ಬೆಳವಣಿಗೆ ಮಹಿಳೆಯರ ಪಾಲ್ಗೊಳ್ಳುವಿಕೆಯೊಂದಿಗೆ ಬೆಳೆಯಲಿಲ್ಲ ಎಂಬ ಅಂಶವನ್ನು ಗಮನಿಸಬಹುದು. ಯುನೆಸ್ಕೊದಿಂದ ಪ್ರಾಯೋಜಿಸಲ್ಪಟ್ಟ ಕೆಲವೊಂದು ಪ್ರಾಥಮಿಕ ಅಧ್ಯಯನಗಳು ಕೆನಡಾ, ಈಕ್ವೆಡಾರ್, ಈಜಿಪ್ಟ್, ನೈಜೀರಿಯಾ ಹಾಗು ಭಾರತದಲ್ಲಿ ಈ ಸಮಸ್ಯೆ ಹೆಚ್ಚಾಗಿರುವುದನ್ನು ಗುರುತಿಸಿವೆ. 'ಪುರುಷ ಕ್ಷೇತ್ರ' ಎನ್ನುವ ಹಣೆಪಟ್ಟಿಯೊಂದಿಗೆ ಮಾಧ್ಯಮ ತಾಂತ್ರಿಕ ಸ್ಥಾನಮಾನಗಳನ್ನಂತೂ ಮಹಿಳೆಯರಿಗೆ ತೆರೆದೇ ಇಲ್ಲ, ಕೇವಲ ಮಾದಕತೆಯ ಅಂಶಗಳಿಗಾಗಿ ತೆರೆಯ ಮೇಲೆ ತರುವುದು ಸರಿಯಾದ ಸ್ಥಾನಮಾನಗಳನ್ನು ಕಲ್ಪಿಸಿದಂತಾಗುವುದಿಲ್ಲ. ಇನ್ನೊಂದು ಖಂಡನಾತ್ಮಕ ಅಂಶವೆಂದರೆ ಶೈಕ್ಷಣಿಕ ಹಾಗು ಮಕ್ಕಳ ಕಾರ್ಯಕ್ರಮಗಳಲ್ಲೂ ಮಾದಕತೆಯ ತಳಹದಿಯ ಮೇಲೆ ವಸ್ತುವಿಷಯಗಳ ಸಮರ್ಪಣೆ.

ಮಾಧ್ಯಮ ಹಾಗು ಇತರ ಸಂವಹನ ಕ್ಷೇತ್ರದ ಸಂಸ್ಥೆಗಳಲ್ಲಿ ಮಹಿಳೆಯರು ವೃತ್ತಿ ಅವಕಾಶಗಳನ್ನು ಪಡೆಯಲು, ಉನ್ನತ ಸ್ಥಾನಮಾನಗಳನ್ನು ಗಳಿಸಲು, ತನ್ಮೂಲಕ ಬದಲಾವಣೆಗೆ ಅವಕಾಶ ನೀಡುವ, ಸಾಮರ್ಥ್ಯಗಳನ್ನು ಹೊಂದಿರುವ ಮಾಧ್ಯಮದಲ್ಲಿ ನೆಲೆ ನಿಲ್ಲಲು ಮೊದಲು ಅಗತ್ಯ ಶೈಕ್ಷಣಿಕ ಅರ್ಹತೆಗಳನ್ನು ಗಳಿಸಿಕೊಳ್ಳುವುದು ಅನಿವಾರ್ಯ. ಪ್ರಸ್ತುತದಲ್ಲಿ ವೃತ್ತಿ ಸಂಬಂಧಿ ಶೈಕ್ಷಣಿಕ ಅರ್ಹತೆ ಹಾಗು ಕುಶಲತೆಗಳನ್ನು ಗಳಿಸಿಕೊಳ್ಳಲು ಅವಕಾಶವಾಗುವಂತೆ ಅನೇಕ ಶೈಕ್ಷಣಿಕ ಸಂಸ್ಥೆಗಳು ಹಾಗು ವಿಶ್ವವಿದ್ಯಾನಿಲಯಗಳು ಅನುವು ಮಾಡಿವೆ. ಹೆಚ್ಚು ಹೆಚ್ಚು ಮಹಿಳೆಯರು ಈ ಕಾರ್ಯಕ್ರಮಗಳಿಗೆ ಪ್ರವೇಶ ಪಡೆಯುತ್ತಿದ್ದು, ಅವಕಾಶಗಳನ್ನು ಬಳಸಿಕೊಳ್ಳುವ ಮಾಧ್ಯಮ ಸಂಸ್ಥೆಗಳಲ್ಲಿ ವೃತ್ತಿ ಅವಕಾಶ ಗಿಟ್ಟಿಸುವ ಅವರ ಚಾಕಚಕ್ಯತೆಯನ್ನು ಕಾದುನೋಡಬೇಕಾಗಿದೆ.

ಹಾಗೆಯೇ, ಈಗಾಗಲೇ ಮಾಧ್ಯಮಗಳಲ್ಲಿ ನೆಲೆಯೂರಿರುವ ಮಹಿಳೆಯರು ಹೊಸದಾಗಿ ವೃತ್ತಿಗೆ ಸೇರಬಯಸುವ ಮಹಿಳೆಯರಿಗೆ ಸಹಾಯ ಹಸ್ತ ಚಾಚಲು ಹಾಗು ಮಾರ್ಗದರ್ಶನ ನೀಡಲು ಶಕ್ತ್ಯಾ ಸಂಘಟಿತರಾಗಿ ಕಾರ್ಯನಿರ್ವಹಿಸುವ ಅವಶ್ಯಕತೆಯಿದೆ. ದೈಹಿಕ ಸಾಮರ್ಥ್ಯ ಹೋಲಿಕೆ ಕೆಲ ರೀತಿಯ ವೃತ್ತಿ ಚಟುವಟಿಕೆಗಳು ನಮಗೆ ಒಗ್ಗುವುದಿಲ್ಲ ಎಂಬಂತಹ ಕುಂಟು ನೆಪಗಳು ದೀರ್ಘಾವಧಿಯಲ್ಲಿ ಅನಾನುಕೂಲವಾಗಬಹುದು.

ಸಮಾಜದಲ್ಲಿ ಹಿಂದೆಂದೂ ಕಾಣದಂತಹ ತೀವ್ರ ಬದಲಾವಣೆಗಳನ್ನು ಕಾಣುತ್ತಿರುವ ಈ ಸಮಯದಲ್ಲಿ, ಮಹಿಳೆ ವೃತ್ತಿಪರಳಾಗಿ ಗುರುತಿಸಿಕೊಳ್ಳುವಂತೆ ಮಾನಸಿಕ ಕೌಟುಂಬಿಕ, ಸಾಂಸ್ಥಿಕ ಹಾಗು ಸಮಾಜಮಟ್ಟಗಳೆಲ್ಲದರಲ್ಲಿಯೂ ಪುರುಷ ಪಾತ್ರ ಬದಲಾವಣೆಗೊಳಪಡಬೇಕು. ಮಗನಾಗಿ, ಗಂಡನಾಗಿ, ತಂದೆಯಾಗಿ ಗಂಡಸಿನ ಪಾತ್ರದಲ್ಲಿ ಸುಧಾರಣೆ, ಮಹಿಳೆಯರನ್ನು ಹೆಚ್ಚು ಸಬಲರನ್ನಾಗಿ ಮಾಡುತ್ತದೆ. ಕುಟುಂಬ ಹಾಗು ಸಮಾಜ ಗಂಡ-ಹೆಂಡತಿಯರಿಗೆ ಸಮಾನ ಅವಕಾಶಗಳು, ಸಮಾನ ಜವಾಬ್ದಾರಿಗಳಿವೆ ಎಂಬ ಅಂಶವನ್ನು ಅರಿಯಬೇಕಾಗುತ್ತದೆ. ಆದರೆ ಇವೆಲ್ಲವನ್ನೂ ಸಾಧ್ಯವಾಗಿಸಬೇಕಾದರೆ ಕೇವಲ ಮಾಧ್ಯಮದಲ್ಲಿನ ವೃತ್ತಿ ನಿರತರು ಅದರಲ್ಲೂ ಮಹಿಳೆಯರಿಂದ ಮಾತ್ರ ಇದು ಸಾಧ್ಯವಾಗುತ್ತದೆ.

ಸಾಮಾಜಿಕ ಸ್ತರದಲ್ಲಿ ಬದಲಾವಣೆಯಾಗುತ್ತಿರುವ ಮಹಿಳಾ ಪಾತ್ರಗಳ ಬಗ್ಗೆ ಹೆಚ್ಚು ತಿಳುವಳಿಕೆ ಕಾರ್ಯಕ್ರಮಗಳು, ಸರ್ಕಾರ ಹಾಗು ಮಾಧ್ಯಮ ಸಂಸ್ಥೆಗಳಿಂದ ಮಹಿಳಾ ಮಾಧ್ಯಮ ವೃತ್ತಿ ನಿರತರಿಗೆ ಹೆಚ್ಚಿನ ಸೌಲಭ್ಯ ಸಹಾಯಕ. ಮಾಧ್ಯಮ ಸಂಸ್ಥೆಗಳು ಕೂಡ ಮಹಿಳೆಯರಿಗೆ ಕೇವಲ ಕುಟುಂಬ, ಸಂಸ್ಕೃತಿ, ಕಲೆಗಳಲ್ಲಿ ವರದಿ ಮಾಡಲು ನಿರ್ಬಂಧಿಸದೇ ಸಮಾನ ಅವಕಾಶಗಳನ್ನು ಒದಗಿಸಲು ಮುಂದಾಗಬೇಕು. ಕಾರ್ಯನಿರ್ವಹಿಸುವ ಸಮಯ ಹಾಗು ಅವಧಿಯಲ್ಲಿ ಕೆಲ ಅನುಕೂಲಗಳನ್ನು ಕಲ್ಪಿಸುವುದು ಅವರಿಗೆ ವೃತ್ತಿ ಹಾಗು ಸಂಸಾರದ ಹೊಣೆಗಾರಿಕೆಯನ್ನು ಸರಿದೂಗಿಸಿಕೊಂಡು ಹೋಗಲು ಅನುವು ಮಾಡುತ್ತದೆ.

## 1.6 ಮಹಿಳಾ ಸಬಲೀಕರಣಕ್ಕಾಗಿ ಮಾಧ್ಯಮ ತಂತ್ರಗಾರಿಕೆಗಳು

ಶತಶತಮಾನಗಳಿಂದ ಮನೆಯ ನಾಲ್ಕು ಗೋಡೆಗಳಿಗೆ ನಿರ್ಬಂಧಿಸಲ್ಪಟ್ಟಿದ್ದ ಮಹಿಳೆ ಇಂದು ಅನೇಕ ವೃತ್ತಿ ಕ್ಷೇತ್ರಗಳಿಗೆ ಲಗ್ಗೆಯಿಡುತ್ತಿರುವುದು ಸಾಮಾನ್ಯ ಗಂಡಸೊಬ್ಬನಿಗೆ ಜೀರ್ಣಿಸಿಕೊಳ್ಳಲಾರದ ವಿಚಾರ. ಆರ್ಥಿಕವಾಗಿ ಮಹಿಳೆ ಸ್ವಾತಂತ್ರ್ಯಗಳಿಸುವುದು ಇತರ ಗಂಡಸರಿಗಿರಲಿ, ಆಕೆಯ ತಂದೆ, ಗಂಡ ಮತ್ತು ಮಗನಿಗೆ ಒಂದು ರೀತಿಯ ಕಸಿವಿಸಿ ಹಾಗು ಏನನ್ನೂ ಕಳೆದುಕೊಂಡಂತಹ ಅನುಭವವನ್ನು ನೀಡುತ್ತವೆಯೆಂದರೆ, ಮಹಿಳಾ ವಿರೋಧಿ ಮನೋಭಾವ ಸಮಾಜದಲ್ಲಿ ಎಷ್ಟರಮಟ್ಟಿಗೆ ಗಟ್ಟಿ ಎನ್ನುವುದು ತಿಳಿಯುತ್ತದೆ. ಮಹಿಳೆ ದುಡಿಯುವುದು ಕೇವಲ ತನ್ನ ಸಂಸಾರದ ಆರ್ಥಿಕ ದೃಢತೆಗಾಗಿ ಅಲ್ಲ. ವೈಯಕ್ತಿಕ ಸಾಧನೆ ಹಾಗು ಭಾವನಾತ್ಮಕ ಸಮಾಧಾನಕ್ಕೂ ಇದು ಅವಕಾಶ ನೀಡಬೇಕಾಗುತ್ತದೆ. ಮಾಧ್ಯಮಗಳು ಈ ವಿಷಯಗಳನ್ನು ತಿಳಿಯಪಡಿಸಬೇಕಾದುದು ಅನಿವಾರ್ಯ.

ಮಹಿಳೆ ಕೇವಲ ಗೃಹಿಣಿಯಾಗಿ ಮನೆಯ ಒಪ್ಪ ಓರಣಕ್ಕೇ ತನ್ನ ಜೀವನ ಮೀಸಲಾಗಿಸುವುದನ್ನು ತಪ್ಪಿಸಿ, ಇತರ ವೃತ್ತಿಗಳನ್ನು ಕೈಗೆತ್ತಿಕೊಳ್ಳಲು ಮಾಧ್ಯಮಗಳು ಕಾರ್ಯತಂತ್ರಗಳನ್ನು ರೂಪಿಸಬೇಕು. ಅವಕಾಶಗಳನ್ನು ಗುರುತಿಸಲು, ಶಿಕ್ಷಣ ಕುಶಲತೆಗಳೆಡೆಗೆ ಮಹಿಳೆಯರನ್ನು ಸೆಳೆದು ಮುನ್ನುಗ್ಗುವಂತೆ ಪ್ರೇರೇಪಿಸಬೇಕು. ಯಾವುದೇ ವೃತ್ತಿ ಕ್ಷೇತ್ರಗಳಲ್ಲಿ ಮಹಿಳೆ ಎದುರಿಸಬಹುದಾದ ಎಡರು-ತೊಡರುಗಳನ್ನು ಗುರುತಿಸಿ, ಅವುಗಳನ್ನು ನಿವಾರಿಸಿಕೊಳ್ಳುವ ಪರಿಹಾರೋಪಾಯಗಳನ್ನು ಸೂಚಿಸಿ ಧೈರ್ಯ ತುಂಬಬೇಕು. ಜವಾಬ್ದಾರಿಯ, ಕಾರ್ಯನಿರ್ವಹಣೆಯಲ್ಲಿನ ಕ್ಷಮತೆ ಬಗ್ಗೆ ತಿಳಿಹೇಳಬೇಕು.

ಬದಲಾದ ಸಾಮಾಜಿಕ ಪರಿಸ್ಥಿತಿಗಳಲ್ಲಿ ಮಹಿಳೆಯೊಬ್ಬಳಿಗೆ ಕಾನೂನು ಸಲಹೆ, ವೈದ್ಯಕೀಯ ಸವಲತ್ತು ಹಾಗು ಉದ್ಯೋಗ, ವೃತ್ತಿಗಳ ಬಗ್ಗೆ ಹೆಚ್ಚಿನ ಮಾಹಿತಿ ಅಗತ್ಯತೆ ಕಂಡು ಬರುತ್ತಿದೆ. ಮಾಧ್ಯಮ ಈ ನಿಟ್ಟಿನಲ್ಲಿ ಕಾರ್ಯಪ್ರವೃತ್ತವಾಗಿ ಈ ಬೇಡಿಕೆಗಳನ್ನು ಈಡೇರಿಸುವಲ್ಲಿ ಮಹತ್ತರ ಪಾತ್ರ ವಹಿಸುತ್ತದೆ. ಮಾಧ್ಯಮಗಳಲ್ಲಿ ಬಿಂಬಿಸಲಾಗುವ ವಸ್ತುವಿಷಯಗಳು, ಕಾಳಜಿಗಳಷ್ಟೇ ಅನೇಕರಿಗೆ, ಅದರಲ್ಲೂ ಮಹಿಳೆಯರಿಗೆ ಆಸರೆಯಾಗಿ ನಿಲ್ಲುವ ವಸ್ತುಸ್ಥಿತಿಯನ್ನು ನಾವೀಗ ಕಾಣಬಹುದು. ಉದಾಹರಣೆಗೆ, ಪೋಲಿಯೋ ಲಸಿಕೆಯ ಪ್ರಚಾರಾಂದೋಲನ, ನಾಯಿಕೆಮ್ಮು, ಸಿಡುಬು, ದಡಾರಗಳ ವಿರುದ್ಧದ ಲಸಿಕೆಯ ಪ್ರಯೋಜನ, ಹೆಣ್ಣು ಮಗುವಿಗೆ ಶಿಕ್ಷಣ, ಸಣ್ಣ ಉಳಿತಾಯ, ನೈರ್ಮಲ್ಯ ಮುಂತಾದ ವಿಷಯಗಳನ್ನು ಮಾಧ್ಯಮಗಳು ಪರಿಣಾಮಕಾರಿಯಾಗಿ ಬಿಂಬಿಸಿದ್ದರಿಂದ, ವಿಷಯಗಳು ಪರೋಕ್ಷವೆನಿಸಿದರೂ ಭಾರತೀಯ ಮಹಿಳೆಯ ಕೌಟುಂಬಿಕ ಹಾಗು ಆರ್ಥಿಕ ಸ್ಥಿತಿಗತಿಗಳಲ್ಲಿ ಭಾರಿ ಬದಲಾವಣೆ ತಂದಿತು.

ಅಲ್ಲದೆ, ಮಹಿಳಾ ಶೋಷಣೆ, ಲಿಂಗಭೇದ ಹಾಗು ವೃತ್ತಿ ತಾರತಮ್ಯಗಳಂತಹ ವಿಷಯಗಳಿಗೆ ಸಂಬಂಧಪಟ್ಟ ವಿವಾದಗಳನ್ನು ಬಗೆಹರಿಸಲು ಪ್ರತ್ಯೇಕ ನ್ಯಾಯಾಲಯ, ಸಾಮಾಜಿಕ ಸಮಾನತೆ, ಸಬಲೀಕರಣದಂತಹ ನೇರ ವಿಷಯಗಳು ಮಾಧ್ಯಮಗಳಲ್ಲಿ ಬಿಂಬಿಸಲ್ಪಡುವುದರಿಂದ ಕಾನೂನಿನ ಅರಿವು, ತಮ್ಮ ಹಕ್ಕುಗಳನ್ನು ರಕ್ಷಿಸುವ ಚಲಾಯಿಸುವತ್ತ ಮಹಿಳೆಯರು ದಾಪುಗಾಲಿಡಲು ಸಾಧ್ಯವಾಗಿದೆ.

ಮಾಧ್ಯಮಗಳು ಈ ನಿಟ್ಟಿನಲ್ಲಿ ಕಾರ್ಯನಿರ್ವಹಿಸುತ್ತಿದ್ದರೂ ಈಗಾಗಲೇ ಆಳವಾಗಿ ಬೇರುಬಿಟ್ಟಿರುವ ಕೆಲ ಸಾಂಪ್ರದಾಯಿಕ ವಿಚಾರಗಳನ್ನು ಹಾಗು ಸಮರ್ಪಣಾ ಶೈಲಿಗಳನ್ನು ಸಂಪೂರ್ಣವಾಗಿ ಕೈಬಿಟ್ಟು ಹೊಸ ಹಾಗು ಬದಲಾದ ಸಾಮಾಜಿಕ ಪರಿಸರಗಳಿಗೆ ಹೊಂದಿಕೊಳ್ಳುವಂತಹ ವಿಚಾರಗಳನ್ನು ಅಳವಡಿಸಿಕೊಳ್ಳುವುದು ಅನಿವಾರ್ಯ. ಪ್ರತಿಯೊಂದು ಮಾಧ್ಯಮ ದಿನಂಪ್ರತಿ ಮಹಿಳೆಯರನ್ನು ವಿಶೇಷತೆಯೊಂದಿಗೆ ತಾಯಂದಿರಾಗಿ, ಹೆಂಡತಿಯರಾಗಿ, ಅಕ್ಕ-ತಂಗಿಯರಾಗಿ, ಮಗಳಾಗಿ ಸಮರ್ಪಿಸುವ ಪರಿಯನ್ನು ಅಧ್ಯಯನಕ್ಕೊಳಪಡಿಸಿದರೆ ಮಾಧ್ಯಮದಲ್ಲಿ ಮಹಿಳೆಯ ಚಿತ್ರಣದ ಸ್ಥಿತಿಗತಿ ಸುಲಭವಾಗಿ ಅರ್ಥವಾಗುತ್ತದೆ.

ಉದಾಹರಣೆಗೆ: ಗಂಡನಿಂದ ತಿರಸ್ಕಾರಕ್ಕೊಳಗಾದ ತಾಯಿಯೊಬ್ಬಳು ತನ್ನ ಮಕ್ಕಳನ್ನು, ಸಮಾಜದಲ್ಲಿ ಗೌರವಯುತ ಸ್ಥಾನವೊಂದನ್ನು ಗಳಿಸಿಕೊಳ್ಳಲು ಶ್ರಮಿಸುವಂತೆ ಪ್ರೇರೇಪಿಸಿ ಯಶಸ್ವಿಯಾಗುತ್ತಾಳೆ. ಸಿನಿಮಾ ನಿರ್ದೇಶಕನಾದ ಗಂಡ ನಟಿಯೋರ್ವಳಿಗೆ ಆಕರ್ಷಿತನಾಗಿ ಅವಳನ್ನು ಮದುವೆಯಾಗುತ್ತಾನೆ. ಈ ಎರಡನೇ ಮದುವೆಯನ್ನು ಪ್ರಶ್ನಿಸುವ ತನ್ನ ಮಗನನ್ನು ತನ್ನ ಷಡ್ಯಂತ್ರದಿಂದ ಸೆರೆಮನೆ ಸೇರುವಂತೆ ಮಾಡುತ್ತಾನೆ. ಕೊನೆಗೆ ಆರೋಗ್ಯ ಕೆಟ್ಟು ಹಾಸಿಗೆ ಹಿಡಿದಾಗ ಮಕ್ಕಳಾರೂ ತಿರುಗಿ ನೋಡದ ಪರಿಸ್ಥಿತಿಯಲ್ಲಿ ತಾಯಿ ತನ್ನ ಜೀವನದಲ್ಲಿ ಸಕಲ ತ್ಯಾಗ, ಪರಿಶ್ರಮದಿಂದ ಬೆಳೆಸಿದ್ದ ಮಕ್ಕಳನ್ನು ತೊರೆದು ತನ್ನ ಗಂಡನ ಸೇವೆಗೆ ನಿಲ್ಲುತ್ತಾಳೆ. ಇಂತಹ ಚಿತ್ರಣಗಳಿಂದ ಮಹಿಳೆಯ ಭಾವನಾತ್ಮಕ ಅಧೋಗತಿಗೆ ನೂಕುವ ಪರಿಪಾಠ ಈಗ ಎಲ್ಲ ಕಡೆ ಪಸರಿಸಿದೆ. ತಾಯಿ, ಮಗಳು, ಅತ್ತೆ, ಸೊಸೆ, ನಾದಿನಿ, ಗೆಳತಿ, ಪ್ರೇಯಸಿ, ಸಹೋದ್ಯೋಗಿ ಹೀಗೆ ಯಾವ ಮಹಿಳಾ ಪಾತ್ರವನ್ನು ತೆಗೆದುಕೊಂಡರೂ ಅವು ದ್ವೇಷ, ತಿರಸ್ಕಾರ, ಅಹಂಕಾರ, ಅಸೂಯೆ, ಸ್ವಾರ್ಥಗಳಂತಹ ನಕಾರಾತ್ಮಕ ಅಂಶಗಳಿಂದ ತುಂಬಿ ಹೋಗಿರುವುದು ಕಂಡು ಬರುತ್ತದೆ.

ಭಾರಿ ಪ್ರಮಾಣದಲ್ಲಿ ಕಂಡುಬರುತ್ತಿರುವ ಇಂತಹ ಚಿತ್ರಣಗಳಿಂದ ಈಗಾಗಲೇ ಸ್ಥಿರಗೊಂಡಿರುವ ಅನೇಕ ಋಣಾತ್ಮಕ ಸಾಮಾಜಿಕ ಅಂಶಗಳು ಮತ್ತಷ್ಟು ಪ್ರಬಲಗೊಂಡು ಸಾಮಾಜಿಕ ಸ್ವಾಸ್ಥ್ಯ ಹದಗೆಡುವುದರಲ್ಲಿ ಖಂಡಿತಾ ಅನುಮಾನವಿಲ್ಲ.

1988ರಿಂದ 2000ರವರೆಗೆ ಕಾರ್ಯ ನಿರ್ವಹಿಸಿದ ರಾಷ್ಟ್ರೀಯ ಮಹಿಳಾ ದೃಷ್ಟಿಕೋನ ಯೋಜನಾ ಸಮಿತಿ, ಮಹಿಳೆಯರನ್ನು ಸಮರ್ಪಕವಾಗಿ ಬಿಂಬಿಸುವ ಕೆಲ ಮಾಧ್ಯಮ ತಂತ್ರಗಾರಿಕೆಗಳಿಗೆ ಶಿಫಾರಸ್ಸು ಮಾಡಿತು. ಅವುಗಳೆಂದರೆ;

1. ಮಹಿಳಾ ಸಬಲೀಕರಣಕ್ಕಾಗಿ ಎಲ್ಲಿ ಕಾಯ್ದೆ-ಕಾನೂನುಗಳು ನಿಯಮಾವಳಿಗಳು, ನಿರ್ದೇಶನಗಳಿವೆ. ಅಲ್ಲಿ ಅವುಗಳನ್ನು ಬಲಪಡಿಸುವ ನಿಟ್ಟಿನಲ್ಲಿ ಪ್ರಯತ್ನಸಾಗಬೇಕು ಹಾಗು ಅವುಗಳು ಪರಿಣಾಮಕಾರಿಯಾಗಿ ಅನುಷ್ಠಾನಗೊಳ್ಳಬೇಕು.

2. ಎಲ್ಲಿ ಧೋರಣೆಗಳು, ಕಾರ್ಯಕ್ರಮಗಳು ಮಹಿಳೆಯರ ವಿಶೇಷ ಅಗತ್ಯತೆಗಳನ್ನು ಪರಿಗಣಿಸುವುದಿಲ್ಲವೋ ಅಂತಹ ವಿಶೇಷ ಅಗತ್ಯತೆಗಳನ್ನು ಪರಿಗಣಿಸುವುದಿಲ್ಲವೋ ಅಂತಹ ಕಡೆ ಅವುಗಳಲ್ಲಿ ಬದಲಾವಣೆ ತರಲು ಹೇರುವ ಪರಿಷ್ಕರಣೆಗೆ ಒತ್ತಾಯಿಸುವ ಕೆಲಸಗಳಾಗಬೇಕು.

3. ಎಲ್ಲಿ ಮಹಿಳಾ ಸಮುದಾಯಕ್ಕೆ ಅನುಕೂಲತೆಗಳು ತಲುಪುವುದಿಲ್ಲವೋ ಅಂತಹ ಕಡೆಗಳಲ್ಲಿ ಲಭ್ಯತೆಯನ್ನು ಹೆಚ್ಚಿಸಲು ಮಧ್ಯಪ್ರವೇಶಕ್ಕೆ ಅನುವುಮಾಡಬೇಕು.

4. ಅನುಕೂಲತೆಗಳು ಲಭ್ಯವಿದ್ದರೂ ಮಹಿಳಾ ಸಮುದಾಯ ಅವುಗಳನ್ನು ಪಡೆದುಕೊಳ್ಳಲು ವಿಫಲವಾದಲ್ಲಿ ಅವರನ್ನು ಸದೃಢಗೊಳಿಸಿ ತಮಗೆ ತಾವೇ ಸಹಾಯ ಮಾಡಿಕೊಳ್ಳಲು ಪ್ರೇರೇಪಿಸಬೇಕು.

ಮ್ಯಾಕ್ ಬ್ರೈಡ್ ಸಮಿತಿ ಗಮನಿಸಿದಂತೆ: "ಸಂಪೂರ್ಣ ಮಹಿಳಾ ಸಮಾನತೆಯ ಸಾಧನೆಯೆಂದರೆ ನ್ಯಾಯ ಹಾಗು ಮಾನವ ಹಕ್ಕುಗಳನ್ನು ಎತ್ತಿಹಿಡಿಯುವುದು ಎಂದರ್ಥ. ಮಹಿಳಾ ಸಮಾನತೆಯು ಅತ್ಯಗತ್ಯ ಏಕೆಂದರೆ ಅಭಿವೃದ್ಧಿ ಪ್ರಯತ್ನಗಳು ಹಾಗು ಸಾಮಾಜಿಕ ಪ್ರಗತಿಗೆ ಸಮಾಜ ತನ್ನೆಲ್ಲಾ ಶಕ್ತಿ ಸಾಮರ್ಥ್ಯಗಳನ್ನು ಒಗ್ಗೂಡಿಸಿಕೊಳ್ಳಲು ಇದು ಸಾಧ್ಯ ಮಾಡುತ್ತದೆ. ಪ್ರಪಂಚ ಮಹಿಳೆಯರ ಪ್ರತಿಭೆ ಹಾಗು ಶಕ್ತಿ ಸಾಮರ್ಥ್ಯಗಳನ್ನು ಪರಿಣಾಮಕಾರಿಯಾಗಿ ಉಪಯೋಗಿಸಿಕೊಳ್ಳದಿರಲು ಸಾಧ್ಯವಿಲ್ಲ. ಸಂವಹನ ಸಂಬಂಧಿ ತೀರ್ಮಾನಗಳು ಹಾಗು ಧ್ಯೇಯ ಧೋರಣೆಗಳನ್ನು ನಿರೂಪಿಸುವ ಮಂದಿಯ ಮನಸ್ಸಿನಲ್ಲಿ ಈ ಅಂಶಗಳು ಸದಾ ನೆಲೆಗೊಳ್ಳಬೇಕು".

ಭಾರತದಂತಹ ಅಭಿವೃದ್ಧಿಶೀಲ ರಾಷ್ಟ್ರದಲ್ಲಿ ಪ್ರಸ್ತುತದಲ್ಲಿ ಮಾಧ್ಯಮಗಳ ಪಾತ್ರ ಮಹಿಳೆಯರು ಹೆಚ್ಚು ಅವಕಾಶಗಳನ್ನು ಕಂಡುಕೊಳ್ಳಲು, ಯುಕ್ತ ತರಬೇತಿ ಸ್ಥಳಗಳಿಗೆ ಅವರನ್ನು ನಿರ್ದೇಶಿಸಲು, ಮುಂಬರುವ ಅಡೆತಡೆಗಳು, ಸವಾಲುಗಳನ್ನು ಅರ್ಥಮಾಡಿಕೊಳ್ಳಲು, ಸ್ವ ಸಾಮರ್ಥ್ಯದಿಂದ ಎದುರಿಸಲು ಹಾಗು ಜವಾಬ್ದಾರಿ ಹೊರುವ ಪ್ರವೃತ್ತಿಗಳನ್ನು ಬೆಳೆಸಿಕೊಳ್ಳಲು ಅನುವು ಮಾಡುವಂತಿರಬೇಕಾಗುತ್ತದೆ.

## 1.7 ಸಾರಾಂಶ

ಈ ಘಟಕದಲ್ಲಿ ಚರ್ಚಿಸಲಾದ ಅಂಶಗಳು ನಮ್ಮ ಸಾಮಾಜಿಕ ವ್ಯವಸ್ಥೆಯಲ್ಲಿ ಕಂಡುಬರುವ ಮಹಿಳೆಯರ ಸಾಮಾಜಿಕ ಹಾಗು ಆರ್ಥಿಕ ಸ್ಥಿತಿಗತಿಗಳ ಬಗ್ಗೆ ಬೆಳಕು ಚೆಲ್ಲಿದವು. ಮಹಿಳೆಯರ ಶಿಕ್ಷಣ, ವೃತ್ತಿ ಅವಕಾಶಗಳು, ಆರೋಗ್ಯ, ಕಾನೂನು ಹಾಗು ಮಹಿಳೆಯರ ಮೇಲಾಗುವ ದೌರ್ಜನ್ಯದ ಬಗ್ಗೆ ವಿಶೇಷವಾಗಿ ಚರ್ಚಿಸಲಾಯಿತು. ಅದೇ ರೀತಿ, ಮಹಿಳೆಯರಿಗೆ ಸಂಬಂಧಿಸಿದಂತೆ ಮಾಧ್ಯಮಗಳೊಂದಿಗಿನ ಅವರ ಸಂಬಂಧಗಳನ್ನು ವಿಶ್ಲೇಷಿಸಲಾಯಿತು. ಅಲ್ಲದೆ, ಮಾಧ್ಯಮಗಳಲ್ಲಿ ಮಹಿಳೆಯರನ್ನು ಕುರಿತಾದ ವಿಷಯಗಳ ಸಮರ್ಪಣೆ, ಮಾಧ್ಯಮಗಳಲ್ಲಿ ಮಹಿಳೆಯರ ಚಿತ್ರಣದ ಬಗ್ಗೆಯೂ ವಿವರವಾಗಿ ಪರಿಶೀಲಿಸಲಾಯಿತು. ಈ ಘಟಕದಲ್ಲಿನ ಚರ್ಚೆ ಮುದ್ರಣ ಹಾಗು ದೃಶ್ಯ ಮಾಧ್ಯಮಗಳಲ್ಲಿ ಮಹಿಳೆಯನ್ನು ಬಳಸಿಕೊಳ್ಳುವ ಪರಿಪಾಠದ ಬಗ್ಗೆಯೂ ತಿಳಿದುಕೊಳ್ಳಲು ಅನುವು ಮಾಡಿತು. ಸಾಮಾನ್ಯವಾಗಿ ಮಾಧ್ಯಮ ಮಹಿಳೆಯರ ಬಗ್ಗೆ ಕೇವಲ ಪೂರ್ವಾಗ್ರಹ ಪೀಡಿತವಾದ ಸಾಮಾಜಿಕ ನಂಬುಗೆಗಳನ್ನಷ್ಟೇ ತನ್ನ ಓದುಗರಿಗೆ / ಶ್ರೋತೃ ವರ್ಗಕ್ಕೆ ಸಮರ್ಪಿಸುತ್ತದೆ. ಹಾಗೆಯೇ, ಮಾಧ್ಯಮಗಳಲ್ಲಿ ಮಹಿಳೆಯರಿಗಿರುವ ವೃತ್ತಿ ಅವಕಾಶಗಳೂ ತೀರಾ ಕಡಿಮೆ.

ಮಾಧ್ಯಮಗಳಲ್ಲಿ ಮಹಿಳೆಯ ಚಿತ್ರಣ ಕುರಿತಾದ ಅನೇಕ ಅಧ್ಯಯನಗಳಿಂದ ತಿಳಿದು ಬರುವ ಅಂಶಗಳೆಂದರೆ, "ಮಹಿಳೆ ಕೇವಲ ಕಾಮದ ಬೊಂಬೆ, ಮಾದಕತೆಯ ಅಂಶಕ್ಕಾಗಿ ಮಾತ್ರ" ಎಂಬಂತಹ ಅನಿಸಿಕೆಗಳು ಮಾಧ್ಯಮಗಳಲ್ಲಿ ನೆಲೆಗೊಳ್ಳಲು, ಬೆಳೆದು ಸ್ಥಿರಗೊಳ್ಳಲು ಸಾಮಾಜಿಕ ಬೇಜವಾಬ್ದಾರಿತನವೇ ಬಹುಮಟ್ಟಿಗೆ ಕಾರಣ. ಇವುಗಳನ್ನು ಸರಿಪಡಿಸಲು, ಬದಲಿ ತಂತ್ರಗಾರಿಕೆಯನ್ನು ಸಬಲಗೊಳಿಸಲು ಮಾಧ್ಯಮಗಳ ತಂತ್ರಗಾರಿಕೆ ಬದಲಾಗಬೇಕು. ಕಾಲಾನುಕ್ರಮದಲ್ಲಿ ಸ್ಥಿರಗೊಂಡಿರುವ ಹಲವಾರು ಸವಕಲು ಸಾಂಪ್ರದಾಯಿಕ ನಂಬುಗೆಗಳನ್ನು ದೂರ ಮಾಡಬೇಕು. ಆಗ ಮಾತ್ರ ಮಾಧ್ಯಮ ಧನಾತ್ಮಕ ಪರಿಣಾಮಗಳನ್ನು ಬೀರಿ ಸಾಮಾಜಿಕ ಮಟ್ಟದಲ್ಲಿ ಧನಾತ್ಮಕ ಬದಲಾವಣೆಗಳನ್ನು ತರಲು ಸಾಧ್ಯ. ಆಧುನಿಕ ಸಮಾಜ ವ್ಯವಸ್ಥೆಗೆ ಪೂರಕವಾದ, ಅಭಿವೃದ್ಧಿ ಪಥದಲ್ಲಿ ಅಸಮಾನತೆಯಿಲ್ಲದೆ ಸಮಾಜ ಸಾಗಲು ಮಹಿಳಾ ಸಮುದಾಯಕ್ಕೆ ಕಾನೂನಿನ ನೆರವು ಹಾಗು ಪೂರ್ವಾಗ್ರಹ ಪೀಡಿತ ದೃಷ್ಟಿಕೋನದ ಬದಲಾವಣೆ ತಕ್ಷಣದ ಅಗತ್ಯತೆಗಳು ಎಂಬುದನ್ನು ಮನಗಾಣಬೇಕು. ಆ ಮೂಲಕ ಮಾಧ್ಯಮಗಳು ಜನಸಮೂಹದ ಒಳಿತಿಗೆ ಹೊಸ ತಂತ್ರಗಾರಿಕೆಯೊಂದಿಗೆ ಮಹಿಳಾ ಸಮುದಾಯ ಪರ ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸಲು ಸಾಧ್ಯವಾಗುತ್ತದೆ.

**ಚಟುವಟಿಕೆ:**

1. ನಿಮ್ಮ ಸಾಮಾಜಿಕ ಪರಿಸರದಲ್ಲಿ ನೀವು ಗಮನಿಸಿರುವಂತೆ ಮಹಿಳೆಯರ ಶಿಕ್ಷಣ, ಆರ್ಥಿಕ ಸ್ಥಿತಿಗತಿ, ವೃತ್ತಿ ಅವಕಾಶಗಳು ಹಾಗು ಇತರೆ ಅಂಶಗಳನ್ನು ಪಟ್ಟಿ ಮಾಡಿ ವಿಶ್ಲೇಷಿಸಿ.
2. ಮಾಧ್ಯಮ ಜಾಹೀರಾತುಗಳಲ್ಲಿ ಕಂಡು ಬರುವ ಮಹಿಳಾ ಸಂಬಂಧಿ ಅಂಶಗಳನ್ನು ಪಟ್ಟಿಮಾಡಿ, ಅವುಗಳ ಅಗತ್ಯತೆಯನ್ನು ವಿಶ್ಲೇಷಿಸಿ.
3. ಮಹಿಳೆಯನ್ನು ಧನಾತ್ಮಕವಾಗಿ ಬಿಂಬಿಸುವ ಮಾಧ್ಯಮ ಜಾಹೀರಾತುಗಳನ್ನು ಪಟ್ಟಿಮಾಡಿ ವಿಶ್ಲೇಷಿಸಿ.

## 1.8 ನಿಮ್ಮ ಪ್ರಗತಿ ಪರಿಶೀಲನೆ

**ಸೂಚನೆ:** ನಿಮ್ಮ ಉತ್ತರಗಳನ್ನು ಈ ಘಟಕಗಳಲ್ಲಿ ನೀಡಲಾಗಿರುವ ವಿವರಗಳೊಂದಿಗೆ ಹೋಲಿಸಿ.

1. ಭಾರತದಲ್ಲಿನ ಮಹಿಳೆಯರ ಸಾಮಾಜಿಕ ಹಾಗು ಆರ್ಥಿಕ ಸ್ಥಿತಿಗಳನ್ನು ಕುರಿತು ಟಿಪ್ಪಣಿ ಬರೆಯಿರಿ.
2. ಮಾಧ್ಯಮಗಳಲ್ಲಿ ಮಹಿಳೆಯರ ಚಿತ್ರಣವನ್ನು ಚರ್ಚಿಸಿ.
3. ಮ್ಯಾಕ್ ಬ್ರೈಡ್ ಸಮಿತಿಯ ಅನಿಸಿಕೆಯ ಹಿನ್ನೆಲೆಯಲ್ಲಿ ಮಾಧ್ಯಮ ಕ್ಷೇತ್ರದಲ್ಲಿ ಮಹಿಳೆಯರಿಗಿರುವ ವೃತ್ತಿ ಅವಕಾಶಗಳನ್ನು ಟಿಪ್ಪಣಿ

**ಬರಹಗಾರರು: ತೇಜಸ್ವಿ ನವಿಲೂರ್**

# ಘಟಕ 2 ಮಾಧ್ಯಮ ಮತ್ತು ಮಕ್ಕಳು

ರಚನೆ

2.0 ಉದ್ದೇಶಗಳು

2.1 ಪ್ರಸ್ತಾವನೆ

2.2 ಮಾಧ್ಯಮ ಗ್ರಾಹಕರಾಗಿ ಮಕ್ಕಳು

2.3 ಮಾಧ್ಯಮ ವಸ್ತುವಿಷಯ ಮತ್ತು ತೆರೆದುಕೊಳ್ಳುವಿಕೆ

2.4 ಮಾಧ್ಯಮ ಪ್ರಭಾವದ ಮಜಲುಗಳು

2.4.1 ಟಿವಿ ಮಾಧ್ಯಮದ ವಿಭಿನ್ನ ಪಾತ್ರಗಳು ಮತ್ತು ತೆರೆದುಕೊಳ್ಳುವಿಕೆ

2.4.2 ಸಮಯ ವ್ಯರ್ಥ ಚಟುವಟಿಕೆ

2.4.3 ಮಾಧ್ಯಮ ಮತ್ತು ಮಾಹಿತಿ ಮಟ್ಟ

2.4.4 ಮಾಧ್ಯಮ ಮತ್ತು ಶಾಲಾ ಪ್ರಗತಿ

2.4.5 ಮಾಧ್ಯಮ ಮತ್ತು ಸಾಮಾಜಿಕ ಸಂಬಂಧಗಳು

2.4.6 ಟಿವಿ ವ್ಯಸನ ಮತ್ತು ಟಿವಿ ಮಾಧ್ಯಮದಲ್ಲಿ ಹಿಂಸೆ

2.5 ಸಾರಾಂಶ

2.6 ನಿಮ್ಮ ಪ್ರಗತಿ ಪರಿಶೀಲನೆ

2.7 ಹೆಚ್ಚಿನ ಓದಿಗಾಗಿ

## 2.0 ಉದ್ದೇಶಗಳು

ಮಹಿಳೆಯರಂತೆ ಮಕ್ಕಳೂ ಕೂಡ ವಾಣಿಜ್ಯಕ ಕಾರಣಗಳಿಗಾಗಿ ಮಾಧ್ಯಮ ವಸ್ತುವಿಷಯಗಳ ಮುಖ್ಯ ಗುರಿಯಾಗಿ ಪರಿಗಣಿಸಲ್ಪಡುತ್ತಾರೆ. ನಿಮಗೆ ಈಗಾಗಲೇ ತಿಳಿದಿರುವಂತೆ ಮನುಷ್ಯನೊಬ್ಬನ ಜೀವನದಲ್ಲಿ, ಆತ ಮಗುವಾಗಿರಲಿ, ವಯಸ್ಕನಾಗಿರಲಿ, ಎಲ್ಲಾ ಘಟ್ಟಗಳಲ್ಲಿಯೂ ಮಾಧ್ಯಮ ಬಹುಮುಖ್ಯವಾದ ನಿರ್ಣಾಯಕ ಪಾತ್ರ ವಹಿಸುತ್ತದೆ. ಈ ಘಟಕ ಮಕ್ಕಳ ಮೇಲೆ ಮಾಧ್ಯಮದ ಪ್ರಭಾವ, ಪರಿಣಾಮಗಳನ್ನು ಗುರುತಿಸಲು ಅನುವು ಮಾಡುತ್ತದೆ. ಪ್ರಸ್ತುತ ಘಟಕದ ಅಧ್ಯಯನದ ನಂತರ ನಿಮಗೆ ಈ ಕೆಳಕಂಡ ಅಂಶಗಳು ಸಾಧ್ಯವಾಗುತ್ತವೆ.

* ಬೇರೆ ಬೇರೆ ಮಾಧ್ಯಮಗಳು ಮಕ್ಕಳ ಮೇಲೆ ಬೀರುವ ಪ್ರಭಾವ, ಪರಿಣಾಮಗಳ ತುಲನಾತ್ಮಕ ವಿಶ್ಲೇಷಣೆ,
* ಮಾಧ್ಯಮದ ಒಟ್ಟಾರೆ ಪರಿಣಾಮಗಳನ್ನು, ವಿಶೇಷವಾಗಿ ಟಿವಿ ಮಾಧ್ಯಮಕ್ಕೆ ಸಂಬಂಧಪಟ್ಟಂತೆ ಗುರುತಿಸುವುದು, ಮತ್ತು
* ಟಿವಿ ಮಾಧ್ಯಮ ಮಕ್ಕಳ ಮೇಲೆ ಬೀರುವ ಧನಾತ್ಮಕ ಹಾಗು ಋಣಾತ್ಮಕ ಪ್ರಭಾವಗಳ ಅಧ್ಯಯನ.

## 2.1 ಪ್ರಸ್ತಾವನೆ

ಸಮೂಹ ಮಾಧ್ಯಮಗಳು ಅನೌಪಚಾರಿಕವಾದ ಸಾರ್ವಜನಿಕ ಶಿಕ್ಷಣ ಸಂಸ್ಥೆಗಳಾಗಿ ಕೆಲಸ ಮಾಡುತ್ತವೆ. ಅವುಗಳನ್ನು ಸಾಮಾಜಿಕ, ರಾಜಕೀಯ, ಆರ್ಥಿಕ ಹಾಗು ಸಾಂಸ್ಕೃತಿಕ ಆಯಾಮಗಳ ಬಹು ಮುಖ್ಯ ಅಂಗಗಳನ್ನಾಗಿ ಗುರುತಿಸಲಾಗುತ್ತದೆ. ನಿಮಗೆ ಈಗಾಗಲೇ ತಿಳಿದಂತೆ ದಿನಪತ್ರಿಕೆಗಳು, ಬಾನುಲಿ, ಚಲನಚಿತ್ರ ಹಾಗು ಟಿವಿ ಸಮೂಹ ಮಾಧ್ಯಮಗಳನ್ನು ಬಹುವಾಗಿ ಪ್ರತಿನಿಧಿಸುತ್ತವೆ. ಸಮೂಹ ಮಾಧ್ಯಮಗಳಿಂದ ನಾವು ಕಾಣದ ಪ್ರಪಂಚವನ್ನು ಮಾಹಿತಿ ಪಡೆಯುವುದರ ಮೂಲಕ, ಅನಿಸಿಕೆ-ಅಭಿಪ್ರಾಯಗಳನ್ನು ಪಡೆದುಕೊಳ್ಳುವುದರ ಮೂಲಕ ತಿಳಿದುಕೊಳ್ಳಬಹುದು. ಮಾಧ್ಯಮದ ಪರಿಣಾಮಗಳು ಸರ್ವವ್ಯಾಪಿ ಹಾಗು ಅತ್ಯಂತ ಮಹತ್ವವುಳ್ಳವು. ಪ್ರಸ್ತುತದಲ್ಲಿ ಗಮನಿಸಬಹುದಾದಂತಹ ನೇರ ಹಾಗು ತಕ್ಷಣದ ಪ್ರಭಾವ ಪರಿಣಾಮಗಳಲ್ಲದೆ, ಮಾನವ ಸಂಸ್ಕೃತಿಯ ವಿಕಾಸದುದ್ದಕ್ಕೂ ಮಾಧ್ಯಮ ಒಂದಲ್ಲಾ ಒಂದು ರೀತಿಯಲ್ಲಿ ಮಾನವ ನಡವಳಿಕೆ ಹಾಗೂ ಪ್ರಗತಿ ಪಥವನ್ನು ರೂಪುಗೊಳಿಸಿರುವ ಅಂಶಗಳನ್ನು ಕಾಣಬಹುದು. ಜನರು ಮಾಧ್ಯಮಗಳಿಗೆ ತೆರೆದುಕೊಳ್ಳುವ ಪ್ರಕ್ರಿಯೆ, ಅದು ದಿನಪತ್ರಿಕೆಗಳಾಗಿರಲಿ ಅಥವಾ ವಿದ್ಯುನ್ಮಾನ ಮಾಧ್ಯಮವಾಗಿರಲಿ, ಪ್ರತಿ ವರ್ಷ ಏರಿಕೆಯಾಗುತ್ತಿರುವುದು ಕಂಡು ಬರುತ್ತಿದೆ. ಈಗಿನ ದಿನಗಳಲ್ಲಿ ನಾವು ಹಿಂದೆಂದಿಗಿಂತಲೂ ಹೆಚ್ಚು ಮಾಧ್ಯಮಗಳಿಂದ ಸುತ್ತುವರೆಯಲ್ಪಟ್ಟಿದ್ದೇವೆ. ಇವುಗಳ ಜೊತೆಗೆ ವಿದ್ಯುನ್ಮಾನ ಹಾಗು ಗಣಕೀಕೃತ ಮಾಹಿತಿ ಸ್ವೀಕರಣೆಗೆ ಜನರು ಮುಂದಾಗುವ ಪ್ರಕ್ರಿಯೆ ಅಗಾಧ ರೀತಿಯಲ್ಲಿ ಬೆಳೆಯುತ್ತಿದೆ.

## 2.2 ಮಾಧ್ಯಮ ಗ್ರಾಹಕರಾಗಿ ಮಕ್ಕಳು

ಅನೇಕ ಸಮಾಜ ವಿಜ್ಞಾನಿಗಳಿಗೆ ಹಾಗು ಮಾಧ್ಯಮ ಸಂಶೋಧಕರಿಗೆ ತಲೆ ನೋವಾಗಿ ಪರಿಣಮಿಸಿರುವ ವಿಷಯಗಳೆಂದರೆ ಮಕ್ಕಳ ಮೇಲಾಗುವ ಮಾಧ್ಯಮದ ಪರಿಣಾಮಗಳು. ಮಕ್ಕಳಿಗೆ ಮಾಧ್ಯಮಗಳ ಪರಿಣಾಮಕಾರಿ ಬಳಕೆಯನ್ನು ತಿಳಿಹೇಳುವ ಹಾಗು ಮಾಧ್ಯಮ ಸಾಕ್ಷರತೆಯನ್ನು ಮೂಡಿಸುವ ಕೆಲಸಗಳೂ ಕೂಡ ಅತ್ಯಂತ ಮಹತ್ವವುಳ್ಳ ಚಟುವಟಿಕೆಗಳು. ಮಕ್ಕಳು ಸಿನೆಮಾ ಅಥವಾ ಟಿವಿಯನ್ನು ಅರ್ಥ ಮಾಡಿಕೊಳ್ಳುವ ಪ್ರಕ್ರಿಯೆ ಅವರು ಆ ಮಾಧ್ಯಮದ ಸಾಂಕೇತಿಕ ಅಂಶಗಳನ್ನು ಅರ್ಥ ಮಾಡಿಕೊಳ್ಳುವ ಪ್ರಕ್ರಿಯೆಯನ್ನು ಅವಲಂಬಿಸಿದೆ. ಈ ಮಾಧ್ಯಮಗಳ ಸಂಕೇತಗಳನ್ನು ಅರ್ಥ ಮಾಡಿಕೊಳ್ಳುವುದನ್ನು ಓದಲು ಕಲಿಯುವ ಪ್ರಕ್ರಿಯೆಗೆ ಹೋಲಿಸಬಹುದು.

ಟಿವಿ ಸಾಕ್ಷರತೆಯಂತಹ ವಿಷಯಗಳು ಮಕ್ಕಳು ಟಿವಿ 'ಭಾಷೆ' ಯನ್ನು ಅರಿಯುವ ಹಾಗು ವಿವಿಧ ದೃಶ್ಯ ಸಮರ್ಪಣಾ ತಂತ್ರಗಾರಿಕೆ (Visual Techiniques) ಯ ಬಗ್ಗೆ ತಿಳಿಯುವ ಅಗತ್ಯಗಳನ್ನು ಸೃಷ್ಟಿಸುತ್ತದೆ. ಈವರೆಗೆ ನಡೆದಿರುವ ಅನೇಕ ಸಂಶೋಧನೆಗಳು ಮಕ್ಕಳು ಸಾಮಾಜಿಕ ವಾಸ್ತವತೆಯನ್ನು ಅರಿಯುವ ಪ್ರಕ್ರಿಯೆಯ ಮೇಲೆ ಮಾಧ್ಯಮಗಳು ಪರಿಣಾಮ ಬೀರುವುದನ್ನು ಎತ್ತಿ ಹಿಡಿದಿದ್ದರೂ, ಮಕ್ಕಳು ಟಿವಿ 'ಭಾಷೆ' ಯ ಬಗ್ಗೆ ಹೆಚ್ಚಿನ ಅರಿವನ್ನು ಹೊಂದಿರದಿರುವುದನ್ನು ಸೂಚಿಸುತ್ತವೆ. ಆದುದರಿಂದ ಟಿ.ವಿ.ಯ ಅರ್ಥಪೂರ್ಣ ಬಳಕೆಗೆ ಮಕ್ಕಳು ಮಾಧ್ಯಮದ ತಂತ್ರಗಾರಿಕೆ ಹಾಗು ವಿಶೇಷ, ಪರಿಣಾಮಗಳನ್ನು (Special effects)ಅರಿಯುವ ಅಗತ್ಯತೆಯಿದೆ.

## 2.3 ಮಾಧ್ಯಮ ವಸ್ತುವಿಷಯ ಮತ್ತು ತೆರೆದುಕೊಳ್ಳುವಿಕೆ

ಚಾರಿತ್ರಿಕವಾಗಿ ಮುದ್ರಣ ಮಾಧ್ಯಮ ಮೊದಲ ಸಮೂಹ ಮಾಧ್ಯಮವಾಗಿ ಗುರುತಿಸಿಕೊಂಡಿತು. ಇದನ್ನು ಔಪಚಾರಿಕ ಶಿಕ್ಷಣದ ವಿಸ್ತರಣೆ ಹಾಗು ಬೆಳವಣಿಗೆಯ ಜೊತೆ ಜೊತೆಗೆ ಗುರುತಿಸಲಾಗುತ್ತದೆ. 1920ರ ದಶಕದಲ್ಲಿ ಬಾನುಲಿ ನೆಲೆಯೂರುವವರೆಗೂ ಪತ್ರಿಕಾ ಮಾಧ್ಯಮ ತನ್ನ ಅಧಿಪತ್ಯ ಸ್ಥಾಪಿಸಿತ್ತು. ಇದೇ ಅವಧಿಯಲ್ಲಿ ಸಿನಿಮಾ ವಿಕಾಸಗೊಂಡು ಮೊದಲ ದೃಶ್ಯ-ಶ್ರಾವ್ಯ ಮಾಧ್ಯಮವಾಗಿ ಹೊರಹೊಮ್ಮಿತು. 1990ರ ದಶಕದಲ್ಲಿ ಕಾಲಿಟ್ಟ ಟಿವಿ ಮಾಧ್ಯಮ ಜನರ ಮನಸ್ಸಿನ ಮೇಲೆ ಗಾಢಾ ಪರಿಣಾಮ ಬೀರಿತು. ಇಡೀ ಮನುಕುಲದ ಚರಿತ್ರೆಯಲ್ಲಿ ಹಾಗು ಪ್ರಸುತ್ತ ಸನ್ನಿವೇಶದಲ್ಲಿ ಮಾನವ ತನ್ನ ಮೇಲೆ ಪ್ರಯೋಗಿಸಿಕೊಂಡ ಅತ್ಯಂತ ಪ್ರಭಾವೀ ಶಕ್ತಿಯೆಂದರೆ ಟಿವಿ.

ವಿಭಿನ್ನ ರೀತಿಯಲ್ಲಿ ಸಮರ್ಪಿಸಲ್ಪಡುವ ಮಾಧ್ಯಮ ವಸ್ತುವಿಷಯಗಳ ಸರಿಯಾದ ಬಳಕೆ ಮಕ್ಕಳ ಮಾನಸಿಕ ಮಟ್ಟವನ್ನು ಆಧರಿಸುತ್ತದೆ. ಪ್ರಸ್ತುತ ಪೀಳಿಗೆಯ ಮಕ್ಕಳ ಬೌದ್ಧಿಕ ಮಟ್ಟ ಹಿಂದಿನ ಪೀಳಿಗೆಯ ಮಕ್ಕಳ ಬೌದ್ಧಿಕ ಮಟ್ಟಕ್ಕಿಂತ ತೀರಾ ಭಿನ್ನ ಹಾಗು ಉತ್ಕೃಷ್ಟವಾಗಿರುವುದನ್ನು ಕಾಣಬಹುದಾಗಿದೆ. ಈ ವಾಸ್ತವಾಂಶದ ಹಿಂದಿರುವ ಅತ್ಯಂತ ಪ್ರಮುಖ ಕಾರಣವೆಂದರೆ ಮಾಧ್ಯಮಗಳ ಅಗಾಧ ವಸ್ತು ವಿಷಯಗಳಿಗೆ ಅವರು ನಿರಂತರವಾಗಿ ತೆರೆದುಕೊಂಡಿರುವ ರೀತಿ ಹಾಗು ಪ್ರಕ್ರಿಯೆ.

ಈ ನಿಟ್ಟಿನಲ್ಲಿ ನಡೆದಿರುವ ಅನೇಕ ಸಂಶೋಧನೆಗಳು ಅಷ್ಟೆ ಕುತೂಹಲಕಾರಿ ಅಂಶಗಳನ್ನು ತೆರೆದಿಟ್ಟಿವೆ. ಸಂಶೋಧನೆಗಳ ಪ್ರಕಾರ ಬುದ್ಧಿವಂತ ಮಕ್ಕಳು ಮಾತ್ರ ಮಾಧ್ಯಮ ವಸ್ತುವಿಷಯಗಳನ್ನು ಬಳಸಿಕೊಳ್ಳುವ ಚಾಕಚಕ್ಯತೆಯನ್ನು ತೋರುತ್ತಾರೆ ಎಂಬುದು ತಿಳಿದು ಬಂದಿದೆ. ಜೊತೆಗೆ ಇಂತಹ ಮಕ್ಕಳು ತಮ್ಮ ಮುಂದಿರುವ ಎಲ್ಲವನ್ನು ಬಾಚಿಕೊಳ್ಳದೆ ತಮ್ಮ ಆಸಕ್ತಿ, ವಸ್ತು ವಿಷಯಗಳ ಆಯ್ಕೆಯಲ್ಲಿ ನಿರ್ದಿಷ್ಟ ನಿರ್ಧಾರಗಳನ್ನು ತೆಗೆದುಕೊಳ್ಳುತ್ತಾರೆ. ಟಿವಿಯ ವಿಸ್ತರಣೆಯಾದಂತೆ ಮಕ್ಕಳಲ್ಲಿ ಕೆಲಮಟ್ಟಿಗೆ ಕಂಡುಬರುತ್ತಿದ್ದ ಇತರ ಮಾಧ್ಯಮ ಚಟುವಟಿಕೆಗಳು ತೀವ್ರವಾಗಿ ಕುಂಠಿತಗೊಂಡವು. ಅನೇಕ ಅಧ್ಯಯನಗಳು ಟಿವಿ ಯುಗದಲ್ಲಿ ಮಕ್ಕಳು ದಿನಪತ್ರಿಕೆಗಳನ್ನು ಓದುವ ಹಾಗು ಬಾನುಲಿ ಕೇಳುವ ಹವ್ಯಾಸಗಳನ್ನು ಬಿಡುತ್ತಿರುವುದನ್ನು ದೃಢಪಡಿಸಿವೆ. ಆದರೆ ಹೊಸ ಮಾಧ್ಯಮ (New media) ಮಕ್ಕಳನ್ನು ತೀವ್ರವಾಗಿ ಆಕರ್ಷಿಸುತ್ತಿದ್ದು ಅಂತರ್ಜಾಲ ಬಳಸುವ ಮಕ್ಕಳ ಪ್ರಮಾಣ ಭಾರಿ ವೇಗದಲ್ಲಿ ವೃದ್ಧಿಸುತ್ತಿದೆ.

### 2.3.1 ಟಿ.ವಿ. ಮತ್ತು ಇತರ ಮಾಧ್ಯಮಗಳು

ಸಮಕಾಲೀನ ಜನಜೀವನವನ್ನು ರೂಪಿಸುವಲ್ಲಿ ಟಿವಿ ವಹಿಸುವ ಪಾತ್ರ ಅತ್ಯದ್ಭುತ. ಟಿವಿ ಮಾಧ್ಯಮ ತನ್ನಳೊಗಿರುವ ಬಲವಾದ ಮತ್ತು ಪರಿಣಾಮಕಾರಿ ಶಕ್ತಿಗಳಿಂದ ಅದು ಜನರ ಅನಿಸಿಕೆಗಳು, ನಡವಳಿಕೆಗಳು ಹಾಗು ಜೀವನಶೈಲಿಗಳ ಮೇಲೆ ಸಾಧಿಸಿರುವ ಹಿಡಿತ ಹಾಗು ಬೀರುವ ಪ್ರಭಾವದಂತೆಯೇ ಮಕ್ಕಳ ಮೇಲೂ ಪರಿಣಾಮ ಬೀರುತ್ತವೆ.

ಕೆಲ ಪ್ರಯೋಗಗಳು ಶಿಕ್ಷಣ, ಕಲಿಕೆ ಹಾಗು ಅನುರಣೆಯ ಪ್ರಕ್ರಿಯೆ ಟಿವಿ ಮಾಧ್ಯಮದ ಮೂಲಕ ಹೆಚ್ಚು ಪರಿಣಾಮಕಾರಿ ಎಂಬುದನ್ನು ತೋರಿಸಿಕೊಟ್ಟಿವೆ. ಮಕ್ಕಳು ಓದುವ ಪ್ರಕ್ರಿಯೆ, ಕೇಳುವ ಪ್ರಕ್ರಿಯೆಗಳಿಗಿಂತ ಹೆಚ್ಚಾಗಿ ನೋಡುವ ಪ್ರಕ್ರಿಯೆಯಿಂದ ಹೆಚ್ಚು ಕಲಿಯುತ್ತಾರೆಂಬ ಅಂಶ ಸಾಬೀತಾಗಿದೆ.

ಪಾಜ್‌ಡೆಕ್ ಮತ್ತು ಲೆಹ್ರರ್ ತಮ್ಮ ಪ್ರಯೋಗಗಳ ಮುಖಾಂತರ ಮಕ್ಕಳಲ್ಲಿ ಬಾನುಲಿಗಿಂತ ಹೆಚ್ಚಾಗಿ ಟಿವಿ ಹೆಚ್ಚು ವಿಷಯ ಗ್ರಾಹಕತೆಗೆ ಹಾಗು ನೆನಪಿಸಿಕೊಳ್ಳುವ ಪ್ರಕ್ರಿಯೆಗೆ ಅನುವು ಮಾಡುತ್ತದೆ ಎಂಬುದನ್ನು ಕಂಡುಕೊಂಡರು. ಟಿವಿ ಮಕ್ಕಳಿಗೆ ಮಾಹಿತಿ ರವಾನೆ ಪ್ರಕ್ರಿಯೆಯಲ್ಲಿ ಬಾನುಲಿಗೆ ಹೋಲಿಸಿದಾಗ ಪರಿಣಾಮಕಾರಿ ಎಂಬ ಅಂಶ, ಟಿವಿ ಕಾರ್ಯಕ್ರಮ ನಿರ್ಮಾಪಕರು ಗುಣಾತ್ಮಕ ಕಾರ್ಯಕ್ರಮಗಳನ್ನು ನಿರ್ಮಿಸುವಲ್ಲಿ ಹೆಚ್ಚು ಜವಾಬ್ದಾರಿಯನ್ನು ತೋರಬೇಕಾದ ಅಗತ್ಯತೆಯನ್ನು ಎತ್ತಿ ಹಿಡಿಯುತ್ತದೆ.

ಸಂವಹನ ಮಾಧ್ಯಮವಾಗಿ ತನ್ನದೇ ಸ್ಥಾನ ಕಲ್ಪಿಸಿಕೊಂಡಿರುವ ಟಿವಿ ಕೇವಲ ವ್ಯಕ್ತಿ ಮಟ್ಟವಲ್ಲದೆ ಸಮೂಹ ಮಟ್ಟದಲ್ಲಿಯೂ ಸಾಕಷ್ಟು ಪ್ರಭಾವ ಬೀರುತ್ತದೆ. ಇತರ ಎಲ್ಲಾ ಮಾಧ್ಯಮಗಳನ್ನು ಹಿಂದಕ್ಕೆ ಹಾಕಿರುವ ಅದು ತನ್ನ 'ದೃಶ್ಯ ಸಂವಹನ ಪ್ರಕ್ರಿಯೆ', ವಿಭಿನ್ನತೆ ಹಾಗು ತಕ್ಷಣದ ಪರಿಣಾಮಗಳಿಗಾಗಿ ಗುರುತಿಸಲ್ಪಡುತ್ತದೆ. ಅಲ್ಲದೆ ಇತರ ಮಾಧ್ಯಮಗಳು ಟಿವಿಯಂತೆ ಅತ್ಯಲ್ಪ ವೆಚ್ಚದಲ್ಲಿ ಜನರ ಮನೆಬಾಗಿಲಿಗೆ ತಲುಪಲು ಸಾಧ್ಯವಿಲ್ಲ.

ಟಿವಿ ಕ್ರಾಂತಿಯ ಪರಿಣಾಮ ಬಹುತೇಕ ಎಲ್ಲ ರಾಷ್ಟ್ರಗಳಲ್ಲಿಯೂ ಒಂದಕ್ಕೊಂದು ಹೋಲಿಕೆಯಿರುವ ಪರಿಣಾಮಗಳನ್ನು ಉಂಟುಮಾಡಿದೆ. ಪ್ರಪಂಚದೆಲ್ಲೆಡೆ ಮಕ್ಕಳು ಟಿವಿಗೆ ನೀಡುತ್ತಿರುವ ಸರಾಸರಿ ಸಮಯ ನಿರಂತರವಾಗಿ ಏರಿಕೆಯಾಗುತ್ತಿದೆ. ಬಾಲ್ಯಾವಸ್ಥೆಯ ಅಗತ್ಯ ಚಟುವಟಿಕೆಗಳು ಬಹುಬೇಗ ಮಾಯವಾಗುತ್ತಿವೆ. ಮಕ್ಕಳು ಕೇವಲ ಟಿವಿಯೊಂದರಿಂದಲೇ ಪ್ರಪಂಚದ ಆಗು ಹೋಗುಗಳನ್ನು ಅರ್ಥಮಾಡಿಕೊಳ್ಳುವ, ಕಲಿಯುವ ಪ್ರಯತ್ನ ಮಾಡುತ್ತಿರುವುದು ಅತ್ಯಂತ ಕಳವಳಕಾರಿ ವಿಷಯ.

## 2.4 ಮಾಧ್ಯಮ ಪ್ರಭಾವದ ಮಜಲುಗಳು

ಮಕ್ಕಳು ಮತ್ತು ಮಾಧ್ಯಮಗಳಿಗೆ ಸಂಬಂಧಿಸಿದಂತೆ ಪ್ರಸಿದ್ಧ ಸಂವಹನ ತಜ್ಞ ವಿಲ್ಬರ್ ಶ್ರಾಮ್ ನಡೆಸಿದ ಅಧ್ಯಯನ ಅನೇಕ ಹೊಸ ವಿಚಾರಗಳನ್ನು ತೆರೆದಿಟ್ಟಿತು. ಅತ್ಯಂತ ವಿಸ್ತಾರವಾದ ಅಧ್ಯಯನವನ್ನು ಪೂರ್ಣಗೊಳಿಸಿದ ನಂತರ ಶ್ರಾಮ್ ಮಾಧ್ಯಮದಿಂದ ಮಕ್ಕಳ ಮೇಲಾಗುವ ಪರಿಣಾಮಗಳನ್ನು ಈ ರೀತಿಯಾಗಿ ಸಂಕ್ಷಿಪ್ತಗೊಳಿಸಿದ್ದಾರೆ. "ಕೆಲ ಮಕ್ಕಳಿಗೆ, ಕೆಲ ನಿರ್ದಿಷ್ಟ ಸನ್ನಿವೇಶಗಳಲ್ಲಿ, ಒಂದಷ್ಟು ಟಿವಿ ಹಾನಿಕಾರ. ಇನ್ನೂ ಕೆಲ ಮಕ್ಕಳಿಗೆ ಅಂತಹುದೇ ಸನ್ನಿವೇಶಗಳಲ್ಲಿ ಅಥವಾ ಅದೇ ಮಕ್ಕಳಿಗೆ , ಬಹುತೇಕ ಸನ್ನಿವೇಶಗಳಲ್ಲಿ ಬಹುಪಾಲಿನ ಟಿವಿ ಕಾರ್ಯಕ್ರಮಗಳು ಯಾವುದೇ ರೀತಿಯ ಹಾನಿಯನ್ನುಂಟು ಮಾಡುವುದಾಗಲಿ, ಅಥವಾ ಉಪಯುಕ್ತವಾಗಿಯಾಗಲೀ ಇರುವುದಿಲ್ಲ'.

### 2.4.1 ಟಿವಿ ಮಾಧ್ಯಮದ ವಿಭಿನ್ನ ಪಾತ್ರಗಳು ಹಾಗು ತೆರೆದುಕೊಳ್ಳುವಿಕೆ

ಅನೇಕರು ಟಿವಿಯನ್ನು "ಮಕ್ಕಳ ಪಾಲಕ", "ಮಲತಾಯಿ", "ಬದಲಿ ಶಿಕ್ಷಕ", "ವಿದ್ಯುನ್ಮಾನ ಸ್ನೇಹಿತ", "ಮೂರನೆಯ ತಂದೆ/ತಾಯಿ", "ಮಾಂತ್ರಿಕ" ಮುಂತಾದ ಹೆಸರುಗಳಿಂದ ಕರೆಯುತ್ತಾರೆ. ಇನ್ನು ಕೆಲವರು ಟಿವಿ ವೀಕ್ಷಣೆಯನ್ನು ಸಮಯ ಹಾಳು ಚಟುವಟಿಕೆಯೆಂತಲೂ ಕರೆಯುತ್ತಾರೆ. ಮಾಧ್ಯಮ ತಜ್ಞ ಶ್ರಾಮ್ ಹೇಳುವಂತೆ ಹತ್ತು ವರ್ಷ ವಯಸ್ಸಿನೊಳಗಿನ ಮಕ್ಕಳ ಮೇಲೆ ಟಿವಿ ಪರಿಣಾಮ ಅತಿಹೆಚ್ಚು. ಈ ಮಕ್ಕಳ ವಯಸ್ಸು, ಲಿಂಗ, ಮಾನಸಿಕ ಬಲ ಹಾಗು ಕೌಟುಂಬಿಕ ಹಿನ್ನಲೆಯ ಅನೇಕ ಅಂಶಗಳು ವೀಕ್ಷಣೆ ಪ್ರಕ್ರಿಯೆಯ ವಿಧಿ ವಿಧಾನಗಳನ್ನು ನಿರ್ಧರಿಸುತ್ತವೆ.

ಅನೇಕ ಸಂಶೋಧನೆಗಳ ಫಲಿತಾಂಶ ಬೆಳಕು ಚೆಲ್ಲುವಂತೆ ಮೂರರಿಂದ ಹದಿನಾರು ವರ್ಷ ವಯಸ್ಸಿನ ಮಕ್ಕಳು ಶಾಲಾ ಕಲಿಕೆಗೆ ಮೀಸಲಿರುವ ಸಮಯಕ್ಕಿಂತ ಹೆಚ್ಚು ಸಮಯವನ್ನು ಟಿವಿ ವೀಕ್ಷಣೆಗೆ ವ್ಯಯಿಸುತ್ತವೆ. ಸುಮಾರು ಆರನೇ ಒಂದು ಭಾಗದಷ್ಟು ಸಮಯವನ್ನು ಈ ಮಕ್ಕಳು ಟಿವಿ ವೀಕ್ಷಣೆಯಲ್ಲಿ ಕಳೆಯುತ್ತವೆ ಎಂದು ಅಂದಾಜಿಸಲಾಗಿದೆ. ಒಂದು ಮಗು ಬಹುಶಃ ನಿದ್ದೆಯೊಂದನ್ನು ಹೊರತುಪಡಿಸಿ ಆಟವೂ ಸೇರಿದಂತೆ ಉಳಿದ ಚಟುವಟಿಕೆಗಳಿಗಿಂತ ಹೆಚ್ಚು ಸಮಯವನ್ನು ಟಿವಿ ಮುಂದೆ ಕಳೆಯುವುದರಿಂದ, ಕೆಲವೇ ವರ್ಷಗಳ ಹಿಂದೆ ನೈಸರ್ಗಿಕವೆನಿಸಿದ್ದ ಅನೇಕ ಬಾಲ್ಯಾವಸ್ಥೆಯ ಚಟುವಟಿಕೆಗಳಿಗೆ ಕಡಿವಾಣ ಬಿದ್ದಿದೆ ಅಥವಾ ಸಂಪೂರ್ಣ ಮರೆಯಾಗಿವೆ.

ಕೆಲ ಮುಂದುವರೆದ ರಾಷ್ಟ್ರಗಳಲ್ಲಿ ನಡೆದ ಸಮೀಕ್ಷೆಯ ಫಲಿತಾಂಶಗಳ ಪ್ರಕಾರ, ಶಾಲಾ ಮಕ್ಕಳ ಮೇಲೆ ಟಿವಿ ಬೀರುವ ಪ್ರಭಾವ, ಪರಿಣಾಮಗಳು ಅಪಾರ. ಮಕ್ಕಳು ಮಾತನಾಡಲು, ಆಟವಾಡಲು ಮತ್ತು ಓದಲು ವ್ಯಯಿಸುವ ಒಟ್ಟು ಸಮಯಾವಧಿಗಿಂತ ಹೆಚ್ಚು ಸಮಯವನ್ನು ಟಿವಿ ನೋಡುವಲ್ಲಿ ಕಳೆಯುತ್ತಿದ್ದವು. ಪ್ರೌಢಶಾಲಾ ಶಿಕ್ಷಣ ಮುಗಿಸುವ ಹೊತ್ತಿಗೆ ಮಗುವೊಂದು ಶಾಲಾ ಚಟುವಟಿಕೆಗೆ ಒಟ್ಟು ಅಂದಾಜು 12,000 ತಾಸುಗಳಷ್ಟು ಸಮಯ ವ್ಯಯಿಸಿದ್ದರೆ, ಟಿವಿ ವೀಕ್ಷಿಸಲು 18,000 ತಾಸುಗಳಷ್ಟು ಸಮಯವನ್ನು ಮೀಸಲಾಗಿಟ್ಟಿದುದು ತಿಳಿದು ಬಂದಿತು. ಪ್ರಸಿದ್ಧ ಅಮೇರಿಕನ್ ಮನಶಾಸ್ತ್ರಜ್ಞ ಡೋರ್ ಅಂದಾಜಿಸಿದಂತೆ ಮಕ್ಕಳು ಶಾಲಾ ವಯಸ್ಸು ಮೀರುವ ಹೊತ್ತಿಗೆ ಔಪಚಾರಿಕ ಶಿಕ್ಷಣಕ್ಕಿಂತ ಮಾಧ್ಯಮಕ್ಕೆ ಹೆಚ್ಚು ಸಮಯವನ್ನು ನೀಡುತ್ತವೆ. ಸರಾಸರಿ 65 ವರ್ಷ ವಯಸ್ಸನ್ನು ತಲುಪಿದಾಗ ಜೀವಿತಾವಧಿಯ ಒಂಬತ್ತು ವರ್ಷಗಳಷ್ಟು ಸಮಯ ಕೇವಲ ಟಿವಿ ವೀಕ್ಷಣೆಗೇ ಕಳೆದಿರುತ್ತಾರೆ. ಟಿವಿಯೊಂದಿಗೆ ಬೆಳೆಯುವ ಪ್ರಕ್ರಿಯೆ ಇತ್ತೀಚಿನ ಪೀಳಿಗೆಯ ಮಕ್ಕಳಿಗೆ ಮಾತ್ರ ಸಿಕ್ಕ ಅವಕಾಶ. ಮಕ್ಕಳು ಮುಂದುವರೆದ ಅಥವಾ ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ಎಲ್ಲೇ ಇದ್ದರೂ ಟಿವಿಯ ಈ ಬಿಗಿಹಿಡಿತದಿಂದ ಬಿಡಿಸಿಕೊಳ್ಳಲು ಸಾಧ್ಯವಿಲ್ಲ.

ಭಾರತದಲ್ಲಿಯೂ ಕೂಡ ಮಕ್ಕಳ ಟಿವಿ ವೀಕ್ಷಣೆ ಕುರಿತ ಕೆಲ ಸಂಶೋಧನೆಗಳು ಹಾಗು ಅಧ್ಯಯನಗಳು ನಡೆದಿವೆ. ಅಧ್ಯಯನದ ಅಂಕಿ ಅಂಶಗಳನ್ನು ವಿಶ್ಲೇಷಿಸಿದಾಗ ಕಂಡುಬರುವ ಅಂಶಗಳೆಂದರೆ ಗ್ರಾಮೀಣ ಪರಿಸರದಲ್ಲಿರುವ ಮಕ್ಕಳಿಗಿಂತ ನಗರ ಪ್ರದೇಶದಲ್ಲಿರುವ ಮಕ್ಕಳು ಬಹು ಪಟ್ಟು ಸಮಯವನ್ನು ಟಿವಿ ಮುಂದೆ ಕಳೆಯುತ್ತಾರೆ. ಪಾಠ ಪ್ರವಚನಗಳು ಮತ್ತು ನಿದ್ರೆಯ ಹೊರತಾಗಿ ಸಿಗುವ ಸಮಯದ ಶೇಕಡ 70ರಷ್ಟು ಅವಧಿಯನ್ನು ಟಿವಿ ಮುಂದೆ ಕಳೆಯುವ ಮಕ್ಕಳು ಹಿಂದೆಂದಿಗಿಂತಲೂ ಹೆಚ್ಚಾಗಿ ಟಿವಿ ಕಾರ್ಯಕ್ರಮಗಳಿಗೆ ತೆರೆದುಕೊಳ್ಳುತ್ತಿದ್ದಾರೆ.

## 2.4.2 ಸಮಯ ವ್ಯರ್ಥ ಚಟುವಟಿಕೆ

ಮಕ್ಕಳ ಟಿವಿ ವೀಕ್ಷಣೆಯ ಸಮಯ ಸಮಾಜ ವಿಜ್ಞಾನ ಹಾಗು ಮಾಧ್ಯಮ ಸಂಶೋಧಕರಿಗೆ ಸವಾಲಿನ ವಿಷಯ. ಭಾರತದಂತಹ ಅಭಿವೃದ್ಧಿಶೀಲ ರಾಷ್ಟ್ರದಲ್ಲಿ ಉಪಗ್ರಹ ಸಂವಹನ ತಂತ್ರಜ್ಞಾನದ ಬಳಕೆಯಿಂದಾಗಿ ತ್ವರಿತವಾಗಿ ಪಸರಿಸುತ್ತಿರುವ ಟಿವಿ ಮಾಧ್ಯಮ ಇಲ್ಲಿಯ ಮಕ್ಕಳ ಮೇಲೂ ಬಹುತೇಕ ಅದೇ ರೀತಿಯ ಪರಿಣಾಮಗಳನ್ನು ಬೀರುತ್ತಿದೆ ಎನ್ನಬಹುದು. ಮಾಧ್ಯಮ ಸಂಶೋಧಕ ಮಾರ್ಟಿನ್ ಲಾರ್ಚ್ "ಟಿವಿ ವೀಕ್ಷಣೆ ಮಕ್ಕಳ ಸಹಜ ಚಟುವಟಿಕೆಗಳು ಹಾಗು ನಡವಳಿಕೆಗಳ ಮೇಲೆ ತೀವ್ರ ಪ್ರಭಾವ ಬೀರುತ್ತಿದ್ದು, ಮುಂದಿನ ಜೀವನ ಶೈಲಿಯನ್ನು ಬಹುತೇಕ ನಿರ್ಧರಿಸುವ ಪ್ರಕ್ರಿಯೆ ಚಿಕ್ಕ ವಯಸ್ಸಿನಲ್ಲಿಯೇ ಬಹುಮಟ್ಟಿಗೆ ನಿರ್ಧಾರವಾಗುವ ಅಪಾಯಗಳನ್ನು ಮಕ್ಕಳು ಎದುರಿಸುತ್ತಿದ್ದಾರೆ" ಎನ್ನುತ್ತಾರೆ. ಹಾಗೆಯೇ, ಆಧುನಿಕತೆಯ ಒತ್ತಡದ ಪರಿಸರ ಟಿವಿ ವೀಕ್ಷಣೆಯನ್ನು ಬಿಡುವಿನ ವೇಳೆಯ ಚಟುವಟಿಕೆಯನ್ನಾಗಿ ಗುರುತಿಸುತ್ತದೆ. 10-14 ವರ್ಷ ವಯಸ್ಸಿನ ಮಕ್ಕಳಿಗೆ ಸಾಮಾನ್ಯ ಕಾರ್ಯಕ್ರಮ ವೀಕ್ಷಣೆಯಿಂದ ಲವಲೇಶದ ಪ್ರಯೋಜನವೂ ಇಲ್ಲ ಬದಲಾಗಿ ವ್ಯಸನಕ್ಕೆ ಬಲಿಯಾಗುವ ಅಪಾಯವೇ ಜಾಸ್ತಿ ಎಂಬುದು ಸಂಶೋಧನೆಗಳು ತಿಳಿಯಪಡಿಸಿವೆ.

ಸಂಶೋಧನೆಗಳಿಂದ ಧೃಢಪಟ್ಟ ಇತರ ಸಾಮಾನ್ಯ ಮಾಹಿತಿಗಳೆಂದರೆ, ರಜಾದಿನಗಳಲ್ಲಿ ಮಕ್ಕಳು ಹೆಚ್ಚು ಹೆಚ್ಚು ಟಿವಿ ನೋಡುತ್ತಾರೆ ಎಂಬುದು, ಗಂಡು ಮಕ್ಕಳು ಮತ್ತು ಹೆಣ್ಣು ಮಕ್ಕಳ ನಡುವೆ ವೀಕ್ಷಣೆಯಲ್ಲಿ ಯಾವುದೇ ರೀತಿಯ ಭಿನ್ನತೆಯಿಲ್ಲ ಎನ್ನುವುದು, ಕಡಿಮೆ ವಯಸ್ಸಿನ ಮಕ್ಕಳು (8ರಿಂದ 10 ವರ್ಷ) ಹೆಚ್ಚು ವಯಸ್ಸಿನ ಮಕ್ಕಳಿಗಿಂತ (10ರಿಂದ 12 ವರ್ಷ) ಜಾಸ್ತಿ ಟಿವಿ ನೋಡುತ್ತಾರೆ ಎಂಬ ಅಂಶಗಳು ಅಧ್ಯಯನಗಳಿಂದ ಧೃಢಪಟ್ಟಿವೆ.

ಟಿವಿ ಮತ್ತು ವೀಡಿಯೋಗಳು ದೇಶದಲ್ಲಿ ನೆಲೆಯೂರಿದಂತೆ ಆರ್ಥಿಕ ಸಧೃಢತೆಯ ಭಾರತೀಯ ಮನೆಗಳಲ್ಲಿನ ಮಕ್ಕಳು ಹಾಗು ಮಧ್ಯಮ ವರ್ಗದ ಮಕ್ಕಳಲ್ಲಿ ಸಾಮಾಜಿಕ ಒಡನಾಟಕ್ಕೆ ಅವಕಾಶವೇ ಸಿಗದಂತಾಗುತ್ತಿದೆ. ಕೆಲವೇ ವರ್ಷಗಳ ಹಿಂದೆ ಮಕ್ಕಳು ತೊಡಗಿಕೊಳ್ಳುತ್ತಿದ್ದ ಅನೇಕ ಚಟುವಟಿಕೆಗಳು ಇಂದು ಮರೆಯಾಗಿವೆ. ದೈಹಿಕವಾಗಿ ಯಾವುದೇ ಚಟುವಟಿಕೆ ಅಥವಾ ಶ್ರಮ ಬಯಸದ ಈ ವ್ಯಸನ ಮಕ್ಕಳ ಆರೋಗ್ಯದ ಮೇಲೂ ನಕಾರಾತ್ಮಕ ಪರಿಣಾಮ ಬೀರುತ್ತಿದೆ.

## 2.4.3 ಮಾಧ್ಯಮ ಮತ್ತು ಮಾಹಿತಿ ಮಟ್ಟ

ಮಕ್ಕಳು ಮಾಧ್ಯಮಗಳಿಗೆ ತೆರೆದುಕೊಂಡಂತೆ ಯಥೇಚ್ಚ ಮಾಹಿತಿಗೆ ತೆರೆದುಕೊಳ್ಳಲು ಅನುವಾಗುತ್ತದೆ. ದಿನಪತ್ರಿಕೆಗಳು, ನಿಯತಕಾಲಿಕಗಳು ಹಾಗು ವಿಶೇಷ ಪ್ರಕಟಣೆಗಳು ನೂರಾರು ವಿಷಯಗಳ ಬಗ್ಗೆ ಮಾಹಿತಿ - ವಿವರಗಳನ್ನು ನೀಡುತ್ತವೆ. ಬಾನುಲಿ ಕಾರ್ಯಕ್ರಮಗಳು, ಶೈಕ್ಷಣಿಕ ಚಿತ್ರಗಳು ಹಾಗು ಸಾಕ್ಷ್ಯಚಿತ್ರಗಳು ಮಕ್ಕಳ ಜ್ಞಾನವನ್ನು ವೃದ್ಧಿಸುತ್ತವೆ. ಅಧ್ಯಯನಗಳ ಪ್ರಕಾರ, ಮಕ್ಕಳ ಟಿವಿ ಮಾಧ್ಯಮದ ಸುದ್ದಿ ಮಾಹಿತಿಯನ್ನು ಹೆಚ್ಚು ಪರಿಣಾಮಕಾರಿ ಹಾಗು ವಿಶ್ವಾಸಾರ್ಹ ಎಂದು ಪರಿಗಣಿಸುತ್ತಾರೆ. ಮಾಧ್ಯಮಗಳಿಗೆ ತೆರೆದುಕೊಳ್ಳುವ ಪ್ರಕ್ರಿಯೆ ಮಕ್ಕಳ ಜ್ಞಾನಾರ್ಜನೆಗೆ, ಸಾಮಾನ್ಯ ತಿಳುವಳಿಕೆಯ ಹೆಚ್ಚಳಕ್ಕೆ ಹಾಗು ಬುದ್ಧಿಮತ್ತೆಯ ಹೆಚ್ಚಳಕ್ಕೆ ಕಾರಣವಾಗುವ ಪ್ರಮುಖ ಅಂಶಗಳಲ್ಲಿ ಒಂದು.

ಟಿವಿ ಕಾರ್ಯಕ್ರಮ ವೀಕ್ಷಣೆ ಮಕ್ಕಳ ಬುದ್ಧಿವಂತಿಕೆಗೆ ನೇರವಾಗಿ ಸಂಬಂಧವುಳ್ಳದ್ದಾಗಿದೆ. ಒಂದು ಬ್ರಿಟಿಷ್ ಅಧ್ಯಯನದ ಪ್ರಕಾರ, ಬುದ್ಧಿವಂತ ಮಕ್ಕಳು ಕೆಲ ಆಯ್ದ ಕಾರ್ಯಕ್ರಮಗಳನ್ನಷ್ಟೆ ವೀಕ್ಷಿಸುವ ಹಾಗು ಇತರ ಚಟುವಟಿಕೆಗಳಲ್ಲಿ ಹೆಚ್ಚು ತೊಡಗಿಕೊಳ್ಳುವುದು ಕಂಡು ಬಂದಿದೆ. ಹಾಗೆಯೇ ಮಗುವಿನ ಬುದ್ಧಿಮತ್ತೆ ಟಿವಿ ವೀಕ್ಷಣೆಯ ಒಟ್ಟು ಅವಧಿಗೆ ಋಣಾತ್ಮಕ ಸಂಬಂಧವನ್ನು ಹೊಂದಿರುವುದು ಸಹ ಕಂಡು ಬಂದಿದೆ. ಭಾರತದಲ್ಲಿಯೂ ಇಂತಹ ಅನೇಕ ಅಧ್ಯಯನಗಳು ನಡೆದಿದ್ದು ಹದಿಹರೆಯದ ಮಕ್ಕಳಲ್ಲಿ ಟಿವಿ ವೀಕ್ಷಣೆಯ ಅವಧಿ ಹೆಚ್ಚಿದಂತೆಲ್ಲಾ ಬುದ್ಧಿಮತ್ತೆಯ ಮಟ್ಟದಲ್ಲಿ ಹಾಗು ಶೈಕ್ಷಣಿಕ ಪ್ರಗತಿಯಲ್ಲಿ ಕುಂಠಿತಗೊಂಡಿರುವುದನ್ನು ಗುರುತಿಸಲಾಗಿದೆ. ಇದಕ್ಕಿರುವ ಪ್ರಮುಖ ಕಾರಣವೆಂದರೆ ವೀಕ್ಷಣೆಗೆ ಮಕ್ಕಳು ಆಯ್ದುಕೊಳ್ಳುವ ಕಾರ್ಯಕ್ರಮಗಳು. ಜ್ಞಾನಾರ್ಜಕ ಅಂಶಗಳಿಲ್ಲದಿದ್ದಲ್ಲಿ ಎಷ್ಟು ವೀಕ್ಷಿಸಿದರೂ ವ್ಯರ್ಥ.

## 2.4.4 ಮಾಧ್ಯಮ ಮತ್ತು ಶಾಲಾ ಪ್ರಗತಿ

ಶಾಲಾ ಮಕ್ಕಳಿಗೆ ಅತ್ಯಂತ ಉಪಯುಕ್ತ ಸಮೂಹ ಸಂವಹನ ಮಾಧ್ಯಮ ಯಾವುದು ಎಂಬುದನ್ನು ಗುರುತಿಸಲು ಅನೇಕ ಅಧ್ಯಯನಗಳು ನಡೆದಿವೆ. ವಿಲ್ಬರ್ ಶ್ರಾಮ್ ಮತ್ತವರ ಸಹಚರರು ನಡೆಸಿದ ಅಧ್ಯಯನಗಳಲ್ಲಿ ಶೇ.50ಕ್ಕಿಂತ ಕೊಂಚ ಹೆಚ್ಚು ಸಂಖ್ಯೆಯ ಮಕ್ಕಳಿಗೆ ಉಪಯುಕ್ತವೆಂದು ಕಂಡು ಬಂದವು. ಇತರ ಎಲ್ಲಾ ಮಾಧ್ಯಮಗಳು ಶೇ.10ಕ್ಕಿಂತ ಹೆಚ್ಚಿನ ಮಕ್ಕಳಿಗೆ ಉಪಯುಕ್ತವೆನಿಸಲೇ ಇಲ್ಲ. ಇದೇ ಮಕ್ಕಳು ಪ್ರೌಢಶಾಲಾ ಮಟ್ಟವನ್ನು ಮುಟ್ಟಿದಾಗ ಈ ಅಂಕಿ ಅಂಶಗಳಲ್ಲಿ ಭಾರಿ ವ್ಯತ್ಯಯ ಕಂಡು ಬಂದಿತು. ಬುದ್ಧಿವಂತ ಮಕ್ಕಳು ಟಿ.ವಿ. ಶಾಲಾ ಅಧ್ಯಯನಕ್ಕೆ ಸಹಕಾರಿ ಎಂದು ವಾದಿಸಿದವು. ಆದರೆ ಅವರ ಕಾರ್ಯಕ್ರಮ ಆಯ್ಕೆಯಲ್ಲಿ ನಿರ್ದಿಷ್ಟತೆ ಕಂಡು ಬಂದಿತು. ಕಲ್ಪನಾ ಕಥಾವಸ್ತುಗಳ ಕಾರ್ಯಕ್ರಮಕ್ಕಿಂತ ವಾಸ್ತವತೆಯನ್ನಾಧರಿಸಿದ ಕಾರ್ಯಕ್ರಮಗಳು ಅವರನ್ನು ಹೆಚ್ಚು ಸೆಳೆಯುವುದು ಕಂಡು ಬಂದಿತು. ಹಾಗೆಯೇ ಬಹುತೇಕ ಮಕ್ಕಳಿಗೆ ಟಿ.ವಿ. ವೀಕ್ಷಣೆಯಿಂದ ಕಲಿಕೆ ಕೇವಲ ಪ್ರಾಸಂಗಿಕ ಎನ್ನುವುದು ಅಧ್ಯಯನದಿಂದ ತಿಳಿದು ಬಂದಿತು.

ಹಿಮ್ಮೆಲ್‌ವೀಟ್ ಮತ್ತು ಸಹಚರರು ನಡೆಸಿದ ಸಂಶೋಧನೆಗಳಲ್ಲಿ ಶಾಲಾ ಪ್ರಗತಿಗೆ ಹೋಲಿಸಿದಾಗ ಟಿವಿ ಯಾವುದೇ ರೀತಿಯಲ್ಲಿ ನಿರ್ದಿಷ್ಟ ಅನುಕೂಲತೆಯನ್ನು ಹೊಂದಿರುವ ಅಥವಾ ನಿರ್ದಿಷ್ಟ ಕೊರತೆ ಇಲ್ಲವೆ ಅನಾನುಕೂಲತೆಯನ್ನು ಹೊಂದಿರುವ ಬಗ್ಗೆ ಸ್ಪಷ್ಟ ಮಾಹಿತಿಯನ್ನು ಒದಗಿಸಲಿಲ್ಲ. ಇನ್ನೊಬ್ಬ ಅಧ್ಯಯನಕಾರ ಹೋಪ್ ಗಮನಿಸಿದಂತೆ ಟಿವಿ ವೀಕ್ಷಣೆಯಿಂದ ಬದಲಿ ಮಾಧ್ಯಮ ಮನರಂಜನೆ, ಉದಾಹರಣೆಗೆ ಕಾಮಿಕ್ಸ್ ಅಥವಾ ನಿಯತಕಾಲಿಕ ಓದುವಿಕೆ ಕುಂಠಿತಗೊಂಡರೂ, ಶಾಲಾ ಶಿಕ್ಷಣ ಹಾಗು ಹವ್ಯಾಸಗಳಂತಹ ಇತರ ರಚನಾತ್ಮಕ ಚಟುವಟಿಕೆಗಳಿಗೆ ಅಷ್ಟೇನೂ ಮಾರಕವಲ್ಲ. ಮಾರ್ಟಿನ್ ಲಾರ್ಜ್ ಮಕ್ಕಳು ಓದುವುದನ್ನು-ಬರೆಯುವುದನ್ನು ಟಿವಿಗಾಗಿ ಬೇಗ ಮುಗಿಸುವ, ಪರೀಕ್ಷೆಗಳು ಹಾಗು ಒಟ್ಟಾರೆ ಶಿಕ್ಷಣವನ್ನು ಟಿವಿ ವೀಕ್ಷಣೆಗಾಗಿ ಕಡೆಗಣಿಸುತ್ತಿರುವುದನ್ನು ಕಂಡುಕೊಂಡರು. ಇಷ್ಟೆ ಅಲ್ಲದೆ, ಹೆಚ್ಚಿನ ಟಿವಿ ವೀಕ್ಷಣೆಯಿಂದ ಇತರ ಶಾಲಾ ಸಂಬಂಧಿ ಸಮಸ್ಯೆಗಳೂ ಉದ್ಭವಿಸುವುದನ್ನು ಗುರುತಿಸಿದರು. ಆದರೆ ಕೆಲ ಭಾರತೀಯ ಸಂಶೋಧಕರು ಟಿವಿ ವೀಕ್ಷಣೆಯಿಂದ ಮಕ್ಕಳ ಶಿಕ್ಷಣಕ್ಕೆ ಯಾವುದೇ ಹಾನಿ ಇಲ್ಲ ಎಂದು ವಾದಿಸುತ್ತಾರೆ. ಬಹುಶಃ ಇಂತಹ ಒಂದು ತೀರ್ಮಾನಕ್ಕೆ ಬರಲು ತಂದೆ-ತಾಯಿಯರ ಮಾರ್ಗದರ್ಶನ ಹಾಗು ಟಿವಿ ವೀಕ್ಷಣೆಗೆ ಮಕ್ಕಳ ಮೇಲಿರುವ ನಿರ್ಬಂಧಗಳು ಕಾರಣವಿರಬಹುದು ಅಥವಾ ಭಾರತೀಯ ಟಿವಿ ಕಾರ್ಯಕ್ರಮಗಳ ಒಟ್ಟಾರೆ ಸಂರಚನೆಯೂ ಕಾರಣವಿರಬಹುದು.

## 2.4.5 ಮಾಧ್ಯಮ ಮತ್ತು ಸಾಮಾಜಿಕ ಸಂಬಂಧಗಳು

ಮಕ್ಕಳ ಸಾಮಾಜಿಕ ಸಂಬಂಧಗಳ ಮೇಲೆ ಟಿವಿ ಬೀರಿರುವ ಪ್ರಭಾವದಷ್ಟು ಇನ್ಯಾವುದೇ ಮಾಧ್ಯಮ ಪ್ರಭಾವ ಬೀರಿಲ್ಲ. ಮೊದಲು ಸಿನಿಮಾ ವೀಕ್ಷಣೆ ಒಂದು ಸಾಮಾಜಿಕ ಘಟನೆಯಾಗಿ ಪರಿಗಣಿಸಲಾಗುತ್ತಿತ್ತು. ಉಪಗ್ರಹ ಸಂವಹನದೊಂದಿಗೆ ಸಿನಿಮಾ ಸೇರಿದಂತೆ ಪ್ರತಿಯೊಂದು ಕಾರ್ಯಕ್ರಮ ವಿಧವೂ ಈಗ ನೇರವಾಗಿ ಜನರ ಮನೆಗೆ ಟಿವಿ ಮೂಲಕ ತಲುಪುತ್ತದೆ.

ಟಿವಿ ವೀಕ್ಷಣೆಗೆ ಕುಟುಂಬದ ಸದಸ್ಯರು ಒಗ್ಗೂಡಿದರೂ, ಮಕ್ಕಳು ಮತ್ತು ತಂದೆ ತಾಯಂದಿರು ಅಥವಾ ಕುಟುಂಬದ ಇತರ ಸದಸ್ಯರ ನಡುವೆ ಯಾವುದೇ ರೀತಿಯ ಒಡನಾಟ ಸಾಧ್ಯವಾಗುವುದಿಲ್ಲ. ಸಂಶೋಧಕ ಲಾರ್ಜ್, ಮಕ್ಕಳ ಸಾಮಾಜಿಕ ಜೀವನವನ್ನು ಟಿವಿ ಆಕ್ರಮಿಸಿಕೊಂಡಿದೆ ಎನ್ನುತ್ತಾರೆ. ಇವುಗಳಲ್ಲದೆ ಪರಸ್ಪರರೊಂದಿಗಿನ ಮಾತು, ಆಹಾರ ಸೇವನೆ, ಮನೆಗೆಲಸ, ಕಸೂತಿ ಅಥವಾ ಓದುವ ಪ್ರಕ್ರಿಯೆಯೂ ಕೂಡ ಟಿವಿಯ ಮುಂದೆಯೇ ನಡೆಯುತ್ತದೆ. ಹಾಗೆಯೆ, ಟಿವಿ ಇತರ ಎಲ್ಲಾ ಕ್ಷೇತ್ರ ಹಾಗು ಚಟುವಟಿಕೆಗಳಲ್ಲಿಯೂ ಮೂಗು ತೂರಿಸುವುದರಿಂದ ತನ್ನ ಪ್ರಭಾವವನ್ನು ವಿಸ್ತರಿಸಿಕೊಳ್ಳುತ್ತಾ ಹೋಗುತ್ತದೆ ಎಂದು ಅಭಿಪ್ರಾಯ ಪಡಲಾಗುತ್ತದೆ. ಹೀಗೆ ಅತಿ ಹೆಚ್ಚು ಅಥವಾ ಸರಾಸರಿಗಿಂತ ಹೆಚ್ಚು ಟಿವಿ ವೀಕ್ಷಿಸುವ ಕುಟುಂಬಗಳು 'ಸಾಂಸ್ಕೃತಿಕ ಬಡತನ'ದಿಂದ ಬಳಲುತ್ತವೆ. ಈ ಎಲ್ಲಾ ಪ್ರಕ್ರಿಯೆಯನ್ನು ಸೂಕ್ಷ್ಮವಾಗಿ ಗಮನಿಸಿದಾಗ ಕಾಣಸಿಗುವ ಅಂಶವೆಂದರೆ 'ನೀವು ಟಿವಿ ಗುಂಡಿಯನ್ನೊತ್ತುತ್ತಿದ್ದಂತೆ ಮಾನವನನ್ನು ಮನುಷ್ಯನನ್ನಾಗಿ ಮಾಡುವ ಪ್ರಕ್ರಿಯೆಯನ್ನು ನೀವಾಗಿಯೇ ಸ್ಥಗಿತಗೊಳಿಸುತ್ತಿದ್ದೀರಿ ಎಂದರ್ಥ. ಅನೇಕ ಭಾರತೀಯ ಅಧ್ಯಯನಗಳು ಈ ಅನಿಸಿಕೆಯನ್ನು ಪುಷ್ಟೀಕರಿಸುತ್ತವೆ.

ದಿನನಿತ್ಯದ ಜೀವನದ ಮೇಲೆ ಟಿವಿ ಬೀರುವ ಪ್ರಭಾವದ ಬಗ್ಗೆ ಹನ್ನೊಂದು ದೇಶಗಳಲ್ಲಿ ನಡೆಸಿದ ರಾಬಿನ್‌ಸನ್‌ರ ಅಧ್ಯಯನದಿಂದ ತಿಳಿದು ಬಂದ ವಿಷಯವೆಂದರೆ ಟಿವಿಯ ಪ್ರಾರಂಭದ ದಿನಗಳಲ್ಲಿ ಮನೆಯಿಂದಾಚೆ ನಡೆಯುವ ಸಾಮಾಜಿಕ ಒಡನಾಟ, ಬಿಡುವಿನ ವೇಳೆಯ ಚಟುವಟಿಕೆಗಳು (ಪತ್ರ ಬರವಣಿಗೆ, ಕಸೂತಿ-ಹೆಣಿಗೆ ಮುಂತಾದವುಗಳು)ಭಾರಿ ಪ್ರಮಾಣದಲ್ಲಿ ಹಿನ್ನಡೆ ಕಂಡವು.

ಟಿವಿ ವೀಕ್ಷಣೆ ಪ್ರತಿಷ್ಠೆಯ ರೂಪ ತಾಳಿತು. ವೀಕ್ಷಣೆಯ ಬಗ್ಗೆ ಬೆಳೆದುಕೊಂಡ ಪ್ರತಿಷ್ಠೆಯ ಭಾವನೆ ನಿಧಾನವಾಗಿ ಕರಗಿದ ನಂತರ ಸಾಮಾಜಿಕ ಚಟುವಟಿಕೆಗಳು ಕೆಲಮಟ್ಟಿಗೆ ಹಿಂದಿರುಗಿದರೂ ಟಿವಿ ವೀಕ್ಷಣೆ ಕಡಿಮೆಯಾಗಲಿಲ್ಲವೆಂಬುದು ಗಮನಾರ್ಹ.

ಬಾನುಲಿ ಕೇಳುವಿಕೆ, ಸಿನಿಮಾ ವೀಕ್ಷಣೆ, ನಿಯತಕಾಲಿಕ ಓದುವಿಕೆ, ಸಾಮಾಜಿಕ ಒಡನಾಟಗಳೆಲ್ಲವೂ ಟಿವಿಯ ಪ್ರಾರಂಭದ ದಿನಗಳಲ್ಲಿ ಕುಂಠಿತಗೊಂಡರೂ ನಂತರದ ದಿನಗಳಲ್ಲಿ ನಿಧಾನವಾಗಿ ಈ ಚಟುವಟಿಕೆಗಳು ಚೇತರಿಸಿಕೊಂಡವು. ಆದರೆ ಟಿವಿ ವೀಕ್ಷಣೆಯ ಪ್ರಮಾಣ ಮಾತ್ರ ಕುಗ್ಗಲಿಲ್ಲ. ಮಕ್ಕಳೂ ಸೇರಿದಂತೆ ಎಲ್ಲಾ ಟಿವಿ ವೀಕ್ಷಕರ ಮೇಲೆ ಮಾಧ್ಯಮದ ಸಮ್ಮೋಹಕ ಶಕ್ತಿ ಎಷ್ಟು ಅಗಾಧವೆಂದರೆ, ಟಿವಿ ವೀಕ್ಷಣೆಯನ್ನು 'ಪ್ರಜ್ಞಾಸ್ಥಿತಿಯಲ್ಲಿನ ನಿದ್ರೆ' ಎಂದು ಕರೆಯಲಾಗುತ್ತದೆ. ಮಾಧ್ಯಮ ವೀಕ್ಷಕರನ್ನು ಪ್ರಜ್ಞಾಪೂರ್ಣ ಸ್ಥಿತಿಯಲ್ಲಿ ಕಾರ್ಯಕ್ರಮ ವೀಕ್ಷಿಸಲು ಅನುವು ಮಾಡಿದರೂ ದೈಹಿಕ ಸ್ಥಿರತೆಯಿಂದಾಗಿ ವೀಕ್ಷಕನು ಭೌತಿಕವಾಗಿ ನಿದ್ರಾ ಸ್ಥಿತಿಯಲ್ಲಿರುವಂತೆ ಮಾಡುತ್ತದೆ. ಇದಲ್ಲದೆ, ಮಾಧ್ಯಮ ಎಲ್ಲ ರೀತಿಯ ವಾಸ್ತವತೆಯನ್ನು ಅನುಭವದ ಕೊರತೆಯೊಂದಿಗೆ ನೀಡುತ್ತದೆ. ಈ ರೀತಿಯಾದ 'ಪರೋಕ್ಷ' ಅನುಭವವನ್ನು ನಾವು ನಮ್ಮ ಮಕ್ಕಳ ಮೇಲೆ ಬಲವಂತವಾಗಿ ಹೇರುವುದರಿಂದ ಮಕ್ಕಳು ಅನೇಕ ಮಾನವ ಸಹಜ ಅನುಭವಗಳ ಕೊರತೆಯಲ್ಲಿ ಬೆಳೆದು ಅಪಕ್ವವಾಗುತ್ತಾರೆ. ಬಹು ಪ್ರಮಾಣದ ಈ ರೀತಿಯ 'ಪರೋಕ್ಷ', ಅಪ್ರತ್ಯಕ್ಷ ಅನುಭವಕ್ಕಿಂತ, ಕೇವಲ ಒಂದಂಶ 'ನಿಜವಾದ' ಅನುಭವ ಹೆಚ್ಚು ಪ್ರಯೋಜನಕಾರಿ ಎಂಬುದು ಸಾಮಾನ್ಯ ಅನಿಸಿಕೆ.

## 2.4.6 ಟಿವಿ ವ್ಯಸನ ಮತ್ತು ಟಿವಿ ಹಿಂಸೆ

ಟಿವಿ ಮಕ್ಕಳನ್ನು ವ್ಯಸನಕ್ಕೊಳಪಡಿಸುತ್ತದೆಯೇ? ಬಹಳಷ್ಟು ಸಾರಿ ಟಿವಿ ವೀಕ್ಷಣೆ ಕೇವಲ ಟಿವಿ ವೀಕ್ಷಣೆಯಾಗಿರುತ್ತದೆಯೇ ಹೊರತು ಯಾವುದೇ ನಿರ್ದಿಷ್ಟ ಕಾರ್ಯಕ್ರಮ ವೀಕ್ಷಣೆಯಾಗಿರುವುದಿಲ್ಲ. ಬಹುತೇಕ ಮಕ್ಕಳು ಟಿವಿ ಕಾರ್ಯಕ್ರಮಗಳ ನಿಷ್ಕ್ರಿಯ ವೀಕ್ಷಕರಾಗಿರುತ್ತವೆಯೇ ಹೊರತು, ವೀಕ್ಷಣೆಗೆ ಯಾವುದೇ ನಿರ್ದಿಷ್ಟ ಉದ್ದೇಶವಿರುವುದಿಲ್ಲ. ಆದರೆ ಸಮಾಧಾನಕರ ಅಂಶವೆಂದರೆ ಬಹುತೇಕ ಮಕ್ಕಳು ಪ್ರೌಢಾವಸ್ಥೆಗೆ ಕಾಲಿಡುತ್ತಿದ್ದಂತೆ ಉದ್ದೇಶ ರಹಿತ ವೀಕ್ಷಣೆ ಕಡಿಮೆಯಾಗಿ, ಕೆಲ ಆಯ್ದ ಕಾರ್ಯಕ್ರಮಗಳನ್ನಷ್ಟೇ ವೀಕ್ಷಿಸುವ ಉದ್ದೇಶಪೂರ್ವಕ ನೋಡುಗರಾಗಿ ಮಾರ್ಪಾಡಾಗುವುದು.

ಪ್ರಸ್ತುತ ಸನ್ನಿವೇಶದಲ್ಲಿನ ಅತಿ ದೊಡ್ಡ ಋಣಾತ್ಮಕ ಅಂಶವೆಂದು ಪರಿಗಣಿಸಲ್ಪಡುತ್ತಿರುವ ಅಂಶವೆಂದರೆ ಅಸಂಖ್ಯ ಉಪಗ್ರಹವಾಹಿನಿಗಳ ಲಭ್ಯತೆ. ಬಹುತೇಕ ಮಕ್ಕಳು ಒಂದು ವಾಹಿನಿಯಿಂದ ಮತ್ತೊಂದು ವಾಹಿನಿಗೆ ಬದಲಾಯಿಸುತ್ತಾ 'ವೀಕ್ಷಿಸಲು ಪ್ರಯತ್ನಿಸುವುದು' ಇನ್ನೊಂದು ಗಮನಾರ್ಹ ಅಂಶ. ಈ ಹಿಂದೆಯೇ ಹೇಳಿದಂತೆ ಕೆಲ ಬುದ್ಧಿವಂತ ಮಕ್ಕಳಿಗೆ ಕೆಲಮಟ್ಟಿಗೆ ಶಾಲಾ ಪ್ರಗತಿಯಲ್ಲಿ ಸಹಾಯಕವಾದರೂ ಇತರ ಎಲ್ಲಾ ಅಂಶಗಳ ಮೇಲೆ ಋಣಾತ್ಮಕ ಪರಿಣಾಮ ಬೀರುವುದು ಗಮನಿಸಲೇಬೇಕಾದ ಸಂಗತಿ. ಜೊತೆಗೆ ಮಾಧ್ಯಮದಲ್ಲಿ ಹಿಂಸೆ, ಕಾಮ ಹಾಗು ಸೇಡಿನ ಮನೋಭಾವಗಳ ವೈಭವೀಕರಣ ಮಕ್ಕಳ ಮೇಲೆ ನೇರ ಪರಿಣಾಮ ಬೀರುತ್ತವೆ. ಕಿರುತೆರೆಯಲ್ಲಿ ಇಂದು ಕಾಣಸಿಗುವ ಇಂತಹ ಪ್ರಚೋದನಾತ್ಮಕ ಅಂಶಗಳು ಹಿಂದೆಂದೂ ಯಾವುದೇ ಮಾಧ್ಯಮದಲ್ಲಿ ಸಿಕ್ಕಿರಲಿಲ್ಲ. ಮಕ್ಕಳ ಟಿವಿ ವೀಕ್ಷಣೆ ಖಂಡಿತವಾಗಿ ಪೋಷಕರ ತೀರ್ಮಾನಗಳನ್ನು ಬಹುಮಟ್ಟಿಗೆ ಅವಲಂಬಿಸಬೇಕಾಗುತ್ತದೆ.

ಮಾಧ್ಯಮಗಳಲ್ಲಿ ಹಿಂಸೆಯ ವೈಭವೀಕರಣ ಅದರಲ್ಲೂ ಟಿವಿ ಮಾಧ್ಯಮದಲ್ಲಿನ ಹಿಂಸೆಯ ಸಮರ್ಥನೆ ಮಕ್ಕಳಿಗೆ ಗಾಢಾ ಪ್ರಭಾವ ಬೀರುತ್ತವೆ ಎನ್ನಲಾಗುತ್ತದೆ. ಈ ಬಗ್ಗೆ ಸಾಕಷ್ಟು ಸಂಶೋಧನೆಗಳು, ಅಧ್ಯಯನಗಳು, ಚರ್ಚೆಗಳು ನಡೆದಿವೆ. ಪರ ಹಾಗು ವಿರುದ್ಧದ ವಾಗ್ಯುದ್ಧ ನಿರಂತರವಾಗಿ ಸಾಗುತ್ತಿದೆ. ಮುಂದಿನ ಘಟಕದಲ್ಲಿ ಮಾಧ್ಯಮದಲ್ಲಿನ ಹಿಂಸೆಯ ಬಗ್ಗೆ ನೀವು ಹೆಚ್ಚಿನ ವಿಷಯಗಳನ್ನು ತಿಳಿದುಕೊಳ್ಳಬಹುದು. ಅಂತರ್ಜಾಲದಂತಹ ನವ ಮಾಧ್ಯಮ ಕಲ್ಪನಾತೀತವಾದ ಸಾಧ್ಯತೆಗಳನ್ನು ಮಕ್ಕಳ ಮುಂದೆ ತೆರೆದಿಡುತ್ತಿದೆ.

ತಂತ್ರಜ್ಞಾನ ಸರಳಗೊಂಡಂತೆ, ಕೈಗೆಟುಕಿದಂತೆ ಮಕ್ಕಳ ಮನೋವೃತ್ತಿಗಳೂ ಬದಲಾಗುತ್ತಿವೆ. ಬದಲಾದ ಸನ್ನಿವೇಶಗಳಲ್ಲಿ ಮಕ್ಕಳು ವಯಸ್ಸಿಗೆ ಮೀರಿದ ಚಟುವಟಿಕೆ ಹಾಗು ಪ್ರತಿಕ್ರಿಯೆ ನೀಡುವುದು ಸಾಮಾನ್ಯವಾಗುತ್ತಿದೆ. ಇತ್ತೀಚೆಗೆ ದೆಹಲಿಯ ಶಾಲಾ ಬಾಲಕನೊಬ್ಬ ತನ್ನ ಮೊಬೈಲ್ ಸೆಟ್‌ನಲ್ಲಿ ತೆಗೆದ ಅಶ್ಲೀಲ ವೀಡಿಯೋವನ್ನು ಮನರಂಜನೆಯ ಅಂಶವನ್ನಾಗಿ ಪರಿಗಣಿಸಿ ಪಸರಿಸಿದ್ದು ಇದಕ್ಕೆ ಅತ್ಯುತ್ತಮ ಉದಾಹರಣೆ. ಬೆಳಕಿಗೆ ಬರುವ ಘಟನೆಗಳು ಕೇವಲ ಬೆರಳೆಣಿಕೆಯಷ್ಟಾದರೂ, ಸಾಮಾಜಿಕ ಮಟ್ಟದಲ್ಲಿ ಆಗುತ್ತಿರುವ ಪರಿಣಾಮಗಳು ಅನೇಕ ಹಾಗು ಅನಿಯಂತ್ರಿತ.

## 2.5 ಸಾರಾಂಶ

ಪ್ರಸ್ತುತ ಘಟಕದಲ್ಲಿ ಇದುವರೆವಿಗೂ ನೀವು ಸಮೂಹ ಮಾಧ್ಯಮಗಳು ಮಕ್ಕಳ ಮೇಲೆ ಬೀರುವ ಪ್ರಭಾವ, ಪರಿಣಾಮಗಳ ಅನೇಕ ಅಂಶಗಳ ಬಗ್ಗೆ ತಿಳಿದುಕೊಂಡಿರಿ. ಮಾಧ್ಯಮಗಳು ವಸ್ತುವಿಷಯಗಳಿಗೆ ತೆರೆದುಕೊಳ್ಳುವ ವಿಸ್ತಾರ ಹಾಗು ಮಕ್ಕಳನ್ನು ಮಾಧ್ಯಮ ಗ್ರಾಹಕರನ್ನಾಗಿ ಪರಿಗಣಿಸುವ ಅಂಶದ ಬಗ್ಗೆಯೂ ಸಾಕಷ್ಟು ತಿಳಿದುಕೊಂಡಿರಿ. ಮಾಧ್ಯಮ ಪ್ರಭಾವಗಳು ಮಕ್ಕಳ ಮಾಹಿತಿ ಮಟ್ಟದ ವೃದ್ಧಿಗೆ, ಶಾಲಾ ಪ್ರಗತಿಗೆ ಪ್ರೇರಕವಾದರೂ, ಸಾಮಾಜಿಕ ಸಂಬಂಧಗಳಿಗೆ ಮತ್ತು ಇನ್ನಿತರ ಚಟುವಟಿಕೆಗಳಿಗೆ ಮಾರಕ. ಟಿವಿ ಮತ್ತು ಮಕ್ಕಳನ್ನು ಕುರಿತಾದ ಅನೇಕ ಸಂಶೋಧನೆಗಳು, ಅಧ್ಯಯನಗಳು ನಡೆದಿದ್ದು ಮಕ್ಕಳು ಮಾಧ್ಯಮದ ನೇರ ಹಾಗು ಬಿಗಿ ಹಿಡಿತದಲ್ಲಿ ಸಿಕ್ಕಿ ಹಾಕಿಕೊಂಡಿರುವುದು ತಿಳಿದುಬರುತ್ತದೆ. ಪೋಷಕರ ನಿಯಂತ್ರಣ ಹಾಗು ಮಾಧ್ಯಮ ವಸ್ತು ವಿಷಯಗಳು, ಅದರಲ್ಲೂ ಟಿ.ವಿ. ಹಾಗು ಅಂತರ್ಜಾಲದ ವಸ್ತು ವಿಷಯಗಳ ಮೇಲೆ ತೀವ್ರ ನಿಗಾ ವಹಿಸುವುದು ಅತ್ಯಾವಶ್ಯಕ.

## 2.6 ನಿಮ್ಮ ಪ್ರಗತಿ ಪರಿಶೀಲನೆ

**ಸೂಚನೆ: ನಿಮ್ಮ ಉತ್ತರಗಳನ್ನು ಈ ಘಟಕದಲ್ಲಿ ನೀಡಲಾಗಿರುವ ವಿವರಗಳೊಂದಿಗೆ ಹೋಲಿಸಿ.**

1. ವ್ಯಕ್ತಿಯೊಬ್ಬನ ಜೀವನದ ಮೇಲೆ ಮಾಧ್ಯಮಗಳು ಹೇಗೆ ಪರಿಣಾಮ ಬೀರುತ್ತವೆ? ವಿವರಿಸಿ.
2. ಮಕ್ಕಳ ಮೇಲೆ ಮಾಧ್ಯಮಗಳ ಪ್ರಭಾವ, ಪರಿಣಾಮಗಳೇನು? ವಿವರಿಸಿ.
3. ಸಮಕಾಲೀನ ಪರಿಸರದಲ್ಲಿ ಮಕ್ಕಳು ಮಾಧ್ಯಮಗಳಿಗೆ ತೆರೆದುಕೊಳ್ಳುವುದರಿಂದ ಅವರ ಮಾನಸಿಕ ವಿಸ್ತಾರತೆಗೆ ಕಾರಣವಾಗಿದೆಯೇ? ವಿಶ್ಲೇಷಿಸಿ.
4. ಮಕ್ಕಳ ಟಿ.ವಿ. ವೀಕ್ಷಣೆಯನ್ನು ನಿಯಂತ್ರಿಸುವುದು ಪೋಷಕರ ಕರ್ತವ್ಯ. ನಿಮ್ಮ ಅನಿಸಿಕೆಯೇನು? ವಿವರಿಸಿ.

## 2.7 ಹೆಚ್ಚಿನ ಓದಿಗಾಗಿ


1. Dennis Defleur, Understanding Mass Communication, Ed V, Houghton Mifflin Company, Boston, 1994.

2. Greenfield, Mind and Media, Harvartl University Press-Cambridge, 1984.

3. Sprafkin Liebert, The Early Window - Effects of Television on Children and Youth, Ed III, Pergamon General Psychology series, New York, 1988.

4. Mc Quail, Mass Communication Theory, Ed III, Sage Publication - New York, 1988.

5. Shramm, Lille and Parker, Television in the lives of our Children, Standard University Press-California - 1961.


**ಬರಹ: ತೇಜಸ್ವಿ ನವಿಲೂರ್**

# ಘಟಕ 3 ಮಾಧ್ಯಮ ಮತ್ತು ಹಿಂಸಾಚಾರ

ರಚನೆ


3.0 ಉದ್ದೇಶಗಳು

3.1 ಪ್ರಸ್ತಾವನೆ

3.2 ಸಮಾಜದಲ್ಲಿ ಹಿಂಸೆ

3.3 ಉತ್ತೇಜನಾ ಸಿದ್ಧಾಂತ

3.4 ಸಾಮಾಜಿಕ ಕಲಿಕಾ ಸಿದ್ಧಾಂತ

3.5 ಟಿ.ವಿ. ಮಾಧ್ಯಮದಲ್ಲಿ ಹಿಂಸೆಯ ವೈಭವೀಕರಣ

3.6 ಮನದಟ್ಟಾಗದ ಸಂಶೋಧನೆಗಳು

3.7 ಸಾರಾಂಶ

3.8 ನಿಮ್ಮ ಪ್ರಗತಿ ಪರಿಶೀಲನೆ

3.9 ಹೆಚ್ಚಿನ ಓದಿಗಾಗಿ

## 3.0 ಉದ್ದೇಶಗಳು

ಹಿಂದಿನ ಘಟಕದಲ್ಲಿ ನೀವು ಸಮೂಹ ಮಾಧ್ಯಮಗಳು ಹಾಗು ಮಕ್ಕಳ ನಡುವಿನ ಸಂಬಂಧಗಳ ಬಗ್ಗೆ ತಿಳಿದುಕೊಂಡಿರಿ. ಪ್ರಸ್ತುತ ಘಟಕದಲ್ಲಿ ಮಾಧ್ಯಮಗಳಲ್ಲಿ ಹಿಂಸೆಯ ಚಿತ್ರಣದ ಬಗ್ಗೆ ಅರಿಯುವ ಪ್ರಯತ್ನ ಮಾಡೋಣ. ಸಾಕಷ್ಟು ಪರ, ವಿರೋಧದ ಚರ್ಚೆಗಳಿಗೆ ಆಸ್ಪದ ನೀಡುವ ಈ ವಿಷಯವನ್ನು ಒಳಗೊಂಡ ಪ್ರಸ್ತುತ ಘಟಕದ ಉದ್ದೇಶವೆಂದರೆ:

* ಮಾಧ್ಯಮ ಮತ್ತು ಹಿಂಸೆಯ ನಡುವಿನ ಸಂಬಂಧವನ್ನು ಅರಿಯುವುದು;
* ಮಾಧ್ಯಮಗಳಲ್ಲಿ ಹಿಂಸೆಯ ಚಿತ್ರಣ, ಹಾಗು
* ಮಾಧ್ಯಮಗಳಲ್ಲಿ ಹಿಂಸೆಯ ವೈಭವೀಕರಣದಿಂದಾಗುವ ಪರಿಣಾಮಗಳ ಬಗ್ಗೆ ಅರಿಯುವುದು.

## 3.1 ಪ್ರಸ್ತಾವನೆ

ವ್ಯಕ್ತಿಯೊಬ್ಬನ ಅನಿಸಿಕೆಗಳು ಹಾಗು ನಡವಳಿಕೆಯ ಮೇಲೆ ಅನೇಕ ಅಂಶಗಳು ಹಿಡಿತ ಸಾಧಿಸುತ್ತವೆ. ಈ ಮಹತ್ವದ ಅಂಶಗಳಲ್ಲಿ ಹಿಂಸೆಯೂ ಒಂದು. ಆದರೆ ಇದು ಪ್ರತಿಯೊಬ್ಬ ವ್ಯಕ್ತಿಯಲ್ಲಿಯೂ ಬೇರೆ ಬೇರೆ ಪ್ರಮಾಣದಲ್ಲಿ ಬಿಂಬಿತವಾಗುತ್ತದೆ. ವ್ಯಕ್ತಿಯೊಬ್ಬನ ತಾಳ್ಮೆ ರಹಿತ ನಡವಳಿಕೆಗೆ ಪ್ರೇರೇಪಿಸುವ ಇತರೆ ಪ್ರಮುಖ ಅಂಶಗಳೆಂದರೆ ಆತನ ಸಾಮಾಜಿಕ ಹಾಗು ಆರ್ಥಿಕ ಹಿನ್ನೆಲೆ. ಹಾಗೆಯೆ, ಒಡನಾಟದ ಪ್ರಭಾವ ಕೂಡ ಸೇರಿಕೊಂಡು ಪ್ರಕ್ರಿಯೆಯನ್ನು ಸಂಕೀರ್ಣವನ್ನಾಗಿಸುತ್ತವೆ. ಮಾಧ್ಯಮದಲ್ಲಿ ಹಿಂಸೆ ಬಿಂಬಿತವಾಗಿರುವುದನ್ನು ಬಹು ಹಿಂದಿನಿಂದಲೂ ಗುರುತಿಸಬಹುದು. ಪ್ರಾರಂಭದ ಕಾಮಿಕ್ಸ್, ಕಾರ್ಟೂನ್, ಕಥಾಚಿತ್ರಗಳು, ಪುಸ್ತಕ ಹಾಗು ಟಿವಿಗಳಲ್ಲಿ ಕೂಡ ಹಿಂಸೆಯನ್ನು ವೈಭವೀಕರಿಸುವ ಅನೇಕ ವಸ್ತುವಿಷಯಗಳನ್ನು ಅಡಕಗೊಳಿಸಲಾಗುತ್ತಿತ್ತು. ಟಿವಿಯಂತಹ ಶಕ್ತಿಶಾಲಿ ಮಾಧ್ಯಮ ನೆಲೆಯೂರುತ್ತಿದ್ದಂತೆ ಹಿಂಸೆಯ ಪರಿಣಾಮಗಳು, ವೀಕ್ಷಕರ ಮೇಲೆ ಅದರಲ್ಲೂ ಮಕ್ಕಳ ಮೇಲೆ ಹೆಚ್ಚು ಹೆಚ್ಚು ಪ್ರಭಾವಗಳನ್ನು ಬೀರಲು ಪ್ರಾರಂಭಿಸಿದವು. ಸಿನಿಮಾದಂತಹ ಇನ್ನೊಂದು ಪ್ರಭಾವಿ ಮಾಧ್ಯಮದ ವಸ್ತುವಿಷಯಗಳು ಟಿವಿ ಮುಖಾಂತರ ಮನೆ ಮನೆಗಳಿಗೆ ತಲುಪುತ್ತಿದ್ದಂತೆ ಹಿಂಸೆಯ ಅಂಶಗಳೂ ಹೆಚ್ಚುವರಿಯಾಗಿ ವೀಕ್ಷಕರನ್ನು ಅದರಲ್ಲೂ ಮಕ್ಕಳು ಹಾಗು ಯುವಜನರನ್ನು ತಲುಪುತ್ತಿವೆ.

## 3.2 ಸಮಾಜದಲ್ಲಿ ಹಿಂಸೆ

ಮಾಧ್ಯಮ ಹಿಂಸೆ ವಿಷಯದ ಮೇಲಾದ ಸಂಶೋಧನೆ, ಅಧ್ಯಯನಗಳು ಅದಷ್ಟು ಬಹುಶಃ ಇನ್ನಾವುದಾ ವಿಷಯದ ಮೇಲೆ ಆಗಿಲ್ಲ. ನೀವು ಗಮನಿಸಿದಂತೆ ಟಿವಿ ಕಾರ್ಯಕ್ರಮಗಳಲ್ಲಿ ಬಿಂಬಿಸಲಾಗುವಷ್ಟು ಹಿಂಸೆ ಇನ್ನಾವುದೇ ಮಾಧ್ಯಮದಲ್ಲಿ ಬಿಂಬಿಸಲಾಗಿಲ್ಲ. ಟಿವಿ ಮಧ್ಯಮದ ಮೂಲಕ ಪ್ರಸಾರಗೊಳ್ಳುವ ಹಿಂಸೆ ಕುರಿತಾಗಿ ಈವರೆಗೆ ಸುಮಾರು 4,000 ಪುಸ್ತಕಗಳು, ಅದರ ದುಪ್ಪಟ್ಟು ಪತ್ರಿಕಾ ಲೇಖನಗಳು, ವರದಿಗಳು ಹಾಗು ಅಂತರ್ಜಾಲ ಲೇಖನಗಳು ಪ್ರಕಟಗೊಂಡಿವೆ. ಟಿವಿ ಹಿಂಸೆಯ ಕುರಿತಾಗಿ ಸಂಶೋಧಕರಲ್ಲಿ ತೀವ್ರವಾದ ಪರಿಣಾಮಗಳ ಬಗ್ಗೆ ಶಂಕಾಸ್ಪದ ಭಾವನೆಗಳು ಮನೆ ಮಾಡಿದವು. ಇವರಲ್ಲಿ ಬಹುತೇಕರು ಹಿಂಸೆಯ ನಿರ್ದಿಷ್ಟ ಗುರಿ ಮಕ್ಕಳು ಎಂಬುದನ್ನು ಕಂಡುಕೊಂಡರು. ಕೆಲ ಅಧ್ಯಯನಗಳಲ್ಲಿ 'ಬ್ಯಾಟ್‌ಮ್ಯಾನ್' ಹಾಗು 'ಸೂಪರ್ ಮ್ಯಾನ್' ಕಾರ್ಟೂನ್ ಕಾರ್ಯಕ್ರಮಗಳು, ಶಾಲಾ ಮಕ್ಕಳ ಆಕ್ರಮಣಕಾರಿ ಪ್ರವೃತ್ತಿ ಹಾಗು ನಡವಳಿಕೆಗಳ ಮೇಲೆ ಬೀರುವ ಪ್ರಭಾವವನ್ನು ಪರಿಶೀಲಿಸಲಾಯಿತು.

ಫಲಿತಾಂಶಗಳು ಕುತೂಹಲಕಾರಿಯಾಗಿದ್ದು, ಈ ಕಾರ್ಯಕ್ರಮಗಳನ್ನು ಹೆಚ್ಚು ವೀಕ್ಷಿಸುತ್ತಿದ್ದ ಮಕ್ಕಳು ಶಾಲೆಯೊಳಗೆ, ಆಟದ ಮೈದಾನದಲ್ಲಿ ಜಗಳ ತೆಗೆಯುವ ಸ್ವಭಾವವನ್ನು ಮೈಗೂಡಿಸಿಕೊಂಡಿರುವುದು ಕಂಡು ಬಂತು. ಅಲ್ಲದೆ ಇತರ ಮಕ್ಕಳಿಗಿಂತ ಕಡಿಮೆ ಆಟವಾಡುವ ಹಾಗು ಸಹಕಾರ ನೀಡದೆ ಮೊಂಡುತನಕ್ಕೆ ಶರಣಾಗಿರುವುದು ಸಾಬೀತಾಗಿತ್ತು.

ಮಾಧ್ಯಮ ಹಿಂಸೆಯನ್ನು ಅಧ್ಯಯನಕ್ಕೊಳಪಡಿಸುವ ಪ್ರಕ್ರಿಯೆ ಅಮೇರಿಕದಲ್ಲಿ 1950ರ ದಶಕದಲ್ಲಿ ಪ್ರಾರಂಭವಾಗಿ, ಮಾಧ್ಯಮ ಸಂಶೋಧನೆಗಳಲ್ಲಿ ಅತ್ಯಂತ 'ಹಿಂಸಾತ್ಮಕ ದಶಕ' ಎಂದು ವರ್ಣಿಸಲ್ಪಡುವ 1960ರ ದಶಕದಲ್ಲಿ ಹೆಚ್ಚು ಪ್ರಬಲವಾಯಿತೆನ್ನಬಹುದು.

ಭಾರಿ ಪ್ರಮಾಣದಲ್ಲಿ ಜರುಗಿದ ನಾಗರೀಕ ಹಕ್ಕಿನ ಹೋರಾಟಗಳು, ಮೂವರು ರಾಷ್ಟ್ರೀಯ ನಾಯಕರ ಹತ್ಯೆ, ವಿಯೆಟ್ನಾಂನಲ್ಲಿ ಹೆಚ್ಚಾದ ಯುದ್ಧ ಚಟುವಟಿಕೆ, ಅಮೇರಿಕ ಉದ್ದಗಲಕ್ಕೂ ಹಬ್ಬಿದ ವಿಶ್ವವಿದ್ಯಾನಿಲಯ ವಿದ್ಯಾರ್ಥಿಗಳ ಹಿಂಸಾತ್ಮಕ ಚಳುವಳಿ ಮುಂತಾದವುಗಳು ಮಾಧ್ಯಮಗಳಲ್ಲಿ ಭಾರಿ ಪ್ರಮಾಣದಲ್ಲಿ ಬಿಂಬಿಸಲ್ಪಟ್ಟವು. ಈ ರೀತಿಯ ವಿದ್ಯಮಾನಗಳ ಬಗ್ಗೆ ತೀವ್ರವಾಗಿ ಚಿಂತಿತವಾದ ಅಮೇರಿಕ ಸರ್ಕಾರ 1960ರ ದಶಕದ ನಂತರ, ಅಮೇರಿಕ ಸಮಾಜದಲ್ಲಿ ಹಿಂಸೆಯ ವಿಷಯವನ್ನು ಕುರಿತಾಗಿ ನಡೆದ ಹಲವಾರು ಪ್ರಮುಖ ಅಧ್ಯಯನಗಳನ್ನು ಪ್ರಾಯೋಜಿಸಿದೆ. ಅವುಗಳಲ್ಲಿ ಮುಖ್ಯವಾದುವೆಂದರೆ,

1. ಹಿಂಸೆಯ ಕಾರಣ ಹಾಗು ತಡೆಗಟ್ಟುವಿಕೆಗಾಗಿ ನೇಮಿಸಲಾದ ರಾಷ್ಟ್ರೀಯ ಆಯೋಗದ ಅಧ್ಯಯನ, ಹಾಗು
2. ಟಿವಿ ಹಾಗು ಸಾಮಾಜಿಕ ನಡವಳಿಕೆ ಬಗೆಗಿನ, ಸರ್ಜನ್ ಜನರಲ್‌ರ ವೈಜ್ಞಾನಿಕ ಸಲಹಾ ಸಮಿತಿಯ ಅಧ್ಯಯನಗಳು.

ನಂತರ ಈ ಅಧ್ಯಯನಗಳ ಫಲಿತಾಂಶಗಳನ್ನು ಹಾಗು ವರದಿಗಳನ್ನು 'ಟೆಲಿವಿಷನ್ ಹಾಗು ನಡವಳಿಕೆ'ಯ ಶೀರ್ಷಿಕೆಯಡಿ ಪ್ರಕಟಿಸಿ ವ್ಯಾಪಕವಾಗಿ ಪ್ರಚುರಿಸಲಾಯಿತು. ಆರು ಸಂಪುಟಗಳಲ್ಲಿ ಹೊರಬಂದ ಈ ವರದಿಗಳಲ್ಲಿ ಅನೇಕ ಪ್ರಯೋಗಾತ್ಮಕ ಅಧ್ಯಯನಗಳ ವಿಶ್ಲೇಷಣೆಗಳನ್ನು ಸವಿವರವಾಗಿ ನೀಡಲಾಗಿತ್ತು. ಈ ಪ್ರಯೋಗಗಳನ್ನು ಆಧರಿಸಿ ಟಿವಿಯಲ್ಲಿ ಬಿಂಬಿಸಲಾಗುವ ಹಿಂಸೆ ಹಾಗು ಅಮೇರಿಕ ಸಮಾಜದಲ್ಲಿನ ಹಿಂಸೆಗೆ ನೇರ ಸಂಬಂಧವಿರುವುದಾಗಿ ನಿರ್ಧರಿಸಲಾಯಿತು. ಸ್ವತಃ ಅಮೇರಿಕದ ಸರ್ಜನ್ ಜನರಲ್ ಟಿವಿಯಲ್ಲಿ ಬಿಂಬಿಸಲಾಗುವ ಹಿಂಸೆಗೆ ಕಡಿವಾಣ ಹಾಕಲು ಕಠಿಣ ಕ್ರಮಗಳನ್ನು ಜಾರಿ ಮಾಡಲು ಕರೆ ನೀಡಿದನು.

ಮಾಧ್ಯಮದಲ್ಲಿ ಹಿಂಸೆಯ ಬಗ್ಗೆ ನಡೆಸಿದ ಪ್ರಾರಂಭದ ಅಧ್ಯಯನಗಳಲ್ಲಿ ಇನ್ನೊಂದು ಪ್ರಮುಖವಾದುದೆಂದರೆ ಸಿನಿಮಾದಲ್ಲಿನ ಹಿಂಸೆಯ ಕುರಿತಾದ ನಡೆದ ಬರ್ಕೋವಿಟ್ಜ್ ಪ್ರಯೋಗ(1962). ಈ ಅಧ್ಯಯನದಲ್ಲಿ ಕಾಲೇಜು ವಿದ್ಯಾರ್ಥಿಗಳ ಮೇಲೆ ಸಿನಿಮಾ ಹಿಂಸೆ ಬೀರುವ ಪರಿಣಾಮವನ್ನು ಅಧ್ಯಯನಕ್ಕೊಳಪಡಿಸಲಾಯಿತು. ಪ್ರಯೋಗಶಾಲೆಗಳಲ್ಲಿ ನಡೆದ ಈ ಅಧ್ಯಯನಗಳಲ್ಲಿ ಹಿಂಸಾತ್ಮಕ ವಸ್ತುವಿಷಯಗಳಿಗೆ ತೆರೆದುಕೊಂಡ ಯುವ ವೀಕ್ಷಕರಲ್ಲಿ ಹೆಚ್ಚಿನ ಆಕ್ರಮಣಕಾರಿ ಪ್ರವೃತ್ತಿ ಕಾಣಿಸಿಕೊಳ್ಳುವ ಸ್ಪಷ್ಟ ಸೂಚನೆಗಳು ದೊರೆತವು. ಅಲ್ಬರ್ಟ್ ಬಂಡುರಾ ನಡೆಸಿದ ಪ್ರಯೋಗಗಳಲ್ಲಿ, ನರ್ಸರಿ ಶಾಲಾ ಮಕ್ಕಳು ಪ್ರತ್ಯಕ್ಷವಾಗಿ ಕಂಡಂತಹ ಹಿಂಸಾತ್ಮಕ ಚಟುವಟಿಕೆಗಳನ್ನು ಅನುಕರಿಸುವಂತೆಯೇ ಟಿವಿ ಹಿಂಸೆಯನ್ನು ಅನುಕರಿಸುವುದನ್ನು ಕಂಡುಕೊಳ್ಳಲಾಯಿತು. ಹಾಗೆಯೇ, ಬರ್ಕೋವಿಟ್ಜ್ ಪ್ರಯೋಗಗಳಲ್ಲಿ ಅಧ್ಯಯನಕ್ಕೊಳಪಡುತ್ತಿದ್ದ ಕಾಲೇಜು ವಿದ್ಯಾರ್ಥಿಗಳು, ಹಿಂಸಾತ್ಮಕ ವಸ್ತು ವಿಷಯಗಳನ್ನು ಸಂಶೋಧಕ ಪ್ರಚೋದಿಸಿದಾಗ ತಿರುಗಿ ಬಿದ್ದು ತಾವು ವೀಕ್ಷಿಸಿದ ಹಿಂಸೆಯನ್ನು ಸಮರ್ಥಿಸಿಕೊಂಡಂತಹ ಘಟನೆಗಳನ್ನು ದಾಖಲಿಸಿದ್ದಾರೆ.

ಬರ್ಕೋವಿಟ್ಜ್ ತಮ್ಮ ಅಧ್ಯಯನ ಫಲಿತಾಂಶಗಳನ್ನು ಸಮರ್ಥಿಸುತ್ತಾ "ಟಿವಿಯಲ್ಲಿನ ಹಿಂಸೆ ನೋಡುವಾಗ ಆಕ್ರಮಣಕಾರಿ ಮನೋಭಾವವನ್ನು ಬಹಳವಾಗಿ ಪ್ರಚೋದಿಸುತ್ತದೆ. ಅಲ್ಲದೆ ಬಾಲಾಪರಾಧಕ್ಕೆ ಹೆಚ್ಚು ಅಸ್ತ್ರ ನೀಡಿ ಅಪರಾಧೀ ತಂತ್ರಗಳನ್ನು ಮಕ್ಕಳಿಗೆ ಪರಿಚಯಿಸುತ್ತದೆ" ಎನ್ನುತ್ತಾರೆ.

ಟಿವಿ ಮಾಧ್ಯಮ ಸಾಮಾಜಿಕ ಪ್ರಚೋದನಾತ್ಮಕವಾಗಿ ವರ್ತಿಸುವ ಪಾತ್ರ ಕುರಿತಂತೆ ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿ ಅದರಲ್ಲೂ ಅಮೇರಿಕದಲ್ಲಿ ತೀವ್ರತರ ಚರ್ಚೆಗಳು ಈಗಲೂ ನಡೆಯುತ್ತಿವೆ. ಅರವತ್ತರ ದಶಕದಲ್ಲಿ ಅಮೇರಿಕದಲ್ಲಿ ಕಂಡು ಬಂದ ಹೆಚ್ಚಿನ ಹಿಂಸಾತ್ಮಕ ಪ್ರತಿಕ್ರಿಯೆಗಳು, ಅಪರಾಧ ಸಂಖ್ಯೆ ಹಾಗು ಯುವ ಜನರ ಬದಲಾದ ಮನೋಭಾವಗಳಿಗೆ ಟಿವಿಯೇ ಪ್ರಮುಖ ಹಾಗು ಏಕಮಾತ್ರ ಕಾರಣ ಎಂದು ಅನೇಕರು ವಾದಿಸಿದರು. ತೀವ್ರವಾಗಿ ವಿಚಲಿತನಾದ ಸೆನೆಟರ್ ಜಾನ್ ಪಾಸ್ಟೋರ್ ಅಮೇರಿಕದ ಶಾಸನ ಸಭೆಯ ಮೇಲೆ ಒತ್ತಡ ಹೇರಿ ಈ ಬಗ್ಗೆ ಅಧ್ಯಯನಗಳನ್ನು ನಡೆಸಿ ಸಮರ್ಪಕ ಉತ್ತರಗಳನ್ನು ಕಂಡುಕೊಳ್ಳುವ ಅಗತ್ಯತೆಯನ್ನು ಒತ್ತಿ ಹೇಳಿದರು. ಸಮಾಜ ವಿರೋಧಿ ಚಟುವಟಿಕೆಗಳು ಹಾಗು ಹಿಂಸಾತ್ಮಕ ಮಾಧ್ಯಮ ಪ್ರಚೋದನೆಯ ಸಂಬಂಧಗಳನ್ನು ಪ್ರಯೋಗಾತ್ಮಕವಾಗಿ ಕಂಡು ಕೊಂಡ ಅಧ್ಯಯನ ತಂಡಗಳು, ಹಿಂಸಾತ್ಮಕ ವಸ್ತು ವಿಷಯಗಳು ಮಕ್ಕಳು ಹಾಗು ಯುವಕರಲ್ಲಿನ ಆಕ್ರಮಣಕಾರಿ ಮನೋವೃತ್ತಿ, ಅಲ್ಪಾವಧಿಗೆ ಋಣಾತ್ಮಕವಾಗಿ ಬದಲಾಗುವ ಪ್ರಕ್ರಿಯೆಯನ್ನು ಗುರುತಿಸಿದವು.

ಆಕ್ರಮಣಕಾರಿ ಪ್ರವೃತ್ತಿಯ ಮಕ್ಕಳಿಗೆ ನೀಡಲಾದ ಶಿಕ್ಷೆ (ಪೋಷಕರಿಂದ) ಈ ಪ್ರವೃತ್ತಿ ಮತ್ತಷ್ಟು ಬೆಳೆಯಲು ಕಾರಣವಾಗುತ್ತಿತ್ತು. ಹೀಗಾಗಿ ಶಿಕ್ಷೆಗೊಳಪಡದ ಮಕ್ಕಳಿಗಿಂತ ಹೆಚ್ಚಾಗಿ, ಪದೇ ಪದೇ ಶಿಕ್ಷೆಗೊಳಪಡುತ್ತಿದ್ದ, ಮನೆಯಿಂದ ದೂರವಿದ್ದ ಮಕ್ಕಳು ಮತ್ತಷ್ಟು ಹಿಂಸಾತ್ಮಕವಾಗಿ, ಆಕ್ರಮಣಕಾರಿ ಮನೋವೃತ್ತಿಯಿಂದ ವರ್ತಿಸುವುದು ಕಂಡುಬಂದಿತ್ತು.

## 3.3 ಉತ್ತೇಜನಾ ಸಿದ್ಧಾಂತ

ಡಾಲ್ಫ್ ಜಿಲ್‌ಮನ್ ಹಾಗು ಪರ್ಸಿ ಟೆನೆನ್‌ಬಾಮ್ ಅಭಿವೃದ್ಧಿಪಡಿಸಿದ ಉತ್ತೇಜನಾ ಸಿದ್ಧಾಂತದ ಪ್ರಕಾರ "ಹಿಂಸಾತ್ಮಕ ಮಾಧ್ಯಮ ವಸ್ತುವಿಷಯಗಳಿಗೆ ತೆರೆದುಕೊಳ್ಳುವಿಕೆಯಿಂದ ಅಥವಾ ಯಾವುದೇ ಹಿಂಸಾತ್ಮಕ ಚಿತ್ರಣಗಳಿಂದ ಸೃಷ್ಟಿಯಾಗುವ ಹುಮ್ಮಸ್ಸು ನಡವಳಿಕೆಯಾಗಿ ಮಾರ್ಪಡುವ ಸಂಭವವೇ ಹೆಚ್ಚು. ಸಂಭಾವ್ಯ ಆಕ್ರಮಣಕಾರಿ ನಡವಳಿಕೆಗಳು ಹಿಂಸಾತ್ಮಕ ಚಿತ್ರಣಗಳ ಪ್ರಚೋದನೆಯಿಂದ ಹೆಚ್ಚು ಬಲವಾಗುತ್ತವೆ. ಮಕ್ಕಳಲ್ಲಿ ಈ ರೀತಿಯ ಪರಿಣಾಮಗಳನ್ನು ಅವರ ಮೇಲೆ ಬೀಳುವ ಹೆಚ್ಚಿನ ಪ್ರಭಾವ ಹಾಗು ಭಾವನಾತ್ಮಕ ಹಿಡಿತ ಸಾಧಿಸಲಾರದ ಅಂಶದಲ್ಲಿ ಉತ್ತೇಜನ ಹೆಚ್ಚಿನ ಪಾತ್ರವಹಿಸುತ್ತದೆ" ಎಂಬುದನ್ನು ಗುರುತಿಸಲಾಗಿದೆ.

ಈ ಸಂಕೀರ್ಣ ವಿಷಯದ ವಿಶ್ಲೇಷಣೆಯಲ್ಲಿ ಪರಸ್ಪರ ಸಂಬಂಧ ಕಲ್ಪಿಸಬಹುದಾದ ಅನೇಕ ಅಂಶಗಳನ್ನು ಗುರುತಿಸಬಹುದಾಗಿದೆ. ಉದಾಹರಣೆಗೆ, ಶೈಕ್ಷಣಿಕವಾಗಿ ಹಿಂದುಳಿದಿರುವ ಮಕ್ಕಳಲ್ಲಿ ಹೆಚ್ಚು ಆಕ್ರಮಣಕಾರಿ ಪ್ರವೃತ್ತಿ ಇರುವ ಬಗ್ಗೆ ಸಂಶೋಧನೆಗಳು ಬೆಳಕು ಚೆಲ್ಲುತ್ತವೆ. ಹ್ಯೂಸ್‌ಮನ್ ಹಾಗು ಈರೋನ್ ಹೇಳುವಂತೆ "ಅಂತಹ ಮಕ್ಕಳು ಹೆಚ್ಚು ಟಿವಿ ನೋಡುವ ಹಾಗು ಹಿಂಸಾತ್ಮಕತೆ ಹೆಚ್ಚಿರುವ ಕಾರ್ಯಕ್ರಮಗಳನ್ನೇ ಹೆಚ್ಚಾಗಿ ನೋಡುತ್ತಾರೆ. ಈ ಮಕ್ಕಳು ಬಿಂಬಿಸಲಾಗುವ ಹಿಂಸಾತ್ಮಕ ನಡವಳಿಕೆ ಮಾನವನ ಅತ್ಯಂತ ಸಹಜ ಕ್ರಿಯೆ"ಯೆಂಬುದಾಗಿ ಬಲವಾಗಿ ನಂಬಿರುತ್ತಾರೆ.

ಹಾಗೆಯೇ, ಇನ್ನೊಂದು ಕುತೂಹಲಕರ ಅಂಶವೆಂದರೆ, ಕುಖ್ಯಾತಿ ಹಾಗು ಅನಾಮಧೇಯತ್ವ ಮತ್ತು ಆಕ್ರಮಣಕಾರಿ ನಡವಳಿಕೆಯ ನಡುವಿನ ಸಂಬಂಧ ದ್ವಿಮುಖ ಪ್ರಕ್ರಿಯೆ. ಹೆಚ್ಚು ಆಕ್ರಮಣಕಾರಿ ಪ್ರವೃತ್ತಿಯುಳ್ಳ ಮಕ್ಕಳ ಬಹುತೇಕ ಜನಪ್ರಿಯತೆ ಕಳೆದುಕೊಳ್ಳುವುದರ ಜೊತೆಗೆ, ಅನಾಮಧೇಯರಾಗಿ ಉಳಿಯುವ ಅಥವಾ ಕುಖ್ಯಾತಿ ಗಳಿಸುವ ಮಕ್ಕಳು ಕೂಡ ಹೆಚ್ಚು ಆಕ್ರಮಣಕಾರಿ ಮನೋವೃತ್ತಿಯನ್ನು ಬೆಳೆಸಿಕೊಳ್ಳುತ್ತವೆ. ಹಾಗೆಯೇ, ಜನಪ್ರಿಯರಲ್ಲದ ಮಕ್ಕಳು, ಕಡಿಮೆ ಸಾಮಾಜಿಕ ಸಂಬಂಧಗಳನ್ನು ಹೊಂದಿದ್ದು, ಹೆಚ್ಚು ಟಿವಿ ನೋಡುವುದರಿಂದ ಹೆಚ್ಚು ಹಿಂಸಾತ್ಮಕ ವಿಷಯಗಳಿಗೆ ತೆರೆದುಕೊಳ್ಳುತ್ತಾರೆ. ಹ್ಯೂಸ್‌ಮಾನ್ ಮತ್ತು ಮಾಲಾಮುತ್ ನಡೆಸಿದ ಸಂಶೋಧನೆಗಳಲ್ಲಿ ಹಿಂಸೆ ಮತ್ತು ಟಿ.ವಿ. ವೀಕ್ಷಣೆ ನಡುವಿನ ಸಂಬಂಧದಲ್ಲಿ ವ್ಯಕ್ತವಾದ ಐದು ಪ್ರಮುಖ ಅಂಶಗಳೆಂದರೆ:

ಅ. ಮಕ್ಕಳ ವಿಚಾರವಂತಿಕೆಯ ಪ್ರಗತಿ

ಆ. ಸಾಮಾಜಿಕ ಜನಪ್ರಿಯತೆ

ಇ. ಟಿವಿ ಪಾತ್ರಗಳೊಂದಿಗೆ ಗುರುತಿಸಿಕೊಳ್ಳುವುದು

ಈ. ಹಿಂಸಾತ್ಮಕ ಕಲ್ಪನಾ ಲೋಕದ ವಿಹಾರ

ಸಂಶೋಧಕರು ತಮ್ಮ ಫಲಿತಾಂಶಗಳನ್ನು ವಿವರಿಸುತ್ತಾ, "ಟಿವಿ ಹಿಂಸೆ ವ್ಯಕ್ತಿಯೊಬ್ಬ ನಡವಳಿಕೆ ತಕ್ಷಣದ ಬದಲಾವಣೆಗಳನ್ನು ತರದಿದ್ದರೂ, ಪ್ರಕ್ರಿಯೆಗಳ ಸರಮಾಲೆಯೊಂದನ್ನು ಪ್ರಾರಂಭಿಸಲು ಅನುವು ಮಾಡುತ್ತದೆ. ವ್ಯಕ್ತಿಗತ ಹಾಗು ಅಂತಹ ವ್ಯಕ್ತಿ ಸಂಬಂಧದ ಅಂಶಗಳು ಈ ಪ್ರಕ್ರಿಯೆಯಗಳಿಗೆ ತಳುಕು ಹಾಕಿಕೊಂಡು ಮಾಧ್ಯಮ ಗ್ರಾಹಕರ ನಡವಳಿಕೆ ಆಕ್ರಮಣಕಾರಿಯಾಗುತ್ತಾ ಹೋಗಿ, ಹೆಚ್ಚು ಹಿಂಸಾತ್ಮಕ ಕಾರ್ಯಕ್ರಮಗಳನ್ನು ವೀಕ್ಷಿಸುವ ಪ್ರವೃತ್ತಿಯೆಡೆಗೆ ನೂಕಲ್ಪಡುತ್ತಾನೆ".ಎನ್ನುತ್ತಾರೆ.

## 3.4 ಸಾಮಾಜಿಕ ಕಲಿಕಾ ಸಿದ್ಧಾಂತ

ಈ ಸಿದ್ಧಾಂತದ ಪ್ರಕಾರ ವ್ಯಕ್ತಿಯೊಬ್ಬನು ತನ್ನ ಆಕ್ರಮಣಕಾರಿ ನಡವಳಿಕೆಯನ್ನು ನೇರ ಅನುಭವದ ಅಥವಾ ಪರೋಕ್ಷವಾಗಿ ಆಕ್ರಮಣಕಾರಿ ನಡವಳಿಕೆಯನ್ನು ಗಮನಿಸುವುದರ ಮುಖಾಂತರ ಪಡೆಯುತ್ತಾನೆ. ಅನೇಕ ಸಂಶೋಧನೆಗಳು ಮಕ್ಕಳು ಆಕ್ರಮಣಕಾರಿ ಪ್ರವೃತ್ತಿಯನ್ನು ಬೆಳೆಸಿಕೊಳ್ಳಲು ಮಾಧ್ಯಮ ತೆರೆ ಅನುವಾಗುತ್ತದೆ ಎಂಬುದನ್ನು ಸಾಬೀತು ಪಡಿಸಿವೆ. ಆದರೆ ಗಮನಿಸಬೇಕಾದ ಅಂಶವೆಂದರೆ ಬಹುತೇಕ ಎಲ್ಲಾ ಪ್ರಯೋಗಶಾಲಾ ಅಧ್ಯಯನಗಳು ಮಕ್ಕಳನ್ನು ಆಕ್ರಮಣಕಾರಿ ಪ್ರವೃತ್ತಿಗಾಗಿ ಪುರಸ್ಕೃತರಾದ ಅಥವಾ ದಂಡಿಸಲಾದ ಪ್ರಯೋಗಾತ್ಮಕ ಮಾದರಿಗೆ ಹೋಲಿಸಲಾಗಿರುವುದು.

## 3.5 ಟಿವಿ ಮಾಧ್ಯಮದಲ್ಲಿ ಹಿಂಸೆಯ ವೈಭವೀಕರಣ

ಅಮೇರಿಕದ ಸಾಮಾಜಿಕ ವ್ಯವಸ್ಥೆಯಲ್ಲಿನ ಹಿಂಸಾ ಪ್ರವೃತ್ತಿಯ ಹೆಚ್ಚಳಕ್ಕೆ ಮಾಧ್ಯಮಗಳನ್ನು ಬಹುವಾಗಿ ಟೀಕಿಸಲಾಗುತ್ತದೆ. ಪ್ರಖ್ಯಾತ ಅಮೇರಿಕನ್ ಮನಶಾಸ್ತ್ರಜ್ಞ ಹಾಗು ಸಂವಹನ ತಜ್ಞ ಜಾರ್ಜ್ ಹೇಳುವಂತೆ "ಮಾನವರು ಮನುಷ್ಯರಾಗುವ ಸಾಮಾಜೀಕರಣದ ಪ್ರಕ್ರಿಯೆಯನ್ನು ಟಿವಿ ಮಾಧ್ಯಮ ಬಹುವಾಗಿ ಪ್ರಭಾವ ಬೀರಿದೆ".ಎನ್ನುತ್ತಾರೆ. ಅಮೇರಿಕ ಸಂಯುಕ್ತ ಸಂಸ್ಥಾನದಲ್ಲಿ ತಮ್ಮ ಮಕ್ಕಳ ಪ್ರವೃತ್ತಿಯನ್ನು ಟಿವಿ ಕಾರ್ಯಕ್ರಮಗಳು ಬದಲಿಸುತ್ತಿವೆ ಎಂದು ಟೀಕಿಸಿ ಅನೇಕ ಪೋಷಕ ಸಂಘಟನೆಗಳು ಒಗ್ಗೂಡಿ ಮಾಧ್ಯಮದ ವಿರುದ್ಧ ದನಿ ತೆಗೆಯಲು 'ಉತ್ತಮ ಪ್ರಸಾರಕ್ಕಾಗಿ ರಾಷ್ಟ್ರೀಯ ಸಂಸ್ಥೆ'ಯೊಂದನ್ನು ಸ್ಥಾಪಿಸಿ ಹೋರಾಟ ಮಾಡಿದವು.

ಹಿಂದೆಯೇ ಹೇಳಿದಂತೆ ವಿಷಯದ ಚರ್ಚೆ ಪರ-ವಿರೋಧದ ಅನೇಕ ಅನಿಸಿಕೆಗಳನ್ನು ಮುಂದಿಟ್ಟಿದೆ. ಟಿವಿಯಲ್ಲಿ ಯಾವ ಪ್ರಮಾಣದ ಹಿಂಸೆ ಎಷ್ಟು ಸಾಮಾಜಿಕ ನಡವಳಿಕೆಯ ಬದಲಾವಣೆಗೆ ಕಾರಣವಾಗುತ್ತದೆ ಎನ್ನುವುದು ಚರ್ಚೆಯನ್ನು ಇನ್ನೂ ಮುಂದಕ್ಕೆ ಕೊಂಡೊಯ್ಯುತ್ತದೆ. ಒಬ್ಬ ಸಂಶೋಧಕ ಅಂದಾಜಿಸಿದಂತೆ ಸರಾಸರಿ ಅಮೇರಿಕನ್ ಮಗುವೊಂದು ತನ್ನ ಐದನೆಯ ವಯಸ್ಸಿನಿಂದ ಹದಿನಾಲ್ಕನೆಯ ವಯಸ್ಸಿನವರೆಗಿನ ಬೆಳವಣಿಗೆಯ ಅವಧಿಯಲ್ಲಿ ಸುಮಾರು 13,000 ಮಾನವರ ಬರ್ಬರ ಹತ್ಯೆಗಳನ್ನು ಟಿವಿ ಪರದೆಯ ಮೇಲೆ ನೋಡುತ್ತದೆ. ಆದರೆ ಇಂತಹ ಅಂಕಿ ಅಂಶಗಳಿಂದ ತೀರ್ಮಾನಗಳನ್ನು ತೆಗೆದುಕೊಳ್ಳುವುದು ಅತ್ಯಂತ ತ್ರಾಸದಾಯಕ ಕೆಲಸ.

ಸಂಶೋಧಕ ವಿಲ್ಬರ್ ಶ್ರಾಮ್ ಮಧ್ಯಮದಲ್ಲಿ ಬಿಂಬಿಸಲಾಗುವ ಹಿಂಸೆಯ ಬಗ್ಗೆ ಹೇಳುತ್ತಾ "ಮಕ್ಕಳ ಟಿವಿ ಪರದೆಯ ಮೇಲೆ ಬಿಂಬಿಸಲಾಗುವ ಪ್ರತಿಯೊಂದು ಹಿಂಸಾತ್ಮಕ ಚಿತ್ರಣಗಳಿಗೆ ತಮ್ಮನ್ನು ತಾವು ಒಡ್ಡಿಕೊಳ್ಳಲು ಅವಕಾಶ ನೀಡುವ ಮೂಲಕ, ಪೋಷಕರಾದ ನಾವು ಅವರ ಶ್ರೇಯೋಭಿವೃದ್ಧಿಗೆ ಮಾರಕವಾಗುತ್ತಿದ್ದೇವೆ. ಇಂತಹ ಒಂದು ಅವಕಾಶ ಕಲ್ಪಿಸುವುದು ಪ್ರಯೋಜನಕ್ಕೆ ಬಾರದ ಕೆಲಸ. ಮಾರಕ ರೋಗಗಳಿಂದ ಅವರನ್ನು ರಕ್ಷಿಸಲು ಕ್ರಮಕೈಗೊಂಡಂತೆ ಹಿಂಸಾತ್ಮಕ ಮಾಧ್ಯಮ ವಸ್ತುವಿಷಯಗಳಿಂದಲೂ ಅವರನ್ನು ರಕ್ಷಿಸುವುದು ಅತ್ಯಗತ್ಯ"ಎನ್ನುತ್ತಾರೆ.

ಹಿಂಸೆಗೆ ಕಾರಣ ಹುಡುಕುವ ಹಾಗು ಮುನ್ನೆಚ್ಚರಿಕೆ ಕ್ರಮಗಳಿಗಾಗಿ ರಚಿಸಲಾದ ಅಮೇರಿಕನ್ ರಾಷ್ಟ್ರೀಯ ಸಮಿತಿಗೆ ಸಮೀಕ್ಷೆ ನಡೆಸಿದ ಲೂಯಿ ಹ್ಯಾರಿಸ್ ಪೋಲ್ಸ್ಟರ್ಸ್ ಪ್ರಕಾರ ಶೇಕಡ 59ರಷ್ಟು ಪುರುಷರು ಹಾಗು ಶೇಕಡ 63ರಷ್ಟು ಮಹಿಳೆಯರು ಟಿವಿ ಮಾಧ್ಯಮದಲ್ಲಿ ಹಿಂಸೆಯನ್ನು ಅತಿಯಾಗಿ ಬಿಂಬಿಸಲಾಗುತ್ತಿದೆ ಎಂಬ ಅನಿಸಿಕೆಯುಳ್ಳವರಾಗಿದ್ದರು. ಶೇಕಡ 32ರಷ್ಟು ಮಂದಿ ಟಿವಿ ಹಿಂಸೆ ಜನರನ್ನು ಯಾವುದೇ ರೀತಿಯ ಭಾವನಾತ್ಮಕ ಪ್ರತಿಕ್ರಿಯೆಗಳಿಗೆ ಪ್ರಚೋದಿಸುವುದಿಲ್ಲ ಎಂದು ಅಭಿಪ್ರಾಯಪಟ್ಟರೆ, ಶೇಕಡ 52ರಷ್ಟು ಜನರು, ಭಾವನಾತ್ಮಕವಾಗಿ ಹೊಂದಿಕೊಳ್ಳಲಾರದ ಹಾಗು ಮಾನಸಿಕವಾಗಿ ದುರ್ಬಲರಾದವರು ಇಂತಹ ವಸ್ತುವಿಷಯಗಳಿಗೆ ತೆರೆದುಕೊಂಡಾಗ, ಆಕ್ರಮಣಕಾರಿ ಪ್ರವೃತ್ತಿ ಬೆಳೆಯುತ್ತವೆಂದು ಅಭಿಪ್ರಾಯಪಟ್ಟರು.

ಟಿವಿ ಮಾಧ್ಯಮದಲ್ಲಿ ಬಿಂಬಿತವಾಗುವ ಹಿಂಸೆ ಹಾಗು ಹೆಚ್ಚುತ್ತಿರುವ ಅಮೇರಿಕನ್ ಅಪರಾಧ ಸಂಖ್ಯೆಗಿರಬಹುದಾದ ನೇರ ಸಂಬಂಧವನ್ನು ದೃಢ ಪಡಿಸುವ ನಿಟ್ಟಿನಲ್ಲಿ ಅನೇಕ ಸಂಶೋಧನೆಗಳು ನಡೆದರೂ ಯಾವುದೇ ಪ್ರತ್ಯಕ್ಷ ಅಥವಾ ನೇರ ವೈಜ್ಞಾನಿಕ ಪುರಾವೆ ಲಭ್ಯವಿಲ್ಲ. ಆದರೆ 1970ರಲ್ಲಿ ರಾಷ್ಟ್ರೀಯ ಆರೋಗ್ಯ ಸಂಸ್ಥೆಯ ಪ್ರಾಯೋಜಕತ್ವದಲ್ಲಿ ಸಾರ್ವಜನಿಕರ ಕಾಳಜಿಯನ್ನು ಮನಗಂಡು ನಡೆಸಲಾದ ವೈಜ್ಞಾನಿಕ ಅಧ್ಯಯನಗಳನ್ನು ಅನೇಕರು ಪೂರ್ಣವಾಗಿ ಸಮರ್ಥಿಸುತ್ತಾರೆ.

ಅತ್ಯಂತ ದೀರ್ಘ ಅವಧಿಯ ಅಧ್ಯಯನಗಳನ್ನು ಕೈಗೊಂಡ ಸಂಶೋಧಕ ಹ್ಯೂಸ್‌ಮನ್ ಸಾಬೀತು ಪಡಿಸಿದಂತೆ ಸಣ್ಣ ವಯಸ್ಸಿನಲ್ಲಿ ಹಿಂಸಾತ್ಮಕ ವಸ್ತು ವಿಷಯಗಳಿಗೆ ತೆರೆದುಕೊಂಡಿದ್ದ ವ್ಯಕ್ತಿಗಳು 22 ವರ್ಷಗಳಷ್ಟು ದೀರ್ಘ ಸಮಯದ ನಂತರ ಹಿಂಸಾತ್ಮಕ ಅಪರಾಧೀ ಚಟುವಟಿಕೆಗಳಲ್ಲಿ ತೊಡಗಿದಂತಹ ಅನೇಕ ಉದಾಹರಣೆಗಳನ್ನು ಅಧ್ಯಯನಕ್ಕೊಳಪಡಿಸುವ ಮೂಲಕ ಕೆಲ ಮಟ್ಟಿಗಿನ ನೇರ ಸಂಬಂಧವನ್ನು ಸ್ಥಿರೀಕರಿಸಿದರು. ಬಹುತೇಕ ಆಕ್ರಮಣಕಾರಿ ಪ್ರವೃತ್ತಿಗಳು ವ್ಯಕ್ತಿಯೊಬ್ಬನಲ್ಲಿ ಬಹಳ ಸಣ್ಣ ವಯಸ್ಸಿನಲ್ಲಿಯೇ ನೆಲೆಗೊಳ್ಳುತ್ತವೆ. ಒಮ್ಮೆ ನೆಲೆಗೊಂಡ ಅಂತಹ ಭಾವನೆಗಳು ಬದಲಾವಣೆಗೊಳಪಡುವುದು ವಿರಳ ಹಾಗು ಸಮಾಜ ವಿರೋಧಿ ನಡವಳಿಕೆಗೆ ಅವು ಅಡಿಪಾಯವಾಗುವುದು ಸಹಜ. ಆಕ್ರಮಣಕಾರಿ ತಂತ್ರಗಾರಿಕೆಯ ಕಲಿಕೆ ನಿಧಾನಗತಿಯದಾಗಿದ್ದು ದೀರ್ಘಕಾಲದ ಆಕ್ರಮಣಕಾರಿ ಮನೋವೃತ್ತಿಗೆ ಕಾರಣವಾಗುತ್ತದೆ.

ಬೆರ್ರಿ ಮತ್ತು ಆಸಾಮನ್ ಅಂದಾಜಿಸಿದಂತೆ ಸರಾಸರಿ ಅಮೇರಿಕನ್ ಮಗುವೊಂದು ಪ್ರೌಢಾವಸ್ಥೆಯನ್ನು ತಲುಪುವ ಮುನ್ನದ ಬೆಳವಣಿಗೆಯ ಹಂತದಲ್ಲಿ ಟಿವಿ ಪರದೆಯ ಮೇಲೆ ಸರಾಸರಿ 20,000 ಕೊಲೆಗಳು, 80,000 ಹಲ್ಲೆಗಳ ಚಿತ್ರಣಗಳನ್ನು ನೋಡಿರುತ್ತದೆ. ಹದಿಹರೆಯಕ್ಕೆ ಕಾಲಿಡುತ್ತಿದ್ದಂತೆ ಒಟ್ಟು 1,00,000 ಅಪರಾಧಿ ಘಟನೆಗಳ ಸಾಕ್ಷಿಯಾಗಿರುವ ಮಗುವಿನ ಮೇಲೆ ಒಂದಲ್ಲಾ ಒಂದು ರೀತಿಯ ಪರಿಣಾಮ ಇದ್ದೇ ಇರುತ್ತದೆ.

ಅಮೇರಿಕಾದ ಪೆನ್ಸಿಲ್‌ವೇನಿಯ ವಿಶ್ವವಿದ್ಯಾನಿಲಯದ ಸಂವಹನ ಸಂಶೋಧಕ ಗರ್ಬ್ನರ್ ಮತ್ತವರ ಸಹಚರರು 20 ವರ್ಷಗಳಷ್ಟು ದೀರ್ಘ ಅವಧಿಯ 'ಪ್ರೈಂ ಟೈಂ' ಸಂಜೆಯ ಟಿವಿ ಕಾರ್ಯಕ್ರಮಗಳನ್ನು ವಿಶ್ಲೇಷಿಸಿ ಅವುಗಳಲ್ಲಿ ಪ್ರತಿ ಒಂದು ತಾಸಿನ ಅವಧಿಯಲ್ಲಿ ಕನಿಷ್ಠ 5 ಹಿಂಸಾತ್ಮಕ ಚಿತ್ರಣಗಳಿದ್ದುದನ್ನು ಗುರುತಿಸಿದರು. ಶನಿವಾರದ ಬೆಳಗಿನ ಮಕ್ಕಳ ಕಾರ್ಯಕ್ರಮಗಳಲ್ಲಿ ಈ ಸಂಖ್ಯೆ 20-25ರಷ್ಟು ಇರುತ್ತಿತ್ತು. ತನ್ನ ಅಪಾರ ಮಾಹಿತಿಯನ್ನು ವಿಶ್ಲೇಷಿಸಿದ ಗರ್ಬ್ನರ್ "ಇಷ್ಟೊಂದು ಪ್ರಮಾಣದಲ್ಲಿ ಹಿಂಸೆಯನ್ನು 'ಅನುಭವಿಸುವ' ವೀಕ್ಷಕ ಸಮುದಾಯಕ್ಕೆ ಪ್ರಪಂಚ ಜೀವಿಸಲು ಅವಕಾಶ ನೀಡದ ಅಥವಾ ಹೆದರಿಕೆ ಹುಟ್ಟಿಸುವ ಸ್ಥಳವಾಗಿ ಕಾಣಿಸಿದರೆ ಆಶ್ಚರ್ಯವೇನೂ ಇಲ್ಲ' ಎಂದಿದ್ದಾರೆ.

ಇನ್ನೊಬ್ಬ ಸಂಶೋಧಕ ಶೇಯನ್ 'ಟಿವಿ ಮಾಧ್ಯಮ ಮಗುವಿಗೆ ನಿರಂತರವಾಗಿ ಹಿಂಸೆ ಹಾಗು ಕಲ್ಪನಾ ಲೋಕದ ಅನುಭವ ಬೇಕಾಗುವ ವ್ಯಸನಕ್ಕೆ ಈಡು ಮಾಡುತ್ತದೆ ಮತ್ತು ನಿರಂತರವಾಗಿ ಇದಕ್ಕಾಗಿ ಮಾಧ್ಯಮಗಳನ್ನು ಹುಡುಕುವಂತೆ ಮಾಡುತ್ತದೆ ಎನ್ನುತ್ತಾನೆ. ವಾಲ್ಟರ್ ಲಿಪ್‌ಮನ್ ಕೂಡ ಬಹು ಹಿಂದೆಯೇ ಚಲನಚಿತ್ರಗಳು, ಟಿವಿ ಹಾಗು ಕಾಮಿಕ್ಸ್ ಅಗತ್ಯಕ್ಕಿಂತ ಹೆಚ್ಚಿನ ಹಿಂಸೆ ಹಾಗು ಕಾಮ ಪ್ರಚೋದಕರ ಅಂಶಗಳನ್ನು ಒಳಗೊಂಡು ಮಕ್ಕಳನ್ನು ದಿಕ್ಕು ತಪ್ಪಿಸುತ್ತವೆ ಎಂದು ಆರೋಪಿಸಿದ್ದನು.

ಮಾಧ್ಯಮ ಹಿಂಸೆಯ ಪ್ರಚೋದನಾತ್ಮಕ ಅಂಶಗಳ ಬಗ್ಗೆ ಅರಿವಿದ್ದ ಮನಶಾಸ್ತ್ರಜ್ಞ ಬೇನಿಯ್ "ಸೆರೆಮನೆಗಳು ಅಪರಾಧಗಳನ್ನು ಕಲಿಸುವ ವಿದ್ಯಾಲಯ ಎನ್ನುವ ನಾಣ್ಣುಡಿಯನ್ನು ಒಪ್ಪುವುದಾದರೆ, ನಾನು ಟಿವಿಯನ್ನು ಬಾಲಾಪರಾಧಿಗಳನ್ನು ತಯಾರಿಸುವ ಪ್ರಾಥಮಿಕ ಶಾಲೆ ಎಂದೇ ಕರೆಯುತ್ತೇನೆ" ಎನ್ನುವುದು ಅತ್ಯಂತ ಗಮನಾರ್ಹ ಹೇಳಿಕೆ. ಆತ "ಕದಡಿದ ಕೌಟುಂಬಿಕ ಸಂಬಂಧಗಳು, ತಂದೆ ತಾಯಿ ಅಥವಾ ಸ್ನೇಹಿತರ ವರ್ಗದಿಂದ ತಿರಸ್ಕಾರ ಭಾವನೆಗೊಳಗಾದ ಮಕ್ಕಳಲ್ಲಿ ಆಕ್ರಮಣಕಾರಿ ಪ್ರವೃತ್ತಿ ಹೆಚ್ಚುತ್ತದೆ. ಟಿವಿ ಒಂದೇ ಈ ಪ್ರವೃತ್ತಿಯ ಹೆಚ್ಚಳದ ಸಮಸ್ಯೆಗೆ ಕಾರಣವಲ್ಲ, ಆದರೆ ಖಂಡಿತವಾಗಿಯೂ ಪ್ರಬಲ ಪ್ರೇರಕ ಅಂಶಗಳಲ್ಲಿ ಒಂದು" ಎನ್ನುತ್ತಾನೆ.

ಚಿಕ್ಕ ವಯಸ್ಸಿನಲ್ಲಿಯ ಹೆಚ್ಚಿನ ಮಾಧ್ಯಮ ತೆರೆತ ಕಾಲೇಜು ವಿದ್ಯಾರ್ಥಿಗಳು ಹೆಚ್ಚು ಆಕ್ರಮಣಕಾರಿ ಪ್ರವೃತ್ತಿಯವರಾಗಿ ರೂಪುಗೊಳ್ಳಲು ಕಾರಣ. ಮಾಧ್ಯಮ ತೆರೆತ ಇಲ್ಲದವರ ಅಥವಾ ಕಡಿಮೆ ತೆರತವಿದ್ದವರು ಇವರಿಗೆ ಹೋಲಿಸಿದಾಗ ಅಷ್ಟೇನೂ ಆಕ್ರಮಣಕಾರಿ ಪ್ರವೃತ್ತಿಯವರಲ್ಲ ಎಂಬುದು ತಿಳಿಯುತ್ತದೆ. ಹೆರಾಲ್ಡ್‌ನ ಅಧ್ಯಯನಗಳಲ್ಲಿ ತಿಳಿದುಬರುವ ಅಂಶವೆಂದರೆ, ಹತ್ತನೇ ವಯಸ್ಸಿನಲ್ಲಿ ಗಂಡು ಮಕ್ಕಳು ಹಾಗು ಹೆಣ್ಣು ಮಕ್ಕಳಲ್ಲಿ ಭೌತಿಕ ಆಕ್ರಮಣಶೀಲ ಗುಣ ಒಂದೇ ಮಟ್ಟದ್ದಾಗಿದ್ದರೂ, ಕಾಲಕ್ರಮೇಣ ಇದು ಗಂಡು ಮಕ್ಕಳಲ್ಲಿ ತೀವ್ರವಾಗಿ ಬೆಳೆದು ನಿಲ್ಲುವುದು ವೇದ್ಯವಾಯಿತು. ಅದೇ ಸಮಯದಲ್ಲಿ ಹುಡುಗಿಯರಲ್ಲಿ ಇದು ಕುಗ್ಗುವುದು ಕಂಡುಬಂತು.

ಮಲೇಷ್ಯಾದಲ್ಲಿ ನಡೆದ ಪೆನಾಂಗ್ ಗ್ರಾಹಕ ಸಂಘಟನೆಯ ಅಧ್ಯಯನಗಳೂ ಕೂಡ ಟಿವಿಯ ಹಿಂಸಾತ್ಮಕ ವಸ್ತುವಿಷಯ ಋಣಾತ್ಮಕ ಪರಿಣಾಮಗಳಿರುವುದನ್ನು ಸಾಬೀತು ಪಡಿಸಿತು. ಸಂಘಟನೆ ತನ್ನ ಅಧ್ಯಯನದ ವಿವರಗಳನ್ನು ನೀಡುತ್ತಾ, ವಿಶ್ಲೇಷಣೆಗೊಳಪಡಿಸಿದ 13 ಟಿವಿ ಕಾರ್ಯಕ್ರಮಗಳಲ್ಲಿ ಒಟ್ಟು ಎಂಟುವರೆ ತಾಸಿನ ಅವಧಿಯಲ್ಲಿ ಒಟ್ಟು 736 ಹಿಂಸಾತ್ಮಕ ಚಿತ್ರಣಗಳನ್ನು ಗುರುತಿಸಿತು. ಭಾರತದಲ್ಲಿ ಟಿವಿ ಹಿಂಸೆಯ ಕುರಿತಾಗಿ ಮಹತ್ವಪೂರ್ಣ ಅಧ್ಯಯನಗಳು ನಡೆದಿಲ್ಲ. ಕೆಲ ಪ್ರಯತ್ನಗಳು ಒಂದಷ್ಟು ಮಾಧ್ಯಮ ವಿಷಯ ವಿಶ್ಲೇಷಣೆಯನ್ನು ಮಾಡಿರುವುದನ್ನು ಬಿಟ್ಟರೆ ಪ್ರಯೋಗಾತ್ಮಕ ಸಂಶೋಧನೆಗಳನ್ನು ಹಮ್ಮಿಕೊಳ್ಳಲಾಗಿಲ್ಲ.

ಲಭ್ಯವಿರುವ ಕೆಲ ಪ್ರಾಥಮಿಕ ಮಾಹಿತಿಯ ಪ್ರಕಾರ ಪ್ರತಿದಿನ ಸರಾಸರಿ ನಾಲ್ಕು ತಾಸು ಟಿವಿ ವೀಕ್ಷಣೆ ಮಾಡುವ ಮಗು ಒಂದು ವಾರದಲ್ಲಿ ಕೊಲೆ, ಹಲ್ಲೆ, ಹೊಡೆದಾಟ, ಜಗಳ, ಮಾನಭಂಗಗಳಂತಹ ಕನಿಷ್ಠ 160 ಹಿಂಸಾತ್ಮಕ ದೃಶ್ಯಗಳನ್ನು ನೋಡುತ್ತದೆ.

ಶ್ರಾಮ್ ಅಧ್ಯಯನ "ಹಿಂಸೆಯ ಚಿತ್ರಣ ಮಕ್ಕಳಲ್ಲಿ ಆಕ್ರಮಣಕಾರಿ ಒತ್ತಡಗಳನ್ನು ನಿಧಾನವಾಗಿ ಶೇಖರಣೆಗೊಳ್ಳುವಂತೆ ಮಾಡುತ್ತದೆ. ಮೊದಲೇ ಆಕ್ರಮಣಕಾರಿಯಾದ ಮಗುವಿನಲ್ಲಿ ಇದು ಮತ್ತಷ್ಟು ಉಲ್ಬಣಗೊಳ್ಳಲು ಕಾರಣವಾಗುತ್ತದೆ. ಸುಪ್ತ ಭಾವನೆಗಳಿರುವ ಮಗುವೂ ಕೂಡ ಮುಂದೊಂದು ದಿನ ಸಂಯಮ ಮೀರಿ ವರ್ತಿಸುವ ಸಾಧ್ಯತೆ ನಿಚ್ಚಳ. ಪಾತ್ರಗಳನ್ನು ಸುಲಭವಾಗಿ ಮಕ್ಕಳು ಅನುಕರಿಸುವಂತೆ ಮಾಡಿ ಈ ಕಾರ್ಯಕ್ರಮಗಳು ತಮ್ಮ ಪರಿಣಾಮ ಬೀರುತ್ತವೆ" ಎನ್ನುತ್ತದೆ.

## 3.6 ಮನದಟ್ಟಾಗದ ಸಂಶೋಧನೆಗಳು

ಪ್ರಪಂಚದಾದ್ಯಂತ ಮಕ್ಕಳಲ್ಲಿ ಹಿಂಸಾತ್ಮಕತೆಯನ್ನು ಹುಟ್ಟು ಹಾಕುವ ಹಾಗು ಬೆಳೆಸುವಲ್ಲಿ ಟಿವಿಯ ಪಾತ್ರದ ಬಗ್ಗೆ ಸಾಕಷ್ಟು ಚರ್ಚೆ ನಡೆಯುತ್ತಿರುವುದು ವಾಸ್ತವವಾದರೂ ವಿಷಯ ಅತ್ಯಂತ ಸಂಕೀರ್ಣವಾದದ್ದು ಎಂಬುದನ್ನು ಎಲ್ಲರೂ ಒಪ್ಪುತ್ತಾರೆ ಹಾಗು ಫಲಿತಾಂಶಗಳ ನಿರ್ದಿಷ್ಟವಲ್ಲ ಎಂಬುದನ್ನು ಬಹುತೇಕರು ಒಪ್ಪುತ್ತಾರೆ. ಈ ನಿಟ್ಟಿನಲ್ಲಿ ನಡೆದಿರುವ ಎಲ್ಲ ಸಂಶೋಧನೆಗಳು ಸಣ್ಣ ಗುಂಪಿನ ಅಥವಾ ಪ್ರಯೋಗಶಾಲಾ ಅಧ್ಯಯನಗಳು. ಕೆಲ ಟೀಕಾಕಾರರು ಇಂತಹ ಅಧ್ಯಯನಗಳನ್ನು ಸಾರ್ವತ್ರಿಕಗೊಳಿಸಲು ಸಾಧ್ಯವಿಲ್ಲ ಎನ್ನುತ್ತಾರೆ.

ಹೆಸರಾಂತ ಸಂವಹನ ತಜ್ಞ ಫ್ರೀಡ್‌ಮನ್ ಅಭಿಪ್ರಾಯದಂತೆ ನೈಸರ್ಗಿಕ ಪರಿಸರದಲ್ಲಿ ಟಿವಿಯ ಹಿಂಸಾತ್ಮಕ ಚಿತ್ರಣಗಳನ್ನು ವೀಕ್ಷಿಸುವುದರಿಂದ ಯಾವುದೇ ರೀತಿಯಲ್ಲಿ ಜನರು ಆಕ್ರಮಣಶೀಲರಾಗುತ್ತಾರೆ ಎನ್ನುವುದು ಸಾಬೀತುಪಡಿಸಲು ಯಾವುದೇ ಸಾಕ್ಷ್ಯಾಧಾರಗಳು ಇಲ್ಲ. ಈ ವಾದಕ್ಕೆ ಅವರು ನೀಡುವ ಎರಡು ಪ್ರಮುಖ ಕಾರಣಗಳೆಂದರೆ:

1. ಪ್ರಯೋಗಶಾಲಾ ಸಂಶೋಧನಾ ಪ್ರಯತ್ನಗಳು ಅಸಹಜ ಹಾಗು ಸಂಬಂಧವಿಲ್ಲದವು.

2. ಕ್ಷೇತ್ರ ಪ್ರಯೋಗಗಳು ಹಾಗು ಪ್ರಯೋಗಾತ್ಮಕವಲ್ಲದ ಅಧ್ಯಯನಗಳು ಸಾಕಷ್ಟು ದೃಢ ಫಲಿತಾಂಶಗಳನ್ನು ನೀಡಲು ಸಾಧ್ಯವಾಗಿಲ್ಲ.

ಕ್ಷೇತ್ರ ಪ್ರಯೋಗಗಳನ್ನು ಅಪೂರ್ಣವೆನ್ನುವ ಫ್ರೀಡ್‌ಮನ್, ಪೂರಕ ಸಂಬಂಧಗಳ ಅಧ್ಯಯನ ಅತ್ಯಂತ ಸಂಕೀರ್ಣ ಪ್ರಕ್ರಿಯೆಯೆನ್ನುತ್ತಾನೆ. ಹಿಂಸೆಯ ಚಿತ್ರಣ ಆಕ್ರಮಣಶೀಲತೆಯನ್ನು ಪ್ರಚೋದಿಸುತ್ತದೆ ಎನ್ನುವುದನ್ನು ಒಪ್ಪಿದರೂ ವ್ಯಕ್ತಿಯೊಬ್ಬನ ಸಾಮಾಜಿಕ ನಡವಳಿಕೆಗೆ ಯಾವುದೇ ಒಂದು ಅಂಶ ಕಾರಣವಲ್ಲ ಎಂಬುದನ್ನು ನೆನಪಿಡಿ" ಎನ್ನುತ್ತಾನೆ.

ಅಧ್ಯಯನಗಳ ಮುಖಾಂತರ ಆತ ಮಕ್ಕಳಿಗೆ ಕೆಲವೇ ಸ್ನೇಹಿತರು, ಕಪ್ಪು ಚರ್ಮದ ಬಣ್ಣ, ಸ್ಥೂಲ ಕಾಯದಂತಹ ವೈಯಕ್ತಿಕ ಕಾರಣಗಳಿಗಾಗಿಯೂ ಟಿವಿಯ ಮುಂದೆ ಹೆಚ್ಚು ಹೊತ್ತು ಕಳೆಯುವ, 'ಆಕ್ರಮಣಶೀಲ ಹೀರೊ' ತರಹದ ಪಾತ್ರಗಳನ್ನು ಮೆಚ್ಚುವ ಪ್ರಕ್ರಿಯೆಯನ್ನು ಸಾಬೀತು ಮಾಡಿದನು. ಮಕ್ಕಳಲ್ಲಿ ಅಪರಾಧಿ ಭಾವನೆಗಳಿಗೆ ಬಾಲಾಪರಾಧಿಗಳೆಂದು ಕರೆಯಲ್ಪಡುವ ಮಕ್ಕಳ ಮನೆಗಳಲ್ಲಿನ ಮುರಿದ ಬಿದ್ದ ಕೌಟುಂಬಿಕ ಸಂಬಂಧಗಳಿಗೆ ತಳುಕು ಹಾಕಲಾಗುತ್ತದೆ. ಬಾಲಾಪರಾಧ ಸಹ ಸಂಕೀರ್ಣ ನಡವಳಿಕೆ. ಇದಕ್ಕೆ ಹಲವಾರು ಬೇರುಗಳಿದ್ದು ಯಾವುದೂ ಒಂದು ಮಹತ್ವದ ಕಾರಣ ಇದನ್ನು ಎತ್ತಿ ನಿಲ್ಲಿಸುತ್ತದೆ. ಉದಾಹರಣೆಗೆ, ಮುರಿದು ಬಿದ್ದ ಕುಟುಂಬದ ವ್ಯವಸ್ಥೆ, ಸ್ನೇಹಿತರು, ಒಡಹುಟ್ಟಿದವರು ಹಾಗು ತಂದೆ ತಾಯಿಗಳಿಂದ ದೂರ ಮಾಡಲ್ಪಟ್ಟ ಮಕ್ಕಳಿಗೆ ಟಿವಿ ಭಾವನೆಗಳನ್ನು ಸ್ವೀಕರಿಸುತ್ತದೆ.

ಆದರೆ ನಡವಳಿಕೆಗೆ ಇದೊಂದೇ ಕಾರಣವಲ್ಲವೆನ್ನಲಾಗುತ್ತದೆ. ಈ ಎಲ್ಲಾ ವಾದ ವಿವಾದಗಳ ನಂತರ ಕೆಲ ತಜ್ಞರು ಟಿವಿಯ ಸಂಪೂರ್ಣ ನಿಷೇಧಕ್ಕೂ ಶಿಫಾರಸ್ಸು ಮಾಡಿದ್ದರು! ಇನ್ನು ಕೆಲವರು ಐದು ವರ್ಷದೊಳಗಿನ ಮಕ್ಕಳು ಟಿವಿ ವೀಕ್ಷಿಸುವುದನ್ನು ನಿಷೇಧಿಸಬೇಕೆಂಬ ಬೇಡಿಕೆಯನ್ನು ಮುಂದಿಟ್ಟಿದ್ದರು. ಸಮಾಜದಲ್ಲಿನ ಹಿಂಸೆ ಮತ್ತು ಅಪರಾಧಗಳಿಗೆ ಅಂತಹ ಪರಾಕಾಷ್ಠದ ತೀರ್ಮಾನಗಳು ದಿವ್ಯೌಷಧವೇನಲ್ಲ. ಪೋಷಕ ನಿಯಂತ್ರಣ ಬಹಳಷ್ಟು ಮಟ್ಟಿಗೆ ಸಹಾಯ ಮಾಡುತ್ತದೆ. 'ಮಕ್ಕಳು ಟಿವಿ ವೀಕ್ಷಿಸುವ ಪ್ರಕ್ರಿಯೆ ಖಂಡಿತವಾಗಿಯೂ ವಯಸ್ಕರ ಜವಾಬ್ದಾರಿ' ಎನ್ನುವುದನ್ನು ಅರ್ಥಮಾಡಿಕೊಳ್ಳಬೇಕಾಗಿದೆ. ಪ್ರತಿಯೊಬ್ಬ ಪೋಷಕರೂ ತಮ್ಮ ಮಕ್ಕಳ ಶ್ರೇಯೋಭಿವೃದ್ಧಿಗೆ ಸಂಕೀರ್ಣ ಟಿವಿ 'ಜಾಲ'ಗಳಿಂದ ಬಿಡಿಸುವುದು ಶ್ರೇಯಸ್ಕರ ಎಂಬ ಅಭಿಪ್ರಾಯಕ್ಕೆ ಮನ್ನಣೆ ಸಿಗುತ್ತಿದೆ.

## 3.7 ಸಾರಾಂಶ

ಈ ಘಟಕದಲ್ಲಿ ಬೇರೆ ಬೇರೆ ಮಾಧ್ಯಮಗಳಲ್ಲಿ ಹಿಂಸೆಯ ಚಿತ್ರಣ ಹಾಗು ವೈಭವೀಕರಣದ ಪ್ರಭಾವ, ಪರಿಣಾಮಗಳ ಬಗ್ಗೆ ತಿಳಿದುಕೊಂಡಿರಿ. ಪ್ರಾರಂಭದಲ್ಲಿ ಆಕ್ರಮಣಶೀಲ ನಡವಳಿಕೆಗೆ ಕಾರಣವಾಗುವ ಅಂಶಗಳ ಬಗ್ಗೆ ಗಮನಹರಿಸಲಾಯಿತು. ಮಕ್ಕಳ ಸಾಮಾಜಿಕ ಪರಿಸರ, ಆರ್ಥಿಕ ಪರಿಸರ, ಕೌಟುಂಬಿಕ ಹಿನ್ನಲೆ, ತಂದೆ ತಾಯಂದಿರ ವ್ಯಕ್ತಿತ್ವ, ಮಕ್ಕಳಿಗೆ ವಿಧಿಸಲಾಗುವ ಶಿಕ್ಷೆ, ಶಾಲಾ ಪ್ರಗತಿಯಲ್ಲಿನ ಹಿನ್ನಡೆ, ವಾಸ್ತವದಲ್ಲಿನ ಹಾಗು ಮಾಧ್ಯಮ ಚಿತ್ರಣಗಳಲ್ಲಿನ ಅನುಕರಣೆ ಮುಂತಾದ ಪ್ರಮುಖ ಅಂಶಗಳು ಅವರ ಆಕ್ರಮಣಕಾರಿ ಪ್ರವೃತ್ತಿಗೆ ಕಾರಣವಾಗುತ್ತವೆ. ಈ ಅಂಶಗಳ ಜೊತೆಗೆ ಟಿವಿಯಲ್ಲಿ ಬಿಂಬಿತವಾಗುವ ಹಿಂಸಾತ್ಮಕ ಚಿತ್ರಣದ ಪಾತ್ರದ ಬಗ್ಗೆ ತೀವ್ರ ಚರ್ಚೆ, ಸಂಶೋಧನೆ ಅಧ್ಯಯನಗಳು ಪ್ರಪಂಚದಾದ್ಯಂತ ನಡೆಯುತ್ತಿವೆ. ಹಲವಾರು ಅಧ್ಯಯನಗಳ ಫಲಿತಾಂಶಗಳು ಟಿವಿ ಹಿಂಸೆ ಹಾಗು ಸಾಮಾಜಿಕ ಅಪರಾಧ ಪ್ರಕರಣಗಳಿಗೆ ನೇರ ಸಂಬಂಧಗಳನ್ನು ಕಲ್ಪಿಸುತ್ತವೆ. ಪೋಷಕ ಜವಾಬ್ದಾರಿ ಈ ನಿಟ್ಟಿನಲ್ಲಿ ಸಹಾಯಕವಾಗಲಿದ್ದು ಮಕ್ಕಳ ಟಿವಿ ವೀಕ್ಷಣೆಗೆ ಕಡಿವಾಣ ಹಾಕುವುದು ಉಚಿತವೆಂಬ ನಿರ್ಧಾರಕ್ಕೆ ಬರಲಾಗಿದೆ.

## 3.8 ನಿಮ್ಮ ಪ್ರಗತಿ ಪರಿಶೀಲನೆ

**ಸೂಚನೆ: ನಿಮ್ಮ ಉತ್ತರಗಳನ್ನು ಈ ಘಟಕದಲ್ಲಿ ನೀಡಲಾಗಿರುವ ಮಾಹಿತಿಯೊಂದಿಗೆ ಹೋಲಿಸಿ.**

1. ಮಕ್ಕಳ ಮೇಲೆ ಟಿವಿ ಮಾಧ್ಯಮದಲ್ಲಿ ಬಿಂಬಿಸಲಾಗುವ ಹಿಂಸೆಯ ಚಿತ್ರಣದ ಪರಿಣಾಮಗಳನ್ನು ವಿವರಿಸಿ.
2. ಟಿವಿ ಹಿಂಸೆ ಕುರಿತಾದ ಸಂಶೋಧನೆಗಳು ಹಾಗು ಅಧ್ಯಯನಗಳು ನಿರ್ದಿಷ್ಟ ಉತ್ತರಗಳನ್ನು ಕಂಡುಕೊಳ್ಳಲು ವಿಫಲವಾಗಿವೆ ಎಂಬುದರ ಬಗ್ಗೆ ನಿಮ್ಮ ಅನಿಸಿಕೆಯೇನು? ವಿವರಿಸಿ.

## 3.9 ಹೆಚ್ಚಿನ ಓದಿಗಾಗಿ


1. Asamen Berry, Children and Television: Images in a Changing Socio-Cultural World, Sage Publication - New Delhi,1993.
2. Camstock, Television in America, Sage Publications, Benerly Hills - Califomia, 1980.
3. Camberbath Howitt, Mass Media, Violence and Society, John Wiley, New York,1975.


**ಬರಹ: ತೇಜಸ್ವಿ ನವಿಲೂರ್**

# ಘಟಕ 4 ಮಾಧ್ಯಮ ಮತ್ತು ಜಾಗತೀಕರಣ

ರಚನೆ

4.0 ಉದ್ದೇಶಗಳು

4.1 ಪ್ರಸ್ತಾವನೆ

4.2 ವಿದೇಶಿ ಒಡೆತನಕ್ಕೆ ಕಡಿವಾಣ

4.2.1 ಅಭ್ಯಂತರ

4.2.2 ಧನಾತ್ಮಕ ಪರಿಣಾಮ

4.2.3 ಋಣಾತ್ಮಕ ಪರಿಣಾಮ

4.3 ಜಾಗತೀಕರಣದೊಂದಿಗೆ ಹೊಂದಾಣಿಕೆ

4.3.1 ರಾಜಕೀಯ ವ್ಯವಸ್ಥೆ ಹಾಗು ಜಾಗತೀಕರಣ

4.3.2 ಭಾರತದಲ್ಲಿ ಮಾಧ್ಯಮದ ಜಾಗತೀಕರಣ

4.4 ಸಾರಾಂಶ

4.5 ನಿಮ್ಮ ಪ್ರಗತಿ ಪರಿಶೀಲನೆ

4.6 ಹೆಚ್ಚಿನ ಓದಿಗಾಗಿ

## 4.0 ಉದ್ದೇಶಗಳು

ಈ ಘಟಕವನ್ನು ಮಾಧ್ಯಮದ ಜಾಗತೀಕರಣವನ್ನು ಪರಿಚಯಿಸಲು ರೂಪಿಸಲಾಗಿದೆ. ಇದರಲ್ಲಿ ಮಾಧ್ಯಮ ಜಾಗತೀಕರಣದ ಗುಣಲಕ್ಷಣಗಳನ್ನು ಪಡೆದುಕೊಳ್ಳುವ ರೀತಿಯನ್ನು ವಿವರಿಸಲಾಗಿದೆ. ಅಲ್ಲದೆ ಭಾರತೀಯ ಮಾಧ್ಯಮ ಪರಿಸರದ ಹಿನ್ನೆಲೆಯಲ್ಲಿ ಜಾಗತೀಕರಣದ ಪ್ರಮುಖ ಅಂಶಗಳ ಪ್ರಭಾವ, ಪರಿಣಾಮಗಳ ವಿಶ್ಲೇಷಣೆ ಮಾಡಲಾಗಿದೆ. ಈ ಹಿಂದಿನ ಘಟಕಗಳಲ್ಲಿ ಮಾಧ್ಯಮ ಮತ್ತು ಮಹಿಳೆ ಹಾಗು ಮಕ್ಕಳ ನಡುವಿನ ಸಂಬಂಧಗಳ ಬಗ್ಗೆ ತಿಳಿದುಕೊಂಡಿರಿ. ಮಾಧ್ಯಮ ಹಾಗು ಹಿಂಸೆಯ ಬಗ್ಗೆಯೂ ತಿಳಿದುಕೊಳ್ಳುವುದರ ಮೂಲಕ ಮಾಧ್ಯಮದ ಸ್ಥಳೀಯ ಹಾಗು ರಾಷ್ಟ್ರೀಯ ಪಾತ್ರದ ಬಗ್ಗೆ ಅರಿತುಕೊಂಡಿರಿ.

ಆಗಾಗ ಬಳಸಲ್ಪಡುವ "ಜಾಗತೀಕರಣ" ಎಂಬ ಪದ ರಾಷ್ಟ್ರವೊಂದರ, ಸಮಾಜವೊಂದರ ಮೇಲೆ ಅಂತರರಾಷ್ಟ್ರೀಯ ಅಥವಾ ಬಹುರಾಷ್ಟ್ರೀಯ ಪ್ರಭಾವ, ಪರಿಣಾಮ ಹಾಗು ನಿಯಂತ್ರಣವನ್ನು ಸೂಚಿಸುತ್ತದೆ. ಭಾರತದ ಆರ್ಥಿಕ ವ್ಯವಸ್ಥೆ ವಿಶ್ವ ವಾಣಿಜ್ಯ ಸಂಸ್ಥೆಯ ಒಪ್ಪಂದಗಳಡಿ ಪ್ರಪಂಚದ ಆರ್ಥಿಕತೆಯೊಡನೆ ವಿಲೀನವಾಗುತ್ತಿರುವ ಸಂದರ್ಭದಲ್ಲಿ, ಜಾಗತೀಕರಣ ದೇಶದ ಉದ್ಯಮಗಳು, ವ್ಯವಸಾಯ ಹಾಗು ಸೇವಾ ಕ್ಷೇತ್ರಗಳ ಸ್ವರೂಪವನ್ನೇ ಸಂಪೂರ್ಣವಾಗಿ ಬದಲಿಸುತ್ತದೆ.

ಆದರೆ ಮಾಧ್ಯಮ ದೇಶವೊಂದರ ಸಂಸ್ಕೃತಿ, ರಾಜಕೀಯ ಹಾಗು ಜನಜೀವನ ಅವಿಭಾಜ್ಯ ಅಂಗವಾಗಿರುವುದರಿಂದ ಅದರ ಮೇಲೆ ಜಾಗತೀಕರಣದಿಂದಾಗುವ ಪ್ರಭಾವ, ಪರಿಣಾಮಗಳು ಭಾರಿ ಮಹತ್ವಗಳಿಸುತ್ತವೆ. ಈ ಘಟಕದಲ್ಲಿ ಪ್ರಮುಖವಾಗಿ ಪತ್ರಿಕೆಗಳು, ವಿದ್ಯುನ್ಮಾನ ಮಾಧ್ಯಮ ಹಾಗು ಅಂತರ್ಜಾಲದಂತಹ ಹೊಸ ಮಾಧ್ಯಮಗಳ ಮೇಲೆ ಜಾಗತೀಕರಣದ ಪ್ರಭಾವವನ್ನು ಚರ್ಚಿಸಲಾಗಿದೆ. ಇದರ ಅಧ್ಯಯನದ ನಂತರ ಈ ಕೆಳಕಂಡ ಅಂಶಗಳು ನಿಮಗೆ ಸಾಧ್ಯವಾಗಬೇಕು.

* ಜಾಗತೀಕರಣದ ಅರ್ಥವಿವರಣೆ ಹಾಗು ಅದರ ಪರಿಣಾಮಗಳ ವಿವರಣೆ;
* ಜಾಗತೀಕರಣದ ಮಹತ್ವ ಹಾಗು ಧನಾತ್ಮಕ ಮತ್ತು ಋಣಾತ್ಮಕ ಪರಿಣಾಮಗಳ ವಿವರಣೆ;
* ಜಾಗತೀಕರಣದ ಅಗತ್ಯ ಅಂಶಗಳಾದ ಬಂಡವಾಳ, ತಂತ್ರಜ್ಞಾನ, ಮಾನವ ಸಂಪನ್ಮೂಲ, ಜೀವನಶೈಲಿ ಹಾಗು ಗಡಿಯಾಚೆಗಿನ ನಿಯಂತ್ರಣಗಳನ್ನು ಗುರುತಿಸಿ ವಿಶ್ಲೇಷಿಸುವುದು.
* ವಿವಿಧ ರಾಜಕೀಯ ವ್ಯವಸ್ಥೆಗಳು ಜಾಗತೀಕರಣವನ್ನು ನೋಡುವ ಬಗೆಯ ಅರಿವು, ಮತ್ತು
* ಜಾಗತೀಕರಣದ ಪ್ರಭಾವಕ್ಕೊಳಗಾದ ಭಾರತೀಯ ಸಮೂಹ ಮಾಧ್ಯಮಗಳನ್ನು ಗುರುತಿಸುವುದು.

## 4.1 ಪ್ರಸ್ತಾವನೆ

ಕವಿ ಜಾನ್ ಡನ್‌ನ ಪ್ರಖ್ಯಾತ ಹೇಳಿಕೆಯೆಂದರೆ 'ಯಾವುದೇ ವ್ಯಕ್ತಿತ್ವ ಒಂದು ದ್ವೀಪವಲ್ಲ' ಎಂಬುದು. ಅದೇ ರೀತಿ ಯಾವುದೇ ರಾಷ್ಟ್ರ ಅಥವಾ ಸಮಾಜ ತನ್ನ ಸುತ್ತಲಿನ ರಾಷ್ಟ್ರಗಳಲ್ಲಿ ಅಥವಾ ಸಮಾಜಗಳಲ್ಲಿ ನಡೆಯುತ್ತಿರುವ ವಿದ್ಯಮಾನಗಳಿಂದ ದೂರವುಳಿದು ದ್ವೀಪವಾಗುಳಿಯಲು ಸಾಧ್ಯವಿಲ್ಲ. ಭಾರತ ಸಾವಿರಾರು ವರ್ಷಗಳಿಂದ ತನ್ನ ಗಡಿಯಾಚೆಗಿನ ಪ್ರಭಾವಗಳಿಗೆ ತೆರೆದುಕೊಂಡೇ ಇತ್ತು ಎನ್ನಬಹುದು. ಅನೇಕ ಜಾಗತಿಕ ಶಕ್ತಿಗಳು ಭಾರತೀಯ ಸಂಸ್ಕೃತಿ ಹಾಗು ನಾಗರೀಕತೆಯ ಸಂಪರ್ಕ ಹೊಂದಿದ್ದುವು. ಉಳಿದ ಬಹುತೇಕ ಕ್ಷೇತ್ರಗಳಂತೆ ಭಾರತದಲ್ಲಿ ಮಾಧ್ಯಮ ಸಹ ತನ್ನ ತಂತ್ರಜ್ಞಾನ ಹಾಗು ಪರಿಕಲ್ಪನೆಗಳನ್ನು ಹೊರಗಿನಿಂದಲೇ ಪಡೆದುಕೊಂಡಿದೆ.

ದಿನಪತ್ರಿಕೆಗಳನ್ನು ಮುದ್ರಿಸಲು ಅನುವಾಗುವ ಮುದ್ರಣಯಂತ್ರ ತಂತ್ರಜ್ಞಾನ ಬಂದದ್ದು ಯುರೋಪ್‌ನಿಂದ. ಅದೇ ರೀತಿ ಮುದ್ರಣ ಕ್ಷೇತ್ರದ ಅತ್ಯಾಧುನಿಕ ತಂತ್ರಜ್ಞಾನಗಳಾದ ಆಫ್‌ಸೆಟ್ ಮುದ್ರಣ, ಫ್ಯಾಕ್ಸ್, ಬಣ್ಣದ ಮುದ್ರಣ ಮತ್ತಿತರ ಆವಿಷ್ಕಾರಗಳೂ ಸಹ ಹೊರಗಿನಿಂದಲೇ ಬಂದಂತಹವು.

ಅದೇ ಸಮಯದಲ್ಲಿ ದೇಶೀಯ ವಿಜ್ಞಾನಿಗಳು ಹಾಗು ತಂತ್ರಜ್ಞರು ಅನೇಕ ಉಪಯುಕ್ತ ಆವಿಷ್ಕಾರಗಳನ್ನು ಭಾರತೀಯ ಪರಿಸರಕ್ಕೆ, ಅಗತ್ಯಕ್ಕೆ ತಕ್ಕಂತೆ ಹೊಂದಿಸಿದುದಲ್ಲದೆ ತಮ್ಮದೇ ಆದ ಅನೇಕ ಹೊಸ ತಾಂತ್ರಿಕತೆಗಳನ್ನು ಆಳವಡಿಸಿಕೊಂಡರು. ಹದಿನಾರನೆ ಶತಮಾನದಲ್ಲಿ ದೇಶದ ಮೊಟ್ಟ ಮೊದಲ ಮುದ್ರಣಯಂತ್ರ ಸ್ಥಾಪಿತವಾದಾಗಿನಿಂದ ಮುದ್ರಣ ಹಾಗು ಕಾಗದ ತಯಾರಿಕಾ ತಂತ್ರಜ್ಞಾನದಲ್ಲಿ ಅನೇಕ ಹೊಸ ವಿಷಯಗಳು ಹಾಗು ಕಲ್ಪನಾರೂಪಗಳು, ಭಾರತೀಯ ಪತ್ರಿಕಾ ತಂತ್ರಜ್ಞರು ಹಾಗು ವಿದೇಶೀಯರ ನಡುವೆ ಸಾಕಷ್ಟು ಪ್ರಮಾಣದಲ್ಲಿ ವಿನಿಮಯವಾಗಿವೆ. ತಾಂತ್ರಿಕತೆಯ ಜಾಗತೀಕರಣವನ್ನು ಮುದ್ರಣ ಮಾಧ್ಯಮದಲ್ಲಿ ಗುರುತಿಸಲು ಜನಸಾಮಾನ್ಯರಿಗೆ ತುಸು ತ್ರಾಸದಾಯಕವಾದರೂ, ಇದು ಉಪಗ್ರಹ ಟಿವಿ ವಾಹಿನಿ ತಂತ್ರಜ್ಞಾನದಲ್ಲಿ ಎದ್ದು ಕಾಣುತ್ತದೆ. ಪ್ರಾರಂಭದ ವರ್ಷದಲ್ಲಿ ಎಲ್ಲ ಉಪಗ್ರಹ ಟಿವಿ ವಾಹಿನಿಗಳು ತಮ್ಮ ದೇಶೀಯ ಕಾರ್ಯಕ್ರಮಗಳನ್ನು ವಿದೇಶಿ ಉಪಗ್ರಹಗಳ ಸಹಯೋಗದೊಂದಿಗೆ ಬಿತ್ತರಿಸುತ್ತಿದ್ದವು. ಕಾರ್ಯಕ್ರಮಗಳನ್ನು ಮಾಸ್ಕೋ, ಮನಿಲಾ, ಕೊಲಂಬೊ, ಹಾಂಗ್‌ಕಾಂಗ್ ಹಾಗು ಕಠ್ಮಂಡುಗಳಂತಹ ನಗರಗಳಿಂದ ಉಪಗ್ರಹ ಸಂಪರ್ಕ ಕಲ್ಪಿಸಿ ಪ್ರಸಾರ ಮಾಡಲಾಗುತ್ತಿತ್ತು. ಈಗ ಸರ್ಕಾರದ ಬಿಗಿ ನಿಲುವಿನ ಧೋರಣೆಗಳು ಬದಲಾಗಿದ್ದು ಭಾರತೀಯ ಒಡೆತನದ ವಾಹಿನಿಗಳನ್ನು ಭಾರತದಿಂದಲೇ ಉಪಗ್ರಹ ಸಂಪರ್ಕ ಕಲ್ಪಿಸಿ ಪ್ರಸಾರ ಮಾಡಲು ಅವಕಾಶ ನೀಡಲಾಗಿದೆ. ಪ್ರಸ್ತುತ ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆಯ ಉಪಗ್ರಹಗಳನ್ನು ದೂರದರ್ಶನ ಹಾಗೂ ಇತರೆ ಸರ್ಕಾರಿ ಸಂಸ್ಥೆಗಳು ಬಳಸಿಕೊಳ್ಳುತ್ತಿವೆ.

1955ರಲ್ಲಿ ಕೇಂದ್ರ ಮಂತ್ರಿಮಂಡಲ ದೇಶದ ಮುದ್ರಣ ಮಾಧ್ಯಮದಲ್ಲಿ ವಿದೇಶಿ ಬಂಡವಾಳ ಹೂಡಿಕೆಗೆ ಅವಕಾಶ ನೀಡದಂತೆ ತೀರ್ಮಾನ ತೆಗೆದುಕೊಂಡಿತು. ಈ ತೀರ್ಮಾನವನ್ನು ಮತ್ತೆ 1999ರಲ್ಲಿ ಕೇಂದ್ರ ಮಂತ್ರಿಮಂಡಲ ಸ್ವೀಕರಿಸಿತು. ಈ ತೀರ್ಮಾನಗಳಿಗೆ ಹೊರತಾದ ಎರಡು ವಿದೇಶಿ ಪ್ರಕಟಣೆಗಳೆಂದರೆ ರೀಡರ್ಸ್ ಡೈಜೆಸ್ಟ್ ಮತ್ತು ಸ್ಪ್ಯಾನ್. ಈ ಎರಡು ಪ್ರಕಟಣೆಗಳು ಬಹಳಷ್ಟು ಮಟ್ಟಿಗೆ ತಮ್ಮ ವಸ್ತುವಿಷಯಗಳನ್ನು ದೇಶೀಯಗೊಳಿಸಿವೆ. ರೀಡರ್ಸ್ ಡೈಜೆಸ್ಟ್ ಮೂಲ ವಿದೇಶಿ ಒಡೆತನದ ಭಾರತೀಯ ಉಪಾಂಗ ಸಂಸ್ಥೆಯಿಂದ ಪ್ರಕಟಿಸಲ್ಪಡುತ್ತಿದ್ದು, ಸ್ಪ್ಯಾನ್ ಸಂಯುಕ್ತ ಸಂಸ್ಥಾನ ಮಾಹಿತಿ ಸೇವಾ ಸಂಸ್ಥೆಯಿಂದ ಪ್ರಕಟಿಸಲ್ಪಡುತ್ತಿದೆ. ಆದರೆ ಒಡೆತನದ ಅಂಶ ಜಾಗತೀಕರಣದ ಒಟ್ಟಾರೆ ಪರಿಕಲ್ಪನೆಯಲ್ಲಿ ಒಂದು ಭಾಗವಷ್ಟೆ. ಈಗ ಕೇಂದ್ರ ಸರ್ಕಾರ ಪತ್ರಿಕಾ ಮಾಧ್ಯಮ ಹಾಗು ಸುದ್ದಿ ಸಂಸ್ಥೆಗಳಲ್ಲಿ ಶೇಕಡ 26ರಷ್ಟು ನೇರ ವಿದೇಶಿ ಬಂಡವಾಳ ಹೂಡಿಕೆಗೆ ಅವಕಾಶ ಮಾಡಿಕೊಟ್ಟಿದೆ.

## 4.2 ವಿದೇಶಿ ಒಡೆತನಕ್ಕೆ ಕಡಿವಾಣ

1991ರಿಂದೀಚೆಗೆ ಆರ್ಥಿಕ ಕ್ಷೇತ್ರದಲ್ಲಿ ಅನೇಕ ಸುಧಾರಣೆಗಳನ್ನು ತರಲಾಗಿದ್ದರೂ ಮತ್ತು ಹಲವಾರು ಉದ್ಯಮಗಳಲ್ಲಿ ವಿದೇಶಿ ನೇರ ಬಂಡವಾಳಕ್ಕೆ ಅನುವು ಮಾಡಿಕೊಟ್ಟಿದ್ದರೂ ಭಾರತೀಯ ಪತ್ರಿಕೆಗಳು ಹಾಗು ನಿಯತಕಾಲಿಕಗಳಲ್ಲಿ ವಿದೇಶಿ ನೇರ ಬಂಡವಾಳಕ್ಕೆ ಅವಕಾಶ ನೀಡದಿರುವುದಕ್ಕೆ ಹಲವಾರು ಕಾರಣಗಳನ್ನು ಮುಂದೊಡ್ಡಲಾಗಿದೆ. ಅವುಗಳೆಂದರೆ:

1. ಪತ್ರಿಕೋದ್ಯಮವನ್ನು ಪ್ರಜಾಪ್ರಭುತ್ವದ ನಾಲ್ಕನೆಯ ಅಂಗವೆಂದು ಪರಿಗಣಿಸಲಾಗಿದೆ. ಭಾರತ ಸ್ವತಂತ್ರ ಹಾಗು ಗಣತಂತ್ರ ರಾಷ್ಟ್ರವಾದ್ದರಿಂದ ಕಾರ್ಯಾಂಗ, ಶಾಸಕಾಂಗ ಹಾಗು ನ್ಯಾಯಾಂಗದಲ್ಲಿ ಯಾವುದೇ ವಿದೇಶಿ ಹಿಡಿತ ಅಥವಾ ಹಸ್ತಕ್ಷೇಪಗಳಿಗೆ ಅವಕಾಶ ನೀಡಲು ಸಾಧ್ಯವಿಲ್ಲ. ಅದೇ ರೀತಿ ಪ್ರಜಾಪ್ರಭುತ್ವದ ಮಹತ್ವದ ಅಂಗವಾದ ಪತ್ರಿಕೋದ್ಯಮಕ್ಕೂ ಸಹ ಅದೇ ಸ್ಥಾನಮಾನಗಳನ್ನು ಕಲ್ಪಿಸಿ ಹಸ್ತಕ್ಷೇಪಗಳಿಂದ ರಕ್ಷಿಸಲಾಗಿದೆ.

2. ಭಾರತೀಯ ಸಂವಿಧಾನ ಪತ್ರಿಕಾ ಸ್ವಾತಂತ್ರ್ಯವನ್ನು ಒಳಗೊಂಡಂತೆ ವಾಕ್ ಸ್ವಾತಂತ್ರ್ಯ ನೀಡುವುದನ್ನು ಕೇವಲ ಭಾರತೀಯ ಪ್ರಜೆಗಳಿಗಷ್ಟೇ ಸೀಮಿತಗೊಳಿಸಿದೆ. ಆದುದರಿಂದ ಪತ್ರಿಕಾ ರಂಗದಲ್ಲಿ ವಿದೇಶಿ ಒಡೆತನ ಈ ಸಂವಿಧಾನಾತ್ಮಕ ಅವಕಾಶದ ವಿರುದ್ಧವಾಗಿರುವುದರಿಂದ ವಿದೇಶಿ ಬಂಡವಾಳಕ್ಕೆ ಅವಕಾಶ ನೀಡಲಾಗಿಲ್ಲ.

3. ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ಪ್ರಜೆಗಳಿಗೆ ಸರಿಯಾದ ಮಾಹಿತಿಯನ್ನೊದಗಿಸಿ ಸರಿದಿಕ್ಕಿನೆಡೆಗೆ ಮುನ್ನಡೆಸುವ ಜವಾಬ್ದಾರಿ ಪತ್ರಿಕೆಗಳ ಮೇಲಿದೆ. ಯಾವುದೇ ರೀತಿಯ ಅಸತ್ಯ ಸಾಮಾಜಿಕ ವ್ಯವಸ್ಥೆಯನ್ನು ಸಂಪೂರ್ಣವಾಗಿ ಹೊಸಕಿ ಹಾಕಬಹುದು. ಆದುದರಿಂದ ಪತ್ರಿಕೋದ್ಯಮ ದೇಶೀಯ ನಿಯಂತ್ರಣದಲ್ಲಿದ್ದು ಭಾರತದ ಸಂವಿಧಾನಕ್ಕೆ ಉತ್ತರದಾಯಿಯಾಗಿರಬೇಕಾದದ್ದು ಅನಿವಾರ್ಯ.

4. ಭಾರತೀಯ ಪತ್ರಿಕೋದ್ಯಮದಲ್ಲಿ ವಿದೇಶಿ ನೇರ ಬಂಡವಾಳ ಹೂಡಿಕೆಗೆ ಅವಕಾಶವಿತ್ತರೆ ಅದು ಭಾರತದ ಹಿತಾಸಕ್ತಿಗಳಿಗೆ ವಿರುದ್ಧವಾದ ಯಾವುದೇ ವ್ಯಕ್ತಿ, ಗುಂಪು, ಸಂಸ್ಥೆ ಅಥವಾ ರಾಷ್ಟ್ರಗಳಿಗೆ ಮಾಧ್ಯಮದ ಮೂಲಕ ದೇಶವಿರೋಧಿ ಚಟುವಟಿಕೆಗಳಲ್ಲಿ ತೊಡಗಲು ಅವಕಾಶ ಮಾಡಿಕೊಡಬಹುದು.

5. ಪ್ರಪಂಚದ ಯಾವುದೇ ಪ್ರಮುಖ ಪ್ರಜಾಪ್ರಭುತ್ವ ವ್ಯವಸ್ಥೆ ತಮ್ಮ ದೇಶದ ಪತ್ರಿಕೆಗಳಲ್ಲಿ ವಿದೇಶಿಯರು ಬಂಡವಾಳ ಹೂಡುವುದಕ್ಕೆ ಅವಕಾಶ ನೀಡುವುದಿಲ್ಲ. ಮಾಧ್ಯಮ ಘಟಾನುಘಟಿ ರೂಪರ್ಟ್ ಮುರ್ಡೋಕ್ ಅಮೇರಿಕದ ಪತ್ರಿಕೆಯೊಂದನ್ನು ಕೊಳ್ಳುವ ಮುನ್ನ ಆ ದೇಶದ ಪೌರತ್ವ ಪಡೆಯುವುದು ಅನಿವಾರ್ಯವಾಯಿತು.

ಆದರೆ ಭಾರತೀಯ ಪತ್ರಿಕೆಗಳ ವಿದೇಶಿ ಒಡೆತನವನ್ನು ಸಮರ್ಥಿಸುವ ಜನರು, ಪತ್ರಿಕೆಗಳು ಇತರ ಯಾವುದೇ ಉತ್ಪನ್ನದಂತಿದ್ದು, ವಿದೇಶಿಯರನ್ನು ಈಗಿರುವ ಕಾನೂನು ಚೌಕಟ್ಟುಗಳಿಂದಲೇ ನಿಯಂತ್ರಿಸಬಹುದು ಎಂದು ವಾದಿಸುತ್ತಾರೆ. ಸಮರ್ಥಕರು ಭಾರತೀಯ ಮಾಧ್ಯಮ ಜಾಗತಿಕ ಮಟ್ಟವನ್ನು ಮುಟ್ಟಲು ಅಗತ್ಯವಿರುವ ಬಂಡವಾಳ, ತಂತ್ರಜ್ಞಾನ ಹಾಗು ಹೊಸತನವನ್ನು ರೂಢಿಸಿಕೊಳ್ಳಲು ಇದರಿಂದ ಸಾಧ್ಯವಾಗುತ್ತದೆ ಎನ್ನುತ್ತಾರೆ. ಆದರೆ ವಿದೇಶಿ ಬಂಡವಾಳ ಹಾಗು ಒಡೆತನವನ್ನು ವಿರೋಧಿಸುವ ಜನರ ವಾದವೆಂದರೆ ಎಲ್ಲ ಭಾರತೀಯ ಒಡೆತನದ ಪತ್ರಿಕೆಗಳು, ಎಲ್ಲ ರಾಜ್ಯಗಳಲ್ಲಿ ಯಶಸ್ವಿಯಾಗಿ ಕಾರ್ಯನಿರ್ವಹಿಸುತ್ತಿದ್ದು, ಭಾರತೀಯ ಉದ್ಯಮಕ್ಕೆ ಅಗತ್ಯ ಬಂಡವಾಳವನ್ನು ಕ್ರೋಢೀಕರಿಸುವ ಸಾಮರ್ಥ್ಯವಿದೆ ಎನ್ನುವುದು. ಅಲ್ಲದೇ ಭಾರತೀಯ ಮಾಧ್ಯಮ ತಂತ್ರಜ್ಞಾನ ಕೂಡ ಅನೇಕ ರಾಷ್ಟ್ರಗಳಿಗಿಂತ ಹಲವು ರೀತಿಯಲ್ಲಿ ಮುಂದಿದೆ ಎನ್ನುವುದನ್ನು ಒತ್ತಿ ಹೇಳುತ್ತಾರೆ.

## 4.2.1 ಲಭ್ಯತೆ

ಭಾರತೀಯ ಪತ್ರಿಕೆಗಳು ಹಾಗು ವಿದೇಶಿ ಪತ್ರಿಕೆಗಳ ನಡುವಿನ ಮಾಹಿತಿ ಹರಿವಿಗೆ ಯಾವುದೇ ರೀತಿಯ ನಿರ್ಬಂಧಗಳಿಲ್ಲ. ಅನೇಕ ಭಾರತೀಯ ದಿನಪತ್ರಿಕೆಗಳು ಅಸೋಸಿಯೇಟೆಡ್ ಪ್ರೆಸ್, ಏಜೆನ್ಸಿ ಫ್ರಾನ್ಸ್ ಪ್ರೆಸ್, ರಾಯ್ಟರ್ಸ್‌ಗಳಂತಹ ವಿದೇಶಿ ಸುದ್ದಿ ಸಂಸ್ಥೆಗಳಿಂದ ದಿನಂಪ್ರತಿ ಸುದ್ದಿಗಳು ಭಾರತದಲ್ಲಾಗುವ ಬೆಳವಣಿಗೆಗಳನ್ನು ವರದಿ ಮಾಡುತ್ತವೆ. ಭಾರತೀಯ ಪತ್ರಿಕೆಗಳಿಗೆ ದೇಶೀಯ ಸುದ್ದಿಸಂಸ್ಥೆಗಳು ವರದಿ ಮಾಡುವ ಅಥವಾ ವಿದೇಶಿ ಸಂಸ್ಥೆಗಳು ವರದಿ ಮಾಡುವ ಸುದ್ದಿ ವಿವರಗಳನ್ನು ಆಯ್ಕೆ ಮಾಡಿಕೊಳ್ಳುವ ಸ್ವಾತಂತ್ರ್ಯವಿದೆ.

ಅಲ್ಲದೆ, ಅನೇಕ ಭಾರತೀಯ ದಿನಪತ್ರಿಕೆಗಳು - ನ್ಯೂಯಾರ್ಕ್ ಟೈಂಸ್, ವಾಷಿಂಗ್ಟನ್ ಪೋಸ್ಟ್, ಲಾಸ್ ಏಂಜಲೀಸ್ ಟೈಂಸ್, ಬಿಸಿನೆಸ್ ವೀಕ್(ಅಮೇರಿಕ), ಟೈಂಸ್, ಗಾರ್ಡಿಯನ್, ಟೆಲಿಗ್ರಾಫ್ (ಯು.ಕೆ.) ಮತ್ತು ಲೇ ಮೊಂಡ್(ಫ್ರಾನ್ಸ್)ನಂತಹ ಮುಂಚೂಣಿಯಲ್ಲಿರುವ ವಿದೇಶಿ ಪತ್ರಿಕೆಗಳ ಸಿಂಡಿಕೇಟೆಡ್ ಸೇವೆಗಳನ್ನು ಪಡೆಯುತ್ತವೆ.

ಅದೇ ಸಮಯದಲ್ಲಿ ವಿದೇಶಿ ಪತ್ರಕರ್ತರು ಯಾವುದೇ ನಿರ್ಬಂಧಗಳಿಲ್ಲದೆ ಭಾರತಕ್ಕೆ ಬಂದು ಕಾರ್ಯನಿರ್ವಹಿಸುವ ಎಲ್ಲಾ ಅವಕಾಶಗಳನ್ನು ಒದಗಿಸಲಾಗಿದೆ. ನೂರಕ್ಕೆ ಹೆಚ್ಚು ವಿದೇಶಿ ಪ್ರಕಟಣೆಗಳು ನವದೆಹಲಿಯಲ್ಲಿ ಸುದ್ದಿಕೇಂದ್ರಗಳನ್ನು ಹೊಂದಿವೆ. ಭಾರತೀಯ ಪತ್ರಿಕೆಗಳಿಗೆ ಇತರ ಅನೇಕ ಸುದ್ದಿ / ಮೂಲಗಳಿಂದ ತಡೆರಹಿತ ಮಾಹಿತಿ ಹರಿವು ಸಾಧ್ಯವಾಗಿದೆ. ವಿದೇಶಿ ಸರ್ಕಾರಗಳು, ಕಂಪನಿಗಳು, ಸರ್ಕಾರೇತರ ಸಂಸ್ಥೆಗಳು ತಮ್ಮ ಬಗ್ಗೆ ಅಥವಾ ಎರಡೂ ದೇಶದ ಜನತೆಗೆ ಸಂಬಂಧಪಟ್ಟ ಬಹುಸಂಖ್ಯೆಯ ವಿಷಯಗಳನ್ನು ಕುರಿತು ಯಾವುದೇ ನಿರ್ಬಂಧವಿಲ್ಲದೆ ಮಾಹಿತಿ ರವಾನಿಸುತ್ತವೆ. ಭಾರತೀಯ ಪತ್ರಕರ್ತರೂ ಕೂಡ ಯಾವುದೇ ನಿರ್ಬಂಧಗಳಿಲ್ಲದೆ ಪ್ರಪಂಚದ ಯಾವ ದೇಶಕ್ಕಾದರೂ ಹೋಗಿ ಕಾರ್ಯನಿರ್ವಹಿಸಲು ಅವಕಾಶವಿದೆ. ಆದರೆ, ಪತ್ರಕರ್ತರ ಈ ಕಾರ್ಯ ಸಂಬಂಧಿ ವಿದೇಶ ಪ್ರವಾಸ ಆಯಾದೇಶದ ವೀಸಾ ಲಭ್ಯತೆಯನ್ನು ಬಹುಮಟ್ಟಿಗೆ ಆಧರಿಸಿದೆ.

ಇನ್ನೊಂದು ಮಹತ್ವ ಅಂಶವೆಂದರೆ, ಭಾರತೀಯ ಪತ್ರಿಕೆಗಳು ಹಾಗು ನಿಯತಕಾಲಿಕಗಳು ತಮ್ಮ ಪ್ರಕಟಣೆಯನ್ನು ಗುಣಾತ್ಮಕವಾಗಿ ಹಾಗು ಪರಿಮಾಣಾತ್ಮಕವಾಗಿ ವೃದ್ಧಿಸಿಕೊಳ್ಳಲು ವಿದೇಶಿ ಪತ್ರಕರ್ತರನ್ನು ಹಾಗು ವಿದೇಶಿ ವೃತ್ತಿಪರರನ್ನು ಸಲಹೆಗಾರರನ್ನಾಗಿ ನೇಮಿಸಿಕೊಳ್ಳಲು ಯಾವುದೇ ನಿರ್ಬಂಧಗಳಿಲ್ಲ. ಭಾರತೀಯ ಪತ್ರಿಕೆಗಳು ತಮ್ಮ ರಚನೆ, ಟೈಪೋಗ್ರಫಿಯ ಶೈಲಿ ಹಾಗು ದೃಶ್ಯ ಸಮರ್ಪಣೆ ವೃದ್ಧಿಸಿಕೊಳ್ಳಲು ನಿಯಮಿತವಾಗಿ ವಿದೇಶಿ ವೃತ್ತಿನಿರತರನ್ನು ನೇಮಿಸಿಕೊಳ್ಳುವ ಪ್ರಕ್ರಿಯ ಬಹುಹಿಂದಿನಿಂದಲೂ ನಡೆದು ಬರುತ್ತಿದೆ. ಭಾರತೀಯ ರಿಸರ್ವ್ ಬ್ಯಾಂಕ್ ಕೂಡ ಇಂತಹ ವೃತ್ತಿಪರರಿಗೆ ಅವರು ಬಯಸುವ ವಿದೇಶಿ ಹಣದ ರೂಪದಲ್ಲಿಯೇ ಪಾವತಿಸುವ ಅವಕಾಶ ಕಲ್ಪಿಸಿದೆ.

ಹಾಗೆಯೇ ಅದೇ ರೀತಿ ಪತ್ರಿಕೆಗಳು ತಮ್ಮ ಮಾರಾಟ, ಪ್ರಸರಣೆ ಹಾಗು ಮುದ್ರಣವನ್ನು ಉತ್ತಮಪಡಿಸಿಕೊಳ್ಳಲು ವಿದೇಶಿ ಸಲಹೆಗಾರರ ನೆರವನ್ನೂ ಸಹ ಪಡೆಯಬಹುದಾಗಿದೆ. ಬಹುತೇಕ ಪಾಶ್ಚಾತ್ಯ ದೇಶಗಳ ವಿದೇಶಿ ವಿನಿಮಯ ದರ ತೀರಾ ಹೆಚ್ಚಿರುವುದರಿಂದ ಬಹಳಷ್ಟು ಪತ್ರಿಕೆಗಳು ದುಬಾರಿ ಹಣ ತೆತ್ತು ವಿದೇಶಿ ಸಲಹೆಗಾರರನ್ನು ನೇಮಿಸಿಕೊಳ್ಳುವ ಬದಲು ಸ್ಥಳೀಯ ವಿನ್ಯಾಸಕಾರರು ಹಾಗು ಸಲಹೆಗಾರರ ಸೇವೆಗಳನ್ನು ಪಡೆದುಗೊಳ್ಳುತ್ತಿದ್ದಾರೆ.

ಈ ಎಲ್ಲಾ ಅಂಶಗಳಿಗೂ ಮಿಗಿಲಾಗಿ ಭಾರತೀಯ ಕಾನೂನು, ವಿದೇಶಿ ದಿನಪತ್ರಿಕೆಗಳು ಹಾಗು ನಿಯತಕಾಲಿಕಗಳನ್ನು ದೇಶದ ಭದ್ರತೆ, ಸುವ್ಯವಸ್ಥೆ ಹಾಗು ಅಶ್ಲೀಲತೆಗಳಿಗೆ ಸಂಬಂಧಪಟ್ಟಂತೆ ಕೆಲವೊಂದು ನಿರ್ಬಂಧಗಳನ್ನು ಹೊರತುಪಡಿಸಿ ಮುಕ್ತವಾಗಿ ಆಮದು ಮಾಡಿಕೊಳ್ಳುವ ಅವಕಾಶವನ್ನು ಕಲ್ಪಿಸುತ್ತದೆ.

ಈ ರೀತಿ ಆಮದು ಮಾಡಿಕೊಳ್ಳಲಾಗುವ ಯಾವುದೇ ವಿದೇಶಿ ಪತ್ರಿಕೆ ಹಾಗು ನಿಯತಕಾಲಿಕಗಳ ಮೇಲೆ ಸರ್ಕಾರ ಕಸ್ಟಂಸ್ ಸುಂಕ ವಿಧಿಸುವುದಿಲ್ಲ, ಇವುಗಳನ್ನು ಯಾವುದೇ ರೀತಿಯ ಅಡೆತಡೆಗಳಿಲ್ಲದೆ ಮಾರಾಟ ಮಾಡಬಹುದಾಗಿದ್ದು, ಮಾಹಿತಿ ಪಸರಿಸಲು ಸಾಧ್ಯವಾಗುತ್ತದೆ.

ಆದರೆ ವಿದೇಶಿ ಪತ್ರಿಕೆಗಳು ಭಾರತದಲ್ಲಿ ತಮ್ಮ ಪ್ರಸಾರವನ್ನು ವೃದ್ಧಿಸಿಕೊಳ್ಳಲು ಸಾಧ್ಯವಾಗದಿರುವುದಕ್ಕೆ ಅವುಗಳ ಭಾಷೆ ಹಾಗು ಹೆಚ್ಚು ಬೆಲೆ ಮುಖ್ಯ ಕಾರಣಗಳು. ಹಾಗೆಯೇ, ಭಾರತೀಯ ಓದುಗರು ವಿದೇಶಿ ಸುದ್ದಿಗಳ ಹೇರಿಕೆಗಿಂತ ಹೆಚ್ಚು ಹೆಚ್ಚು ಸ್ಥಳೀಯ ಸುದ್ದಿಗಳನ್ನು ಓದಲು ಬಯಸುತ್ತಾರೆ. ಈ ವಿದೇಶಿ ಪತ್ರಿಕೆಗಳು ಭಾರತೀಯ ಅಗತ್ಯತೆಯನ್ನು ಪೂರೈಸುವಲ್ಲಿ ಸೋತಿವೆ. ಹೊರ ರಾಷ್ಟ್ರಗಳಲ್ಲಿ ಮುದ್ರಣಗೊಂಡು ಇಲ್ಲಿಗೆ ತಲುಪಲು ಸಾಕಷ್ಟು ಸಮಯ ಹಿಡಿಯುವುದರಿಂದ ತಕ್ಷಣದ ಲಭ್ಯತೆಯೂ ಸಾಧ್ಯವಾಗುವುದಿಲ್ಲ. ಬೆಲೆ ಹೋಲಿಕೆಯಲ್ಲಿ ಭಾರತೀಯ ಪತ್ರಿಕೆಗಳಿಗಿಂತ ಅವು ದುಬಾರಿಯಾಗಿದ್ದು ಸರಾಸರಿ ಭಾರತೀಯ ಓದುಗರ ಕೈಗೆಟುಕುವುದು ಅಸಾಧ್ಯದ ಮಾತು.

## 4.2.2 ಧನಾತ್ಮಕ ಪರಿಣಾಮ

ಓದುಗರು, ಶ್ರೋತೃಗಳು ಹಾಗು ವೀಕ್ಷಕರ ಜಾಗತಿಕ ದೃಷ್ಟಿಕೋನವನ್ನು ವಿಸ್ತರಿಸಿಕೊಳ್ಳಲು ಜಾಗತಿಕ ಸುದ್ದಿ ಹಾಗು ಅನಿಸಿಕೆಗಳು ಅನುವು ಮಾಡುತ್ತದೆ. ಜಾಗತಿಕ ಮಟ್ಟದಲ್ಲಿ ವ್ಯಕ್ತಿಗಳ ಹಾಗು ಸಂಸ್ಥೆಗಳ ಕುರಿತಾದ ಧನಾತ್ಮಕ ವರದಿಗಳು ಹಾಗು ಮಾಹಿತಿ ಪಸರಿಸುವಿಕೆ ದೇಶದಲ್ಲಿರುವ ಬಹುಪಾಲು ಜನತೆಗೆ ಅನುಕೂಲವಾಗುವಂತಹ ಕಾರ್ಯಚಟುವಟಿಕೆಗಳನ್ನು ಪ್ರೋತ್ಸಾಹಿಸಲು ಅತ್ಯಗತ್ಯ. ಹಾಗೆಯೇ, ಜಾಗತಿಕ ಸುದ್ದಿ ಭಾರತೀಯ ಧ್ಯೇಯ-ಧೋರಣೆ ನಿರೂಪಕರು ಹಾಗು ಅಧಿಕಾರದ ಚುಕ್ಕಾಣಿ ಹಿಡಿದ ಜನರು ಪ್ರಪಂಚದ ಇತರ ರಾಷ್ಟ್ರಗಳ ಆಗು-ಹೋಗುಗಳನ್ನು ತಿಳಿಯಲು, ಅಲ್ಲಿನ ಬೆಳವಣಿಗೆ, ವಿದ್ಯಮಾನಗಳು, ಜೀವನಶೈಲಿಗಳನ್ನು ಅರಿಯಲು ಅವಕಾಶ ನೀಡುವುದರಿಂದ, ಇಲ್ಲಿನ ಪ್ರಸ್ತುತ ವಿಷಯಗಳಿಗೆ ಅವುಗಳನ್ನು ತಾಳೆ ಹಾಕಲು, ಸರಿಯಾದ ತೀರ್ಮಾನಗಳನ್ನು ಕೈಗೊಳ್ಳಲು ಸಹಾಯಕವಾಗುತ್ತದೆ. ಅಮೇರಿಕ ಸಂಯುಕ್ತ ಸಂಸ್ಥಾನದ ಕಳೆದ ಅಧ್ಯಕ್ಷೀಯ ಚುನಾವಣೆಯ ಸಮಯದಲ್ಲಿ ಅಲ್ಲಿ ಚರ್ಚಿಸಲಾದ ಅನೇಕ ವಿಚಾರಗಳ ಬಗ್ಗೆ ಭಾರತೀಯ ಮಾಧ್ಯಮ ಸವಿವರವಾಗಿ ವರದಿ ಮಾಡಿತು. ಈಗ ಇರಾಕ್‌ಗೆ ಸಂಬಂಧಿಸಿದ ಬೆಳವಣಿಗೆಗಳು, ವಿದ್ಯಮಾನಗಳು, ಯುದ್ಧ ಕೈದಿಗಳನ್ನು ಅಮೇರಿಕ ನಡೆಸಿಕೊಂಡ ರೀತಿಯನ್ನು ಮಾಧ್ಯಮಗಳ ಮೂಲಕ ಅರಿತ ಭಾರತೀಯರು, ಭಾರತೀಯ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಅಂತಹ ಒಂದು ಬೆಳವಣಿಗೆಯಾದರೆ ನಿಭಾಯಿಸುವ ಬಗ್ಗೆ ಸ್ಪಷ್ಟ ಅನಿಸಿಕೆಗಳನ್ನು ವ್ಯಕ್ತಪಡಿಸುವುದು ಸಾಮಾನ್ಯವಾಗಿತ್ತು, ಭಾರತದ ಮತ್ತು ಅಮೇರಿಕದ ರಾಜಕೀಯ ವ್ಯವಸ್ಥೆಗಳನ್ನು ಹೋಲಿಸಿ, ವಿಶ್ಲೇಷಿಸುವುದಕ್ಕೆ ಅನುವಾಯಿತು. ಇಂತಹ ಎಲ್ಲ ಅವಕಾಶಗಳನ್ನು ಒದಗಿಸಲು ಜಾಗತಿಕ ಸುದ್ದಿ ವಿನಿಮಯ ಪ್ರಕ್ರಿಯೆಯಿಂದ ಮಾತ್ರ ಸಾಧ್ಯ.

ಮಾಹಿತಿ ವಿನಿಮಯದ ಜಾಗತೀಕರಣ ಭಾರತದ ಸ್ಥಿತಿಗತಿಗಳನ್ನು ಉತ್ತಮಪಡಿಸಲು ಅನುವಾಗುವಂತೆ ಹೊಸತನವನ್ನು ತರಲು, ಅತ್ಯಾಧುನಿಕವಾದ ಬೆಳವಣಿಗೆಗಳನ್ನು ಅಳವಡಿಸಿಕೊಳ್ಳಲು ಸಾಧ್ಯಮಾಡುತ್ತದೆ. ಆರೋಗ್ಯ, ಶಿಕ್ಷಣ, ವಿಜ್ಞಾನ ಮತ್ತು ತಂತ್ರಜ್ಞಾನ, ನಗರಾಭಿವೃದ್ಧಿ, ಕೃಷಿ ಮುಂತಾದ ಮಹತ್ವದ ಕ್ಷೇತ್ರಗಳಲ್ಲಿನ ಮಾಹಿತಿ ಪ್ರಸಕ್ತ ಪರಿಸ್ಥಿತಿಯಲ್ಲಿ ದೇಶಕ್ಕೆ ಅಗತ್ಯವಾಗಿದೆ. ಮಾಹಿತಿ ವಿನಿಮಯದಿಂದಾಗಿ ಹಲವಾರು ನೇರ ಪ್ರಯೋಜನಗಳನ್ನು ನಾವು ಕಾಣಬಹುದು.

ಉತ್ತರ ಕರ್ನಾಟಕದಲ್ಲಿ ಎಣ್ಣೆಕಾಳು ಬೆಳೆಗಳ ಅಭಿವೃದ್ಧಿ, ಗೃಹೋಪಯೋಗಿ ಉಪಕರಣಗಳ ತಯಾರಿಕೆ, ಲಭ್ಯತೆ, ಉಪಯೋಗ, ಗ್ರಾಹಕ ಹಕ್ಕು ಚಳುವಳಿ, ಪರಿಸರ ನಾಶದ ವಿರುದ್ಧದ ಹೋರಾಟ, ಮಾನವಹಕ್ಕುಗಳ ಬಗೆಗಿನ ಚರ್ಚೆ, ಹೋರಾಟದಂತಹ ಎಲ್ಲವೂ ಜಾಗತಿಕ ಮಾಹಿತಿ ವಿನಿಮಯದ ನೇರ ಪ್ರಯೋಜನಗಳೆಂದು ಹೇಳಬಹುದು. ಸುದ್ದಿ ಹಾಗು ಮಾಹಿತಿಯ ಜಾಗತೀಕರಣವೆಂದರೆ ಕೇವಲ ಹೊರಗಿನಿಂದ ಸುದ್ದಿ ಹಾಗು ಮಾಹಿತಿಗಳನ್ನು ಪಡೆಯುವುದು ಎಂದರ್ಥವಲ್ಲ. ಈ ಪ್ರಕ್ರಿಯೆಯಲ್ಲಿ ಸ್ಥಳೀಯ ಅನ್ವೇಷಣೆ, ವ್ಯವಸ್ಥೆ, ಸಂಪ್ರದಾಯಗಳಂತಹ ವಿಚಾರಗಳು ದೇಶವಿದೇಶಗಳ ಪತ್ರಿಕೆಗಳು ಹಾಗು ನಿಯತಕಾಲಿಕಗಳಲ್ಲಿ ಸವಿವರವಾಗಿ ಬಿಂಬಿಸಲ್ಪಡುತ್ತವೆ. ಇಂತಹ ಮಾಹಿತಿ ವಿನಿಮಯದ ಫಲವಾಗಿ ಭಾರತದಿಂದ ಕರಕುಶಲ ಉತ್ಪಾದನೆ, ಗಣಕಯಂತ್ರ ತಂತ್ರಾಂಶ, ಜವಳಿ, ಆಯುರ್ವೇದ ಔಷಧಿಗಳು ಮುಂತಾದವುಗಳ ಹೊರದೇಶಗಳಲ್ಲಿನ ವ್ಯಾಪಾರಕ್ಕೆ ಭಾರಿ ಮಾರುಕಟ್ಟೆ ದೊರೆತು ಅಮೂಲ್ಯ ವಿದೇಶಿ ವಿನಿಮಯವನ್ನು ಗಳಿಸಲು ಅನುವುವಾಗಿದೆ. ಅಲ್ಲದೆ ಅಪಾರ ಸಂಖ್ಯೆಯಲ್ಲಿ ಪ್ರವಾಸಿಗರೂ ಹರಿದು ಬರುತ್ತಿದ್ದಾರೆ.

ಮಾಹಿತಿಯ ಜಾಗತೀಕರಣದ ಪರಿಣಾಮವಾಗಿಯೇ, ಇಂದು ಅಪಾರ ಸಂಖ್ಯೆಯಲ್ಲಿ ಭಾರತೀಯರು ವಿಶ್ವಮಟ್ಟದಲ್ಲಿ ಅವಕಾಶಗಳನ್ನು ಗಳಿಸಿಕೊಳ್ಳುತ್ತಿದ್ದು, ಅಮೇರಿಕ ಸಂಯುಕ್ತ ಸಂಸ್ಥಾನ, ಯೂರೋಪ್, ಮಧ್ಯಪೂರ್ವ ರಾಷ್ಟ್ರಗಳು ಹಾಗು ಪೂರ್ವ ಏಷ್ಯಾ ರಾಷ್ಟ್ರಗಳಲ್ಲಿ ಅಪಾರ ಸಂಖ್ಯೆಯಲ್ಲಿ ನೆಲೆಸಲು ವೃತ್ತಿ ಅವಕಾಶಗಳನ್ನು ಗಿಟ್ಟಿಸಿಕೊಳ್ಳಲು ಸಾಧ್ಯವಾಗಿದೆ. ಹಾಗೆಯೇ, ಭಾರತೀಯರಿಗೆ ದೇಶ ವಿದೇಶಗಳನ್ನು ನೋಡುವ ಕುತೂಹಲವೂ ಇದರಿಂದ ಹೆಚ್ಚಾಗಿದ್ದು, ಹೆಚ್ಚು ಹೆಚ್ಚು ಜಾಗಗಳನ್ನು ನೋಡಲು ಅಪಾರ ಸಂಖ್ಯೆಯಲ್ಲಿ ಹೊರಹೋಗುತ್ತಿದ್ದಾರೆ.

## 4.2.3 ಋಣಾತ್ಮಕ ಪರಿಣಾಮ

ಜಾಗತೀಕರಣದ ಎಲ್ಲಾ ಬೆಳವಣಿಗೆಗಳು ಧನಾತ್ಮಕವಾಗಿಲ್ಲ. ಕೆಲವೊಂದು ನಿರ್ದಿಷ್ಟ ಕ್ಷೇತ್ರಗಳಲ್ಲಿ ಅದರ ಗಂಭೀರ ಸ್ವರೂಪದ ಋಣಾತ್ಮಕ ಪರಿಣಾಮಗಳನ್ನು ಗುರುತಿಸಲಾಗಿದೆ. ಅಂತಹ ಒಂದು ಚಿಂತನಾರ್ಹ ಕ್ಷೇತ್ರವೆಂದರೆ ಜೀವನದಲ್ಲಿನ ಮೌಲ್ಯಗಳ ಅಳವಡಿಕೆಯ ಪ್ರಕ್ರಿಯೆ. ದೇಶೀಯ ಮೌಲ್ಯಗಳು ಜಾಗತೀಕರಣದ ಬದಲಾದ ಪರಿಸ್ಥಿತಿಯಲ್ಲಿ ಕಡೆಗಣಿಸಲ್ಪಟ್ಟು, ಪಾಶ್ಚಾತ್ಯ ಮೌಲ್ಯಗಳು, ಕಲ್ಪನೆಗಳಿಗೆ ಜನರು ಬಲಿಬೀಳುತ್ತಿದ್ದಾರೆ. ಗಂಭೀರ ಚಿಂತನೆ ನಡೆಸಿರುವ ಅನೇಕರು ಹೇಳುವಂತೆ ಕೌಟುಂಬಿಕ ಸಂಬಂಧಗಳ ಮೇಲೆ ಇದು ಈಗಾಗಲೇ ತನ್ನ ಕರಾಳತೆಯನ್ನು ತೋರಿಸುವ ಬಗ್ಗೆ ಎಚ್ಚರಿಕೆ ನೀಡಿದ್ದಾರೆ. ಹಿಡಿತವಿಲ್ಲದ ಉಪಭೋಗತ್ವ ದೇಶದ ಸಂಪನ್ಮೂಲಗಳನ್ನು ಹಾಳುಗೆಡವುತ್ತಿದ್ದು, ಜನರು ಹಾಗು ಸರ್ಕಾರ ಈ ಬಗ್ಗೆ ಯೋಚಿಸಲೂ ಮನಸ್ಸು ಮಾಡದಿರುವುದು ದುರದೃಷ್ಟಕರ.

ಬೃಹತ್ ಬಹುರಾಷ್ಟ್ರೀಯ ಕಾರ್ಪೊರೇಷನ್‌ಗಳು ತಮ್ಮ ನಿರಂತರ ಲಾಭಗಳಿಕೆ ಹಾಗು ಮಾರುಕಟ್ಟೆ ಹಿಡಿತವನ್ನು ಸಾಧಿಸಲು, ಜನಸಮೂಹದ ಜೀವನಶೈಲಿಯಲ್ಲಿ ಬದಲಾವಣೆ ತರುವುದು ಅವಶ್ಯವೆಂದು ಮನಗಂಡು, ಭಾರತೀಯ ಮಾಧ್ಯಮದಲ್ಲಿನ ಅವಕಾಶಗಳನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳುತ್ತಿವೆ. ಭಾರಿ ಪ್ರಮಾಣದಲ್ಲಿ ಜಾಹೀರಾತು ಆಯವ್ಯಯವನ್ನು ಯೋಜಿಸುವ ಇಂತಹ ಕಂಪನಿಗಳು, ಸಿನಿಮಾ ಹಾಗು ಕ್ರೀಡಾ ತಾರೆಗಳನ್ನು ತಮ್ಮ ಸರಕು ಸಾಮಗ್ರಿಗಳನ್ನು ಶಿಫಾರಸ್ಸು ಮಾಡಲು ನಿಯೋಜಿಸಿಕೊಳ್ಳುತ್ತಾರೆ. ಅಲ್ಲದೆ, ಆರ್ಥಿಕವಾಗಿ ಬಲಾಢ್ಯವಾಗಿರುವ ಕಂಪನಿಗಳು ಸ್ಥಳೀಯ ಕಂಪನಿಗಳ ಸ್ಪರ್ಧಾತ್ಮಕತೆಗೆ ಕೊಡಲಿ ಪೆಟ್ಟು ನೀಡಿವೆಯೆಂತಲೂ ಆಪಾದಿಸಲಾಗುತ್ತದೆ. ಈ ಕಂಪನಿಗಳೂ ಇನ್ನು ಮುಂದೆ ಹೋಗಿ ಎದುರಾಳಿಯನ್ನು ಇಡೀಯಾಗಿ ಕೊಂಡುಕೊಳ್ಳುವ ಪ್ರಕ್ರಿಯೆಗಳನ್ನು ಸಾಕಷ್ಟು ಸಂಖ್ಯೆಯಲ್ಲಿ ಕಾಣಬಹುದಾಗಿದೆ. ಇಂತಹ ಘಟನೆಗಳನ್ನು ಸಮೂಹ ಬಳಕೆಯ ಸರಕು ಸೇವೆಗಳ ಸಂಸ್ಥೆಗಳಲ್ಲಿ ಹೆಚ್ಚಾಗಿ ಕಾಣಬಹುದು.

ಜಾಗತೀಕರಣ ಭಾರತೀಯ ಕೃಷಿ ಕ್ಷೇತ್ರದಲ್ಲಿ ಅಗಾಧ ಪರಿಣಾಮ ಬೀರಿದೆ. WTO ಒಡಂಬಡಿಕೆಯನುಸಾರ ತನ್ನ ಕೃಷಿ ಮಾರುಕಟ್ಟೆಯನ್ನು ಅಂತರರಾಷ್ಟ್ರೀಯ ವ್ಯಾಪಾರ ವಹಿವಾಟಿಕೆ ತೆರೆದ ಭಾರತದ ನಿರ್ಧಾರದಿಂದಾಗಿ, ಅತ್ಯಧಿಕ ಪ್ರಮಾಣದಲ್ಲಿ ಆಮದು ಮಾಡಿಕೊಳ್ಳುವ ಚಟುವಟಿಕೆಗಳು ಸಾಗುತ್ತಿದ್ದು, ಕೃಷಿ ಆರ್ಥಿಕತೆ ಧೂಳಿಪಟವಾಗಿದೆ. ಸಮಾಜವಾದಿ ಮೌಲ್ಯಗಳ, ಧೋರಣೆಗಳಿಂದ ತೆಗೆದುಕೊಳ್ಳುತ್ತಿದ್ದ ಅನೇಕ ತೀರ್ಮಾನಗಳಿಂದಾಗಿ ಸ್ಪರ್ಧಾತ್ಮಕತೆಗೆ ತೆರೆದುಕೊಳ್ಳದಿದ್ದ ಭಾರತೀಯ ರೈತರನ್ನು ಏಕಾಏಕಿ ಜಾಗತೀಕರಣದ ಆಘಾತಕ್ಕೊಳಸಿದ್ದು ದುರಂತವೇ ಸರಿ. ಸಾಂಪ್ರದಾಯಿಕ ರೂಪರೇಷೆಗಳು, ತೀರ್ಮಾನಗಳನ್ನು ಆಧರಿಸಿದ್ದ ಭಾರತೀಯ ಕೃಷಿ ಇದಕ್ಕಿದ್ದಂತೆ ವಿದೇಶಿ ಕೃಷಿ ಉತ್ಪನ್ನಗಳು, ಬಿತ್ತನೆ ಬೀಜ, ಕೀಟನಾಶಕಗಳ ಭರಾಟೆಯಲ್ಲಿ ದೇಶೀಯ ರೈತರು ಕೈಚೆಲ್ಲಿ ಕುಳಿತಿರುವುದನ್ನು ಕಾಣಬಹುದು. ದಿವಾಳಿಯೆದ್ದ ಜೀವನ, ಆಶಾಭಾವನೆಯನ್ನು ಹೊಂದಿರದ ದಿನಗಳನ್ನು ಎದುರಿಸಲಾರದೆ ಅನೇಕರು ಆತ್ಮಹತ್ಯೆಗೆ ಶರಣಾಗುತ್ತಿದ್ದಾರೆ.

ಅದೇ ರೀತಿ ಭಾರತೀಯ ಉದ್ಯಮ ಕೂಡ ವಿದೇಶದಿಂದ ಹರಿದು ಬರುವ ಅಲ್ಪ ವೆಚ್ಚದ ಸರುಕು - ಸಾಮಗ್ರಿಗಳಿಂದಾಗಿ ಕೆಂಗೆಟ್ಟಿದೆ. ಸ್ಥಳೀಯ ಉತ್ಪಾದನೆ ವೆಚ್ಚದಾಯಕ ಎನ್ನುವ ಪರಿಸ್ಥಿತಿ ನಿರ್ಮಾಣವಾಗಿದೆ. ಗೃಹೋಪಯೋಗಿ ವಸ್ತುಗಳ ಹಾಗು ನಿತ್ಯಬಳಕೆಯ ಸರಕುಗಳಂತೂ ಸ್ಥಳೀಯ ಉತ್ಪಾದನೆ / ತಯಾರಿಕೆ ಅಸಾಧ್ಯವೆನಿಸುವಷ್ಟು ಪರಿಸ್ಥಿತಿ ಹದಗೆಟ್ಟಿದೆ. ಅತ್ಯಲ್ಪ ಲಾಭಕ್ಕೆ ಸಂತೃಪ್ತರಾಗುವ ಈ ವಿದೇಶಿ ಉತ್ಪಾದಕರು, ಹಿಂದೆಂದೂ ಕಾಣದ ಪ್ರಮಾಣದಲ್ಲಿ ಮಾರುಕಟ್ಟೆಗೆ ಲಗ್ಗೆಯಿಟ್ಟಿದ್ದಾರೆ. ಚೈನಾ ಪದಾರ್ಥಗಳ ಮೇಲುಗೈ, ಕೊಳ್ಳುಗರಿಗೆ ಲಾಭದಾಯಕವಾದರೂ ಒಟ್ಟಾರೆ ಆರ್ಥಿಕತೆಗೆ ಮಾರಕ ಎಂಬುದು ಬಹುತೇಕರ ಅಭಿಪ್ರಾಯ.

ಉದಾಹರಣೆಗೆ, ಚೈನಾದಿಂದ ಭಾರತಕ್ಕೆ ಬಂದು ಬೀಳುವ ಈ ವಸ್ತುಗಳ ಪಟ್ಟಿಯನ್ನು ಗಮನಿಸಿ. ಕೇವಲ ತೊಂಬತ್ತು ರೂಪಾಯಿಗಳಿಗೆ ಎರಡೂವರೆ ಕೆ.ಜಿ ಚೈನಾ ಸಿಲ್ಕ್ ಸೀರೆ, ದೇವರ ಪೂಜೆಗೆ ಪ್ಲಾಸ್ಟಿಕ್ / ಪೇಪರ್ ದೀವಿಗೆಗಳು, ಮುನ್ನೂರು ರೂಪಾಯಿಗೆ 10 ಅಡಿ ಎತ್ತರದ ಕಾಗದದ ಟೊಳ್ಳು ಗಣಪತಿ, ಹದಿನೈದು ಸಾವಿರಕ್ಕೆ ಜೋಡಿಸಲು ಸಾಧ್ಯವಾದಂತಹ ಹೊಸ ಬೈಕ್ ಕಿಟ್, ಇಪ್ಪತ್ತು ರೂಪಾಯಿಯ ಮಕ್ಕಳ ಉಡುಗೆ ತೊಡುಗೆ, ಐದು ರೂಪಾಯಿಯ ಚಪ್ಪಲಿ, ಹತ್ತು ರೂಪಾಯಿಯ ಕೃತಕ ಆಭರಣಗಳು, 20 ರೂಪಾಯಿ ರೇಡಿಯೋ, ಇತ್ಯಾದಿ. ಬದಲಾದ ಜಾಗತೀಕರಣದ ಪರಿಸ್ಥಿತಿ ಅನೇಕ ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ತನ್ನ ಕರಾಳ ಛಾಯೆಯನ್ನು ವಿಸ್ತರಿಸಿದ್ದು, ಪ್ರತಿ ನೂರು ರೂಪಾಯಿ ಬಂಡವಾಳಕ್ಕೆ ಕೇವಲ 2 ಪೈಸೆಯ ಲಾಭಗಳಿಕೆ ಸಿಕ್ಕರೆ ಸಾಕು ಎನ್ನುವ ಪರಿಸ್ಥಿತಿಯನ್ನು ನಿರ್ಮಿಸಿವೆ. ಜಾಗತೀಕರಣ ಪ್ರಕ್ರಿಯೆಯಲ್ಲಿ ಮುಂದೆ ಸಾಗುವ ಭಾರತದ ನಿರ್ಧಾರ ಸ್ಥಳೀಯ ಆರ್ಥಿಕತೆ ಹಾಗು ಉದ್ಯಮದ ಬಗ್ಗೆಯೂ ಕಾಳಜಿ ವಹಿಸುವುದು ಅನಿವಾರ್ಯ.

ಜಾಗತೀಕರಣದ ಪರ ವಿರೋಧಗಳ ಬಗ್ಗೆ ತೀವ್ರವಾದ ಚರ್ಚೆ ಹಾಗು ವಾಗ್ಯುದ್ಧಗಳನ್ನು ವರದಿ ಮಾಡುವ ಮಾಧ್ಯಮಗಳೂ ಕೂಡ ಹೆಚ್ಚಿದ ಉಪಭೋಗತೆಗೆ ತೆರೆದುಕೊಂಡಿವೆ. ತ್ವರಿತ ಗತಿಯಲ್ಲಿ ಬದಲಾಗುವ ಜನರ ಆಸೆ, ಅಭಿರುಚಿ, ಆಸಕ್ತಿಗಳಿಗೆ ಪತ್ರಿಕೆಗಳು ಹಾಗು ನಿಯತಕಾಲಿಕಗಳು ತಕ್ಷಣ ಪ್ರತಿಬಿಂಬಿಸುವ ಅಗತ್ಯತೆ ನಿರ್ಮಾಣವಾಗಿದೆ. ದೆಹಲಿ ಹಾಗು ಮುಂಬೈಗಳಂತಹ ಮಹಾನಗರಗಳಲ್ಲಿ ದಿನಪತ್ರಿಕೆಗಳು ಪಾಶ್ಚಾತ್ಯ ಜೀವನ ಶೈಲಿಯೆಡೆಗೆ ವಾಲಿಕೊಂಡ ಒಂದು ಬೃಹತ್ ಮಾಧ್ಯಮ ವರ್ಗದ ಸಮುದಾಯದ ಅಭಿರುಚಿಗೆ ತಕ್ಕಂತೆ ವಿಶೇಷ ಪುರವಣಿಗಳನ್ನು ಹೊರತರುತ್ತಿವೆ. ಭಾರತೀಯ ಮಾಧ್ಯಮದಲ್ಲಿ ಸ್ವಲ್ಪ ವರ್ಷಗಳ ಹಿಂದೆ ಕಾಣದಿದ್ದ, ಮಾನಿನಿ - ಮದಿರೆಯ ಕುರಿತಾದ ವಸ್ತುವಿಷಯಗಳು ಲೀಲಾಜಾಲವಾಗಿ ಬಿಂಬಿಸಲ್ಪಡುತ್ತಿವೆ. ಹೆಚ್ಚಿದ ಜಾಹೀರಾತು ಹಾಗು ಪತ್ರಿಕಾ ಪ್ರಸರಣೆಯಿಂದಾಗಿ ಅಶ್ಲೀಲತೆ ಹಾಗು ದ್ವಂದ್ವಾರ್ಥಗಳ ಸಂದೇಶಗಳು ಮಾಮೂಲಿಯಾಗಿವೆ.

ಪ್ರಕಟಣೆಗಳು ಆರ್ಥಿಕವಾಗಿ ಸದೃಢವಾಗಿ ಉಳಿದುಕೊಳ್ಳಲು ಹೆಚ್ಚು ಹೆಚ್ಚು ಜಾಹೀರಾತು ಆಕರ್ಷಿಸಲು ಒಂದಕ್ಕೊಂದು ಸ್ಪರ್ಧಿಸುತ್ತಿವೆ. ಇದು ಹೆಚ್ಚು ಹೆಚ್ಚು ಉತ್ಪನ್ನಗಳ ಬಗೆಗಿನ ಮಾಹಿತಿ ನೀಡಿಕೆ ಹಾಗು ಅವುಗಳನ್ನು ಹಾಡಿಹೊಗಳುವ ಪ್ರವೃತ್ತಿಗೆ ಎಡೆ ಮಾಡಿದೆ. ಬಳಕೆದಾರರಿಗೆ ಅಗತ್ಯವಿದೆಯೋ ಇಲ್ಲವೋ ಆದರೂ ಪತ್ರಿಕೆಗಳು ಉತ್ಪನ್ನಗಳ ಬಗ್ಗೆ ಹಾಡಿಹೊಗಳಿ ಸಂಸ್ಥೆಗಳಿಗೆ ಲಾಭತರುವುದರಿಂದ ಹಾಗು ಅಂಥಹ ಪತ್ರಿಕೆಗಳಿಗೆ ಹೆಚ್ಚು ಜಾಹೀರಾತುಗಳು ಬಿಡುಗಡೆ ಮಾಡಲ್ಪಡುವುದರಿಂದ ಮಾಧ್ಯಮ ಇಂತಹ ಒಂದು ಪ್ರವೃತ್ತಿಗೆ ಇಳಿದಿದೆ. ಹಿಡಿತವಿಲ್ಲದ ಉಪಭೋಗತನಕ್ಕೆ ಇಂಬು ನೀಡುವ ಮಾಧ್ಯಮಗಳು ತಮ್ಮ ನಂಬಿಕೆ ಹಾಗು ವಿಶ್ವಾಸಾರ್ಹತೆಯನ್ನು ಕಳೆದುಕೊಳ್ಳುತ್ತಿರುವುದೂ ನಿಜ. ಟೀಕಾಕಾರರು ಹೇಳುವಂತೆ ಪತ್ರಿಕೆಗಳ ಮಾಲೀಕರು ಕೂಡ ತಮ್ಮ ಪ್ರಕಟಣೆಗಳನ್ನು ಇತರ ಉತ್ಪನ್ನಗಳಂತೆ ಮಾರುಕಟ್ಟೆಯಲ್ಲಿ ಮುಂಚೂಣಿಯಲ್ಲಿರುವಂತೆ ಮಾಡಲು ಸದಾ ಹೆಣಗಾಡುತ್ತಾರೆ. ಇದು ಸಾರ್ವಜನಿಕ ಹಿತಾಸಕ್ತಿಗಳನ್ನು ಕಾಪಾಡುವ ಮಾಧ್ಯಮಗಳ ಉದಾತ್ತ ಧ್ಯೇಯೋದ್ದೇಶಗಳನ್ನು ಮರೆಯುವಂತೆ ಮಾಡಿವೆ.

## 4.3 ಜಾಗತೀಕರಣದೊಂದಿಗೆ ಹೊಂದಾಣಿಕೆ

### 4.3.1 ರಾಜಕೀಯ ವ್ಯವಸ್ಥೆ ಮತ್ತು ಜಾಗತೀಕರಣ

ಅಮೇರಿಕ ಮತ್ತು ಫ್ರಾನ್ಸ್‌ನಂತಹ ಮುಕ್ತ ಪ್ರಜಾಪ್ರಭುತ್ವ ರಾಷ್ಟ್ರಗಳು ವಿದೇಶಿ ಬಂಡವಾಳದ ಹರಿವನ್ನು ಸುಗಮಗೊಳಿಸುವುದರ ಮೂಲಕ ಜಾಗತೀಕರಣವನ್ನು ನಿಯಂತ್ರಿಸಬಹುದೆಂದು ನಂಬುತ್ತವೆ. ಆದರೆ ಅವುಗಳು ತಮ್ಮ ರಾಷ್ಟ್ರೀಯ ಹಿತಾಸಕ್ತಿಗಳನ್ನು ಬಲಿ ನೀಡದೆ ಕೆಲವೊಂದು ಕ್ಷೇತ್ರಗಳಲ್ಲಿ ವಿದೇಶಿ ಪ್ರಭಾವಗಳಿಗೆ ಸಿಕ್ಕಿ ಬೀಳದಂತೆ ಎಚ್ಚರಿಕೆ ವಹಿಸಿವೆ. 1980ರ ದಶಕದಲ್ಲಿ ಅಮೇರಿಕ ಅಂತಹ ಒಂದು ಪರಿಸ್ಥಿತಿಯನ್ನು ಎದುರಿಸಿತು. ಆ ಸಮಯದಲ್ಲಿ ಜಪಾನ್ ಅದ್ಭುತವೆನಿಸಿದ ಆರ್ಥಿಕ ಬೆಳವಣಿಗೆಯನ್ನು ಕಂಡು ಆ ದೇಶದ ಕಂಪನಿಗಳು ಭಾರಿ ಲಾಭದತ್ತ ದಾಪುಗಾಲಿರಿಸಿ, ಬೃಹತ್ ಮೊತ್ತದ ಹಣಗಳಿಸುವಲ್ಲಿ ಯಶಸ್ವಿಯಾದವು. ಬಂಡವಾಳ ಹೂಡಿಕೆಗೆ ಪಾಶ್ಚಾತ್ಯ ರಾಷ್ಟ್ರಗಳತ್ತ ಮುಖ ಮಾಡಿದಾಗ, ಇತರ ಉದ್ಯಮಗಳ ಜೊತೆಯಲ್ಲಿ ಮಾಧ್ಯಮ ಕ್ಷೇತ್ರದಲ್ಲಿಯೂ ಅವು ತೀವ್ರ ಆಸಕ್ತಿ ತೋರಿದವು.

ಎಚ್ಚೆತ್ತುಕೊಂಡ ಅಮೇರಿಕ, ಮುದ್ರಣ ಹಾಗೂ ವಿದ್ಯುನ್ಮಾನ ಮಾಧ್ಯಮಗಳಲ್ಲಿ ಬಂಡವಾಳ ಹೂಡಿಕೆಗೆ ಅಮೇರಿಕನ್ ಸಹಯೋಗಿ ಕಂಪನಿಗಳಿಂದ ಮಾತ್ರ ಬಂಡವಾಳ ಹೂಡಿಕೆಗೆ ಅನುವಾಗುವಂತೆ ಹಾಗು ಅಮೇರಿಕನ್ ಕಾಯ್ದೆ ಕಾನೂನುಗಳನ್ನು ಪರಿಪಾಲಿಸುವಂತೆ, ಉತ್ತರದಾಯಿಯಾಗಿರುವಂತೆ ತಾಕೀತು ಮಾಡಿತು. ಹಾಗೆಯೇ, ಕೇವಲ ಅಮೇರಿಕನ್ ಪೌರರು ಮಾತ್ರ ಪತ್ರಿಕೆಗಳ ಒಡೆತನಕ್ಕೆ ಅರ್ಹರು ಎಂಬ ಷರತ್ತು, ಅಮೇರಿಕ ತನ್ನ ಮಾಧ್ಯಮದ ಮೇಲಿನ ನಿಯಂತ್ರಣವನ್ನು ಉಳಿಸಿಕೊಳ್ಳಲು ಸಹಾಯ ಮಾಡಿತು.

ಸ್ಪರ್ಧಾತ್ಮಕತೆಯನ್ನು ಹೆಚ್ಚಿಸಲು ಹಾಗು ವೈವಿಧ್ಯತೆ ಕಾಪಾಡಿಕೊಳ್ಳಲು ಅನುವಾಗುವಂತೆ ಎಲ್ಲ ಭಾರತೀಯ ಪ್ರಜೆಗಳಿಗೆ ಪತ್ರಿಕೆ ಹಾಗು ನಿಯತಕಾಲಿಕಗಳನ್ನು ಪ್ರಾರಂಭಿಸುವ ಮುಕ್ತ ಅವಕಾಶವನ್ನು ಭಾರತ ಸರ್ಕಾರ ಕಲ್ಪಿಸಿದೆ. ಪತ್ರಿಕೆಗಳ ಸಂಖ್ಯೆ ಹೆಚ್ಚಾದಂತೆಲ್ಲ ಏಕಾಧಿಪತ್ಯದ ಅವಕಾಶಗಳು ಕಡಿಮೆಯಾಗಿ ಭಿನ್ನಾಭಿಪ್ರಾಯಗಳು ಹಾಗು ಹೆಚ್ಚು ಹೆಚ್ಚು ಹೊಸ ಕಲ್ಪನೆಗಳಿಗೆ ಅವಕಾಶವಾಗುತ್ತದೆ.

ಪ್ರಜಾಪ್ರಭುತ್ವ ರಹಿತ ರಾಷ್ಟ್ರಗಳಲ್ಲಿ ಮಾಧ್ಯಮ ಕಟ್ಟಳೆಗಳು ಕಟುವಾಗಿದ್ದು ಯಾವುದೇ ಹೊರಗಿನ ಶಕ್ತಿಗಳಿಗೆ ಅವಕಾಶಗಳೇ ಇಲ್ಲ. ಮಿಲಿಟರಿ ಆಡಳಿತ ವ್ಯವಸ್ಥೆ ಹಾಗು ರಾಜಾಳ್ವಿಕೆಯ ರಾಷ್ಟ್ರಗಳು ಕಟ್ಟುನಿಟ್ಟಾಗಿ ಮಾಧ್ಯಮ ಕ್ಷೇತ್ರದಲ್ಲಿನ ವಿದೇಶಿ ಪ್ರವೇಶ ಅಥವಾ ಹಸ್ತಕ್ಷೇಪಗಳನ್ನು ಸಂಪೂರ್ಣವಾಗಿ ನಿಷೇಧಿಸಿವೆ. ಅಲ್ಲದೇ ತಮ್ಮ ಮಾಧ್ಯಮಗಳನ್ನೂ ಕೂಡ ತಮ್ಮ ಕಪಿಮುಷ್ಟಿಯಲ್ಲಿರಿಸಿಕೊಂಡು ನಿಯಂತ್ರಿಸುತ್ತವೆ. ಚೈನಾ ಬಹು ದೀರ್ಘಕಾಲದವರೆಗೆ ತನ್ನ ಪ್ರಜೆಗಳು ವಿದೇಶಿ ಚಾನಲ್‌ಗಳನ್ನು ವೀಕ್ಷಿಸದಂತೆ, ಡಿಶ್ ಆಂಟೆನಾಗಳನ್ನು ಹೊಂದುವುದನ್ನು ನಿಷೇಧಿಸಿತ್ತು.

ತನ್ನ ಸಾಮಾಜಿಕ, ರಾಜಕೀಯ ಹಾಗು ಆರ್ಥಿಕ ಪರಿಸರಕ್ಕೆ ತಕ್ಕಂತೆ ಹಾಗು ಅಗತ್ಯತೆ ಅಭಿಲಾಷೆಗಳಿಗೆ ತಕ್ಕಂತೆ ಸರ್ಕಾರಗಳು ಮಾಧ್ಯಮ ಜಾಗತೀಕರಣವನ್ನು ನಿಯಂತ್ರಿಸಲು ಪ್ರತ್ಯೇಕವಾದ, ತನ್ನದೇ ಕಾರ್ಯತಂತ್ರಗಳನ್ನು ರೂಪಿಸಿಕೊಂಡಿರುವುದನ್ನು ಪ್ರಪಂಚದೆಲ್ಲೆಡೆ ಕಾಣಬಹುದು. ಹೊಸ ವಿಶ್ವವ್ಯವಸ್ಥೆಗಳ ಬಗ್ಗೆ ತೀವ್ರ ಚರ್ಚೆ ಹಾಗು ಮಾತುಕತೆಗಳಿದ್ದರೂ ವಾಸ್ತವದಲ್ಲಿ ಪ್ರತಿಯೊಂದು ದೇಶದಲ್ಲಿಯೂ ತನ್ನದೇ ವ್ಯವಸ್ಥೆಗಳು, ನಿರ್ಬಂಧಗಳು ಹಾಗು ಅಡಚಣೆಗಳಿರುವುದು ಕಂಡು ಬರುತ್ತದೆ.

## 4.3.2 ಭಾರತದಲ್ಲಿ ಮಾಧ್ಯಮ ಜಾಗತೀಕರಣ

ಪ್ರಸ್ತುತ ಸನ್ನಿವೇಶದಲ್ಲಿ ಭಾರತದಲ್ಲಿ ನಾಲ್ಕು ಭಿನ್ನ ಮಾಧ್ಯಮಗಳು ಮುಂಚೂಣಿ ಸ್ಥಾನಗಳನ್ನು ಗಳಿಸಿವೆ. ಅವುಗಳೆಂದರೆ:

ಮೊದಲನೆಯದಾಗಿ, ಮಾಧ್ಯಮಗಳಲ್ಲೇ ಅತ್ಯಂತ ಹಳೆಯದಾದ ಪತ್ರಿಕಾ ಮಾಧ್ಯಮ. ಪತ್ರಿಕಾ ಮಾಧ್ಯಮದಲ್ಲಿ ಯಾವುದೇ ರೀತಿಯ ಸರ್ಕಾರಿ ಹಿಡಿತವಾಗಲೀ ಅಥವಾ ನಿಯಂತ್ರಣವಾಗಲೀ ಇಲ್ಲ. 1999ರ ಓದುಗ ಸಮೀಕ್ಷೆಯ ಪ್ರಕಾರ ನಗರ ಹಾಗು ಗ್ರಾಮೀಣ ಪ್ರದೇಶಗಳೆರಡರಲ್ಲಿಯೂ ದಿನಪತ್ರಿಕೆ ಹಾಗು ನಿಯತಕಾಲಿಕಗಳ ಪ್ರಸಾರ ತೀವ್ರಗತಿಯಲ್ಲಿ ವೃದ್ಧಿಸುತ್ತಿದೆ. 183 ದಶಲಕ್ಷ ನಗರ ವಾಸಿ ಭಾರತೀಯ ಓದುಗರ ಪೈಕಿ ಶೇ. 62ರಷ್ಟು ಮಂದಿ ಪತ್ರಿಕೆಯನ್ನೋದುವ ಹವ್ಯಾಸದವರಾಗಿದ್ದರು. ಆದರೆ ಅದೇ ಗ್ರಾಮೀಣ ಪರಿಸ್ಥಿತಿಯನ್ನು ಅವಲೋಕಿಸಿದಾಗ 437 ದಶಲಕ್ಷ ಜನರ ಪೈಕಿ ಕೇವಲ ಶೇ. 29ರಷ್ಟು ಮಂದಿ ಮಾತ್ರ ಪತ್ರಿಕೆಯನ್ನೋದುವ ಪರಿಪಾಠ ಇಟ್ಟುಕೊಂಡಿದ್ದರು.

ಹಾಗೆಯೇ ನಿಯತಕಾಲಿಕಗಳನ್ನೋದುವ ಜನರು ಶೇ. 25ರಿಂದ ಶೇ. 28ಕ್ಕೆ ವೃದ್ಧಿಸಿದರು. ರಾಷ್ಟ್ರೀಯ ಓದುಗ ಸಮೀಕ್ಷೆಯ ಪ್ರಕಾರ ನಿಯತಕಾಲಿಕ ಓದುಗರು ಸುದ್ದಿ, ಸಾಮಾನ್ಯ ಆಸಕ್ತಿಯ ನುಡಿಚಿತ್ರಗಳು ಹಾಗು ವಿಷಯ ನಿಷ್ಠ ಪ್ರಕಟಣೆಗಳನ್ನು ಓದಲು ಹೆಚ್ಚು ಇಷ್ಟಪಡುವುದು ತಿಳಿದುಬಂತು. ನಿರಂತರದ ವೃದ್ಧಿ ತೋರಿದ ವಾಣಿಜ್ಯ ನಿಯತಕಾಲಿಕಗಳು ಆ ವರ್ಷ ಅಷ್ಟೇನೂ ಆಶಾದಾಯಕ ಪ್ರಗತಿಯನ್ನು ತೋರಲಿಲ್ಲ. ಆದರೆ ಸಿನಿಮಾ ಪತ್ರಿಕೆಗಳು ಸಂಖ್ಯೆ ಹಾಗು ಪ್ರಸಾರಗಳೆರಡರಲ್ಲಿಯೂ ಬೆಳವಣಿಗೆ ಕಂಡವು. ಇನ್ನೊಂದು ಗಮನಾರ್ಹ ಅಂಶವೆಂದರೆ ಭಾರತೀಯ ಭಾಷಾ ಪತ್ರಿಕೆಗಳು ಅತ್ಯಧಿಕ ಸಂಖ್ಯೆಯಲ್ಲಿರುವುದು ಹಾಗು ಪ್ರಸರಣೆಯಲ್ಲಿ ಮುಂದಿರುವುದು. ಸಾಕ್ಷರತೆ ಹೆಚ್ಚಿದಂತೆ ಹಾಗು ಜನರ ಕೊಳ್ಳುವ ಶಕ್ತಿ ವೃದ್ಧಿಸಿದಂತೆ ಪತ್ರಿಕಾ ಮಾಧ್ಯಮವೂ ಕೂಡ ನಿರಂತರ ಬೆಳವಣಿಗೆಯನ್ನು ಕಾಣುತ್ತಿದೆ.

ಭಾರತದಲ್ಲಿ ಎರಡನೆಯ ಸ್ಥಾನಗಳಿಸಿರುವುದೆಂದರೆ ಬಾನುಲಿ. ದೇಶದ ಶೇ. 90ಕ್ಕೂ ಹೆಚ್ಚಿನ ಪ್ರದೇಶಗಳಷ್ಟು ವಿಸ್ತಾರತೆ ಹೊಂದಿರುವ ಈ ಮಾಧ್ಯಮ ದೇಶದ ಅತ್ಯಂತ ಪ್ರಬಲ ಮಾಧ್ಯಮವಾಗಿ ಹೊರಹೊಮ್ಮಬೇಕಾಗಿತ್ತು. ಆದರೆ ಇತ್ತೀಚಿನವರೆಗೂ ಸರ್ಕಾರಿ ಆಡಳಿತ ಹಾಗು ನೇರ ನಿಯಂತ್ರಣವಿದ್ದುದರಿಂದ ಇದು ಸಾಧ್ಯವಾಗಲಿಲ್ಲ ಎನ್ನಬಹುದು. ಈಗ ಖಾಸಗಿ ಒಡೆತನದ ಬಾನುಲಿ ಕೇಂದ್ರಗಳಿಗೆ ಅವಕಾಶ ಕಲ್ಪಿಸಲಾಗಿದೆ. ವಿದೇಶಿ ಬಾನುಲಿಯನ್ನು ಕೇಳಲು ಯಾವುದೇ ನಿರ್ಬಂಧಗಳನ್ನು ಹೇರಲಾಗಿಲ್ಲ. FM ವಲಯದಲ್ಲಿ ಖಾಸಗೀ ಭಾಗವಹಿಸುವಿಕೆಗೆ ಅವಕಾಶ ಕಲ್ಪಿಸಲಾಗಿದ್ದರೂ, ಅಲ್ಪತರಂಗಾಂತರ ಹಾಗು ಮಾಧ್ಯಮ ತರಂಗಾಂತರ ಪ್ರಸಾರ ಸರ್ಕಾರಿ ಹಿಡಿತದಲ್ಲಿರಬೇಕೆನ್ನುವುದು ಇಂದಿಗೂ ಭಾರತ ಸರ್ಕಾರದ ಧೋರಣೆಗಳಲ್ಲೊಂದು. ಈ ಎರಡು ತರಂಗಾಂತರಗಳು ಅತಿ ಹೆಚ್ಚಿನ ಜನ ಸಮೂಹವನ್ನು ತಲುಪುತ್ತವೆ ಎಂಬುದನ್ನು ಮರೆಯಲಾಗದು. ಪ್ರಸಾರ ಭಾರತೀಯ ನಿಯಂತ್ರಣದಲ್ಲೇ ಇರಬೇಕೆನ್ನುವ ಈ ಪ್ರಸಾರಗಳನ್ನು ಸಂಪೂರ್ಣವಾಗಿ ಖಾಸಗೀಕರಣಗೊಳಿಸಬೇಕೆಂಬ ಕೂಗೂ ಕೇಳಿಬರುತ್ತಿದೆ.

ನಂತರದ ಸ್ಥಾನ ಟಿವಿ ಮಾಧ್ಯಮದ್ದು. ಸುಮಾರು 60,000 ಕೇಬಲ್ ವಿತರಕರು ಹಾಗು ಸರ್ಕಾರಿ ಸಂಸ್ಥೆಯಾದ ದೂರದರ್ಶನ ಶೇ. 90ರಷ್ಟು ಭೌಗೋಳಿಕ ಪ್ರದೇಶಗಳಿಗೆ ತನ್ನ ಕಾರ್ಯಕ್ರಮಗಳನ್ನು ನೀಡುವ ಮೂಲಕ ಅತ್ಯಂತ ತ್ವರಿತಗತಿಯಲ್ಲಿ ಮಾಧ್ಯಮ ಬೆಳೆಯುವಂತೆ ಮಾಡುತ್ತಿದ್ದಾರೆ. DTH ಪ್ರಸಾರದೊಂದಿಗೆ ಉಪಗ್ರಹ ವಾಹಿನಿಗಳ ಸಂಖ್ಯೆಯಾಗುವ, ಹಾಗು ಹೆಚ್ಚು ಜನರನ್ನು ತಲುಪುವ ಸಾಧ್ಯತೆ ನಿಚ್ಚಳವಾಗಿದೆ. ಟಾಟಾ ಸ್ಕೈ ಮುಂತಾದ ಉದ್ಯಮಿಗಳು ಪ್ರಸಾರ ಭಾರತಿಯೊಂದಿಗೆ ಕೈ ಜೋಡಿಸಿದ್ದು ಟಿವಿ ಲಭ್ಯತೆ ಈಗ ದೇಶದ ಶೇಕಡ 98ರಷ್ಟು ಭೌಗೋಳಿಕ ಪ್ರದೇಶಗಳಿಗೆ ವಿಸ್ತರಿಸಿದೆ.

ನಾಲ್ಕನೆಯದು ಮತ್ತು ಇತ್ತೀಚಿನದೆಂದರೆ ಹೊಸ ಮಾಧ್ಯಮ ಅಂತರ್ಜಾಲ. ತನ್ನ ತಾಂತ್ರಿಕ ಸಾಧ್ಯತೆಯಿಂದಾಗಿ ಜನರನ್ನು ಮೋಹವಿಸ್ಮಿತರನ್ನಾಗಿ ಮಾಡಿರುವ ಈ ಮಾಧ್ಯಮ ಇತರ ಮಾಧ್ಯಮಗಳಿಗೆ ಹೋಲಿಸಿದಾಗ ಕೊಂಚ ದುಬಾರಿ. ಅಲ್ಲದೆ ತಾಂತ್ರಿಕ ಪರಿಣತಿ, ಜ್ಞಾನಗಳಿಸಿರುವ ಜನಸಮೂಹದ ಒಂದು ವರ್ಗಕ್ಕಷ್ಟೇ ಸೀಮಿತಗೊಂಡಿರುವಂತಹದ್ದು. ಆದರೆ ನಿಧಾನವಾಗಿ ಕಂಪ್ಯೂಟರ್ ಸಾಕ್ಷರತೆ ವೃದ್ಧಿಸಿದಂತೆ ಈ ಮಾಧ್ಯಮವನ್ನು ಬಳಸುವ ಜನರೂ ಹೆಚ್ಚುತ್ತಿದ್ದಾರೆ. ಬಹುತೇಕ ಭಾರತೀಯ ದೊಡ್ಡ ಪತ್ರಿಕೆಗಳು ತಮ್ಮ ಸುದ್ದಿ ತಾಣಗಳನ್ನು ಹೊಂದಿವೆ. ಸಮಯದ ಅಭಾವವಿರುವ ಆದರೆ ತಾಂತ್ರಿಕತೆಗೆ ಹತ್ತಿರವಾದ, ಲಭ್ಯತೆಯಿರುವ ಜನರು ಹೆಚ್ಚು ಅಂತರ್ಜಾಲ ಸುದ್ದಿಗೆ ಶರಣಾಗುತ್ತಿದ್ದಾರೆ. ಯಾವುದೇ ಒಂದು ವಾಹಿನಿ ಅಥವಾ ಪ್ರಕಟಣೆಗೆ ಸೀಮಿತಗೊಳ್ಳದೆ, ಪ್ರಪಂಚದ ಎಲ್ಲ ಸುದ್ದಿ ತಾಣಗಳನ್ನು ನಿರಾಯಾಸವಾಗಿ ಜಾಲಾಡುವ ಅವಕಾಶ ಜಾಗತೀಕರಣದ ಫಲ ಎನ್ನಬಹುದು. ಪ್ರತಿ ನಿಮಿಷ ನವೀಕರಿಸಲ್ಪಡುವ ಮಾಹಿತಿ ಜನರನ್ನು ಇತ್ತೀಚಿನ ವಿವರಗಳಿಗೆ ತೆರೆದುಕೊಳ್ಳುವಂತೆ ಮಾಡುತ್ತಿದೆ. ಇತ್ತೀಚೆಗೆ ಸರ್ಕಾರಿ ಸ್ವಾಮ್ಯದ ಬಿಎಸ್‌ಎನ್‌ಎಲ್ ಖಾಸಗಿ ಇಂಟರ್‌ನೆಟ್ ಪೂರೈಕೆದಾರರಿಗೆ ತಿರುಗೇಟು ಎನ್ನುವಂತೆ ಸುಲಭ ದರಗಳಲ್ಲಿ ಮನೆಗಳಿಗೆ ಇಂಟರ್‌ನೆಟ್ ಸೌಲಭ್ಯಗಳನ್ನು ಒದಗಿಸುತ್ತಿದ್ದು ಲಕ್ಷಾಂತರ ಮಂದಿ ಇದರ ಪ್ರಯೋಜನ ಪಡೆಯುತ್ತಿದ್ದಾರೆ. ಇಂಟರ್‌ನೆಟ್ ರೇಡಿಯೋ, ಸಂಗೀತ ತಾಣಗಳು ಹಾಗು ಇಂಟರ್‌ನೆಟ್ ವೀಡಿಯೋ ಜನಪ್ರಿಯಗೊಳ್ಳುತ್ತಿವೆ.

## 4.4 ಸಾರಾಂಶ

ಜನರ ದೈನಂದಿನ ಜೀವನದ ಕೇಂದ್ರ ಬಿಂದುವೆಂದರೆ ಮಾಧ್ಯಮಗಳು. ಎಲ್ಲ ಕ್ಷೇತ್ರಗಳ ಮಾಹಿತಿ ಹಾಗು ಸುದ್ದಿಗಾಗಿ ಅವುಗಳನ್ನು ಜನರು ಹೆಚ್ಚು ಹೆಚ್ಚಾಗಿ ಆಶ್ರಯಿಸುತ್ತಿದ್ದಾರೆ. ಆಧುನಿಕ ಸಂಹವನ ತಂತ್ರಜ್ಞಾನ ಹಾಗು ಸಾರಿಗೆ ಕ್ಷೇತ್ರದಲ್ಲಿನ ಅಸಾಧಾರಣ ಬೆಳವಣಿಗೆ ಮಾಧ್ಯಮ ತ್ವರಿತಗತಿಯಲ್ಲಿ ಜಾಗತೀಕರಣಗೊಳ್ಳುವಂತೆ ಮಾಡಿದೆ. ಜನಜೀವನದ ಎಲ್ಲ ಚಟುವಟಿಕೆಗಳ ಹಾಗು ಆಗುಹೋಗುಗಳ ಮೇಲೆ ತನ್ನ ಪ್ರಭಾವ ಬೀರಿರುವ ಜಾಗತೀಕರಣ, ಮಾಧ್ಯಮದ ಮೇಲೂ ತನ್ನ ಪರಿಣಾಮಗಳನ್ನು ಬೀರಿದೆ.

ತಾಂತ್ರಿಕತೆ ಅಭಿವೃದ್ಧಿಗೊಂಡಂತೆ ಅಂತರ್ಜಾಲ ಬಳಕೆ ಹೆಚ್ಚಾಗಿ ಒಂದು ಪರಿಣಾಮಕಾರಿ ಜಾಗತಿಕ ಮಾಧ್ಯಮವಾಗಿ ಹೊರಹೊಮ್ಮಿದೆ. ಬಾನುಲಿ ಹಾಗು ಟಿವಿಯನ್ನೊಳಗೊಂಡಂತೆ ಹೊಸ ಆವಿಷ್ಕಾರಗಳು, ಮುದ್ರಣ ಮಾಧ್ಯಮವನ್ನು ಬದಲಾಯಿಸಿವೆ. ಒಮ್ಮೆಲೇ ಹಲವಾರು ಕೇಂದ್ರಗಳಿಂದ ಮುದ್ರಿಸಲು ಉಪಗ್ರಹ ತಂತ್ರಜ್ಞಾನವೂ ಬಳಸಲ್ಪಡುತ್ತಿದೆ. ಜಾಗತೀಕರಣ ಪ್ರಕ್ರಿಯೆ ಮುದ್ರಣ ಮಾಧ್ಯಮದ ಮೇಲೆ ಧನಾತ್ಮಕ ಹಾಗು ಋಣಾತ್ಮಕ ಪರಿಣಾಮಗಳೆರಡನ್ನೂ ಉಂಟು ಮಾಡಿದೆ. ಮಾಧ್ಯಮ ಕಾರ್ಯನಿರ್ವಹಿಸುವ ಹಾಗು ಒಂದು ವ್ಯವಸ್ಥೆಯಾಗಿ ನೆಲೆ ನಿಲ್ಲುವ ಚಟುವಟಿಕೆಗಳಲ್ಲಿ ಭಾರಿ ಬದಲಾವಣೆಗಳಾಗಿವೆ. ಆರ್ಥಿಕ ಹಾಗು ವಾಣಿಜ್ಯ ಅವಕಾಶಗಳು ಜಾಗತೀಕರಣದೊಂದಿಗೆ ಹೆಚ್ಚಿದರೂ ಕೆಲ ಕ್ಷೇತ್ರಗಳಲ್ಲಿ ದೇಶೀಯ ಸಂಪ್ರದಾಯಗಳು ನಲುಗಿವೆ. ಹೊಸ ತಾಂತ್ರಿಕತೆಯೊಂದಿಗೆ ಮಾಧ್ಯಮಗಳು ಬೇರೆ ಬೇರೆ ಸಂಸ್ಕೃತಿಗಳನ್ನು ಜನರ ಮನೆಗೆ ತಲುಪಿಸಿ ಅಗಾಧ ಪರಿಣಾಮಗಳನ್ನು ಉಂಟುಮಾಡುತ್ತಿವೆ.

ಭಾರತದಲ್ಲಿ ಜಾಗತೀಕರಣದ ಪ್ರಕ್ರಿಯೆ ತೀವ್ರ ಟೀಕೆಗೆ ಗುರಿಯಾಗಿದೆ. ವಿಭಿನ್ನ ಸಾಂಸ್ಕೃತಿಕ, ಆರ್ಥಿಕ ಹಾಗು ಭಾವನಾತ್ಮಕ ಹಿನ್ನೆಲೆಯಿರುವ ದೇಶದ ಜನ, ತಮ್ಮ ಜೀವನ ಶೈಲಿಯ ಬದಲಾವಣೆ ಹಾಗು ಹೊರಗಿನ ಸಂಸ್ಕೃತಿಯ ನಿರಂತರ ಒತ್ತಡದಿಂದಾಗಿ ನಲುಗುತ್ತಿದ್ದಾರೆ. ಬಲಾಢ್ಯ ಬಹುರಾಷ್ಟ್ರೀಯ ಕಂಪನಿಗಳ ತುಳಿತಕ್ಕೆ ಸಿಕ್ಕಿ ದೇಶೀಯ ಉದ್ಯಮ ಚೇತರಿಸಿಕೊಳ್ಳಲಾಗದೆ ಸಾಯುತ್ತಿದೆ. ತಮ್ಮ ಪ್ರಭಾವ ಹಾಗು ಲಾಭಕೋರತನದಿಂದ ಈ ಕಂಪನಿಗಳು ಪ್ರಜಾಪ್ರಭುತ್ವ ತತ್ವಗಳು ಹಾಗು ಜನರ ಸ್ವಾತಂತ್ರ್ಯಕ್ಕೆ ಕೊಡಲಿಪೆಟ್ಟು ನೀಡಿವೆ.

ಜಾಗತೀಕರಣಗೊಂಡ ಮಾಧ್ಯಮ ಸನ್ನಿವೇಶದಲ್ಲಿ ಮುದ್ರಣ ಮಾಧ್ಯಮದಲ್ಲಿ ನೇರ ಬಂಡವಾಳ ಹೂಡಿಕೆಗೆ ನಿಯಂತ್ರಿತ ಅವಕಾಶ ಕಲ್ಪಿಸಲಾಗಿದೆ. ಓದುಗ ಸುಲಭವಾಗಿ ಜಾಗತಿಕ ಮಟ್ಟದಲ್ಲಿ ಸುದ್ದಿ ಹಾಗು ಮಾಹಿತಿ ಪಡೆಯಲು ಸಾಧ್ಯವಾಗುತ್ತಿದೆ. ಬದಲಾದ ಸನ್ನಿವೇಶದಲ್ಲಿ ಭಾರತೀಯ ಪತ್ರಿಕೆಗಳು ತಮ್ಮ ಪ್ರಕಟಣೆಯ ಧ್ಯೇಯಧೋರಣೆಗಳನ್ನು ಬದಲಾಯಿಸಿಕೊಂಡಿವೆ. ಸಾಮಾಜಿಕ ಹಿತಾಸಕ್ತಿಯ ಜವಾಬ್ದಾರಿಯಿಂದ ಹೊರಗುಳಿದು ಪತ್ರಿಕೆಗಳು ಸಂಪೂರ್ಣ ವಾಣಿಜ್ಯೀಕರಣದತ್ತ ದಾಪುಗಾಲಿಡುತ್ತಿವೆ. ಇತರ ಉತ್ಪನ್ನಗಳಂತೆ ಪತ್ರಿಕೆಗಳನ್ನೂ ಮಾರುಕಟ್ಟೆಯಲ್ಲಿ ಮುಂಚೂಣಿ ಸ್ಥಾನಕ್ಕೆ ತರಲು ಪ್ರಯತ್ನಗಳನ್ನು ಮಾಡಲಾಗುತ್ತಿದೆ.

ಬಾನುಲಿ, ಟೆಲಿವಿಷನ್ ಹಾಗು ಅಂತರ್ಜಾಲದಂತಹ ಇತರ ಜಾಗತಿಕ ಮಾಧ್ಯಮಗಳ ಭರಾಟೆಯ ನಡುವೆಯೂ ತಾಂತ್ರಿಕತೆಯ ಬದಲಾವಣೆಯೊಂದಿಗೆ ಪತ್ರಿಕಾ ಮಾಧ್ಯಮ ಉಳಿಯಲು ಸಾಧ್ಯವಾಗಿದೆ. ಭಾರತದಲ್ಲಿ ಬಹುತೇಕ ಓದುಗರು ಸ್ಥಳೀಯ ಸುದ್ದಿಯನ್ನು ಓದಲು ಇಷ್ಟಪಡುವುದೂ ಇದಕ್ಕೆ ಕಾರಣ. ಯಾವುದೇ ನಿರ್ಬಂಧವಿಲ್ಲದ ಆಮದಿಗೆ ಅವಕಾಶ ನೀಡಿದ್ದರೂ ವಿದೇಶಿ ಪತ್ರಿಕೆಗಳು ಹಾಗು ನಿಯತಕಾಲಿಕಗಳ ಅತ್ಯಂತ ಕಡಿಮೆ ಪ್ರಸಾರ ಸಂಖ್ಯೆ ಇದನ್ನು ಪ್ರತಿಫಲಿಸುತ್ತದೆ.

## 4.5 ನಿಮ್ಮ ಪ್ರಗತಿ ಪರಿಶೀಲನೆ

**ಸೂಚನೆ:** ನಿಮ್ಮ ಉತ್ತರಗಳನ್ನು ಈ ಘಟಕದಲ್ಲಿ ನೀಡಲಾಗಿರುವ ವಿವರಗಳೊಂದಿಗೆ ಹೋಲಿಸಿ.

1. ವಿದೇಶಿ ಟಿವಿ ವಾಹಿನಿಗಳ ಬಗ್ಗೆ ನಿಮ್ಮ ಅನಿಸಿಕೆಗಳೇನು? ವಿವರಿಸಿ.

2. ಭಾರತದಲ್ಲಿ ಪತ್ರಿಕಾ ಮಾಧ್ಯಮದ ವಾಣಿಜ್ಯೀಕರಣವನ್ನು ವಿವರಿಸಿ.

## 4.6 ಹೆಚ್ಚಿನ ಓದಿಗಾಗಿ


1. Joseph, Mass Media and Challenge of Change, Anmol Publication, New Delhi, 2000.

2. Joseph, Global Perspectives in Modern India, Anmol Publications, New Delhi, 2000.


ಬರಹ: ತೇಜಸ್ವಿ ನವಿಲೂರ್

# ಘಟಕ 5 ಸಾರ್ವಜನಿಕ ಸೇವೆಯಲ್ಲಿ ಮಾಧ್ಯಮದ ಪಾತ್ರ

ರಚನೆ

5.0 ಉದ್ದೇಶಗಳು

5.1 ಪ್ರಸ್ತಾವನೆ

5.2 ಸಮೂಹ ಮಾಧ್ಯಮ ಮತ್ತು ಸಮಾಜ

5.3 ವಸ್ತುವಿಷಯಗಳ ವಿತರಣೆ

5.4 ಸಾರ್ವಜನಿಕ ಸೇವಾ ಮಾಧ್ಯಮ

5.5 ಸಾರ್ವಜನಿಕ ಸೇವಾ ಪ್ರಸಾರದ ಕಾರ್ಯಚಟುವಟಿಕೆಗಳು

5.6 ಸಾರಾಂಶ

5.7 ನಿಮ್ಮ ಪ್ರಗತಿ ಪರಿಶೀಲನೆ

5.8 ಹೆಚ್ಚಿನ ಓದಿಗಾಗಿ

## 5.0 ಉದ್ದೇಶಗಳು

ಇಲ್ಲಿಯವರೆಗೆ ನಾವು ಸಮೂಹ ಮಾಧ್ಯಮದ ಮುಂದಿರುವ ಹಲವಾರು ಪ್ರಮುಖ ವಿಷಯಗಳನ್ನು ಚರ್ಚಿಸಿದ್ದೇವೆ. ಮಾಧ್ಯಮಗಳಲ್ಲಿ ಮಹಿಳೆಯನ್ನು ಚಿತ್ರಿಸುವ ಪರಿ, ಮಕ್ಕಳ ಮೇಲೆ ಟಿವಿ ಮಾಧ್ಯಮದ ಪ್ರಭಾವ, ಮಾಧ್ಯಮ ಮತ್ತು ಹಿಂಸೆಯ ವೈಭವೀಕರಣ, ಮಾಧ್ಯಮದ ಜಾಗತೀಕರಣ ಮಾಧ್ಯಮದ ಮುಂತಾದ ವಿಷಯಗಳೆಲ್ಲವೂ ಪ್ರಮುಖ ಸಾಮಾಜಿಕ ಅಂಶಗಳು ಎಂಬುದು ಮನದಟ್ಟಾಗಿದೆ. ಈ ಘಟಕದಲ್ಲಿ ನಾವು ಈ ಕೆಳಕಂಡ ಅಂಶಗಳ ಬಗ್ಗೆ ಗಮನಹರಿಸೋಣ.

* ಸಾರ್ವಜನಿಕ ಸೇವೆಯಲ್ಲಿ ಸಮೂಹ ಮಾಧ್ಯಮದ ಪಾತ್ರ;
* ಸಾರ್ವಜನಿಕ ಸೇವಾ ಕ್ಷೇತ್ರದಲ್ಲಿ ಸಮೂಹ ಮಾಧ್ಯಮ ಒತ್ತು ನೀಡಬೇಕಾಗಿರುವ ಸವಾಲುಗಳು;
* ಮಾಧ್ಯಮಗಳ ಒಡೆತನದ ನಮೂನೆಗಳು ಹಾಗು ಸೇವಾ ಮನೋಭಾವದ ನಡುವಿನ ಸಂಬಂಧ, ಮತ್ತು ಕೊನೆಯದಾಗಿ
* ವಾಸ್ತವದಲ್ಲಿ ಕಂಡು ಬರುವ ಸಾರ್ವಜನಿಕ ಸೇವಾ ಪ್ರಸಾರದಲ್ಲಿ ಕಂಡು ಬರುತ್ತಿರುವ ವಿದ್ಯಮಾನಗಳು.

## 5.1 ಪ್ರಸ್ತಾವನೆ

ಈ ಹಿಂದೆಯೇ ಹೇಳಿದಂತೆ ಪ್ರಜಾಪ್ರಭುತ್ವದ ವ್ಯವಸ್ಥೆಯಲ್ಲಿನ ಸಾಮಾಜಿಕ ಪರಿಸರವೊಂದರಲ್ಲಿ ಸಮೂಹ ಮಾಧ್ಯಮದ ಪಾತ್ರವನ್ನು ಎರಡು ಪ್ರಮುಖ ರೀತಿಯಲ್ಲಿ ಗುರುತಿಸಬಹುದು. ಮಾಧ್ಯಮವನ್ನು ಸಂಪೂರ್ಣವಾದ ವಾಣಿಜ್ಯ ಉದ್ದೇಶಗಳಿಗಾಗಿ ಬಳಸಿಕೊಳ್ಳಬಹುದು ಅಥವಾ ಸಾರ್ವಜನಿಕ ಸೇವೆಗೆಂದೇ ಮೀಸಲಾಗಿಡಬಹುದು. ಓದುಗ ಸಮುದಾಯ ಮಾಧ್ಯಮದಿಂದ ಸುದ್ದಿ-ಸಮಾಚಾರ, ಅಭಿಪ್ರಾಯ, ವಿಷಯ ಮಂಡನೆ, ತನಿಖಾ ವರದಿ ಮತ್ತು ವಿಶ್ಲೇಷಣೆಗಳನ್ನು ನಿರೀಕ್ಷಿಸುತ್ತದೆ. ಜನಾಭಿಪ್ರಾಯವನ್ನು ಒಟ್ಟುಗೂಡಿಸಿ, ಪ್ರಕಟಿಸಿ ಪ್ರಚುರ ಪಡಿಸುವುದರ ಮೂಲಕ ಸಮಾಜದ ವಾಸ್ತವ ಸ್ಥಿತಿಯನ್ನು ಓದುಗ ಸಮುದಾಯದ ಮುಂದೆ ಬಿಂಬಿಸುವ ಮಾಧ್ಯಮಗಳು ಅನೇಕ ರೀತಿಯಲ್ಲಿ ಸೇವೆ ಸಲ್ಲಿಸುತ್ತಿವೆ ಎನ್ನಬಹುದು. ಸಾರ್ವಜನಿಕ ಅಭಿಪ್ರಾಯವನ್ನು ರೂಪಿಸುವ, ಪ್ರಚಾರ ಮತ್ತು ಯೋಜಿತ ಪ್ರಚಾರ ತಂತ್ರಗಳ ಮೂಲಕ ಪ್ರೇರೇಪಿಸುವ ಮಾಧ್ಯಮಗಳ ಕಾರ್ಯ ಬಹುಮುಖೀಯ ಸ್ವರೂಪದ್ದಾಗಿದೆ. ಲಾಭಗಳಿಕೆ ಹಾಗು ಸಾರ್ವಜನಿಕ ಸೇವೆಗಳು ಸ್ವರೂಪ ಹಾಗು ಗುಣಲಕ್ಷಣಗಳಲ್ಲಿ ಒಂದಕ್ಕೊಂದು ವಿರುದ್ಧ ದಿಕ್ಕಿನಲ್ಲಿದ್ದರೂ, ಸಮೂಹ ಮಾಧ್ಯಮ ಸಂವಹನ ಪ್ರಕ್ರಿಯೆಯಲ್ಲಿ ಇವೆರಡೂ ಒಟ್ಟಾಗಿರುವುದು ನಿಜ.

ಸಾರ್ವಜನಿಕ ಸೇವೆಯ ಅರ್ಥ ವಿವರಣೆ ಹಾಗು ಮಹತ್ವಗಳು ಮಾಧ್ಯಮದಿಂದ ಮಾಧ್ಯಮಕ್ಕೆ ಬದಲಾಗುತ್ತವೆ. ಸಾರ್ವಜನಿಕ ಸೇವಾ ಕ್ಷೇತ್ರದಲ್ಲಿ ಚಾರಿತ್ರಾರ್ಹ ಕಾರಣಗಳಿಂದಾಗಿ ಮುದ್ರಣ ಮಾಧ್ಯಮ ನಿಜವಾದ ಮುಂದಾಳತ್ವ ವಹಿಸಿಕೊಂಡಿರುವುದು ನಮಗೆ ಕಾಣಸಿಗುತ್ತದೆ. ಪ್ರಾರಂಭದಲ್ಲಿ ಮುದ್ರಣ ಮಾಧ್ಯಮ ಓದುಗರನ್ನು ತಲುಪಲು ಅನೇಕ ಅಡೆತಡೆಗಳನ್ನು ಎದುರಿಸಬೇಕಾಗಿತ್ತು. ಆಡಳಿತದ ಚುಕ್ಕಾಣಿ ಹಿಡಿದ ಮಂದಿ ತಮ್ಮ ಹಿತಾಸಕ್ತಿಗಳನ್ನು ಕಾಪಾಡಿಕೊಳ್ಳಲು ಪತ್ರಿಕೆಗಳ ಮೇಲೆ ನಿರಂತರವಾದ ಒತ್ತಡಗಳನ್ನು ಹೇರುತ್ತಿದ್ದರು. ಪತ್ರಿಕಾ ಸಂಪಾದಕರುಗಳು ಪರವಾನಗಿ ಹಾಗು ಸೆನ್ಸಾರ್‌ಶಿಪ್ ವ್ಯವಸ್ಥೆಗಳನ್ನು ಎದುರಿಸಬೇಕಾಗಿತ್ತು. ಪ್ರಜಾಪ್ರಭುತ್ವ ವ್ಯವಸ್ಥೆಗಳಲ್ಲಿಯೂ ಕೂಡ ಅನೇಕ ಧಮನಕಾರಿ ಕಾನೂನು ಕಟ್ಟಳೆಗಳನ್ನು ಪತ್ರಿಕೆಗಳು, ಪತ್ರಕರ್ತರು ಎದುರಿಸಬೇಕಾಗಿತ್ತು. ಆದರೂ ಕಠಿಣ ಪರಿಸ್ಥಿತಿಗಳಲ್ಲಿ ಅಧಿಕಾರ ದುರುಪಯೋಗ ಹಾಗು ಭ್ರಷ್ಟಾಚಾರದ ವಿರುದ್ಧ ಸಾರ್ವಜನಿಕ ನೀತಿ ಹಾಗು ಸ್ವಚ್ಛ ರಾಜಕೀಯ ವ್ಯವಸ್ಥೆಗಳಿಗಾಗಿ ಹೋರಾಡಿದ ಪತ್ರಿಕಾ ಮಾಧ್ಯಮವನ್ನು ಜಗತ್ತಿನೆಲ್ಲೆಡೆ ಜನರು ಬಹುವಾಗಿ ಮೆಚ್ಚಿಕೊಂಡರು.

ಈ ನಿಟ್ಟಿನಲ್ಲಿ ಪತ್ರಿಕಾ ಮಾಧ್ಯಮ ಸಾರ್ವಜನಿಕ ಸೇವಾ ಹಕ್ಕಿಗಾಗಿ ನಡೆಸುತ್ತಿರುವ ಚರಿತ್ರಾರ್ಹ ಹೋರಾಟ ಇಂದಿಗೂ ಮುಂದುವರೆಯುತ್ತಿರುವುದನ್ನು ಕಾಣಬಹುದು.

ಆದರೆ, ಇಪ್ಪತ್ತನೆಯ ಶತಮಾನದ ವಿದ್ಯಮಾನಗಳಾದ ವಿದ್ಯುನ್ಮಾನ ಮಾಧ್ಯಮಗಳಿಗೆ ಬಂದಾಗ ಸಾರ್ವಜನಿಕ ಸೇವೆಯ ಪರಿಕಲ್ಪನೆಯಲ್ಲಿ ಭಾರಿ ಮಟ್ಟದ ಬದಲಾವಣೆಗಳಾಗಿರುವುದನ್ನು ನಾವು ಕಾಣಬಹುದು. ಸಿನಿಮಾ ಮಾಧ್ಯಮದ ಜೊತೆಗೆ, ರೇಡಿಯೋ ಹಾಗು ಟಿವಿ ಮಾಧ್ಯಮಗಳೂ ಕೂಡ ಸಾರ್ವಜನಿಕ ಸೇವೆಗಿಂತ ಮನರಂಜನೆಗೇ ಹೆಚ್ಚು ಒತ್ತು ನೀಡಿರುವುದನ್ನು ನಾವು ಕಾಣಬಹುದು. ಈ ಪರಿಸ್ಥಿತಿ ಮುಂದುವರೆದು ಈ ಮಾಧ್ಯಮಗಳಲ್ಲಿ ಮನರಂಜನೆಯೇ ಪ್ರಧಾನವಾಗಿರುವುದನ್ನು ಕಾಣಬಹುದು. ಆದರೂ ಸಾರ್ವಜನಿಕ ಸೇವಾ ಪ್ರಸಾರಕ್ಕಿರುವ ಅವಕಾಶಗಳು ಅಪರಿಮಿತ. ಪ್ರಪಂಚದೆಲ್ಲೆಡೆ ಸಾರ್ವಜನಿಕ ಸೇವಾ ಪ್ರಸಾರ ವ್ಯವಸ್ಥೆಗಳು ಈಗಲೂ ಇದ್ದು, ಅವುಗಳಲ್ಲಿ ಅನೇಕ ವ್ಯವಸ್ಥೆಗಳು, ಇತರರು ಹೆಚ್ಚಾಗಿ ಗಮನವಹಿಸದಂತಹ ಸುದ್ದಿ ಹಾಗು ವಿಶ್ಲೇಷಣಾತ್ಮಕ ಅನಿಸಿಕೆಗಳತ್ತ ಒತ್ತು ನೀಡುತ್ತಿವೆ.

ಸಮೂಹ ಸಂವಹನ ಪ್ರಕ್ರಿಯೆ ಸಂವಹನಕಾರ ಹಾಗು ಸ್ವೀಕೃತನ ನಡುವೆ ಒಂದು ಅವಿನಾಭಾವ ಸಂಬಂಧವನ್ನು ಕಲ್ಪಿಸಿದ್ದರೂ, ಅವರ ನಡುವೆ ಇರುವ ಭೌತಿಕ ಹಾಗು ಸಾಮಾಜಿಕ ಅಂತರ ಸಮೂಹ ಸಂವಹನವನ್ನು ವ್ಯಕ್ತಿಗತವಲ್ಲದ ಒಂದು ಪ್ರಕ್ರಿಯೆಯನ್ನಾಗಿಯೇ ಉಳಿಸುತ್ತದೆ. ಇದಲ್ಲದೆ, ವಸ್ತುನಿಷ್ಠತೆ, ತಟಸ್ಥತೆ ಹಾಗು ಭಾವನಾತ್ಮಕ ಸಂಬಂಧಗಳಿಂದ ದೂರವಿರುವ ಕಾರಣಕ್ಕಾಗಿ ಸಂವಹನ, ವ್ಯಕ್ತಿಗತವಾಗಿರದ ಸಂವಹನವಾಗಿ ಸಮರ್ಥಿಸಲ್ಪಡುತ್ತದೆ. ಇದೇ ಸಂದರ್ಭದಲ್ಲಿ ಸಮೂಹ ಸಂವಹನಕ್ಕೆ ಸಾರ್ವಜನಿಕರ ಮೇಲೆ ಯಾವುದೇ ರೀತಿಯ ಕಟ್ಟಳೆಗಳನ್ನು ಹೇರುವುದಾಗಲೀ, ಅಧಿಕಾರವನ್ನು ಚಲಾಯಿಸುವುದಾಗಲೀ ಸಾಧ್ಯವಿಲ್ಲ. ಜೊತೆಗೆ ಸಮೂಹವೊಂದನ್ನು ಸೃಜಿಸುವ ವ್ಯಕ್ತಿಗಳಿಂದ ಸಿಗುವ ಪ್ರತಿಕ್ರಿಯೆ ಕೂಡ ಭಿನ್ನವಾಗಿದ್ದು ಇದು ಸಂವಹನ ಪ್ರಕ್ರಿಯೆಯನ್ನು ಸಂಕೀರ್ಣಗೊಳಿಸುತ್ತದೆ. ಹೊಸ ಸಂವಹನ ತಂತ್ರಜ್ಞಾನಗಳು ಮಾಧ್ಯಮ ಸಂವಹನಕಾರರು ಹಾಗು ಸ್ವೀಕೃತರ ನಡುವಿನ ಅಂತರವನ್ನು ಮುಚ್ಚಿಹಾಕಲು ಬಹುವಾಗಿ ಪ್ರಯತ್ನಿಸಿವೆ. ಸಂವಹನಾತ್ಮಕ ಸಂಬಂಧಗಳನ್ನು ಆಧರಿಸಿ 'ಅಧಿಕಾರಯುತ ಪದ್ಧತಿ', 'ಒಡನಾಟದ ಪದ್ಧತಿ' ಹಾಗು 'ಸೇವಾ ಪದ್ಧತಿ'ಗಳೆಂಬ ಬದಲಿ ಸಂವಹನಗಳನ್ನು ಸಹ ಗುರುತಿಸಿ ಅಭಿವೃದ್ಧಿಪಡಿಸಲಾಗಿದೆ. ಅಧಿಕಾರಯುತ ಸಂವಹನ ಪದ್ಧತಿಯಲ್ಲಿ (Command mode of Communication) ಸಂವಹನಾತ್ಮಕ ಸಂಬಂಧಗಳು ಏರುಪೇರಾಗಿರುತ್ತದೆ.

ಇದಕ್ಕೆ ಪ್ರಮುಖ ಕಾರಣವೆಂದರೆ, ಸಂದೇಶ ಸ್ವೀಕರಿಸುವವರನ್ನು ಅಡಿಯಾಳು ಅಥವಾ ಆಶ್ರಿತರೆಂದು ಪರಿಗಣಿಸಲ್ಪಡುವುದು. ಇಂತಹ ಸಂವಹನ ಪದ್ಧತಿಯನ್ನು ರಾಜಕೀಯ, ವಾಣಿಜ್ಯ ಹಾಗು ಧಾರ್ಮಿಕ ಸಂವಹನಗಳಲ್ಲಿ ಬಹುವಾಗಿ ಬಳಸಿಕೊಳ್ಳಲಾಗುತ್ತದೆ. ಒಡನಾಟದ ಸಂವಹನ ಪದ್ಧತಿಯಲ್ಲಿ (Associated mode of Communication) ಸಮಾನತೆಯ ಹಾಗು ಪರಸ್ಪರ ಪೂರಕವಾದ ಸಂವಹನ ಸಂಬಂಧಗಳನ್ನು ಪೋಷಿಸಲಾಗುತ್ತದೆ. ಇಂತಹ ಸನ್ನಿವೇಶದಲ್ಲಿ ಅನಿಸಿಕೆಗಳು ಹಾಗು ನಂಬುಗೆಗಳನ್ನು ಸಂವಹನಕಾರರು ಹಾಗು ಸ್ವೀಕೃತರು ಪರಸ್ಪರ ಹಂಚಿಕೊಳ್ಳುತ್ತಾರೆ. ಸಂದೇಶ ಸ್ವೀಕರಿಸುವವರನ್ನು ಪ್ರಧಾನವಾಗಿ ಕಾಣಲಾಗುತ್ತದೆ. ಇಲ್ಲಿ ಯಾವುದೇ ಒಂದು ನಿರ್ದಿಷ್ಟ ಗುಂಪು ಅಥವಾ ಸಮುದಾಯ, ಒಂದು ನಿರ್ದಿಷ್ಟ ಮಾಧ್ಯಮಕ್ಕೆ ಗಮನಹರಿಸುವ ಪ್ರಕ್ರಿಯೆ ಸ್ವಯಂ ಪ್ರೇರಿತವಾಗಿರುತ್ತದೆ. 'ಸೇವಾ ಸಂವಹನ ಪದ್ಧತಿ' (Service mode of Communication) ಹೆಚ್ಚಾಗಿ ಮಾಧ್ಯಮಕ್ಕಿರುವ ಸಾರ್ವಜನಿಕ ಸೇವೆಯ ಸಾಮಾಜಿಕ ಹೊಣೆಗಾರಿಕೆಯ ಮೇಲೆ ಹೆಚ್ಚು ಒತ್ತು ನೀಡುತ್ತದೆ.

ಸಂವಹನ ತಜ್ಞ ಡೆನ್ನಿಸ್ ಮ್ಯಾಕ್ವೈಲ್ ಅನಿಸಿಕೆಯಂತೆ ಸಂವಹನಕಾರ ಹಾಗೂ ಸ್ವೀಕೃತನ ನಡುವೆ ಕಂಡು ಬರುವ ಅತ್ಯಂತ ಸಾಮಾನ್ಯ ಸಂಬಂಧವೆಂದರೆ 'ಸೇವಾ ಸಂವಹನ ಪದ್ಧತಿ'. ಇಲ್ಲಿ ಇಬ್ಬರೂ ಪರಸ್ಪರ ಪೂರಕವಾದ ಹಿತಾಸಕ್ತಿಗಳಿಂದ ಒಗ್ಗೂಡುತ್ತದೆ. ಇದು ಮಾರುಕಟ್ಟೆ ಸನ್ನಿವೇಶ ಅಥವಾ 'ಸಾಂಕೇತಿಕವಾದ ಸೇವೆಯೊಂದರ ಬೇಡಿಕೆ ಹಾಗು ಪೂರೈಕೆಯಂತಹ ಸನ್ನಿವೇಶಗಳಲ್ಲಿ ನಡೆಯುತ್ತದೆ.

ಸಮೂಹ ಸಂವಹನ ಮಾಧ್ಯಮಗಳು ಸುದ್ದಿ ಹಾಗೂ ಮನರಂಜನೆಯನ್ನು ಒದಗಿಸುವುದಕ್ಕಾಗಿ ಹಣ ಇಲ್ಲವೇ ಶ್ರೋತೃ ಗಣದ ಗಮನವನ್ನು ಬಹುವಾಗಿ ಬಯಸುತ್ತವೆ ಅಥವಾ ಸಂವಹನಕಾರರು ಹಾಗು ಶ್ರೋತೃಗಣದ ನಡುವೆ ಮಧ್ಯಸ್ಥಿಕೆ ವಹಿಸುತ್ತವೆ. ಇವರ ನಡುವಿನ ಸಂವಹನಾತ್ಮಕ ಸಂಬಂಧಗಳು ಒಂದೇ ರೀತಿಯದ್ದಾಗಿರದಿದ್ದರೂ ನೈತಿಕತೆಯ ಗುಣಲಕ್ಷಣಗಳು ಸೇವಾ ಸಂವಹನ ಪದ್ಧತಿಯ ಹೆಗ್ಗುರುತು ಎನ್ನಬಹುದು.

## 5.2 ಸಮೂಹ ಮಾಧ್ಯಮ ಮತ್ತು ಸಮಾಜ

ಯಾವುದೇ ಪ್ರಜಾಪ್ರಭುತ್ವ ವ್ಯವಸ್ಥೆ ಉಳಿದುಕೊಳ್ಳಲು ಸಮಾಜ ಹಾಗು ಸಮೂಹ ಸಂವಹನ ಮಾಧ್ಯಮಗಳ ನಡುವಿನ ಉತ್ತಮ ಬಾಂಧವ್ಯ ನಿರ್ಣಾಯಕ ಪಾತ್ರ ವಹಿಸುತ್ತದೆ. ಅದೇ ರೀತಿ ಮಾಧ್ಯಮ ಸಂಸ್ಥೆಗಳೂ ಕೂಡ. ಮಾಧ್ಯಮ ಹಾಗು ಸಾರ್ವಜನಿಕರಿಬ್ಬರೂ ಈ ಅನಿಸಿಕೆಗಳನ್ನು ಬಲವಾಗಿ ಸಮರ್ಥಿಸುತ್ತಾರೆ. ಸಾರ್ವಜನಿಕ ಸೇವೆಯಲ್ಲಿ ತೊಡಗಿಸಿಕೊಂಡಿರುವ ಮಾಧ್ಯಮಗಳಿಗೆ ವಿಚಾರವಂತಿಕೆ, ಸಾಮಾಜಿಕ ಜವಾಬ್ದಾರಿ ಹಾಗು ಸ್ವಾತಂತ್ರ್ಯಗಳಂತಹ ಧೋರಣಾತ್ಮಕ ನಿಲುವುಗಳು ಇರುತ್ತವೆ. ಮಾಧ್ಯಮ ಸ್ವಾತಂತ್ರ್ಯ ಅಪರಿಮಿತವೇನಲ್ಲ. ಅಗತ್ಯತೆಗನುಸಾರ ಕಾನೂನು ಬದ್ಧವಾಗಿ ಇರಿಸಲಾಗಿರುವ ಕಟ್ಟಳೆಗಳು ಸಮೂಹ ಮಾಧ್ಯಮಗಳಿಗೆ ಧನಾತ್ಮಕ ದಿಕ್ಕು ತೋರಿಸಲು ಅನುಕೂಲ ಕೂಡ. ಮಾಧ್ಯಮಗಳು ಇತರ ಸಾಮಾಜಿಕ ಸಂಸ್ಥೆಗಳೊಂದಿಗೆ ಔಪಚಾರಿಕ ಹಾಗು ಅನೌಪಚಾರಿಕ ಈ ಎರಡೂ ಸಂಬಂಧಗಳನ್ನು ಸಹ ಹೊಂದಿರುತ್ತವೆ.

ಸಮೂಹ ಮಾಧ್ಯಮ ಹಾಗು ಸಮಾಜದ ನಡುವಿನ ಸಂಬಂಧಗಳು ಪರಸ್ಪರ ಪೂರಕವಾಗಿರುವುದನ್ನು ನಾವು ಕಾಣಬಹುದು. ಅವುಗಳು ದಿಕ್ಕು ಹಾಗು ಪ್ರಭಾವಗಳೆರಡನ್ನು ಪರಸ್ಪರ ಹಂಚಿಕೊಳ್ಳುವುದರ ಜೊತೆಗೆ, ಆರ್ಥಿಕ ಸ್ವರೂಪದ ಸಂಬಂಧಗಳನ್ನು ಪರಸ್ಪರ ಹಂಚಿಕೊಳ್ಳುತ್ತವೆ. ಸಮಾಜದ ಅನೇಕ ಶಕ್ತಿಗಳು ಮಾಧ್ಯಮಗಳ ಮೇಲೆ ಹಿಡಿತ ಸಾಧಿಸಲು ಹಾಗು ಅವುಗಳ ಮೇಲೆ ಪ್ರಭಾವ ಬೀರಲು ಪ್ರಯತ್ನಿಸುತ್ತವೆ. ಹಾಗೆಯೇ ಮಾಧ್ಯಮಗಳು ಮಾಹಿತಿಗಾಗಿ ಸಮಾಜವನ್ನು ಜಾಲಾಡುತ್ತವೆ ಹಾಗು ಅದರ ಸ್ಥಿತಿಗತಿಯನ್ನು ಪ್ರತಿಫಲಿಸುತ್ತವೆ. ಆದರೆ ಮಾಧ್ಯಮಗಳು ಯಾವಾಗಲೂ ಸಾಮಾಜಿಕ ಮೇಲ್‌ಸ್ತರದ ಮೇಲೆ ಹೆಚ್ಚು ಅವಲಂಬಿತವಾಗುತ್ತದೆ. ಆದುದರಿಂದಲೇ ಮಾಧ್ಯಮ - ಅಧಿಕಾರ ಹಾಗು 'ಶಕ್ತಿಕೇಂದ್ರ'ಗಳಿಗೆ ಹತ್ತಿರವಾಗಲು ಬಯಸುತ್ತದೆ. ಈ ಕಾರಣಕ್ಕಾಗಿ ಮಾಧ್ಯಮ ತನ್ನ ಪ್ರಸ್ತುತದ ಹಾಗು ಭವಿಷ್ಯದ ಶ್ರೋತೃಗಣವನ್ನು ಕಳೆದುಕೊಳ್ಳಲು ಅವಕಾಶವೀಯುತ್ತದೆ.

## 5.3 ವಸ್ತು ವಿಷಯಗಳ ವಿತರಣೆ

ವಸ್ತುವಿಷಯ, ಸುದ್ದಿ ಹಾಗು ಮಾಹಿತಿ ವಿತರಣೆಯ ಮೂಲಕ ಸಮೂಹ ಮಾಧ್ಯಮಗಳು ಮಹತ್ತರವಾದ ಸಾರ್ವಜನಿಕ ಸೇವೆಯನ್ನು ಸಲ್ಲಿಸುತ್ತವೆ. ಮಾಧ್ಯಮಗಳು ಸಮರ್ಪಿಸುವ ಎಲ್ಲ ವಸ್ತು ವಿಷಯಗಳು, ಸುದ್ದಿ ಹಾಗು ಮಾಹಿತಿ - ಸಮೂಹದ ಬೇಡಿಕೆ ಹಾಗು ಬಯಕೆಗಳಿಗೆ ಬಹುಮಟ್ಟಿಗೆ ನೇರವಾಗಿ ಅಥವಾ ಪರೋಕ್ಷವಾಗಿ ಸಂಬಂಧಿಸಿರುತ್ತವೆ. ಸಮೂಹ ಸಂವಹನಕಾರರು ಈ ಅಂಶಗಳನ್ನು ಮನಗಂಡು ಕಾರ್ಯನಿರ್ವಹಿಸುವ ಅಗತ್ಯವಿರುತ್ತದೆ. ಬಹಳಷ್ಟು ಸಾರಿ ಸಮೂಹವೊಂದರ ಸದಸ್ಯರೇ ತಮ್ಮ ಬಯಕೆ, ಆಶೋತ್ತರಗಳು ಹಾಗು ಬೇಡಿಕೆಗಳನ್ನು ಅರ್ಥಮಾಡಿಕೊಳ್ಳಲು ಬೆಳಕು ಚೆಲ್ಲುತ್ತಾರೆ. ಸಾಮಾನ್ಯವಾಗಿ ಸಂಬಂಧಿಸಿದ ವಿವರಗಳನ್ನು ಸಮೂಹ ಸಂವಹನಕಾರರು ಬೆಳೆಸಿಕೊಂಡಿರುವ ಮಾಹಿತಿ ಮೂಲಗಳಿಂದ ಪಡೆಯಲಾಗುತ್ತದೆ. ಶ್ರೋತೃಗಣ ಸಮೀಕ್ಷೆಗಳಿಂದಲೂ ವಿವರಗಳನ್ನು ಪಡೆಯಲಾಗುತ್ತದೆ. ಸಾರ್ವಜನಿಕ ಪ್ರತಿಕ್ರಿಯೆ ಕೂಡ ವಿವರಗಳನ್ನು ನೀಡುತ್ತದೆ. ಆದರೆ ಸಮೂಹ ಅಥವಾ ಸಾರ್ವಜನಿಕರಿಗೆ ಒಂದು ನಿರ್ದಿಷ್ಟವಾದ ಹಾಗು ಔಪಚಾರಿಕವಾದ ಸ್ವರೂಪವಿರದ ಕಾರಣ ಹಾಗು ಸಮೂಹ ಮಾಧ್ಯಮಗಳಿಗೆ ತೀರ್ಮಾನಗಳನ್ನು ತೆಗೆದುಕೊಳ್ಳುವ ಶಕ್ತಿಯಿರುವ ಕಾರಣ, ಅವುಗಳು ಸಾರ್ವಜನಿಕರನ್ನು ಬಹುಮಟ್ಟಿಗೆ ನಿಯಂತ್ರಣಕ್ಕೊಳಪಡಿಸಿ ತಮಗೆ ಸರಿಯೆಂದು ತೋಚಿದ ದಾರಿಯಲ್ಲಿ ಸಾಗುವಂತಹ ಸನ್ನಿವೇಶವನ್ನು ನಿರ್ಮಿಸುತ್ತವೆ.

ಆದರೆ ಮಾಧ್ಯಮ ಪರಿಣಿತರ ಪ್ರಕಾರ ಸಮೂಹ ಮಾಧ್ಯಮ ಹಾಗು ಸಮಾಜದ ನಡುವಿನ ಈ ರೀತಿಯಾದ ಸಂಬಂಧಗಳು, ಸಾಮಾಜಿಕ ಸಂಸ್ಥೆಗಳನ್ನು ನಿಯಂತ್ರಿಸುವ ಬದಲಾಗಿ ಅವುಗಳ ಮೇಲೆ ಹೆಚ್ಚು ಹೆಚ್ಚು ಅವಲಂಬಿತವಾಗುವಂತೆ ಮಾಡುತ್ತವೆ. ಆದರೆ ಈ ಸಂಬಂಧಗಳು ಸಮಾಜದಿಂದ ಸಮಾಜಕ್ಕೆ ಹಾಗು ಸನ್ನಿವೇಶದಿಂದ ಸನ್ನಿವೇಶಕ್ಕೆ ಬದಲಾಗುತ್ತವೆ.

ಸಾರ್ವಜನಿಕ ಸೇವೆಯಲ್ಲಿ ಮಾಧ್ಯಮದ ಪಾತ್ರವನ್ನು ನಿರ್ಣಯಿಸುವಾಗ ಮಾಧ್ಯಮಗಳ ಉದ್ದೇಶಗಳನ್ನು ಬೇರೆ ಬೇರೆ ತಜ್ಞರು ತಮ್ಮದೇ ರೀತಿಯಲ್ಲಿ ವಿಶ್ಲೇಷಿಸುತ್ತಾರೆ. ಈ ನಿಟ್ಟಿನಲ್ಲಿ ಕಂಡು ಬರುವ ಮೊದಲ ಪ್ರಮುಖ ಅಂಶವೆಂದರೆ, ಅಧಿಕಾರ ಸಂಬಂಧಗಳನ್ನು ಗುರುತಿಸುವ ಮಾಹಿತಿ ಪೂರೈಕೆ. ನಂತರದ್ದು ಸಹ ಸಂಬಂಧದ ಚಟುವಟಿಕೆ. ಇಲ್ಲಿ ಮಧ್ಯಮ ಸಾರ್ವಜನಿಕ ಮಹತ್ವದ ಘಟನಾವಳಿಗಳು, ವಸ್ತುವಿಷಯವನ್ನು ವಿವರಿಸುವ, ವಿಶ್ಲೇಷಿಸುವ, ಅರ್ಥೈಸುವ ಹಾಗು ಅನಿಸಿಕೆ - ಅಭಿಪ್ರಾಯಗಳನ್ನು ನೀಡುವ ಕಾರ್ಯ ನಿರ್ವಹಿಸುತ್ತದೆ. ಸಾಮಾಜಿಕ ಒಡನಾಟ, ಒಟ್ಟಾಭಿಪ್ರಾಯ ರೂಪಿಸುವುದು, ಸ್ಥಿರೀಕರಿಸಲ್ಪಟ್ಟ ಅಧಿಕಾರ ಹಾಗು ಕಾನೂನಿಗೆ ಮನ್ನಣೆ, ವಿಷಯಗಳ ಹಾಗು ಘಟನಾವಳಿಗಳಿಗೆ ಆದ್ಯತೆ ಮುಂತಾದ ವಿಷಯಗಳು ಸಹ ಸಂಬಂಧದ ಚಟುವಟಿಕೆಯಡಿಯಲ್ಲಿ ಬರುತ್ತವೆ. ಸಂಸ್ಕೃತಿ ಹಾಗು ಮೌಲ್ಯಾಧಾರಿತ ವ್ಯವಸ್ಥೆಗಳಿಗೆ ನಿರಂತರತೆಯನ್ನೊದಗಿಸುವುದು ಕೂಡ ಅಷ್ಟೇ ಪ್ರಮುಖವಾದ ವಿಷಯವಾಗಿ ಹೊರಹೊಮ್ಮುತ್ತದೆ. ಮನರಂಜನೆಯನ್ನೊದಗಿಸುವ ಪ್ರಮುಖ ಉದ್ದೇಶವೆಂದರೆ ಸಮೂಹಕ್ಕೆ ಮಾನಸಿಕ ವಿಶ್ರಾಂತಿ ನೀಡುವುದು ಹಾಗು ಸಾಮಾಜಿಕ ಉದ್ದೇಶಗಳು ಹಾಗು ಭಿನ್ನತೆಗಾಗಿ ಸಹ ಸಾರ್ವಜನಿಕ ಅನಿಸಿಕೆಯನ್ನು ಒಗ್ಗೂಡಿಸುವಲ್ಲಿ ಸಾರ್ವಜನಿಕ ಸೇವೆಯನ್ನು ಧ್ಯೇಯವಾಗಿಟ್ಟುಕೊಂಡ ಮಾಧ್ಯಮಗಳು ಕಾರ್ಯನಿರ್ವಹಿಸುತ್ತವೆ.

ಸಮೂಹ ಮಾಧ್ಯಮ ಸಾರ್ವಜನಿಕ ಶಿಕ್ಷಣಕ್ಕೆ ಒತ್ತು ನೀಡುವ ಮೂಲಕ ಕೃಷಿ, ಆರೋಗ್ಯ, ಕುಟುಂಬ ಕಲ್ಯಾಣ ಹಾಗು ಜನಸಂಖ್ಯೆ ನಿಯಂತ್ರಣ ಹಾಗು ಔದ್ಯಮಿಕ ಕ್ಷೇತ್ರಗಳಲ್ಲಿ ಸಫಲತೆಯನ್ನು ಕಾಣಲು ಅವಕಾಶ ಕಲ್ಪಿಸಬೇಕಾಗುತ್ತದೆ. ಮಧ್ಯಸ್ಥಿಕೆ ವಹಿಸಿದಂತಹ ಸಾಮಾಜಿಕ ಬದಲಾವಣೆ ಸಾಂಪ್ರದಾಯಿಕ ಸಾಮಾಜಿಕ ವ್ಯವಸ್ಥೆಗಳ ಆಧುನೀಕರಣಕ್ಕೆ ಹಾಗು ಸರ್ವತೋಮುಖ ಅಭಿವೃದ್ಧಿಗೆ ನಾಂದಿ ಹಾಡುತ್ತದೆ.

ಮಾಧ್ಯಮ ಸಮೂಹವೊಂದನ್ನು ತನ್ನ ಉತ್ತಮ ಭವಿಷ್ಯವೊಂದಕ್ಕೆ ಅಡಿಪಾಯ ಹಾಕುವ ಮೂಲಕ ಸಾಮಾಜಿಕ ಏಳಿಗೆಗೆ ನಾಂದಿ ಹಾಡಲು, ಅದನ್ನು ಪುನಶ್ಚೇತನಗೊಳಿಸುವ ಹಾಗು ತಯಾರು ಮಾಡುವ ಕಾರ್ಯ ನಿರ್ವಹಿಸಬೇಕಾಗುತ್ತದೆ. ಬಹುಮುಖಿ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಅಭಿವೃದ್ಧಿಪಡಿಸಿ ಉಳಿಸಿಕೊಳ್ಳುವ ಜವಾಬ್ದಾರಿ ಸಾರ್ವಜನಿಕ ಸೇವಾ ಮಾಧ್ಯಮಗಳ ಮೇಲಿರುತ್ತದೆ. ವಿಭಿನ್ನ ದೃಷ್ಟಿಕೋನಗಳು, ಭಿನ್ನಾಭಿಪ್ರಾಯ, ಸಾಂಸ್ಕೃತಿಕ ಹಾಗು ಜನಾಂಗೀಯ ಬಹುಮುಖಿ ವ್ಯವಸ್ಥೆಗಳನ್ನು ತಾಳಿಕೊಳ್ಳುವುದಷ್ಟೇ ಅಲ್ಲದೆ, ಅವುಗಳನ್ನು ರಕ್ಷಿಸುವ ಹಾಗು ಉಳಿಸಿಕೊಳ್ಳುವ ಪ್ರಯತ್ನಗಳನ್ನೂ ಸಹ ಅವು ಮಾಡಬೇಕಾಗುತ್ತದೆ. ಸಮಾಜದ ಅಲ್ಪಸಂಖ್ಯಾತ ಹಾಗು ಕಡೆಗಣಿಸಲ್ಪಟ್ಟ ವರ್ಗಗಳನ್ನು ಅವುಗಳ ಹಿತಾಸಕ್ತಿಗಳನ್ನು ಸಮೂಹ ಮಾಧ್ಯಮಗಳು ಕಾಪಾಡುತ್ತವೆ. ಜೊತೆಗೆ, ವಿಭಿನ್ನ ಸಂಸ್ಕೃತಿಗಳ ಸಹಬಾಳ್ವೆಯನ್ನು ಸಾಧ್ಯವಾಗಿಸುವ ಜವಾಬ್ದಾರಿಯೂ ಕೂಡ ಅವುಗಳ ಮೇಲಿರುತ್ತದೆ.

ಭಾರತದಂತಹ ರಾಷ್ಟ್ರದಲ್ಲಿ ವಸ್ತುವಿಷಯ ಹಾಗು ಆಸಕ್ತಿಗಳಲ್ಲಿ ಏಕರೂಪತೆ ಕಾಣುವುದು ಅಸಾಧ್ಯದ ಮಾತು. ಪರಿಸರ ನಾಶದಿಂದ ಮೊದಲಾಗಿ ಅಭಿವೃದ್ಧಿ ಹಾಗು ಹಣಗಳಿಕೆ ಹೀಗೆ ವಿಷಯಗಳು ಯಾವುದೇ ಇರಲಿ, ಮಾಧ್ಯಮಗಳು ಗಮನಹರಿಸುವುದು ಅತ್ಯಗತ್ಯ. ನೀರಾವರಿ ಯೋಜನೆಯೊಂದರ ಜಾರಿಗಾಗಿ ಅಥವಾ ಸಾರ್ವಜನಿಕ ಜೀವನದಲ್ಲಿ ಭ್ರಷ್ಟಾಚಾರ ತೊಡೆದು ಹಾಕುವ ಪ್ರಯತ್ನಗಳಿಗೆ ಮಾಧ್ಯಮ ಬೆಂಬಲ ಅಗತ್ಯವಾಗಿ ಬೇಕಾಗುತ್ತದೆ.

ಪ್ರಸ್ತುತದಲ್ಲಿ ಸಾರ್ವಜನಿಕ ಕುಂದು ಕೊರತೆಗಳು, ಜನಸಂಖ್ಯಾ ನಿಯಂತ್ರಣ, ಸಮಾಜದ ಶಕ್ತಿಹೀನ ಸಮೂಹದ ಸ್ಥಿತಿಗತಿ ಮಹಿಳಾ ಸಬಲೀಕರಣ, ಬಾಲಕಾರ್ಮಿಕ ಪದ್ಧತಿ, ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣ, ಸಾಮಾಜಿಕ ಗುರಿ ಸಾಧನೆಗಳಂತಹ ವಿಷಯಗಳು ಸಾರ್ವಜನಿಕ ಸೇವಾ ಮಾಧ್ಯಮದ ಬಹು ಮುಖ್ಯ ಅಂಶಗಳಾಗಿ ಹೊರಹೊಮ್ಮಿದೆ. ಈ ಪಟ್ಟಿ ಇಲ್ಲಿಗೇ ಮುಗಿಯುವುದಿಲ್ಲ. ಪಂಚಾಯತ್ ರಾಜ್ ಮತ್ತು ಅಧಿಕಾರ ವಿಕೇಂದ್ರೀಕರಣ, ಅಧಿಕಾರಶಾಹಿ ವಿರುದ್ಧದ ಹೋರಾಟ, ವಿದ್ಯುನ್ಮಾನ ಆಡಳಿತ, ಮೂಲಭೂತ ಸೌಕರ್ಯಗಳ ಅಭಿವೃದ್ಧಿ, ಸ್ವಚ್ಛ ಕುಡಿಯುವ ನೀರು, ಪೌಷ್ಟಿಕತೆಗಳಂತಹ ವಿಷಯಗಳೂ ಕೂಡ ಸಾರ್ವಜನಿಕ ಸೇವಾ ವ್ಯಾಪ್ತಿಗೆ ಬರುತ್ತವೆ.

## 5.4 ಸಾರ್ವಜನಿಕ ಸೇವಾ ಮಾಧ್ಯಮ

ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ಮುದ್ರಣ ಮಾಧ್ಯಮದಂತೆ ವಿದ್ಯುನ್ಮಾನ ಮಾಧ್ಯಮ ಸಹ ಸಾರ್ವಜನಿಕ ಸೇವಾವಲಯದಲ್ಲಿ ಬಹು ಮುಖ್ಯ ಪಾತ್ರವನ್ನು ನಿರ್ವಹಿಸುತ್ತದೆ. ಲಾಭಕೋರತನ ಹಾಗು ವಾಣಿಜ್ಯೀಕರಣದ ಈ ದಿನಗಳಲ್ಲೂ ಸಾರ್ವಜನಿಕ ಸೇವಾ ಪ್ರಸಾರ ವ್ಯವಸ್ಥೆಗಳೂ ಜೀವಂತವಾಗಿರುವುದನ್ನು ನಾವು ಕಾಣಬಹುದು.

ಹಲವಾರು ದೇಶಗಳಲ್ಲಿ ಸರ್ಕಾರಿ ವಲಯದ ಪ್ರಸಾರ ವ್ಯವಸ್ಥೆಯನ್ನು ಇಂದಿಗೂ ಸಾರ್ವಜನಿಕ ಸೇವಾ ಪ್ರಸಾರ ವ್ಯವಸ್ಥೆಯೆಂದಲೇ ಗುರುತಿಸಲಾಗುತ್ತದೆ. ಆದರೆ ತಂತ್ರಜ್ಞಾನ, ಜಾಗತೀಕರಣ ಹಾಗು ಮಾರುಕಟ್ಟೆ ಶಕ್ತಿಗಳು ಮಾಧ್ಯಮಗಳ ಸ್ವರೂಪ ಹಾಗು ಗುಣಲಕ್ಷಣಗಳಿಗೆ ಭಾರಿ ಬದಲಾವಣೆ ತಂದಿದ್ದು, ಅವುಗಳ ಸಾರ್ವಜನಿಕ ಸೇವಾ ಪ್ರಸಾರದ ಸ್ವರೂಪವನ್ನು ಆಮೂಲಾಗ್ರವಾಗಿ ಬದಲಾಯಿಸಿದೆ.

ದಕ್ಷಿಣ ಏಷ್ಯಾ ರಾಷ್ಟ್ರಗಳಲ್ಲಿ ಅದರಲ್ಲೂ ಭಾರತದಲ್ಲಿ ಬಹು ದೀರ್ಘ ಕಾಲದವರೆಗೆ ಪ್ರಸಾರ ವ್ಯವಸ್ಥೆಗಳು ಸರ್ಕಾರಿ ಬಿಗಿಹಿಡಿತದಲ್ಲಿದ್ದವು. ಅವುಗಳಿಗೆ ಸಂಪನ್ಮೂಲದ ಭಾರಿ ಕೊರತೆಯಿದ್ದರೂ, ಪ್ರಸಾರ ವ್ಯವಸ್ಥೆಗಳು ಕುಂಟುತ್ತಾ ಸಾಗಿದವು. ಪ್ರಸಾರ ಮಾಧ್ಯಮ ಸರ್ಕಾರಿ ಧ್ವನಿಯೆನ್ನುವ ಭಾವನೆ ಹಾಗು ಅರ್ಥೈಸುವಿಕೆಯನ್ನು ಹೋಗಲಾಡಿಸಲು ನಡೆಸಿದ ಪ್ರಯತ್ನಗಳೆಲ್ಲವೂ ವಿಫಲವಾದವು. ಅಲ್ಲದೆ, ಸರ್ಕಾರಿ ಪ್ರಸಾರ ಮಾಧ್ಯಮ ಪ್ರತಿಧ್ವನಿಸುತ್ತದೆ ಎಂದು ನಂಬಲಾದ ಜನಸಾಮಾನ್ಯರ ಪ್ರತಿಕ್ರಿಯೆಗಳಾವುವೂ ನಿಜವಾದ ಚಿತ್ರಣಗಳನ್ನು ನೀಡುತ್ತಿರಲಿಲ್ಲ. ಆದರೂ, ಈ ವ್ಯವಸ್ಥೆಗಳು ರಾಷ್ಟ್ರೀಯ ಗುರುತೊಂದನ್ನು ನಿರ್ಮಿಸುವಲ್ಲಿ ಸಕ್ರಿಯವಾಗಿ ಕಾರ್ಯನಿರ್ವಹಿಸುತ್ತಿದ್ದವು ಎನ್ನಬಹುದು. ಅನೇಕರು ಸಾರ್ವಜನಿಕ ಪ್ರಸಾರ ವ್ಯವಸ್ಥೆಯನ್ನು ಪ್ರಜೆಗಳ ಮೇಲೆ ಬಲವಂತವಾಗಿ ಹೇರಲಾಗುವ ಭಾವನಾ ರೂಪಗಳ ಪ್ರತೀಕ ಎಂದು ಭಾವಿಸುತ್ತಾರೆ. ಮಾಧ್ಯಮಗಳ ಮೇಲಿನ ಸರ್ಕಾರಿ ಹಿಡಿತದ ಬಹಳ ಪ್ರಬಲವಾಗಿವೆ. ಸರ್ಕಾರಿ ಒಡೆತನದ ಮಾಧ್ಯಮ ಸಂಸ್ಥೆಗಳೂ ಕೂಡ ಪ್ರಬಲವಾಗಿದ್ದು ಸಾರ್ವಜನಿಕ ಆಯ್ಕೆಯನ್ನು ಬಹುವಾಗಿ ನಿರ್ದೇಶಿಸುತ್ತದೆ. ಆದರೆ ಸರ್ಕಾರಿ ಹಿಡಿತದಲ್ಲಿರುವ ಮಾಧ್ಯಮ ಸಂಸ್ಥೆ 'ನಂಬಿಕೆ'ಯ ಸಮಸ್ಯೆಯನ್ನು ನಿರಂತರವಾಗಿ ಎದುರಿಸುತ್ತದೆ.

ಭಾರತದಲ್ಲಿಯೂ ಕೂಡ ಪ್ರಸಾರ ಮಾಧ್ಯಮಗಳ ಸ್ವಾಯತ್ತತೆ ಕುರಿತಾಗಿ ಹಲವಾರು ದಶಕಗಳವರೆಗೆ ಚರ್ಚೆ ನಡೆದುದು ಫಲವಾಗಿ, 1997 ರಲ್ಲಿ ಸ್ವಾಯತ್ತ ಪ್ರಸಾರ ವ್ಯವಸ್ಥೆಯಾದ 'ಪ್ರಸಾರ ಭಾರತಿ' ಸ್ಥಾಪಿಸಲ್ಪಟ್ಟಿತು. ಆದರೆ ಉಪಗ್ರಹ ವಾಹಿನಿಗಳ ಹಠಾತ್ ವೃದ್ಧಿ ಪ್ರಸಾರ ಮಾಧ್ಯಮಗಳ ಸ್ವರೂಪವನ್ನು ಬದಲಾಯಿಸಿದ್ದರಿಂದ ಸ್ವಾಯತ್ತತೆಯ ನಿಜವಾದ ಫಲ ದಕ್ಕದಾಗಿದೆ. ಆರ್ಥಿಕ ಸುಧಾರಣೆಗಳೂ ಕೂಡ ಈ ಬದಲಾವಣೆ ಬಹುಮಟ್ಟಿಗೆ ಕಾರಣವಾದವು. ಟಿವಿ ಜಾಹೀರಾತು ಪ್ರಸಾರ ವ್ಯವಸ್ಥೆಯ 'ಜೀವದ್ರವ'ವಾಗಿ ಪರಿವರ್ತನೆಗೊಂಡಿತು. ಹೊಸ ಉಪಗ್ರಹ ವಾಹಿನಿಗಳು ಪ್ರಾರಂಭಗೊಳ್ಳುವ ಮುನ್ನ ದೂರದರ್ಶನ ಟಿವಿ ಜಾಹೀರಾತುಗಳ ಆದಾಯದ ಮೇಲೆ ತನ್ನ ಅಧಿಪತ್ಯ ಸಾಧಿಸಿತ್ತು. ಉಪಗ್ರಹ ಸಂಪರ್ಕವನ್ನಾಧರಿಸಿದ ತನ್ನದೇ ಭೂ ಪ್ರಸಾರಕ ಜಾಲ ಹಾಗು ಅನೇಕ ಪ್ರಾದೇಶಿಕ ಭಾಷಾ ವಾಹಿನಿಗಳಿಂದಾಗಿ ದೂರದರ್ಶನಕ್ಕೆ ಮಂಚೂಣಿಯಲ್ಲಿರಲು ಸಾಧ್ಯವಾಯಿತು.

ಸಾರ್ವಜನಿಕ ಸೇವಾ ಪ್ರಸಾರಕ್ಕೆ ತನ್ನದೇ ಆದ ಅನುಕೂಲಗಳು ಹಾಗು ಅನಾನುಕೂಲಗಳು ಇವೆ. ಅದು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸಲು ಹಾಗು ಬದುಕುಳಿಯಲು ಆರ್ಥಿಕ ಸಂಪನ್ಮೂಲ ಅತ್ಯಗತ್ಯ. ಸಾರ್ವಜನಿಕ ಸೇವಾ ಪ್ರಸಾರಕ್ಕೆ ಅಗತ್ಯವಾದ ಆರ್ಥಿಕ ಸಂಪನ್ಮೂಲದ ಕ್ರೋಢೀಕರಣ ಪ್ರಕ್ರಿಯೆ ಸಹ ಹಲವಾರು ವರ್ಗಗಳಿಂದ ಚರ್ಚೆಗೊಳಪಡುತ್ತಿರುವ ವಿಷಯ. ಇಂದಿಗೂ ಬಹುತೇಕ ಧೋರಣೆ ನಿರೂಪಕರಿಗೆ ಸಾರ್ವಜನಿಕ ಸೇವಾ ಪ್ರಸಾರ ಶಿಕ್ಷಣ ಹಾಗು ಅಭಿವೃದ್ಧಿ ವಿಷಯಗಳಿಗಷ್ಟೇ ಸೀಮಿತ. ಇದು ಪರಿಪೂರ್ಣ ರಾಷ್ಟ್ರೀಯ ಅಭಿವೃದ್ಧಿಗೆ ಪೂರಕ ಪಾತ್ರ ನಿರ್ವಹಿಸಬೇಕೆಂಬುದೇ ಅವರ ಅಭಿಲಾಷೆಯಾಗಿರುತ್ತದೆ. ಪ್ರಾಥಮಿಕ ಶಿಕ್ಷಣ ಹಾಗು ಆರೋಗ್ಯ ಕ್ಷೇತ್ರಗಳಲ್ಲಿ ಸರ್ಕಾರ ಸಹಾಯಧನವನ್ನು ವಿನಿಯೋಗಿಸುವಂತೆ ಸಾರ್ವಜನಿಕ ಸೇವಾ ಪ್ರಸಾರ ಕ್ಷೇತ್ರದಲ್ಲಿಯೂ ಪೂರ್ಣ ಪ್ರಮಾಣದ ಆರ್ಥಿಕ ಸಹಾಯ ಹಸ್ತ ಚಾಚಬೇಕೆನ್ನುವುದು ಪ್ರಬಲವಾಗಿ ಬೇರೂರಿರುವ ಅನಿಸಿಕೆ. ಮಾರುಕಟ್ಟೆ ನಿರ್ದೇಶಕ ತತ್ವಗಳು ಹಾಗು ಶಕ್ತಿಗಳು ಪ್ರಸಾರ ವ್ಯವಸ್ಥೆಗಳನ್ನು ನಿಯಂತ್ರಿಸಬೇಕೆನ್ನುವ ಧೋರಣೆಗಳಿಗೆ ಭಾರತದಲ್ಲಿ ಯಾವುದೇ ಬೆಂಬಲ ಇಲ್ಲವೆನ್ನಬಹುದು. ಕೇಂದ್ರ ಮಾಹಿತಿ ಮತ್ತು ಪ್ರಸಾರ ಖಾತೆಯ ಆಯವ್ಯಯದ ಅಂಕಿ ಅಂಶಗಳಿಂದ ಸಾರ್ವಜನಿಕ ಪ್ರಸಾರ ವ್ಯವಸ್ಥೆಗೆ ಸಂಪನ್ಮೂಲ ಕ್ರೋಢೀಕರಣ ನಿಜವಾಗಿರುವುದು ತಿಳಿದು ಬರುತ್ತದೆ.

ಭಾರತದ ಸ್ವಾಯತ್ತತೆ ಪ್ರಸಾರ ವ್ಯವಸ್ಥೆ ನಿಜವಾಗಿ ಸ್ವತಂತ್ರವಾಗಿರಲು ಸ್ವಯಂ ಅವಲಂಬಿಯಾಗಲು ಸಾಧ್ಯವಾಗುವಂತೆ ಕ್ರೋಢೀಕರಿಸಲು ಪರವಾನಗಿ ಶುಲ್ಕ, ಷೇರು ಬಂಡವಾಳ, ಸಾರ್ವಜನಿಕ ಬಂಡವಾಳಗಳ ಮೂಲಕ ಪ್ರಯತ್ನಿಸಬೇಕೆಂಬುದು ಹಲವರ ಅಭಿಪ್ರಾಯ. ಆದರೆ, ಈ ನಿಟ್ಟಿನಲ್ಲಿ ತೆಗೆದುಕೊಳ್ಳಲಾಗುವ ತೀರ್ಮಾನಗಳು ನೇರವಾಗಿ ರಾಜಕೀಯ ಹಿತಾಸಕ್ತಿಗಳನ್ನು ಅವಲಂಬಿಸಿರುತ್ತವೆ. ವಿವಿಧ ನಮೂನೆಯ ಮಾಧ್ಯಮ ಒಡೆತನದ ಅಡಿಯಲ್ಲಿ ಸಾರ್ವಜನಿಕ ಸೇವಾ ಪ್ರಸಾರದ ಧೋರಣೆಗಳೂ, ಈ ಪ್ರಕ್ರಿಯೆಯಾಗಿ ಹಣ ಹೊಂದಿಸುವ ವಿಧಾನಗಳೂ ಬದಲಾಗುತ್ತಿವೆ. ಖಾಸಗಿ ಟಿವಿ ಹಾಗು ರೇಡಿಯೋ ವಾಹಿನಿಗಳೂ ಸಂಪೂರ್ಣ ವಾಣಿಜ್ಯ ಹಿತಾಸಕ್ತಿಗಳನ್ನು ಹೊಂದಿದ್ದು ಅವುಗಳ ಸಾರ್ವಜನಿಕ ಸೇವಾ ಚಟುವಟಿಕೆಗಳು ಕೆಲವು ಸಾಮಾಜಿಕ ಮತ್ತು ಸಮುದಾಯ ಜಾಹೀರಾತುಗಳಿಗೆ ಸೀಮಿತವಾಗಿರ ಬಹುದು. ಮಾದಕ ವ್ಯಸನ, ಏಡ್ಸ್, ಸಾಂಕ್ರಾಮಿಕ ರೋಗಗಳು, ಶಿಕ್ಷಣ ಕುರಿತಾದ ವಿವರಗಳು - ಸಂದೇಶಗಳು ಇವುಗಳಿಂದ ನೀಡಲ್ಪಟ್ಟರೂ, ಅವುಗಳ ವಾಣಿಜ್ಯ ಉದ್ದೇಶಗಳು ಇಂತಹ ಚಟುವಟಿಕೆಗಳನ್ನು ಕನಿಷ್ಠ ಪ್ರಮಾಣದಲ್ಲಿರುವಂತೆ ನೋಡಿಕೊಳ್ಳುತ್ತವೆ. ಅನೇಕ ಸಾರಿ ಖಾಸಗಿ ಪ್ರಸಾರ ವ್ಯವಸ್ಥೆಗಳಲ್ಲಿ ಇಂತಹ ಚಟುವಟಿಕೆಗಳು ಇಲ್ಲವೇ ಇಲ್ಲವೆನ್ನಬಹುದು.

ಇದಕ್ಕೆ ತದ್ವಿರುದ್ಧವಾಗಿ ಸರ್ಕಾರಿ ಹಿಡಿತದಲ್ಲಿರುವ ಮಾಧ್ಯಮಗಳು ಕೇವಲ ವಾಣಿಜ್ಯ ಸಂಪನ್ಮೂಲ ಕ್ರೋಢೀಕರಿಸುವಂತಹ ಚಟುವಟಿಕೆಗಳಲ್ಲಿ ತೊಡಗಲು ಸಾಧ್ಯವಿಲ್ಲ. ಸರ್ಕಾರಿ ಸಂಪನ್ಮೂಲ ಬಳಕೆಯೊಂದಿಗೆ ತಮ್ಮೆಲ್ಲಾ ಚಟುವಟಿಕೆಗಳಲ್ಲಿ ಅದಕ್ಕೆ ಅವು ಉತ್ತರದಾಯಿಗಳಾಗುತ್ತವೆ. ಆದರೆ ಇದು ನಿಧಾನವಾಗಿ ಬದಲಾಗುತ್ತಿದ್ದು ಸಾರ್ವಜನಿಕ ಸೇವಾ ವಸ್ತು ವಿಷಯಗಳನ್ನು ನೀಡುವುದಕ್ಕೂ ಹಾಗು ವಾಣಿಜ್ಯ ಸಂಪನ್ಮೂಲ ಕ್ರೋಢೀಕರಣ ಪ್ರಕ್ರಿಯೆಗಿರುವ ಅಂತರ ಕ್ರಮೇಣ ನಶಿಸುತ್ತಿದೆ. ಉದಾಹರಣೆಗೆ, ಬಿಬಿಸಿ ತನ್ನ ಸ್ಥಳೀಯ ಪ್ರಸಾರ ವ್ಯವಸ್ಥೆಗೆ ಯಾವುದೇ ರೀತಿಯ ವಾಣಿಜ್ಯ ಸಂಪನ್ಮೂಲ ಕ್ರೋಢೀಕರಣಕ್ಕೆ ಮುಂದಾಗದಿದ್ದರೂ, ಇತರ ಪ್ರಸಾರಗಳಲ್ಲಿ ವಾಣಿಜ್ಯ ಸಂಪನ್ಮೂಲ ಹರಿವಿಗೆ ತನ್ನದೇ ವ್ಯವಸ್ಥೆಯನ್ನು ಹೊಂದಿದೆ. ಆದರೆ, ಜಪಾನ್‌ನ ರಾಷ್ಟ್ರೀಯ ವಾಹಿನಿ ಎನ್‌ಹೆಚ್‌ಕೆ ಯಾವುದೇ ರೀತಿಯಲ್ಲಿ ವಾಣಿಜ್ಯ ಪ್ರಾಯೋಜಕತ್ವಕ್ಕೆ ಮುಂದಾಗಿಲ್ಲ. ಖಾಸಗಿ ಪ್ರಸಾರಕರಿಂದ ಧುತ್ತನೆ ಎದುರಾದ ಸ್ಪರ್ಧೆ ಸಾರ್ವಜನಿಕ ಸೇವಾ ಪ್ರಸಾರದ ಮೇಲಿದ್ದ ಏಕಸ್ವಾಮ್ಯತೆಯನ್ನು ಸಹ ಮುರಿದು ಹಾಕಿತು. ಹಾಗೆಯೇ, ಎಲ್ಲಾ ರೀತಿಯ ಕಾರ್ಯಕ್ರಮ ಉದ್ದೇಶಗಳನ್ನು ಕೇವಲ ಶಿಕ್ಷಣ ನೀಡುವ ಹಾಗು ಸಂಸ್ಕೃತಿಯನ್ನು ಉಳಿಸಿಕೊಳ್ಳುವ ನಿರ್ದಿಷ್ಟ ಗುರಿಗಳನ್ನು ತಲುಪುವುದಕ್ಕಷ್ಟೇ ಸೀಮಿತಗೊಳಿಸಲಾಯಿತು. ತನ್ನ ಕಾರ್ಯಕ್ರಮಗಳು ಹಾಗು ಧೋರಣೆಗಳನ್ನು ಪ್ರಚುರ ಪಡಿಸಲು ಯಾವುದೇ ಸರ್ಕಾರಕ್ಕೆ ತನ್ನದೇ ಪ್ರಸಾರ ಮಾಧ್ಯಮಗಳು ಇರಬೇಕಾದದ್ದು ಅನಿವಾರ್ಯ.

ಈ ಮಾಧ್ಯಮಗಳ ಸಾಮಾಜಿಕ ಹಾಗು ಸಾಂಸ್ಕೃತಿಕ ಕಾರ್ಯಚಟುವಟಿಕೆಗಳು ಅತ್ಯಂತ ಮಹತ್ವವುಳ್ಳದ್ದಾಗಿರುತ್ತವೆ. ಇತರ ವಾಣಿಜ್ಯ ಉದ್ದೇಶಗಳನ್ನೇ ಧ್ಯೇಯವಾಗಿರಿಸಿಕೊಂಡ ಮಾಧ್ಯಮಗಳಿಗಿಂತ ಸರ್ಕಾರಿ ನಿಯಂತ್ರಣದ ಮಾಧ್ಯಮಗಳು ಈ ನಿಟ್ಟಿನಲ್ಲಿ ಗಮನ ಕೇಂದ್ರೀಕರಿಸಲು ಸಾಧ್ಯವಾಗುತ್ತದೆ.

ಅನೇಕ ಸಾರಿ ಸರ್ಕಾರಿ ನಿಯಂತ್ರಣಕ್ಕೊಳಪಟ್ಟ ಮಾಧ್ಯಮಗಳು ಅಧಿಕಾರದ ಚುಕ್ಕಾಣಿ ಹಿಡಿದ ಜನರ ಯೋಜಿತ ಪ್ರಚಾರದ ಸಾಧನಗಳಾಗಿ ಮಾರ್ಪಡುತ್ತವೆ. ಬದಲಾದ ಮಾಧ್ಯಮ ಪ್ರಸಾರ ಪರಿಸ್ಥಿತಿಯಲ್ಲಿ ಸರ್ಕಾರಿ ನಿಯಂತ್ರಣದ ಮಾಧ್ಯಮಗಳ ನಂಬಿಕೆ, ವಿಶ್ವಾಸಾರ್ಹತೆಯನ್ನು ಪ್ರಶ್ನಿಸಲಾಗುತ್ತಿದೆ. ಹಾಗೆಯೇ ಅವುಗಳ ಸ್ವಾತಂತ್ರ್ಯವನ್ನು ಮೊಟಕುಗೊಳಿಸಲಾಗುತ್ತದೆ. ಪದೇ ಪದೇ ಬದಲಾಗುವ ಸರ್ಕಾರಗಳು ಸಾರ್ವಜನಿಕ ಪ್ರಸಾರ ವ್ಯವಸ್ಥೆಯ ಧೋರಣೆಗಳನ್ನು ಬದಲಾಯಿಸುವುದರಿಂದ ಸಾಕಷ್ಟು ಸಮಸ್ಯೆಗಳು ಅವುಗಳಿಗೆ ಎದುರಾಗುತ್ತವೆ. ಇಂದಿನ ಸ್ಪರ್ಧಾತ್ಮಕ ಯುಗದಲ್ಲೂ ಸಾಮಾಜಿಕ ಸ್ವಾಸ್ಥ್ಯಕ್ಕೆ ಸಾರ್ವಜನಿಕ ಪ್ರಸಾರ ವ್ಯವಸ್ಥೆ ಅತ್ಯಂತ ಅವಶ್ಯಕ. ಸಾಮಾನ್ಯವಾಗಿ ಸರ್ಕಾರಿ ಒಡೆತನದ ಪ್ರಸಾರ ವ್ಯವಸ್ಥೆಗಳು ಭಾರಿ ಬಂಡವಾಳ, ಸ್ಥಿರ ಸೌಲಭ್ಯಗಳು ಹಾಗು ಪ್ರಸಾರ ವ್ಯವಸ್ಥೆಯನ್ನು ಹೊಂದಿರುತ್ತವೆ. ಉದಾಹರಣೆಗೆ ಪ್ರಸಾರ ಭಾರತಿಗೆ 55,000 ಕೋಟಿ ರೂಪಾಯಿಗಳಷ್ಟು ಆಸ್ತಿಪಾಸ್ತಿ ಇರುವುದಾಗಿ ಅಂದಾಜಿಸಲಾಗಿದೆ. ತನ್ನ ಅಪ್ರತಿಮ ಸೌಲಭ್ಯಗಳಿಂದಾಗಿ ಅದು ದೇಶದ ಶೇ. 90ರಷ್ಟು ಜನಸಂಖ್ಯೆಯನ್ನು ತಲುಪುತ್ತದೆ.

ಇಂತಹ ಒಂದು ಬೃಹತ್ ಅವಕಾಶವನ್ನು ಪರಿಣಾಮಕಾರಿಯಾಗಿ ಉಪಯೋಗಿಸಿಕೊಳ್ಳುವುದು ಸಾಧ್ಯವಾಗಬೇಕಾದರೆ ಅಲ್ಲಿನ ಸಿಬ್ಬಂದಿವರ್ಗದ ಕಾರ್ಯ ಶೈಲಿ ಹಾಗು ಚಾಕಚಕ್ಯತೆ ಬಹುವಾಗಿ ಪ್ರಭಾವ ಬೀರುತ್ತವೆ. ಸಂಪರ್ಕ ಕ್ಷೇತ್ರದ ತಾಂತ್ರಿಕತೆಯಲ್ಲಿನ ಅಭಿವೃದ್ಧಿಗಳೂ ಕೂಡ ಉತ್ತಮ ಗುಣಮಟ್ಟದ ಹಾಗು ಸೃಜನಾತ್ಮಕ ವಸ್ತುವಿಷಯಗಳನ್ನು ನಿರ್ಮಿಸಲು ಅವಕಾಶ ಕಲ್ಪಿಸಿವೆ. ಇಂತಹ ಒಂದು ಹಿನ್ನೆಲೆಯಲ್ಲಿ ಸಾರ್ವಜನಿಕ ಪ್ರಸಾರ ಸೇವೆ ಖಾಸಗಿ ಪ್ರಸಾರಕರಿಗೆ ತೀವ್ರ ಸ್ಪರ್ಧೆಯನ್ನೊಡ್ಡುವುದು ಸಾಧ್ಯವಾಗುತ್ತದೆ. ಇಂತಹ ಒಂದು ಸ್ಪರ್ಧಾತ್ಮಕ ಪರಿಸರದಲ್ಲಿನ ಪ್ರಸಾರದಿಂದ ಅಂತಿಮ ಪ್ರಯೋಜನ ಪಡೆಯುವವರೆಂದರೆ ಶ್ರೋತೃಗಣ.

ಭಾರತದಲ್ಲಿಯೂ ಬಾನುಲಿ ಪ್ರಸಾರ ಸೇವೆಯನ್ನು, ಅದರಲ್ಲೂ FM ಪ್ರಸಾರವನ್ನು ಖಾಸಗಿ ಪ್ರಸಾರಕರಿಗೆ ತೆರೆಯಲಾಗಿದೆ. ಆಲ್ ಇಂಡಿಯಾ ರೇಡಿಯೋ ಬದಲಾದ ಪರಿಸ್ಥಿತಿಯಲ್ಲಿ ಖಾಸಗಿಯವರೊಂದಿಗೆ ತೀವ್ರ ಹಣಾಹಣಿ ನಡೆಸುತ್ತಿದೆ. ಕಾರ್ಯಕ್ರಮ ನಿರ್ಮಾಣ ಹಾಗು ವಸ್ತು ವಿಷಯಗಳೆರಡರಲ್ಲಿಯೂ ಗುಣಮಟ್ಟ ವೃದ್ಧಿಸುತ್ತಿದ್ದು ಒಟ್ಟಾರೆ ಪ್ರಸಾರ ಸೇವೆಯೂ ಗಣನೀಯವಾಗಿ ವೃದ್ಧಿಯಾಗಿರುವುದು ಕಂಡು ಬರುತ್ತದೆ. ಸಾರ್ವಜನಿಕ ಸೇವಾ ಪ್ರಸಾರದಲ್ಲಿನ ಸಂಕೇತಗಳನ್ನು ಶ್ರೋತೃಗಣ ಉಚಿತವಾಗಿ ಪಡೆಯುತ್ತದೆ. ಆದರೆ ಬಹುತೇಕ ಖಾಸಗಿ ವಾಹಿನಿಗಳು ಪೇ ಚಾನೆಲ್‌ಗಳಾಗಿ ಪರಿವರ್ತನೆಗೊಳ್ಳುತ್ತಿವೆ.

## 5.5 ಸಾರ್ವಜನಿಕ ಸೇವಾ ಪ್ರಸಾರದ ಕಾರ್ಯಚಟುವಟಿಕೆಗಳು

ಯೂರೋಪಿಯನ್ ಸಾರ್ವಜನಿಕ ಸೇವಾ ಪ್ರಸಾರ ಸಂಸ್ಥೆ, ಸಾರ್ವಜನಿಕ ಸೇವಾ ಪ್ರಸಾರಕ್ಕೆ ಈ ಕೆಳಕಂಡ ಅಂಶಗಳು ಪ್ರಮುಖ ಎಂದು ಗುರುತಿಸಿದೆ.

1. ಕಾರ್ಯಕ್ರಮಗಳ ಮೂಲಕ ಸಾರ್ವಜನಿಕರು ತಮ್ಮನ್ನು ತಾವು ಗುರುತಿಸಿಕೊಳ್ಳುವಂತೆ ಮಾಡುವುದು. ಸಾಂಸ್ಕೃತಿಕ ಭೇದ, ಲಿಂಗಭೇದ, ಧಾರ್ಮಿಕ ಹಾಗು ಸಾಮಾಜಿಕ ಅಂಶಗಳು ಆಧಾರದ ಮೇಲೆ ಪ್ರತ್ಯೇಕತೆಯನ್ನು ಶಕ್ತಿಗಳನ್ನು ದೂರ ಮಾಡಿ ಸಮೂಹದ ಏಕತೆಗೆ ದುಡಿಯುವುದು.

2. ಅಪರಿಮಿತವಾದ ಅನಿಸಿಕೆಗಳು ಹಾಗು ಅಭಿಪ್ರಾಯಗಳಿಗೆ ಅನುವಾಗುವಂತೆ ಸಾರ್ವಜನಿಕ ಚರ್ಚೆಗೆ ವೇದಿಕೆಯನ್ನೊದಗಿಸುವುದು.

3. ಪಕ್ಷಪಾತವಿಲ್ಲದ, ಸ್ವತಂತ್ರವಾದ ಸುದ್ದಿ - ಮಾಹಿತಿಗಳನ್ನು, ಅಭಿಪ್ರಾಯಗಳನ್ನು ಪ್ರಸಾರ ಮಾಡುವುದು.

4. ಮಾರುಕಟ್ಟೆ ಶಕ್ತಿಗಳಿಗೆ ಬಲಿಯಾಗದೆ ಅತ್ಯುಚ್ಚ ಗುಣಮಟ್ಟ ಕಾಯ್ದುಕೊಳ್ಳುವ ಹಾಗು ಸಂಹಿತೆಗಳನ್ನು ಪರಿಪಾಲಿಸುವ ಕಾರ್ಯಕ್ರಮಗಳ ಅಭಿವೃದ್ಧಿ.

5. ಸಮಾಜದ ಎಲ್ಲಾ ಸ್ತರಗಳ ಜನರ ಅದರಲ್ಲೂ ಅಲ್ಪಸಂಖ್ಯಾತರ ಆಸಕ್ತಿ ಅಗತ್ಯತೆಗಳು ಅನುಗುಣವಾಗಿ ಕಾರ್ಯಕ್ರಮಗಳ ನಿರ್ಮಾಣ.

6. ವಿಭಿನ್ನ ತಾತ್ವಿಕ ಕಲ್ಪನಾರೂಪಗಳ ಹಾಗು ಧಾರ್ಮಿಕ ನಂಬಿಕೆಗಳನ್ನು ಪ್ರತಿಫಲಿಸುವ ಮೂಲಕ ಸಮಾಜದಲ್ಲಿ ಜನರು ಪರಸ್ಪರ ಅರ್ಥ ಮಾಡಿಕೊಳ್ಳುವ ಹಾಗು ಸಹಿಷ್ಣುತೆಯನ್ನು ಬೆಳೆಸಿಕೊಳ್ಳಲು ಪ್ರೇರೇಪಿಸಬೇಕಾಗುತ್ತದೆ. ಇದರಿಂದ ವಿಭಿನ್ನ ಕುಲಹಿನ್ನೆಲೆಯ ಹಾಗು ಬಹುಸಂಸ್ಕೃತಿಯ ಸಮಾಜಗಳಲ್ಲಿ ಸಮುದಾಯ ಸಂಬಂಧಗಳು ಬಲಗೊಳ್ಳುತ್ತವೆ.

7. ವಾಣಿಜ್ಯ, ಧ್ಯೇಯೋದ್ದೇಶಗಳನ್ನು ಹೊಂದಿರುವ ಪ್ರಸಾರಕರು ಸಾಮಾನ್ಯವಾಗಿ ನೀಡಲಾಗದಂತಹ ಕಾರ್ಯಕ್ರಮ ನೀಡುವ ಮೂಲಕ ಶ್ರೋತೃಗಳಿಗೆ ಆಯ್ಕೆಗೆ ಅವಕಾಶವೀಯುವುದು.

ಈ ಅಂಶಗಳಲ್ಲದೆ ಸಾರ್ವಜನಿಕ ಸೇವಾ ಪ್ರಸಾರಗಳು ರಾಷ್ಟ್ರೀಯತೆ ಹಾಗು ಸಾಂಸ್ಕೃತಿಕ ಹಿರಿಮೆಗಳನ್ನು ಎತ್ತಿ ಹಿಡಿಯುವ, ಮಾಹಿತಿ ವಿತರಿಸುವೆಡೆಗೆ ಹೆಚ್ಚು ಒತ್ತು ನೀಡುವ ಅಗತ್ಯತೆಯ ಬಗ್ಗೆಯೂ ಯೂರೋಪಿಯನ್ ಸಾರ್ವಜನಿಕ ಸೇವಾ ಪ್ರಸಾರ ಸಂಸ್ಥೆ ಒತ್ತಿ ಹೇಳುತ್ತದೆ. ಇದು ಭಾರತದ ಸಾಮಾಜಿಕ ಸ್ಥಿತಿಗತಿಗೆ ಹೆಚ್ಚು ಔಚಿತ್ಯವೆನಿಸುವ ಅಂಶವೆಂದು ಗುರುತಿಸಲಾಗುತ್ತದೆ. ಸಾರ್ವಜನಿಕ ಸೇವಾ ಪ್ರಸಾರ ಅತ್ಯಂತ ತ್ರಾಸದಾಯಕ ಹಾಗು ಲಾಭ ತರದ ಚಟುವಟಿಕೆಯಾಗಿ ಗುರುತಿಸಲ್ಪಡುತ್ತದೆ.

ವಾಣಿಜ್ಯ ಪ್ರಸಾರಕರ ಧಾಳಿಯಿಂದ ಪಾರಾಗಬೇಕಾದರೆ ಸಾರ್ವಜನಿಕ ಸೇವಾ ಪ್ರಸಾರದ ಬೆನ್ನಿಗೆ ಸರ್ಕಾರ, ಜನರು, ಧೋರಣೆ ನಿರೂಪಕರು ಮುಂತಾದವರು ನಿಲ್ಲಬೇಕಾಗುತ್ತದೆ. ಹಾಗೆಯೇ ಸಾರ್ವಜನಿಕ ಸೇವಾ ಮಾಧ್ಯಮದ ಸ್ವಾತಂತ್ರ್ಯಕ್ಕೆ ಧಕ್ಕೆ ಬಾರದಂತೆ ಆರ್ಥಿಕ ಬೆಂಬಲ ನೀಡುವ ಸರ್ಕಾರಿ ಹಾಗು ವಾಣಿಜ್ಯಕ ಶಕ್ತಿಗಳು ಒತ್ತಡ ಹೇರಬಾರದು. ಆದರೆ ವಾಸ್ತವದಲ್ಲಿ ಹೀಗಾಗದೆ, ಅಧಿಕಾರಕ್ಕೆ ಬರುವ ಎಲ್ಲಾ ರಾಜಕೀಯ ಪಕ್ಷಗಳೂ ಸೇವಾ ಪ್ರಸಾರವಿರುವುದೇ ತಮ್ಮ ಹಿತಾಸಕ್ತಿಗೆ ಎಂದು ಬಗೆದು ದುರುಪಯೋಗಪಡಿಸಿಕೊಳ್ಳುವುದು ಸಾಮಾನ್ಯವಾಗಿದೆ.

ಬಿಬಿಸಿ ಸಾರ್ವಜನಿಕ ಸೇವಾ ಪ್ರಸಾರಕ್ಕಿರುವ ಅತ್ಯುತ್ತಮ ಉದಾಹರಣೆ. ಅದರ ಆಡಳಿತ ನಿರ್ವಾಹಕರು ಸರ್ಕಾರದಿಂದ ನೇಮಿಸಲ್ಪಟ್ಟಿದ್ದರೂ, ಅವರು ಪಕ್ಷಪಾತವಿಲ್ಲದ, ನ್ಯಾಯೋಚಿತವಾದ ತೀರ್ಮಾನಗಳನ್ನು ತೆಗೆದುಕೊಳ್ಳುವ ಮೂಲಕ ಸಂಸ್ಥೆ ವಿಶ್ವಾಸಾರ್ಹವಾಗಿರುವಂತೆ ನೋಡಿಕೊಳ್ಳುತ್ತಾರೆ. ಸ್ವತಂತ್ರವಾದ ಸೇವಾ ಪ್ರಸಾರಗಳು ಪರಿಣಾಮಕಾರಿಯಾಗಿರಲು ಸಹಾಯ ಮಾಡುತ್ತವೆ. ಸಾರ್ವಜನಿಕ ಸೇವೆಯನ್ನೇ ಧ್ಯೇಯವಾಗಿಟ್ಟುಕೊಂಡ ಮಾಧ್ಯಮಗಳು ಅನೇಕ ಸಂಕೀರ್ಣ ವಿಷಯಗಳೆಡೆಗೆ ಆಕರ್ಷಿತವಾಗುತ್ತದೆ. ಇತರ ಪ್ರಸಾರಕರಿಂದ ತೀವ್ರ ಸ್ಪರ್ಧೆಯನ್ನೆದುರಿಸುವುದರ ಜೊತೆಗೆ ಸರ್ಕಾರ ಆಗಾಗ ನೀಡುವ ಆಯವ್ಯಯ ಬೆಂಬಲದಲ್ಲಿಯೂ ಕಡಿತಗೊಳಿಸುವುದರಿಂದ ಅನೇಕ ಸಮಸ್ಯೆಗಳು ಎದುರಾಗುತ್ತವೆ. ಈ ಮಾಧ್ಯಮಗಳು ಎದುರಿಸುವ ಕೆಲ ಮುಖ್ಯ ಸಮಸ್ಯೆಗಳೆಂದರೆ;

1. **ಸ್ವಾತಂತ್ರ್ಯ:** ಬಹುತೇಕ ಸಾರ್ವಜನಿಕ ಸೇವಾ ಮಾಧ್ಯಮಗಳು ಸರ್ಕಾರಿ ಹಿಡಿತದಲ್ಲಿವೆ. ಬಹು ದೀರ್ಘಕಾಲದಿಂದ ಸಾರ್ವಜನಿಕ ಸೇವಾ ಪ್ರಸಾರ ಸರ್ಕಾರಿ ಪ್ರಸಾರಕ್ಕೆ ತಳುಕು ಹಾಕಿಕೊಂಡಿದ್ದುದರಿಂದ ಹಾಗು ಸರ್ಕಾರದ ಯೋಜಿತ ಪ್ರಚಾರ ಕಾರ್ಯಗಳು ವಿಶ್ವಾಸಾರ್ಹತೆಗೆ ಧಕ್ಕೆಯುಂಟು ಮಾಡಿದ್ದರಿಂದ ಪ್ರಜ್ಞಾ ಸಮೂಹ ಈ ಮಾಧ್ಯಮಗಳನ್ನು ಅನುಮಾನದಿಂದ ನೋಡುವಂತಾಯಿತು.

2. **ಆರ್ಥಿಕ ಬೆಂಬಲ:** ಬಹುತೇಕ ಎಲ್ಲ ಸಾರ್ವಜನಿಕ ಸೇವಾ ಪ್ರಸಾರ ಮಾಧ್ಯಮಗಳು ತಮ್ಮ ಉಳಿವಿಗೆ ಸರ್ಕಾರಿ ಆರ್ಥಿಕ ಬೆಂಬಲವನ್ನೇ ನೆಚ್ಚಿಕೊಂಡಿವೆ. ಕಾಲ ಸರಿದಂತೆ ಖರ್ಚು ವೆಚ್ಚಗಳು, ಸ್ಪರ್ಧೆ ಹೆಚ್ಚಾಗುತ್ತಿದ್ದು ಹಣ ಹೂಡಿಕೆಯ ಪ್ರಮಾಣ ತೀವ್ರವಾಗಿ ಕುಸಿಯುತ್ತಿದೆ. ಅಲ್ಲದೆ ಶ್ರೋತೃಗಣ ಕಾರ್ಯಕ್ರಮಗಳ ಗುಣಮಟ್ಟವನ್ನು ಕಾಯ್ದುಕೊಳ್ಳಲು ನಿರಂತರ ಒತ್ತಡ ಹೇರುತ್ತಿರುತ್ತಾರೆ.

3. **ಸ್ಪರ್ಧೆ:** ಆರ್ಥಿಕ ಹಾಗು ರಾಜಕೀಯ ಉದಾರೀಕರಣ ಶ್ರೋತೃಗಣ ಹಾಗು ಜಾಹೀರಾತು ಆದಾಯಗಳಿಗೆ ತೀವ್ರ ಸ್ಪರ್ಧೆಯನ್ನು ತಂದೊಡ್ಡಿವೆ. ಆಮದು ಮಾಡಿಕೊಂಡ ಕಾರ್ಯಕ್ರಮಗಳು ಹಾಗು ಶ್ರೇಣಿ ಅಂಕಗಳಿಗಾಗಿ (Rating points) ಪ್ರಬಲ ಯತ್ನಗಳ ನಡುವೆ ಸಾರ್ವಜನಿಕ ಸೇವಾ ಪ್ರಸಾರ ತನ್ನ ಧ್ವನಿ ಕಳೆದುಕೊಂಡಿದೆ.

ಉಳಿವಿಗಾಗಿ ಹೋರಾಡುವ ಪರಿಸ್ಥಿತಿಯನ್ನು ತಲುಪಿರುವ ಅನೇಕ ಸಾರ್ವಜನಿಕ ಸೇವಾ ಮಾಧ್ಯಮಗಳು, ಹಣಕಾಸಿನ ಇತರ ಮೂಲಗಳನ್ನು ಹುಡುಕುವ ಭರದಲ್ಲಿ ಶ್ರೋತೃಗಣ ಸಂಶೋಧನೆಯ ಫಲಿತಾಂಶಗಳನ್ನು ಸಂಪೂರ್ಣವಾಗಿ ಕಡೆಗಣಿಸಿವೆ. ಅದರಂತೆಯೇ ಮತ್ತೊಂದು ಪ್ರಮುಖ ಅಂಶವಾದ ಮಾನವ ಸಂಪನ್ಮೂಲ ಅಭಿವೃದ್ಧಿ ಹಾಗು ತರಬೇತಿಗಳೂ ಕೂಡ ನಿರ್ಲಕ್ಷ್ಯಕ್ಕೊಳಗಾಗಿವೆ.

1985 ರಲ್ಲಿ ಬ್ರಿಟನ್ನಿನ ಪ್ರಸಾರ ಸಂಶೋಧನಾ ಘಟಕ ನಡೆಸಿದ ಸಂಶೋಧನೆಗಳ ನಂತರ ಸಾರ್ವಜನಿಕ ಸೇವಾ ಪ್ರಸಾರದ ಕೆಳಕಂಡ ಮಹತ್ವದ ಅಂಶಗಳನ್ನು ಗುರುತಿಸಲಾಗಿದೆ.

1. ಭೌಗೋಳಿಕವಾಗಿ ಬಹುವಿಸ್ತಾರದವರೆಗೆ ಸ್ವೀಕೃತಿ.
2. ಸಾಮಾನ್ಯ ಆಸಕ್ತಿ ಹಾಗು ಅಭಿರುಚಿಯನ್ನೊಳಗೊಂಡ ಸಾರ್ವತ್ರಿಕ ಆಕರ್ಷಣೆ.
3. ಅಲ್ಪಸಂಖ್ಯಾತರಿಗೆ ವಿಶೇಷ ಆಸಕ್ತಿ.
4. ಸಮುದಾಯಿಕ ಹಾಗು ರಾಷ್ಟ್ರೀಯ ಐಕ್ಯತಾ ಭಾವನೆಯೆಡೆಗೆ ಕೊಡುಗೆ.
5. ವಿಚ್ಛಿದ್ರಕಾರಿ ಶಕ್ತಿಗಳಿಂದ ದೂರವಿರುವುದು.
6. ನೇರ ಸರ್ಕಾರಿ ಆಯವ್ಯಯ ಬೆಂಬಲ ಹಾಗು ಸಾರ್ವತ್ರಿಕ ಸಲ್ಲಿಕೆ.
7. ಕೇವಲ ಸಂಖ್ಯೆಯಲ್ಲದೆ ಕಾರ್ಯಕ್ರಮಗಳ ಉತ್ತಮ ಗುಣಮಟ್ಟದೆಡೆಗೂ ಗಮನ.
8. ಕಾರ್ಯಕ್ರಮ ನಿರ್ಮಾಣಕ್ಕೆ ಆಸ್ಪದ ನೀಡುವಂತಹ ನೀತಿ ನಿಯಮಾವಳಿಗಳು.

ಕೆಲ ಮಾಧ್ಯಮ ತಜ್ಞರು ಸಾರ್ವಜನಿಕ ಸೇವಾ ಪ್ರಸಾರ ಸರ್ಕಾರಿ ಹಾಗು ಖಾಸಗಿ ಒಡೆತನದ ಮಾಧ್ಯಮಗಳೆರಡಕ್ಕೂ ಇರುವ ಜವಾಬ್ದಾರಿ ಎಂದು ಅಭಿಪ್ರಾಯ ಪಡುತ್ತಾರೆ. ಕಿರುಪ್ರಸಾರ (Narrowcasting) ಹಾಗು ಖಾಸಗಿ ಪ್ರಸಾರ (Personalcasting) ಗಳಂತಹ ಹೊಸ ಕಲ್ಪನೆಗಳ ಹಿನ್ನೆಲೆಯಲ್ಲಿ ಮುಂಬರುವ ದಿನಗಳಲ್ಲಿ ಸಾರ್ವಜನಿಕ ಸೇವಾ ಪ್ರಸಾರ ತನ್ನ ಸ್ವರೂಪವನ್ನು ಬದಲಿಸಿಕೊಳ್ಳಲಿದೆ. ಪ್ರಸಾರ ಪರಿಸರ ತೀವ್ರ ಬದಲಾವಣೆಗೊಳಪಡುತ್ತಿದ್ದರೂ, ಸಂಪೂರ್ಣ ವಾಣಿಜ್ಯೀಕರಣ ಯಾವುದೇ ಸಮಾಜಕ್ಕೆ ಸ್ವೀಕೃತವಲ್ಲದ ಕಾರಣ ಸಾರ್ವಜನಿಕ ಸೇವಾ ಪ್ರಸಾರದ ಪ್ರಾಥಮಿಕ ಧ್ಯೇಯೋದ್ದೇಶಗಳು ಮುಂದುವರೆಯಬೇಕಾಗುತ್ತದೆ. ಹಾಗೆಯೇ ಆದರ್ಶಪ್ರಾಯವೆನಿಸುವ ಯಾವುದೇ ಸೇವೆಯನ್ನೇ ಧ್ಯೇಯವಾಗಿಸಿಕೊಂಡ ಮಾಧ್ಯಮ ವ್ಯವಸ್ಥೆ ಇನ್ನೂ ಬೆಳಕಿಗೆ ಬಂದಿಲ್ಲ. ಕಾರ್ಯಕ್ರಮಗಳು ಹಾಗು ವಸ್ತು ವಿಷಯದಲ್ಲಿನ ನಮ್ಯತೆ, ಧೋರಣೆಗಳನ್ನಾಧರಿಸುವ ಸೇವಾ ಮನೋಭಾವ ಸಮೂಹ ಮಾಧ್ಯಮಗಳನ್ನು ಅರ್ಥಪೂರ್ಣವನ್ನಾಗಿಸುತ್ತವೆ.

ವಿದ್ಯುನ್ಮಾನ ಮಾಧ್ಯಮಗಳಿಗಿಂತ ಭಿನ್ನವಾಗಿ ಮುದ್ರಣ ಮಾಧ್ಯಮ ಹೆಚ್ಚಾಗಿ ಖಾಸಗಿ ಒಡೆತನದಡಿಯಲ್ಲಿದ್ದರೂ ಸಾರ್ವಜನಿಕ ಆಶೋತ್ತರಗಳಿಗೆ ತನ್ನ ತನಿಖಾ ವರದಿಗಳು ಹಾಗು ಹೋರಾಟಗಳ ಮುಖಾಂತರ ಯಶಸ್ವಿಯಾಗಿ ಸ್ಪಂದಿಸಿದೆ.

## 5.6 ಸಾರಾಂಶ

ಸಾರ್ವಜನಿಕ ಸೇವೆಯಲ್ಲಿ ಸಮೂಹ ಮಾಧ್ಯಮಗಳ ಪಾತ್ರ ಚಿಂತನಶೀಲ ಹಾಗು ಪರಿಣಾಮಗಳನ್ನು ಉಂಟು ಮಾಡುವಂತಹ ಅಂಶ. ಇದಕ್ಕಿರುವ ಪ್ರಮುಖ ಕಾರಣವೆಂದರೆ, ಸಮೂಹ ಮಾಧ್ಯಮಗಳಿಗೆ ಇತರ ವ್ಯಕ್ತಿ ಹಾಗು ಸಾಕ್ಷಿಗಳಿಗಿಂತ ಹೆಚ್ಚಾಗಿ ಕಂಡುಬರುವ ಸಾಮಾಜಿಕ ಹೊಣೆಗಾರಿಕೆ ಹಾಗು ಉತ್ತರದಾಯಿತ್ವ. ಸಮೂಹ ಮಾಧ್ಯಮಗಳು ಮಾಹಿತಿ ಪಸರಿಸುವ, ಅರ್ಥೈಸುವ ಹಾಗು ತನಿಖೆ ನಡೆಸುವ ಮುಖಾಂತರ ಸಾರ್ವಜನಿಕರ ಸೇವೆ ಸಲ್ಲಿಸುತ್ತವೆ. ಪತ್ರಿಕಾ ಮಾಧ್ಯಮದ ನಂತರ ಸಾಮಾನ್ಯವಾಗಿ ವಿದ್ಯುನ್ಮಾನ ಮಾಧ್ಯಮವನ್ನು ಸಾರ್ವಜನಿಕ ಸೇವಾ ಪ್ರಸಾರವನ್ನಾಗಿ ಗುರುತಿಸಲಾಗುತ್ತದೆ. ಸಾರ್ವಜನಿಕ ಸೇವಾ ಪ್ರಸಾರಕರು ಸಾಮಾನ್ಯವಾಗಿ ಸರ್ಕಾರಿ ಪ್ರಚಾರ, ಯೋಜಿತ ಪ್ರಚಾರ, ಮಾಹಿತಿ ಪ್ರಸರಣೆ, ಶಿಕ್ಷಣ ಸಂಸ್ಕೃತಿ ಹಾಗು ಇತರ ಅಭಿವೃದ್ಧಿ ಸಂಬಂಧಿ ಕಾರ್ಯಕ್ರಮಗಳ ಮೇಲೆ ಹೆಚ್ಚು ಒತ್ತು ನೀಡುತ್ತಾರೆ.

ಇದಕ್ಕೆ ತದ್ವಿರುದ್ಧವಾಗಿ ವಾಣಿಜ್ಯ ಧ್ಯೇಯೋದ್ದೇಶಗಳನ್ನು ಹೊಂದಿರುವ ಖಾಸಗಿ ಪ್ರಸಾರಕರು ಕೇವಲ ಮನರಂಜನೆಯನ್ನಾಧರಿಸಿದ ಕಾರ್ಯಕ್ರಮಗಳ ಮೂಲಕ ಭಾರಿ ಪ್ರಮಾಣದ ಲಾಭಗಳಿಸುವುದರಲ್ಲಿಯೇ ಮಗ್ನರಾಗಿರುತ್ತಾರೆ. ಕ್ಷೀಣಗೊಳ್ಳುತ್ತಿರುವ ಸರ್ಕಾರಿ ಹಣಕಾಸಿನ ನೆರವು ಸಾರ್ವಜನಿಕ ಸೇವಾ ಪ್ರಸಾರವನ್ನು ಸಂಕಷ್ಟಕ್ಕೀಡು ಮಾಡಿದೆ. ಇಂತಹ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಬಹುತೇಕ ನೌಕರರ ಸೇವಾ ತನ್ಮಯತೆ ಪ್ರಶ್ನಾರ್ಹ. ಇನ್ನಾವುದೇ ಕಛೇರಿಯ ಕೆಲಸ ಎಂಬಂತೆ ಯಾಂತ್ರಿಕವಾಗಿ ಕಾರ್ಯನಿರ್ವಹಿಸುವುದು ಸಂಸ್ಥೆಯ ಉದ್ದೇಶಗಳಿಗೆ ಮಾರಕ ಎಂದು ತಿಳಿಹೇಳಿದರೂ ಬದಲಾಗದ ಅವರು, ಕೇವಲ ಸಂಬಳಕ್ಕಾಗಿ ನೌಕರಿ ಎಂಬ ಚಾಳಿಯನ್ನು ಬೆಳೆಸಿಕೊಂಡಿದ್ದಾರೆ.

ಇದರ ಜೊತೆಗೆ ಅವುಗಳ ಧ್ಯೇಯಧೋರಣೆಗಳ ಮೇಲೆ ಹಾಗು ಕಾರ್ಯಕ್ರಮಗಳ ಮೇಲಿನ ಸರ್ಕಾರಿ ಹಿಡಿತದಂತಹ ವಿಷಯಗಳು ಚರ್ಚಾಸ್ಪದ. ಮಾಧ್ಯಮದ ವಿದ್ಯಾರ್ಥಿಗಳಿಗೆ ಕೆಲ ಮಟ್ಟಿಗಾದರು ಬಿಬಿಸಿ ಒಂದು ಮಾದರಿ ಸಾರ್ವಜನಿಕ ಸೇವಾ ಪ್ರಸಾರಕ್ಕೆ ಅತ್ಯುತ್ತಮ ಉದಾಹರಣೆಯಾಗಿ ನಿಲ್ಲುತ್ತದೆ. ಸಾರ್ವಜನಿಕ ಸೇವಾ ಪ್ರಸಾರ ಸಾರ್ವತ್ರಿಕ ಸ್ವೀಕೃತಿ, ಆಸಕ್ತಿ, ಅಲ್ಪಸಂಖ್ಯಾತರಿಗೆ ಗಮನ ಹರಿಸುವುದು, ಸಮುದಾಯದ ಮತ್ತು ರಾಷ್ಟ್ರದ ಹಿತಾಸಕ್ತಿಗಳಿಗೆ ಪ್ರೇರಣೆ ಹಾಗು ಗುಣಮಟ್ಟದ ಕಾರ್ಯಕ್ರಮಗಳನ್ನು ನಿರ್ಮಿಸುವಲ್ಲಿ ಪೈಪೋಟಿಗಳಂತಹ ಗುಣಲಕ್ಷಣಗಳನ್ನು ಅದು ಹೊಂದಿದೆ.

ಬಹುಮುಖಿ ಅನಿಸಿಕೆಗಳು ಸಾರ್ವಜನಿಕ ಸೇವಾ ಪ್ರಸಾರದ ಹೆಗ್ಗುರುತು. ಭಾರತದ ಪ್ರಸಾರ ಭಾರತಿಯನ್ನು ಸಾರ್ವಜನಿಕ ಸೇವಾ ಪ್ರಸಾರದ ಅತ್ಯುತ್ತಮ ಕಾರ್ಯಜಾಲವೆಂದು ಬಿಂಬಿಸಲಾಗಿದೆ. ಅದರ ಮಾನವ ಸಂಪನ್ಮೂಲ ಹಾಗು ಸ್ಥಿರಾಸ್ತಿ ವ್ಯವಸ್ಥೆಗಳು ಅಪ್ರತಿಮ. ಕುಗ್ಗುತ್ತಿರುವ ಸರ್ಕಾರಿ ನೆರವು, ಖಾಸಗಿ ಪ್ರಸಾರಕರಿಂದ ಹೆಚ್ಚಿದ ಸ್ಪರ್ಧಾತ್ಮಕತೆ ಬಹುಮಟ್ಟಿಗೆ ಸಾರ್ವಜನಿಕ ಸೇವಾ ಪ್ರಸಾರ ಕಠಿಣವೆನ್ನುವಂತೆ ಬಿಂಬಿಸುತ್ತಿವೆ. ಹೊಸ ತಂತ್ರಜ್ಞಾನಗಳು ಹೊಸ ಅರ್ಥಗಳನ್ನು ಸಹ ನೀಡುತ್ತಿವೆ.

ಸಾರ್ವಜನಿಕ ಸೇವಾ ಪ್ರಸಾರ ಧೋರಣೆಗಳನ್ನು ಮುಂದಿಟ್ಟುಕೊಂಡು ಉಳಿದುಕೊಳ್ಳುವ ಯತ್ನವನ್ನು ಮಾಡುವ ಬದಲು ಕಾರ್ಯಕ್ರಮಗಳನ್ನು ಆಧರಿಸಿದ ವ್ಯವಸ್ಥೆಯಾಗೇ ಬೆಳೆದು ಬಂದರೆ ಹೆಚ್ಚು ಉತ್ತಮ.

## 5.7 ನಿಮ್ಮ ಪ್ರಗತಿ ಪರಿಶೀಲನೆ

**ಸೂಚನೆ: ನಿಮ್ಮ ಉತ್ತರಗಳನ್ನು ಈ ಘಟಕದಲ್ಲಿ ನೀಡಲಾಗಿರುವ ಮಾಹಿತಿಯೊಂದಿಗೆ ಹೋಲಿಸಿ.**

1. ವಸ್ತುವಿಷಯ / ಮಾಹಿತಿ ಪ್ರಸರಣೆ ಸಮೂಹ ಮಾಧ್ಯಮದ ಮಹತ್ವದ ಸೇವೆ. ವಿವರಿಸಿ.
2. ಸಾರ್ವಜನಿಕ ಸೇವಾ ಪ್ರಸಾರದ ಗುಣಲಕ್ಷಣಗಳನ್ನು ವಿವರಿಸಿ.
3. ಸಮೂಹ ಮಾಧ್ಯಮ ಮತ್ತು ಸಮಾಜದ ನಡುವೆ ಇರುವ ಸಂಬಂಧವನ್ನು ವಿವರಿಸಿ.
4. ಸಾರ್ವಜನಿಕ ಸೇವಾ ಪ್ರಸಾರದ ಒಟ್ಟಾರೆ ಸ್ಥಿತಿಗತಿ ಹಾಗು ಸಮಸ್ಯೆಗಳನ್ನು ಕುರಿತು ಚರ್ಚಿಸಿ.

## 5.8 ಹೆಚ್ಚಿನ ಓದಿಗಾಗಿ

1. AMIC, Public Service Broadcasting in Asia; Surviving in the Information Age, 2000.

2. Mc Bride, Many Veiws, One World - Communication and Society: Today and Tommorrow - UNESCO - Oxford, 1982.

ಬರಹ: ತೇಜಸ್ವಿ ನವಿಲೂರ್

# ಟಿಪ್ಪಣಿ

# ಟಿಪ್ಪಣಿ

## Role of ODL in a Knowledge Society

Open and Distance Learning (ODL), an innovation started off five decades ago has now grown into a powerful force creating opportunities to thousands who are in search of skills, knowledge and challenging openings. ODL today is such an effective tool and it has challenged many long held beliefs and traditions of conventional educational processes. At present, open and distance education has a crucial role to play in the process of human development. Greater emphasis on ODL has made many poorly resourced and managed institutions to give way to quality and sophistication of educational facilities, that are offered by professionally managed open universities like KSOU. In this context, KSOU aspires to be on par with the global best practice and bench marks. It has taken serious note of the roles and responsibilities it shoulders.

ODL is now the most influential educational phenomenon. New technologies that are emerging have changed the very nature of teaching learning process. Institutional experience world over so far has lead to the fine tuning of the ODL process. As the society is moving fast in the first phase of knowledge era, it has become necessary to know how the ODL system works in a knowledge society. Trends in global economy and resource crunch have lead to new methods in education and training. Life long learning has become a necessity as people have to remain competitive in order to survive and increase the opportunities that are rewarding.

ODL is always linked to technology particularly to those of multimedia. Integrating the knowledge media into ODL system is another revolution that is in the forefront. Convergence of computing, telecommunications and cognitive sciences will allow more equitable access to resources that are supported by new age technology rather than human resources. Also, the distinction between conventional students in traditional education process and the ODL learners is increasingly blurred. Competitive pressures faced by educational institutions, absence of government funding, commoditization of knowledge market and increased demands for quality inputs and services are the main factors responsible for the rapid change.

Hence, ODL education is gaining momentum as the demand for learning is enormous. The present day trends show a clear shift in approach. Higher education is now a mass system rather than an elite one. Academic work produced by a team is emphasized rather than that of individuals. One can also notice that more and more distance education techniques are being adopted in the conventional institutions of higher education in instructional and delivery systems. Use of technology in instructional design and material preparation has made the teacher to don a new role as a mediator, a resource manager to facilitate learning rather than being a mere instructor. Also, interest in the areas of communication and information technology is gaining momentum.

As the new technologies provide new ways of processing and distributing information, new kinds of learning products are being created, element of interactivity among students themselves and with new teachers is increasing. Distance has died down as new methods enable to deliver on demand multimedia education and training services directly to home and offices. Mediated process of communication and learning combined with face to face and virtual human interaction will be the new paradigm. New possibilities in communication technologies and their application have given rise to new trends in ODL process. Post experience courses are becoming important courses that are being offered by the universities and institutions. With the application of digital technology new forms of literacy has emerged which is distinctly verbal and visual than literary.

In this context, the Department of Mass Communication and Journalism, KSOU has understood the need of the media professionals in India and is striving hard to impart quality training through its programmes. This course is one such sincere effort to serve the needs of the nation.

**ಆದೇಶ ಸಂಖ್ಯೆ : ಕ.ರಾ.ಮು.ವಿ./ಆ.ಸಾ.ವಿ./4-202/2014-2015 ದಿನಾಂಕ : 01.09.2014**
**ಒಳಪುಟ : 60 GSM ಮ್ಯಾಪ್ಲಿತೊ ಕಾಗದ ಮತ್ತು ರಕ್ಷಾಪುಟ : 220 GSM ಆರ್ಟ್ ಕಾರ್ಡ್**
**ಮುದ್ರಕರು : ವಿನಾಯಕ ಆಫ್‌ಸೆಟ್ ಪ್ರಿಂಟರ್ಸ್, ಬೆಂಗಳೂರು-560 070 ಪ್ರತಿಗಳು : 500**



## Karnataka State Open University: A Pioneer in Open and Distance Education

The history of Karnataka State Open University dates back to 1969 in which the erstwhile Institute of Correspondence Course and Continuing Education (ICC&E) was established under the patronage of the University of Mysore. KSOU in the present form of Open and Distance Learning system took its birth in 1996 as eight such open university in the country. Today the KSOU is one of the well established and highly reputed open university, generating human resources through innovative academic programmes.

Located amidst pristine surroundings of the Manasagangotri campus in Mysore, the cultural capital of Karnataka, KSOU is committed to provide access to higher education in general and knowledge information in particular to the masses, with innovative methods of teaching. The university has successfully completed eighteen years of existence and has served the educational needs of over two million students from all over the Indian subcontinent. KSOU as a prime university is committed to remove the disparities and bring about much needed corrections in the higher education system. The Karnataka State Open University thrives and is in the forefront to fulfill the constitutional obligations in terms of access, quality, equity and equality with the motto of Higher Education to Everyone, Everywhere.

Karnataka State Open University's innovative steps in certain areas have been recognized as the long strides in Open and Distance education thus finding a coveted place for itself in the area of ODL. Since switching over to ODL in 1996, the University has served students in various academic disciplines with aplomb. The university offers over 70 academic programmes leading to Certificate, Diploma, Degree and Postgraduate Degrees.

The number of students enrolling to various programmes of the University is expected to grow considerably in the coming years and the institution is gearing up to meet the new challenges. The Degrees, Diplomas and Certificates offered by KSOU are widely recognized and are on par with those awarded by any other University in the country and abroad. The University truly believes and tirelessly strides towards the concept of **Student First but Quality Foremost**.